
೭೬ನೇ
ಅಖಿಲ ಭಾರತ ಕನ್ನಡ ಸಾಹಿತ್ಯ
ಸಮ್ಮೇಳನ, ಗದಗ

ಕರ್ನಾಟಕದ ಕಲೆಗಳು



ವಾಸ್ತು

ನಾಲ್ಕನೆಯ ಸಂಪುಟ

ಡಾ.ಬಾ.ರಾ.ಗೋಪಾಲ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮

೭೬ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಗದಗ

ಕರ್ನಾಟಕದ ಕಲೆಗಳು

(ನಾಲ್ಕನೆಯ ಸಂಪುಟ)

ವಾಸ್ತು

ಡಾ. ಬಾ.ರಾ. ಗೋಪಾಲ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

KARNATAKADA KALEGALU - Vol. IV, VASTU

by : Dr. B.R. Gopala

Published by : **Kannada Sahitya Parishat**

Pampa Mahakavi Road, Chamarajapet, Bangalore - 560018

Pages : viii + 109 Price : **Rs.60=00 ; 2010**

ಪ್ರಥಮ ಮುದ್ರಣ : ೧೯೯೩
ದ್ವಿತೀಯ ಮುದ್ರಣ : ೨೦೦೩
ತೃತೀಯ ಮುದ್ರಣ : ೨೦೧೦

ಪ್ರತಿಗಳು : ೧೦೦೦

ಬೆಲೆ : ಅರವತ್ತು ರೂಪಾಯಿಗಳು

ಮುಖಪುಟ ವಿನ್ಯಾಸ : ಶ್ರೀ ಶಿವು ವಿ. ಹೂಗಾರ

ಮುದ್ರಣ : ಬಿ.ಎಂ.ಶ್ರೀ ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನಿಂದ ಮರುಮುದ್ರಣಗೊಳ್ಳುತ್ತಿರುವ ಮತ್ತು ಹೊಸದಾಗಿ ಮುದ್ರಿತವಾಗುತ್ತಿರುವ ವಿವಿಧ ಪ್ರಕಾರಗಳ ಪುಸ್ತಕಗಳನ್ನು ಸಹೃದಯರು ಮೆಚ್ಚಿ ಸ್ವೀಕರಿಸಲು ಯೋಗ್ಯವಾಗುವಂತೆ ಆಕರ್ಷಕ ವಿನ್ಯಾಸಗಳಲ್ಲಿ ಸಿದ್ಧಪಡಿಸಿದ ಮೇಲೆ ಅವುಗಳ ಮಾರಾಟದ ಪ್ರಮಾಣ ಹೆಚ್ಚುತ್ತಿರುವುದನ್ನು ಕಂಡು ನನಗೆ ಮಹದಾನಂದವಾಗಿದೆ. ಓದುಗರು ಬಯಸುವ ಪುಸ್ತಕಗಳನ್ನು ಅವರ ಕೈಗೆ ತಲುಪುವಂತೆ ಮಾಡುವುದೇ ಪುಸ್ತಕೋದ್ಯಮದ ಪ್ರಾಥಮಿಕ ಆಶಯ. ಈ ಉದ್ಯಮವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಕಾಲಕಾಲಕ್ಕೆ ಬದಲಾಗುತ್ತಿರುವ ಓದುಗರ ಅಭಿರುಚಿಗೆ ಸ್ಪಂದಿಸುತ್ತ, ಆ ಕ್ಷೇತ್ರದಲ್ಲಿ ಬಹು ವೇಗವಾಗಿ ಸಾಗುತ್ತಿರುವ ಪ್ರಕಾಶಕರ ನಡುವೆ ಕನ್ನಡ ಸರಸ್ವತಿಯ ಆರಾಧನೆ ಮಾಡುತ್ತಿದ್ದೇನೆಂದು ಭಾವಿಸಿ ಕನ್ನಡ ಸಾಹಿತ್ಯ ಪರಿಷತ್ತು ತಣ್ಣಗೆ, ನಿರುಮ್ಮಳವಾಗಿ ಇರುವ ಕಾಲ ಮುಗಿದುಹೋಯಿತು. ಹೊಸಕಾಲದ ಅಗತ್ಯಕ್ಕೆ ಅನುಗುಣವಾಗಿ ಬದಲಾಗುವುದರಲ್ಲೇ ಸಾಹಿತ್ಯ ಪರಿಷತ್ತಿನ ಜೀವಂತಿಕೆಯಿದೆಯೆಂದು ಬಲವಾಗಿ ನಂಬಿ ನಡೆಯುತ್ತಿರುವವನು ನಾನು. ಕನ್ನಡದಲ್ಲಿ ಇತ್ತೀಚೆಗೆ ಬರುತ್ತಿರುವ ವೈವಿಧ್ಯಮಯ ಪುಸ್ತಕಗಳನ್ನು ನೋಡಿದರೆ ಮೊದಲು ಅವುಗಳನ್ನು ಕಣ್ಣಿಗೊತ್ತಿಕೊಂಡು, ಮೃದುವಾಗಿ ಮೈದಡವಿ, ಸ್ವಲ್ಪ ಹತ್ತಿರದಿಂದಲೂ ನಂತರ ದೂರದಿಂದಲೂ ನೋಡಿ ಪುಳಕಗೊಂಡು ಪುಟ ತಿರುವಬೇಕೆನ್ನಿಸುತ್ತದೆ. ಪಂಚೇಂದ್ರಿಯಗಳಲ್ಲಿ ನಾಲಗೆಯೊಂದನ್ನು ಹೊರತುಪಡಿಸಿ ಉಳಿದವುಗಳೆಲ್ಲ ತಣಿಯದ ದಿವ್ಯಸುಖವನ್ನು ಖಂಡಿತ ಅನುಭವಿಸುತ್ತವೆ. ಪುಸ್ತಕಪ್ರೇಮಿಗಳು ಯಾರೂ ಈ ಭವಸುಖನಿಮಜ್ಜನದಿಂದ ಬಿಡಿಸಿಕೊಳ್ಳಲಾರರು.

ಲೇಖಕ–ಮಾರಾಟಗಾರ–ಓದುಗರಿಗೆ ವಿಭಿನ್ನ ರೀತಿಯ ಸುಖವುಣ್ಣಿಸುವ ಪೈಪೋಟಿಯಲ್ಲಿ ಪುಸ್ತಕೋದ್ಯಮ ಮುಳುಗಿಹೋಗಿರುವಾಗ ಪರಿಷತ್ತು ತಟಸ್ಥ ತಲ್ಲೀನತೆಯಲ್ಲಿರುವುದು ಸಾಧ್ಯವೇ ಇಲ್ಲ. ಗತವೈಭವದ ಸಾಕ್ಷಿಯಾಗಿ ಉಳಿದಿರುವ, ಆದರೆ ಇವತ್ತಿನ ಅಭಿರುಚಿಗೆ ಸಲ್ಲದಂಥ ಮುಖಪುಟ, ವರ್ಣಸಂಯೋಜನೆ, ಚಿತ್ರ ವಿನ್ಯಾಸ, ಒಳಗಿನ ಕಾಗದಗಳನ್ನು ಸಂಪೂರ್ಣ ಬದಲಾಯಿಸಿ ಚಂದಗಾಣಿಸಿದರೆ ಮಾತ್ರ ಓದುಗರು ಹತ್ತಿರ ಬರುತ್ತಾರೆ, ಕೈಯಿಂದ ಎತ್ತಿ ನೋಡುತ್ತಾರೆ, ಕೊಳ್ಳುವ ಮನಸ್ಸು ಮಾಡುತ್ತಾರೆ, ಮನೆಯ ಕಪಾಟುಗಳನ್ನು ಪುಸ್ತಕಗಳಿಂದ ಅಲಂಕರಿಸುತ್ತಾರೆ. ಪುಸ್ತಕವೊಂದರ ಪುಟ ಪುಟಗಳಲ್ಲಿ ಪ್ರತಿಭೆ–ಪಾಂಡಿತ್ಯಗಳ ವಿದ್ಯುತ್ ಪ್ರವಾಹ ಹರಿದು ಓದುಗರನ್ನು ರಸರೋಮಾಂಚನಗೊಳಿಸುವುದು ಎಷ್ಟು ಮುಖ್ಯವೋ ನಮಗೆ ಬೇಕಾದ್ದು ಅದರಲ್ಲೇನೋ ಇದೆ ಎನ್ನುವ ಸೂಚನೆ ಪುಸ್ತಕದತ್ತ ನೋಟ ಹಾಯಿಸುತ್ತಿದ್ದಂತೆ ಸಿಗುವುದೂ ಅಷ್ಟೇ ಮುಖ್ಯ. ಆಧುನಿಕ ಮುದ್ರಣ ತಂತ್ರಜ್ಞಾನದ ಸಾಧ್ಯತೆಗಳನ್ನು ಸಮರ್ಪಕವಾಗಿ ಅಳವಡಿಸಿಕೊಳ್ಳುವುದರಿಂದಲೂ ಯಶಸ್ಸಿನ ಹೆದ್ದಾರಿ ನಿರ್ಮಾಣವಾಗುತ್ತದೆಂಬ ಮಾತೂ ಸತ್ಯವೇ. ಇಷ್ಟೆಲ್ಲಾ ಚಿಂತನ–ಮಂಥನ, ಪರೀಕ್ಷೆ–ಪ್ರಯೋಗ, ಅವಲೋಕನ–ಪರಾಮರ್ಶನಗಳ ಪರಿಣಾಮವಾಗಿಯೇ ವರ್ತಮಾನದ ಪುಸ್ತಕ ಪ್ರಕಟಣೆಯ ತುರುಸಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಆತ್ಮವಿಶ್ವಾಸದ ಮತ್ತು ಹೆಮ್ಮೆಯ ಹೆಜ್ಜೆಗಳನ್ನು ಇಡಲು ಸಾಧ್ಯವಾಗಿದೆ. ಬೆಂಗಳೂರು ಮತ್ತು ಹೊರಗೆ ನಡೆಯುತ್ತಿರುವ ಪುಸ್ತಕ ಮೇಳ–ಪುಸ್ತಕ ಪ್ರದರ್ಶನಗಳಲ್ಲಿ ಜಯಭೇರಿ ಬಾರಿಸಲು ಸಾಧ್ಯವಾಗಿದೆ. ೨೦೦೯ರ ಕನ್ನಡ ರಾಜ್ಯೋತ್ಸವದ ನೆನಪಿಗೆ ಏರ್ಪಡಿಸಿದ್ದ ಪುಸ್ತಕ ಪ್ರದರ್ಶನ ಮತ್ತು ಮಾರಾಟದಲ್ಲಿ ದಾಖಲೆಯ ವಹಿವಾಟು ನಡೆಸಲು ಸಾಧ್ಯವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಮತ್ತು ತಾಲ್ಲೂಕು ಘಟಕಗಳು ಸಮ್ಮೇಳನಗಳ ಸಂದರ್ಭದಲ್ಲಿ ಭರವಸೆಯಿಂದ ಪುಸ್ತಕಗಳನ್ನು ಹೊರತರಲು ಸಾಧ್ಯವಾಗಿದೆ. ಇದನ್ನೆಲ್ಲ ಸಾಧ್ಯವಾಗಿಸುವುದಕ್ಕೆ ಕಾರಣರಾದ ಕನ್ನಡ ಪುಸ್ತಕಪ್ರೇಮಿಗಳನ್ನು ಅಭಿನಂದಿಸಬೇಕಾಗಿದೆ.

೨೦೧೦ ಫೆಬ್ರವರಿ ೧೯ ರಿಂದ ೨೧ ರವರೆಗೆ ಮೂರು ದಿನಗಳ ಕಾಲ ಗದಗದಲ್ಲಿ ನಡೆಯಲಿರುವ ೭೬ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನೆನಪಿಗಾಗಿ ೭೬ ಕೃತಿಗಳನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿದೆ. ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳನ್ನೂ ಒಳಗೊಳ್ಳಲಿರುವ ಈ ಪುಸ್ತಕಗಳ ಆಯ್ಕೆಗೆ ಅವುಗಳ ಗುಣಮಟ್ಟವೇ ಮೂಲ ಬಂಡವಾಳವಾಗಿದೆ. ಪರಿಷತ್ತು ತಮ್ಮ ಒಂದು ಪುಸ್ತಕವನ್ನು ಪ್ರಕಟಿಸಬೇಕೆಂಬ ಅಭಿಲಾಷೆಯನ್ನು ವ್ಯಕ್ತಪಡಿಸಿ ನಾಡಿನ ಮೂಲೆಮೂಲೆಗಳಿಂದ ಲೇಖಕರು ಪತ್ರ ಬರೆದು ವಿನಂತಿ ಮಾಡಿಕೊಳ್ಳುತ್ತಾರೆ. ಅನೇಕರು ಹಸ್ತಪ್ರತಿಗಳನ್ನೇ ಕಳುಹಿಸಿಕೊಡುತ್ತಾರೆ. ಜಿಲ್ಲಾಧ್ಯಕ್ಷರುಗಳ ಮೂಲಕ ಒತ್ತಾಯ ತರುತ್ತಾರೆ. ಅಂಥ ಮನವಿಗಳು ವರ್ಷವೊಂದರಲ್ಲಿ ಸಾವಿರವನ್ನೂ ಮೀರುತ್ತವೆ. ಹಾಗೆ ಎಲ್ಲ ಪುಸ್ತಕಗಳನ್ನೂ ಮರುಮಾತಿಲ್ಲದೆ ಪ್ರಕಟಿಸುವುದು ಪರಿಷತ್ತಿಗೆ ಸಾಧ್ಯವೂ ಇಲ್ಲ, ಅದು ಸಾಧುವೂ ಅಲ್ಲ. ಪುಸ್ತಕದ ಶಕ್ತಿ–ಯೋಗ್ಯತೆಗಳನ್ನು ಜರಡಿಯಾಡಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುವ ಪರಿಶೀಲನಾ ಸಮಿತಿಯ ಅಗ್ನಿದಿವ್ಯವನ್ನು ಎದುರಿಸಿಯೇ ಕೃತಿ ಪ್ರಕಟಗೊಳ್ಳಬೇಕಾಗುತ್ತದೆ. ಈ ಬಾರಿಯ ಅಕ್ಷರಜಾತ್ರೆಯನ್ನು ಅರ್ಥಪೂರ್ಣವಾಗಿ ಸಿಂಗರಿಸುವುದಕ್ಕಾಗಿಯೇ ಸಜ್ಜುಗೊಂಡಿರುವ ಈ ಪುಸ್ತಕಗಳು ಪ್ರೀತಿಸುವ ಸಹೃದಯರ ಮಡಿಲನ್ನು ಸೇರಲಿ, ಅವರ ಜ್ಞಾನಭಂಡಾರವನ್ನು ವಿಸ್ತರಿಸಲಿ, ಅವರನ್ನು ರಸಾನಂದದಲ್ಲಿ ಮುಳುಗಿಸಲಿ ಎಂದು ಹಾರೈಸುತ್ತೇನೆ. ಓದುಗರ ರಚನಾತ್ಮಕ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು

ಮೊದಲ ಮಾತು

(ಪ್ರಥಮ ಮುದ್ರಣ)

ಕನ್ನಡ ಸಾಹಿತ್ಯ ಪರಿಷತ್ತು ಹನ್ನೆರಡು ವರ್ಷಗಳ ಹಿಂದೆ ಹಮ್ಮಿಕೊಂಡ ಯೋಜನೆಗಳಲ್ಲಿ ಒಂದು ಕರ್ನಾಟಕದ ಕಲೆಗಳನ್ನು ಕುರಿತಂತೆ ಗ್ರಂಥಮಾಲೆ. ಆರಂಭದ ಉತ್ಸಾಹಕ್ಕನುಗುಣವಾಗಿ ಬರಹಗಳು ಒದಗಿಬರಲಿಲ್ಲ; ಯೋಜಿಸಿದಂತೆ ಪ್ರಕಟನೆಗಳು ಹೊರಬರುವುದು ತಡವಾಯಿತು. ಆದರೆ ಮೌಲಿಕವಾದ ಬರಹಗಳೇ ಹೊರಬರುತ್ತಿವೆಯೆಂಬುದು ಸಮಾಧಾನದ ಮಾತು. ಇದಕ್ಕೆ ನಿದರ್ಶನವಾಗಿ ಈಗ ಮತ್ತೊಂದು ಗ್ರಂಥ ಈ ಮಾಲಿಕೆಯಲ್ಲಿ ನಿಮ್ಮ ಕೈಸೇರುತ್ತಿದೆ.

ಕಲೆಯ ಯಾವುದೇ ಪ್ರಕಾರವಾಗಲಿ, ವಿಶ್ವದ ಚೌಕಟ್ಟಿನಲ್ಲಿ ಭಾರತ, ಭಾರತೀಯ ಚೌಕಟ್ಟಿನಲ್ಲಿ ಪ್ರತಿ ಪ್ರಾಂತ ಹೀಗೆ ಸಾಮಾನ್ಯ–ವಿಶೇಷ ಕ್ರಮವನ್ನು ಹಿಡಿಯುವುದು ಸೂಕ್ತವೆನಿಸುತ್ತದೆ. ಈ ಕ್ರಮದ ಸೂಕ್ತತೆಯನ್ನು ಪ್ರಸ್ತುತ ಪ್ರಕಟನೆಯಲ್ಲಿ ಕಾಣಬಹುದು. ಇದು ಕರ್ನಾಟಕದ ವಾಸ್ತುವಿದ್ಯೆಯನ್ನು ಕುರಿತ ಪುಸ್ತಕ. ವಾಸ್ತುವಿಗೂ ವಸತಿಗೂ ತೀರ ಹತ್ತಿರದ ನಂಟು. ಜನ ವಾಸಮಾಡುವ ಮನೆಮಠಗಳೂ ದೇವರನ್ನು ನೆಲೆಗೊಳಿಸುವ ಗುಡಿಗುಂಡಾರಗಳೂ ವಾಸ್ತುವಿನ ಹರವಿನಲ್ಲೇ ಸೇರುತ್ತವೆ. ಲೌಕಿಕ, ಧಾರ್ಮಿಕ ಕಟ್ಟಡಗಳು ಯಾವೊಂದು ದೇಶಕ್ಕಾಗಲಿ, ಜನಾಂಗಕ್ಕಾಗಲಿ, ಸೀಮಿತವೇನಲ್ಲ; ಮಾನವ ಜಾತಿಗೇ ಸಾಮಾನ್ಯವಾದುವು. ಆದರೆ ಆಯಾ ಸಂಸ್ಕೃತಿಯ ಪಡಿಯಚ್ಚುಗಳು, ಇತಿಹಾಸದ ಹೆಜ್ಜೆಗುರುತುಗಳು ಅವುಗಳಲ್ಲೆಲ್ಲ ಕಾಣಿಸಿಕೊಳ್ಳುತ್ತವೆ. ಸಂಸ್ಕೃತಿಯ ವಿವರಗಳೂ ಇತಿಹಾಸದ ಓರೆಕೋರೆಗಳೂ ವಿಶಿಷ್ಟವಾಗಿರುತ್ತವೆ.

ವಾಸ್ತುವಿದ್ಯೆಯ ಜಾಗತಿಕ ಹಿನ್ನೆಲೆಯಲ್ಲಿ ಭಾರತೀಯ ವಾಸ್ತು ಬೆಳೆದು ಬಂದ ಬಗೆ, ಅದರ ಗೊತ್ತುಗುರಿಗಳು, ನೆಲೆನಿಲುವುಗಳು, ವಿಧಿಸಂವಿಧಾನಗಳು ಇವೆಲ್ಲವನ್ನೂ ಕಾಣಿಸಿ, ಅನಂತರ ಕನ್ನಡನಾಡಿನಲ್ಲಿ ಅದು ಮೈದಳೆದ ರೀತಿಯನ್ನೂ ಅದರ ವೈಶಿಷ್ಟ್ಯಗಳನ್ನೂ ಗುರುತಿಸಿರುವುದು ಈ ಗ್ರಂಥದ ವೈಶಿಷ್ಟ್ಯ. ಗ್ರಂಥಕಾರರು ಈ ಪ್ರಕಾರದಲ್ಲಿ ತಜ್ಞರು, ಪ್ರಸಿದ್ಧರು; ಅವರ ಆಳವಾದ ಅಧ್ಯಯನ, ತಿಳಿಯಾದ ಬರವಣಿಗೆ ಎರಡನ್ನೂ ಓದುಗರು ಇಲ್ಲಿ ಕಂಡುಕೊಳ್ಳಬಹುದು. ವಾಸ್ತುವಿದ್ಯೆಗೊಂದು ಶಾಸ್ತ್ರ ಶುದ್ಧಿಯಿರುವುದನ್ನೂ, ಪ್ರಯೋಗನಿಷ್ಠೆಯಿರುವುದನ್ನೂ ಎತ್ತಿ ತೋರಿಸಿದ್ದಾರೆ. ಇಲ್ಲಿ ತೋರಿಕೊಂಡು ಬಂದಿರುವ ವಿವರಗಳು ನಿಖರವಾದುವು; ಅನ್ವೇಷಣೆಯ ಒರಗಲ್ಲಿಗೆ ಒಳಪಟ್ಟವು. ಗ್ರಂಥಕಾರರು ಬರಿದೆ ವಿವರಗಳನ್ನು ಅಲ್ಲಿಂದ ಇಲ್ಲಿಂದ ಹೆಕ್ಕಿಕೊಂಡು ಇಲ್ಲಿ ಸೇರಿಸಿರುವುದನ್ನು ಗಮನಿಸಬಹುದು. ವಾಸ್ತುವಿದ್ಯೆಗೆ ಇತಿಹಾಸದ ಆಸರೆಯನ್ನು ಇಲ್ಲಿ ಅಚ್ಚುಕಟ್ಟಾಗಿ ನಿರೂಪಿಸಿದ್ದಾರೆ. ಮುಖ್ಯವಾಗಿ ಧಾರ್ಮಿಕವಾದ ಕಟ್ಟಡಗಳೇ ಎಣಿಕೆಗೆ ಬರುವುದಾದರೂ, ಅವುಗಳ ಶೈಲಿ, ಪ್ರಭೇದ, ಸಂವಿಧಾನ, ಪ್ರಾದೇಶಿಕ ಪ್ರಭಾವ, ಪ್ರಮುಖ ನಿದರ್ಶನಗಳು ಇವುಗಳನ್ನು ನಮ್ಮೆದುರು ಹಿಡಿದಿದ್ದಾರೆ.

ಮೊದಲನೆಯ ಅಧ್ಯಾಯದಲ್ಲಿ ವಾಸ್ತುವಿದ್ಯೆಯ ಮೂಲಭೂತವಾದ ಸಂದರ್ಭಶುದ್ಧಿಯನ್ನು ಪ್ರಸ್ತಾಪಿಸಿ, ಅದರ ವಿಶ್ವರೂಪ ದರ್ಶನವನ್ನು ಮಾಡಿಸಿದ್ದಾರೆ. ಕನ್ನಡದಲ್ಲಿ ಈ ಬಗೆಯ ದಿಗ್ದರ್ಶನ ಬಂದಿರುವುದು ಇದೇ ಮೊದಲು. ಎರಡನೆಯ ಅಧ್ಯಾಯ ವಾಸ್ತುವಿದ್ಯೆಯ ಮುಖ್ಯಪ್ರಮೇಯಗಳನ್ನು ಸೂಚಿಸಿ, ಅವುಗಳ ಪಾರಿಭಾಷಿಕ ಪುಷ್ಟಿಯನ್ನು ಒದಗಿಸುತ್ತದೆ. ಗುಡಿಯ ವಿನ್ಯಾಸ, ಅಂಗೋಪಾಂಗ ಕಲ್ಪನೆ, ಆವರಣಭೇದ, ಶೈಲಿಯ ಸ್ವಭಾವ, ಸಾಮಗ್ರಿಗಳ ಪ್ರಭಾವ, ಪ್ರಯೋಜನ ವಿನಿಯೋಗ ಇವುಗಳನ್ನು

ವಿವರವಾಗಿ, ಸರಳವಾಗಿ, ಮನಮುಟ್ಟುವಂತೆ ಕಾಣಿಸಿರುವುದೂ ಕನ್ನಡದಲ್ಲಿ ಪ್ರಾಯಶಃ ಮೊದಲ ಪ್ರಯತ್ನವೇ. ಪಾರಿಭಾಷಿಕ ಪದಗಳನ್ನು ಪರಿಚಯ ಮಾಡಿಸಿ ಕೊಡುವಲ್ಲಿ ಲೇಖಕರು ಸಮರ್ಥರು; ಯಶಸ್ವಿಗಳಾಗಿದ್ದಾರೆ.

ಇವೆರಡೂ ಅಧ್ಯಾಯಗಳು ಕನ್ನಡನಾಡಿನ ವಾಸ್ತುವಿದ್ಯೆಯ ಅಧ್ಯಯನಕ್ಕೆ ಅಗತ್ಯವಾದ ಪೂರ್ವರಂಗವನ್ನು ಸಿದ್ಧಗೊಳಿಸುತ್ತವೆ. ಮೂರನೆಯ ಅಧ್ಯಾಯ ಕರ್ನಾಟಕದಲ್ಲಿ ವಾಸ್ತು ಅವತರಿಸಿದ ಬಗೆಯನ್ನು ತಿಳಿಯಪಡಿಸಿ, ಗುಹಾವಾಸ್ತುವಿನ ಸೊಗಸನ್ನು ವೈಶಿಷ್ಟ್ಯವನ್ನೂ ಸೂಚಿಸಿ, ನಾಡಿನ ಇತರೆಡೆ ಇರುವ ಗುಹಾವಾಸ್ತು ಪ್ರಕಾರಗಳ ಪರಸ್ಪರ ಪ್ರಭಾವವನ್ನು ಎತ್ತಿತೋರಿಸಿ, ನಮ್ಮ ನಾಡಿನ ಗುಹಾದೇಗುಲಗಳ ಸಮಗ್ರ ಪರಿಚಯವನ್ನು ಮಾಡಿಕೊಡುತ್ತದೆ. ಮುಂದಿನ ಅಧ್ಯಾಯದಲ್ಲಿ 'ಸ್ಟ್ರಕ್ಚುರಲ್' ದೇವಾಲಯಗಳು ಮೊದಲಾದ ಕಾಲ, ಬಗೆ ಅದು ನಡೆದು ಬಂದ ದಾರಿ ಇವನ್ನು ವಿವರಿಸಿದ್ದಾರೆ. ವಾಸ್ತುಶಿಲ್ಪದ ಹರವು ಚೆನ್ನಾಗಿ ಕಾಣುವುದು ಇಲ್ಲಿಯೆ. ಕನ್ನಡನಾಡಿನ ಶಿಲ್ಪಿಗಳು, ಸ್ಥಪತಿಗಳು, ಕಲಾವಿದರು ಈ ದಿಸೆಯಲ್ಲಿ ದುಡಿದು ಮುಗಿಲುಮುಟ್ಟಿದುದನ್ನು ಈ ಅಧ್ಯಾಯದಲ್ಲೂ ಮುಂದಿನ ಅಧ್ಯಾಯದಲ್ಲೂ ಕಾಣಬಹುದು. ಚಾಳುಕ್ಯ, ಹೊಯ್ಸಳ ಪ್ರಕಾರಗಳಲ್ಲಿ ನಡೆದ ಪ್ರಯೋಗಗಳಲ್ಲಿ ಸಾಹಸ ಪ್ರವೃತ್ತಿಯೂ ಸೌಂದರ್ಯದೃಷ್ಟಿಯೂ ಶಾಸ್ತ್ರನಿಷ್ಠೆಯೂ ಇದ್ದುವು. ಇಲ್ಲಿನ ವಾಸ್ತುನಿದರ್ಶನಗಳಿಗೆ ವಿಶೇಷವಾದೊಂದು ಕಳೆಯಿದೆ; ಗತ್ತು; ಗಾಂಭೀರ್ಯಗಳಿವೆ. ವಿಶ್ವದ ಚೌಕಟ್ಟಿನಲ್ಲಾಗಲಿ ಭಾರತೀಯ ಚೌಕಟ್ಟಿನಲ್ಲಾಗಲಿ ಅನ್ಯಾದೃಶವೆಂಬಂಥ ರಚನೆಗಳು ಇಲ್ಲಿ ನಡೆದಿವೆ. ಇವುಗಳ ವಿಸ್ತಾರವಾದ ಪರಿಚಯವನ್ನು ಇಲ್ಲಿ ಪಡೆದುಕೊಳ್ಳಬಹುದು.

ಕಡೆಯ ಅಧ್ಯಾಯವನ್ನು ಅವನತಿಯ ಕಾಲವೆಂದು ಕರೆಯಲಾಗಿದ್ದರೂ ಉಚ್ಛ್ರಾಯಕಾಲದ ಮುಂದುವರಿಕೆಯೆಂಬುದು ಮನವರಿಕೆಯಾಗುತ್ತದೆ. ವಿಜಯನಗರ ಸಾಮ್ರಾಜ್ಯ ತಲೆಯೆತ್ತಿಕೊಂಡ ಕಾಲದಲ್ಲಿ ಆಗಲೆ ಪರಂಪರೆಯ ವಾಸ್ತುಶಿಲ್ಪ ಸಮೃದ್ಧವಾಗಿ ಸಂಪನ್ನವಾಗಿದ್ದಿತು. ಮೊದಲ ಭಾಗ ಸುವರ್ಣಯುಗವೆಂದರೂ ಸರಿಯೆ. ಆದರೆ ನಡುವೆ ಮತ್ತು ಕಡೆಗಾಲದಲ್ಲಿ ಸಾಂಸ್ಕೃತಿಕ ಒತ್ತಡಗಳು, ಪರಕೀಯರ ಪ್ರಭಾವ, ರಾಜಕಾರಣದ ಹಗರಣ, ಮತಾಂಧರ ಆಕ್ರಮಣ ಇವುಗಳಿಂದಾಗಿ ನಾಡಿನಲ್ಲಿ ಅನಿಶ್ಚಿತ ಸ್ಥಿತಿಯೇರ್ಪಟ್ಟು ವಾಸ್ತುಶಿಲ್ಪ ಕಳೆಗುಂದಿತು, ಗೊಂದಲಕ್ಕೊಳಗಾಯಿತು. ಇದನ್ನು ಅವನತಿಯೆಂದು ಗುರುತಿಸಿದರೇನು ತಪ್ಪಲ್ಲ. ವಾಸ್ತುಶಿಲ್ಪ ಈ ಕಾಲದಲ್ಲಿ ಅನುಭವಿಸಿದ ಮಾರ್ಪಾಟುಗಳನ್ನು ಈ ಅಧ್ಯಾಯ ವಿವರಿಸುತ್ತದೆ. ವಿಜಯನಗರ ಸಾಮ್ರಾಜ್ಯದ ಒತ್ತಾಸೆಯಿಂದ ತಲೆಯೆತ್ತಿಕೊಂಡ ನಾಯಕರು, ಅರಸರು ಅಲ್ಲಲ್ಲಿ ಆಳವಡಿಸಿಕೊಂಡ ವಿವರಗಳ ವಿಚಾರ ಇಲ್ಲಿ ಬರುತ್ತದೆ.

ವಾಸ್ತುವೆಂದರೆ ಮುಖ್ಯವಾಗಿ ಕಟ್ಟಡಗಳು; ಅದೇನು ಕಲಾಪ್ರಕಾರವಾಗದು; ಕಟ್ಟಡಗಳಲ್ಲಿ ಶಿಲ್ಪಗಳೇನಾದರೂ ಇದ್ದರೆ ಅದು ಮಾತ್ರ ಕಲಾಭಾಗವಾದೀತು ಎಂಬುದೊಂದು ವಾದವಿದೆ. ಪಾಶ್ಚಾತ್ಯ ವಾಸ್ತುವಿದ್ಯೆಯಲ್ಲಿ ವಿಜ್ಞಾನತಂತ್ರ (ಟೆಕ್ನಾಲಜಿ)ದ ಪಾಲು ಹೆಚ್ಚು; ಸೌಂದರ್ಯದ ದೃಷ್ಟಿ ಇದ್ದರೂ ಅದೇ ಎದ್ದುನಿಲ್ಲುವ ವಿವರವಲ್ಲ. ಅಲ್ಲಿ ವಾಸ್ತು ಬೇರೆ, ಶಿಲ್ಪ ಬೇರೆ ಎಂಬ ವಿಂಗಡಣೆ ಸರಿಯಾದೀತೋ ಏನೋ. ಆರ್ಕಿಟೆಕ್ಚರ್ ಮತ್ತು ಆರ್ಟ್ ಎಂದೇ ಅವರ ಒಕ್ಕಣೆ. ಆದರೆ ನಮ್ಮ ಸಂಸ್ಕೃತಿಯಲ್ಲಿ ಇಂಥ ವಿಂಗಡಣೆ ಕಾಣಸಿಗುವುದಿಲ್ಲ. ಇಲ್ಲಿ ವಾಸ್ತುವೂ ಕಲಾತ್ಮಕವಾದುದೇ; ಶಿಲ್ಪವಂತೂ ಸರಿಯೇ ಸರಿ. ಮನೆ ಕಟ್ಟುವ ಕಾಮಗಾರಿಯನ್ನೂ ನಮ್ಮ ಗ್ರಂಥಗಳು ಶಿಲ್ಪವೆಂದೇ ಗುರುತಿಸುತ್ತವೆ. ಜನರು ವಾಸ ಮಾಡುವ ಮನೆಯೂ ದೇವತಾ ಯೋಗ್ಯವಾಗಿಯೇ ಇರಬೇಕು. ಗುಡಿ–ಗುಂಡಾರಗಳ ನಡುವೆ ನಮ್ಮವರು ಅಷ್ಟಾಗಿ ಬೇಧವನ್ನೆಣಿಸಲಿಲ್ಲ. ಮತ್ತೆ ಭೂಮಿಯ ಆಯ್ಕೆ ನಿವೇಶನದ ನಕ್ಷೆ, ವಾಸ್ತುಪುರುಷನ ಪೂಜೆ, ವಾಸ್ತುದೈವಗಳ ಶಾಂತಿ ಇವೆಲ್ಲದರಲ್ಲೂ ಕಲೆಯ ಪ್ರವೇಶವಿದ್ದೇ ಇದೆ. ಚಾಳುಕ್ಯರ ದೇಗುಲಗಳು ಎದ್ದುಕೊಂಡ ಎಡೆಗಳು, ಹೊಯ್ಸಳರು ತಮ್ಮ ಕಟ್ಟಡಗಳನ್ನು ಎಬ್ಬಿಸಿದ ರೀತಿ, ಗಂಗರು ತಮ್ಮ ಆಲಯಗಳಿಗೆ ಹೊಂದಿಸಿದ ಹೊರ ಚೆಲುವು ಇವನ್ನೆಲ್ಲ ನೋಡಿದಾಗ ವಾಸ್ತುಶಿಲ್ಪ ಎಂಬುದು ಒಂದೇ ವಿವರವೆಂದೂ ಕಟ್ಟಡಗಳಲ್ಲಿ ಕಲೆ ಅಂತರಂಗ–ಬಹಿರಂಗವೆರಡರಲ್ಲೂ

ಒದಗಿಬರುವುದೆಂದೂ ಅರಿವಿಗೆ ಬರುತ್ತವೆ. ವಾಸ್ತುಶಿಲ್ಪ ನಮ್ಮಲ್ಲಿ ಒಂದು ಕಲಾಪ್ರಕಾರವೇ. ತಂತ್ರಜ್ಞಾನ (ಟೆಕ್ನಾಲಜಿ) ಅದಕ್ಕೆ ಅಧೀನವಾಗಿ ಕೆಲಸ ಮಾಡುತ್ತದೆ ಅಷ್ಟೆ. ಇದನ್ನು ಈ ಪುಸ್ತಕದಿಂದ ಮನಗಾಣಬಹುದು.

ಒಟ್ಟಿನಲ್ಲಿ ಕರ್ನಾಟಕ ವಾಸ್ತುಶಿಲ್ಪದ ಮೇಲೆ ವಿಶೇಷವಾದ, ಸಮಗ್ರವಾದ ಬೆಳಕನ್ನು ಚೆಲ್ಲುವ ಗ್ರಂಥ ಇದು. ಈ ಕಲಾಪ್ರಕಾರದ ಉಗಮ, ಇತಿಹಾಸ, ಜಾಯಮಾನ, ಗುಣವಿಶೇಷ, ಸಂದರ್ಭಶುದ್ಧಿ ಮೊದಲಾದ ವಿವರಗಳನ್ನು ನುರಿತ, ಹಿರಿಯ ಲೇಖಕರು ಇದರಲ್ಲಿ ಮೂಡಿಸಿದ್ದಾರೆ. ವಾಸ್ತುಶಿಲ್ಪ ಕೇವಲ ಕಟ್ಟಡಗಳಲ್ಲ, ಸಾಂಸ್ಕೃತಿಕ ಅಭಿವ್ಯಕ್ತಿ, ಅದರಲ್ಲಿ ಪರಂಪರೆಯ ಅಂಶವೂ ಇದೆ. ನವ್ಯತೆಯ ಗುಣವೂ ಇದೆ; ಸಂಪ್ರದಾಯದ ಚೌಕಟ್ಟೂ ಇದೆ, ಸೃಜನಾತ್ಮಕವಾದ ಧೋರಣೆಯೂ ಇದೆ; ಆಧ್ಯಾತ್ಮಿಕ ಪ್ರಸಕ್ತಿಯೂ ಇದೆ, ಲೌಕಿಕ ಪ್ರಯೋಜನವೂ ಇದೆ. ಹೀಗೆಂದೇ ಅದೊಂದು ಕಲಾಪ್ರಕಾರ. ಇದು ಈ ಗ್ರಂಥದಿಂದ ಸ್ಪಷ್ಟವಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಮಾಲೆಗೆ ಶೋಭೆ ತರುವಂಥ ಈ ಗ್ರಂಥವನ್ನು ರಚಿಸಿಕೊಟ್ಟು ಉಪಕಾರ ಮಾಡಿರುವ ನನ್ನ ಸನ್ಮಿತ್ರ ಡಾ. ಬಾ.ರಾ. ಗೋಪಾಲ ಅವರಿಗೆ ಕೃತಜ್ಞನಾಗಿದ್ದೇನೆ. ಇಂಥದೊಂದು ದೊಡ್ಡ ಕೆಲಸವನ್ನು ಅಕ್ಕರೆಯಿಂದ ಆಗಮಾಡಿಸಿದ ಮತ್ತೊಬ್ಬ ಮಿತ್ರರು, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಶ್ರೀ ಗೊ.ರು. ಚನ್ನಬಸಪ್ಪ ಅವರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಬೆಂಗಳೂರು

ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್

ಪ್ರಧಾನ ಸಂಪಾದಕ

ಲೇಖಕರ ಮಾತು

(ಪ್ರಥಮ ಮುದ್ರಣ)

ಹತ್ತು ವರ್ಷಗಳಿಗೂ ಹಿಂದೆ, ಜನಸಾಮಾನ್ಯರಿಗೆ ಕರ್ನಾಟಕದ ಕಲೆಗಳನ್ನು ಪರಿಚಯಿಸುವ ದೃಷ್ಟಿಯಿಂದ ಕರ್ನಾಟಕದ ಕಲೆಗಳು ಶೀರ್ಷಿಕೆಯಲ್ಲಿ ಹತ್ತು ಸಂಪುಟಗಳನ್ನು ಪ್ರಕಟಿಸುವ ಯೋಜನೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹಾಕಿಕೊಂಡಿತು. ಇದರಂತೆ ಕರ್ನಾಟಕ ವಾಸ್ತು ಎಂಬ ಈ ಕೃತಿಯನ್ನು ಬರೆದು ಕೊಡುವ ಜವಾಬ್ದಾರಿ ನನ್ನದಾಗಿತ್ತು. ಆ ನಡುವೆ ನಾನು ಅನಂತಪುರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯಕ್ಕೆ ಸೇವಾ ನಿಮಿತ್ತ ಹೋಗಬೇಕಾಯಿತು. ಅಲ್ಲಿನ ಜವಾಬ್ದಾರಿಗಳ ನಡುವೆ ಈ ಕಾರ್ಯವನ್ನು ಪೂರ್ಣಗೊಳಿಸಲಾಗಲಿಲ್ಲ. ನಂತರ ಇದನ್ನು ಮುಗಿಸಿ ಸಾಹಿತ್ಯ ಪರಿಷತ್ತಿಗೆ ಒಪ್ಪಿಸಿ ಸುಮಾರು ಎರಡು ವರ್ಷಗಳಾದುವು. ಪರಿಷತ್ತಿನಲ್ಲೂ ಅನೇಕ ತೊಂದರೆಗಳು. ಆದರೂ ಈಗಿನ ಅಧ್ಯಕ್ಷರಾದ ಶ್ರೀ ಗೊ. ರು. ಚನ್ನಬಸಪ್ಪನವರು ಇದರತ್ತ ಗಮನಹರಿಸಿ, ಇದು ಪ್ರಕಟವಾಗಲು ತುಂಬಾ ಆಸಕ್ತಿವಹಿಸಿದ್ದಾರೆ. ಇದು ಪ್ರಕಟವಾಗಲು ಅವರ ಆಸಕ್ತಿ, ಉತ್ಸಾಹಗಳೇ ಕಾರಣ. ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಈ ಕೃತಿ 'ಕರ್ನಾಟಕ ವಾಸ್ತುಶಿಲ್ಪ'ಕ್ಕೆ ಸಂಬಂಧಿಸಿದುದು. ಮಹಮದೀಯ ಅಥವಾ ಇಂಡೋ ಸಾರ್‌ಸನಿಕ್ ಶೈಲಿಗಳನ್ನು ಇಲ್ಲಿ ಪ್ರಸ್ತಾಪ ಮಾಡಿಲ್ಲ. ಇದು ಕೇವಲ ಕರ್ನಾಟಕ ಶೈಲಿಗೆ ಸಂಬಂಧಿಸಿದುದು. ಅದರ ಉಗಮ, ಬೆಳವಣಿಗೆ, ಪರಾಕಾಷ್ಠತೆ, ಇಳಿಮುಖಗಳನ್ನು ಸೂಕ್ಷ್ಮವಾಗಿ ಇಲ್ಲಿ ಗುರುತಿಸಲಾಗಿದೆ. ಆರಂಭದಲ್ಲಿ ಭಾರತದಲ್ಲಿ ವಾಸ್ತುಶಿಲ್ಪದ ಆರಂಭ, ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಕೃತಿಗಳು, ವಾಸ್ತುಶಿಲ್ಪದಲ್ಲಿ ಬಳಸಲಾದ ಪಾರಿಭಾಷಿಕ ಪದಗಳು–ಇವುಗಳನ್ನು ಎರಡು ಅಧ್ಯಾಯಗಳಲ್ಲಿ ವಿವರಿಸಲಾಗಿದೆ.

ಈ ಗ್ರಂಥದಲ್ಲಿ ಅಳವಡಿಸಲಾಗಿರುವ ರೇಖಾಚಿತ್ರಗಳನ್ನು ಬರೆದು ಕೊಟ್ಟವರು ನನ್ನ ಕಿರಿಯ ಮಿತ್ರರೂ, ಈಗ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗದ ಪ್ರವಾಚಕರೂ ಆದ ಡಾ. ಎಚ್. ಆರ್. ರಘುನಾಥ ಭಟ್ಟರು. ಅಧ್ಯಾಯಗಳನ್ನು ಬರೆದಂತೆಲ್ಲಾ ಓದಿ, ಸೂಕ್ತ ಸಲಹೆಗಳನ್ನು ನೀಡಿ ಕೃತಿಗೆ ಈ ರೂಪ ದೊರೆಯಲು ನೆರವಾದವರು ನನ್ನ ಮಿತ್ರರಾದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಬಿ. ಕೆ. ಗುರುರಾಜಾರಾಯರು. ಹಸ್ತಪ್ರತಿಯನ್ನು ಭಾಗಶಃ ಬೆರಳಚ್ಚಿಸಿ, ಭಾಗಶಃ ತಮ್ಮ ಮುದ್ದಾದ ಬರವಣಿಗೆಯಲ್ಲಿ ಬರೆದು, ಕರಡುಗಳನ್ನೋದಿ, ಇತರ ಎಲ್ಲಾ ವಿಧಗಳಲ್ಲೂ ನೆರವಾದವರು ನನ್ನ ವಿದ್ಯಾರ್ಥಿ, ನುರಿತ ಸಂಶೋಧಕ ಡಾ॥ ಎಚ್. ಎಸ್. ಗೋಪಾಲರಾಯರು. ಹೊಟ್ಟೆಪಾಡಿಗಾಗಿ ಕೆ.ಇ.ಬಿ.ಯಲ್ಲಿ ಇಂಜಿನಿಯರ್ ಆದ ಇವರ ಮೊದಲ ಪ್ರೇಮ ಕನ್ನಡ ಸಾಹಿತ್ಯ, ಸಂಸ್ಕೃತಿಗಳೊಡನೆ; ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ.

ಈ ಹೊತ್ತಗೆಯಲ್ಲಿನ ಬಹುತೇಕ ಛಾಯಾಚಿತ್ರಗಳನ್ನು ಬನಾರಸ್‌ನಲ್ಲಿರುವ ಭಾರತೀಯ ಅಧ್ಯಯನಗಳ ಅಮೆರಿಕನ್ ಸಂಸ್ಥೆಯವರು ಒದಗಿಸಿದ್ದಾರೆ. ಅದರ ನಿರ್ದೇಶಕರಿಗೂ, ಹಿರಿಯ ಮಿತ್ರ ಪ್ರೊ. ಧಾಕೆಯವರಿಗೂ ನಾನು ಕೃತಜ್ಞನಾಗಿದ್ದೇನೆ. ಹಲವು ಚಿತ್ರಗಳನ್ನು ಶ್ರೀ ಅ. ಲ. ನರಸಿಂಹನ್ ಒದಗಿಸಿದ್ದಾರೆ. ಅವರಿಗೂ ಕೃತಜ್ಞತೆಗಳು ಸಲ್ಲುತ್ತವೆ.

ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿದ 'ಸತ್ಯಶ್ರೀ' ಆಫ್‌ಸೆಟ್ ಮುದ್ರಣಾಲಯದವರಿಗೆ ನನ್ನ ವಂದನೆಗಳು.

ಇದು ಜನಸಾಮಾನ್ಯರಲ್ಲಿ ವಾಸ್ತುಶಿಲ್ಪದ ಬಗೆಗೆ ಅಭಿರುಚಿ ಮೂಡಿಸಿದರೆ ನಾನು ಧನ್ಯ.

ಮೈಸೂರು

೧೫-೮-೧೯೯೩ ಬಾ. ರಾ. ಗೋಪಾಲ್

ಪರಿವಿಡಿ

ಪ್ರಸ್ತಾವನೆ

ಪ್ರವೇಶ: ವಾಸ್ತುವಿದ್ಯಾ – ಶಿಲ್ಪಶಾಸ್ತ್ರ

ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟ ಗೃಹ, ಗುಡಿ, ಮುಂತಾದವುಗಳನ್ನು ವಾಸ್ತುವೆಂದು ಕರೆಯಲಾಗಿದೆ. ಇವು ವಸ್ತುಗಳು; ಇವುಗಳಿಗೆ ಆಧಾರವೂ ವಸ್ತುವೇ. ಭೂಮಿಯ ಮೇಲೆ ಕಟ್ಟಲ್ಪಟ್ಟ ಕಟ್ಟಡಗಳಂತೆಯೇ ಕಟ್ಟಡದ ನಕ್ಷೆಗಳು, ಅಳತೆಗಳು, ಕಟ್ಟಡದ ನಕ್ಷೆಯನ್ನೊಳಗೊಂಡ ಭೂಮಿ, ವಸತಿಗೃಹಗಳು ಸಹ ವಾಸ್ತುಗಳೇ. ವಿಶಾಲವಾದ ಅರ್ಥದಲ್ಲಿ ವಾಸ್ತುವೆಂಬುದು ಭೂಮಿ, ಕಟ್ಟಡ, ವಾಹನ ಹಾಗೂ ಪರ್ಯಂಕಗಳನ್ನೊಳಗೊಂಡಿದೆ. ಗ್ರಾಮಗಳು, ನಗರಗಳು, ಕೋಟೆಗಳು, ಪಟ್ಟಣಗಳು, ಮಠಗಳು ಸಹ ವಾಸ್ತುಗಳೆಂದು ಗರುಡಪುರಾಣದಲ್ಲಿ ಹೇಳಿದೆ.

ಅವಾಸವಾಸವೇಶ್ಮಾದೌ ಪುರೇ ಗ್ರಾಮೇ ವಣಿಕ್ಪಥೇ
ಪ್ರಾಸಾದಾರಾಮದುರ್ಗೇಷು ದೇವಾಲಯ ಮಠೇಷು ಚ

(ಗರುಡಪುರಾಣ, ಅಧ್ಯಾಯ–೪೬)

ಆಲಯಗಳನ್ನು ಕಟ್ಟಲು ಬಳಸಿದ ಇಟ್ಟಿಗೆ, ಕಲ್ಲು ಮರ ಹಾಗೂ ಕಬ್ಬಿಣಗಳನ್ನು ಸಹ ವಿಶ್ವಕರ್ಮ ವಾಸ್ತುಶಾಸ್ತ್ರದಲ್ಲಿ ವಾಸ್ತುಗಳೆಂದೇ ಕರೆದಿದೆ. ಕಟ್ಟಡಗಳಲ್ಲಿ ಹಲವು ಬಗೆ – ಪ್ರಾಸಾದ, ಮಂಡಪ, ಸಭಾ, ಶಾಲಾ, ಪ್ರಪಾ ಮತ್ತು (ಅ)ರಜ್ಞ. ವಾಹನ (ಯಾನ)ಗಳಲ್ಲಿ ಅಧಿಕ, ಸ್ಯಂದನ, ಶಿಬಿಕಾ, ರಥ ಎಂದು ನಾಲ್ಕು ವಿಧ. ಪರ್ಯಂಕಗಳು ಆರು – ಪಂಜರ, ಮಂಚಲೀ, ಮಂಚ, ಕಷ್ಟ, ಫಲಕಾಸನ ಮತ್ತು ಬಾಲಪರ್ಯಂಕ.

ವಾಸ್ತುಶಾಸ್ತ್ರ (ವಾಸ್ತುವಿದ್ಯಾ – ಶಿಲ್ಪಶಾಸ್ತ್ರ) ಎಂದರೆ ಇಂತಹ ಕಟ್ಟಡಗಳಿಗೆ – ನಕ್ಷೆಗಳಿಗೆ ಸಂಬಂಧಿಸಿದ ಶಾಸ್ತ್ರ. ಶುಕ್ರನೀತಿಯಲ್ಲಿ ಈ ಶಾಸ್ತ್ರವನ್ನು ಅರಮನೆಗಳ, ರೇವುಗಳ, ಮನೆಗಳ, ಕಾಲುವೆಗಳ, ವಿಗ್ರಹಗಳ ರಚನೆಗೆ ಸಂಬಂಧಿಸಿದ ಶಾಸ್ತ್ರವೆಂದೇ ಕರೆಯಲಾಗಿದೆ. ವಾಸ್ತುಕರ್ಮ ಎಂಬುದು ಕಟ್ಟುವಿಕೆಗೆ ಸಂಬಂಧಿಸಿದ ಪದ.

ವಾಸ್ತುಶಾಸ್ತ್ರ – ಪ್ರಾಚೀನ ಗ್ರಂಥಗಳು

ಭಾರತದಲ್ಲಿ ವಾಸ್ತುಶಾಸ್ತ್ರ ಪ್ರಾಚೀನಶಾಸ್ತ್ರಗಳಲ್ಲೊಂದಾಗಿದೆ. ಇದಕ್ಕೆ ಸಂಬಂಧಿಸಿದ ಪ್ರಾಚೀನ ಗ್ರಂಥವೆಂದರೆ ಸುಮಾರು ಕ್ರಿ.ಶ. ಆರನೆಯ ಶತಮಾನದ ಮಧ್ಯ ಭಾಗದಲ್ಲಿ ವರಾಹಮಿಹಿರನು ಕ್ರೋಢೀಕರಿಸಿದ ಬೃಹತ್ಸಂಹಿತೆ. ಇದು ವಾಸ್ತುಶಿಲ್ಪದಲ್ಲಿ ಪ್ರಾಚಾರ್ಯರೆನಿಸಿದ ಹೆಸರಾಂತ ಮಯ, ವಿಶ್ವಕರ್ಮ, ಗರ್ಗ ಮತ್ತು ಮನುಗಳು ರೂಪಿಸಿದ ಪ್ರಮಾಣವಾಕ್ಯಗಳನ್ನೂ ಅವರ ಗ್ರಂಥಗಳ ಸಾರಾಂಶಗಳನ್ನೂ ಒಳಗೊಂಡ ಗ್ರಂಥ. ಸೂತ್ರಗಳಲ್ಲಿ, ಪುರಾಣಗಳಲ್ಲಿ, ಆಗಮಗಳಲ್ಲಿ, ತಂತ್ರಗ್ರಂಥಗಳಲ್ಲಿ ವಾಸ್ತುಶಿಲ್ಪದ ಹಲವಾರು ವಿವರಗಳಿವೆ. ಸಾಂಖ್ಯಾಯನ ಮತ್ತು ಅಶ್ವಲಾಯನ ಗೃಹ್ಯಸೂತ್ರಗಳು, ಮತ್ಸ್ಯ, ಅಗ್ನಿ, ಗರುಡ, ಸ್ಕಾಂದ ಹಾಗೂ ವಿಷ್ಣು ಧರ್ಮೋತ್ತರ ಪುರಾಣಗಳು, ಕಾಮಿಕ, ಕರಣ (ಕಾರಣ), ವೈಖಾನಸ, ಸುಪ್ರಭೇದ ಆಗಮಗಳು, ಮಹಾನಿರ್ವಾಣ ತಂತ್ರ ಇತ್ಯಾದಿಗಳು ಇವುಗಳಲ್ಲಿ ಹೆಸರಿಸಬಹುದಾದವುಗಳು. ಕಾಮಿಕಾಗಮದಲ್ಲಿನ ಎಪ್ಪತ್ತೈದು ಅಧ್ಯಾಯಗಳಲ್ಲಿ ಅರವತ್ತು ಅಧ್ಯಾಯಗಳು ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದವುಗಳಾಗಿದ್ದು ಇದನ್ನು ಒಂದು ವಾಸ್ತುಶಾಸ್ತ್ರವೆಂದೇ ಪರಿಗಣಿಸಬಹುದಾಗಿದೆ.

ಪ್ರತ್ಯೇಕವಾಗಿ ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಗ್ರಂಥಗಳೇ ಹಲವಾರು. ಇವುಗಳನ್ನು ದಾಕ್ಷಿಣಾತ್ಯ ಮತ್ತು ಔತ್ತರೇಯ ಗ್ರಂಥಗಳೆಂದು ವಿಂಗಡಿಸಲಾಗಿದೆ. ಮಯಮತ, ಮಾನಸಾರ, ಕಾಶ್ಯಪಶಿಲ್ಪ, ಅಗಸ್ತ್ಯ ಸಕಲಾಧಿಕಾರಗಳು ದಾಕ್ಷಿಣಾತ್ಯ. ಸಮರಾಂಗಣ ಸೂತ್ರಧಾರ, ಅಪರಾಜಿತ ಪೃಚ್ಛಾ, ಪ್ರಸಾದಮಂಡನ ಹಾಗೂ ರೂಪಮಂಡನಗಳು ಔತ್ತರೇಯ. ಚಾಲುಕ್ಯರ ಅರಸನಾದ ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರನು ರಚಿಸಿದ, ವಿಶ್ವಕೋಶವೆನಿಸಿದ, ಅಭಿಲಷಿತಾರ್ಥಚಿಂತಾಮಣಿ ಅಥವಾ ಮಾನಸೋಲ್ಲಾಸದ ಎರಡು ಅಧ್ಯಾಯಗಳಲ್ಲಿ ವಾಸ್ತುಶಿಲ್ಪಕ್ಕೆ ಸೇರಿದ ಕೆಲವು ವಿವರಗಳಿವೆ. ತಂತ್ರಸಮುಚ್ಚಯ ಎಂಬುದು ೧೫ನೆಯ ಶತಮಾನದಲ್ಲಿ ನಾರಾಯಣನ್ ನಂಬೂದರಿ ಎಂಬಾತ ರಚಿಸಿದ ಗ್ರಂಥ. ಕೇರಳದಲ್ಲಿ ಅಂಬಲಪುಳದ ಅರಸನಾಗಿದ್ದ ದೇವನಾರಾಯಣನ ಆದೇಶದ ಮೇರೆಗೆ

ಶ್ರೀಕುಮಾರ ಎಂಬಾತ ಮಾನಸಾರ ಹಾಗೂ ಇತರ ವಾಸ್ತುಶಾಸ್ತ್ರಗಳಿಂದ ಕ್ರೋಡೀಕರಿಸಿದ ೪೬ ಅಧ್ಯಾಯಗಳುಳ್ಳ ಮತ್ತೊಂದು ಗ್ರಂಥ ಶಿಲ್ಪರತ್ನ.

ದಾಕ್ಷಿಣಾತ್ಯ ಗ್ರಂಥಗಳಲ್ಲಿ ಪ್ರಮುಖವಾದ ಮಾನಸಾರವು ವಾಸ್ತು ಹಾಗೂ ಮೂರ್ತಿಶಿಲ್ಪಗಳ ಬಗೆಗಿನ ಪ್ರಮಾಣಭೂತ ಗ್ರಂಥ. ಇದರಲ್ಲಿ ಹತ್ತು ಸಾವಿರಕ್ಕೂ ಮೀರಿದ ಸಾಲುಗಳುಳ್ಳ ಎಪ್ಪತ್ತು ಅಧ್ಯಾಯಗಳಿವೆ. ಐವತ್ತು ಅಧ್ಯಾಯಗಳಲ್ಲಿ ವಾಸ್ತುಶಿಲ್ಪದ ವಿವರಗಳಿದ್ದು ಉಳಿದ ಇಪ್ಪತ್ತು ಅಧ್ಯಾಯಗಳು ಮೂರ್ತಿಶಿಲ್ಪಕ್ಕೆ ಮೀಸಲಾಗಿವೆ. ಹೆಸರೇ ಸೂಚಿಸುವಂತೆ ಇದರಲ್ಲಿ ಕರಾರುವಾಕ್ಕಾದ ಅಳತೆಗಳಿಗೆ ಪ್ರಾಶಸ್ತ್ಯ ನೀಡಲಾಗಿದೆ. ಇತರ ವಾಸ್ತುಶಿಲ್ಪ ಗ್ರಂಥಗಳು ಇದನ್ನಾಧರಿಸಿವೆ ಎಂಬ ಅಭಿಪ್ರಾಯ ಸರ್ವಮಾನ್ಯವಾಗಿಲ್ಲದಿದ್ದರೂ ಆ ದೃಷ್ಟಿಯೇ ಈ ಕೃತಿಯ ಪ್ರಾಚೀನತೆ ಹಾಗೂ ಪ್ರಾಮುಖ್ಯತೆಗೆ ಸಾಕ್ಷಿಯಾಗಿದೆ. ಇದರ ಮೊದಲನೆಯ ಅಧ್ಯಾಯದಲ್ಲಿ ಸಂಗ್ರಹವಾಗಿ ವಿಷಯವನ್ನು ನಿರೂಪಿಸಿ ಶಿಲ್ಪ ಲಕ್ಷಣಗಳನ್ನು ವಿವರಿಸಿದೆ. ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ ಮತ್ತು ತಕ್ಷಕರೆಂಬ ನಾಲ್ಕು ವಿಧದ ಶಿಲ್ಪಿಗಳ ಪ್ರಸ್ತಾಪ ಆರಂಭದಲ್ಲಿಯೇ ಇದೆ. ಕಟ್ಟಡದ ಭೂಮಿಪೂಜೆಯಿಂದ ಆರಂಭಿಸಿ ಕಣ್ಣುಗಳನ್ನು ಸೂಕ್ಷ್ಮವಾಗಿ ಕೆತ್ತುವುದರವರೆಗಿನ ಹಲವಾರು ಅಂಶಗಳು ಇದರಲ್ಲಿ ಅಡಕಗೊಂಡಿವೆ.

ಪೌರಾಣಿಕ ಶಿಲ್ಪಿ ಎನಿಸಿದ ಮಯನು ರಚಿಸಿದನೆನ್ನಲಾದ ಗ್ರಂಥ ಮಯಮತ. ಇದರ ಹಲವಾರು ಹಸ್ತಪ್ರತಿಗಳು ಲಭಿಸಿವೆ. ಇವುಗಳನ್ನು ಬೇರೆ ಬೇರೆ ಹೆಸರುಗಳಿಂದ– ಮಯಶಿಲ್ಪ, ಮಯವಾಸ್ತು, ಮಯಮತವಾಸ್ತುಶಾಸ್ತ್ರ ಇತ್ಯಾದಿ – ಕರೆಯಲಾಗಿದೆ. ಇದರಲ್ಲಿ ೩೬ ಅಧ್ಯಾಯಗಳಿವೆ. ಅಗಸ್ತ್ಯ ಸಕಲಾಧಿಕಾರ ಎಂಬುದನ್ನು ಅಗಸ್ತ್ಯಮಹರ್ಷಿ ಬರೆದನೆಂದು ನಂಬಲಾಗಿದೆ. ಇದರ ಒಂದು ಹಸ್ತಪ್ರತಿಯಲ್ಲಿ ೧೬ ಅಧ್ಯಾಯಗಳಿವೆ. ಇದರಲ್ಲಿ ವಿಶೇಷವಾಗಿ ಮೂರ್ತಿಶಿಲ್ಪದ ಪ್ರಸ್ತಾಪವೇ ಇದೆ. ಶಿಲ್ಪ ಸಂಗ್ರಹ ಎಂಬ ಗ್ರಂಥದಲ್ಲಿ ಕೆಲವು ಅಧ್ಯಾಯಗಳು ಸಹ ಅಗಸ್ತ್ಯವಿರಚಿತವೆಂದು ಹೇಳಲಾಗಿದೆ. ಶಿಲ್ಪಶಾಸ್ತ್ರವೆಂಬ ಇನ್ನೊಂದು ಕೃತಿಯಲ್ಲಿ ಕೆಲವು ಭಾಗಗಳು ಕಾಶ್ಯಪನಿಂದ ಬರೆಯಲ್ಪಟ್ಟುವೆಂದೂ (ಶಿಲ್ಪಶಾಸ್ತ್ರಂ ಕಾಶ್ಯಪೀಯಂ) ಇನ್ನು ಕಲವು ಅಗಸ್ತ್ಯ ವಿರಚಿತವೆಂದೂ (ಶಿಲ್ಪಶಾಸ್ತ್ರಂ ಅಗಸ್ತ್ಯಂ) ಹೇಳಿದೆ. ಇದರ ತೆಲುಗು ಹಸ್ತಪ್ರತಿಯೊಂದು ಕ್ರಿ. ಶ. ೧೮೩೨ರಲ್ಲಿ ಮಚಲೀಪಟ್ಟಣದಲ್ಲಿ ದೊರೆತಿದ್ದು ಅದರಲ್ಲಿ ಆಲಯಗಳಿಗೂ ವಿಗ್ರಹಗಳಿಗೂ ಸಂಬಂಧಿಸಿದಂತೆ ಅನ್ಯಗ್ರಂಥಗಳಿಂದ ಉದ್ಧೃತವಾದ ಭಾಗಗಳಿವೆ.

'ಸಮರಾಂಗಣ ಸೂತ್ರಧಾರ'ವನ್ನು ಧಾರಾನಗರದ ಭೋಜರಾಜನು ೧೧ನೆಯ ಶತಮಾನದಲ್ಲಿ ರಚಿಸಿದನೆಂದು ಹೇಳಲಾಗಿದೆ. ೮೩ ಅಧ್ಯಾಯಗಳ ಈ ಗ್ರಂಥದಲ್ಲಿ ಗುಜರಾತಿನಲ್ಲಿ ಕಾಣಿಸಿಕೊಳ್ಳುವ ಅಲಂಕೃತ ಸಭಾಮಂಡಪಗಳ ಪ್ರಸ್ತಾಪವಿದೆ. ಇದರಲ್ಲಿಯೂ 'ಅಪರಾಜಿತಪೃಚ್ಛಾ'ದಲ್ಲಿಯೂ ಲೌಕಿಕವಾಸ್ತುಶಿಲ್ಪದ ಬಗೆಗೆ ಹೆಚ್ಚಿನ ವಿವರಗಳು ಲಭಿಸುತ್ತವೆ. ಈ ಗ್ರಂಥದ ಕರ್ತೃ ಭುವನದೇವಾಚಾರ್ಯ. ಇದನ್ನು ಹೇಮಾದ್ರಿಯ ಪರಿಶೇಷಖಂಡದಲ್ಲಿ ಉದ್ಧರಿಸಲಾಗಿದೆ. ಇದೇ ಹೆಸರಿನ ಒಬ್ಬಾತ 'ಶಿಲ್ಪಗ್ರಂಥ'ದ ಕರ್ತೃ. ಇದು ಬಹುಮಟ್ಟಿಗೆ 'ಅಪರಾಜಿತಪೃಚ್ಛಾ'ವನ್ನೇ ಹೋಲುತ್ತದೆ. 'ಪ್ರಸಾದಮಂಡನ' ಹಾಗೂ 'ರೂಪಮಂಡನ'ಗಳ ಕರ್ತೃ ಮಂಡನಸೂತ್ರಧಾರ. ಇದು ಸಂಸ್ಕೃತದಲ್ಲಿದ್ದರೂ ಬಹುಮಟ್ಟಿಗೆ 'ಭಾಷಾ' ರೂಪಗಳು ಇದರಲ್ಲಿ ಬೆರೆತಿವೆ. ರಾಜವಲ್ಲಭಮಂಡನ ಹಾಗೂ ಭೂಪತಿವಲ್ಲಭರು ರಚಿಸಿದ ಗ್ರಂಥ ವಾಸ್ತುಶಾಸ್ತ್ರ ಅಥವಾ ಶಿಲ್ಪಶಾಸ್ತ್ರ. ಗುಜರಾತಿನ ಅಣಹಿಲಪಟ್ಟಣದಲ್ಲಿ ಪ್ರಕಟವಾದ ಈ ಗ್ರಂಥಕ್ಕೆ ಗುಜರಾತೀ ಭಾಷೆಯಲ್ಲಿ ಒಂದು ಟಿಪ್ಪಣಿ ಸಹ ಇದೆ. ಈ ಮಂಡನನು ಮೇದಪಾಡಿಯ ಅರಸನಾದ ಕುಂಭಕರ್ಣನ (ಕ್ರಿ. ಶ. ೧೪೧೯–೬೯) ಆಸ್ಥಾನದಲ್ಲಿದ್ದಾತ. ರೂಪಮಂಡನ, ಪ್ರಾಸಾದಮಂಡನ, ವಾಸ್ತುಮಂಡನ, ಆಯತತ್ವ, ವಾಸ್ತುಮಂಜರೀ, ವಾಸ್ತುಸಾರಗಳೆಂಬ ಇತರ ಗ್ರಂಥಗಳನ್ನೂ ಈತನೇ ರಚಿಸಿದನೆಂದು ಹೇಳಲಾಗಿದೆ.

ಈ ಸಂದರ್ಭದಲ್ಲಿ 'ಶುಲ್ವಸೂತ್ರ' ಗಳನ್ನು ಇಲ್ಲಿ ಪ್ರಸ್ತಾಪಿಸಬಹುದಾಗಿದೆ. ಇವು ಕಲ್ಪಸೂತ್ರಗಳ ಭಾಗಗಳು. ಆರ್ಯರು ಮಾಡುತ್ತಿದ್ದ ಯಜ್ಞಗಳಿಗಾಗಿ ರಚಿಸಲಾಗುತ್ತಿದ್ದ ವಿವಿಧ ವೇದಿ(ಕೆ) – ಬಲಿಪೀಠ – ಗಳ ರಚನೆಗೆ ಸಂಬಂಧಿಸಿದಂತೆ ಅಳತೆಮಾಡಲು ಬಳಸುತ್ತಿದ್ದ ದಾರ(ಸೂತ್ರ)ವನ್ನಾಧರಿಸಿ ಇದಕ್ಕೆ ಆ ಹೆಸರು ಬಂದಿದೆ. ಇವುಗಳಲ್ಲದೆ ಇನ್ನೂ ಹಲವಾರು ವಾಸ್ತುಶಿಲ್ಪಕ್ಕೆ ಸಂಬಂಧಿಸಿದ ಶಾಸ್ತ್ರಗ್ರಂಥಗಳನ್ನು ನಾವು ನಮ್ಮ ನಾಡಿನಲ್ಲಿ ಕಾಣುತ್ತೇವೆ. ವಾಸ್ತುಶಿಲ್ಪಶಾಸ್ತ್ರವನ್ನು ಒಂದು ಉಪವೇದ – ಸ್ಥಾಪತ್ಯಉಪವೇದ – ವೆಂದು ಭಾವಿಸಿರುವುದನ್ನು ಗಮನಿಸಿದಾಗ ಈ ಶಾಸ್ತ್ರಕ್ಕೂ ನಾವು ಎಷ್ಟು ಮಹತ್ವವನ್ನು ನೀಡಿದ್ದೇವೆಂಬುದನ್ನು ಸೂಚಿಸುತ್ತದೆ.

ಇಲ್ಲಿ ಒಂದು ಅಂಶವನ್ನು ಗಮನಿಸಬೇಕು. ಅತಿ ಪ್ರಾಚೀನವಾದ ಗ್ರಂಥದ ಕಾಲ ಸುಮಾರು ಕ್ರಿ. ಶ. ಆರನೆಯ ಶತಮಾನವೆಂದು ಹೇಳಿದೆ. ಅದಕ್ಕೆ ಮೊದಲೇ ನಮ್ಮಲ್ಲಿ ನೂರಾರು ವಾಸ್ತುಶಿಲ್ಪ ಕಟ್ಟಡಗಳು ಆಗಿ ಹೋದವು. ಅವುಗಳು ಯಾವ ಶಾಸ್ತ್ರಗ್ರಂಥಗಳನ್ನಾಧರಿಸಿ ಕಟ್ಟಲ್ಪಟ್ಟವು? ಇಲ್ಲಿ ತತ್ವಗಳನ್ನು ಆಧರಿಸಿ ಆಚರಣೆ ಅಸ್ತಿತ್ವಕ್ಕೆ ಬಂತೇ ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ನಿಜವಾಗಿ ಆಚರಣೆಯೇ

ಮೊದಲು ಬಂದದ್ದು. ಅತಿ ಪ್ರಾಚೀನ ಕಾಲದಲ್ಲಿ ಮಾನವ ತನ್ನ, ತನ್ನವರ, ರಕ್ಷಣೆಗಾಗಿ ಒಂದು 'ಮನೆ'ಯನ್ನು ಕಟ್ಟಿಕೊಂಡಂದಿನಿಂದಲೇ ವಾಸ್ತುಶಿಲ್ಪ ಉಂಟಾಯಿತೆನ್ನಬೇಕು. ಕ್ರಮೇಣ ಜ್ಞಾನ ವಿಕಾಸವಾದಂತೆಲ್ಲಾ ಈ ಕಟ್ಟಡಗಳು, ದೇವಾಲಯಗಳು ಹೆಚ್ಚಿದಂತೆಲ್ಲಾ ಇವುಗಳ ಮೂಲಭೂತ ತತ್ವಗಳನ್ನು ನಿರೂಪಿಸಬೇಕೆಂಬ ಮನೋಭಾವ ಸ್ಥಪತಿಗಳದಾಯಿತು. ಎಂತಲೇ ಆ ಬಳಿಕ ವಾಸ್ತುಶಿಲ್ಪ ಗ್ರಂಥಗಳು ಹುಟ್ಟಿಕೊಂಡವು. ಕ್ರಮೇಣ ಈ ಗ್ರಂಥಗಳಲ್ಲಿ ಪ್ರತಿಪಾದಿತವಾದ ಮೂಲಭೂತ ತತ್ವಗಳನ್ನಾಧರಿಸಿ ಸ್ಥಪತಿಗಳು ಹೊಸ ಹೊಸ ವಿನ್ಯಾಸಗಳನ್ನು ರೂಢಿಸಿಕೊಂಡರು. ಹಾಗೆ ರೂಢಿಸಿದ ವಿನ್ಯಾಸ – ಶೈಲಿಗಳನ್ನು ತತ್ವಗಳನ್ನಾಗಿ ಮಾರ್ಪಡಿಸಿದಾಗ ಹೊಸ ಹೊಸ ಶಾಸ್ತ್ರ ಗ್ರಂಥಗಳೂ ಹುಟ್ಟಿಕೊಂಡವು. ಹೀಗೆ ಒಂದು ಇನ್ನೊಂದಕ್ಕೆ ಪ್ರೇರಕ. ದೇಶ, ಕಾಲ, ಪರಿಸರಗಳನ್ನವಲಂಬಿಸಿ ಬೇರೆ ಬೇರೆ ಕಡೆ ಭಿನ್ನ ಭಿನ್ನ ಶೈಲಿಗಳು ತಲೆ ಎತ್ತಿದವು.

ಇದು ಪ್ರಾಚೀನ ಹಾಗೂ ಮಧ್ಯಯುಗೀನ ಭಾರತಕ್ಕೆ ಸಂಬಂಧಿಸಿದುದು. ಇತರ ಪ್ರಾಚೀನ ನಾಗರಿಕತೆಗಳಲ್ಲಿ ಇಂತಹ ಶಾಸ್ತ್ರಗಂಥಗಳಾವುವೂ ದೊರೆತಂತಿಲ್ಲ. ಇದು ಆಶ್ಚರ್ಯಕರ. ಇಲ್ಲಿ ಒಂದು ಮಾತನ್ನು ನೆನಪಿನಲ್ಲಿಡಬೇಕು. ನಮ್ಮ ನಾಡಿನ ಸಂಸ್ಕೃತಿಯ, ನಾಗರಿಕತೆಯ ಒಂದು ವೈಶಿಷ್ಟ್ಯ ಅದರ ಅವಿಚ್ಛಿನ್ನತೆ. ಆದರೆ ಅನ್ಯ ಸಂಸ್ಕೃತಿ, ನಾಗರಿಕತೆಗಳಿಗೆ ಈ ಮಾತನ್ನು ಅನ್ವಯಿಸುವಂತಿಲ್ಲ. ಪ್ರಾಚೀನ ಈಜಿಪ್ಟ್, ಮೆಸೋಪೊಟೇಮಿಯ, ಅಸ್ಸೀರಿಯ ನಾಗರಿಕತೆಗಳೇ ಈಗ ಅದೃಶ್ಯ. ಮರೆತು ಹೋದ ವಿಷಯಗಳು. ಎಂತಲೇ ಅಲ್ಲಿನ ವಾಸ್ತುಶಿಲ್ಪಗಳನ್ನು ಕುರಿತಾದ ಶಾಸ್ತ್ರಗ್ರಂಥಗಳೇನಾದರೂ ಇದ್ದಿರಬಹುದಾದರೂ ಅವು ಲಭ್ಯವಾಗಿಲ್ಲ. ಈ ತರ್ಕವನ್ನು ಪ್ರಾಚೀನ ಗ್ರೀಕ್ ಹಾಗೂ ರೋಮನ್ ಸಂಸ್ಕೃತಿಗಳಿಗೆ ಅನ್ವಯಿಸಲಾಗದು. ಆದರೆ ಆ ದೇಶಗಳ ಅಂತಹ ಶಾಸ್ತ್ರಗ್ರಂಥಗಳನ್ನು ಕುರಿತು ನಮಗೆ ವಿಶೇಷವಾಗಿ ತಿಳಿದಿಲ್ಲ. ವಿಟ್ರುವಿಯಸ್ ಎಂಬಾತ ಕ್ರಿ. ಶ. ೨ನೆಯ ಶತಮಾನದ ಪ್ರಖ್ಯಾತ ರೋಮನ್ ಶಿಲ್ಪಿ. ಈತನ ಗ್ರಂಥದ ಹಲವಾರು ವಿವರಣೆಗಳು ಮಾನಸಾರದಲ್ಲಿಯೂ ಕಂಡುಬಂದಿವೆ ಎಂದು ಪಿ. ಕೆ. ಆಚಾರ್ಯರು ತೋರಿಸಿಕೊಟ್ಟಿದ್ದಾರೆ. ಈತ ಲ್ಯಾಟಿನ್ ಭಾಷೆಯಲ್ಲಿ ಬಳಸಿದ ratio cinatio ಎಂಬ ಪದವನ್ನು ವಾಸ್ತುಶಿಲ್ಪದ ತತ್ತ್ವ ಎಂದು ಭಾಷಾಂತರಿಸಲಾಗಿದೆ. ಆದರೂ ಪಾಶ್ಚಾತ್ಯ ದೇಶಗಳಲ್ಲಿ ನಮ್ಮ ನಾಡಿನಲ್ಲಿ ಕಂಡು ಬಂದಿರುವಷ್ಟು ವಾಸ್ತುಶಿಲ್ಪ ಶಾಸ್ತ್ರ ಗ್ರಂಥಗಳು ಬಂದಿಲ್ಲ. ಅಲ್ಲಿ ಕೈಗಾರಿಕಾಕ್ರಾಂತಿಯ ನಂತರ – ಸುಮಾರು ೧೭೫೦ರ ಬಳಿಕ – ಇಂತಹ ಗ್ರಂಥಗಳು, ಈ ತತ್ತ್ವಗಳಿಗೆ ಸಂಬಂಧಿಸಿದ ವಿಚಾರಗಳು ಹೆಚ್ಚಾಗಿ ಪ್ರಕಟಗೊಂಡವು. ಈ ಗ್ರಂಥಗಳಲ್ಲಿ, ಇದಕ್ಕೂ ಹಿಂದಿನ ಪ್ರಾಚೀನ ಈಜಿಪ್ಟ್ ಸಂಸ್ಕೃತಿಗೆ ಸೇರಿದ ಕಟ್ಟಡಗಳಲ್ಲಿ, ಹಲವಾರು ಶಿಲ್ಪಿಗಳ ಹೆಸರುಗಳು ಲಭಿಸಿವೆ. ಸಹಜವಾಗಿಯೇ ಅವರು ಯಾವುದಾದರೂ ನಿರ್ದಿಷ್ಟ ಪದ್ಧತಿಯನ್ನು ಅವಲಂಬಿಸಿರಬೇಕು, ಅದಕ್ಕೆ ಸಂಬಂಧಿಸಿದ ಕೆಲವಾದರೂ ಶಾಸ್ತ್ರಗ್ರಂಥಗಳು ಇದ್ದಿರಬೇಕು.

ಪಾಶ್ಚಾತ್ಯ ವಾಸ್ತುಶಿಲ್ಪ

ಪಾಶ್ಚಾತ್ಯ ವಾಸ್ತುಶಿಲ್ಪ ಬಹುಮಟ್ಟಿಗೆ ಲೌಕಿಕ. ಆ ವಾಸ್ತುಶಿಲ್ಪಗಳ ಉದ್ದೇಶ, ಲಕ್ಷಣಗಳು ಭಾರತೀಯ ವಾಸ್ತುಶಿಲ್ಪಕ್ಕಿಂತ ಬಹುಮಟ್ಟಿಗೆ ಭಿನ್ನವಾದುದು. ಅದರಲ್ಲಿ ನಾವು ವಿಶೇಷವಾಗಿ ಕಾಣುವುದು ಉಪಯುಕ್ತತೆ ಹಾಗೂ ಸೌಂದರ್ಯಾಭಿರುಚಿ. ಗ್ರೀಕ್ ವಾಸ್ತುಶಿಲ್ಪ ಕುಶಲತೆಯ ಪರಾಕಾಷ್ಠತೆಗೆ ನಿದರ್ಶನ. ಇದರಲ್ಲಿ ಆ ಜನರ ಭೋಗ ಜೀವನ ಹಾಗೂ ಕಲಾಭಿಜ್ಞತೆಯೂ ಎದ್ದು ಕಾಣುತ್ತದೆ. ರೋಮನ್ ಶೈಲಿಯ ಕಟ್ಟಡಗಳು ವೈಜ್ಞಾನಿಕ ರಚನೆಗಳು. ಫ್ರಾನ್ಸ್ ದೇಶದ ಗೋಥಿಕ್ ಶೈಲಿ ಭಾವೋದ್ರಿಕ್ತ ಓಜಸ್ಸನ್ನು ಪ್ರತಿನಿಧಿಸುತ್ತದೆ. ಇಟಲಿಯ ಪುನರುಜ್ಜೀವನಕಾಲದ ವಾಸ್ತುಶಿಲ್ಪದಲ್ಲಿ ಸಮಕಾಲೀನ ಪಾಂಡಿತ್ಯದ ಪ್ರತಿಬಿಂಬವಿದೆ. ಈ ಪಾಶ್ಚಾತ್ಯ ಸಂಸ್ಕೃತಿಗಳಿಗಿಂತಲೂ ಪ್ರಾಚೀನವಾದ ಈಜಿಪ್ಟಿನ ಪಿರಮಿಡ್ಡುಗಳಲ್ಲಿ ಆ ನಾಗರಿಕತೆಯ ವಾಸ್ತುಶಿಲ್ಪ ಶೈಲಿ ಎದ್ದು ಕಾಣುತ್ತದೆ. ಸರಳತೆ, ಭವ್ಯತೆ ಮತ್ತು ಶಾಂತಭಾವ, ದೊಡ್ಡಗಾತ್ರದ ಕಟ್ಟಡಗಳಲ್ಲಿ ಭಯ, ವಿಸ್ಮಯ, ನಿಗೂಢತೆ ಅದರ ಮುಖ್ಯ ಲಕ್ಷಣಗಳು. ಪಿರಮಿಡ್ಡು ವಾಸ್ತವಿಕವಾಗಿ ಧಾರ್ಮಿಕ ಉದ್ದೇಶಕ್ಕಾಗಿ ಕಟ್ಟಲ್ಪಟ್ಟವಾದರೂ ಅವು ಶವಾಗಾರಗಳಾಗಿಯೇ ಉಳಿದವು. ಅದರ ಹಿನ್ನೆಲೆಯಲ್ಲಿ ನಾವು ಕಾಣುವುದು ಭಯಮಿಶ್ರಿತ ಗೌರವವನ್ನು.

ದೇವಾಲಯಗಳ ರಚನೆ : ಮನೋಭಾವ

ವಿಶ್ವದ ಎಲ್ಲೆಡೆಗಳಲ್ಲಿಯೂ ಅತಿ ಪ್ರಾಚೀನ, ಶಿಲಾಯುಗದ, ನಾಗರಿಕತೆಯಲ್ಲಿ ಇಂತಹ ಭಯಮಿಶ್ರಿತಗೌರವವನ್ನು ನೋಡಬಹುದಾಗಿದೆ. ಮಾನವ ಬದುಕಿಗಾಗಿ ನಿರಂತರವಾಗಿ ಪ್ರಕೃತಿಯೊಡನೆ ಸೆಣಸಬೇಕಾಗಿತ್ತು. ಆಹಾರಕ್ಕಾಗಿ ಅಲೆದಾಡುವಾಗ ಪ್ರಾಣಿಗಳನ್ನು ಎದುರಿಸುವ ಪರಿಸ್ಥಿತಿ ಅವನು ಸದಾ ಜಾಗರೂಕನಾಗಿರುವಂತೆ ಮಾಡಿತ್ತು. ಅದರ ಜೊತೆಗೆ ಪರಿಸರದ ಪ್ರಕೃತಿ ಅವನಲ್ಲಿ ಭಯ, ಆಶ್ಚರ್ಯಗಳನ್ನುಂಟು ಮಾಡಿದುವು. ಮಳೆ, ಗುಡುಗು, ಸಿಡಿಲು, ಕಾಳ್ಗಿಚ್ಚುಗಳು ನಿಸರ್ಗ ನಿಯಮಗಳೆಂಬುದನ್ನರಿಯದ

ಕಾರಣ ಅವನಲ್ಲಿ ಭೀತಿಯನ್ನು ಮೂಡಿಸಿದುವು. ನಿಸರ್ಗದಲ್ಲಿ ಎಲ್ಲಕಿಂತಲೂ ಮಿಗಿಲಾದ ಅದ್ಭುತ ಶಕ್ತಿ – ದೇವರು – ಇದೆ ಎಂದು ನಂಬಿದನು. ಜೊತೆ ಜೊತೆಗೆ ಆ ನಿಸರ್ಗದ ರಹಸ್ಯಗಳನ್ನು ಅರಿಯುವ ಕುತೂಹಲವೂ ಉಂಟಾಯಿತು. ನಿಸರ್ಗ ಶಕ್ತಿಗಳನ್ನು 'ಆಶ್ಚರ್ಯವತ್ ಪಶ್ಯತಿ' ಅಷ್ಟಕ್ಕೆ ನಿಲ್ಲದೆ ಅವು ಪವಿತ್ರ, ಪೂಜಾರ್ಹ ಎಂಬ ಭಾವನೆಯೂ ಉಂಟಾಯಿತು. ಆ ಶಕ್ತಿಯನ್ನು ಒಲಿಸಿಕೊಳ್ಳಬೇಕಾದರೆ ಅದನ್ನು ಆರಾಧಿಸಬೇಕು ಎಂದು ಭಾವಿಸಿದನು. ತಾನು ಸಾಧಿಸಬೇಕಾದ ಕಾರ್ಯಗಳಿಗೆ ಇಂತಹ ಶಕ್ತಿಗಳ ಬೆಂಬಲ, ಆಶೀರ್ವಾದ ಅವಶ್ಯ ಎಂದು ಭಾವಿಸಿದ ಕಾರಣ ಆ ಶಕ್ತಿಗೆ ಒಂದು ರೂಪ ನೀಡಿ ಅದನ್ನು ಪ್ರತಿಮೆಯನ್ನಾಗಿಸಿ ಪೂಜಿಸುವ ಪದ್ಧತಿ ಆರಂಭವಾಯಿತು. ಬೇಟೆಗೆ ಹೊರಟಾಗ ತಾನು ಬೇಟೆಯಾಡಬೇಕೆಂದಿರುವ ಪ್ರಾಣಿಯ ಚಿತ್ರವೊಂದನ್ನು ರೇಖಿಸಿ ಅದಕ್ಕೆ ತನ್ನ ಆಯುಧ (ಬಾಣ ಇಲ್ಲವೇ ಈಟಿ) ತಗುಲಿದಂತೆ, ಅದು ಮರಣವನ್ನೈದಿದಂತೆ ತೋರಿಸತೊಡಗಿದನು. ಆ ಇಡೀ ಚಿತ್ರದ ಸುತ್ತಲೂ ಒಂದು ಮಂಡಲವನ್ನು ಎಳೆದು ಅದು ಪವಿತ್ರವೆಂದು ಭಾವಿಸಿದನು. ಕಾಲಾನಂತರ ಇಂತಹ ಚಿತ್ರಗಳಿಗೆ ಬದಲು ಪ್ರತಿಮೆಗಳನ್ನು ಮಾಡಿಕೊಂಡು ಅವುಗಳನ್ನು ಪವಿತ್ರವೆಂದು ಬಗೆಯಲಾದ ಸ್ಥಳವೊಂದರಲ್ಲಿಟ್ಟು ಪೂಜಿಸುವ ಪದ್ಧತಿ ಆರಂಭವಾಯಿತು. ಇಂತಹ ಸ್ಥಳಗಳಲ್ಲಿ ಇತರರು – ಯಾರೊಬ್ಬರೂ – ಸ್ವೇಚ್ಛೆಯಾಗಿ ಅಜಾಕರೂಕರಾಗಿ ಸರಿದಾಡುವುದನ್ನು ನಿಷೇಧಿಸಿ ಅದಕ್ಕೆ ರಕ್ಷಣೆಯನ್ನು ಒದಗಿಸಬಯಸಿದುದು ದೇವಾಲಯಗಳ ರಚನೆಯ ಹಿನ್ನೆಲೆಯಲ್ಲಿ ನಾವು ಕಾಣುವ ಮನೋಭಾವ.

ಸಮಾಧಿ – ಸಮಾಧಿ ಮಂದಿರಗಳು

ಪ್ರಾಚೀನ ಮಾನವನಲ್ಲಿ ಬಹುಮಟ್ಟಿನ ಕೌತುಕವನ್ನುಂಟು ಮಾಡಿದುದು ಸಾವು. ಪ್ರಾಣಿಗಳನ್ನು ತಾನು ಸ್ವತಃ ಕೊಲ್ಲುತ್ತಿದ್ದುದು ಸರಿ. ಆದರೇ ತನ್ನವರೇ ಯಾವ ಆಕಸ್ಮಿಕಕ್ಕೂ ಈಡಾಗದೆ ಸಾಯುತ್ತಿದ್ದರಲ್ಲ ! ಈ ಸಾವಿನ ಸಮಸ್ಯೆಯನ್ನು ಅರಿತುಕೊಳ್ಳಲು, ಅರ್ಥಮಾಡಿಕೊಳ್ಳಲು ಆತ ಯತ್ನಿಸಿದ. ಅದೊಂದು ಬಿಡಿಸಲಾಗದ ಕಗ್ಗಂಟು. ಈ ದೇಹ ನಶಿಸುತ್ತದೆ. ಇಂದು ಇದ್ದು ನಾಳೆ ಇಲ್ಲದಿರುವುದು ಸಹಜ ಎಂದು ಭಾವಿಸಿದ ಆತ ಹಾಗಿದ್ದಲ್ಲಿ ಇದ್ದಾತನೆಲ್ಲಿ ಹೋದ ಎಂಬುದನ್ನು ತಿಳಿಯಲಾರದೆ ಹೋದ. ಬಹುಶಃ ಈ ದೇಹ ಬಿಟ್ಟು ಹೋದಾತ ಮರಳಬಹುದು ಎಂದು ಭಾವಿಸಿದುದು ಆಶ್ಚರ್ಯವಲ್ಲ. ಎಂತಲೇ ಆ ದೇಹವನ್ನು ಕಾಪಾಡಬೇಕೆಂಬ ಯೋಚನೆಯೂ ಬಂದಿತು. ಒಂದು ವೇಳೆ ದೇಹವಿಲ್ಲದಿದ್ದರೂ ದೇಹದೊಳಗಿದ್ದ ಆ ಚೇತನ ಮತ್ತೆ ಹಿಂದಿರುಗಬಹುದೆಂಬ ಭಾವನೆ, ಆ ದೇಹಿ ಅದುವರೆವಿಗೂ ಬಳಸುತ್ತಿದ್ದ ವಸ್ತುಗಳನ್ನು ಪುನಃ ಬಳಸಬಹುದು ಎಂಬ ಊಹೆ ಬಲಗೊಂಡಿತು. ಎಂತಲೇ ದೇಹವನ್ನೂ ಆ ವಸ್ತುಗಳನ್ನೂ ಕಾಪಾಡಲು ಪ್ರಯತ್ನಗಳಾದುವು. ಸಮಾಧಿಗಳನ್ನು ತೋಡಿ ಅವುಗಳಲ್ಲಿ ದೇಹವನ್ನು ಹುಗಿದಿಡುವ ಅಥವಾ ದೇಹಗಳನ್ನು ಸುಟ್ಟ ಬಳಿಕ ಅವುಗಳ ಅಸ್ಥಿಗಳನ್ನು ಶೇಖರಿಸಿಡುವ ಹಾಗೂ ಅದರೊಂದಿಗೆ ಆ ದೇಹಿ ಬಳಸುತ್ತಿದ್ದ ನಿತ್ಯೋಪಯೋಗಿ ವಸ್ತುಗಳನ್ನು ಕಾಪಾಡುವ ಪದ್ಧತಿ ಆರಂಭವಾಯಿತು. ಇಂತಹ ಸಮಾಧಿಗಳೂ ಗುಡಿಗಳಂತೆ ಪೂಜಾರ್ಹ ಸ್ಥಳಗಳಾದುವು. ಇಂದು ನಮ್ಮ ಗಮನಕ್ಕೆ ಬಂದಿರುವ ಹಲವಾರು ದೇವಾಲಯಗಳು ಮೂಲತಃ ಸಮಾಧಿಗಳೇ ಆಗಿದ್ದವು.

ಇಂತಹ ಸಮಾಧಿಮಂದಿರಗಳನ್ನು ನಾವು ವಿಶೇಷವಾಗಿ ಕಾಣುವುದು ಈಜಿಪ್ಟಿನಲ್ಲಿ. ಈ ಸಮಾಧಿಗಳನ್ನು ಅಲ್ಲಿ ಮೊದಮೊದಲು ಗುಹೆಗಳಲ್ಲಿ ತೋಡಿಡುತ್ತಿದ್ದರು. ಆ ದೇಶದಲ್ಲಿ ಕಂಡುಬಂದ ವಿಶ್ವದ ಮೊಟ್ಟಮೊದಲ ಗುಹಾವಾಸ್ತುಗಳು ಸಮಾಧಿಗಳೇ. ಇಂತಹ ಸಮಾಧಿಗಳನ್ನು ಕಟ್ಟಿಸುವುದು ಮಿತಿಮೀರಿದ ವೆಚ್ಚದ್ದಾದ್ದರಿಂದ ಜನಸಾಮಾನ್ಯರು ಈ ಪದ್ಧತಿಯನ್ನವಲಂಬಿಸುವುದು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ನಾವು ಕಾಣುವುದು ಬಹುಮಟ್ಟಿಗೆ ಅರಸರ ಅಥವಾ ಶ್ರೀಮಂತವರ್ಗಕ್ಕೆ ಸೇರಿದವರ ಸಮಾಧಿಗಳು. ನೈಲ್ ಕಣಿವೆಯ ಮೆದುಮ್‌ನಲ್ಲಿರುವ, ಸುಮಾರು ಕ್ರಿ. ಪೂ. ೨೫೦೦ಕ್ಕೆ ಸೇರಿದ, ಅತೆತ್ ಎಂಬ ಅಧಿಕಾರಿಯ ಸಮಾಧಿ ಇದುವರೆಗೆ ತಿಳಿದಂತೆ ಅತಿ ಪ್ರಾಚೀನ ಗುಹಾಸಮಾಧಿ. ದೀರ್‌ಎಲ್ ಬಿಹಾರಿಯಲ್ಲಿ ಹ್ಯಾಟ್ಸ್‌ಪ್‌ಷೆಟ್ಸಳ ಸಮಾಧಿ, ಗುಹಾವಾಸ್ತುವಿನ ಮೇರುಕೃತಿ ಎನಿಸಿದ ಅಬುಸಿಂಬೆಲ್‌ನಲ್ಲಿರುವ ೨ನೆಯ ರ್‍ಯಾಮ್ಸೆಸ್ ದೊರೆಯ ದೇವಾಲಯ ಹೆಸರಿಸತಕ್ಕವುಗಳು. ಮರಣೋತ್ತರಸ್ಥಿತಿಯ ಇದೇ ತರಹದ ನಂಬಿಕೆಗಳು ಮೆಡಿಟರೇನಿಯನ್ ಸಮುದ್ರದ ದ್ವೀಪಗಳಲ್ಲೂ ಕಂಡು ಬಂದಿವೆ. ಕ್ರಿ. ಪೂ. ೧೭೦೦-೧೪೦೦ರ ಕಾಲದಲ್ಲಿ ಕ್ರೀಟ್ ದ್ವೀಪದಲ್ಲಿ ನೆಲದ ಮಟ್ಟಕ್ಕಿಂತ ಕೆಳಗಡೆ ಬಂಡೆಗಳ ದುಂಡುಕೋಣೆಗಳನ್ನು ಕೊರೆದು ಅವಕ್ಕೆ ನೇರವಾದ ತೆರೆದ ಹಾದಿಯನ್ನು ರೂಪಿಸಿದ ಥೋಲೋಸ್ ಎಂದು ಕರೆಯಲಾದ ಸಮಾಧಿಗಳು ಕಂಡುಬಂದಿವೆ. ಇಂತಹುದೇ ಪದ್ಧತಿ ಗ್ರೀಸಿನ ಮೈಸೀನಿಯನ್ ಸಂಸ್ಕೃತಿಯಲ್ಲೂ ಕಂಡುಬಂದಿದೆ. ರೋಮ್‌ನ ಸುತ್ತಲೂ ಭೂಗರ್ಭದಲ್ಲಿ ಮೈಲಿಗಟ್ಟಲೆ ಅಂಕುಡೊಂಕಾಗಿ ಹರಡಿರುವ ಒಂದು ಕುಟುಂಬಕ್ಕೆ ಅಥವಾ ಜನಾಂಗಕ್ಕೆ ಮೀಸಲಾಗಿರಿಸಿದ ಸುರಂಗ ಸಮಾಧಿಗಳಿವೆ. ಮೇಲ್ಕಾಣಿಸಿದ ಕಡೆಗಳಲ್ಲಿ ಗುಹೆಗಳು ದೇವಾಗಾರಗಳಾಗಿರುವ ನಿದರ್ಶನಗಳು ಕಡಿಮೆ. ಬಹುಮಟ್ಟಿಗೆ ಇವು ಸಮಾಧಿವಾಸ್ತುಗಳೇ.

ವಾಸಸ್ಥಾನಗಳು ಮತ್ತು ಲೌಕಿಕ ಕಟ್ಟಡಗಳು

ಇಂತಹ ಗುಹಾವಾಸ್ತುಗಳು ಭಾರತದಲ್ಲಿ ಕ್ರಿ. ಪೂ. ೩ನೆಯ ಶತಮಾನದ ವೇಳೆಗೆ ಪ್ರಚಾರಕ್ಕೆ ಬಂದವು. ಆದರೆ ಇವುಗಳ ಉದ್ದಿಶ್ಯ ಸಮಾಧಿಗಳಲ್ಲ. ಇವು ದೇವಾಗಾರಗಳಾಗಿಯೋ, ಭಿಕ್ಷುಗಳ, ಸನ್ಯಾಸಿಗಳ ವಾಸಸ್ಥಾನಗಳಾಗಿಯೋ ಅಸ್ತಿತ್ವಕ್ಕೆ ಬಂದವುಗಳು. ಭಾರತದಲ್ಲಿನ ಹಲವು ದೇವಾಲಯಗಳು ಮೂಲತಃ ಸಮಾಧಿಮಂದಿರಗಳಾಗಿದ್ದುವೆಂಬುದು ನಿಜವಾದರೂ ಅಂತಹವು ಸಂಖ್ಯೆಯಲ್ಲಿ ಅತಿವಿರಳ. ತಮಿಳಿನಲ್ಲಿ 'ಪಳ್ಳಿಪ್ಪಡೈ' ಎಂಬ ಮಾತಿಗೆ ಸ್ಮಾರಕಗಳೆಂಬ ಸಾಮಾನ್ಯ ಅರ್ಥವಿದ್ದರೂ ಪ್ರಜಾಪ್ರೀತಿಗೆ ಪಾತ್ರರಾದ ಖ್ಯಾತಿವೆತ್ತ ಕೆಲವೇ ಅರಸರ, ಅರಸಿಯರ ಸಮಾಧಿಗಳ ಮೇಲೆ ಗುಡಿಗಳನ್ನು ಕಟ್ಟಿದ್ದರೂ ಅಂತಹವು ಸಂಖ್ಯಾದೃಷ್ಟಿಯಿಂದ ಬಹಳ ಕಡಿಮೆ.

ವಾಸ್ತುಶಿಲ್ಪದ ಇತಿಹಾಸದಲ್ಲಿ ನಾವು ಮೊದಲು ಕಾಣುವುದು ಗೃಹಗಳನ್ನು. ತನಗಾಗಿ, ತನ್ನವರಿಗಾಗಿ ವಾಸಸ್ಥಳವೊಂದನ್ನು ರಚಿಸಿಕೊಳ್ಳಬೇಕೆಂಬ ಕಲ್ಪನೆ ಮಾನವನಿಗೆ ಬಂದುದೇ ೭೦೦೦ ವರ್ಷಗಳ ಹಿಂದೆ, ಕ್ರಿ. ಪೂ. ಸುಮಾರು ೫೦೦೦ದ ಸುಮಾರಿಗೆ ಎನ್ನಬಹುದು. ಅದಕ್ಕೂ ಹಿಂದೆ ಆತ ತನ್ನ ಸುತ್ತಲಿನ ಪ್ರಾಕೃತಿಕ ಸನ್ನಿವೇಶಗಳನ್ನವಲಂಬಿಸಿದ್ದ. ಅಲೆಮಾರಿಜೀವನವನ್ನು ಮುಕ್ತಾಯಗೊಳಿಸಿ ಒಂದು ಕಡೆ ಸ್ಥಿರವಾಗಿ ನೆಲೆಸುವುದನ್ನು ಕಲಿತು, ಜನರೊಡನೆ ಗುಂಪುಗೂಡಿ ವಾಸಮಾಡಲಾರಂಭಿಸಿ, ತಾನು, ತನ್ನದು ಎಂಬ ಮನೋಭಾವ ಬೆಳೆದು, ಕುಟುಂಬಪದ್ಧತಿ ಆರಂಭವಾದಾಗ ಮನೆಯ ಅವಶ್ಯಕತೆ ಉಂಟಾಯಿತು. ಈ ಮನೆಗಳು ಪ್ರಾರಂಭದಲ್ಲಿ ಗುಡಿಸಲುಗಳಾಗಿದ್ದವು.

ಅತಿ ಪ್ರಾಚೀನವೆನಿಸಬಹುದಾದ ಗುಡಿಸಲುಗಳು ಅಸ್ಸೀರಿಯದ ಉಬೈದನ್ ಗ್ರಾಮಗಳಲ್ಲಿ ದೊರೆತಿವೆ. ಸುಮಾರು ಕ್ರಿ. ಪೂ. ೩೦೦೦ದಷ್ಟು ಪ್ರಾಚೀನವಾದ ಇವುಗಳ ರಚನೆ ಜೊಂಡಿನಿಂದ. ಇವಕ್ಕೆ ಮಣ್ಣುಮೆತ್ತಿ ನಿಲ್ಲಿಸುತ್ತಿದ್ದಿರಬೇಕು. ಸುಮರನ ಎರಿದು ಎಂಬಲ್ಲಿ ಬೇರೆ ಭಾಗಗಳುಳ್ಳ ಇಂತಹ ಜೊಂಡಿನ ಗುಡಿಸಿಲಿನ ಅವಶೇಷ ದೊರೆತಿದೆ. ಆದರೆ ಇದು ಮಣ್ಣಿನ ಗೋಡೆಗಳಿಂದ ಮಾಡಿದ ಮನೆಯೊಂದಕ್ಕೆ ಸೇರಿದಂತಿದೆ. ಪಶ್ಚಿಮ ಇರಾನಿನ ಸಿಯಾಲ್ಕ್‌ನ ಉತ್ಖನನದಲ್ಲಿ ಗಟ್ಟಿಸಿದ ಮಣ್ಣಿನ ಗೋಡೆಗಳಿಂದ ಕಟ್ಟಿದ ಮನೆಗಳ ಅವಶೇಷಗಳು ಕಂಡುಬಂದಿವೆ. ಗೋಡೆಹಾಕುವ ಸ್ಥಳದಲ್ಲಿ ಗರಸ ಬೆರೆಸಿದ ಮಣ್ಣು ಅಥವಾ ಜೇಡಿಯನ್ನು ಹಲಗೆಗಳ ಮಧ್ಯೆ ಚೆನ್ನಾಗಿ ಗಟ್ಟಿಸಿ ಅದು ಗಡುಸಾದ ಮೇಲೆ ಹಲಗೆಗಳನ್ನು ತೆಗೆದುಬಿಡುವುದರ ಮೂಲಕ ಇಂಥ ಜೋಡಿ ಗೋಡೆಗಳನ್ನು ಕಟ್ಟುತ್ತಿದ್ದಿರಬೇಕು.

ಮನೆ ಎಂಬ ಇಂದಿನ ಅರ್ಥದ ವಾಸಸ್ಥಾನಗಳನ್ನು ನಾವು ಕಾಣುವುದು ಈಜಿಪ್ಟಿನಲ್ಲಿ. ನೈಲ್ ನದಿಯ ರೊಸಟ್ಟಾ ಶಾಖೆಯ ಬಳಿ ಮೆರಿಂದೆ ಎಂಬಲ್ಲಿ ನೆಲಸಿದ ಜನರು ಹೊನಲಿಗೆ ಅಡ್ಡವಾಗಿ ಜೊಂಡಿನ ಚಾಪೆಗಳನ್ನು ಅಂಡಾಕಾರ ಅಥವಾ ಲಾಳಾಕಾರಗಳಾಗಿ ನೆಲದೊಳಗೆ ಹುಗಿದ ಕಂಬಗಳಿಗೆ ಜೋತು ಬಿಟ್ಟರು. ಕೆಲಕಾಲದ ಬಳಿಕ ಇಂಥ ಆಸರೆಗಳಿಗೆ, ಚಾಪೆಗಳಿಗೆ ಬದಲಾಗಿ ದಪ್ಪವಾದ, ಕೆಲವೊಮ್ಮೆ ೧.೫ ಮೀಟರ್‌ನಷ್ಟು ದಪ್ಪದ, ಮಣ್ಣಿನ ಮುದ್ದೆಗಳಿಂದ ಗೋಡೆಗಳನ್ನು ಏರಿಸಲಾಗಿತ್ತು. ಇಂಥ ಮನೆಗಳು ದೂರದೂರವಾಗಿ ಆದರೆ ಕ್ರಮಬದ್ಧ ಸಾಲಿನಲ್ಲಿ ಇದ್ದವು (ಕಾಲ: ಕ್ರಿ. ಪೂ. ೪೦೦೦-೩೦೦೦). ಎಲ್‌ಅಮ್ರದಲ್ಲಿ ದೊರೆತಿರುವ ಮನೆಯ ಮಣ್ಣಿನ ಮಾದರಿಯೊಂದು ಅವು ಆಯತಾಕಾರದಲ್ಲಿದ್ದು ಉದ್ದವಾದ ಭಾಗದಲ್ಲಿ ಮಣ್ಣಿನ ಚೌಕಟ್ಟಿನ ಪ್ರವೇಶದ್ವಾರವಿತ್ತೆಂಬುದನ್ನು ಸೂಚಿಸುತ್ತದೆ. ಇಂಥ ಮನೆಗಳು ಸುಮಾರು ೭.೫ x ೫.೫ ಚದರ ಮೀಟರುಗಳಷ್ಟು ವಿಶಾಲವಾಗಿದ್ದುವು.

ಮೆಸೊಪೊಟೆಮಿಯದ ಖಲತ್‌ಜರ್ಮೊ ಎಂಬಲ್ಲಿ ರೈತರು ಗಟ್ಟಿಸಿದ ಜೇಡಿಮಣ್ಣಿನ ಗೋಡೆಗಳುಳ್ಳ ಜೊಂಡಿನ ನೆಲಗಟ್ಟುಳ್ಳ ಸರಳವಾದ ಮನೆಗಳನ್ನು ಕಟ್ಟುತ್ತಿದ್ದರು. ಟೈಗ್ರಿಸ್ ನದಿಯ ಪಶ್ಚಿಮಕ್ಕೆ ಹಸ್ಸುನ ಎಂಬಲ್ಲಿ ಹಲವಾರು ಕೊಠಡಿಗಳ ಆಯತಾಕಾರದ ನವಶಿಲಾಯುಗದ ಮನೆಗಳಿವೆ. ಮನೆಯ ಆವರಣದೊಳಗೆ ಒಂದು ಅಂಗಳ, ಕಲ್ಲಿನ ಕುಳಿಯ ಸುತ್ತಲೂ ತಿರುಗವ ತಿರುಗು ಗೂಟಗಳುಳ್ಳ ಮರದ ಬಾಗಿಲುಗಳು, ಅಂಗಳದಲ್ಲಿ ಹಾಗೂ ಕೆಲವೊಮ್ಮೆ ಕೊಠಡಿಗಳಲ್ಲಿ ಗುಂಡಾದ ಒಲೆಗಳು, ಇವೆಲ್ಲ ಸುಮಾರು ಕ್ರಿ. ಪೂ. ೩೦೦೦ ವರ್ಷಗಳ ಹಿಂದೆ.


ಸುಮೇರಿಯದ ಖಫಜೆಯಲ್ಲಿ ೧೦ x ೬.೫ ಚದರ ಮೀಟರಿನಷ್ಟು ಕಿರಿದಾದ ಸ್ಥಳದಲ್ಲಿ ಐದು ಕೊಠಡಿಗಳ ಮನೆಯೂ, ೩೦ x ೨೦ ಚದರ ಮೀಟರಿನಷ್ಟು ಪ್ರದೇಶದಲ್ಲಿ ಹತ್ತು ಕೊಠಡಿಗಳ ದೊಡ್ಡ ಮನೆಯೂ ಕಂಡು ಬಂದಿವೆ. ಇವುಗಳು ಅಲ್ಲಿನ ಮೊದಲ ಅರಸುಮನೆತನಗಳ ಕಾಲಕ್ಕೆ (ಸುಮಾರು ಕ್ರಿ. ಪೂ. ೨೦೦೦) ಸೇರಿದವು. ದೊಡ್ಡ ಮನೆಯ ಕೆಲವು ಬಾಗಿಲುಗಳ

ಮೇಲೆ ಕಮಾನಿನ ನೆತ್ತಿಗಲ್ಲುಗಳಿವೆ. ಆದರೆ ಬಾಗಿಲು ಕೇವಲ ೧.೫ ಮೀಟರಿನಷ್ಟು ಎತ್ತರ; ಸಣ್ಣ ಕಿಟಕಿಗಳಿಂದ ಬೆಳಕು ಬರುವ ಏರ್ಪಾಡು; ಪ್ರತ್ಯೇಕವಾದ ಅಡುಗೆಯ ಕೊಠಡಿಗಳು. ಮನೆಗಳು ಅಡಕವಾದ ವಠಾರಗಳಲ್ಲಿ ವಿಂಗಡಿಸಲ್ಪಟ್ಟು ಅವುಗಳ ನಡುವೆ ಗಲ್ಲಿಗಳೂ ಬೀದಿಗಳೂ ಹಾದು ಹೋಗಿದ್ದವು.

ಕ್ರಿ. ಪೂ. ೩೦೦೦ಕ್ಕೂ ಹಿಂದಿನ ನವಶಿಲಾಯುಗಕ್ಕೆ ಸೇರಿದ ಸಂಸ್ಕೃತಿಯ ನಿವೇಶನಗಳು ಪ್ಯಾಲೆಸ್ಟೈನಿನ ಜೆರಿಕೊದಲ್ಲಿ ಕಂಡು ಬಂದಿವೆ. ಜೇಡಿಮಣ್ಣಿನ ಗೋಡೆಗಳು ಇಲ್ಲಿನ ವೈಶಿಷ್ಟ್ಯ. ಗೋಡೆಗಳ ಒಳಭಾಗವನ್ನು ಸುಣ್ಣದಿಂದ ಗಿಲಾಯಿ ಮಾಡಿ ಅವುಗಳ ಮೇಲೆ ಚಿತ್ರಗಳನ್ನೂ ಕೊರೆಯುತ್ತಿದ್ದರು. ಮರದ ಕಂಬಗಳು ಮಾಳಿಗೆಗೆ ಆಸರೆಯಾಗಿದ್ದವು.

ಭಾರತದಲ್ಲೂ ಮಾನವ ಮೊದಲು ನೈಸರ್ಗಿಕತಾಣಗಳನ್ನು ಅರಸಿದ. ಮಧ್ಯಭಾರತದಲ್ಲಿರುವ ಬಾಘೈಖೋರ್‌ನಲ್ಲಿರುವ ಮುಂಚಾಚಿದ ಬಂಡೆ ಅಂತಹ ಒಂದು ಆಸರೆ. ಕ್ರಮೇಣ ಗುಡಿಸಲುಗಳ ರಚನೆ ಆರಂಭವಾಯಿತು.

ಕ್ರಿ. ಪೂ. ೩೦೦೦ಕ್ಕೂ ಹರಪ್ಪ ಸಂಸ್ಕೃತಿಗೂ ಹಿಂದಿನ ನವಶಿಲಾಯುಗದ ಭಾರತೀಯರ ವಸತಿಗಳು ಬಲೂಚಿಸ್ತಾನದ ಕಿಲಿಘುಲ್ ಮೊಹಮದ್, ರಣಘುಂಡೈ ಮುಂತಾದ ನಿವೇಶನಗಳಲ್ಲಿ ಕಂಡುಬಂದಿವೆ. ಕಿಲಿಘುಲ್ ಮೊಹಮದ್‌ನಲ್ಲಿ ಒತ್ತಿ ತುಂಬಿದ ಮಣ್ಣಿನ ಅಥವಾ ಮಣ್ಣಿನಿಂದ ಮಾಡಿದ ಇಟ್ಟಿಗೆಗೂಡುಗಳುಳ್ಳ ಅವಶೇಷಗಳಿವೆ. ಈ ನಿವೇಶನದಲ್ಲಿ ಮುಂದೆ ನೆಲಸಿದ ಜನ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಗಳಿಂದ ಎಬ್ಬಿಸಿದ ಗೋಡೆಗಳ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿದರು. ಆರಂಭದಲ್ಲಿ ಬೆಂಕಿ ಗೂಡುಗಳು ಮನೆಯ ಹೊರಗೆ ಅಂಗಳದಲ್ಲಿದ್ದು ಕ್ರಮೇಣ ಮನೆಯೊಳಗೇ ಸ್ಥಾನ ಪಡೆದವು. ಕೆಲವು ಮನೆಗಳ ಒಳಭಾಗದಲ್ಲಿ ಬಾವಿಗಳೂ ಇದ್ದವು. ಕಲ್ಲು ದೊರೆಯಬಹುದಾದ ಪ್ರದೇಶದಲ್ಲಿ ಮನೆಗಳ ಗೋಡೆಗಳಿಗೆ ಮಣ್ಣಿನ ಜೊತೆಗೆ ಕಲ್ಲನ್ನೂ ಬಳಸುತ್ತಿದ್ದರು.




ಚಿತ್ರ–೧

ಹರಪ್ಪ–ಮೊಹೆಂಜೊದಾರೋಗಳಲ್ಲಿ, ಕಾಲಿಬಂಗನ್, ಲೋಥಾಲ್ ಮುಂತಾದ ಇತರ ಹರಪ್ಪ ನಿವೇಶನಗಳಲ್ಲಿ ನಾವು ಕಾಣುವುದು ನಾಗರಿಕ ಜನರ ವಸತಿಗಳನ್ನು. (ಚಿತ್ರ ೧) ನಗರವಾಸಿಗಳಾಗಿದ್ದ ಅವರು ವ್ಯವಸ್ಥಿತಆಡಳಿತವನ್ನು ಹೊಂದಿದ್ದು ಮನೆಗಳನ್ನು ಕಟ್ಟುವುದರಲ್ಲಿಯೂ ಒಂದು ಯೋಜನೆಯನ್ನು ಅನುಸರಿಸಿದ್ದರು. ಭದ್ರತೆಗಾಗಿ ಸುತ್ತಲೂ ಎತ್ತರವಾದ ಕೋಟೆಯುಳ್ಳ ನಗರದಲ್ಲಿ ಮುಖ್ಯಬೀದಿಗಳು ಉದ್ದಕ್ಕೆ ಪೂರ್ವ ಪಶ್ಚಿಮ, ದಕ್ಷಿಣೋತ್ತರವಾಗಿ ಸರಳರೇಖೆಯಲ್ಲಿ ಹಬ್ಬಿದ್ದು, ಒಂದೊಂದು ಬೀದಿಗೂ ಒಂದೊಂದು ಬಾವಿ ಇತ್ತು. ಈ ಸಾರ್ವಜನಿಕ ಬಾವಿಯ ಸುತ್ತಲೂ ಮೂರು–ನಾಲ್ಕು ಕೋಣೆಗಳು, ಒಂದು ಬಾವಿ, ಬಚ್ಚಲುಮನೆ ಮತ್ತು ಚರಂಡಿಯ ಸೌಕರ್ಯ ಸಹ ಇತ್ತು. ಸಣ್ಣಮನೆ ೨೩ x ೧೧ ಚ. ಮೀ. ಗಳ ವಿಸ್ತೀರ್ಣದ್ದು. ಸಿರಿವಂತರ ಕೆಲವು ಮನೆಗಳು ಎರಡಂತಸ್ತಿನವು, ಮೇಲಿನ ಅಂತಸ್ತಿನಲ್ಲೂ ಹಲವು ಕೋಣೆಗಳು ಹಾಗೂ ಸ್ನಾನದ ಮನೆ. ಅಲ್ಲಿಂದ ನೀರು ಕೆಳಗೆ ಹರಿದು ಹೋಗಲು ಮಣ್ಣಿನ ಕೊಳವೆಗಳನ್ನು ಜೋಡಿಸಲಾಗಿತ್ತು. ಕಟ್ಟಡಗಳ ಹೊರಭಾಗ ಬೋಳಾಗಿದ್ದು, ಬಾಗಿಲು ಪಕ್ಕದ ಓಣಿಯಲ್ಲಿತ್ತು. ಸರಳತೆ ಹಾಗೂ ಉಪಯೋಗಕ್ಕಷ್ಟೇ ಪ್ರಾಧಾನ್ಯ. ಕೊಠಡಿ ಹಾಗೂ ಮಾಳಿಗೆಗಳ ಮೇಲೆ ಜಾಲಂದರದ ಕಿಟಕಿಗಳಿದ್ದು ಅವುಗಳ ಮೂಲಕ ಹಾಗೂ ತೆರೆದ ಅಂಗಳದ ಮೂಲಕ ಮನೆಗೆ ಸಾಕಷ್ಟು ಗಾಳಿ, ಬೆಳಕುಗಳು ದೊರೆಯುತ್ತಿದ್ದವು. ಮನೆಯ ಚರಂಡಿಗಳು ಬೀದಿಯ ಚರಂಡಿಗಳಿಗೆ ಸೇರಿ, ಇಂಥ ಹಲವಾರು ಚರಂಡಿಗಳ ನೀರು ಮಹಾಚರಂಡಿಯ ಮೂಲಕ ನದಿಯನ್ನು ಸೇರುತ್ತಿತ್ತು. ನೀರು ಜಿನುಗದಂತೆ ಮನೆಯ ನೆಲಗಟ್ಟನ್ನು ಬೋಕಿಗಳಿಂದ ಬೆಸೆಯಲಾಗಿತ್ತು.

ಈ ನಗರಗಳಲ್ಲಿ ಸ್ನಾನಗೃಹಗಳೂ ಇದ್ದವು. ಮೊಹೆಂಜೊದಾರೋದಲ್ಲಿ ಇಂತಹ ಸ್ನಾನಗೃಹ ೫೪.೯ ಮೀ. ಉದ್ದ ಹಾಗೂ ೩೨.೯ ಮೀ. ಅಗಲವಾಗಿದೆ. ಇದರ ನಡುವೆ ೧೧.೯ x ೭ ಚ. ಮೀ.ಗಳ ಮತ್ತು ೨.೪ ಮೀ.. ಆಳದ ಸ್ನಾನ ಮಾಡುವ ಕೊಳ, ಅದಕ್ಕೆ ಸುತ್ತಲೂ ಪಡಸಾಲೆಗಳು, ಬರ ಹೋಗಲು ಸಾಲು ಮೆಟ್ಟಲುಗಳು, ಆರು ಬಾಗಿಲುಗಳು, ಸುತ್ತಲೂ ಕೋಣೆಗಳಿದ್ದು ಅವುಗಳಲ್ಲಿ ಕೆಲವಕ್ಕೆ ಆವಿಸ್ನಾನದ ಅನುಕೂಲಕ್ಕಾಗಿ, ಕೊಳವೆಗಳ ಮೂಲಕ ಹಬೆ ಬರುವಂತೆ ಮಾಡಲಾಗಿತ್ತು. ಹರಪ್ಪದಲ್ಲಿ ನೀಳ ಚೌಕದ ಒಂದೇ ಅಳತೆಯ ಏಳು ಮನೆಗಳ ಎರಡು ವಠಾರಗಳು ಕಾಣಿಸಿಕೊಂಡಿವೆ. ಪ್ರತಿಯೊಂದು ಮನೆಯಲ್ಲೂ ಎರಡು ಕೊಠಡಿಗಳು ಮತ್ತು ಒಂದು ಅಂಗಳ. ಇವು ಕೆಲಸಗಾರರಿಗಾಗಿ ಕಟ್ಟಿಸಿದ ವಾಸಗೃಹಗಳಾಗಿರಬಹುದು. ಲೌಕಿಕ ಕಟ್ಟಡಗಳಲ್ಲಿ ಗಮನಾರ್ಹವಾದುವು ಹರಪ್ಪ ಮತ್ತು ಮೊಹೆಂಜೊದಾರೋಗಳಲ್ಲಿ ಕಂಡು ಬಂದಿರುವ ಧಾನ್ಯದ ಕಣಜಗಳು. ಸುಮಾರು ೨.೫ ಮೀ. ಗಳಷ್ಟು ದಪ್ಪ ಗೋಡೆಗಳಿಂದ ಆವೃತವಾದ ಈ ಸಮೂಹದಲ್ಲಿ ಹರಪ್ಪದಲ್ಲಿ ಸಾಲಿಗೆ ಆರರಂತೆ ಎರಡು ಸಾಲುಗಳ

ಆರ್ಯರು ಹರಪ್ಪ ಸಂಸ್ಕೃತಿಯ ಜನರಂತೆ ನಗರವಾಸಿಗಳಾಗಿರದೆ ಗ್ರಾಮೀಣ, ವ್ಯವಸಾಯ ಆಧಾರಿತ ಸಂಸ್ಕೃತಿಯ ಪೋಷಕರಾಗಿದ್ದುದೊಂದು ಆಶ್ಚರ್ಯದ ಸಂಗತಿ. ಹರಪ್ಪದ ನಗರೀಕರಣ ಆರ್ಯರ ಮೇಲೆ ಯಾವ ಪ್ರಭಾವವನ್ನೂ ಮೂಡಿಸಲಿಲ್ಲ. ಋಗ್ವೇದದಲ್ಲಿ ಪುರದ ಪ್ರಸ್ತಾಪ ಬಂದರೂ ಅದರ ಖಚಿತವಾದ ಅರ್ಥ ಸ್ಪಷ್ಟವಾಗಿಲ್ಲ. ಅದು ಮಣ್ಣಿನ ಗೋಡೆಗಳಿಂದ ಆವೃತವಾದ ಗ್ರಾಮವಾಗಿರಬಹುದು. ಕಲೆ, ವಾಸ್ತುಶಿಲ್ಪಗಳಿಗೆ ಸಂಬಂಧಿಸಿದಂತೆಯೂ ಇದು ಸ್ಪಷ್ಟವಾಗುತ್ತದೆ. ದಟ್ಟವಾದ ವನಗಳ (ಮಹಾವನ) ಮಧ್ಯೆ ಗುಡಿಸಲುಗಳಲ್ಲಿ ವಾಸಿಸುತ್ತಿದ್ದ ಇವರು ಸಹಜವಾಗಿಯೇ ತಮಗೆ ಸುಲಭವಾಗಿ ಸಿಗುತ್ತಿದ್ದ ಮರ ಮುಟ್ಟುಗಳನ್ನು ಬಳಸಿಕೊಂಡರು. ಗುಡಿಸಲುಗಳ ತೊಲೆಗಳಿಗೆ ಬಿದಿರನ್ನು (ವಂಶ) ಬಳಸುತ್ತಿದ್ದರೆಂಬುದು ಸಾಹಿತ್ಯದಿಂದ ತಿಳಿದು ಬರುತ್ತದೆ. ಹಲವಾರು ಸಂಸಾರಗಳಿದ್ದ ಗುಡಿಸಲುಗಳ ಒಂದು ಗುಂಪು ಗ್ರಾಮವೆನಿಸಿತ್ತು. ಇದನ್ನು ಸುತ್ತುವರಿದಂತೆ ಬಿದಿರಿನ ದಸಿಬೇಲಿ, ಉದ್ದವಾಗಿ ನಿಲ್ಲಿಸಿದ ಬಿದಿರು ಕಂಬಗಳು (ಥಬ) ಮೂರು ಸಮತಲದ ಪಟ್ಟಿಗಳನ್ನು ಆಧರಿಸಿ ಹಿಡಿದಿತ್ತು. ಉದ್ದ ಪಟ್ಟಿಗಳಲ್ಲಿ ರಂಧ್ರಗಳನ್ನು ಕೊರೆದು ಈ ಸಮತಲಪಟ್ಟಿಗಳನ್ನು ಅವರೊಳಗೆ ತೂರಿಸಿ ಹೆಣೆಯಲಾಗುತ್ತಿತ್ತು. ಈ ಸಮತಲಪಟ್ಟಿಗಳನ್ನು 'ಸುಚಿ' ಎಂದು ಕರೆಯಲಾಗಿದೆ. ಬೌದ್ಧಸ್ತೂಪಗಳ ಸುತ್ತಲಿನ ಕಟಕಟೆಯ ಅಡ್ಡಪಟ್ಟಿಗಳನ್ನು ಸುಚಿಯ ಎಂದಿರುವುದನ್ನು ಗಮನಿಸಬೇಕು. ಕ್ರಮೇಣ ಈ ದಸಿ ಬೇಲಿಯನ್ನು ಹೊಲಗಳ ಸುತ್ತಲೂ ಅಥವಾ ತಾವು ಪವಿತ್ರವೆಂದು ಭಾವಿಸಿದ ಎಡೆಗಳಲ್ಲಿ ಸುತ್ತಲೂ ಕಟ್ಟುವ ಪರಿಪಾಟ ಬೆಳೆಯಿತು. ಗ್ರಾಮಗಳ ದಸಿ ಬೇಲಿಯ ಮುಂದುಗಡೆ ಒಂದು ದ್ವಾರವನ್ನು ಸೇರಿಸಲಾಯಿತು. ಬೇಲಿಯ ಒಂದು ಭಾಗವನ್ನು ಸಮಾನಾಂತರ ಕೋನಗಳಲ್ಲಿ ಮುಂಚಾಚಿ ಅದರ ಮುಂದೆ ಜಾಲಂದರದ ಚೌಕಟ್ಟನ್ನು ಅಳವಡಿಸಲಾಯಿತು. ಇದನ್ನು ಗಾಮದ್ವಾರ (ಗ್ರಾಮದ್ವಾರ)ಗಳೆಂದು ಕರೆದರು. ಈ ದ್ವಾರಗಳು ಅನಂತರ ಬೌದ್ಧಸ್ತೂಪಗಳ ತೋರಣಗಳಾದವು. ಇವೇ ನಂತರ ದೇವಾಲಯಗಳ ಹೊರಭಾಗದ ಪ್ರಾಕಾರಗಳಿಗೆ ಅಳವಡಿಸಿದ ಗೋಪುರ (ಗೋಪುರದ್ವಾರ)ಗಳಾದವು. (ಚಿತ್ರ ೫)



ಚಿತ್ರ-೫


ಸಂಹಿತೆಗಳ ಕಾಲದಲ್ಲಿ ಕಾಣಿಸುವ ಹರ್ಮ್ಯ ಎಂಬ ಮಾತಿಗೆ ದೊಡ್ಡ ಸಂಸಾರವಲ್ಲದೆ ಅದಕ್ಕೆ ಸೇರಿದ ದನಕರುಗಳು, ಆಡುಗಳು ಸಹ ವಾಸಿಸಲು ಯೋಗ್ಯವಾದ ವಿಶಾಲವಾದ ಮನೆ ಎಂಬ ಅರ್ಥವಿದೆ. ಆದರೂ ಇವುಗಳ ಕಟ್ಟುವಿಕೆಯಲ್ಲಿ ಯಾವ ಬದಲಾವಣೆಗಳೂ ಇರಲಿಲ್ಲ. ಈ ಮನೆಗಳಲ್ಲಿ ಗಾರ್ಹಪತ್ಯ ಅಗ್ನಿಯನ್ನು ಸಹ ಒಂದು ಮೂಲೆಯಲ್ಲಿ ನಿರಂತರವಾಗಿ ಉರಿಸಲಾಗುತ್ತಿತ್ತು. ಅಥರ್ವಣವೇದದಲ್ಲಿ ಬರುವ 'ಪತ್ನೀನಾಂ ಸದನಮ್' ಎಂಬ ಮಾತು ಬಹುಶಃ ಸ್ತ್ರೀಯರಿಗೆ ಪ್ರತ್ಯೇಕವಾದ ಕೋಣೆ ಇರುತ್ತಿದ್ದಿರಬಹುದೆಂಬುದನ್ನು ಸೂಚಿಸುತ್ತದೆ. ಉಪನಿಷತ್ತುಗಳ ಕಾಲದಲ್ಲಿ ಬಡವ-ಬಲ್ಲಿದರೆಲ್ಲ ನಿವೇಶನಗಳಲ್ಲಿ ವಾಸ್ತುಪೂಜೆ ಮಾಡುತ್ತಿದ್ದರೆಂದು ಹೇಳಿದೆ. ಈ ಮನೆಗಳು ಹೆಚ್ಚು ವಿಸ್ತಾರವಾಗಿದ್ದು ಉಗ್ರಾಣ, ವಿಶ್ರಾಂತಿಕೋಣೆ ಇತ್ಯಾದಿಗಳನ್ನೊಳಗೊಂಡಂತೆ ತೋರುತ್ತದೆ. ಆದರೂ ವಾಸ್ತುಶಿಲ್ಪದಲ್ಲಿ ಹೆಚ್ಚಿನ ಬದಲಾವಣೆಗಳಾದಂತೆ ತೋರುವುದಿಲ್ಲ.

ಗುಡಿಸಲುಗಳೂ ಸಾಮಾನ್ಯವಾಗಿ ವೃತ್ತಾಕಾರದವೇ. ಕ್ರಮೇಣ ಇವು ಅಂಡಾಕಾರವಾಗಿ ಮಾರ್ಪಟ್ಟು ಮೇಲ್ಛಾವಣಿಯನ್ನು ಬಗ್ಗಿಸಿದ ಬಿದಿರುಗಳಿಂದ ಪೀಪಾಯಿ ಆಕಾರ ಬರಲು ತೊಗಲಿನ ಅಥವಾ ಸಸ್ಯದ ಸೆಳೆ ರೆಂಬೆಯನ್ನು ಕಮಾನಿನ ತುದಿಗಳ ಮೂಲಕ ಬಿಲ್ಲಿಗೆ ಕಟ್ಟುವ ಹುರಿಯಂತೆ ಬಿಗಿದು ಕಟ್ಟಲಾಯಿತು. ಇದರಿಂದ ಕಮಾನಿನ ತಂತಿಯನ್ನು ಅವುಕಿದಂತಾಗಿ ಅವು ಕುದುರೆಯ ಲಾಳದಾಕಾರವನ್ನು ಪಡೆಯುವಂತಾಯಿತು. ಇಂತಹ ಕಮಾನು ಹಾದಿಗಳನ್ನು ಚೈತ್ಯಗಳೆಂದು ಕರೆದರು. ಇವು ಸಹ ನಂತರದ ಬೌದ್ಧ ವಾಸ್ತುಶಿಲ್ಪದಲ್ಲಿ ಜನಪ್ರಿಯವಾಯಿತು.


ನಂತರದ ಶತಮಾನಗಳಲ್ಲಿ ಕ್ರಮೇಣ ದೊಡ್ಡ ಊರುಗಳೂ ನಗರಗಳೂ ಕೆಲವು ಕಡೆಗಳಲ್ಲಿ ಬೆಳೆದವು. ಅಲ್ಲೂ ಸಹ ಕಟ್ಟಡಗಳಿಗೆ ಇದೇ ವಾಸ್ತುಶಿಲ್ಪ ಶೈಲಿಯನ್ನೇ ಗಮನಾರ್ಹವಾಗಿ ವ್ಯಾಪಕವಾದ ಪ್ರಮಾಣದಲ್ಲಿ ಹಾಗೂ ಗಣನೀಯ ರೂಪದಲ್ಲಿ ಬಳಸಲಾಯಿತು. ನಗರಗಳು ಸಣ್ಣ ರಾಜ್ಯಗಳ – ಗಣರಾಜ್ಯಗಳ – ಕೇಂದ್ರಗಳಾದಾಗ ಅವುಗಳ ನಡುವಣ ಪರಸ್ಪರ ವೈಷಮ್ಯ ಅವರ ನಡುವೆ ಆಗಿಂದಾಗ್ಗೆ ಕದನಗಳಿಗೆ ದಾರಿ ಮಾಡಿದವು. ಈ ನಗರಗಳ ರಕ್ಷಣೆಗಾಗಿ ಸುತ್ತಲೂ ಕೋಟೆಗಳನ್ನು ಕಟ್ಟಬೇಕಾಯಿತು. ಮರದ ಬೇಲಿಗಳಲ್ಲದೆ ಮಣ್ಣಿನ, ನಂತರ ಕಲ್ಲಿನ, ಆಳುವೇರಿಗಳನ್ನು ಕಟ್ಟಿಕೊಳ್ಳಬೇಕಾಯಿತು. ಕೋಟೆಯೊಳಗಿನ ಕಟ್ಟಡಗಳೆಲ್ಲ

ಮರದವೇ. ಋಗ್ವೇದದಲ್ಲಿ ಕಸಬುದಾರರಲ್ಲಿ ಬಡಗಿಗೆ ವಿಶಷೇವಾದ ಪ್ರಾಶಸ್ತ್ಯ ನೀಡಿರುವುದನ್ನು ಗಮನಿಸಬಹುದು. ಆತ ಸಮಾಜದಲ್ಲಿ ಗೌರವಾನ್ವಿತವ್ಯಕ್ತಿಯಾಗಿ ಕಾಣಿಸಿಕೊಂಡಿದ್ದಾನೆ. ಆರಂಭದಲ್ಲಿ ಬಡಗಿ ಮರದಲ್ಲಿ ರೂಪಿಸಿದ ವಸ್ತು ಶೈಲಿಗಳನ್ನೇ ಕ್ರಮೇಣ ಕಲ್ಲುಕುಟಿಗ ಕಲ್ಲಿನಲ್ಲಿ ಪ್ರತಿರೂಪಗೊಳಿಸಿದ್ದಾನೆಂಬುದನ್ನು ನಾವು ಕಾಣಬಹುದು. ಕ್ರಿ.ಪೂ. ೫ನೆಯ ಶತಮಾನದಲ್ಲಿ ಮಹಾಗೋವಿಂದನೆಂಬೊಬ್ಬ ಶಿಲ್ಪಿಯನ್ನು ಬೌದ್ಧಗ್ರಂಥ ಕರ್ತೃವಾದ ಧರ್ಮಪಾಲ ಹೆಸರಿಸಿದ್ದಾನೆ. ಈತ ಹಲವಾರು ರಾಜಧಾನಿ ಪಟ್ಟಣಗಳನ್ನು ರೂಪುಗೊಳಿಸಿದನೆಂದು ಹೇಳಿದೆ.

ಇವುಗಳ ಯಾವ ಅವಶೇಷಗಳೂ ವಿಶೇಷವಾಗಿ ಉಳಿದಿಲ್ಲ. ಆದರೆ ಸಮಕಾಲೀನ ಸಾಹಿತ್ಯಕ ಆಧಾರಗಳಿಂದಲೂ ನಂತರ ಅಸ್ತಿತ್ವಕ್ಕೆ ಬಂದ ಬೌದ್ಧಸ್ತೂಪದಲ್ಲಿ ಕಂಡರಿಸಲಾಗಿರುವ ನಗರವಾಸದ ಚಿತ್ರಗಳಿಂದಲೂ ಅಂದಿನ ನಗರದ ವಿನ್ಯಾಸಗಳು ಹೇಗಿದ್ದುವೆಂಬುದನ್ನು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳಬಹುದು. ಮೌರ್ಯರ ರಾಜಧಾನಿಯಾಗಿದ್ದ ಪಾಟಲೀಪುತ್ರವು ಗಂಗಾತೀರದಲ್ಲಿ ಸುಮಾರು ೧೫ ಕಿ. ಮೀ. ಉದ್ದ, ೩ ಕಿ. ಮೀ. ಅಗಲದ ಸಮಾಂತರಚತುರ್ಭುಜಾಕಾರದ ಕಿರಿದಾದ ಪ್ರದೇಶದಲ್ಲಿ ವಿಸ್ತರಿಸಿತ್ತೆಂದೂ ಸುತ್ತಲೂ ಮರದ ಬೇಲಿ ಇದ್ದು ಹೊರಗಡೆ ಆಳವಾದ ನೀರು ತುಂಬಿದ ಕಂದಕವಿತ್ತೆಂದೂ ಮೆಗಾಸ್ತನೀಸ್ ಬರೆದಿಟ್ಟಿದ್ದಾನೆ. ಈ ಕೋಟೆಗೆ ಗೋಪುರಗಳುಳ್ಳ ೫೦೦ ಬುರುಜುಗಳಿದ್ದು ೬೪ ದ್ವಾರಗಳ ಮೂಲಕ ನಗರವನ್ನು ಪ್ರವೇಶಿಸಬಹುದಾಗಿತ್ತು. ಕೋಟೆಯೊಳಗಣ ಅರಮನೆಯಲ್ಲಿ ಸಾಲು ಕಂಬಗಳ ಹಲವು ಹಜಾರಗಳಿದ್ದು, ಆ ಮರದ ಕಂಬಗಳಲ್ಲಿ ಬಳ್ಳಿಗಳನ್ನು, ಪಕ್ಷಿಗಳ ವಿನ್ಯಾಸಗಳನ್ನು ಚಿತ್ರಿಸಿ ಅವುಗಳನ್ನು ಚಿನ್ನದಿಂದ ಅಲಂಕರಿಸಲಾಗಿತ್ತಂತೆ. ಸಾಂಚಿಯ ತೋರಣಗಳಲ್ಲಿ ಬುದ್ಧನ ಜನ್ಮಸ್ಥಳವಾದ ಕಪಿಲವಸ್ತು, ಕುಶಿನಗರ, ರಾಜಗೃಹಗಳನ್ನು ಪ್ರತಿನಿಧಿಸುವಂತಹ ಚಿತ್ರಗಳನ್ನು ಹಿನ್ನೆಲೆಯಲ್ಲಿ ತೋರಿಸಲಾಗಿವೆ.




ಚಿತ್ರ-೬



ಚಿತ್ರ-೨

ಈ ನಗರಗಳೆಲ್ಲ ಹೆಚ್ಚುಕಡಿಮೆ ಒಂದೇ ಮಾದರಿಯ ಸ್ಥಿರಗೊಳಿಸಿದ ಯೋಜನೆಯನ್ನವಲಂಬಿಸಿದಂತೆ ತೋರುತ್ತದೆ. ಸಾಂಚಿಯ ಸ್ತೂಪದ ದಕ್ಷಿಣ ಭಾಗದ ತೋರಣದಲ್ಲಿ ಕುಶಿನಗರದ ಹೆಬ್ಬಾಗಿಲಿನ ಚಿತ್ರವಿದೆ (ಚಿತ್ರ ೬–೨). ಈ ಹೆಬ್ಬಾಗಿಲಿಗೆ ಹೊಂದಿದಂತೆ ಮುಂಚಾಚಿದ ಚತುರಸ್ರಾಕಾರದ ಬುರುಜು, ಮೇಲೆ ಉಪ್ಪರಿಗೆಯ ಕಂಬಗಳ ಮೊಗಸಾಲೆ, ಅಡ್ಡಪಟ್ಟಿಯ ಕಟಾಂಜನ, ಇವುಗಳ ಯಾವ ಅವಶೇಷಗಳೂ ಈಗ ಉಳಿದಿಲ್ಲ. ಪಾಟಲೀಪುತ್ರದಲ್ಲಿ ಸುಮಾರು ೩೦ ಅಡಿಗಳ ಉದ್ದದ ಹೂಳಿನಲ್ಲಿ ಹೂತು ಹೋಗಿದ್ದ ತೇಗದ ವೇದಿಗಳು ಕಂಡುಬಂದಿದ್ದು ಅವುಗಳನ್ನು ಅರಮನೆಯ ಮಹಾದ್ವಾರ ಅಥವಾ ಮುಖಭಾಗದ ತಳಪಾಯಕ್ಕೆ ಆಧಾರಗಳಾಗಿ ಬಳಸಲಾಗಿತ್ತೆಂದು ತೋರುತ್ತದೆ. ಬಹಳ ಮಟ್ಟಿಗೆ ಇವರು ಬಳಸಿದುದು ತೇಗದ ಮರ. ಇದನ್ನು ತಮಗೆ ಬೇಕಾದ ಆಕಾರಕ್ಕೆ ಕೈಬಾಚಿಯಿಂದ ಕೆತ್ತಿಕೊಳ್ಳಲಾಗುತ್ತಿತ್ತು. ಇವುಗಳನ್ನು ಜೋಡಿಸಬೇಕಾದ ಕಡೆಗಳಲ್ಲಿ ಬಿದಿರಿನ ಗೂಟಗಳನ್ನು ಬಳಸಲಾಗುತ್ತಿತ್ತು. ಚಾವಣಿಯನ್ನು ಕಮಾನಿನ ಆಕಾರಕ್ಕೆ ತರಲು ಮರದ ಅಡ್ಡಪಟ್ಟಿ ಅಥವಾ ಕೂಡಂಚುಗಳನ್ನು ಒತ್ತಾಗಿ ಸೇರಿಸಿ ತೃಪ್ತಿಕರವಾದ ಹಾಗೂ ಕಲಾತ್ಮಕವಾದ ರೀತಿಯಲ್ಲಿ ಬಾಗಿಸುತ್ತಿದ್ದರು. ಚಪ್ಪಟೆಯ ಮಾಳಿಗೆಗಳಿಗೂ ತೊಲೆಗಳನ್ನು ಆಧರಿಸಿದಂತೆ ಕಂಬಗಳನ್ನು ನಿಲ್ಲಿಸಿ ತೊಲೆಗಳ ಮೇಲೆ ಗೋಡೆಯಿಂದ ಗೋಡೆಗೆ ಜಂತೆ ಹಾಕಲು ಭಾರ ಹೊರಲು ಅವಶ್ಯವಾದ ದೂಲಗಳನ್ನು ಅಲ್ಲಲ್ಲಿ ಕ್ರಮವಾಗಿ ಸೇರಿಸಿ ಹಾಕಲಾಗುತ್ತಿತ್ತು. ಇವೆಲ್ಲ ಬಡಗಿಯ ಕುಶಲತೆಯಿಂದ ಸಾಧ್ಯವಾಗುತ್ತಿದ್ದಂತಹ ಕಾರ್ಯ. ಗೋಡೆಗಳಿಗೆ


ಮಾಳಿಗೆಗಳಿಗೆ ಸುಣ್ಣ ಬಳಿಯಲಾಗುತ್ತಿತ್ತೇ ಎಂಬುದು ತಿಳಿಯದು. ಕೇವಲ ಊಹಿಸಬೇಕಾದ ಮಾತಷ್ಟೇ. ಗುಮ್ಮಟದ ಹಜಾರಕ್ಕೆ ಬೆಳಕು ಕಮಾನಿನ ಜಾಲಂದರಗಳ ಕಿಟಕಿಗಳಿಂದ ಬರುತ್ತಿತ್ತು.




ಚಿತ್ರ–೮

ಮಗಧರಾಜ್ಯದ ಪ್ರಮುಖ ನಗರಗಳಲ್ಲೊಂದಾದ ರಾಜಗೃಹದಲ್ಲಿ ಲಭಿಸಿರುವ ಅವಶೇಷಗಳಿಂದ ಅಂದಿನ ಜನ ಕ್ರಮೇಣ ಕಲ್ಲುಗಳನ್ನು ಬಳಸಿದರೆಂದು ಕಂಡು ಬರುತ್ತವೆ (ಚಿತ್ರ ೮). ಇದರ ಕೋಟೆ ಒಂದು ಕಲ್ಲಿನ ಕಟ್ಟಡ. ಬೃಹದಾಕಾರದ ೩ ರಿಂದ ೫ ಅಡಿಗಳ ಉದ್ದದ ಒರಟಾದ ಕಲ್ಲುಗಳನ್ನು ಜಾಗರೂಕತೆಯಿಂದ ಸೇರಿಸಿ ಬಂಧಿಸಿದ ಗೋಡೆಯ ಈ ಕೋಟೆ ಬಹಳ ಗಟ್ಟಿಮುಟ್ಟಾಗಿತ್ತು. ಮಧ್ಯದ ತೆರಪಿನಲ್ಲಿ ಸಣ್ಣ ಸಣ್ಣ ಕಲ್ಲು ಬಂಡೆಗಳನ್ನು ತುಂಬಿಸಿ ಗಟ್ಟಿಸಲಾಗಿತ್ತು. ಈ ರಚನೆ ಸುಮಾರು ೧೨ ಅಡಿಗಳ ಎತ್ತರದವರೆವಿಗೂ ಹೋಗಿದ್ದು ನಂತರ ಮರ ಮತ್ತು ಇಟ್ಟಿಗೆಗಳ ಮೇಲ್ಕಟ್ಟಡವನ್ನು ಎಬ್ಬಿಸಲಾಗಿತ್ತು.

ಮೌರ್ಯವಂಶದ ಅಶೋಕ ಧರ್ಮಪ್ರಸಾರಕಾರ್ಯ ಕೈಗೊಂಡಾಗ ತನ್ನ ಅನಿಸಿಕೆಗಳನ್ನೆಲ್ಲ ಶಿಲಾಶಾಸನಗಳನ್ನು ಕೊರೆಯಿಸುವ ಮೂಲಕ ಪ್ರಜೆಗಳಿಗೆ ಬಿತ್ತರಿಸಬಯಸಿದ. ಇದಕ್ಕಾಗಿ ಆತ ಬಂಡೆಗಳನ್ನೇ ಅಲ್ಲದೆ ಎತ್ತರದ ಶಿಲಾಸ್ತಂಭಗಳನ್ನೂ ಬಳಸಿದ. ಬಂಡೆ ಶಾಸನಗಳ ವಿಷಯದಲ್ಲಿ ಅಸಹಾಯಕನಾಗಿದ್ದರೂ ಕಂಬಗಳನ್ನು ನಿಲ್ಲಿಸುವಾಗ ಅವು ಧರ್ಮಪ್ರಚಾರ ಕಾರ್ಯವನ್ನು ಮುಗಿಲೆತ್ತರಕ್ಕೊಯ್ಯುವುದರ ಸಂಕೇತವನ್ನು ಅವುಗಳಲ್ಲಿ ಮೂಡಿಸಬಯಸಿದ. ಇಂತಹ ಏಕಶಿಲೆಯ ೩೦ ಕಂಬಗಳನ್ನು ಆತ ತನ್ನ ಸಾಮ್ರಾಜ್ಯದ ವಿವಿಧ ಕಡೆಗಳಲ್ಲಿ, ವಿಶೇಷವಾಗಿ ಬೌದ್ಧ ಕ್ಷೇತ್ರಗಳಲ್ಲಿ, ನಿಲ್ಲಿಸಿದಂತೆ ತೋರುತ್ತದೆ. ಎಲ್ಲ ಕಂಬಗಳ ಮೇಲೂ ಶಾಸನಗಳಿಲ್ಲದಿದ್ದರೂ ಈ ಕಂಬಗಳೇ ಈತನ ಆಶಯವನ್ನು ಸಾರುವಂತಿವೆ. ಇವುಗಳಲ್ಲಿ ಅನೇಕವು ಈಗ ಇಲ್ಲ. ಇರುವ ಕಂಬಗಳಲ್ಲಿ ಬಿಹಾರದ ಲೌರಿಯನಂದಘಡದ ಕಂಬವೂ ಒಂದು. ಇವುಗಳಲ್ಲಿ ಹಲವಾದರೂ ೫೦ ಅಡಿಗಳಷ್ಟು ಎತ್ತರವಾಗಿವೆ. ದುಂಡನೆಯ, ಅತ್ಯಂತ ಹೊಳಪುಳ್ಳ ಈ ಕಂಬಗಳು ಯಾವ ಅಡಿಪಾಯವೂ ಇಲ್ಲದೆ ಮೇಲೆದ್ದಂತೆ ತೋರುತ್ತದೆ. ಇವುಗಳಿಗೆ ಬೇರಾವ ಅಲಂಕರಣಗಳೂ ಇಲ್ಲ. ಆದರೆ ಮೇಲೆ ಹೋದಂತೆಲ್ಲಾ ಇವುಗಳ ಸುತ್ತಳತೆ ಕಡಿಮೆಯಾಗಿ ಚೂಪುಗೊಳ್ಳುತ್ತಾ ಹೋಗಿವೆ. ಮೇಲ್ಭಾಗದ ಸುತ್ತಳತೆ ಸುಮಾರು ೨ ಅಡಿಗಳು. ಇದರ ಮೇಲೆ ಗಂಟೆಯಾಕಾರದ ಸುಮಾರು ೩ ಅಡಿಗಳ ಸುತ್ತಳತೆಯ ಬೋದಿಗೆಯಿದ್ದು ಅದರ ಮೇಲೆ ಒಂದೊಂದು ಅಥವಾ ನಾಲ್ಕು ದಿಕ್ಕುಗಳಿಗೂ ಮುಖ ಮಾಡಿದ ಸಿಂಹ, ಆನೇ. ಕುದುರೆಗಳ ಉಬ್ಬು ಕೆತ್ತನೆಗಳಿವೆ. ಬೋದಿಗೆಯಲ್ಲಿಯೂ ಒಮ್ಮೊಮ್ಮೆ ನಾಲ್ಕಾರು ಪ್ರಾಣಿಗಳನ್ನು – ಕುದುರೆ, ಗೂಳಿ, ಸಿಂಹ, ಆನೆ – ಕೆತ್ತಲಾಗಿತ್ತು. ಸಾರನಾಥದ ಕಂಬದಲ್ಲಿ ಈ ಪ್ರಾಣಿಗಳ ಮೇಲೆ ಅಶೋಕಚಕ್ರ – ಧರ್ಮಚಕ್ರವನ್ನು ನಿಲ್ಲಿಸಲಾಗಿತ್ತು (ಚಿತ್ರ ೯–೧೦). ಕಂಬಗಳೆಲ್ಲಾ ಏಕಶಿಲೆಯವು. ಮೇಲಿನ ಬೋದಿಗೆ ಇತ್ಯಾದಿಗಳಿಗೆ ಬೇರೆ ಕಲ್ಲುಗಳನ್ನು ಬಳಸಲಾಗಿತ್ತು. ಈ ಭಾಗಗಳನ್ನು ತಾಮ್ರದ ಗುಬ್ಬಿಯ ಮೊಳೆಗಳಿಂದ ಸೇರಿಸಿ ಕೂಡಿಸಲಾಗಿತ್ತು. ರಾಮ್‌ಪೂರ್ವದ ಕಂಬದಲ್ಲಿ ಉಪಯೋಗಿಸಿದ್ದ ಇಂತಹ ಮೊಳೆಯೊಂದು ದೊರೆತಿದ್ದು ಅದು ೨ ಅಡಿಗಳಷ್ಟು ಉದ್ದವಾಗಿತ್ತು.




ಚಿತ್ರ–೯




ಚಿತ್ರ–೧೦

ಮೌರ್ಯರ ಕಾಲದ ಇತರ ಲೌಕಿಕ ಕಟ್ಟಡಗಳನ್ನು ಇಲ್ಲಿ ಸೂಕ್ಷ್ಮವಾಗಿ ಪ್ರಸ್ತಾಪಿಸಬಹುದು. ಪಾಟಲೀಪುತ್ರಕ್ಕೆ ಆರು ಶತಮಾನಗಳ ನಂತರ ಭೇಟಿ ನೀಡಿದ್ದ ಚೀನಾದ ಯಾತ್ರಿಕ ಫಾಹಿಯಾನನು ಅಶೋಕನ ಅರಮನೆಯನ್ನು ಕುರಿತು ಬರೆಯುತ್ತಾ ಅದು ಮಾನವನಿರ್ಮಿತವಾಗಿರದೆ ಯಕ್ಷನಿರ್ಮಿತವೆಂದು ಉದ್ಗಾರ ತೆಗೆದಿದ್ದಾನೆ. ಆತನು ಹಿಂತಿರುಗಿದ ಕೆಲವು ಕಾಲದಲ್ಲೇ ಆ ಅರಮನೆ ಅಗ್ನಿಗೆ ಆಹುತಿಯಾಯಿತು. ಆದರೂ

ಅಲ್ಲಿ ಅಗೆದಾಗ ಅದರ ಬೂದಿ ಲಭಿಸಿದೆ. ಲಭ್ಯ ಆಧಾರಗಳನ್ನನುಸರಿಸಿ ಕೆಲವು ಊಹೆಗಳನ್ನು ಮಾಡಲಾಗಿದೆ. ಹಲವಾರು ಕಟ್ಟಡಗಳನ್ನೊಳಗೊಂಡ ಈ ಅರಮನೆಯ ಸುತ್ತಲೂ ಎತ್ತರದ ಇಟ್ಟಿಗೆಯ ಕೋಟೆಯಿತ್ತು. ಈ ಕಟ್ಟಡಗಳಲ್ಲಿ ಮೂರಂತಸ್ತಿನ ಕಂಬ ಸಾಲಿನ ಹಜಾರ ಗಮನಾರ್ಹ. ಸುಮಾರು ೨೫೦ ಅಡಿ ಚದರದ ಈ ಹಜಾರದಲ್ಲಿ ಸಾಲಿಗೆ ಹದಿನೈದರಂತೆ ಹದಿನೈದು ಸಾಲುಗಳ ಕಂಬಗಳಿದ್ದುವೆಂದು ತಿಳಿದಿದೆ. ಬಹುಶಃ ಮೂರಂತಸ್ತುಗಳ ಮಾಳಿಗೆಗಳಲ್ಲಿ ಒಂದಕ್ಕೆ ಆಧಾರವಾಗಿ ದೊಡ್ಡದಾದ ಹೆಣ್ಣು ಗೊಂಬೆಯಾಕಾರದ ಕಲ್ಲೊಂದಿತ್ತೆಂದು ತೋರುತ್ತದೆ. ಕಂಬಗಳ ನಡುವಣ ಜಾಗದಲ್ಲಿ ಈ ಕಲ್ಲಿನ ಕೆಲವು ತುಂಡುಗಳು ದೊರೆತಿವೆ. ಮೌರ್ಯರ ಕಾಲದ ಈ ಶೈಲಿ ಬಹುಮಟ್ಟಿಗೆ ಪರ್ಶಿಯಾದ ಶೈಲಿಯಿಂದ ಪ್ರಭಾವಿತವಾಗಿದೆ ಎಂಬ ಸಾಧಾರವಾದ ಊಹೆಯನ್ನು ಮಾಡಲಾಗಿದೆ.




ಚಿತ್ರ-೧೧




ಚಿತ್ರ-೧೨

ಬೌದ್ಧ ಆಜೀವಕರ ವಾಸಕ್ಕಾಗಿ ಅಶೋಕನು ಗಯೆಯ ಸಮೀಪದ ಬರಾಬರ್ ಮತ್ತು ನಾಗಾರ್ಜುನಿ ಬೆಟ್ಟಗಳಲ್ಲಿ ಗುಹೆಗಳನ್ನು ಕೊರೆಯಿಸಿದ. ಸ್ಫಟಿಕದ ಬೆಣಚುಕಲ್ಲಿನ ದೊಡ್ಡ ಬಂಡೆಗಳಲ್ಲಿ ಕೊರೆಯಲಾದ ಈ ಗುಹೆಗಳು ಭಾರತದ ಗುಹಾಲಯಗಳಲ್ಲಿಯೇ ಅತಿ ಪ್ರಾಚೀನ. ಇಲ್ಲಿನ ಸುದಾಮ ಹಾಗೂ ಲೋಮಸ ಋಷಿಗುಹೆಗಳು ಗಮನಾರ್ಹವಾಗಿವೆ. (ಚಿತ್ರ ೧೧-೧೨). ಈ ಗುಹೆಗಳನ್ನು ನೇರಾಗಿ ಅಕ್ಷರೇಖೆಯಲ್ಲಿ ಕೊರೆಯಲಾಗದುದರಿನಿಂದ ಇವುಗಳ ಬಾಗಿಲುವಾಡಗಳು ಪಕ್ಕಕ್ಕಿವೆ. ಒಳಗೆ ಪೀಪಾಯಿ ಆಕಾರದ ಸಭಾಂಗಣ. ಇದರ ಒಳತುದಿಯಲ್ಲಿ ೯ ಅಡಿ ಸುತ್ತಳತೆಯ ವರ್ತುಲಾಕಾರದ ಗೂಡು. ಇದರ ಮೇಲಿನ ಮಾಳಿಗೆ ಅರ್ಧಗೋಳಾಕಾರದಲ್ಲಿದೆ. ಇದರ ಒಂದೊಂದು ಭಾಗವನ್ನು ಹೊಳಪು ಕೊಡುವಂತೆ ಉಜ್ಜಲಾಗಿದೆ. (ಚಿತ್ರ ೧೩-೧೪)



ಚಿತ್ರ-೧೩




ಚಿತ್ರ-೧೪

ಅಲಹಾಬಾದಿನ ಸಮೀಪದಲ್ಲಿ ಯಮುನಾನದಿಯ ಎಡದಂಡೆಯ ಮೇಲಿನ ಕೌಶಾಂಬೀನಗರವು ಚೇದಿ ಜನಪದದ ರಾಜಧಾನಿಯಾಗಿದ್ದು ಕ್ರಿ. ಶ. ೬ನೆಯ ಶತಮಾನದವರೆವಿಗೂ ಪ್ರಸಿದ್ಧವಾಗಿತ್ತು. ಸುಮಾರು ೩೦ ವರ್ಷಗಳಿಂದ ಇಲ್ಲಿ ಉತ್ಖನನಗಳಾಗಿದ್ದು ಇದರ ಇತಿಹಾಸದ ಅನೇಕ ಅಂಶಗಳು ಈಗ ಬೆಳಕಿಗೆ ಬಂದಿವೆ. ಇಲ್ಲಿನ ಘೋಷಿತಾರಾಮದಲ್ಲಿ ಸುಮಾರು ಕ್ರಿ.ಪೂ. ೨ನೆಯ ಶತಮಾನದಲ್ಲಿ ಒಂದು ಸ್ತೂಪವನ್ನು ಕಟ್ಟಲಾಯಿತು. ಕೌಶಾಂಬೀನಗರದ ಸುತ್ತಲೂ ಕೋಟೆ ಗೋಡೆಗಳಿದ್ದುವು. ಮೊದಲ ಬಾರಿಗೆ ಕಟ್ಟಲಾದುದು ಒಂದು ಮಣ್ಣಿನ, ಕಲ್ಲಿನ ಪಾಗಾರದ, ರಕ್ಷಣೆಯ ದಿಬ್ಬ. ಇದರ ಹೊರಭಾಗ ಇಳಿಜಾರಾಗಿದ್ದು ಮೊದಲ ಓರೆ ೧೫ ಡಿಗ್ರಿ ಕೋನದಲ್ಲಿ ೩೦ ವರಿಸೆಗಳ ಇಟ್ಟಿಗೆಗಳ ಕಟ್ಟಡ. ಉಳಿದ ಭಾಗ ೪೦ ಡಿಗ್ರಿ ಕೋನದಲ್ಲಿದ್ದು ಇದರ ಒಟ್ಟು ಎತ್ತರ ೧೩.೭೨ಮೀಟರಿನಷ್ಟು. ಈ ಇಟ್ಟಿಗೆಗಳನ್ನು ಇಂಗ್ಲಿಷ್ ಬಾಂಡ್ ಪದ್ಧತಿಯಲ್ಲಿ ಜೋಡಿಸಲಾಗಿತ್ತು. ಈ ಗೋಡೆಯ ಮೇಲೆ ೫.೦೮ ಸೆಂ.ಮೀ. ೭.೬೨ ಸೆ.ಮೀ. ದಪ್ಪದ ಮೆತುಗಾರೆಯ ಲೇಪವಿತ್ತು. ಕೋಟೆಯೊಳಗೆ ಬೋದಿಗೆಯ ಕಮಾನಿನ ಸುರಂಗ ಮಾರ್ಗವಿತ್ತು. ಇದು ಬಹುಶಃ ಒಂದು ಒಳಮಾರ್ಗವೇ ಹೊರತು ಒಳಚರಂಡಿಯಾಗಿರಲಿಲ್ಲವೆನ್ನಲಾಗಿದೆ. ಹೊರಗಡೆಯಿಂದ ನೀರು ಬರಲು ಇದಕ್ಕೆ ಯಾವ ಕಂಡಿಯೂ ಇದ್ದಂತಿಲ್ಲ. ಈ ಕೋಟೆಯ ಪಾಗಾರದ ಮೇಲೆ ಕಾಪಿನವರಿಗಾಗಿ ಕೊಠಡಿಗಳನ್ನೂ ಬುರುಜನ್ನೂ ಕಟ್ಟಲಾಗಿತ್ತು. ಮೌರ್ಯರ ಹಾಗೂ ನಂತರದ ಕಾಲದ ಇತರ ಕಟ್ಟಡಗಳ ಅವಶೇಷಗಳೂ ಇಲ್ಲಿ ಕಂಡು ಬಂದಿವೆ.

ಕೌಶಾಂಬಿನಗರದ ಯೋಜನೆಯ ಪಲವಾರು ಅಂಶಗಳು ಉತ್ಖನನಗಳಿಂದ ತಿಳಿದು ಬಂದಿದೆ. ಪ್ರತಿಯೊಂದು ಮನೆಯೂ ಮುಖ್ಯಬೀದಿ ಅಥವಾ ಪಕ್ಕದ ಗಲ್ಲಿಗಳಿಗೆ ಹೊಂದಿಕೊಂಡಿತ್ತು. ಗಲ್ಲಿಗಳಲ್ಲಿ ಕೆಲವಕ್ಕೆ ಅಲ್ಲಲ್ಲಿ ಅಡ್ಡಗೋಡೆಗಳಿದ್ದು ತುರ್ತು ಪರಿಸ್ಥಿತಿಗಳಲ್ಲಿ ಈ ಅಡ್ಡಗೋಡೆಗಳಿಗೆ ಸೇರಿಸಿದ್ದ ಒಂದು ರೆಕ್ಕೆಯ ಬಾಗಿಲನ್ನು ಮುಚ್ಚುವುದರ ಮೂಲಕ ಶತ್ರುಗಳಿಂದ ಅಥವಾ ಕಳ್ಳಕಾಕರಿಂದ ನಗರವನ್ನು ರಕ್ಷಿಸಬಹುದಾಗಿತ್ತು ಎಂಬುದೊಂದು ಊಹೆ. ಸಾಧಾರಣವಾಗಿ ಎಲ್ಲ ಮನೆಗಳೂ ಒಂದೇ ವಿನ್ಯಾಸ ಉಳ್ಳದ್ದಾಗಿದ್ದು ಒಂದೊಂದರಲ್ಲೂ ಎರಡು ಪ್ರತ್ಯೇಕ ಅಂಕಣಗಳಿದ್ದುವು. ಒಳ ಅಂಕಣದಲ್ಲಿ ಹೆಚ್ಚು ಕೊಠಡಿಗಳಿದ್ದು ಬಹುಶಃ ಸ್ತ್ರೀಯರು ಹಾಗೂ ಪುರುಷರಿಗಾಗಿ ಈ ಅಂಕಣಗಳನ್ನು ಪ್ರತ್ಯೇಕಿಸಲಾಗಿತ್ತು. ಚರಂಡಿಗಳಲ್ಲಿ ಹೀರಿಕೆಯ ಜಾಡಿಗಳು, ಸುರಳಿ ಬಾವಿಗಳು, ಜೇಡಿಯ ಕೊಳವೆಗಳು, ತೆರೆದ ಅಥವಾ ಮುಚ್ಚಿದ ಇಟ್ಟಿಗೆಯ ಚರಂಡಿಗಳು ಮುಂತಾದ ಹಲವಾರು ಪದ್ಧತಿಗಳಿತ್ತು.


ಈ ಮೇಲೆ ಪ್ರಸ್ತಾಪಿಸಿರುವ ವಿಷಯಗಳು ಉತ್ಖನನಗಳಿಂದ ತಿಳಿದು ಬಂದಿರುವ ಅಂಶಗಳು. ಅಲ್ಲದೆ ಯಾತ್ರಿಕರ ಬರವಣಿಗೆಗಳ ಪ್ರಸ್ತಾಪವನ್ನೂ ಮಾಡಿದೆ. ಭಾರತೀಯಸಾಹಿತ್ಯಕೃತಿಗಳಲ್ಲಿಯೂ ಅಂದಿನ ನಗರ, ಮನೆ ಮುಂತಾದವುಗಳ ವರ್ಣನೆ ಇದೆ. ಪ್ರಾಸಾದ ಎಂಬ ಮಾತನ್ನು ಅರಮನೆ, ದೇವಾಲಯ, ವೇದಿಕೆ ಎಂಬರ್ಥದಲ್ಲೇ ಬಳಸಲಾಗಿದೆ. ರಾಮಾಯಣದಲ್ಲಿ ಮಂಥರೆ ಅಯೋಧ್ಯೆಯಲ್ಲಿ ಅರಮನೆಯ ಮೇಲೇರಿ ಪಟ್ಟಣದಲ್ಲಿ ರಾಮ ಪಟ್ಟಾಭಿಷೇಕಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ಚಟುವಟಿಕೆಗಳನ್ನು ಗಮನಿಸಿದ ಸಂದರ್ಭದಲ್ಲಿ 'ಪ್ರಾಸಾದ' ಎಂಬ ಮಾತು ಪ್ರಯೋಗವಾಗಿದೆ (ಪ್ರಾಸಾದಂ ಚಂದ್ರಸಂಕಾಶಂ ಅರುರೋಹ ಯದೃಚ್ಛಯಾ). ಈ ಪದ ರಾಮಾಯಣದಲ್ಲಿ ಅನ್ಯತ್ರ ಸಹ ಮೇಲಿಂದ ಮೇಲೆ ಕಾಣಿಸಿಕೊಂಡಿದೆ. ರಾಮನು ದಶರಥನನ್ನು ಕಾಣಲು ಹೋದಾಗ ಅಯೋಧ್ಯೆಯ ಜನ ಪ್ರಾಸಾದ, ಹರ್ಮ್ಯ, ವಿಮಾನ, ಶಿಖರಗಳನ್ನೇರಿ ಉದಾಸೀನದಿಂದ ನೋಡುತ್ತಿದ್ದರೆಂದಿದೆ. (ತತಃ ಪ್ರಾಸಾದ ಹರ್ಮ್ಯಾಣಿ ವಿಮಾನ ಶಿಖರಾಣಿ ಚ / ಅಧಿರುಹ್ಯ ಜನಃ ಶ್ರೀಮಾನ್ ಉದಾಸೀನೋ ವ್ಯಲೋಕಯತ). ಮಹಾಭಾರತದಲ್ಲಿ ಸುವರ್ಣ ಜಾಲಗಳಿಂದ ಕೂಡಿದ, ಮಣಿಮಯ ನೆಲಗಟ್ಟನ್ನುಳ್ಳ, ಹತ್ತಲು ಸೋಪಾನಗಳುಳ್ಳ, ವಿಶಾಲವಾದ ನೂರು ಬಾಗಿಲುಗಳನ್ನು ಹಿಮವತಿಖರಗಳನ್ನು ಹೊಂದಿದ ದುರ್ಯೋಧನನ ಅರಮನೆಯ ವರ್ಣನೆ ಬಂದಿದೆ. ಕಾಳಿದಾಸನ ರಘುವಂಶ, ಮೇಘದೂತಗಳಲ್ಲೂ ಕಲ್ಹಣನ ರಾಜತರಂಗಿಣಿ ಮುಂತಾದ ಇತರ ಗ್ರಂಥಗಳಲ್ಲೂ ಇಂತಹ ವರ್ಣನೆಗಳು ಕಂಡುಬಂದಿವೆ. ಆದರೆ ಅವುಗಳು ಕೇವಲ ಊಹೆಗೆ ಎಟುಕತಕ್ಕವುಗಳಾಗಿದ್ದು ಈಗ ಯಾವುದೂ ಕಾಣಲಾಗದಿರುವುದು ದುರದೃಷ್ಟ.



ಚಿತ್ರ-೧೫


ಕರ್ನಾಟಕದಲ್ಲಿ

ಇಷ್ಟೆಲ್ಲ ಮಾತುಗಳು ದಕ್ಷಿಣಭಾರತದ ಪ್ರದೇಶಗಳಿಗೂ ಅನ್ವಯಿಸುತ್ತವೆ. ಇಲ್ಲಿಯೂ ಅವಶೇಷಗಳಾವುವೂ ಹೆಚ್ಚಾಗಿ ಉಳಿದಿಲ್ಲ. ಕರ್ನಾಟಕ ಇದಕ್ಕೆ ಹೊರತಾಗಿಲ್ಲ. ಇಲ್ಲಿ ಶಿಲಾಯುಗಗಳ ಕಾಲದಲ್ಲೂ ಗೃಹಗಳನ್ನು ಕಟ್ಟುವ ಪದ್ಧತಿಯ ಬಗೆಗೆ ಈಗಾಗಲೇ ಪ್ರಸ್ತಾಪಿಸಿದ್ದೇವೆ. ಕೋಟೆಯ ಗೋಡೆಗಳು ಸಹ ಕೆಲವು ನಿವೇಶನಗಳಲ್ಲಿ ಕಂಡುಬಂದಿವೆ.



ಚಿತ್ರ–೧೬

ಕೋಟೆಗಳಲ್ಲಿ ಗಿರಿದುರ್ಗ, ವನದುರ್ಗ, ಜಲದುರ್ಗ, ಐರಿಣದುರ್ಗ (ಮರಳುಗಾಡು), ದೇವದುರ್ಗ ಮತ್ತು ಮಿಶ್ರದುರ್ಗಗಳೆಂಬ ಆರು ವಿಧಗಳೆಂದು ಮಾನಸಾರದಲ್ಲಿ ಹೇಳಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿನ ಕದಂಬರ ರಾಜಧಾನಿಯಾಗಿದ್ದ ಸ್ಥಲದುರ್ಗವೆನಿಸಿದ್ದ ಬನವಾಸಿಯು ವರದಾನದಿಯಿಂದ ಸುತ್ತುವರಿಯಲ್ಪಟ್ಟಿದ್ದು ಜಲದುರ್ಗದಂತೆ ಕಾಣುತ್ತಿತ್ತೆಂದು ಇಮ್ಮಡಿ ಪುಲಕೇಶಿಯ ಐಹೊಳೆ ಶಾಸನದಲ್ಲಿ ಹೇಳಿದೆ. ಸುಮಾರು ಕ್ರಿ. ಶ. ೧ನೆಯ ಶತಮಾನಕ್ಕೆ ಸೇರಿದ್ದೆನ್ನಬಹುದಾದ ಚಂದ್ರವಳ್ಳಿಯಲ್ಲಿ ದೊರೆತಂತಹ ಪುರಾತನ ಇಟ್ಟಿಗೆಗಳನ್ನು ಇಲ್ಲಿನ ಕೋಟೆಯಲ್ಲಿ ಕಾಣಬಹುದು (ಚಿತ್ರ ೧೫–೧೬). ಈಗ ಸುಮಾರು ೨–೩ ದಶಕಗಳ ಹಿಂದೆ ಇಲ್ಲಿ ಕಾಗೆಗುಡ್ಡ ಮತ್ತು ದೋಣಿಗುಡ್ಡಗಳೆಂಬ ಎರಡು ಮಣ್ಣಿನ ಗುಡ್ಡಗಳಿದ್ದವು. ಇಲ್ಲಿನ ಮಣ್ಣನ್ನು ಬಳಸಲು ಈ ಗುಡ್ಡಗಳನ್ನು ಅಗೆದಾಗ ೮–೧೦ ಅಡಿಗಳ ಕೆಳಗೆ ಇಟ್ಟಿಗೆಯ ಗೋಡೆಯೊಂದು ಕಂಡುಬಂದಿತ್ತು. ಬನವಾಸಿಯಲ್ಲಿ ನಡೆಸಿದ ಉತ್ಖನನಗಳಲ್ಲಿ ಗಜಪೃಷ್ಠಾಕಾರದ ಕಟ್ಟಡದ ಅವಶೇಷಗಳು ಕಂಡುಬಂದಿದ್ದು ಅದು ಬೌದ್ಧ ಅಥವಾ ಹಿಂದೂ ದೇವಾಲಯವೊಂದರ ಭಾಗವಾಗಿ ಇದ್ದಿರಬಹುದೆಂದು ಊಹಿಸಲಾಗಿದೆ (ಚಿತ್ರ ೧೭). ಇದರಲ್ಲಿ ಒಂದರ ಸುತ್ತಲೂ ಎರಡು ವರಸೆಯ ಗೋಡೆಗಳು ಮತ್ತೊಂದರ ಸುತ್ತಲೂ ಮೂರು ವರಸೆಯ ಗೋಡೆಗಳಿದ್ದು ಇವುಗಳ ಮಧ್ಯದ ಜಾಗವನ್ನು ಪ್ರದಕ್ಷಿಣಾಪಥವಾಗಿ ಬಳಸುತ್ತಿದ್ದರೆಂದು ತೋರುತ್ತದೆ. ಈ ಗೋಡೆಗಳ ಪ್ರಮಾಣ ಒಂದರಲ್ಲಿ ೩.೫ ಅಡಿ ಮತ್ತೊಂದರಲ್ಲಿ ೬ ಅಡಿಗಳಷ್ಟು ಅಗಲ. ಇವೆರಡೂ ಧಾರ್ಮಿಕ ಕಟ್ಟಡಗಳೆಂಬುದರಲ್ಲಿ ಸಂದೇಹವಿಲ್ಲದಿದ್ದರೂ ಅದು ಯಾವ ಧರ್ಮಕ್ಕೆ ಸೇರಿದುವೆಂಬುದನ್ನು ಹೇಳಲಾಗದು. ಇವುಗಳ ಮುಂಭಾಗ ಆಯಾಕಾರವಾಗಿದ್ದು ಒಳಭಾಗವನ್ನು ಎರಡು ಅಥವಾ ಮೂರು ಅಂಕಣಗಳನ್ನಾಗಿ ವಿಂಗಡಿಸಲಾಗಿತ್ತು. ಒಂದು ಕಟ್ಟಡದ ಒಳ ಹಿಂಭಾಗದಲ್ಲಿ ೬ ಅಡಿ ಎತ್ತರದ ವೇದಿಕೆಯನ್ನು ನಿರ್ಮಿಸಲಾಗಿತ್ತು. ಅದನ್ನು ಧಾರ್ಮಿಕ ಕಾರ್ಯಗಳಿಗೆ ಬಳಸಲಾಗುತ್ತಿದ್ದಿರಬಹುದು.



ಚಿತ್ರ–೧೭


ಇದರಂತೆಯೆ ಬೆಳಗಾವಿ ಸಮೀಪದ ವಡಗಾಂವ್ ಮಾಧವಪುರದಲ್ಲಿ ನಡೆಸಲಾದ ಉತ್ಖನನಗಳಲ್ಲಿ ಎರಡು ಕೊಠಡಿಗಳ ಹಾಗೂ ಅವುಗಳಿಗೆ ಸೇರಿದಂತೆ ಒಂದು ಕೈಸಾಲೆ ಇರುವ ಮನೆಯ ನಿವೇಶನವೊಂದು, ಅದರ ಪಕ್ಕದಲ್ಲಿ ಹಿರಿಕೆಯ ಜಾಡಿಗಳ ವೃತ್ತಾಕಾರದ ಗುಳಿ, ವಿಶಾಲವಾದ ಸಭಾಂಗಣ ಹಾಗೂ ಅದಕ್ಕೆ ಹೊಂದಿದಂತೆ ಬಹುಶಃ ಸನ್ಯಾಸಿಗಳ ವಾಸಕ್ಕಾಗಿ ಕಟ್ಟಲಾದ ಸಣ್ಣ ಕೊಠಡಿಗಳು, ಅವುಗಳಲ್ಲಿನ ಒಂದರಲ್ಲಿ ಉಗ್ರಾಣದಂತಹ ನೆಲಮಾಳಿಗೆ, ಇಟ್ಟಿಗೆಗಳಿಂದ ಕಟ್ಟಲಾದ ವೃತ್ತ ಹಾಗೂ ಚೌಕಾಕಾರದ ಬಾವಿ ಮುಂತಾದವುಗಳು ಕಂಡುಬಂದಿವೆ. ಈ ಕಟ್ಟಡಗಳಲ್ಲಿ ಯಾವ ವಿಧದ ಕಂಬವೂ ಕಂಡುಬಂದಿಲ್ಲ. ಬಹುಶಃ ಮೊದಲೊಮ್ಮೆ ಕಟ್ಟಲಾಗಿದ್ದ ಕಟ್ಟಡದ ಕಂಬದ ಅವಶೇಷಗಳ ಮೇಲೆಯೋ ಅಥವಾ ಯಾವೊಂದು ತಳಹದಿಯೇ ಇಲ್ಲದೆ ನೇರವಾಗಿ ಭೂಮಿಯ ಮೇಲೆಯೇ ಈ ಕಟ್ಟಡಗಳನ್ನು ಎಬ್ಬಿಸಿರಬಹುದೆಂದು ಊಹಿಸಲಾಗಿದೆ. ಇವೆಲ್ಲಾ ಸುಮಾರು ಕ್ರಿ.ಪೂ. ೨ನೆಯ ಶತಮಾನ ಹಾಗೂ ಅನಂತರದ ಕಾಲಕ್ಕೆ ಸೇರಿದ ಕಟ್ಟಡಗಳು. ಈ ನಿವೇಶನದಲ್ಲಿ ಜೆಲ್ಲಿಕಲ್ಲು ಹಾಗೂ ಜೇಡಿಮಣ್ಣಿನಿಂದ ಗಟ್ಟಿಸಿದ ರಸ್ತೆಯನ್ನು ಗುರುತಿಸಲಾಗಿದೆ. ಈ ರಸ್ತೆಯನ್ನು ಮೇಲಿಂದ ಮೇಲೆ ಜೀರ್ಣೋದ್ಧಾರಗೊಳಿಸಿದ್ದರೆನ್ನಲು ರಸ್ತೆಯ ಐದಾರು ಪದರಗಳನ್ನು ಗುರುತಿಸಬಹುದಾಗಿದೆ.

ಬನವಾಸಿಯ ಸಮೀಪದ ಗುಡ್ನಾಪುರದಲ್ಲಿ ದೊರೆತ ಕದಂಬ ಅರಸ ರವಿವರ್ಮನ ಶಾಸನದಲ್ಲಿ ಅರಸನು ಆ ಗ್ರಾಮದಲ್ಲಿ ಕಾಮಜಿನಾಲಯವನ್ನು ಕಟ್ಟಿಸಿದನೆಂದು ಹೇಳಿದೆ. ಆ ಸಂದರ್ಭದಲ್ಲಿ ಆ ಆಲಯದ ಬಲಭಾಗಕ್ಕೆ ಅರಸನ ಅರಮನೆಯೂ ಎಡಭಾಗಕ್ಕೆ ಅಂತಃಪುರದ ಮುಂಭಾಗದಲ್ಲಿ ಎರಡು ನೃತ್ಯಶಾಲೆಗಳೂ ಇದ್ದುವೆಂದು ಹೇಳಿದೆ. ಬನವಾಸಿಯಿಂದ ಸುಮಾರು ೫ ಕಿ.ಮೀ. ದೂರದಲ್ಲಿರುವ ಗುಡ್ನಾಪುರದಲ್ಲಿ ಅರಸನ ಅರಮನೆಯಿತ್ತೆಂದು ಇದರಿಂದ ಊಹಿಸಬಹುದು. ಎಂದ ಮೇಲೆ ನಗರದ ಒಂದು ಕೊನೆಯಲ್ಲಿ ಅರಮನೆ, ಇನ್ನೊಂದು ತುದಿಯಲ್ಲಿ ವರದಾನದಿಯ ತೀರದಲ್ಲಿ ಈಗಿನ ಮಧುಕೇಶ್ವರ ದೇವಾಲಯವಿತ್ತೆಂದೂ ಊಹಿಸಬಹುದು. ಇದನ್ನು ಗಮನಿಸಿದರೆ ಬನವಾಸಿ ಅಂದು ವಿಶಾಲವಾದ ನಗರವಾಗಿತ್ತೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ


ಇನ್ನೂ ಹೆಚ್ಚು ಉತ್ಖನನಗಳಾಗುವವರೆವಿಗೂ ವಿಶೇಷ ವಿವರಗಳು ತಿಳಿದು ಬರುವಂತಿಲ್ಲ. ಚಾಮರಸನ ಪ್ರಭುಲಿಂಗಲೀಲೆಯಲ್ಲಿ ಈ ನಗರದ ವರ್ಣನೆ ಇದೆ. ಶಾಸನಗಳಲ್ಲೂ ಈ ನಗರದ ಹಾಗೂ ಮಧ್ಯಯುಗೀನ (೧೦–೧೪ನೆಯ ಶತಮಾನಗಳ) ಕರ್ನಾಟಕದ ಇತರ ಹಲವಾರು ನಗರಗಳ ವರ್ಣನೆಗಳಿವೆ. ಬಾದಾಮಿಯ ಚಾಲುಕ್ಯರ ಮೊದಲನೆಯ ಪುಲಕೇಶಿ ಅಭೇದ್ಯವಾದ ಕೋಟೆಯೊಂದನ್ನು ಕಟ್ಟಿಸಿದನೆಂದು ಅಲ್ಲಿನ ಶಾಸನ ತಿಳಿಸುತ್ತದೆ. ಇದೊಂದು ಗಿರಿದುರ್ಗ.

ಕರ್ನಾಟಕದಲ್ಲಿ ನಗರಯೋಜನೆ ಹೇಗಿದ್ದಿತೆಂಬುದನ್ನು ಖಚಿತವಾಗಿ ಹೇಳಲಾಗದಿದ್ದರೂ ಶಾಸನಗಳಿಂದ ಹಲವಾರು ವಿವರಗಳು ಲಭಿಸಿದ್ದು ಆ ಮೂಲಕ ಕೆಲವು ಊಹೆಗಳನ್ನು ಮಾಡಬಹುದಾಗಿದೆ. ರಾಜಬೀದಿ, ಮಹಾಪಥ, ಹೆದ್ದಾರಿ, ದಾರಿ ಅಡ್ಡದಾರಿ, ಓಣಿ ಮುಂತಾದ ಪದಗಳ ಬಳಕೆ ಕಂಡುಬರುತ್ತದೆ. ಅಲ್ಲದೆ ಭಿನ್ನಧರ್ಮಗಳಿಗೆ ಸೇರಿದವರಿಗೆ ಬ್ರಹ್ಮಪುರಿಗೇರಿ, ಮಾಲಗಾರಗೇರಿ, ಕುಂಬಾರಗೇರಿ, ಶೈವಸ್ಥಳ, ವೈಷ್ಣವಸ್ಥಳ ಮುಂತಾಗಿ ಪ್ರತ್ಯೇಕ ಕೇರಿಗಳಿದ್ದಂತೆ ತೋರುತ್ತದೆ. ಧಾರವಾಡಜಿಲ್ಲೆಯ ನರಗುಂದವೆಂಬ ಅಗ್ರಹಾರ "ವಿಪುಳ ಪ್ರಾಕಾರ ಚಾರುಧ್ವಜಕುಳ ವಿಳಸದ್ರಮ್ಯ ಹರ್ಮ್ಯಂಗಳಿಂ ನಾನೋತ್ತುಂಗ ದೇವಾಲಯ ವಿಳಸದಿಂ ವಣಿಗ್ಗೇಹ ಸಂದೋಹದಿಂ" ಶೋಭಿಸುತ್ತಿತ್ತೆನ್ನುತ್ತದೆ ಒಂದು ಶಾಸನ. ಇಲ್ಲಿ ಹಲವಾರು ಬಗೆಯ ಕಟ್ಟಡಗಳ, ದೇವಾಲಯಗಳ, ವರ್ತಕರಿಗಾಗಿಯೇ ಕಟ್ಟಲಾದ ಗೇಹ (ಗೃಹ)ಗಳ ಪ್ರಸ್ತಾಪವಿರುವುದನ್ನು ಗಮನಿಸಬಹುದು. ಆದರೆ ಇವುಗಳ ವಾಸ್ತುಶಿಲ್ಪ ಲಕ್ಷಣಗಳನ್ನು ತಿಳಿಯುವುದು ಮಾತ್ರ ಸಾಧ್ಯವಿಲ್ಲವಾಗಿದೆ.

ಉತ್ತರ ಭಾರತದಲ್ಲಿ ದೆಹಲಿಯ ಸುಲ್ತಾನರು ಆಳತೊಡಗಿದಂದಿನಿಂದ ಲೌಕಿಕ ಕಟ್ಟಡಗಳಿಗೆ ಹೆಚ್ಚಾಗಿ ಕಲ್ಲನ್ನು ಬಳಸಿದ ಕಾರಣ ವಿಶೇಷವಾದ ಅಂತಹ ಕಟ್ಟಡಗಳು ಅಳಿದುಳಿದಿವೆ. ಅವು ಲೌಕಿಕ ವಾಸ್ತುಶೈಲಿಗೆ ಚಾಕ್ಷುಷಸಾಕ್ಷಿಗಳಾಗಿವೆ. ದಕ್ಷಿಣದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲೂ ಲೌಕಿಕ ಕಟ್ಟಡಗಳು ಉಳಿದುಕೊಂಡು ಬಂದಿರುವುದು ವಿಜಯನಗರದ ಕಾಲದಿಂದ. ಹಂಪೆ ವಿಜಯನಗರ ಸಾಮ್ರಾಜ್ಯದ ರಾಜಧಾನಿ. ಇಲ್ಲಿನ ಕೋಟೆಯ ಒಳಗೆ ಅರಸನ ಅರಮನೆ, ಅದಕ್ಕೆ ಸಂಬಂಧಿಸಿದ ಇತರ ಮಂಟಪಗಳು, ಅರಸಿಯರ ಈಜುಕೊಳ, ಕಮಲಮಹಲ್ (ಚಿತ್ರ ೧೮), ಆನೆಯ ಲಾಯಗಳು, ಕಾವಲುಗೋಪುರ (ಚಿತ್ರ ೧೯) ಮತ್ತು ವಿರೂಪಾಕ್ಷ ದೇವಾಲಯದ ಸಮೀಪದಲ್ಲಿದ್ದ ಮಾರುಕಟ್ಟೆಯ ಸ್ಥಳ ಇವುಗಳ ತಳಪಾಯ ಮಾತ್ರ ಕಲ್ಲಿನಲ್ಲಿ ಕಟ್ಟಲಾಗಿದ್ದು ಮೇಲಿನ ಸ್ತರಗಳೆಲ್ಲ ಮರ ಮುಟ್ಟುಗಳಿಂದ, ಗಾರೆಯಿಂದ ಕಟ್ಟಲಾಗಿದೆ. ಕಂಬಗಳಿಗೂ ಸಹ ಕಲ್ಲು ಅಥವಾ ಮರವನ್ನು ಉಪಯೋಗಿಸಲಾಗಿತ್ತು. ಕೆಲವು ಕಂಬಗಳ ಒಳಭಾಗ ಕಲ್ಲಿನದಾಗಿದ್ದು ಅದರ ಸುತ್ತಲೂ ಇಟ್ಟಿಗೆ, ಗಾರೆಗಳನ್ನು ಬಳಸಿ ಕಂಬದ ಗಾತ್ರವನ್ನು ಹೆಚ್ಚಿಸುವ ತಂತ್ರವನ್ನು ಬಳಸಲಾಗಿತ್ತು.



ಚಿತ್ರ–೧೮



ಚಿತ್ರ–೧೯

ಈ ರಾಜಧಾನಿ ನಗರ ಸುಮಾರು ೨೪ ಚದರ ಕಿ. ಮೀ. ಗಳಷ್ಟು ವಿಸ್ತಾರವಾಗಿತ್ತು. ಸುತ್ತಲೂ ಅತ್ಯಂತ ದಪ್ಪವಾಗಿದ್ದ ಕೋಟೆ ಇದ್ದು ದೊಡ್ಡ ದೊಡ್ಡ ಬಂಡೆಗಲ್ಲುಗಳನ್ನು ಕೆತ್ತಿ ನಯಮಾಡಿ ಒಂದರ ಪಕ್ಕದಲ್ಲೊಂದರಂತೆ ಜೋಡಿಸಲಾಗಿತ್ತು. ಒಂದೊಂದನ್ನೂ ಬೆಣೆಯಾಕಾರದಲ್ಲಿ ಕೆತ್ತಿ ಅದರ ಚೂಪಾದ ತುದಿಗಳನ್ನು ಒಳಮುಖವಾಗಿ ಬರುವಂತೆ ತೂರಿಸಿ ಮಧ್ಯದ ತೆರಪಿನಲ್ಲಿ ಮಣ್ಣನ್ನು ತುಂಬಲಾಗಿತ್ತು. ಇದಕ್ಕೆ ಯಾವ ವಿಧವಾದ ಲೇಪನವನ್ನೂ ಬಳಸದಿರುವುದೊಂದು ವಿಶೇಷ. ನಗರಕ್ಕೆ ಇಂತಹ ಏಳುಕೋಟೆಯ

ಗೋಡೆಗಳಿದ್ದುವು. ಇವುಗಳಲ್ಲಿ ಒಳಭಾಗದ ಮೊದಲ ಕೋಟೆಯ ಬಹುಭಾಗ ಇನ್ನೂ ಉಳಿದಿದೆ. ಇದರ ಹಲವು ಪ್ರವೇಶದ್ವಾರಗಳನ್ನೂ ಬುರುಜುಗಳನ್ನೂ ಈಗಲೂ ಕಾಣಬಹುದು. ತಳಾರಿಗಟ್ಟದಲ್ಲಿನ ಉತ್ತರದ್ವಾರ ಗುಮ್ಮಟಾಕಾರದ್ದಾಗಿದ್ದು ೧೮ ಮೀ.ಗಳಷ್ಟು ಎತ್ತರವಾಗಿದೆ. ಇಲ್ಲಿನ ಕೋಟೆಯ ತೆನೆಗಳಲ್ಲಿ ಕಮಾನುಗಳ ಅವಶೇಷಗಳಿವೆ. ದ್ವಾರದ ಕಂಬಗಳ, ಬಾಗಿಲುವಾಡದ ಕೆತ್ತನೆಯ ಕೆಲಸ ರಮ್ಯವಾಗಿದೆ. ನಾಲ್ಕು ಮಧ್ಯದ ಕಮಾನುಗಳುಳ್ಳ ಈ ಚೌಕಾಕಾರದ ದ್ವಾರದಲ್ಲಿ ಕಮಾನಿನ ಮೂಲೆಗಟ್ಟಿನಲ್ಲಿ ಗಚ್ಚುಗಾರೆಯಲ್ಲಿ ಸುರುಳಿಗಳ ಅಲಂಕರಣವಿದೆ. ದ್ವಾರದ ಬಲಗಡೆ ಗೋಡೆಯ ಮೇಲೆ ಒಬ್ಬ ಅರಸನೋ ಸಾಮಂತನೋ ಲಿಂಗವನ್ನು ಪೂಜಿಸುತ್ತಿರುವ ಅರೆಯುಬ್ಬು ಚಿತ್ರವಿದೆ. ಈ ದ್ವಾರಕ್ಕೂ ಗಾಣಗಿತ್ತಿಯ ದೇವಾಲಯಕ್ಕೂ ನಡುವೆ ಭೀಮನ ದ್ವಾರವೆಂಬ ಭದ್ರವೂ ಸ್ಥೂಲವೂ ಆದ ಕೋಟೆಯ ಇನ್ನೊಂದು ಬಾಗಿಲಿದೆ. ಇದರಲ್ಲಿಯೂ ಸಮಕೋನಗಳಲ್ಲಿ ಎರಡು ಬಾಗುಗಳು, ಎತ್ತರದ ಭಿತ್ತಿಗಳು, ಕಂಬಗಳಿರುವ ಮಂಟಪಗಳು, ಮೊಗಸಾಲೆಗಳು ಇವೆ. ಒಳ ಅಂಗಳದ ಬಲಗಡೆ ೧೩ ಮೀ. ಎತ್ತರದ ಭೀಮನ ವಿಗ್ರಹವಿದೆ. ಪಕ್ಕದ ಗೋಡೆಗಳಲ್ಲಿ ಕೀಚಕನ ವಧೆಗೆ ಸಂಬಂಧಿಸಿದ ಚಿತ್ರವನ್ನು ಕೆತ್ತಿದೆ.

ರಾಣೀವಾಸದ ಸ್ನಾನಗೃಹ ಸಿಂಹಾಸನಮಂಟಪದ ಆಗ್ನೇಯಕ್ಕೆ ಎತ್ತರವಾದ ಗೋಡೆಗಳಿಂದ ಆವೃತವಾದ ಚೌಕಾಕಾರದ ಕಟ್ಟಡ. ಮಧ್ಯೆ ೧೫ ಮೀ. ಚದರದ ೧.೮ ಮೀ. ಆಳದ ಈಜುಕೊಳ. ಅಲ್ಲಲ್ಲಿ ಮುಂದಕ್ಕೆ ಚಾಚಿದ ಮೊಗಸಾಲೆಗಳಿವೆ. ಎರಡೆರಡು ಮೊಗಸಾಲೆಗಳ ನಡುವೆ ಕಿಟಕಿಯಿದೆ. ಇವುಗಳ ಮೇಲ್ಭಾಗದಲ್ಲಿ ವಿವಿಧ ರೂಪಗಳ ಗಚ್ಚುಗಾರೆಯ ಕೆತ್ತನೆಗಳಿವೆ. ಈಜುಕೊಳಕ್ಕೆ ನೀರನ್ನು ಹೊರಗಿನ ಬಾವಿಗಳಿಂದ ಕಾಲುವೆಗಳಿಗೆ ಹರಿಸುವುದರ ಮೂಲಕ ತುಂಬಲಾಗುತ್ತಿತ್ತು. ಮಲಿನವಾದ ನೀರು ಬೇರೆ ಕಾಲುವೆಗಳಿಂದ ಹೊರಗೆ ಹೋಗುವ ಏರ್ಪಾಡಿತ್ತು. ಸಿಂಹಾಸನಮಂಟಪದ ದಕ್ಷಿಣಕ್ಕೆ ದಾರಿಯ ಪಕ್ಕದಲ್ಲಿ ಒಂದು ದೊಡ್ಡ ಕಲ್ಲಿನ ಬಾಗಿಲಿದೆ. ಒಂದೇ ಶಿಲೆಯಿಂದ ಕೆತ್ತಲಾದ ಈ ದ್ವಾರ ಯಾವ ಕಟ್ಟಡಕ್ಕೆ ಸಂಬಂಧಪಟ್ಟುದೆಂಬುದನ್ನು ಹೇಳಲಾಗದು. ಸಮೀಪದಲ್ಲಿಯೇ ದೊಡ್ಡ ತಟಾಕದಂತೆ ಕಾಣುವ ತೊಟ್ಟಿಯಿದೆ. ಗಾರೆಯಿಂದ ಕಟ್ಟಿದ ಈ ತೊಟ್ಟಿಯೊಳಗೆ ನೀರು ಹೋಗಲು, ಒಳಗಿನಿಂದ ನೀರು ಹೊರಗೆ ಹೋಗಲು ಕಲ್ಲಿನ ಕಾಲುವೆಗಳನ್ನು ಅಳವಡಿಸಲಾಗಿದೆ ಇದಕ್ಕೆ ನೈರುತ್ಯದಲ್ಲಿ ಎಂಟು ಮೂಲೆಗಳ ಕಟ್ಟಡವೊಂದಿದ್ದು ಅದರ ಮಧ್ಯೆ ಕಾರಂಜಿಯ ಕಲ್ಲಿನ ತೊಟ್ಟಿಯಿದೆ. ಈ ಕಟ್ಟಡದ ಎರಡೂ ಕಡೆ ಬಾವಿಗಳಿದ್ದು ಬಹುಶಃ ಏತಗಳ ಮೂಲಕ ನೀರನ್ನೆತ್ತಿ ಕಾಲುವೆಗಳ ಮೂಲಕ ಈ ತೊಟ್ಟಿಗೆ ನೀರು ಹರಿಸುತ್ತಿದ್ದಿರಬಹುದು.

ಹಜಾರ ರಾಮಸ್ವಾಮಿ ದೇವಾಲಯದ ವಾಯವ್ಯಕ್ಕೆ ರಾಣೀವಾಸ. ಒಳಗಿನ ಕಟ್ಟಡಗಳನ್ನು ಆವರಿಸಿದಂತೆ ಹೊರಗಡೆ ಎತ್ತರವಾದ ಗೋಡೆಗಳಿವೆ. ಇದಕ್ಕೆ ಪ್ರವೇಶ ಪಶ್ಚಿಮ ದ್ವಾರದಿಂದ. ಗೋಡೆಯ ಕೆಳಭಾಗ ಅಗಲವಾಗಿದ್ದು ಮೇಲೇರಿದಂತೆಲ್ಲ ಕಿರಿದಾಗುತ್ತಾ ಹೋಗಿದೆ. ಈ ಗೋಡೆಯ ಮೂರು ಮೂಲೆಗಳಲ್ಲಿ ಕಾವಲುಗೋಪುರಗಳಿವೆ. ಈಗ ಈ ಕಾವಲುಗೋಪುರಗಳಿಗೆ ಹೊಂದಿದಂತೆ ಹೊಸದಾಗಿ ಗೋಡೆ ಕಟ್ಟಲಾಗಿದೆ. ಮೊದಲಿದ್ದ ಗೋಡೆ ಈಗ ಕಾಣಿಸದು. ಇದನ್ನು ರಾಣೀವಾಸವೆನ್ನಲು ಆಧಾರಗಳಿಲ್ಲ. ಇಲ್ಲಿನ ಕಟ್ಟಡಗಳಾವುವೂ ರಾಣಿಯರ ಅಥವಾ ಅವರ ಸೇವಕಿಯರ ವಾಸಕ್ಕೆ ಯೋಗ್ಯವಾಗಿಲ್ಲ. ಬಹಳ ಹಿಂಜರಿದಂತೆ ಮತ್ತು ಉಬ್ಬಿದಂತೆ ತೋರುವ, ೪೫.೭ಮೀ x ೨೮.೫ಮೀ. ವಿಸ್ತಾರದ ಕಟ್ಟಡದ ವಿಶಾಲವಾದ ತಳಹದಿಯ ಮೂರು ಸಾಲುಗಳು ಲಭ್ಯವಾಗಿವೆ. ಸಮೀಪದಲ್ಲಿಯೇ ಸ್ತ್ರೀ ಕಾವಲುಗಾರರ ಮನೆಗಳೆಂದು ಹೇಳಲಾದ ಕಟ್ಟಡಗಳಿವೆ. ಪೂರ್ವಾಭಿಮುಖವಾಗಿರುವ ಈ ಕಟ್ಟಡದ ದ್ವಾರ ಹೊರತುಪಡಿಸಿದರೆ ಇತರ ಯಾವ ವಿಧವಾದ ಬಾಗಿಲುಗಳಾಗಲೀ ಕಿಟಕಿಗಳಾಗಲೀ ಇವಕ್ಕಿಲ್ಲ. ಅಷ್ಟೇನೂ ಎತ್ತರವಲ್ಲದ ಈ ಕಟ್ಟಡದ ಛಾವಣಿ ಸಮತಟ್ಟಾಗಿದೆ. ಒಳಗಿನ ಅಂಗಳದ ನಡುವೆ ಆಯಾಕಾರದ ಭಾಗವಿದ್ದು ನಾಲ್ಕೂ ಕಡೆ ಕಂಬಗಳಿವೆ. ಎತ್ತರವಾದ ಪೀಠದ ಅಂಚಿನಲ್ಲಿರುವ ಚೌಕಾಕಾರದ ಈ ಕಂಬಗಳಿಂದ ಕಮಾನುಗಳು ಹೊಮ್ಮಿದಂತೆ ಕಾಣುತ್ತವೆ. ಈ ಕಮಾನುಗಳು ಕಂಬಗಳ ಮೊಗಸಾಲೆಯನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿವೆ. ಒಂದೊಂದು ಭಾಗದ ಮೇಲೂ ಗುಮ್ಮಟಾಕಾರದ ಛಾವಣಿ ಇದೆ. ಈ ಗುಮ್ಮಟಗಳು ಅಷ್ಟಕೋನ ಅಥವಾ ಕಮಾನಿನಂತೆ ಬಾಗಿದ ಆಕೃತಿಗಳು. ಕಂಬಗಳ ಮೇಲಿಂದ ಹೊರಟ ಪತ್ರವಿನ್ಯಾಸದ ಕಮಾನುಗಳು ಮಧ್ಯದ ಆಯಾಕಾರದ ಛಾವಣಿಯನ್ನು ಆವರಿಸಿವೆ. ಈ ಕಟ್ಟಡದ ಉಪಯೋಗ ಎಂತಹುದಾಗಿತ್ತು ಎಂದು ಹೇಳಲಾಗದು. ಸ್ತ್ರೀ ಕಾವಲುಗಾರರ ವಾಸಸ್ಥಾನವೆಂದು ಪ್ರತೀತಿಯಿದ್ದರೂ ಗಾಳಿ, ಬೆಳಕುಗಳಿಲ್ಲದ ಇದು ವಾಸಯೋಗ್ಯವಾಗಿಲ್ಲ. ಬಹುಶಃ ಇದೊಂದು ಉಗ್ರಾಣ ಅಥವಾ ಮದ್ದುಗುಂಡುಗಳನ್ನು ಶೇಖರಿಸುವ ಸ್ಥಳವಾಗಿದ್ದಿರಬಹುದು.

ಇಲ್ಲಿನ ಇನ್ನೊಂದು ಪ್ರಮುಖ ಕಟ್ಟಡ ಕಮಲಮಹಲ್. ಚಿತ್ರಾಂಗಿ ಮಹಲ್ ಎಂದು ಕರೆಯಲಾದ ಇದು ಎರಡಂತಸ್ತುಗಳ ಒಂದು ಅಲಂಕಾರಮಂಟಪ. ವಾಸ್ತವಿಕವಾಗಿ ಚೌಕಾಕಾರದ ತಳಪಾಯ ಹೊಂದಿದ್ದರೂ ಪಕ್ಕಗಳೆಲ್ಲ ಹಿಂದಕ್ಕೆ ಸರಿದಿರುವುದರಿಂದ ಇದರ ವಿನ್ಯಾಸ ಕಮಲಾಕಾರವಾಗಿ ಕಂಡು ಬಂದಿದೆ. ಕಲ್ಲಿನ ಅಲಂಕೃತ ಅಧಿಷ್ಠಾನದ ಮೇಲೆ ೨೪ ಚೌಕಾಕಾರದ ಕಂಬಗಳಿದ್ದು ಹಿಂಜರಿದ ಪತ್ರವಿನ್ಯಾಸದ ಕಮಾನುಗಳು ಅವುಗಳನ್ನು ಆಧರಿಸಿವೆ. ಮೊದಲು ಹೊರಭಾಗಗಳಲ್ಲಿ ಮೆದುಗಾರೆಯ ಅಲಂಕಾರಗಳಿದ್ದುವೆಂದು ತೋರುತ್ತದೆ. ಈಗ ನಮಗೆ ಕಾಣುವುದೆಲ್ಲ ಕಮಾನಿನ ಭುಜಕ್ಕೆ ಸೇರಿದ ತ್ರಿಕೋನಾಕಾರದ ಸ್ಥಳಗಳಲ್ಲಿನ ಪದಕಗಳ ಅವಶೇಷಗಳು ಮಾತ್ರ. ಅಗ್ರಭಾಗದಲ್ಲಿ ಸಿಂಹಮುಖಗಳಿವೆ. ಮೊದಲನೆಯ ಅಂತಸ್ತಿನ ಕಪೋತದಲ್ಲಿ ತುಸು ಬಾಗಿದ ಪುಷ್ಪವಿನ್ಯಾಸ. ಹೊರ ಮೂಲೆಗಳಲ್ಲಿ ಹೆಣ್ಣಿನಾಕಾರದ ಯಾಳಿಗಳಿದ್ದುವು. ಈಗ ಅವುಗಳಲ್ಲಿ ಒಂದು ಮಾತ್ರ ಉಳಿದಿದೆ. ಒಳಭಾಗದಲ್ಲಿ ಈಗ ಯಾವ ಅಲಂಕಾರವೂ ಕಂಡುಬರುವುದಿಲ್ಲ. ಕಂಬಗಳನ್ನು ಅಲಂಕೃತ ಕಮಾನುಗಳು ಕೂಡಿಸಿವೆ. ಮೂಲೆಗಳಲ್ಲಿನ ಕೆಳಭಾಗದ ಅಡ್ಡ ಕಮಾನುಗಳು ವಿಚಿತ್ರವಾಗಿವೆ. ಛಾವಣಿಯ ಮಧ್ಯೆ ಕಮಲದ ಮೊಗ್ಗು ಕೆಳಮುಖವಾಗಿದ್ದು ಸುತ್ತಲೂ ಗುಮ್ಮಟಗಳನ್ನು ಉಚಿತ ಪ್ರಮಾಣಗಳಲ್ಲಿ ಕೂಡಿಸಲಾಗಿದೆ. ಕಟ್ಟಡದ ಉತ್ತರ ಭಾಗದಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಮೆಟ್ಟಿಲುಗಳಿವೆ. ಇಲ್ಲಿ ಹಲವಾರು ಮೊಗಸಾಲೆಗಳ, ಹಿಂಜರಿತವುಳ್ಳ ಪತ್ರವಿನ್ಯಾಸದ ಕಿಟಕಿಗಳು. ಇದರ ಛಾವಣಿಯಲ್ಲೂ ಅಷ್ಟಕೋನಾಕಾರದ ಉಬ್ಬಿದ ಗುಮ್ಮಟಗಳ ಮಧ್ಯದಲ್ಲಿ ಛಾವಣಿ ಮೇಲೆ ಎದ್ದು ಒಳಭಾಗಕ್ಕೆ ಬೆಳಕು ಬೀಳುವಂತೆ ಅಳವಡಿಸಿದ ಕಿಟಕಿಗಳುಳ್ಳ ಕಟ್ಟಡವಿದ್ದು ಗಾರೆಯ ಕಮಾನುಗಳು, ಲತಾವಿನ್ಯಾಸಗಳು, ಪುಷ್ಪಬೋದಿಗೆಗಳು ಮತ್ತು ವಿಗ್ರಹಗಳನ್ನಿಡಲು ಗೂಡುಗಳು ಇವೆ. ಮಧ್ಯದಲ್ಲಿ ಕೆಳಮುಖದ ಕಮಲದ ಗುಮ್ಮಟ. ಕಟ್ಟಡದ ಮೇಲೆ ಪಿರಮಿಡ್ಡಿನಾಕಾರದ ಭಿನ್ನಗಾತ್ರದ ಒಂಬತ್ತು ಶಿಖರಗಳು. ಇವು ಒಂದೊಂದೂ ತುಸು ಬಾಗಿದ ಕಪೋತಗಳಾಗಿ ಒಂದರ ಮೇಲೊಂದು ಕಿರಿದಾಗುತ್ತಾ ಹೋಗಿವೆ. ಮೇಲ್ಭಾಗದಲ್ಲಿ ಅರೆಗೋಳವಿ ಮಾಡಿದ ಗುಮ್ಮಟಾಕಾರದ ಶಿಖರ. ಒಟ್ಟು ಕಟ್ಟಡವನ್ನು ಯಾವ ದಿಕ್ಕಿನಿಂದ ನೋಡಿದರೂ ಒಂದೇ ರೀತಿಯಲ್ಲಿ ಕಾಣಿಸುತ್ತದೆ.

ಹನ್ನೊಂದು ಲಾಯದ ಕೊಠಡಿಗಳುಳ್ಳ ಗಜಶಾಲೆ ಈ ಕಟ್ಟಡದ ಸಮೀಪದಲ್ಲಿದೆ. ಆನೆಗಳನ್ನು ಕಟ್ಟಲು ಒಳಭಾಗದಲ್ಲಿ ಯಾವ ವ್ಯವಸ್ಥೆಯೂ ಇಲ್ಲದ ಕಾರಣ ಇದನ್ನು ಗಜಶಾಲೆ ಎಂದು ಹೇಳುವುದನ್ನು ಕೆಲವರು ಒಪ್ಪಿಲ್ಲ. ಆದರೆ ಕೊಠಡಿಯ ಮೇಲಿಂದ ಕಬ್ಬಿಣದ ಸರಪಳಿಗಳನ್ನು ತೂಗಿಬಿಟ್ಟು ಅದರಿಂದ ಆನೆಯನ್ನು ಕಟ್ಟುತ್ತಿದ್ದರೆಂಬ ರಜಾಕನ ಹೇಳಿಕೆಯನ್ನು ಗಮನಿಸಿದರೆ ಇದು ಗಜಶಾಲೆಯೇ ಆಗಿದ್ದಿರಬಹುದೆನಿಸುತ್ತದೆ. ಆದರೆ ರಜಾಕ್ ಗಜಶಾಲೆಯು ದಂಡನಾಯಕನ ಗೃಹದ ಮುಂದಿದ್ದಂತೆ ಸೂಚಿಸಿದ್ದಾನೆ. ಈ ಕೊಠಡಿಗಳು ಒಂದಕ್ಕೊಂದು ಮಧ್ಯದ ಬಾಗಿಲಿನಿಂದ ಹೊಂದಿಕೊಂಡಿದ್ದಿತು. ಒಂದೊಂದು ಲಾಯದ ಮೇಲೂ ಗುಮ್ಮಟಾಕಾರ, ಅಷ್ಟಕೋನಾಕಾರ, ಕೊಳವೆಯಿಂದ ಊದಿ ಉಬ್ಬಿಸಿದಂತೆ ಕಾಣುವ ಉಬ್ಬಿದ ಪಟ್ಟಿಯುಳ್ಳ ಭಿನ್ನ ಭಿನ್ನ ಆಕಾರದ ಶಿಖರಗಳಿವೆ. ಒಂದೊಂದು ಲಾಯದ ಕೊಠಡಿಯ ಮಧ್ಯದ ಭಾಗದ ಗೋಡೆಯಲ್ಲಿ ಕಮಾನುಗೂಡುಗಳಿವೆ. ಲಾಯದ ದ್ವಾರ ಸಹ ಕಮಾನಾಕಾರದ್ದೇ. ಒಳಗಿನ ಛಾವಣಿಯಲ್ಲಿ ಕಮಲದ ಅಲಂಕರಣ. ಈ ಲಾಯದ ಕೊಠಡಿಗಳ ಮಧ್ಯದಲ್ಲಿ ಮೇಲಿನ ಅಂತಸ್ತಿಗೆ ಹೋಗಲು ಮೆಟ್ಟಿಲುಗಳಿವೆ. ಮೇಲುಗಡೆ ಚೌಕಾಕಾರದ ತಿರುಗು ಬುರುಜಿದೆ. ಇದರ ಹೊರ ಮೈಯ್ಯಲ್ಲಿ ಸಣ್ಣ ಕಂಬಗಳನ್ನು ಕೂಡಿಸಲಾಗಿದೆ. ಇದರ ಶಿಖರ ಈಗ ಬಿದ್ದು ಹೋಗಿದೆ.

ಮಹಾನವಮಿದಿಬ್ಬ ಹಂಪೆಯ ಪ್ರಸಿದ್ಧ ಅವಶೇಷಗಳಲ್ಲೊಂದು. ಪೋರ್ಚುಗೀಸ್ ಯಾತ್ರಿಕನಾದ ಪೇ ಇದನ್ನು ವಿಜಯಮಂದಿರವೆಂದು ಕರೆದಿದ್ದಾನೆ. ಸಿಂಹಾಸನಮಂಟಪವೆಂದೂ ಇದನ್ನು ವರ್ಣಿಸಲಾಗಿದೆ. ಕೃಷ್ಣದೇವರಾಯನ ಕಳಿಂಗದ ದಂಡಯಾತ್ರೆ ಯಶಸ್ವಿಯಾದ ಬಳಿಕ ಆ ವಿಜಯೋತ್ಸವವನ್ನು ಆಚರಿಸಲೆಂದೇ ಇದನ್ನು ಕಟ್ಟಲಾಯಿತೆಂದು ಹೇಳಿದೆ. ಈಗ ಕಾಣುವುದು ಮೂರು ಸ್ತರಗಳಲ್ಲಿನ ವಿಶಾಲವಾದ ವೇದಿಕೆ ಮಾತ್ರ. ಒಂದೊಂದು ಸ್ತರದ ಅಂಚಿನಲ್ಲೂ ಗ್ರಾನೈಟ್‌ಕಲ್ಲನ್ನು ಅಳವಡಿಸಿ ಆ ಕಲ್ಲುಗಳಲ್ಲಿ ಅರಸನು ಸುಖಸಂಕಥಾವಿನೋದದಲ್ಲಿ ಆಸ್ಥಾನದಲ್ಲಿ ಮಂಡಿಸಿರುವ, ಮಂಡಲಿಕರು, ಸಾಮಂತರು, ವಿದೇಶಗಳ (ಅರೇಬಿಯಾ, ಇರಾನ್) ರಾಯಭಾರಿಗಳು ಅರಸನಿಗೆ ಗೌರವ ಕಾಣಿಕೆಗಳನ್ನು ಸಲ್ಲಿಸುತ್ತಿರುವ ದೃಶ್ಯಗಳನ್ನೂ, ಆನೆ, ಕುದುರೆ, ಕಾಲಾಳುಗಳ ಮೆರವಣಿಗೆಯ, ನೃತ್ಯಗಳ, ಸಂಗೀತದ ಚಿತ್ರಗಳನ್ನೂ ಅದ್ಭುತವಾಗಿ ಕೊರೆಯಲಾಗಿದೆ. ಉತ್ತರಾಭಿಮುಖವಾಗಿರುವ ಈ ವೇದಿಕೆಯ ತಳಭಾಗ ಸುಮಾರು ೪೦ ಮೀ. ಚದರವಾಗಿದ್ದು ಮೇಲಿನ ಸ್ತರ ೨೪ ಚ.ಮೀ.ಗಳಷ್ಟಿದೆ. ಒಟ್ಟು ಎತ್ತರ ಸುಮಾರು ೧೨ ಮೀ.ಗಳು. ಮೇಲೆ ಹೋಗಲು ಪಶ್ಚಿಮ ಭಾಗದಲ್ಲಿ ಮೆಟ್ಟಿಲುಗಳಿವೆ. ಉತ್ಸವಸಮಾರಂಭಗಳಲ್ಲಿ ಅರಸನು ಈ ಮೆಟ್ಟಿಲುಗಳನ್ನೇರಿ ವೇದಿಕೆಗೆ ಬರಬೇಕಾಗಿತ್ತು. ವೇದಿಕೆಯಿಂದ ಹೊಮ್ಮಿದಂತೆ ತೋರುವ ಒಂದು ಸಣ್ಣ ಕೊಠಡಿ ಪೂರ್ವದ ಕಡೆ ಇದೆ. ಇದರೊಳಗಿಳಿದು ಮೇಲೇರಿ ಬರಲು ಮೆಟ್ಟಿಲುಗಳಿವೆ. ಒಳಗಿನ ಗೋಡೆಯ ಮೇಲೆ ಪ್ರಾಣಿಗಳ, ವಿದೂಷಕರ ಶಿಲ್ಪಗಳ ಪಟ್ಟಿಗಳಿವೆ. ಹೆಣೆದ ಜಡೆಯ ಶಂಕುವಿನಾಕಾರದ ಟೋಪಿಗಳನ್ನು ಧರಿಸಿದಂತೆ ಇಲ್ಲಿ ಚಿತ್ರಿತರಾದ ಕೆಲವರು ಚೀನಾ ದೇಶದ ರಾಯಭಾರಿಗಳೆಂಬುದೊಂದು

ಊಹೆ. ಪಂಚಪಾಂಡವರ ಚಿತ್ರಗಳು ಇಲ್ಲಿವೆ ಎಂದೂ ಹೇಳಲಾಗಿದೆ. ಬಹುಶಃ ಇವೆಲ್ಲ ವೀರಯೋಧರ ಚಿತ್ರಗಳಾಗಿರಬಹುದು. ಈ ದಿಬ್ಬದ ಮೇಲೆ ಕಂಬಗಳನ್ನು ಕೂಡಿಸಿ ವರ್ಣರಂಜಿತ ಮಂಟಪಗಳನ್ನು ನಿರ್ಮಿಸಲಾಗಿತ್ತೆಂದು ತೋರುತ್ತದೆ. ಅವೆಲ್ಲ ಬಹುಶಃ ಮರಗೆಲಸಗಳಾಗಿದ್ದು ಈಗ ದಿಬ್ಬದ ವೇದಿಕೆ ಹೊರತು ಇನ್ನೇನೂ ಉಳಿದಿಲ್ಲ.

ಸಮೀಪದಲ್ಲಿ ಅರಮನೆಯದೆಂದು ಹೇಳಲಾಗುವ ೨೪x೧೮x೧೫ ಮೀ. ಅಳತೆಯ ಅಸ್ತಿಭಾರವಿದೆ. ಇದಕ್ಕೆ ರಾಜಧಾನಿಯಲ್ಲಿನ ಉತ್ಸವಗಳ, ಗಜ, ತುರಗ, ಪದಾತಿಸಮೂಹದ ಸುಂದರವಾಗಿ ಕೆತ್ತಲಾದ ಹಸಿರು ಶಿಲೆಯನ್ನು ಜೋಡಿಸಲಾಗಿದೆ. ಒಳಭಾಗದ ಗೋಡೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟ್ಟುವೆಂಬುದು ಭಿನ್ನ ಅವಶೇಷಗಳಿಂದ ತಿಳಿದು ಬರುವ ಅಂಶ. ಇದಕ್ಕೆ ವಾಯವ್ಯದಲ್ಲಿ ಭೂಮಿಯಲ್ಲಿ ಸುರಂಗವನ್ನು ಕೊರೆದು ಕಟ್ಟಿದ ರಹಸ್ಯಮಂದಿರವಿದೆ. ಚೌಕಾಕಾರದ ಕೊಠಡಿಯ ಸುತ್ತಲೂ ಕಂಬಗಳುಳ್ಳ ಮುಚ್ಚಿದ ಪ್ರದಕ್ಷಿಣಾಪಥವಿದೆ. ಒಳಗೆ ಇಳಿದು ಬರಲು ಸೋಪಾನಗಳಿವೆ. ಗುಪ್ತಸಮಾಲೋಚನೆಗಳಿಗಾಗಿ ಇದನ್ನು ಬಳಸಲಾಗುತ್ತಿತ್ತೆಂಬುದು ಪ್ರತೀತಿ. ಇದರ ಸಮೀಪದಲ್ಲಿ ಇತ್ತೀಚೆಗೆ ಹಸಿರು ಶಿಲೆಯಲ್ಲಿ ಕಡೆದ ಭಿನ್ನವಾದ ವೇಣುಗೋಪಾಲನ ವಿಗ್ರಹ ಹಾಗೂ ಮೆಟ್ಟಿಲುಗಳುಳ್ಳ ಯಾಳಿಯ ಕಟಾಂಜನ ದೊರತಿದ್ದು ಬಹುಶಃ ಇದೊಂದು ದೇವಾಲಯವಾಗಿದ್ದಿರಬಹುದೆಂಬ ಊಹೆಗೆ ಇದು ಎಡೆ ಮಾಡುತ್ತದೆ.

ಇದರ ಸಮೀಪದಲ್ಲಿರುವ ಆಸ್ಥಾನಮಂಟಪ ವಿಜಯನಗರದಲ್ಲಿ ಲಭ್ಯವಿರುವ ಅತಿ ಎತ್ತರದ ಕಟ್ಟಡವೆಂದು ಅಬ್ದುಲ್ ರಜಾಕ್ ಹೇಳಿದ್ದಾನೆ. ಇದೊಂದು ಸಭಾಮಂಟಪ. ಈಗ ಕಾಣುವುದು ಕೇವಲ ತಳಪಾಯ. ಮರದ ಕಂಬಗಳನ್ನು ನಿಲ್ಲಿಸಿದ್ದರೆನ್ನಲು ಕುರುಹಾಗಿ ಸಾಲುಸಾಲಾಗಿ ಕಂಬಗಳನ್ನು ನೆಡಲು ಬೇಕಾದ ಕುಳಿಗಳುಳ್ಳ ಕಲ್ಲಿನ ಪೀಠಗಳು ಈಗಲೂ ಇವೆ. ಇದು ನೂರು ಕಂಬಗಳ ಮಂಟಪವಾಗಿದ್ದಿರಬೇಕು. ಪೂರ್ವ–ಪಶ್ಚಿಮ ತುದಿಗಳಲ್ಲಿ ಮೇಲೇರಿ ಬರಲು ಮೆಟ್ಟಿಲುಗಳಿವೆ. ಉತ್ತರಾಭಿಮುಖವಾಗಿರುವ ಈ ಕಟ್ಟಡದ ಹಿಂಬದಿಯಲ್ಲಿ ಈಗಿನ ತಳಪಾಯಕ್ಕಿಂತ ४.೫ ಮೀ. ಎತ್ತರದ ಸೋಪಾನಗಳಿವೆ. ಇದು ಮಂಟಪದ ಮೇಲಂತಸ್ತಿಗೆ ರಾಣೀವಾಸದ ಸ್ತ್ರೀಯರು ಹೋಗಲು ಮಾಡಿದ ಏರ್ಪಾಡಾಗಿರಬಹುದು. ಈ ಮಂಟಪದ ಮುಂದೆ ಏಕಶಿಲೆಯಲ್ಲಿ ಮಾಡಲಾದ ಮೂರು ಮೀ. ಆಳ, ೧೨.೫ ಮೀ. ಉದ್ದದ ಕಲ್ಲಿನ ತೊಟ್ಟಿ ಇದೆ. ಸಿಂಹಾಸನಮಂಟಪದ ಬಳಿ ಕಲ್ಲಿನ ತೆರೆದ ಕಾಲುವೆಗಳನ್ನು ಕಾಣಬಹುದು. ರಾಜಧಾನಿಗೆ ನೀರು ಸರಬರಾಜು ಮಾಡಲು ಮಾಡಿದ್ದ ವಿಶಿಷ್ಟ ಏರ್ಪಾಡಿಗೆ ಇವು ಸಾಕ್ಷಿ. ಹಲವು ಕಡೆ ಇಂತಹ ಕಾಲುವೆಗಳನ್ನು ಎತ್ತರದ ಕಲ್ಲಿನ ಕಂಬಗಳ ಮೇಲೆ ನಿಲ್ಲಿಸಲಾಗಿತ್ತು. ನಗರದ ಸುತ್ತಲೂ ಈ ವಿಧದ ಕಾಲುವೆಗಳನ್ನು ಈಗಲೂ ಭಗ್ನಾವಸ್ಥೆಯಲ್ಲಿ ಕಾಣಬಹುದು.

ಪಾತಾಳ ಶಿವಾಲಯಕ್ಕೆ ಪೂರ್ವದಲ್ಲಿ ದಣಾಯಕ (ದಂಡನಾಯಕ)ನ ಕೋಟೆ ಎಂಬ ಹೆಸರಿನ ವಿಶಾಲವಾದ ಆವರಣವಿದೆ. ಸುತ್ತಲೂ ಪ್ರಾಕಾರವಿರುವ ಈ ಕೋಟೆಯೊಳಗೆ ಬಹುಶಃ ಹಲವಾರು ಸಣ್ಣ ಕಟ್ಟಡಗಳಿದ್ದು ಈಗ ಅವುಗಳ ಅವಶೇಷಗಳಾಗಿ ಗೋಡೆಗಳ ಕೆಲವು ಭಾಗಗಳು ಮಾತ್ರ ಉಳಿದಿವೆ. ಈಶಾನ್ಯದ ಮೂಲೆಯಲ್ಲಿ ಮೂರು ಸ್ತರಗಳಲ್ಲಿನ ಅಲಂಕೃತ ಅಧಿಷ್ಠಾನವನ್ನು ಕಾಣಬಹುದು. ಈ ಸ್ತರಗಳು ಎತ್ತರವಾದ ವೇದಿಕೆಗಳಂತಿದ್ದು ಅವುಗಳನ್ನು ಸಭಾಮಂಟಪಗಳಾಗಿ ಮಾರ್ಪಡಿಸಲು ಸಾಧ್ಯವಾಗುತ್ತಿತ್ತು. ನೈಋತ್ಯದ ಮೂಲೆಯಲ್ಲಿ ಮೂರು ಕಡೆಗಳಲ್ಲಿ ಮುಚ್ಚಿದ ಎತ್ತರದ ಕಂಬಗಳನ್ನುಳ್ಳ ಅಂಗಳವೊಂದಿದೆ. ಚೌಕಾಕಾರದ ಕಂಬಗಳಿಂದ ಕಮಾನುಗಳು ಹೊಮ್ಮಿವೆ. ಛಾವಣಿಯಲ್ಲಿ ತಲೆಕೆಳಗಾದ ಕಮಲದ ಒಂಬತ್ತು ಗುಮ್ಮಟಗಳಿವೆ. ಇಮ್ಮಡಿ ದೇವರಾಯನು ಸಮರ್ಥ ಅಶ್ವಾರೋಹಿಗಳಾದ ಮಹಮದೀಯರನ್ನು ಸೈನ್ಯದಲ್ಲಿ ಸೇರಿಸಿಕೊಂಡು ಅವರಿಗಾಗಿ ಮಸೀದಿಯನ್ನು ಕಟ್ಟಿಸಿದನೆಂದು ಫಿರಿಸ್ತಾನ ಹೇಳಿಕೆ. ಈ ಅಂಗಳದಂತಹ ಕಟ್ಟಡವೇ ಆ ಮಸೀದಿಯೆಂದು ಹಲವರ ಅಭಿಪ್ರಾಯ. ವಾಸ್ತವವಾಗಿ ಕಮಾನಿನ ಶೈಲಿಯನ್ನು ಹೊರತುಪಡಿಸಿದರೆ ಮಸೀದಿಗಳಿಗಿರಬೇಕಾದ ಯಾವ ಲಕ್ಷಣವೂ ಇಲ್ಲಿ ಕಾಣಬರದು. ತಳಪಾಯದಲ್ಲಿ ಉದುರಿಹೋದ ಗಾರೆಯ ಮೂಲಕ ಹಿಂದೂ ಶಿಲ್ಪಗಳು ಕಾಣಿಸಿಕೊಂಡಿವೆ. ಆದ್ದರಿಂದ ಇದನ್ನು ಮಸೀದಿ ಎನ್ನಲಾಗದು.

ಅಚ್ಯುತರಾಯನ ಗುಡಿಗೆ ಸಮೀಪದಲ್ಲಿ ತುಂಗಭದ್ರಾ ನದಿಯ ತೀರದಲ್ಲಿರುವ ತುಲಾಭಾರ ಸ್ತಂಭ ಸಹ ಇಲ್ಲಿ ಉಲ್ಲೇಖನಾರ್ಹ. ಸುಮಾರು ೧೨ ಅಡಿಗಳ ಅಂತರದಲ್ಲಿ ಎರಡು ಕಡೆ ಸುಮಾರು ೧೫ ಅಡಿಗಳಷ್ಟು ಎತ್ತರವಾದ ಕಂಬಗಳನ್ನು ನಿಲ್ಲಿಸಿ ಅವುಗಳ ತುದಿಗಳ ಮೇಲೆ ತೊಲೆಯೊಂದನ್ನು ಕೂಡಿಸಲಾಗಿದ್ದು ಈ ತೊಲೆಯ ಕೆಳಗೆ ತಕ್ಕಡಿಗಳನ್ನು ತೂಗು ಹಾಕಲು ಮೂರು ಉಂಗುರಗಳಿವೆ. ಈ ಕಲ್ಲಿನ ಕಂಬಗಳು ಪೂರ್ಣಕುಂಭ, ಪುಷ್ಪಹಾರಗಳಿಂದ ಅಲಂಕೃತವಾಗಿವೆ. ಒಂದು ಕುಂಭದ ಕೆಳಗೆ ಮಕುಟಧಾರಿಯಾದ ಅರಸನ ಹಾಗೂ ಆತನ ಇಬ್ಬರು ಅರಸಿಯರ ಉಬ್ಬುಚಿತ್ರಗಳಿವೆ. ಇವನ್ನು ಕೃಷ್ಣದೇವರಾಯ ಮತ್ತು ಈತನ ಇಬ್ಬರು ಪತ್ನಿಯರ ಚಿತ್ರಗಳೆಂದು ಹೇಳಲಾಗಿದೆ. ತುಲಾಪುರುಷ ಮಹಾದಾನ ಈ ಅರಸರು ಮಾಡುತ್ತಿದ್ದ ದಾನಗಳಲ್ಲಿ ಒಂದು. ತಕ್ಕಡಿಯ ಒಂದು ಕಡೆ

ಅರಸನನ್ನು ಕೂಡಿಸಿ ಮತ್ತೊಂದರಲ್ಲಿ ಅವನ ತೂಕದ ಸುವರ್ಣ, ವಜ್ರ ವೈಡೂರ್ಯಗಳನ್ನು ತೂಗಿ ದಾನ ಮಾಡುವ ಸಮಾರಂಭಕ್ಕಾಗಿ ಈ ತುಲಾಭಾರಸ್ತಂಭವನ್ನು ನಿಲ್ಲಿಸಲಾಗಿತ್ತೆಂದು ತೋರುತ್ತದೆ.

ಇದುವರೆವಿಗೂ ಭಾರತದ ಹಾಗೂ ಅದರ ಹಿನ್ನೆಲೆಯಲ್ಲಿ ಕರ್ನಾಟಕದ ಲೌಕಿಕ ವಾಸ್ತುಶಿಲ್ಪವನ್ನು ಕುರಿತು ವಿವೇಚಿಸಲಾಗಿದೆ. ಇದರಿಂದ ಒಂದೆರಡು ಅಂಶಗಳು ತಿಳಿದು ಬರುತ್ತವೆ. ನಮ್ಮ ಜನ ಲೌಕಿಕವಾಸ್ತುಶಿಲ್ಪಕ್ಕೆ ವಿಶೇಷ ಪ್ರಾಶಸ್ತ್ಯ ನೀಡುತ್ತಿರಲಿಲ್ಲ ವೆಂಬುದೊಂದು. ಮನೆಗಳಿಗಾಗಿ, ಇತರ ಕಟ್ಟಡಗಳಿಗಾಗಿ ಮರ, ಮುಟ್ಟುಗಳನ್ನು ಬಳಸಿದರು. ತಳಹದಿಗೆ ಮಾತ್ರ ಕಲ್ಲನ್ನು ಉಪಯೋಗಿಸುತ್ತಿದ್ದರು. ಆದರೂ ಅನುಕೂಲ ಹಾಗೂ ಸೌಂದರ್ಯಗಳನ್ನು ಮೇಳೈಸಿ ವಿಶೇಷವಾದ ಶೈಲಿಯನ್ನು ಕಸುಬುದಾರರು ಯೋಜಿಸಿದರು. ಆ ಶೈಲಿಗಳನ್ನೇ ಕ್ರಮೇಣ ಕಲ್ಲಿನ ಮಾಧ್ಯಮಕ್ಕೂ ಅಳವಡಿಸಲಾಯಿತು. ಕುಶಲತೆ ಮುಂದುವರಿದಂತೆಲ್ಲಾ ಹೊಸ ಹೊಸ ವಿನ್ಯಾಸಗಳನ್ನು ರೂಪಿಸಿದರು. ಕ್ರಮೇಣ ಇವರು ರೂಪಿಸಿದುದನ್ನೇ ಹೆಚ್ಚು ವೈಜ್ಞಾನಿಕವಾಗಿರಿಸಲು ವಾಸ್ತುಶಿಲ್ಪಗ್ರಂಥಗಳು ಬರೆಯಲ್ಪಟ್ಟವು. ಒಂದು ಕಡೆ ಪ್ರಯೋಗ ಮತ್ತೊಂದೆಡೆ ತಾತ್ವಿಕ ಸಿದ್ಧಾಂತಗಳ ನಿರೂಪಣೆಗಳು ಒಟ್ಟೊಟ್ಟಿಗೆ ನಡೆದವು. ತಮಗೆ ದೊರೆತ ಶಿಲೆಯ ಗಡಸು ಯಾ ಮೃದುತ್ವ, ಗಾತ್ರ, ಇತ್ಯಾದಿಗಳನ್ನವಲಂಬಿಸಿ ಶೈಲಿಗಳಲ್ಲೂ ಸೂಕ್ತ ಮಾರ್ಪಾಟುಗಳನ್ನು ಮಾಡಿಕೊಂಡರು. ಭಿನ್ನ ಭಿನ್ನ ಪ್ರದೇಶಗಳಲ್ಲಿ ಭಿನ್ನ ಭಿನ್ನ ಶೈಲಿಗಳು ಬೆಳೆದವು. ಭಾರತದ ವಾಸ್ತುಶಿಲ್ಪದ ಇತಿಹಾಸದಲ್ಲಿ ನಾಗರ, ದ್ರಾವಿಡ, ವೇಸರ ಎಂಬ ಮೂರು ಪ್ರಮುಖ ಶೈಲಿಗಳನ್ನು ಕಾಣುತ್ತೇವೆ. ಇದಲ್ಲದೆ ಇತರ ವಿಭಾಗಗಳೂ ಉಂಟು. ಇವುಗಳ ಪ್ರಸ್ತಾಪ ಮುಂದೆ ಮಾಡಲಾಗುತ್ತದೆ.

ದೇವಾಲಯಗಳು ಭಾರತದಲ್ಲಿ ಧಾರ್ಮಿಕ, ಸಾಮಾಜಿಕ ಕೇಂದ್ರಗಳಾಗಿ ಜನಜೀವನದಲ್ಲಿ ಪ್ರಮುಖ ಪಾತ್ರ ವಹಿಸಿವೆ. ಇವುಗಳು ಆಚಂದ್ರಾರ್ಕವಾಗಿ ಉಳಿಯುವಂತೆ ಇವುಗಳನ್ನು ಕ್ರಮೇಣ ಕಲ್ಲಿನಲ್ಲಿಯೇ ಕಟ್ಟಿದರು. ಆರಂಭದಲ್ಲಿ ದೇವರ, ಅವತಾರ ಪುರುಷರ ಶಿಲ್ಪಗಳನ್ನು ಗುಹೆಗಳಲ್ಲಿ ಕೆತ್ತುತ್ತಿದ್ದರು. ಕ್ರಮೇಣ ಕಲ್ಲನ್ನು ಒಡೆದು ದೇವಾಗಾರಗಳನ್ನೂ ಕಲ್ಲಿನ ಕಟ್ಟಡಗಳನ್ನೂ ಕಟ್ಟುವ ಸಂಪ್ರದಾಯ ಬೆಳೆಯಿತು. ಕರ್ನಾಟಕದಲ್ಲಿ ಇವುಗಳ ಬೆಳವಣಿಗೆಯನ್ನು ಇನ್ನು ಮುಂದೆ ಗಮನಿಸೋಣ.

❐

ಪಾರಿಭಾಷಿಕ ಪದಗಳು

ದೇವಾಲಯ–ಮಾನವದೇಹ : ಸಮೀಕರಣ

ದೇವಾಲಯವನ್ನು ಮಾನವದೇಹದೊಂದಿಗೆ ಸಮೀಕರಿಸಲಾಗಿದೆ. ಎಂತಲೇ ದೇವಾಲಯದ ಕಟ್ಟಡದ ಹಲವಾರು ಭಾಗಗಳಿಗೆ ದೇಹದ ವಿವಿಧ ಅಂಗಗಳ – ಪಾದ, ಚರಣ, ಅಂಘ್ರಿ, ಜಂಘ, ಕಟಿ, ಕುಕ್ಷಿ, ಗ್ರೀವ, ಕಂಠ, ಶಿಖರ, ಶಿರ, ಮಸ್ತಕ, ಮುಖ, ವಕ್ತ್ರ, ನಾಸಿಕ ಇತ್ಯಾದಿ – ಹೆಸರುಗಳನ್ನು ಕೊಡಲಾಗಿದೆ.

ನಿವೇಶನದ ಆಯ್ಕೆ

ದೇವಾಲಯವನ್ನು ಕಟ್ಟುವ ಮೊದಲು ಅದಕ್ಕೆ ಉತ್ತಮವಾದ ನಿವೇಶನವನ್ನು ಆಯ್ಕೆ ಮಾಡಬೇಕಾಗುತ್ತಿತ್ತು. ವಾಸ್ತುಕರ್ಮ ಎಂದರೆ ಕಟ್ಟುವ ಕಾರ್ಯ. ವಾಸ್ತುವಿದ್ಯೆ ಎಂಬುದು ಇದಕ್ಕೆ ಸಂಬಂಧಿಸಿದ ನಿಯಮಗಳನ್ನೊಳಗೊಂಡ ಶಾಸ್ತ್ರ ಮಾತ್ರ. ವಾಸ್ತುಕರ್ಮ ಎಂಬುದರಲ್ಲಿ ದೇವಾಲಯಗಳನ್ನು, ಅರಮನೆಗಳನ್ನು, ಮನೆ–ಮಠಗಳನ್ನು, ಕೋಟೆ–ಕೊತ್ತಲಗಳನ್ನು ವೈಜ್ಞಾನಿಕವಾಗಿ ಕಟ್ಟುವುದಕ್ಕೆ ಸಂಬಂಧಿಸಿದ ವಿವರಗಳಿರುತ್ತವೆ. ಕಟ್ಟಿದ ಕಟ್ಟಡ ದೃಢವಾಗಿರಬೇಕೆಂಬುದು ಮೊದಲ ಹಾಗೂ ಮಹತ್ತರವಾದ ಆಶಯ, ಅದಕ್ಕಾಗಿ ಸೂಕ್ತವಾದ ನಿವೇಶನವನ್ನು ಆಯ್ಕೆ ಮಾಡುವುದು ವಾಸ್ತುಕರ್ಮದ ಮೊದಲ ಹಂತ.

ಪೃಥು ಎಂಬಾತ ರಾಜಪದವಿಗೇರಿಸಲ್ಪಟ್ಟ ಮೊದಲ ಮಾನವ. ಈತ ಭೂಮಿಯಲ್ಲಿ ಸುಲಭ ಸಂಚಾರ ವ್ಯವಸ್ಥೆಗೆ ಅನುಕೂಲವಾಗಿರಲೆಂದು ಬೆಟ್ಟಗುಡ್ಡಗಳಿಂದ ಕೂಡಿದ್ದ ಪೃಥ್ವಿಯನ್ನು ಬಾಣಪ್ರಯೋಗದಿಂದ ಸಮಗೊಳಿಸಲುದ್ಯುಕ್ತನಾದ. ಹೆದರಿದ ಪೃಥ್ವಿಯು ಆಗ ಗೋವಿನ ರೂಪ ತಾಳಿ ಬ್ರಹ್ಮನ ಬಳಿ ಓಡಿ ಆತನ ಮೊರೆ ಹೊಕ್ಕಿತಂತೆ. ಪೃಥು ಬ್ರಹ್ಮನ ಬಳಿಗೈದಿದಾಗ ಆತ ಇವರೀರ್ವರ ನಡುವಣ ಭಿನ್ನಾಭಿಪ್ರಾಯಗಳನ್ನು ದೂರಮಾಡಿ ಪೃಥುವನ್ನು ಪೃಥ್ವಿಯ ರಕ್ಷಕನಾಗಿರುವಂತೆ ಮಾಡಿದ. ಅದಕ್ಕೆ ಬದ್ಧಳಾದ ಪೃಥ್ವಿಯು ಆತನಿಗೆ ಧಾನ್ಯಗಳನ್ನು ಬಿತ್ತಿ ಬೆಳೆಯಲು ಹಾಗೂ ಮನುಷ್ಯರ ಹಾಗೂ ದೇವರ ಪುರಗಳನ್ನು ಕಟ್ಟಲು ಭೂಮಿಯನ್ನು ಸಮತಟ್ಟಾಗಿಸಿ ಸಹಕರಿಸಿದಳಂತೆ. ಆಗಲೇ ಭೂಮಿಯ ಮೇಲೆ ದೇವಾಯತನಗಳನ್ನು ಕಟ್ಟುವುದು ಸಾಧ್ಯವಾಯಿತಂತೆ. ಇದು ಭೋಜನ 'ಸಮರಾಂಗಣ ಸೂತ್ರಧಾರ'ದಲ್ಲೂ ಶತಪಥಬ್ರಾಹ್ಮಣ, ಸಾಂಖ್ಯಾಯನಗೃಹ್ಯಸೂತ್ರಗಳಲ್ಲಿಯೂ ಇತರ ವಿಷ್ಣು ಪುರಾಣದಂತಹ ಕೆಲವು ಕೃತಿಗಳಲ್ಲೂ ಸ್ವಲ್ಪಮಟ್ಟಿಗೆ ಭಿನ್ನರೂಪಗಳೊಂದಿಗೆ ಕಾಣಿಸಿಕೊಂಡಿರುವ ಆಖ್ಯಾಯಿಕೆ.

ನಿವೇಶನದ ಆಯ್ಕೆಗೆ ಮುನ್ನ ಭೂಮಿಯನ್ನು ಕೆಲವು ಪರೀಕ್ಷೆಗಳಿಗೊಳಪಡಿಸುವುದು ಶಾಸ್ತ್ರೋಕ್ತ ಪದ್ಧತಿ. ಭೂಮಿಯಲ್ಲಿ ಒಂದು ಕಡೆ ಕುಳಿ ತೋಡಿ ಹೊರತೆಗೆದ ಮಣ್ಣನ್ನೋ ನೀರನ್ನೋ ಅದರಲ್ಲಿ ಒಂದು ರಾತ್ರಿ ತುಂಬಬೇಕು. ಮರುದಿನ ಆ ಮಣ್ಣು ಯಾ ನೀರು ಉಕ್ಕಿರುತ್ತದೆ, ಕುಗ್ಗಿರುತ್ತದೆ. ಅಥವಾ ಅದೇ ಮಟ್ಟದಲ್ಲಿರುತ್ತದೆ. ಅದರನ್ವಯ ಭೂಮಿ ಉತ್ತಮವೋ ಅಧಮವೋ ಎಂಬುದು ತಿಳಿಯುತ್ತದೆ. ಇಂತಹ ಹಲವಾರು ಪರೀಕ್ಷೆಗಳನ್ನು 'ಬೃಹತ್ಸಂಹಿತೆ', 'ಮತ್ಸ್ಯಪುರಾಣ' ಮುಂತಾದವುಗಳಲ್ಲಿ ವಿವರಿಸಿದೆ. ಉತ್ತಮವೆಂದು ಆಯ್ಕೆ ಮಾಡಲಾದ ನಿವೇಶನವನ್ನು ಒಮ್ಮೆ ಸಮತಟ್ಟಾಗಿ ಉತ್ತು ಬಿಡಲಾಗುತ್ತದೆ. ಆ ನಂತರ ಅದರ ಮೇಲೆ ಕಟ್ಟಡವನ್ನು ಕಟ್ಟಲಾಗುತ್ತದೆ.

ನಕ್ಷೆ : ವಾಸ್ತುಪುರುಷಮಂಡಲ

ತಾತ್ವಿಕವಾಗಿ ಪ್ರತಿಯೊಂದು ಕಟ್ಟಡವನ್ನು ಕಟ್ಟುವ ಮುನ್ನ ಅದಕ್ಕ ಒಂದು ನಕ್ಷೆಯನ್ನು ತಯಾರಿಸಲಾಗುತ್ತದೆ. ಇದನ್ನು ವಾಸ್ತುಪುರುಷಮಂಡಲವೆನ್ನಲಾಗಿದೆ. ಭೂಮಿಯ ಮೇಲೆಯೇ ಗುರುತಿಸಲಾದ ಈ ವಾಸ್ತು ಪುರುಷ ಮಂಡಲವು ಮುಂಬರುವ ಕಟ್ಟಡದ ಅಂದಾಜು. ಇಲ್ಲಿ ಪುರುಷನೇ ಯಜಮಾನ– ಯಜ್ಞ ಕರ್ತೃ. ಅವನ ಪರವಾಗಿ ಸ್ಥಪತಿಯು ಪುರೋಹಿತನ ನಿರ್ದೇಶನಕ್ಕೊಳಪಟ್ಟು ದೇವಾಲಯವನ್ನು ಕಟ್ಟುತ್ತಾನೆ. ವಾಸ್ತು ಎಂಬ ಮಾತಿಗೆ ಕಟ್ಟಡದ ಯೋಜಿತ ನಕ್ಷೆ ಎಂಬ ಅರ್ಥವೂ ಇದೆ. ಇದು ಚೌಕಾಕಾರದಲ್ಲಿರುತ್ತದೆ. ವಾಸ್ತುಪುರುಷ ಮಂಡಲಕ್ಕೆ ಅಗತ್ಯವಾದ ರೂಪ ಇದು. ಇದನ್ನು ತ್ರಿಕೋಣ, ಷಟ್ಕೋಣ, ಅಷ್ಟಕೋಣ ಅಥವಾ ವರ್ತುಲಾಕಾರಗಳಿಗೆ ಬದಲಾಯಿಸಿಕೊಳ್ಳಬಹುದು.

ವಾಸ್ತುಶಿಲ್ಪದಲ್ಲಿ ಚೌಕ ಹಾಗೂ ವೃತ್ತಾಕಾರಗಳು ವೇದಗಳಲ್ಲಿ ಬರುವ ಅಗ್ನಿಯ ಪೀಠದಿಂದ ಸಂಘಟಿತವಾದ ಒಂದು ಕಲ್ಪನೆ. ಅಗ್ನಿ ಹಾಗೂ ಅದರ ಆಧಾರಗಳಿಗೆ ಒಂದೇ ಹೆಸರು, ಯಜ್ಞವೇದಿ ಅಥವಾ ವೇದಿ. ಯಜ್ಞಶಾಲೆಯಲ್ಲಿ ಮಧ್ಯದಲ್ಲಿ ಪೂರ್ವ–ಪಶ್ಚಿಮವಾಗಿ ಎರಡು ಮತ್ತು ಅವುಗಳ ದಕ್ಷಿಣದಲ್ಲೊಂದು. ಹೀಗೆ ಮೂರು ವೇದಿ(ಕೆ)ಗಳಿರುತ್ತಿದ್ದವು. ಪೂರ್ವಾಂತ್ಯದಲ್ಲಿರುವುದು ಚೌಕಾಕಾರದ್ದು, ಪಶ್ಚಿಮ ತುದಿಯಲ್ಲಿನದು ವೃತ್ತಾಕಾರದ್ದು. ಮೊದಲನೆಯದರಲ್ಲಿ ಆಹವನೀಯ ಅಗ್ನಿ ಉರಿದು ಅದು ದೇವಲೋಕವನ್ನೂ ಸೂಚಿಸುತ್ತದೆ. ವೃತ್ತಾಕಾರದ್ದು ಗಾರ್ಹಸ್ಪತ್ಯಾಗ್ನಿಯನ್ನು ಹೊಂದಿದ್ದು ಅದು ಮರ್ತ್ಯಲೋಕ–ಭೂಮಂಡಲವನ್ನು ಪ್ರತಿನಿಧಿಸುತ್ತದೆ. ದಕ್ಷಿಣದ ತುದಿಯ ದಕ್ಷಿಣಾಗ್ನಿ ವಾಯುಲೋಕವನ್ನು ಸೂಚಿಸುತ್ತದೆ.

ದೇವಾಲಯವು ಶಕ್ತಿಗಳ ಒಂದು ಮಂಡಲ. ಇದು ಅಚಲ. ಇದನ್ನೇ ಭೌತಿಕವಾಗಿ ವೈದಿಕಸಾಹಿತ್ಯದಲ್ಲಿ ಮೇಲ್ಕಂಡಂತೆ ಮಂಡಲಾಕಾರದಲ್ಲಿ ತೋರಿಸಲಾಗಿದೆ. ವಿಶ್ವಕರ್ಮ ಪ್ರಮುಖನಾದ ಸ್ಥಪತಿ. ಇವನನ್ನು ಸೃಷ್ಟಿಕರ್ತನಾದ ಬ್ರಹ್ಮನೆಂದೇ ಭಾವಿಸಲಾಗಿದೆ. ಬ್ರಹ್ಮನ ಚತುರ್ಮುಖಗಳಿಂದ ನಾಲ್ವರು ಸ್ಥಪತಿಗಳುಂಟಾದರೆಂದೂ ಅವರೇ ವಿಶ್ವಕರ್ಮ, ಮಯ, ತ್ವಷ್ಟಿ ಮತ್ತು ಮನು ಎಂದೂ ಮಾನಸಾರದಲ್ಲಿ ಹೇಳಿದೆ. ಈ ನಾಲ್ವರು ಮಕ್ಕಳು ಕ್ರಮವಾಗಿ ಸ್ಥಪತಿ, ಸೂತ್ರಗ್ರಾಹಿ, ವರ್ಧಕಿ ಹಾಗೂ ತಕ್ಷಕ; ಇದೇ ಕ್ರಮದಲ್ಲಿ ಇವರ ಅಧಿಕಾರ ಶ್ರೇಣಿ ಸಹ. ಶಿಲ್ಪಶಾಸ್ತ್ರಗಳಲ್ಲಿ ಇವರ ಅರ್ಹತೆಗಳನ್ನು ನಿರೂಪಿಸಿದೆ.

ದೇವಾಲಯ ಕಟ್ಟುವ ಮುನ್ನ ಆ ನಿವೇಶನದಲ್ಲಿ ವಾಸಿಸುತ್ತಿರಬಹುದಾದ ದೇವತೆಗಳ, ಭೂತಗಳ ಅನುಮತಿ, ಅವರಿಂದ ಆ ಸ್ಥಳ ಪಡೆಯಬೇಕೆನ್ನುವುದು ಒಂದು ನಂಬಿಕೆ. ಆ ದೇವತೆಗಳ, ಭೂತಗಳ ತೃಪ್ತಿಗಾಗಿ ಮಾಡುವ ವಿಧಿವತ್ತಾದ ಪೂಜೆಯಲ್ಲಿ ವಾಸ್ತುಮಂಡಲವನ್ನು ಬಳಸುತ್ತಾರೆ. ಈ ವಾಸ್ತುಮಂಡಲದ ಆಕಾರ ಚೌಕ. ಇದು ಮೂಲ ಪ್ರತಿ; ವ್ಯವಸ್ಥೆಯ ಮಾದರಿ. ಭಾರತೀಯ ಸಂಪ್ರದಾಯದಂತೆ ವಿಶ್ವ ಈ ವ್ಯವಸ್ಥೆಯನ್ನು ತನ್ನ ಸಾಮಾಜಿಕ ವಿನ್ಯಾಸದಲ್ಲೂ ಅನುಸರಿಸಿದೆ. ಪುರುಷನು ಸಮಾನವಾದ ಉದ್ದ – ಅಗಲಗಳನ್ನು ಪಡೆದಿದ್ದಾನೆ. ಇದು ಅವನ ಪರಿಪೂರ್ಣ ಅಳತೆ. ಶಿರೋಭಾಗದ ಕೂದಲ ತುದಿಯಿಂದ ಪಾದತಲದವರೆಗಿನ ಅವನ ಉದ್ದ, ಅವನು ಬಾಹುಗಳನ್ನು ಸಮಾನಾಂತರವಾಗಿ ಚಾಚಿದಾಗ ಬಲಗೈಯ ಮಧ್ಯದ ಬೆರಳಿನ ತುದಿಯಿಂದ ಎಡಗೈಯ ಮಧ್ಯದ ಬೆರಳಿನ ತುದಿಯವರೆಗಿನ ಅವನ ಅಗಲಕ್ಕೆ ಸರಿಸಮವಾಗಿರುತ್ತದೆ. ಇದು ಮಹಾಪುರುಷನ ಪ್ರಮಾಣವೂ ಹೌದು. ಆಹವನೀಯಾಗ್ನಿ ಇರುವ ಚೌಕದ ಅಳತೆಯೂ ಇದೆ. ಆರಡಿಗಳ ಚೌಕ ಮನುಷ್ಯನ ಅಳತೆ; ವೇದಿಯು ಈ ಮನುಷ್ಯನ ಅಳತೆಯಾಗಿರಬೇಕೆಂದು ಹೇಳಿದೆ.

'ಬೃಹತ್ಸಂಹಿತೆ'ಯಲ್ಲಿ ೬೪ ಹಾಗೂ ೮೧ ಸಣ್ಣ ಚೌಕಗಳನ್ನೊಳಗೊಂಡ ಎರಡು ಚಚ್ಚೌಕದ ನಕ್ಷೆಗಳ ಪ್ರಸ್ತಾಪವಿದೆ. ದೇವಾಲಯ ೬೪ ಚೌಕಗಳಿಂದ ಕೂಡಿದ ಕಟ್ಟಡವಾಗಿರಬೇಕೆಂದು ಹೇಳಿದೆ. 'ಹಯಶೀರ್ಷ ಪಂಚರಾತ್ರ'ದಲ್ಲಿ ೬೪ ಚೌಕಗಳ ನಕ್ಷೆಯನ್ನು ದೇವಾಲಯಗಳಿಗೆ ಮಾತ್ರ ಸೀಮಿತಗೊಳಿಸಿದೆ. ವಾಸ್ತುಪುರುಷಮಂಡಲವು ವಾಸ್ತುಪುರುಷನ ರೂಪ ಹಾಗೂ ಯಂತ್ರ. ವಾಸ್ತು ಪುರುಷನನ್ನು ಮಾನವಾಕಾರದಲ್ಲಿ ಚಿತ್ರಿಸಲಾಗಿದೆ. ೬೪ ಚೌಕಗಳ ಮಂಡಲದಲ್ಲಿ ಈತನ ಶಿರಸ್ಸು ಪೂರ್ವಭಿಮುಖವಾಗಿದ್ದು ಪಾದಗಳು ಪಶ್ಚಿಮಕ್ಕಿರುತ್ತವೆ. ಈ ವಾಸ್ತುಪುರುಷನ ಬಗೆಗೆ ಭಿನ್ನ ಭಿನ್ನ ಕತೆಗಳಿವೆ. ಒಮ್ಮೆ ಭೂಮಿ ಹಾಗೂ ಸ್ವರ್ಗಗಳಿಗೆ ತಡೆಯಾಗಿ ನಾಮರೂಪವಿಲ್ಲದ ಸತ್ತ್ವವೊಂದಿತ್ತು. ಇದನ್ನು ದೇವತೆಗಳು ಒಮ್ಮಿಂದೊಮ್ಮೆಗೇ ಹಿಡಿದು ಕೆಳಮುಖವಾಗಿ ಪೃಥ್ವಿಯ ಮೇಲಿಟ್ಟು ಅದುಮಿ, ಅದರ ಮೇಲೆ ಕುಳಿತರು. ಬ್ರಹ್ಮನು ಈ ವಸ್ತುವನ್ನು ವಾಸ್ತುಪುರುಷನೆಂದು ಕರೆದನೆಂಬುದು ಬೃಹತ್ಸಂಹಿತೆಯಲ್ಲಿನ ಕತೆ. ಕೆಳಗೆ ಬಿದ್ದ ಈ ಅರಸನು ಶಿವನು ಅಂಧಕಾಸುರನೊಂದಿಗೆ ಕಾದುವಾಗ ಆತನ ಹಣೆಯ ಬೆವರಿನಿಂದ ರೂಪ ತಾಳಿದವನು. ಆತನು ಕೆಳಗೆ ಬಿದ್ದ ಕೂಡಲೇ ದೇವತೆಗಳು ಅವನ ಮೇಲೆ ಕುಳಿತು ಅವನು ಮೇಲಕ್ಕೇಳದಂತೆ ಮಾಡಿದರು. ಕೆಳಮುಖ ಮಾಡಿ ಬಿದ್ದಿದ್ದ ಅವನೇ ವಾಸ್ತುಪುರುಷನೆಂಬುದು ಮೂಲ ಕತೆಯ ವಿಸ್ತೃತ ರೂಪ. ಮತ್ಸ್ಯಪುರಾಣ ಮುಂತಾದವುಗಳಲ್ಲಿ ಈ ಕತೆಯನ್ನೇ ಬೇರೆ ಬೇರೆ ರೀತಿಗಳಲ್ಲಿ ಹೇಳಿದೆ.

ವಾಸ್ತು ಪುರುಷ ಮಂಡಲದ ಈ ಸಂಕೇತ ಮೂಲತಃ ವೇದಗಳ ಕಾಲದ ವೇದಿಗಳಿಗೆ ಸಂಬಂಧಿಸಿದೆ. ವಾಸ್ತು ಪುರುಷನ ಮಧ್ಯಭಾಗ ಬ್ರಹ್ಮಸ್ಥಾನ. ದೇವಾಲಯದಲ್ಲಿ ಇದು ಗರ್ಭಗೃಹ. ಸಾಮಾನ್ಯವಾಗಿ ಈಶಾನ್ಯದಿಕ್ಕಿಗೆ (ಅಥವಾ ಪೂರ್ವದಿಕ್ಕಿಗೆ) ತಲೆ ಮಾಡಿದಂತಹ ಈತನ ಅಂಗಗಳ ಮೇಲೆ ಇನ್ನೂ ೪೪ ದೇವತೆಗಳಿರುತ್ತಾರೆ. ಹೊರ ಅಂಚಿನಲ್ಲಿ ವಾಸ್ತುಮಂಡಲದ ಪರಿಧಿಯಲ್ಲಿ ೩೨ ದೇವತೆಗಳು ಮತ್ತು ಮಧ್ಯಭಾಗದ ಸುತ್ತಲೂ ಒಳ ಅಂಚಿನಲ್ಲಿ ೧೨ ದೇವತೆಗಳು. ೩೨ ದೇವತೆಗಳನ್ನು ಪ್ರಾಕಾರ (ಪದ) ದೇವತೆಗಳೆಂದು ಕರೆಯಲಾಗಿದೆ.

ವಾಸ್ತುಪೂಜೆ – ವಿಧಿಗಳು

ದೇವಾಲಯ ಕಟ್ಟುವ ಮೊದಲು ಮಾಡುವ ವಾಸ್ತುಪೂಜೆಯಲ್ಲಿ ಗರ್ಭಾದಾನ ಒಂದು ಪ್ರಮುಖವಾದ ಪ್ರಕ್ರಿಯೆ. ಪೃಥ್ವಿಯು ಕಟ್ಟಡದ ಬೀಜವನ್ನು ಪಡೆದು ಜೀವಾಣುವನ್ನು ಉತ್ಪತ್ತಿಸುತ್ತದೆ. ಸಾಂಕೇತಿಕವಾಗಿ ಸುವರ್ಣ, ಬೆಳ್ಳಿ ಅಥವಾ ತಾಮ್ರದ ಗರ್ಭಪಾತ್ರವನ್ನು ಪ್ರತಿನಿಧಿಸುವ ಸಂಪುಟವನ್ನು ಬ್ರಹ್ಮಸ್ಥಾನದ ಬಾಗಿಲ ಬಲಭಾಗದ ಗೋಡೆಯೊಳಗೆ ತಳಹದಿಯ ಇಟ್ಟಿಗೆಗಳ ಮೇಲೆ ಕೂಡಿಸಲಾಗುತ್ತದೆ. ಅದೊಂದು ಪೂಜಾವಿಧಾನ.

ದೇವಾಲಯ ಕಟ್ಟಲು ಇಟ್ಟಿಗೆ, ಕಲ್ಲು ಹಾಗೂ ಮರಗಳು ಮೂಲಸಾಮಗ್ರಿಗಳು. ಈಗ ಉಳಿದು ಬಂದಿರುವುದೆಲ್ಲ ಕಲ್ಲಿನ ಕಟ್ಟಡಗಳೇ. ಅಪರೂಪಕ್ಕೆಂಬಂತೆ ಅಲ್ಲೊಂದು ಇಲ್ಲೊಂದು ಇಟ್ಟಿಗೆಯ ಆಲಯಗಳ ಅವಶೇಷಗಳು ಉಳಿದು ಬಂದಿವೆ. ಭಿತರ್‌ಗಾಂವ್‌ನ ಸುಮಾರು ಕ್ರಿ. ಶ. ೫ ನೆಯ ಶತಮಾನದ ಆಲಯ, ತೇರ್ (ತಗರ)ನಲ್ಲಿರುವ ಉತ್ತರೇಶ್ವರ ಹಾಗೂ ಕಲ್ಲೇಶ್ವರಾಲಯಗಳು, ಸಿರಪುರದ ಲಕ್ಷ್ಮಣಾಲಯ (೭ನೆಯ ಶತಮಾನ)ಗಳು ಇಂತಹ ಕೆಲವು. ಆದರೆ ಸಾಮಾನ್ಯವಾಗಿ ನಂತರದ ಶತಮಾನಗಳಲ್ಲಿ ಈ ಮೂರನ್ನೂ ಬಳಸಿ ಆಲಯಗಳನ್ನು ಕಟ್ಟಲಾಗಿದೆ.

ಯಜ್ಞದಲ್ಲಿ ಇಟ್ಟಿಗೆ ಪ್ರಮುಖ ಪಾತ್ರವಹಿಸಿದೆ. ಇದನ್ನು ಯಜ್ಞದ ದೇಹ (ಯಜ್ಞತನು)ವೆಂದು ವರ್ಣಿಸಲಾಗಿದೆ. ಯಜ್ಞದ ವೇದಿಕೆ ಇಟ್ಟಿಗೆಯಿಂದಾದುದು. ದೇವಾಲಯವನ್ನು ಪ್ರಾಸಾದವೆಂದು ಕರೆಯಲಾಗಿದೆಯಷ್ಟೆ. ಈ ಹೆಸರು – ಸಾದನಮ್ – ಅಗ್ನಿವೇದಿಯಲ್ಲಿ ಇಟ್ಟಿಗೆಗಳನ್ನು ಕೂರಿಸುವುದರಿಂದ, ಸ್ಥಾಪಿಸುವುದರಿಂದ ಬಂದದ್ದು. ಇಟ್ಟಿಗೆಗಳನ್ನು ಸಾದನ ಮಂತ್ರದಿಂದ ವಿಧಿವತ್ತಾಗಿ ದೃಢವಾಗಿ ನೆಲೆಗೊಳಿಸಲಾಗುತ್ತದೆ. ದೇವಾಲಯದ ಅಸ್ತಿಭಾರ ಕ್ರಿಯೆಯಲ್ಲಿ ಇಷ್ಟಕಾನ್ಯಾಸಕ್ಕೆ ಮುಖ್ಯಸ್ಥಾನವಿದೆ. ತಳಹದಿಯನ್ನು ಭೂಲಕ್ಷಣದಂತೆ ಕೆಳಗೆ ಕಲ್ಲು ಅಥವಾ ನೀರಿನ ಮಟ್ಟದವರೆಗೆ ಅಗೆದು ಅದರಲ್ಲಿ ಮಣ್ಣನ್ನು ತುಂಬಿ ನಂತರ ಗಟ್ಟಿಯಾದ ಕಲ್ಲುಗಳನ್ನು ಸೇರಿಸಿ, ಇದನ್ನು ಚೆನ್ನಾಗಿ ತುಳಿಸಿ ಸಮಮಾಡಿ ಅದರ ಮೇಲೆ, ತಳಹದಿಯ ಗುಳಿಯ ಚತುರ್ಭಾಗದಷ್ಟರಲ್ಲಿ ಮೊದಲ ಇಟ್ಟಿಗೆಗಳನ್ನು ಸರಿಯಾಗಿ ದೇವಾಲಯದ ಮುಖ್ಯದ್ವಾರದ ಬಾಗಿಲ ಬಲ ಚೌಕಟ್ಟಿನ ಕೆಳಗೆ ಬರುವಂತೆ ಇಡಲಾಗುತ್ತದೆ. ನಂತರ ಕುಳಿಯನ್ನು ಮುಚ್ಚಿ ಅದರ ಮೇಲೆ ಗರ್ಭಾದಾನದ ಸಂಸ್ಕಾರವನ್ನು ಆಚರಿಸಲಾಗುತ್ತದೆ. ಈ ಗರ್ಭಾಪಾತ್ರೆಯನ್ನು ತಳಹದಿಯ ಮೇಲಿನ ಮೊದಲ ಸ್ತರವಾದ ಉಪಾನದ ಮೇಲೆ ಅಥವಾ ಎಲ್ಲಕ್ಕೂ ಮೇಲಿನ ಸ್ತರದ ಅಲಂಕೃತಭಾಗವೆನಿಸಿದ, ಪ್ರತಿಯ ಮೇಲೆ ಇಡಲಾಗುತ್ತದೆ.

ಕಲ್ಲಿನ ದೇವಾಲಯಗಳಿಗೆ ಸಂಬಂಧಿಸಿದಂತೆ ಯಾವ ವೈದಿಕ ವಿಧಿಗಳೂ ಇಲ್ಲದಿದ್ದರೂ ಇದರ ವೇದಿಕೆಗಳೂ ಇಟ್ಟಿಗೆಗಳಿಂದ ಪೇರಿಸಲ್ಪಟ್ಟವೇ. ಆದರೆ ತಳಹದಿಯಲ್ಲಿ ಮೊದಲು ಕೂಡಿಸುವುದು ಕಲ್ಲುಗಳನ್ನೇ. ವಾಸ್ತುವಿದ್ಯೆಯ ಅತಿಪ್ರಾಚೀನ ಗ್ರಂಥಗಳ ಕಾಲ ಸುಮಾರು ಕ್ರಿ. ಶ. ೬ನೆಯ ಶತಮಾನ. ಆ ವೇಳೆಗಾಗಲೇ ಕಲ್ಲನ್ನು ಮೂಲಸಾಮಗ್ರಿಯಾಗಿ ಬಳಸಿಕೊಳ್ಳಲಾಗಿತ್ತು. ಮೊದಲ ಅಸ್ತಿಭಾರದ ಶಿಲೆಯನ್ನಿಡುವ ಕ್ರಿಯೆಗೆ ಶಿಲಾನ್ಯಾಸವೆಂಬ ಹೆಸರಿದೆ. ಕರ್ನಾಟಕದ ಕೆಲವು ಕನ್ನಡ ಶಾಸನಗಳಲ್ಲಿ ಇದಕ್ಕೆ 'ಕೆಸರುಗಲ್ಲನ್ನಿಕ್ಕುವುದು' ಎಂಬ ಮಾತನ್ನು ಬಳಸಿರುವುದು ಗಮನಾರ್ಹ. ಕಲ್ಲಿನ ಹಾಗೂ ಇಟ್ಟಿಗೆಗಳ 'ನ್ಯಾಸ' ಕರ್ಮಕ್ಕೆ ಬಳಸುವ ಮಂತ್ರಗಳು ಒಂದೇ ಆದರೂ ಕಲ್ಲನ್ನು ಗುಳಿಯ ಮಧ್ಯದಲ್ಲಿ ಸೇರಿಸಲಾಗುತ್ತಿತ್ತು. ಇಟ್ಟಿಗೆಯನ್ನು ಬಾಗಿಲ ಬಲ ಚೌಕಟ್ಟಿನ ಕೆಳಗಿಡಲಾಗುತ್ತಿತ್ತೆಂದು ಮೇಲೆ ಹೇಳಿದೆ. ಈ ಮೊದಲ ಕಲ್ಲನ್ನೇ 'ಆಧಾರಶಿಲೆ' ಎಂದು ಕರೆಯಲಾಗಿದೆ.

ಮರವನ್ನು ಸಾಮಾನ್ಯವಾಗಿ ಆಧಾರಕ್ಕಾಗಿ ಕಂಬಗಳಿಗಾಗಿ ಬಳಸಲಾಗುತ್ತಿತ್ತು. ಕಮಾನು ಮರದ ಸೂಕ್ಷ್ಮರೂಪ. ಬಿದಿರು, ಮರದ ಕೊಂಬೆಗಳು ಸಹಜವಾಗಿ ಬಾಗುತ್ತವೆ. ಅವುಗಳನ್ನು ಕಮಾನಾಕೃತಿಗೆ ಬಾಗಿಸುವುದು ಸುಲಭ. ಇದನ್ನೇ ನಂತರ ಇಟ್ಟಿಗೆ ಹಾಗೂ ಕಲ್ಲುಗಳಲ್ಲಿ ಕಡೆಯಲಾಗುತ್ತಿತ್ತು. ದೇವಾಲಯದ ಶಿಖರದ ಭಾಗವಂತೂ ಸುತ್ತಲೂ ಬಾಗಿದ ವಿನ್ಯಾಸವನ್ನೇ ಪಡೆದಿರುತ್ತದೆ.

ಮೂಲಸಾಮಗ್ರಿ ಯಾವುದೇ ಇದ್ದರೂ ಅದನ್ನು ಸುಯುಕ್ತಿಯಿಂದ ಜೋಡಿಸಿ ಕೂಡಿಸಲು ಮೆತುಗಾರೆ ಅವಶ್ಯಕ. ಮರದ, ಕಲ್ಲಿನ ತುಂಡುಗಳನ್ನು ಕೂಡಿಸಲು ಕಬ್ಬಿಣದ ಪಟ್ಟಿಗಳನ್ನೋ ಗೂಟಗಳನ್ನೋ ಬಳಸಲಾಗುತ್ತಿತ್ತಾದರೂ ಆರಂಭದ ಕಟ್ಟಡಗಳಲ್ಲಿ ಯಾವ ವಿಧವಾದ ಗಾರೆಯನ್ನೂ ಬಂಧಕ್ಕಾಗಿ ಉಪಯೋಗಿಸುತ್ತಿರಲಿಲ್ಲ. ಬಾದಾಮಿಯ ಚಾಲುಕ್ಯರ ಅಥವಾ ಚೋಳರ ದೇವಾಲಯಗಳಲ್ಲಿ ಕಲ್ಲುಗಳನ್ನು ಒಂದರ ಮೇಲೊಂದರಂತೆ ನಾಜೂಕಾಗಿ ಜೋಡಿಸಿರುವುದನ್ನು ನೋಡಬಹುದು. ಲೇಪಕ್ಕಾಗಿ ಬಳಸಲಾದ ಗಾರೆಯನ್ನು ಸುಧಾಶಿಲಾ (ಸುಣ್ಣಕಲ್ಲು), ಮೆತುಗಾರೆ. ವಜ್ರಲೇಪ ಎಂದೆಲ್ಲಾ ಕರೆಯಲಾಗಿದೆ.

ಪ್ರಾಸಾದ–ವಿಮಾನ

ದೇವಾಲಯವನ್ನು ಪ್ರಾಸಾದ ಅಥವಾ ವಿಮಾನ ಎಂದು ಹೆಸರಿಸಲಾಗಿದೆ. ತನ್ನ ಸೌಂದರ್ಯದಿಂದ ದೇವರನ್ನೂ ಮನುಷ್ಯರನ್ನೂ ಆಹ್ಲಾದಗೊಳಿಸುತ್ತದೆ (ಪ್ರಸೀದತಿ) ಎಂಬ ಕಾರಣದಿಂದ ಅದನ್ನು ಪ್ರಾಸಾದವೆನ್ನಲಾಗಿದೆ ಎಂಬುದೊಂದು ವಿವರಣೆ. ಪ್ರಾಸಾದ ಎಂಬ ಮಾತಿಗೆ ಅರಮನೆ, ಯಾವುದೇ ಕಟ್ಟಡ, ಬೌದ್ಧರ ಸಭೆ ಇತ್ಯಾದಿ ಅರ್ಥಗಳೂ ಇವೆ. ರಾಮಾಯಣ, ಮಹಾಭಾರತಗಳಲ್ಲಿ ಈ ಮಾತನ್ನು ಅರಮನೆಗೆ ಸಂವಾದಿಯಾಗಿ ಬಳಸಲಾಗಿದೆ. ದೈವದ ಸ್ಥಾನ ಅಥವಾ ದೇವರ ಕೋಣೆಗೆ ದೇವಗೃಹ, ದೇವಾಯತನ, ದೇವಸ್ಥಾನ, ಕೀರ್ತನ, ಸದನ ಮುಂತಾದ ಹೆಸರುಗಳನ್ನು ಕೊಟ್ಟಿದೆ. ಆದರೆ ಪ್ರಾಸಾದ ಎಂಬ ಮಾತನ್ನು ಶಾಸನಗಳಲ್ಲಿ ವಿಶೇಷವಾಗಿ ದೇವಾಲಯ ಎಂಬ ಅರ್ಥದಲ್ಲಿಯೇ ಬಳಸಿದೆ. ಭಿಲ್ಸಾದ ಗರುಡಗಂಬದ ಸುಮಾರು ಕ್ರಿ. ಪೂ. ೩ನೆಯ ಶತಮಾನದ ಶಾಸನದಲ್ಲಿ ಭಗವಂತನ ಉತ್ತಮ ಪ್ರಾಸಾದದ ಉಲ್ಲೇಖವಿದೆ. ವರಣದಲ್ಲಿನ ತೋರಮಾನನ ವರಾಹಗಲ್ಲಿನ ಶಾಸನದಲ್ಲಿ ವರಾಹಮೂರ್ತಿಯಾದ ನಾರಾಯಣನ ಶಿಲಾಪ್ರಾಸಾದವನ್ನು ಐರಿಕಿಣ ವಿಷಯದಲ್ಲಿ ಕಟ್ಟಿಸಲಾಯಿತೆಂದು ಹೇಳಿದೆ. ಚಾಲುಕ್ಯ ಇಮ್ಮಡಿ ಕೀರ್ತಿವರ್ಮನ ಪಟ್ಟದಕಲ್ಲಿನ ಶಾಸನದಲ್ಲಿ ಮಹಾಶೈಲ ಪ್ರಾಸಾದದ ಪ್ರಸ್ತಾಪವಿದೆ. ಹಾಸನಜಿಲ್ಲೆಯ ಗದ್ದವಳ್ಳಿಯ ಲಕ್ಷ್ಮೀಗುಡಿಯನ್ನು ಅಲ್ಲಿನ ಶಾಸನದಲ್ಲಿ ಮಹಾಲಕ್ಷ್ಮೀದೇವಿಯ ಪ್ರಾಸಾದವೆಂದೇ ಕರೆದಿದೆ.

ವಾಸ್ತವಿಕವಾಗಿ ಪ್ರಾಸಾದ ಎಂಬ ಮಾತು ದೇವರ ವಿಗ್ರಹವಿರುವ ಚೌಕಾಕಾರದ ನಾಲ್ಕು ದಪ್ಪಗೋಡೆಗಳ ನಡುವಣ ಕಿರಿದಾದ ಗರ್ಭಗೃಹ. ಅದರ ಕೆಳಗಿನ ಅಧಿಷ್ಠಾನ ಅಥವಾ ಪೀಠ ಹಾಗೂ ಶಿಖರಕ್ಕೆ ಆಸರೆಯಾಗಿರುವಂತಹ ಮೇಲ್ಕಟ್ಟಡಗಳನ್ನೊಳಗೊಂಡ ಭಾಗಕ್ಕೆ ಅನ್ವಯಿಸುತ್ತದೆ. ಆರಂಭದ ದೆಸೆಯಲ್ಲಿ ಈ ಮೇಲ್ಕಟ್ಟಡವಿರದೆ ಛಾದ್ಯವು ಚಪ್ಪಟೆಯಾದ ಮಾಳಿಗೆಯನ್ನು ಪಡೆದಿತ್ತು. ಕ್ರಮೇಣ ಅದು ಲಂಬಿಸುತ್ತಾ ಹೋಯಿತು. ಈ ಚೌಕಾಕಾರದ ಗರ್ಭಗೃಹ ಅಗ್ನಿಯ ವೇದಿಕೆ ಅಥವಾ ಚಿತಿಯನ್ನು ಪ್ರತಿನಿಧಿಸುತ್ತದೆ. ಮೂಲತಃ ವೇದಿಯು ಗರ್ಭಗೃಹದ ಪೀಠ ಭಾಗಕ್ಕಷ್ಟೇ ಅನ್ವಯಿಸಿದ್ದ ಮಾತಾಗಿದ್ದರೂ ತರುವಾಯ ಮೇಲಿನ ಶಿಖರದವರೆಗಿನ ಭಾಗಕ್ಕೂ ಇದರ ಅರ್ಥ ವ್ಯಾಪಿಸಿತು. ಈ ಮೇಲ್ಭಾಗದ ಕಿರೀಟದಂತೆ ಆಮಲಕ, ಅದರ ಮೇಲೆ ಕಳಶ. ಇದನ್ನು ನಂತರದ ಕಾಲದಲ್ಲಿ ಉತ್ತರವೇದಿ ಎಂದೂ ಕರೆಯಲಾಯಿತು. ಹೊರಗಿನಿಂದ ನೋಡಿದಾಗ ಒಟ್ಟು ಕಟ್ಟಡ ದಟ್ಟವಾದ ಪೇರಿಸಿಟ್ಟ ರಾಶಿ(ಚಿತಿ)ಯಂತೆ ಕಾಣುತ್ತದೆ. ಇದನ್ನು ಕಟ್ಟಡವೆನ್ನುವ ಬದಲು ಸ್ಮಾರಕ ಎನ್ನುವುದು ಹೆಚ್ಚು ಔಚಿತ್ಯಪೂರ್ಣ. ಗರ್ಭಗೃಹದ ದಪ್ಪಗೋಡೆಗಳು ಹಾಗೂ ಬಹುಮಟ್ಟಿಗೆ ಭದ್ರವಾಗಿ ಜೋಡಿಸಿದ ಮೇಲ್ಕಟ್ಟಡ. ಈ ಸಮಗ್ರ ಪ್ರಾಸಾದವು ಒಂದು ಚಿತಿಯನ್ನು ಸೂಚಿಸುವಂತಿದೆ. ಪ್ರಾಸಾದ, ಸದ್ಮ, ಸದನಮ್ ಎಂಬೀ ಹೆಸರುಗಳ ಸಾದನಮ್–ವೇದಿಯನ್ನು ಒಟ್ಟುಗೂಡಿಸುವಿಕೆ – ಎಂಬ ಮೂಲ ಶಬ್ದದಿಂದಲೇ ಬಂದವುಗಳು ಎಂಬುದನ್ನು ಗಮನದಲ್ಲಿಡಬೇಕು.

ಆದುದರಿಂದ ಬುದ್ಧನ ನಂತರದ ಕಾಲದಲ್ಲಿ ಕಟ್ಟಲಾದ ಚೈತ್ಯ ಎಂಬುದು ಮೂಲತಃ ಚಿತಿಯಿಂದಲೇ ವ್ಯುತ್ಪತ್ತಿ ಪಡೆದುದು. ಮಹಾಯಜ್ಞಗಳ ಕೊನೆಯಲ್ಲಿ ಚಯನ ಎಂಬ ಸಂಸ್ಕಾರವನ್ನು ಮಾಡುತ್ತಿದ್ದು ಇದು ಬೂದಿ ಮುಂತಾದ ಇತರ ಅವಶೇಷಗಳನ್ನು ಒಟ್ಟುಗೂಡಿಸುವ ಕ್ರಿಯೆಗೆ ಸಂಬಂಧಿಸಿದ ಮಾತು. ಪೂಜೆಗಾಗಿ ಈ ಅವಶೇಷಗಳನ್ನು ಸೇರಿಸಿಟ್ಟ ಕಟ್ಟಡಕ್ಕೆ ಚೈತ್ಯ ಎಂಬ ಹೆಸರು ಬಂದಿತು. ಆದುದರಿಂದ ಚಿತಿ(ಚೈತ್ಯ) ಎಂಬುದು ಬುದ್ಧನಿಗೂ ಪೂರ್ವದ ಕಾಲದಲ್ಲಿಯೇ ಬಳಕೆಗೆ ಬಂದ ಪದ. ರಾಮಾಯಣ, ಮಹಾಭಾರತಗಳಲ್ಲಿ ಈ ಪದವನ್ನು ಇಂತಹ ಅವಶೇಷಗಳ (ಪೂಜಿಸುವ) ಕಟ್ಟಡ ಎಂಬ –ಅರ್ಥದಲ್ಲಿಯೇ ಬಳಸಲಾಗಿದೆ. ಕ್ರಮೇಣ ಬೌದ್ಧರೂ ಜೈನರೂ ಈ ಮಾತನ್ನು ಬೌದ್ಧಾಲಯಗಳಿಗೂ ಬಸದಿಗಳಿಗೂ ಅನ್ವಯಿಸಿಕೊಂಡರು. ಈ ದೃಷ್ಟಿಯಲ್ಲಿ ಪ್ರಾಸಾದದ ಹೊರಭಾಗ ಅದರ ಅಳತೆ (ವಿಮಾನ)ಗೆ ಪ್ರಮಾಣಾನುಗುಣವಾಗಿ ದರ್ಶನೀಯವಾದ ಚೈತ್ಯವೆನಿಸಿಕೊಂಡಿದೆ.

ಇಲ್ಲಿ ವಿಮಾನ ಎಂಬ ಮಾತೂ ಗಮನಾರ್ಹ. ವಿಮಾನ ಎಂದರೆ ದೇವಾಲಯ ಎಂಬ ಅರ್ಥವಿದೆ. ಮಾನ ಎಂದರೆ ಅಳತೆಗೋಲು. ಮಾ ಎಂಬ ಮಾತಿಗೆ ಒಂದು ವಸ್ತುವಿಗೆ ರೂಪ ಕೊಡುವುದು ಎಂದು ಅರ್ಥವಿದೆ. ರೂಪ ಕೊಡುವುದು ಎಂದರೆ ಸೃಷ್ಟಿಸುವುದು. ದೇವಾಲಯ ಮನುಷ್ಯನಿಂದ ರೂಪಿತವಾದದ್ದು. ವಿಶ್ವವು ದೇವರ ಒಂದು ರೂಪ–ಬ್ರಹ್ಮಾಂಡ. ಮಾನವನಿರ್ಮಿತ ದೇವಾಲಯ ಒಂದು ಪಿಂಡಾಂಡ. ಮಾನವ ತನ್ನ ಬುದ್ಧಿ ಶಕ್ತಿಗೆ ಗೋಚರಿಸಿದಂತೆ ಅಳೆದು ರೂಪಿಸಿದ ಸೃಷ್ಟಿ. ಇದೇ ವಿಮಾನ. ಆದ್ಯಂತವಾಗಿ ಪ್ರಮಾಣಬದ್ಧವಾಗಿ ಅಳೆದು ಶಾಸ್ತ್ರೋಕ್ತವಾಗಿ ಕಟ್ಟಿ ಅದರಲ್ಲಿ ದೇವರನ್ನು ನೆಲೆಗೊಳಿಸಿದ ಆಲಯ. ಇಲ್ಲೂ ಇದು ಗರ್ಭಗೃಹಕ್ಕೆ ಮಾತ್ರ ಅನ್ವಯಿಸುವ ಮಾತು. ವಿಮಾನವನ್ನು ದೇವರ ರಥಕ್ಕೂ ಅನ್ವಯಿಸಲಾಗಿದೆ. ಈ ಸಂದರ್ಭದಲ್ಲಿ ರಾಮಾಯಣದಲ್ಲಿ ಉಕ್ತವಾದ ಆಕಾಶದಲ್ಲಿ ಚಲಿಸುತ್ತಿದ್ದ ಪುಷ್ಪಕವಿಮಾನವನ್ನು ಉದಹರಿಸಬಹುದು. ವಾಸ್ತುಶಿಲ್ಪದಲ್ಲಿ ವಿಮಾನದ ವಿನ್ಯಾಸವನ್ನನುಸರಿಸಿ ವಾಸ್ತುಶೈಲಿಯನ್ನು ನಾಗರ, ದ್ರಾವಿಡ, ವೇಸರಗಳೆಂದು ವಿಂಗಡಿಸಲಾಗಿರುವುದನ್ನು ಗಮನಿಸಬೇಕು.

ಗರ್ಭಗೃಹ

ದೇವಾಲಯ ಎಷ್ಟೇ ದೊಡ್ಡದಾಗಿದ್ದರೂ ಎಷ್ಟೇ ಮಂಟಪಗಳನ್ನೂ ದ್ವಾರಗಳನ್ನೂ ಉಪಗುಡಿಗಳನ್ನೂ ಹೊಂದಿದ್ದರೂ ಗರ್ಭಗೃಹ ಅದರ ಮುಖ್ಯ ಘಟಕ. ಸ್ಥೂಲವಾಗಿ ಕಟ್ಟಿದ ಅಡಿಪೀಠದ ಮೇಲೆ ಗರ್ಭಗೃಹದ ಭಿತ್ತಿಗಳು ಎದ್ದಿರುತ್ತವೆ. ಈ ಭಿತ್ತಿಗಳ ಅತಿ ಕೆಳಗಿನ ಭಾಗವನ್ನು ವೇದಿ ಅಥವಾ ವೇದಿಕಾ ಎಂದೇ ಕರೆದಿದೆ. ಗರ್ಭಗೃಹದಲ್ಲಿ ದೇವರ ಮೂಲ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ಎಂತಲೇ ಇದನ್ನು ಕೆಲವೊಮ್ಮೆ ಮೂಲಸ್ಥಾನವೆಂದೂ ವರ್ಣಿಸಲಾಗಿದೆ. ಮಾನಸಾರದಲ್ಲಿ ಗರ್ಭಗೇಹ, ಮಧ್ಯಕೋಷ್ಠ, ನಾಲಿಗೇಹ ಎಂಬ ಮಾತುಗಳನ್ನು ಸಮಾನಾರ್ಥದಲ್ಲಿ ಬಳಸಿದೆ. ಭಿತ್ತಿ ಎಂದರೆ ಗೋಡೆ. ಗರ್ಭಗೃಹ ಯಾವಾಗಲೂ ಚೌಕಾಕೃತಿಯುಳ್ಳದ್ದು; ಒಳಗಿನ ಭಾಗ ಕತ್ತಲೆಯಿಂದ ಕೂಡಿರುತ್ತದೆ. ಯಾವ ವಿಧವಾದ ಕಿಟಕಿಗಳೂ ಕಿಂಡಿಗಳೂ ಇರುವುದಿಲ್ಲ. ಮುಂದೆ ಮಾತ್ರ ಒಂದು ದ್ವಾರ. ಇದರ ಚೌಕಟ್ಟನ್ನು ಅನೇಕ ಸಂದರ್ಭಗಳಲ್ಲಿ ಉತ್ತಮ ರೀತಿಯಲ್ಲಿ ಪರಿಷ್ಕರಿಸಲಾಗಿರುತ್ತದೆ. ಆರಂಭದಲ್ಲಿ ಈ ಗುಡಿಗಳಿಗೆ ಚಪ್ಪಟೆಯಾದ ಮೇಲ್ಛಾವಣಿ ಇರುತ್ತಿತ್ತು. ಆದರೆ ಅನಂತರ ಇದರ ಮೇಲೆ ಶಿಖರವನ್ನೇರಿಸುವ ಪದ್ಧತಿ ಆರಂಭವಾಯಿತು. ಭಿತ್ತಿಗಳ ಮೇಲೆ ಚಿತ್ರಿತವಾದ ವಾಸ್ತುಶೈಲಿಯ ಅಂಗಗಳನ್ನು ಎತ್ತರದಲ್ಲೂ ಮುಂದುವರಿಸಿಕೊಂಡು ಹೋಗಿರುತ್ತದೆ.

ಆರಂಭದ ಗುಡಿಗಳು

ಚಪ್ಪಟೆಯ ಛಾವಣಿಯಿರುವ ಗರ್ಭಗೃಹ ಬೃಹತ್ ಶಿಲಾಯುಗಕ್ಕೆ ಸೇರಿದ ಪಾಂಡುಕುಳಿ (dolmen) ಯ ವಿನ್ಯಾಸದ ಮುಂದುವರಿಕೆ ಎಂದು ಭಾವಿಸಲಾಗಿದೆ. ಮೂರು ನಿಡಿದಾದ ಕಲ್ಲುಚಪ್ಪಡಿಗಳ ಮೇಲೆ ಹೊದಿಕೆಯಾಗಿ ಕೂಡಿಸಿದ ದೊಡ್ಡ ಚಪ್ಪಡಿಕಲ್ಲು ಈ ಪಾಂಡುಕುಳಿಯ ವೈಶಿಷ್ಟ್ಯ. ದಕ್ಷಿಣದಲ್ಲೂ ಇಂತಹ ಕಟ್ಟಡಗಳು ಅಧಿಕವಾಗಿ ಕಾಣಸಿಕೊಂಡಿವೆ. ಇವುಗಳಲ್ಲಿ ಒಳಗಡೆ ಒಂದು ಶಿವಲಿಂಗವನ್ನು ಸ್ಥಾಪಿಸಿರುವುದೂ ಉಂಟು. ಕೆಲವು ಸಂದರ್ಭಗಳಲ್ಲಿ ಈ ಕಲ್ಲುಗಳನ್ನು ನಯಮಾಡಿ ಮೂಲೆಗಳಲ್ಲಿ ಒಂದನ್ನೊಂದು ಕಟ್ಟಿಕೊಂಡಿರುವಂತೆ ಪರಿಷ್ಕರಿಸಿರುವುದೂ ಉಂಟು. ಕೆಲವೊಮ್ಮೆ ಈ ಕಲ್ಲುಗಳನ್ನು ಅಡಿಪಾಯದ ಮೇಲೆ ನಿಲ್ಲಿಸಿರುವುದೂ ಇದೆ. ಐಹೊಳೆಯ ಮಲಪ್ರಭೆ ತೀರದಲ್ಲಿರುವ ಗಳಗನಾಥಗುಡಿಯ ಸುತ್ತಲಿನ ಸಣ್ಣಗುಡಿಗಳ ಗುಂಪು, ಕೊಂತಿಗುಡಿಯ ನೈರುತ್ಯ ಮೂಲೆಯಲ್ಲಿ, ಪಟ್ಟದಕಲ್ಲಿನ ಸಂಗಮೇಶ್ವರ, ವಿರೂಪಾಕ್ಷ, ಪಾಪನಾಥ ಗುಡಿಗಳ ಗುಂಪು, ನಡುವೆ ಅಲ್ಲಲ್ಲಿರುವ ಸಣ್ಣಗುಡಿಗಳನ್ನು ಇಲ್ಲಿ ಗಮನಿಸಬಹುದು. ಇವು ಸಹ ಮೇಲೆ ಒರಟು ಚಪ್ಪಡಿಗಲ್ಲುಗಳನ್ನು ಹಾಸಿದ, ಚೌಕಾಕಾರದ ಇಂತಹುದೇ ಕಂಬಗಳನ್ನು ಆಧರಿಸಿ ನಿಂತ, ಕೆಲವೊಮ್ಮೆ ಮುಂಭಾಗದಲ್ಲಿ ಒಂದು ಸಣ್ಣ ಮಂಟಪವಿರುವ ಗುಡಿಗಳು. ಇವುಗಳಲ್ಲಿ ಹಲವೊಮ್ಮೆ ಶಿವಲಿಂಗವನ್ನಿರಿಸಿರುವುದೂ ಕಂಡು ಬಂದಿದೆ. ಇತ್ತೀಚಿನ ಕೆಲವು ಸಂಶೋಧಕರು ಇವುಗಳನ್ನು ಸ್ಮಾರಕಮಂದಿರಗಳೆಂದು ಕರೆದಿದ್ದಾರೆ. ಆದರೆ ಇದನ್ನು ಒಪ್ಪಿಕೊಳ್ಳುವುದು ಕಷ್ಟ. ಇವುಗಳೂ ಆರಂಭದ ಗುಡಿಗಳೇ ಆಗಿರಬಹುದು. ಬಹುಮಟ್ಟಿಗೆ ಯಾವ ವಿಧದ ಅಲಂಕರಣಗಳೂ ಇಲ್ಲದ ಈ ಕಟ್ಟಡಗಳ ಕಾಲವನ್ನು ನಿರ್ಧರಿಸುವುದು ಕಷ್ಟ. ಈಗಲೂ ಭಾರತದ ಮೂಲನಿವಾಸಿಗಳನೇಕರು ನಾಲ್ಕಾರು ಚಪ್ಪಡಿ ಕಲ್ಲುಗಳನ್ನು ನಿಲ್ಲಿಸಿದ ಚಪ್ಪಟೆಯ ದೇವಾಲಯಗಳನ್ನು ರಚಿಸಿ ಅವನ್ನು ಪವಿತ್ರಸ್ಥಳಗಳೆಂದು ಭಾವಿಸುತ್ತಾರೆ. ಪ್ರತಿಗ್ರಾಮದಲ್ಲೂ ಕಂಡುಬರುವ ಗ್ರಾಮದೇವತೆಗಳ, ಜನಪದ ದೇವತೆಗಳ ಆಲಯಗಳು ಸಹ ಅನೇಕ ಸಂದರ್ಭಗಳಲ್ಲಿ ಗ್ರಾಮದ ಹೊರಗಿರುವುದನ್ನು ನೋಡಬಹುದು. 'ಸಮರಾಂಗಣ ಸೂತ್ರಧಾರ'ದಲ್ಲಿ ಇಂತಹ ಶಿಖರಗಳಿಲ್ಲದ ಚಪ್ಪಟೆಯ ಗರ್ಭಗೃಹಗಳುಳ್ಳ ಕಲ್ಲಿನ ಅಥವಾ ಇಟ್ಟಿಗೆಯ ಪ್ರಾಸಾದಗಳ ಪ್ರಸ್ತಾಪ ಬಂದಿದೆ.

ಬೃಹತ್ ಶಿಲಾಯುಗದ ಘನಾಕೃತಿಯ ಅರೆಗಳೇ ಕಾಲಾಂತರದಲ್ಲಿ ದೊಡ್ಡದೇವಾಲಯಗಳಲ್ಲಿ ಜಗತಿಯ ಮೇಲೆ, ಚಪ್ಪಟೆಯಾಗಿ ಕಟ್ಟಿದ ಅಡಿಪೀಠದ ಮೇಲೆ ಎತ್ತರಿಸಿದ ಗರ್ಭಗೃಹವಾಗಿ, ಅಂತಿಮವಾಗಿ ಉನ್ನತವಾದ ಮೇಲ್ಕಟ್ಟಡವನ್ನು ಪಡೆದುವೆನ್ನಬಹುದು. ಇಂತಹ ಕಟ್ಟಡಕ್ಕೆ ಸಾಂಚಿಯ ಬೌದ್ಧದೇವಾಲಯ (ಸಂಖ್ಯೆ ೧೭), ಏರನ್‌ನ ವಿಷ್ಣುಗೃಹಗಳು ನಿದರ್ಶನಗಳು. ಸರಿಸುಮಾರಾಗಿ ಅಂತಹ ಆಕೃತಿಯನ್ನು ಹೋಲುವ ನಾಲ್ಕು ಪಕ್ಕಗಳುಳ್ಳ ಮುಪ್ಪಟ್ಟೆಗೆ ಇಲ್ಲಿ ಘನಾಕೃತಿ ಎಂಬ ಮಾತನ್ನು ಬಳಸಿದೆ. ಆಂಧ್ರಪ್ರದೇಶದ ಕಂಬದೂರಿನ ಶಿವಾಲಯ ವಾಸ್ತವಿಕವಾಗಿ ಮೂಲತಃ ಒಂದು ಪಾಂಡುಕುಳಿಯಾಗಿದ್ದು ಅನಂತರ ಕಲ್ಲುಗಳನ್ನು ನಾಜೂಕಾಗಿ ಕೆತ್ತಿ ಜೋಡಿಸಿ ಅದನ್ನು ಗರ್ಭಗೃಹವಾಗಿ ಪರಿವರ್ತಿಸಲಾಗಿದೆ. ವೃತ್ತಾಕಾರದ ಪ್ರಾಸಾದಗರ್ಭಗೃಹಗಳೂ ಅಲ್ಲಲ್ಲಿ ಕಾಣಸಿಕೊಂಡಿವೆ. ಇವುಗಳಿಗೆ ವೃತ್ತಾಕಾರದ ವೈದಿಕ ಯಜ್ಞಕುಂಡಗಳೂ ನಂತರದ ಬೃಹತ್ ಶಿಲಾಯುಗದ ಕಲ್ಲಿನ ವೃತ್ತಗಳೇ ಮಾದರಿ. ರಾಜಾಸ್ಥಾನದ ಬೈರಾತ್‌ನಲ್ಲಿ ಇಂತಹ ಪ್ರಾಚೀನ ವೃತ್ತಾಕಾರದ ಆಲಯವಿದೆ. ಮೂಲರೂಪದಲ್ಲಿ ಈ ದೇವಾಲಯದ ಒಳವೃತ್ತದಲ್ಲಿ ಇಪ್ಪತ್ತಾರು ಅಷ್ಟಕೋನದ ಮರದ ಕಂಬಗಳಿದ್ದು ಅದನ್ನು ಸುತ್ತುವರಿದಂತೆ ಪ್ರದಕ್ಷಿಣಾಪಥವಾಗಿ ಒಂದು ಇಟ್ಟಿಗೆಯ ಗೋಡೆ ಇದೆ. ಇದು ಸುಮಾರು ಕ್ರಿ. ಪೂ. ೩-೨ನೆಯ ಶತಮಾನದ್ದು. ಕೇರಳದ ವೈಕೋಮ್, ತ್ರಿಕೋಟಿತ್ತಾನಮ್ ಮುಂತಾದ ಕಡೆ ಈಗಲೂ

ಜಂಬುಕಲ್ಲು ಹಾಗೂ ಮರದಿಂದ ಕಟ್ಟಿದ ವೃತ್ತಾಕಾರದ ಗುಡಿಗಳನ್ನು ಕಾಣಬಹುದು. ನೀಲಗಿರಿಯ ತೋಡರ ಗುಡಿಗಳೂ ಇದೇ ಆಕಾರದಲ್ಲಿರುವುದನ್ನು ಗಮನಿಸಬಹುದು.

ಬಂಡೆಗಳಲ್ಲಿ ಕೊರೆದ ವಿಶ್ರಾಂತಿಯ ಸ್ಥಳಗಳಿಗೆ ಲಯನ ಎಂದು ಹೆಸರು. ಅವುಗಳಿಗೆ ಯಾವ ತೆರನಾದ ಶ್ರೇಣಿ – ಎಂದರೆ ಮೇಲ್ಕಟ್ಟಡಗಳೂ ಒತ್ತುಗೋಡೆಗಳೂ ಗವಾಕ್ಷಿಗಳೂ ಇಲ್ಲ. ಲಯನದೊಳಗೆ ಏರಿಹೋಗಲು ಮೆಟ್ಟಿಲುಗಳಿರುತ್ತವೆ. ಮುಂಭಾಗದಲ್ಲಿ ದ್ವಾರ (ಪ್ರತೋಲಿ), ಉರುಳೆಯಾಕಾರದ ಕಪೋತ (ವಿಟಂಕ–ಕಪೋತಪಾಲಿಕಾ) ಹಾಗೂ ಬಾಗಿಲುಗಳು, ಇದಕ್ಕೆ ವೇದಿ ಇದ್ದು ಕಂಬ ಸಾಲಿನ ಮುಖಮಂಟಪ (ಪ್ರಾಗ್ರೀವ) ಇರುತ್ತದೆ. ಬಾದಾಮಿಯ ಗುಹೆಗಳು ಇದಕ್ಕೆ ನಿದರ್ಶನ. ಹೊರಗಿನಿಂದ ಕಲ್ಲನ್ನು ಕೆತ್ತಿ ಕಟ್ಟಿದ ದೇವಾಲಯಗಳ ಪ್ರತಿಕೃತಿಗಳನ್ನು ಎಬ್ಬಿಸಿದುದು ಮುಂದಿನ ಹೆಜ್ಜೆ. ಇದನ್ನು ತಮಿಳುನಾಡಿನ ಮಾಮಲ್ಲಪುರಮ್, ಕಳುಗುಮಲೈಗಳಲ್ಲೂ ಮಹಾರಾಷ್ಟ್ರದ ಎಲ್ಲೋರಾದಲ್ಲೂ ಕಾಣಬಹುದು. ಕಲ್ಲನ್ನು ಒಳಭಾಗದಿಂದಲೇ ಈ ರೀತಿ ಕೊರೆದುದಕ್ಕೆ ಎಲ್ಲೋರಾದ ಕೈಲಾಸನಾಥ ಹಾಗೂ ಇಂದ್ರಸಭೆಗಳು ಉದಾಹರಣೆಗಳು.

ಪ್ರಾಸಾದದ ಹರವಿಗೆ ವಿಸ್ತರಿಸಿದ ಚೌಕತಳವಿನ್ಯಾಸದ ಕತ್ತಲಾದ ಸಣ್ಣಕೋಣೆಯ ಆರಾಧನಮಂದಿರ, ಅದರ ಗೋಡೆಗಳ ಕಂಬಗಳ ಬೋದಿಗೆಗಳಿಂದ ಮೇಲೆದ್ದ ಎತ್ತರವಾದ ಮೇಲ್ಕಟ್ಟಡ ಅಥವಾ ಶಿಖರ, ಇದು ಒಳಗಿನ ವಿಗ್ರಹದ, ಸಂಕೇತದ ಪರಿಸರ. ಪ್ರಾಸಾದದ ಗೋಡೆಗಳಿಂದ ಮೇಲ್ಕಟ್ಟಡದ ಈ ಕಡಿದಾದ ಏರುವಿಕೆ, ತುದಿಯಲ್ಲಿ ಶಿಖರದತ್ತ ತ್ರಿಕೋಣಾಕೃತಿಯ ಒಳಚಾಚಿನೊಡನೆ ಸಂಯೋಜಿತವಾದಂತೆ ತೋರುತ್ತದೆ. ತನ್ನನ್ನು ಆಧರಿಸಿದ ಲಂಬವಾದ ಗೋಡೆಗಳಿಂದ ಮೇಲಕ್ಕೆ ಕಳಸದ ತುದಿಯವರೆಗೂ ಎದ್ದು ನಿಂತ ಎತ್ತರವಾದ ಈ ಕಟ್ಟಡ ಅದ್ಭುತವಾಗಿ ರೂಪುಗೊಂಡ ಏಕಾಂಶವಾಗಿ ಕಾಣುತ್ತದೆ. ಪ್ರಾಸಾದವು ಶಿಖರಾಗ್ರದವರೆಗೆ ಒಂದಂತಸ್ತಿನ ಮೇಲೆ ಇನ್ನೊಂದರಂತೆ, ಆದರೆ ಗಾತ್ರದಲ್ಲಿ ಕಿರಿದಾಗುತ್ತಾ ಮೇಲೇರಿ ಕೊನೆಯ ಭಾಗದಲ್ಲಿ ವೇದಿಯ ಆಕಾರವನ್ನು ತಾಳುತ್ತದೆ. ಅದರ ಮೇಲೆ ಮುಕುಟದಂತೆ ಆಮಲಕ, ತುದಿಯಲ್ಲಿ ಚೂಪಾದ ಬಿಂದುವುಳ್ಳ ಕಲಶ. ಉತ್ತರಭಾರತದಲ್ಲಿ ಪ್ರಾಸಾದದ ಸಮಗ್ರ ಕಟ್ಟಡವನ್ನೂ ದಕ್ಷಿಣಭಾರತದಲ್ಲಿ ಪ್ರಾಸಾದಗಳ ಮೇಲ್ಕಟ್ಟಡದ ಮೇಲಿನ ಅರ್ಧಗೋಲಾಕೃತಿಯ, ಮೇಲ್ಛಾವಣಿಗೆ ಸಂಬಂಧಿಸಿದಂತೆ ಒಳಬಾಗಿದ ವಕ್ರರೇಖಾಕೃತಿಯ, ಶೃಂಗಭಾಗವನ್ನು ಶಿಖರ ಎಂದು ಕರೆಯುತ್ತಾರೆ. ಸಾಮಾನ್ಯವಾಗಿ ಒಟ್ಟು ದೇವಾಲಯವನ್ನೇ ಪರ್ವತಕ್ಕೆ ಸಮನಾಗಿ (ಮೇರು, ಮಂದರ ಇತ್ಯಾದಿ) ಹೋಲಿಸಿದರೂ ಪ್ರಾಚೀನ ವಾಸ್ತುಶಾಸ್ತ್ರ ಗ್ರಂಥಗಳಲ್ಲಿ ಶಿಖರ ಎಂಬ ಮಾತನ್ನು ಗರ್ಭಗೃಹವನ್ನಾವರಿಸಿ ಪ್ರಾಸಾದದ ಗೋಡೆಗಳಿಂದ ಲಂಬಿಸಿ ನಿಂತ ಭಿನ್ನ ಭಿನ್ನವಾದ ಮೇಲ್ಕಟ್ಟಡಕ್ಕೂ ಅನ್ವಯಿಸಲಾಗಿದೆ. ಅದರ ಚೂಪಾದ ತುದಿಯನ್ನು ಕ್ರಿ.ಶ. ೫–೬ನೆಯ ಶತಮಾನಗಳಿಂದಾರಂಭಿಸಿ ಇಂದಿನ ಕಾಲದ ದೇವಾಲಯಗಳಲ್ಲೂ ಕಾಣಬಹುದಾಗಿದೆ. ಆದರೆ ಇದರ ಜೊತೆಯಲ್ಲಿ ಭಿನ್ನ ರೀತಿಯ ಪೀಪಾಯಿಯಾಕಾರದ ಛಾವಣಿಯುಳ್ಳ ಹಸ್ತಿಪೃಷ್ಠಾಕಾರದ ದೇವಾಲಯಗಳೂ ಏಣುಗಳುಳ್ಳ ಕಮಾನುಛಾವಣಿಯ ಆಯಾಕಾರದ ದೇವಾಲಯಗಳೂ ಉಳಿದು ಬಂದಿವೆ.

ದೇವಾಲಯಗಳ ಪ್ರಭೇದಗಳು

ವಿಮಾನಗಳ ಆಕಾರವನ್ನವಲಂಬಿಸಿ ದೇವಾಲಯಗಳ ಪ್ರಭೇದಗಳನ್ನು ವಿಂಗಡಿಸಲಾಗಿದೆ. ವಾಸ್ತುಗ್ರಂಥಗಳಲ್ಲಿ ದೇವಾಲಯಗಳ ನೂರಾರು ಮಾದರಿಗಳನ್ನು ಹೆಸರಿಸಿದೆ. ಇವುಗಳಲ್ಲಿ ಪ್ರಮುಖವಾದವು ಇಪ್ಪತ್ತು. ಮೇರು, ಮಂದರ, ಕೈಲಾಸ, ವಿಮಾನಚ್ಛಂದ, ನಂದನ, ಸಮುದ್ರ, ಪದ್ಮ, ಗರುಡ, ನಂದಿವರ್ಧನ, ಗಜ, ಗೃಹರಾಜ, ವೃಷ, ಹಂಸ, ಕುಂಭ, ಸರ್ವತೋಭದ್ರ, ಮೃಗರಾಜ, ವರ್ತುಲ, ಚತುರಸ್ರ, ಷೋಡಶಾಸ್ರ ಮತ್ತು ಅಷ್ಟಾಸ್ರ. ಮೊದಲ ಮೂರು ಮಾದರಿಗಳಲ್ಲಿ ಹಲವಾರು ಅಂತಸ್ತುಗಳು (ಭೂಮಿಗಳು) ಇರುತ್ತವೆ. ಗಜ ಎಂಬುದು ಗಜಪೃಷ್ಠಾಕೃತಿಯ ದೇವಾಲಯ. ವಿಮಾನಗಳಲ್ಲಿ ಐದು ವಿಧಗಳನ್ನು ಗುರುತಿಸಲಾಗಿದೆ. ವೈರಾಜ, ಪುಷ್ಪಕ, ಕೈಲಾಸ, ಮಣಿಕ ಮತ್ತು ತ್ರಿವಿಷ್ಟಪ. ವಿಮಾನ ಎಂಬ ಮಾತಿಗೆ ರಥ ಎಂಬ ಅರ್ಥವೂ ಇದೆ. ರಾವಣನು ಬಳಸುತ್ತಿದ್ದುದು ಪುಷ್ಪಕ ವಿಮಾನವೆಂಬುದನ್ನು ಇಲ್ಲಿ ನೆನೆಯಬಹುದು. ಮೇಲಿನ ಐದು ವಿಧಗಳೂ ಐದು ವಿಮಾನ–ರಥ–ಗಳನ್ನು ಪ್ರತಿನಿಧಿಸುತ್ತವೆ. ಅವು ಕ್ರಮವಾಗಿ ಬ್ರಹ್ಮ, ಕುಬೇರ, ಶಿವ, ವರುಣ ಹಾಗೂ ಇಂದ್ರರು ಬಳಸಿದ ರಥಗಳು. ಅವುಗಳ ಆಕಾರವನ್ನು ನಿರ್ದೇಶಿಸಿದೆ. ಅದರಂತೆ ವೈರಾಜ ಚೌಕಾಕಾರದ್ದು. ಇತರ ನಾಲ್ಕು ಕ್ರಮವಾಗಿ ಆಯ, ವೃತ್ತ, ಅಂಡವೃತ್ತ ಹಾಗೂ ಅಷ್ಟಕೋನ ಆಕಾರಗಳುಳ್ಳವು. ಇವುಗಳನ್ನು ಛಾವಣಿಗಳ ಆಕಾರವನ್ನಾಧರಿಸಿ ಮಾಡಿದ ಪ್ರಭೇದಗಳೆಂಬ ಕಾರಣದಿಂದ ಇವುಗಳನ್ನು ಛಾದ್ಯ ಪ್ರಾಸಾದಗಳೆಂದೂ ಕರೆಯಲಾಗಿದೆ.

'ಮಯಮತ', 'ವೈಖಾನಸಾಗಮ' ಮುಂತಾದ ದಾಕ್ಷಿಣಾತ್ಯ ಶಿಲ್ಪಗ್ರಂಥಗಳಲ್ಲಿ ದೇವಾಲಯಗಳನ್ನು ವಿಂಗಡಿಸಲು ಸೂಚಿಸಿರುವ ಪದ್ಧತಿ ಭಿನ್ನವಾದುದು. ದೇವಾಲಯಗಳ ಪ್ರಮಾಣ ಹಾಗೂ ಅವು ಎಷ್ಟರಮಟ್ಟಿಗೆ ಸರಳ ಅಥವಾ ಸಂಕೀರ್ಣ ಎಂಬುದನ್ನನುಸರಿಸಿ ವಿಂಗಡಣೆಗಳನ್ನು ಮಾಡಲಾಗಿದೆ. ಇದರಲ್ಲಿ ಶಿಖರ ಬಹಳ ಮುಖ್ಯವೆಂದು ಪರಿಗಣಿಸಲಾಗಿದೆ. ಮೇಲ್ಕಟ್ಟಡದ ಪ್ರತಿಯೊಂದು ಭೂಮಿಯನ್ನೂ ಸುತ್ತುವರಿದು ಪಾಗಾರದಂತೆ ಕಟ್ಟಲಾದ ಸೂಕ್ಷ್ಮ ಪ್ರಮಾಣದ ಗುಡಿಗಳ ಸಾಲುಗಳನ್ನುಳ್ಳದ್ದನ್ನು ಜಾತಿ ವಿಮಾನವೆಂದು ಕರೆದಿದೆ. ನಂತರದ ಕಾಲದಲ್ಲಿ ಇವನ್ನು ಪಾಗಾರಕ್ಕೆ ಬದಲಾಗಿ ಅಲಂಕರಣಕ್ಕಾಗಿ, ಸೌಂದರ್ಯಪುಷ್ಟಿಗಾಗಿ ಸಹ ಕಟ್ಟಲಾಯಿತೆಂಬುದನ್ನು ಮರೆಯಲಾಗದು. ಈ ಶಿಖರಗಳಲ್ಲಿ ಅವುಗಳ ವಿನ್ಯಾಸವನ್ನಾಧರಿಸಿ ಚತುರಸ್ರ, ಆಯತಾಸ್ರ, ವೃತ್ತ, ವೃತ್ತಾಯತ, ಶಾಲಾಕಾರ, ಷಡಸ್ರ, ಅಷ್ಟಾಸ್ರ ಮತ್ತು ಷೋಡಶಾಸ್ರ ಎಂಬ ಎಂಟು ಮಾದರಿಗಳನ್ನು ಗುರುತಿಸಿದೆ.

'ಸಮರಾಂಗಣ ಸೂತ್ರಧಾರ', 'ಕಾಮಿಕಾಗಮ', 'ಸುಪ್ರಭೇದಾಗಮ'ಗಳಲ್ಲಿ ದೇವಾಲಯಗಳ ಶೈಲಿಗಳನ್ನಾಧರಿಸಿ ನಾಗರ, ದ್ರಾವಿಡ ಹಾಗೂ ವೇಸರಗಳೆಂದು ವರ್ಗೀಕರಿಸಿದೆ. 'ಸಮರಾಂಗಣ ಸೂತ್ರಧಾರ'ದಲ್ಲಿ ವೇಸರಕ್ಕೆ ಬದಲು ವಾರಾಟ ಎಂಬ ಹೆಸರಿದೆ. 'ಕಾಮಿಕಾಗಮ' ದಲ್ಲಿ ಈ ವರ್ಗೀಕರಣಕ್ಕೆ ಆಧಾರಗಳನ್ನೂ ವಿವರಿಸಿದೆ. ಕರ್ನಾಟಕದ ೧೦–೧೨ ನೆಯ ಶತಮಾನಗಳ ಕೆಲವು ಶಾಸನಗಳಲ್ಲಿ ಈ ಶೈಲಿಗಳ ಪ್ರಸ್ತಾಪ ಬಂದಿರುವುದು ಕುತೂಹಲಕರವಾಗಿದೆ. ಸೋಗೆಯ ಪಾದೋಜನ ಶಿಷ್ಯ ಬಮ್ಮೋಜನನ್ನು ಹೊಳಲು ಗ್ರಾಮದ ಶಾಸನದಲ್ಲಿ 'ನಾಗರ ಕಳಿಂಗ ದ್ರಾವಿಡ ವೇಸರ ಚತುರ್ಜ್ಜಾತಿ ಪ್ರಾಸಾದ ವಿನಿರ್ಮ್ಮಿತ'ನೆಂದೂ 'ಚೌಷಷ್ಟಿ ಪ್ರಾಸಾದ ವಿಶಾರದ'ನೆಂದೂ ವರ್ಣಿಸಿದೆ. ಈ ಶಾಸನದ ಕಾಲ ಕ್ರಿ.ಶ. ೧೨೩೧. ಕ್ರಿ.ಶ. ೧೧೧೩ ನೆ. ವರ್ಷದ ದೊಡ್ಡಗದ್ದವಳ್ಳಿ ಶಾಸನದಲ್ಲಿ ಮೂಲಶಾಸನಕ್ಕೆ ಸಂಬಂಧಿಸದೆ ಪ್ರತ್ಯೇಕವಾಗಿರುವ ಶಾಸನವೊಂದರಲ್ಲಿ ವಿಮಾನ, ಸರ್ವತೋಭದ್ರ, ವೃಷಭ, ನಳಿನೀಕ, ಉತ್ತುಂಗ, ವೈರಾಜ, ಗರುಡ, ವರ್ಧಮಾನ, ಶಂಖ, ವೃತ್ತ, ಪುಷ್ಪಕ ಮತ್ತು ಗೃಹರಾಜವೆಂಬ ಭಿನ್ನ ಶೈಲಿಗಳ ಪ್ರಾಸಾದಗಳ ಉಲ್ಲೇಖವಿದೆ. ಕುಪ್ಪಟೂರಿನ ೧೨ನೆಯ ಶತಮಾನದ ಶಾಸನದಲ್ಲಿ ದ್ರಾವಿಡ, ಭೂಮಿಜ ಹಾಗೂ ನಾಗರಗಳೆಂಬ ಶೈಲಿಗಳ ಪ್ರಸ್ತಾಪವಿದೆ. ನಾಗರ ಶೈಲಿಯನ್ನೇ ಲತಿ ಅಥವಾ ಲತಿನ ಎಂದು ಕೆಲವು ವಾಸ್ತು ಶಾಸ್ತ್ರಗಳಲ್ಲಿ ಕರೆದಿದೆ. ಇವು ಬಹುಶಃ ಲಾಟದೇಶದಲ್ಲಿ ವಿಶೇಷವಾಗಿ ಕಾಣಿಸಿಕೊಂಡಿದ್ದ ಕಾರಣ ಇದಕ್ಕೆ ಆ ಹೆಸರು ಬಂದಿರಬಹುದು.

ವಾಸ್ತುಗ್ರಂಥಗಳು ರಚಿತವಾಗುವ ವೇಳೆಗೆ ಈ ಶೈಲಿಗಳು ಬಹುಮಟ್ಟಿಗೆ ರೂಪುಗೊಂಡಿದ್ದವು. ನಾಗರ, ಕಾಲಿಂಗ, ದ್ರಾವಿಡ, ವೇಸರ ಎಂಬೀ ಹೆಸರುಗಳು ಸ್ವಲ್ಪಮಟ್ಟಿಗೆ ಭೌಗೋಳಿಕ ಪ್ರದೇಶಗಳಿಗೆ ಸೀಮಿತವಾದಂತೆ ತೋರುತ್ತದೆ. ನಾಗರ ಶಾಲಿ ಉತ್ತರಭಾರತದಲ್ಲಿ (ವಿಂಧ್ಯ ಪರ್ವತಕ್ಕೆ ಉತ್ತರ), ವೇಸರ ವಿಂಧ್ಯ ಪರ್ವತಗಳಿಗೂ ಕೃಷ್ಣನದಿಗೂ ನಡುವಣ ಪ್ರದೇಶದಲ್ಲಿಯೂ ಹಾಗೂ ಕೃಷ್ಣೆಯ ದಕ್ಷಿಣದ ದಕ್ಷಿಣ ಭಾರತದಲ್ಲಿ ದ್ರಾವಿಡವೂ ಪ್ರಚಲಿತವಾಗಿದ್ದ ಪ್ರಾದೇಶಿಕಶೈಲಿಗಳೆಂದು ಹೇಳಿದೆ. ಮೇಲೆ, ಕರ್ನಾಟಕದ ಶಾಸನದಲ್ಲಿ ಕಾಣಿಸಿಕೊಂಡ ಕಾಲಿಂಗಶೈಲಿಯ ಪ್ರಸ್ತಾಪ ಮಾಡಿದೆ. ಇಲ್ಲಿ ಕಾಲಿಂಗ ಎಂಬ ಮಾತಿಗೂ ಪ್ರಾದೇಶಿಕ ಅರ್ಥವಿದ್ದಂತೆ ತೋರುತ್ತದೆ. ಮಾನಸಾರದಲ್ಲಿ ಒಂದುಕಡೆ ರಂಧ್ರ ಎಂಬ ಶೈಲಿಯ ರಥದ ಉಲ್ಲೇಖವಿದೆ. ಇಲ್ಲಿ ರಂಧ್ರ ಎಂಬುದು ಆಂಧ್ರ ಎಂಬ ಮಾತಿಗೆ ಅಪಭ್ರಂಶವಾಗಿರಬಹುದೆಂಬ ಸೂಚನೆಯನ್ನು ಪರಿಗಣಿಸಿದರೆ ಆಂಧ್ರ ಎಂಬುದು ಪ್ರದೇಶವಾಚಕವಾಗಿ ಬಹುಶಃ ಅದು ವೇಸರಕ್ಕೆ ಬದಲಾಗಿ ಬಳಸಲಾದ ಶೈಲಿಯ ಹೆಸರೆಂಬ ಅಭಿಪ್ರಾಯವೂ ಇದೆ.

ಆದರೆ ವಾಸ್ತುಗ್ರಂಥಗಳಲ್ಲಿ ಈ ಶೈಲಿಗಳ ಪ್ರಸ್ತಾಪ ಬಂದಾಗ ಅವುಗಳ ಆಕಾರ ಹೇಗಿದ್ದಿತೆಂಬ ಮಾತೇ ಇದೆ. ವಿನ್ಯಾಸದಲ್ಲಿ ನಾಗರ ಮೂಲದಿಂದ ಸ್ತೂಪಿಯವರೆವಿಗೂ ಆಯತಾಸ್ರವಾಗಿದ್ದು, ವೇಸರವು ವೃತ್ತಾಕಾರವಾಗಿಯೂ ದ್ರಾವಿಡವು ಅಷ್ಟಾಸ್ರ ಅಥವಾ ಷಡಸ್ರವಾಗಿದೆಯೆಂದಿದೆ. ವೇಸರ, ದ್ರಾವಿಡಗಳಿಗೆ ಸಂಬಂಧಿಸಿದಂತೆ ಇದು ಕಟ್ಟಡದ ಮೇಲ್ಭಾಗವನ್ನು ಕುರಿತು ಹೇಳಿದ ಮಾತೆಂಬುದನ್ನು ಇಲ್ಲಿ ಗಮನಿಸಬೇಕು. ನಾಗರ ಮೂಲದಿಂದ ಸ್ತೂಪಿಯವರೆವಿಗೂ ಆಯತಾಸ್ರವಾಗಿದ್ದರೆ ಉಳಿದೆರಡು ಕಂಠದಿಂದ ಸ್ತೂಪಿಯವರೆವಿಗೂ ಕ್ರಮವಾಗಿ ವೃತ್ತ ಹಾಗೂ ಅಷ್ಟಾಸ್ರವಾಗಿರುತ್ತದೆಂದು ಮಾನಸಾರ, ಕಾಮಿಕಾಗಮ ಮುಂತಾದ ಗ್ರಂಥಗಳಲ್ಲಿ ಹೇಳಿದೆ. ಸುಪ್ರಭೇದಾಗಮದಲ್ಲಿನ ಈ ಕೆಳಗಿನ ಶ್ಲೋಕವನ್ನು ಗಮನಿಸಬೇಕು.

> ನಾಗರಂ ದ್ರಾವಿಡಂ ಚೈವ ವೇಸರಂ ಚ ತ್ರಿಧಾ ಮತಮ್
> ಕಂಠಾದಾರಭ್ಯ ವೃತ್ತಂ ಯದ್ ವೇಸರಂ ಇತಿ ಶ್ರುತಮ್॥
> ಗ್ರೀವಮಾರಭ್ಯ ಚೌಷ್ಟಂಶಂ ವಿಮಾನಂ ದ್ರಾವಿಡಾಖ್ಯಕಮ್
> ಸರ್ವಂ ವೈ ಚತುರಶ್ರಂ ಯತ್ಪ್ರಾಸಾದಂ ನಾಗರಾಂತ್ವಿದಮ್॥

ವೇಸರ ಎಂಬ ಮಾತಿಗೆ ಹೇಸರಗತ್ತೆ ಎಂಬ ಹೆಸರಿದ್ದು ಇದು ನಾಗರ ಹಾಗೂ ದ್ರಾವಿಡ ಶೈಲಿಗಳ ಮಿಶ್ರಣದ ಶೈಲಿಯನ್ನು ಸೂಚಿಸುತ್ತದೆ ಎಂದೂ ಹೇಳಲಾಗಿದೆ.

ಈ ಶೈಲಿಗಳು ಪ್ರಾದೇಶಿಕವೆಂದರೂ ಈ ಶೈಲಿಗಳು ಅನ್ಯತ್ರ ಕಾಣಿಸಿಕೊಂಡಿಲ್ಲವೆನ್ನಲಾಗದು. ನಾಗರಶೈಲಿಯ ಆಲಯಗಳು ಕರ್ನಾಟಕ–ಆಂಧ್ರಪ್ರದೇಶಗಳ ಎಲ್ಲೆಗಳಲ್ಲೂ ದ್ರಾವಿಡಶೈಲಿಯ ಆಲಯಗಳು ಮಹಾರಾಷ್ಟ್ರದ ಎಲ್ಲೋರಾದಲ್ಲೂ ಕಾಣಿಸಿಕೊಂಡಿರುವುದು ಗಮನಾರ್ಹ. ಭೂಮಿಜ ಎಂಬ ಶೈಲಿಯ ಪ್ರಸ್ತಾಪವನ್ನು ಮೇಲೆ ಮಾಡಿದೆ. ಭೂಮಿಜ ಎಂದರೆ ಭೂಮಿಯಲ್ಲಿ (ಆ ಪ್ರದೇಶದಲ್ಲಿ) ಜನಿಸಿದುದು ಎಂಬ ಅರ್ಥದಲ್ಲಿ ಭೂಮಿಜ ಎಂಬುದು ವೇಸರಕ್ಕೇ ಇನ್ನೊಂದು ಹೆಸರು ಎಂಬ ವ್ಯಾಖ್ಯಾನವನ್ನೂ ಮಾಡಿದೆ. ಆದರೆ ಭೂಮಿಜ ಶೈಲಿ ಮಾಲವದೇಶಕ್ಕೆ ಸೇರಿದ್ದು; ಅಲ್ಲಿ ಅದರ ಆರಂಭವಾಯಿತೆನ್ನಲಾಗದಾದರೂ ಅದಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆತು ಅದು ವಿಕಸನಗೊಳ್ಳುವಂತಾದುದು ಅಲ್ಲಿ. ಆ ಬಳಿಕ ಆ ಶೈಲಿಯನ್ನು ಮಾಲವದ ಪರಮಾರರು, ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಯಾದವರು (ಸೇಉಣರು) ತಮ್ಮ ಪ್ರದೇಶದಲ್ಲಿ ಸ್ವೀಕರಿಸಿ ವಿಶೇಷವಾಗಿ ಬಳಸಿದರೆಂಬ ಅಭಿಪ್ರಾಯವನ್ನು ಇತ್ತೀಚೆಗೆ ವಿದ್ವಾಂಸರೊಬ್ಬರು ಪ್ರತಿಪಾದಿಸಿದ್ದಾರೆ.

ಯಾವುದೇ ಕಟ್ಟಡದಲ್ಲೂ ಪ್ರಾಮುಖ್ಯವಾದದ್ದು ಅತ್ಯವಶ್ಯಕವಾದ ಅದರ ನಕ್ಷೆ. ಇದು ದೇವಾಲಯಗಳಲ್ಲಿ ಎದ್ದು ತೋರುತ್ತದೆ. ಮೂಲತಃ ಎರಡು ವಿಧದ ನಕ್ಷೆಗಳನ್ನು ಬಳಸಿರುವುದು ಕಂಡು ಬರುತ್ತದೆ. ಒಂದು ಚೌಕ, ಇನ್ನೊಂದು ವೃತ್ತ. ಇಲ್ಲೂ ಚೌಕಾಕಾರಕ್ಕೇ ಪ್ರಾಶಸ್ತ್ಯ. ಏಕೆಂದರೆ, ವೃತ್ತವನ್ನು ಚೌಕದಲ್ಲಿ ಅಳವಡಿಸಬಹುದು. ಆಯಾಕಾರ, ಅಂಡಾಕಾರಗಳು ಸಹ ಚೌಕ ಹಾಗೂ ವೃತ್ತಗಳಲ್ಲಿ ಉಂಟಾದ ಮಾರ್ಪಾಡುಗಳೇ. ಅಷ್ಟ, ಷೋಡಶ, ಕೋನಗಳ, ಬಹುಭುಜಗಳ ನಕ್ಷೆಗಳಿಗಳವಡಿಸಿದ ಆಲಯಗಳೂ ಇವೆ. ಹಸ್ತಿ(ಗಜ) ಪೃಷ್ಠ ಆಕಾರದಲ್ಲಿ ಹಿಂಭಾಗ ಅರ್ಧವೃತ್ತಾಕಾರವಾಗಿದ್ದು ಮುಂಭಾಗ ಆಯಾಕಾರವಾಗಿರುತ್ತದೆ. ಇಲ್ಲಿ ಚೌಕ ಹಾಗೂ ವೃತ್ತಗಳನ್ನು ಸಂಯೋಜಿಸಲಾಗಿದೆ.

ದೇವಾಲಯ : ಪ್ರಮುಖ ಅಂಗಗಳು

ದೇವಾಲಯದ ಆರು ಪ್ರಮುಖ ಅಂಗಗಳನ್ನು ಅಧಿಷ್ಠಾನ, ಪಾದ, ಪ್ರಸ್ತರ, ಗಲ, ಶಿಖರ ಮತ್ತು ಸ್ತೂಪಿಗಳೆಂದು ಗುರುತಿಸಲಾಗಿದೆ. ದೇವಾಲಯದ ಎತ್ತರವನ್ನು ಅವಲಂಬಿಸಿ ಇವುಗಳ ಎತ್ತರವೂ ಪರಸ್ಪರವಾಗಿ ನಿಶ್ಚಯಿಸಿದ ಪ್ರಮಾಣಗಳಲ್ಲಿರುತ್ತವೆ. ಸಾಮಾನ್ಯವಾಗಿ ದೇವಾಲಯದ ಎತ್ತರವು ಅದರ ಅಗಲಕ್ಕೆ ಎರಡರಷ್ಟು ಪ್ರಮಾಣದಲ್ಲಿರುತ್ತದೆ. ಈ ಎತ್ತರವನ್ನು ಎಂಟು ಭಾಗಗಳಾಗಿ ಮಾಡಿದರೆ ಅದರಲ್ಲಿ ಒಂದು ಭಾಗ ಅಧಿಷ್ಠಾನಕ್ಕೆ, ಎರಡು ಭಾಗ ಪಾದ (ಅಥವಾ ಸ್ತಂಭ)ಕ್ಕೆ ಪ್ರಸ್ತರ ಮತ್ತು ಗಲಗಳಿಗೆ ಒಂದೊಂದು ಭಾಗ, ಶಿಖರಕ್ಕೆ ಎರಡುಭಾಗ ಮತ್ತು ಸ್ತೂಪಿಗೆ ಒಂದು ಭಾಗ ಮೀಸಲಾಗಿರುತ್ತದೆ. ಅಧಿಷ್ಠಾನದ ಕೆಳಗೆ ಕೆಲವು ಸಂದರ್ಭಗಳಲ್ಲಿ ಉಪಪೀಠವೆಂಬ ಭಾಗವಿರುತ್ತದೆ. ಇದೊಂದು ಐಚ್ಛಿಕವಾದ ಭಾಗ. ಇರಲೇಬೇಕೆಂಬ ನಿಬಂಧನೆ ಇಲ್ಲ. ಆದರೆ ಕಟ್ಟಡದ ಉನ್ನತಿ, ಶೋಭೆ ಮತ್ತು ರಕ್ಷಣೆಗಳಿಗಾಗಿ ಇದು ಇದ್ದರೆ ಒಳಿತು ಎಂಬ ಕಾರಣದಿಂದ ಇದನ್ನು ಅಳವಡಿಸಕೊಳ್ಳಲಾಗಿದೆಯಷ್ಟೆ. ಉಪಪೀಠದಂತೆಯೇ ಪದ್ಮ ಎಂಬುದೂ ಅಧಿಷ್ಠಾನದ ಬುಡದಲ್ಲಿ ಒಮ್ಮೊಮ್ಮೆ ಕಾಣಿಸಿಕೊಳ್ಳುವ ಭಾಗ. ಅಧಿಷ್ಠಾನದ ಪಾದುಕಾದ ಕೆಳಗೆ ಇದನ್ನು ಅಳವಡಿಸಲಾಗುವುದರಿಂದ ಇದನ್ನು ಪದ್ಮಪಾದುಕಾ ಎಂದೂ ಕರೆಯಲಾಗಿದೆ. ಇದು ಸಹ ಐಚ್ಛಿಕವೇ. ಈ ಒಂದೊಂದರಲ್ಲೂ ಅಲಂಕರಣಭಾಗಗಳಿವೆ.

ಚಿತಿಯನ್ನು ಹೋಲುವ ಸುದೃಢವಾದ ಎತ್ತರವಾದ ವೇದಿಕೆಯ ಮೇಲೆ ಗರ್ಭಗೃಹದ ಗೋಡೆ (ಭಿತ್ತಿ)ಗಳನ್ನು ಎಬ್ಬಿಸಲಾಗಿರುತ್ತದೆ. ವೇದಿ ಎಂಬ ಮಾತಿಗೆ ಕಟಾಂಜನ ಎಂಬ ಅರ್ಥವೂ ಇದ್ದು ಬೌದ್ಧ ಶಾಸನಗಳಲ್ಲಿ ಇದೇ ಅರ್ಥದಲ್ಲಿಯೇ ಈ ಮಾತನ್ನು ಬಳಸಲಾಗಿದೆ. ಇದನ್ನೇ ಯಾವುದೇ ಕಟ್ಟಡದ ಸುತ್ತುವರಿದ ಗೋಡೆ ಎಂದೂ ಅರ್ಥೈಸಬಹುದು. ಆದುದರಿಂದ ಇದು ವಾಸ್ತುಶಿಲ್ಪದ ಯಾವುದೇ ಆಕಾರವನ್ನೂ ಸೂಚಿಸುವುದಿಲ್ಲ. ಕಟ್ಟಡದ ತಳಭಾಗ ಎಂದು ಸಾಮಾನ್ಯ ಅರ್ಥದಲ್ಲಿಯೂ ಇದನ್ನು ಬಳಸಬಹುದು. ಆದರೆ ಇದು ಸೂಚ್ಯವಾಗಿ ಯಜ್ಞದ ಕಲ್ಪನೆಯನ್ನು ಮೂಡಿಸುತ್ತದೆ. ವೇದಿ ಎಂಬುದು ಯಜ್ಞವೇದಿ. ಮಧ್ಯದಲ್ಲಿ ಒಟ್ಟುಗೂಡಿದ ಚಿತಿ. ಯಜ್ಞದಲ್ಲಿ ಆಹುತಿ ನೀಡಿದಾಗ ಬೆಂಕಿಯ ಉರಿ ಮೇಲಕ್ಕೆ ಒಯ್ಯುತ್ತದೆ. ಪೀಠದ ಮೇಲಿನ ಸುತ್ತಲಿನ ಲಂಬಾಕಾರದ ಗೋಡೆಗಳು ಮತ್ತು ಮಧ್ಯೆ ಮೊನಚಾಗಿ ಮೇಲಿದ್ದ ಕಟ್ಟಡ ಈ ಉರಿಯನ್ನು ಸೂಚಿಸುತ್ತದೆ. ಈ ಪೀಠದ ಮೇಲೆ ಸಮತಲ ರೇಖೆಯ ಅಚ್ಚೊತ್ತಿದ ಅಲಂಕರಣದ ಭಾಗಗಳಾಗಲೀ ದೇವಾಲಯವೇ ಆಗಲಿ ಈ ವೇದಿಯ ಅಗ್ನಿಯನ್ನು ಪ್ರತಿನಿಧಿಸುವಂತೆ ಧ್ವನಿತವಾಗದಿದ್ದರೂ ಈ ಯಜ್ಞವಿಧಿಗಳ ಜ್ಞಾನವೇ ವಾಸ್ತುಶಿಲ್ಪದಲ್ಲಿ ಪ್ರತಿಕೃತಿಗಳಾಗಿ ಉಳಿದು ಬಂದಿವೆ ಎಂಬುದು ಹೊಸತೇನಲ್ಲ.

ಈ ಪೀಠದ ಮೇಲಿನ ಗೋಡೆಗಳಲ್ಲಿ, ವೇದಿಯಲ್ಲಿ ಬಲಿಯಾಗಬಹುದಾಗಿದ್ದ ಕುದುರೆ, ಶರಭ ಮುಂತಾದ ಪ್ರಾಣಿಗಳ, ಮನುಷ್ಯರ ತಲೆಗಳನ್ನು ಚಿತ್ರಿಸಿರುವುದನ್ನು ಇಲ್ಲಿ ಗಮನಿಸಬೇಕು. ಇವುಗಳು ಸಮತಲ ಪಟ್ಟಿಗಳಲ್ಲಿ ಆ ಗೋಡೆಗಳ ಮೇಲೆ ಕಾಣಿಸಿಕೊಂಡಿವೆ. ವಿನ್ಯಾಸದಲ್ಲಿ ಅರ್ಥದಲ್ಲಿ ಹೆಚ್ಚಿನ ಎತ್ತರಕ್ಕೆ ಏರಿಸಲಾದ ಮೇಲ್ಕಟ್ಟಡದ ತುದಿಯ ಭಾಗವಾದ ಶಿಖರಕ್ಕೂ ಇದೇ ಹೆಸರನ್ನು ನೀಡಲಾಗಿದೆ. ಶಿಖರದ ವೇದಿಯ ಮೇಲೆ ಕಿರೀಟಪ್ರಾಯವಾದ ಆಮಲಕವನ್ನೂ ಕಳಶವನ್ನೂ ಕೂಡಿಸಲಾಗಿದೆ. ಇದನ್ನು ಉತ್ತರವೇದಿ ಎಂದು ಕರೆಯಲಾಗಿದೆ.

ಅಧಿಷ್ಠಾನವನ್ನು ಆದ್ಯಂಗ–ಮೊದಲನೆಯ ಅಂಗವೆಂದು ವಿವರಿಸಲಾಗಿದೆ. ಕಟ್ಟಡದ ಅತಿ ಕೆಳಗಿನ ಭಾಗ ಇದು. ಕಾಮಿಕಾಗಮದಲ್ಲಿ ಅಧಿಷ್ಠಾನವನ್ನು ಕುರಿತು ಹೀಗೆ ಹೇಳಿದೆ:

ಮಾಸೂರಕಮಧಿಷ್ಠಾನಂ ವಾಸ್ತ್ವಾಧಾರಂ ಧರಾತಲಂ
ತಲಂ ಕುಟ್ಟಿಮಾದ್ಯಾಂಗಂ ಅಧಿಷ್ಠಾನಸ್ಯ ಕೀರ್ತಿತ

ಮಸೂರಕ, ವಾಸ್ತ್ವಾಧಾರ, ಧರಾತಲ, ತಲ, ಕುಟ್ಟಿಮ ಇವುಗಳು ಅಧಿಷ್ಠಾನಕ್ಕೆ ಸಮಾನಾರ್ಥಕ ಪದಗಳು. ಇದು ಬಹಳ ದೃಢವಾದ, ದೇವಾಲಯದ ಭಾರವನ್ನೆಲ್ಲಾ ಹೊರುವ, ಮಜಬೂತಾಗಿ ಕಟ್ಟಲ್ಪಟ್ಟ ಭಾಗ. ಅಧಿಷ್ಠಾನಕ್ಕೂ ಕೆಳಗೆ ಉಪಪೀಠ ಕೆಲವು ದೇವಾಲಯಗಳಲ್ಲಿ ಕಂಡುಬಂದಿದೆ. ಇದು ಸಹ ಅಲಂಕೃತವಾದ ಅಚ್ಚೊತ್ತಿದ ಜಗಲಿಯಂತಹ ಕಟ್ಟಡ. ಅಧಿಷ್ಠಾನದಲ್ಲಿರುವಷ್ಟು, ಅಥವಾ ವಿಸ್ತೀರ್ಣದಲ್ಲಿನ ವ್ಯತ್ಯಾಸಗಳನ್ನು ಅವಲಂಬಿಸಿ ಅಧಿಷ್ಠಾನದಲ್ಲಿ ಹಲವಾರು ವಿಧಾನಗಳನ್ನು ಗುರುತಿಸಲಾಗಿದೆ. ಈ ಅಲಂಕರಣ ಪಟ್ಟಿಗಳನ್ನು ಪಾದುಕಾ, ಜಗತಿ, ಕುಮುದ, ಗಲ, ಅಂತರಿಕ, ಕಂಪ, ಪಟ್ಟಿಕಾ (ಪಟ್ಟಾ) ಮತ್ತು ವಾಜನಗಳೆಂದು ಎಂಟು ಭಾಗಗಳಾಗಿ ಪರಿಗಣಿಸಲಾಗಿದೆ.

ಪಾದುಕಾ ಎಂಬುದು ಅಡಿಪಾಯದ ಮೇಲಿನ ಮುಂಚಾಚಿದ ಭಾಗ. ಉಪಾನ ಅಥವಾ ಜನ್ಮ ಎಂದೂ ಇದನ್ನು ಕರೆಯಲಾಗಿದೆ. ಜಗತಿ ಎಂಬುದು ಆಯತಾಕಾರದ ಎತ್ತರದ ಪಟ್ಟಿ. ಇದನ್ನು ಜಗಲಿ ಎಂದು ವರ್ಣಿಸಬಹುದು. ವಿಷ್ಣುಧರ್ಮೋತ್ತರ ಪುರಾಣದಲ್ಲಿ ಸಾಮಾನ್ಯ ಪ್ರಾಸಾದಗಳನ್ನು ಲಂಬರೇಖೆಯಲ್ಲಿ ಮೂರು ಸಮಾನಭಾಗಗಳಾಗಿ ವಿಂಗಡಿಸಿ ತಳಭಾಗವನ್ನು ಜಗತಿ ಎಂದು ಕರೆಯಲಾಗಿದೆ. ಇದರ ಮೇಲಿನದು ಕಟಿ, ಎಂದರೆ ಗೋಡೆಯ ಭಾಗ, ನಂತರದ್ದು ಮೇಲ್ಕಟ್ಟಡ. ಕುಮುದ ಎಂದರೆ ತಾವರೆ. ಇದು ಜಗತಿಯ ಮೇಲೆ ಲಂಬವ್ಯಾಸದಿಂದ ಮುಂಚಾಚಿರುವ ಅರೆ ಉರುಳೆಯ ದಿಂಡು. ಇದನ್ನು ಸಾಮಾನ್ಯವಾಗಿ ಅಧಿಷ್ಠಾನದ ಭಾಗದಲ್ಲೂ ಗೋಡೆಯ ಮೇಲೆ ಮುಂಚಾಚಿರುವ ಕಪೋತ ಭಾಗದಲ್ಲೂ ಅಳವಡಿಸಲಾಗಿರುತ್ತದೆ. ಅಷ್ಟಕೋನಾಕಾರದಲ್ಲೂ ಇರಬಹುದಾದ ಇದು ಎತ್ತರದಷ್ಟೇ ಪ್ರಮಾಣದಲ್ಲಿ ಮುಂಚಾಚಿರುತ್ತದೆ. ವೃತ್ತಾಕಾರದ ಕುಮುದವುಳ್ಳ ಅಧಿಷ್ಠಾನವನ್ನು ಪ್ರತಿಬಂಧವೆಂದೂ ಅಷ್ಟಕೋನಾಕಾರವುಳ್ಳದ್ದನ್ನು ಪಾದಬಂಧವೆಂದೂ ಕರೆಯಲಾಗಿದೆ.

ಕುಮುದದ ಮೇಲಿನ ಭಾಗ ಕಂಠ, ಕಂಧರ, ಗ್ರೀವ ಎಂದೂ ಕರೆಯಲ್ಪಟ್ಟ ಗಲ. ಇದೊಂದು ಚತುರ್ಭುಜಾಕೃತಿಯ ಪಟ್ಟಿ. ಒಮ್ಮೊಮ್ಮೆ ಚೌಕಾಕಾರದಲ್ಲಿ, ಒಮ್ಮೊಮ್ಮೆ ದೀರ್ಘ ಚತುರಸ್ರಾಕಾರದಲ್ಲೂ ಇರುತ್ತದೆ. ಆಧಾರ ಪೀಠಗಳಲ್ಲಿ ಈ ಕಂಠಭಾಗವು ಎತ್ತರವಾಗಿದ್ದು ಮೇಜುಕಟ್ಟನ್ನು ಹೋಲುತ್ತದೆ. ಅದರ ಹೊರತು ಇತರತ್ರ ಇದು ಸ್ಪಷ್ಟವಾದ ಗುರುತು, ಬಣ್ಣಗಳಿಲ್ಲದ ಭಾಗವಾಗಿದ್ದು ಇತರ ದಿಂಡುಗಳ ಮುಂಚಾಚನ್ನು ಇಲ್ಲಿಂದ ಅಳೆಯಲಾಗುತ್ತದೆ.

ಅಂತರಿತ ಎಂಬುದು ಇತರ ದಿಂಡುಗಳನ್ನು ಬೇರ್ಪಡಿಸುವ ಒಂದು ಪಟ್ಟಿ. ಆಲಿಂಗ ಎಂಬ ಇನ್ನೊಂದು ನೆತ್ತಿಯ ಪಟ್ಟಿಯೊಡನೆ ಸಂಬಂಧಿಸಿರುತ್ತದೆ. ಮಾನಸಾರದಲ್ಲಿ ಈ ಪಟ್ಟಿಗೆ ಕ್ಷೇಪಣ, ವೆತ್ರ, ಪಟ್ಟ, ಉತ್ತರ, ದೃಕ್ಕ ಮತ್ತು ಮುಂಡ ಎಂಬ ಸಮಾನಾರ್ಥ ಪದಗಳನ್ನು ಕೊಟ್ಟಿದೆ. ಕಂಪ ಎಂಬುದು ಚಪ್ಪಟೆಯಾದ, ಇತರ ದಿಂಡುಗಳನ್ನು ಬೇರ್ಪಡಿಸುವ ಅಲಂಕಾರ ಪಟ್ಟಿ.

ಪಟ್ಟಿಕಾ ಅಥವಾ ಪಟ್ಟಿ ಎಂಬುದು ಇದರ ಮೇಲಿನ ವಾಜನ ಎಂಬ ಭಾಗದಂತೆಯೇ ಕಂಡು ಬರುವುದರಿಂದ ಇವೆರಡರ ನಡುವೆ ಹೆಚ್ಚಿನ ವ್ಯತ್ಯಾಸ ಕಾಣಿಸುವುದು ಕಷ್ಟ. ಇದು ಎರಡು ಗೋಲುಗಳ ನಡುವಣ ಚಪ್ಪಟೆಯಾದ ಗೋಲುಪಟ್ಟಿ. ವಾಜನದಷ್ಟೇ ಎತ್ತರ, ಅಂತಹುದೇ ಆಕಾರ. ಪ್ರತಿ ಎಂಬುದು ದೀರ್ಘ ಚತುರಸ್ರಾಕಾರದ ದಿಂಡು. ಸಾಮಾನ್ಯವಾಗಿ ವಾಜನದೊಂದಿಗೆ ಸೇರಿದಂತೆಯೇ ಇರುತ್ತದೆ. ಅಧಿಷ್ಠಾನದ ಪಟ್ಟಿಗಳಲ್ಲಿ ಮೇಲಿನ ಭಾಗವಿದು. ಇದರ ಮೇಲೆ ವಾಜನ. ಕಂಪದಂತೆಯೇ ಇದು ದೀರ್ಘ ಚತುರಸ್ರಾಕಾರದಲ್ಲಿದ್ದರೂ ಅದಕ್ಕಿಂತಲೂ ಹೆಚ್ಚಾಗಿ ಮುಂಚಾಚಿರುತ್ತವೆ.

ಅಧಿಷ್ಠಾನದಿಂದ ದೇವಾಲಯದ ಅಂತಸ್ತು ಹೆಚ್ಚಿ ಅದು ಹೆಚ್ಚು ಶೋಭಿಸುತ್ತದೆ. ಕಟ್ಟಡದ ರಕ್ಷಣೆಗೂ ಅಧಿಷ್ಠಾನದ ಭದ್ರತೆ ಬಹಳ ಮುಖ್ಯ. ಗರ್ಭಗೃಹದಿಂದ ಆರಂಭಿಸಿ ಮಂಟಪಗಳಿಗೂ ಕಂಬಗಳಿಗೂ ಸಹ ಈ ಅಡಿಪಾಯ ಅತ್ಯವಶ್ಯಕ. ಒಂದರಿಂದ ನಾಲ್ಕು ಮೊಳಗಳವರೆವಿಗೂ ಇದರ ಎತ್ತರವಿರುತ್ತದೆ. ಅಧಿಷ್ಠಾನವನ್ನು ಎಬ್ಬಿಸುವ ಮೊದಲು ಭೂಮಿಯಲ್ಲಿ ತಗ್ಗು ತೋಡಿ ಅದರಲ್ಲಿ ಇಟ್ಟಿಗೆಯ ಚೂರುಗಳು, ಗ್ರಾನೈಟ್ ಕಲ್ಲುಗಳು, ಮರಳು ಮುಂತಾದವುಗಳನ್ನು ತುಂಬಿಸಿ ತುಳಿದು ಗಟ್ಟಿ ಮಾಡಬೇಕು. ಮಾನಸಾರದಲ್ಲಿ ೧೯ ಪಾರಿಭಾಷಿಕ ದರ್ಜೆಗಳಿಗೆ ಸೇರಿದ ಅಧಿಷ್ಠಾನದ ೬೪ ಬಗೆಗಳನ್ನು ಗುರುತಿಸಿದೆ. ಪಾದ, ಉರಗ, ಕುಮುದ, ವಜ್ರ, ಶ್ರೀ, ಮಂಚ, ಶ್ರೇಣಿ, ಪದ್ಮ, ಕುಂಭ, ವಪ್ರ, ರತ್ನ, ವಟ್ಟ, ಕಕ್ಷ ಮತ್ತು ಕಂಪಗಳೆಂಬ ೧೪ ಬಂಧಗಳು ಹಾಗೂ ಪ್ರತಿಕ್ರಮ, ಪದ್ಮಕೇಸರ, ಪುಷ್ಪ ಪುಷ್ಕಲ, ಶ್ರೀಭೋಗ ಮತ್ತು ಶ್ರೀಕಾಂತ ಎಂಬ ಇನ್ನೂ ೫ ಸೇರಿದಂತೆ ೧೯ ದರ್ಜೆಗಳು. ಇತರ ವಾಸ್ತುಶಿಲ್ಪ ಗ್ರಂಥಗಳಲ್ಲಿ ಬೇರೆ ಬಗೆಗಳನ್ನು ಹೆಸರಿಸಲಾಗಿದೆ. ಮಯಮತದಲ್ಲಿ ಜಾತಿ ಮತ್ತು ಭೂಮಿ ಎಂಬ ಎರಡು ಸ್ಥೂಲ ವಿಂಗಡಣೆಗಳಿದ್ದು, ಜಾತಿಯಲ್ಲಿ ನಾಲ್ಕು ಬಗೆಗಳನ್ನೂ ಭೂಮಿಯಲ್ಲಿ ೧೦ ಬಗೆಗಳನ್ನೂ ಗುರುತಿಸಿದೆ. ಶಿಲ್ಪರತ್ನದಲ್ಲಿ ಮಂಚಕ, ಪಾದಬಂಧ ಮತ್ತು ಪ್ರತಿಬಂಧಗಳೆಂಬ ಮೂರು ವಿಧಗಳನ್ನು ಹೇಳಿದೆ.

ಅಧಿಷ್ಠಾನದ ಮೇಲೆ ಚೌಕಾಕಾರದ ಗರ್ಭಗೃಹದ ಗೋಡೆಗಳನ್ನು ಎಬ್ಬಿಸಲಾಗುತ್ತದೆ. ಗರ್ಭಗೃಹದೊಳಗಿನ ಲಿಂಗಕ್ಕೋ, ಮೂರ್ತಿ ಶಿಲ್ಪಕ್ಕೋ ಅಭಿಷೇಕ ಮಾಡಿದ ನೀರು ಹೊರಬರಲು ಅಲ್ಲಿಂದ ಒಂದು 'ಅಂಬುಮಾರ್ಗ' ಹೊರಸೂಸುತ್ತದೆ. ಈ ತೆರೆದ ಅಥವಾ ಮುಚ್ಚಿದ ಸಣ್ಣ ಕಾಲುವೆ ಅಧಿಷ್ಠಾನದ ಮುಂದೆ ಹೊರಕ್ಕೆ ಚಾಚಿರುತ್ತದೆ. ಈ ಹೊರ ಚಾಚಿದ ಭಾಗ ಪ್ರಣಾಲ ಅಥವಾ ಮುಖನಾಳ. ಇದನ್ನು ಒಂದು ವ್ಯಾಲದ ಬಾಯಿಂದ ನೀರು ಚಿಮ್ಮುವಂತೆ ರೂಪಿಸಲಾಗಿರುತ್ತದೆ. ಅದರ ತುದಿ ಒಂದು ಗೋಮುಖ ವಿನ್ಯಾಸದಲ್ಲಿರುತ್ತದೆ. ಆದರೆ ಇತರ ವಿನ್ಯಾಸಗಳನ್ನೂ ಬಳಸಲಾಗಿರುತ್ತದೆ.

ಅಧಿಷ್ಠಾನಗಳಲ್ಲಿ ಹಲವಾರು 'ಬಂಧ'ಗಳನ್ನು ಗುರುತಿಸಲಾಗಿದೆ. 'ಮಂಚಬಂಧ'ದಲ್ಲಿ ಕುಮುದವೆಂಬ ಪಟ್ಟಿ ಇರುವುದಿಲ್ಲ. 'ಪ್ರತಿಬಂಧ' ಹಾಗೂ 'ಪಾದಬಂಧ'ಗಳಲ್ಲಿ, ಕುಮುದದ ವಿನ್ಯಾಸವನ್ನವಲಂಬಿಸಿ ಮಾಡಲಾದ ಭೇದಗಳು. ಕುಮುದವು ಮೂರಪಟ್ಟಿ (ತ್ರಿಪಟ್ಟು) ಗಳನ್ನೊಳಗೊಂಡಿದ್ದರೆ ಅಧಿಷ್ಠಾನವು 'ಪ್ರತಿಬಂಧ'ವೆನಿಸಿಕೊಳ್ಳುತ್ತದೆ. ವೃತ್ತಾಕಾರದಲ್ಲಿರುವ ಕುಮುದದ ಅಧಿಷ್ಠಾನ ಪಾದಬಂಧವಾಗುತ್ತದೆ. 'ಪ್ರತಿ'ಯೂ ಯಾವಾಗಲೂ ಗರ್ಭಗೃಹದ ಮಟ್ಟದಲ್ಲಿದ್ದು ಅದರಲ್ಲಿನ ಅಭಿಷೇಕ ಜಲವನ್ನು ಹೊರಗೊಯ್ಯುವ ಪ್ರಣಾಲವು ಪ್ರತಿಯನ್ನು ಭೇದಿಸುತ್ತದೆ. ಇದು ಪ್ರತಿಬಂಧದಲ್ಲಿ ಸಾಧ್ಯವೇ ಹೊರತು ತಮಿಳುನಾಡಿನ ಬಹುಮಟ್ಟಿನ ಆರಂಭದ ದೇವಾಲಯಗಳಲ್ಲಿ ಪಾದಬಂಧದಲ್ಲಿ ಪ್ರತಿಯನ್ನು ಹೀಗೆ ಭೇದಿಸಿರುವುದಿಲ್ಲ. ಮೊದಲು ಇಟ್ಟಿಗೆಗಳಲ್ಲಿ ಕಟ್ಟಿದ ಆಲಯವನ್ನು ಕಾಲಾನಂತರ ಕಲ್ಲಿನಲ್ಲಿ ಕಟ್ಟಿದಾಗ ಗರ್ಭಗೃಹದ ಮಟ್ಟಕ್ಕಿಂತಲೂ ಅಧಿಷ್ಠಾನದ ಮಟ್ಟ ಮೇಲಿರುತ್ತದೆ. ಅಂತಹ ಸಂದರ್ಭಗಳಲ್ಲಿ ಪ್ರನಾಲವು ಅಧಿಷ್ಠಾನದ ಕೆಳಗಿರುತ್ತದೆ.

ಗರ್ಭಗೃಹದ ಸುತ್ತಲೂ ಪ್ರದಕ್ಷಿಣೆ ಮಾಡಲು ಒಳಹಾದಿಯನ್ನು ರೂಪಿಸಿದ್ದಲ್ಲಿ ಆಗ ಅಧಿಷ್ಠಾನದ ಮೇಲೆ ಎರಡು ಗೋಡೆಗಳನ್ನು ಎಬ್ಬಿಸಲಾಗಿದ್ದು ಅವರೆಡರ ನಡುವೆ ಇಂತಹ ಪ್ರದಕ್ಷಿಣಾ ಪಥವಿರುತ್ತದೆ. ಗರ್ಭಗೃಹದ ಸುತ್ತಲೂ ಮುಚ್ಚಿದ ಪ್ರದಕ್ಷಿಣಾ ಪಥವುಳ್ಳ ದೇವಾಲಯಗಳನ್ನು ಸಾಂಧಾರ ದೇವಾಲಯಗಳೆಂದೂ ಹಾಗಿಲ್ಲದಿರುವವುಗಳನ್ನು ನಿರಂಧಾರಗಳೆಂದೂ ಕರೆಯಲಾಗಿದೆ. ಗರ್ಭಗೃಹದ ಸುತ್ತಲಿನ ಈ ಪಥವನ್ನು ಮಧ್ಯನಾಡಿ ಎಂದೂ ಹೆಸರಿಸಲಾಗಿದೆ. ಪಥವಿಲ್ಲದಿದ್ದಾಗ ಸಹಜವಾಗಿಯೇ ಎರಡು ಗೋಡೆಗಳ ಅವಶ್ಯಕತೆ ಇರುವುದಿಲ್ಲ. ದಪ್ಪನಾದ ಒಂದೇ ಗೋಡೆ ಸಾಕು.

ಗರ್ಭಗೃಹದ ಸುತ್ತಲಿನ ಗೋಡೆಗಳಿಂದ ಗಾಳಿ–ಬೆಳಕುಗಳ ಪ್ರವೇಶವಿಲ್ಲ. ಒಂದೇ ದ್ವಾರದ ಮೂಲಕ ಗಾಳಿ–ಬೆಳಕುಗಳು ಬರಬೇಕು. ಗೋಡೆಗಳ ಒಳಭಾಗದಲ್ಲಿ ವಿಶೇಷವಾಗಿ ಯಾವ ಅಲಂಕರಣವೂ ಇರುವುದಿಲ್ಲ. ಆದರೆ ಹೊರಮುಖಗಳಲ್ಲಿ ಅಲಂಕರಣಗಳನ್ನು ಕಾಣುತ್ತೇವೆ. ಈ ಅಲಂಕರಣಗಳನ್ನು ವೇದಿಕಾ, ಪಂಜರ, ಜಾಲಗಳೆಂದು ಗುರುತಿಸಿದೆ. ಗರ್ಭಗೃಹ ಹೊರತುಪಡಿಸಿ ಇತರ ಮಂಟಪಗಳ ಗೋಡೆಗಳಲ್ಲಿ ಗಾಳಿ–ಬೆಳಕುಗಳಿಗಾಗಿ ಜಾಲಗಳನ್ನು ಅಳವಡಿಸಲಾಗಿರುತ್ತದೆ. ಇವು ಜಾಲಂದರ ಕಿಟಕಿಗಳು. ಕಾಮಿಕಾಗಮದಲ್ಲಿ ಜಾಲಂದರಗಳಲ್ಲಿ ಏಳು ಮಾದರಿಗಳನ್ನು ಸೂಚಿಸಿದೆ. ಋಜು ಜಾಲಕ, ಗವಾಕ್ಷ, ಕುಂಜರಾಕ್ಷ, ಗೋಮೂತ್ರ, ಗಣಿಕಾ, ಪತ್ರ ಮತ್ತು ನಂದ್ಯಾವರ್ತ ಎಂಬಿವು ಆ ಏಳು ಮಾದರಿಗಳು. ಪಂಜರಗಳನ್ನು ನಾಸಿಕಗಳೆಂದೂ ಕರೆದಿದ್ದಾರೆ. ಮೂಗಿನಂತೆ ಗೋಡೆಯಲ್ಲಿ ಮುಂಚಾಚಿರುವ 'ಚಾಚುಪೀಠ'. ಗೂಡಿನಂತಹ ಈ ವಾಸ್ತುಶಿಲ್ಪದ ವಿನ್ಯಾಸವನ್ನು ಸಾಮಾನ್ಯವಾಗಿ ಗೋಡೆಯ ಎರಡು ಕಂಬಗಳ ನಡುವೆ ಅಳವಡಿಸಲಾಗಿರುತ್ತದೆ. ಇದು ಕೃತಕವಾದ ಕಿಟಕಿಯಂತೆಯೂ ಕಾಣುತ್ತದೆ.

ಕಟ್ಟಡಗಳಿಗೆ ಕಂಬಗಳು ಆಧಾರ. ಗರ್ಭಗೃಹದ ಗೋಡೆಗಳನ್ನೂ ಸಹ ಕಂಬಗಳ ನಡುವೆ ಕಟ್ಟಲಾಗುತ್ತದೆ. ವಾಸ್ತವಿಕವಾಗಿ ಕಂಬಗಳು ಛಾವಣಿಯ ಭಾರವನ್ನು ಹೊರುತ್ತವೆ. ಆ ಭಾರ ಕಂಬಗಳ ನಡುವೆ ಹಂಚಿಹೋಗಿರುತ್ತವೆ. ಪಂಜರಗಳು ನಾಸಿಕಗಳು – ಇವುಗಳ ಕೆಳಗೆ ಸಣ್ಣ ಕಂಬಗಳಿರುತ್ತವೆ. ಗೋಡೆಗಳ ನಡವಣ ಈ ಕಂಬಗಳನ್ನು ಅರೆಗಂಬಗಳೆಂದೂ ಕರೆಯುತ್ತಾರೆ.

ಭಾರತೀಯ ವಾಸ್ತುಶಿಲ್ಪದಲ್ಲಿ ಸ್ತಂಭಗಳಿಗೆ ಪ್ರಾಚೀನ ಕಾಲದಿಂದ ದೀರ್ಘ ಇತಿಹಾಸವಿದೆ ಎನ್ನಬಹುದು. ಇವುಗಳನ್ನು ಬಿಡಿ–ಬಿಡಿಯಾಗಿಯೂ ಕಟ್ಟಡಗಳ ಅಂಗಗಳಾಗಿಯೂ ಬಳಸುತ್ತಿದ್ದರು. ಋಗ್ವೇದದಲ್ಲೂ ನಂತರದ ವೈದಿಕ ಸಾಹಿತ್ಯದಲ್ಲಿಯೂ ಇದನ್ನು ಸ್ಥೂಣ ಎಂದು ಕರೆಯಲಾಗಿದೆ. ಋಗ್ವೇದದಲ್ಲಿ ಇದನ್ನು ಸ್ಕಂಬ ಎಂದೂ ಕರೆದಿದೆ. ಉಪಮಿತ್ ಎಂಬ ಮಾತನ್ನು ನೇರವಾಗಿ ನಿಲ್ಲಿಸಿದ ಕಂಬ ಎಂಬರ್ಥದಲ್ಲೂ ಬಳಸಿದೆ. ಅಶೋಕನು ನಿಲ್ಲಿಸಿದ ಸ್ತಂಭಗಳನ್ನೂ ಯಜ್ಞಕ್ಕೆ ಬಳಸಿದ ಯೂಪಸ್ತಂಭಗಳನ್ನೂ ಇಲ್ಲಿ ನೆನೆಯಬಹುದು. ಬೌದ್ಧ ಧರ್ಮೀಯರು ಈ ಕಂಬಗಳ ಕಾಂಡದ ಮೇಲೆ ಶಾಸನಗಳನ್ನೂ ಅವುಗಳ ಬೋದಿಗೆಗಳ ಮೇಲೆ ಪ್ರಾಣಿಗಳ, ಇತರ ಲಾಂಛನಗಳ ಚಿತ್ರಗಳನ್ನೂ ಕೊರೆಯಿಸಿದರು. ಜೈನರ ಬಸದಿಗಳ ಮುಂದೆ ಇವು ದೀಪಸ್ತಂಭ, ಮಾನಸ್ತಂಭ, ಬ್ರಹ್ಮದೇವರ ಕಂಬಗಳಾದುವು. ಹಿಂದೂ ದೇವಾಲಯಗಳಲ್ಲಿ ಧ್ವಜಸ್ತಂಭಗಳನ್ನೂ ಗರುಡಗಂಬಗಳನ್ನೂ ನಿಲ್ಲಿಸಿದರು. ಇವು ಸ್ವತಂತ್ರವಾಗಿ ಕಲಾತ್ಮಕವಾದ ವಾಸ್ತುಶೈಲಿಗಳ ಅಂಗಗಳೆನಿಸಿಕೊಂಡವು.

ಆದರೆ ಇವುಗಳನ್ನು ದೇವಾಲಯ ಮುಂತಾದ ಕಟ್ಟಡಗಳಲ್ಲಿ ಉಪಷ್ಟಂಭಗಳಾಗಿ ಬಳಸಲಾಯಿತು. ಮಾನಸಾರದಲ್ಲಿ ಸ್ತಂಭಗಳಿಗೆ ಜಂಘಾ, ಚರಣ, ಸ್ಥಲೀ, ಅಂಘ್ರಿಕ, ಸ್ಥಾಣು, ಥೂಣ, ಪಾದ, ಅರಣಿ, ಭಾರಕ, ಧಾರಣಗಳೆಂದೂ ಇತರ ಹೆಸರುಗಳನ್ನು ಕೊಟ್ಟಿದೆ. ಇದರ ಆಕಾರ ಹಾಗೂ ಅಲಂಕರಣಗಳನ್ನವಲಂಬಿಸಿ ಇವುಗಳಲ್ಲಿ ವಿಂಗಡಣೆಗಳನ್ನು ಮಾಡಿದೆ. ಮಾನಸಾರದಲ್ಲಿ ಬ್ರಹ್ಮಕಾಂತ, ವಿಷ್ಣುಕಾಂತ, ರುದ್ರಕಾಂತ, ಶಿವಕಾಂತ, ಸ್ಕಂದಕಾಂತಗಳೆಂಬ ಆಕಾರಗಳಿಗೆ ಸಮನಾಗಿ, ಅಲಂಕರಣಗಳನ್ನಾಧರಿಸಿ ಚಿತ್ರಕರ್ಣ, ಪದ್ಮಕಾಂತ, ಚಿತ್ರಸ್ಕಂಭ, ಪಾಲಿಕಾಸ್ತಂಭ ಮತ್ತು ಕುಂಭಸ್ತಂಭಗಳೆಂಬುದನ್ನು ಗುರುತಿಸಲಾಗಿದೆ. ಅಲ್ಲದೆ ಕೋಷ್ಠಸ್ತಂಭ ಎಂಬ ಗೋಡೆಗಳಲ್ಲಿನ ಕೋಷ್ಠಗಳಿಗೆ ಬಳಸಲಾದ ಎರಡು ಕಡೆಗಳ ಅರೆಗಂಬಗಳನ್ನು ಕುಡ್ಯಸ್ತಂಭ ಎಂದು ಗುರುತಿಸಿದೆ. ಈ ಕಂಬಗಳು ಕೆಳಗಿನಿಂದ ಮೇಲಿನವರೆವಿಗೂ ಏಕಪ್ರಕಾರವಾದ ಆಕಾರ–ಚೌಕ, ಅಷ್ಟಕೋನ, ಷೋಡಶಕೋನ ಅಥವಾ ವೃತ್ತಗಳಲ್ಲಿರುವುದು ಒಂದು ಬಗೆ. ಹಾಗಿಲ್ಲದೆ ಕೆಳಗೆ ಚೌಕಾಕಾರವಾಗಿದ್ದು ಮೇಲೆ ಅಷ್ಟಕೋನ ಅಥವಾ ವೃತ್ತಾಕಾರಗಳಲ್ಲೂ ಇರುವುದು ಇನ್ನೊಂದು ಬಗೆ. ಶಿಲ್ಪರತ್ನದಲ್ಲಿ ಬ್ರಹ್ಮಕಾಂತ, ವಿಷ್ಣುಕಾಂತ, ಇಂದ್ರಕಾಂತ, ಸ್ಕಂದಕಾಂತ, ಭಾನುಕಾಂತ, ಚಂದ್ರಕಾಂತ, ಈಶಕಾಂತ, ರುದ್ರಕಾಂತ, ಭದ್ರಕಾಂತ, ಇಷ್ಟಕಾಂತ, ವಜ್ರಕಾಂತ, ಚಿತ್ರಖಂಡ, ಶ್ರೀಬಂಧ, ಶ್ರೀವತ್ಸ, ದಂಡಪಾದ ಮುಂತಾದ ಭೇದಗಳನ್ನು ಸೂಚಿಸಿದೆ. 'ಸಮರಾಂಗಣ ಸೂತ್ರಧಾರ'ದಲ್ಲಿ ಪದ್ಮಕ, ಘಟ, ಪಲ್ಲವಕ, ಕುವೇರ ಮತ್ತು ಶ್ರೀಧರ ಎಂಬ ಐದು ಮುಖ್ಯ ಭಾಗಗಳನ್ನು ಹೆಸರಿಸಿ ೧೬ ಸ್ತಂಭಾಂಗಗಳನ್ನು ವಿವರಿಸಲಾಗಿದೆ.

ಕಂಬಗಳ ಎತ್ತರಗಳನ್ನು ಪಾದದಿಂದ ಬೋದಿಗೆಯ ತಳಭಾಗದವರೆವಿಗೆ ಅಳೆಯಲಾಗುತ್ತದೆ. ಪಾದದ ಮೇಲೆ ಅಧಿಷ್ಠಾನ (ಪೀಠ) ಇದ್ದು ಕಂಬವು ಪಾದದ ಎತ್ತರದ ಇಮ್ಮಡಿಯಷ್ಟು ಅಥವಾ ೧.೫, ೧.೨೫ರಷ್ಟು ಇರಬೇಕೆಂಬುದು ಮಾನಸಾರದಲ್ಲಿನ ಹೇಳಿಕೆ. ಆದರೆ ಕಾಶ್ಯಪದಲ್ಲಿ ಈ ಎತ್ತರ ಪಾದದ ಮುಮ್ಮಡಿಯಷ್ಟು ಅಥವಾ ಪೀಠದ ೬ ಅಥವಾ ೮ರಷ್ಟು ಇರಬಹುದೆಂದು ಹೇಳಿದೆ. ಕಂಬದ ಸುತ್ತಳತೆ ಎತ್ತರದ ೧/೬, ೧/೮, ೧/೯, ೧/೧೦ರಷ್ಟು ಇರಬಹುದೆನ್ನಲಾಗಿದೆ. ಮಯಮತದ ಭಾಷಾಂತರವೆನ್ನಲಾದ ತಮಿಳು ಹಸ್ತಪ್ರತಿಯೊಂದರಲ್ಲಿ ಕಂಬದ ಎತ್ತರವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ, ಪಾದ, ಪೀಠಗಳಿಗೆ ಒಂದೊಂದು ಭಾಗದ ಎತ್ತರವನ್ನು ನೀಡಬೇಕೆಂದಿದೆ. ಪಾದ–ಪೀಠಗಳೆರಡೂ ಸೇರಿ ಹೋದಾಗ ಈ ಎರಡೂ ಭಾಗಗಳ ಅಳತೆಯನ್ನು ಪರಿಗಣಿಸಬೇಕೆಂದು ಸೂಚಿಸಿದೆ.

ದಕ್ಷಿಣದ ದ್ರಾವಿಡ ಶೈಲಿಯ ದೇವಾಲಯಗಳಲ್ಲಿನ ಕಂಬಗಳಲ್ಲಿ ಸಾಧಾರಣವಾಗಿ ಐದು ಅಂಗಗಳಿರುತ್ತವೆ. ಅವುಗಳು ಓಮ, ಘಟ, ಮಂಡೀ, ವೀರಕಾಂಡ ಮತ್ತು ಪೋಚಿಕಾ (ಪೇಟಿಕಾ). ಓಮವು ಕಂಬದ ಅಡಿಭಾಗ. ಈ ಓಮ ಪೀಠವನ್ನು ಹಲವು ಸಂದರ್ಭಗಳಲ್ಲಿ ವಾಸ್ತವಿಕ ಅಥವಾ ಕಾಲ್ಪನಿಕವಾದ ಪ್ರಾಣಿಯ ಅಥವಾ ದೈವೀಸ್ವರೂಪದ ಆಕಾರಗಳಲ್ಲಿ ರೂಪಿಸಲಾಗಿರುತ್ತದೆ. ಅವು ಕುಳಿತಿರುವ ಅಥವಾ ಹಿಂಗಾಲುಗಳ ಮೇಲೆ ಎದ್ದು ನಿಂತಿರುವ ವ್ಯಾಲವೆಂಬ ಕಾಲ್ಪನಿಕವಾದ ಸಿಂಹದಂತಹ ಆಕೃತಿಗಳಲ್ಲಿ, ಆನೆ, ನಾಗ, ಭೂತ ಇತ್ಯಾದಿ ಆಕೃತಿಗಳಲ್ಲಿ ಇರುತ್ತವೆ. ಓಮದ ಮೇಲಿನ ಭಾಗ ಘಟ. ಇದನ್ನು ಕುಂಭ ಅಥವಾ ಕಲಶ ಎಂದೂ ಕರೆಯಲಾಗಿದೆ. ಇದು ಮಡಕೆ (ಘಟ) ಯಾಕಾರದಲ್ಲಿರುತ್ತದೆ. ಇದರ ಮೇಲೆ ಚೌಕಾಕಾರದ ಹಲಗೆಯಂತಹ ಮಂಡಿ (ಅಥವಾ ಫಲಕ). ಇಳಿಬಿದ್ದಿರುವ ಪುಷ್ಪಹಾರಗಳಂತಹ ಅಲಂಕರಣಗಳನ್ನು ಅಳವಡಿಸಲು ಇದು ಸೂಕ್ತವಾದ ಸ್ಥಾನವನ್ನು ಒದಗಿಸುತ್ತದೆ.

ಇದರ ಮೇಲೆ ವೀರಕಾಂಡ. ಇದನ್ನು ವೀರಕಂಠ ಎಂದೂ ಕರೆದಿದೆ. ಪದಶಃ ಇದು ಯೋಧನ ಕಂಠ ಎಂಬ ಅರ್ಥವನ್ನು ನೀಡುತ್ತದೆ. ಅತಿ ಮೇಲಿನ ಭಾಗ ಬೋದಿಗೆ. ಇದು ಕಂಬದ ತಲೆ ಕಟ್ಟಡ. ಇದರ ಮೇಲೆ ಮಾಳಿಗೆಯ ಒಳಭಾಗದ ತೊಲೆ ಬರುತ್ತದೆ. ಕಂಬಗಳಲ್ಲಿನ ವಿವಿಧ ಬಗೆಗಳನ್ನು ಮೇಲೆ ಗುರುತಿಸಲಾಗಿದೆ. ಅವುಗಳಲ್ಲಿ ಚಿತ್ರಕರ್ಣ, ಪದ್ಮಕಾಂಡ, ಚಿತ್ರಸ್ತಂಭ, ಪಾಲಿಕಾಸ್ತಂಭ ಮತ್ತು ಕುಂಭಸ್ತಂಭಗಳೆಂಬುವು ಕಂಬಗಳ ಮೇಲಿನ ಬೋದಿಗೆಗಳ ಅಲಂಕರಣಗಳನ್ನನುಸರಿಸಿ ಗುರುತಿಸಲಾದವುಗಳು. ಆದರೆ ಚಿತ್ರ, ಪತ್ರ ಮತ್ತು ತರಂಗಿಣಿ ಎಂಬುವು ಬಹಳಮಟ್ಟಿಗೆ ಪರಿಚಿತವಾದವುಗಳು. 'ಚಿತ್ರ'ದಲ್ಲಿ ಮಕರಗಳನ್ನೂ ವ್ಯಾಲಗಳನ್ನೂ ಭೂತಗಣಗಳನ್ನೂ ತೋರಿಸಿದ್ದರೆ. 'ಪತ್ರ' ದಲ್ಲಿ ಎಲೆಗಳ, ಬಳ್ಳಿಗಳ ಅಲಂಕರಣಗಳು, 'ತರಂಗಿಣಿ'ಯಲ್ಲಿ ಅಲೆಗಳಂತಹ ಅರೆಗೋಳವಿಯಾಕಾರಗಳನ್ನು ರೂಪಿಸಲಾಗಿರುತ್ತದೆ.

ಪ್ರಸ್ತರ ಎಂಬುದು ಕಂಬದ ಮೇಲೆ ಬರುವ ಪ್ರಮುಖ ಭಾಗ. ಈ ಕಂಬದ ಬೋದಿಗೆಯ ಮೇಲೆ ತೊಲೆ ಬರುತ್ತದೆ. ಇದನ್ನು ಕೆಲವು ವೇಳೆ ಉತ್ತರ ಎಂದು ಕರೆಯಲಾಗಿದೆ. ಆದರೆ ವಾಸ್ತವಿಕವಾಗಿ ಉತ್ತರ ಎಂಬುದು ಕಂಬದ ಮೇಲಿನ ಅಲಂಕರಣದ ಗಾಡಿಗಳ ನಡುವಣ ಆಯಾಕಾರದ ಗೋಲುಪಟ್ಟಿಗೆ ನೀಡಲಾದ ಹೆಸರು. ಈ ತೊಲೆಯ ಭಾಗ ಕಂಬದಿಂದ ಹಬ್ಬಿಕೊಂಡಿರುತ್ತದೆ. ತೊಲೆಯ ಮೇಲೆ ಅಗಲವಾಗಿರುವ ಅಲಂಕಾರಪಟ್ಟಿ, ಅದರ ಮೇಲೆ ಕಪೋತ. ಇವಿಷ್ಟನ್ನೂ ಸೇರಿಸಿ ಮೇಲುಪಾಯ ಎಂದು ಒಟ್ಟಾಗಿ ಕರೆಯಬಹುದು. ಪ್ರಸ್ತರ ಎಂಬುದಕ್ಕೆ ಪಾಶ್ಚಾತ್ಯ ವಾಸ್ತುಶಿಲ್ಪದ ದೃಷ್ಟಿಯಿಂದಲೂ ಮೇಲುಪಾಯ ಎಂಬ ಅರ್ಥವನ್ನೇ ಕೊಡಬಹುದಾಗಿದೆ. ಈ ಪ್ರಸ್ತರ ಎತ್ತರದಲ್ಲಿ ಕಂಬದ ಅರ್ಧದಷ್ಟಿರಬೇಕು ಎಂದು ಕಾಮಿಕಾಗಮದಲ್ಲಿ ಹೇಳಿದೆ. ಇದರ ಮೂರು ಉಪಭಾಗಗಳನ್ನು ಪಾದ, ಗಲ, ಮಸೂರಕ ಎಂದು ಇದೇ ಗ್ರಂಥದಲ್ಲಿ ತಿಳಿಸಿದೆ. ಪ್ರಸ್ತರದ ಕೆಳಭಾಗದಿಂದ ಮೇಲುಗಡೆಗೆ ಉತ್ತರ, ವಾಜನ, ಭೂತಾಲಿ, ಕಪೋತ, ಆಲಿಂಗಪಟ್ಟಿ, ಅಂತರಿಕ ಮತ್ತು ಪ್ರತಿಗಳೆಂಬ ಉಪಭಾಗಗಳಾಗಿ ಸಹ ಗುರುತಿಸಲಾಗಿದೆ. ಮಾನಸಾರದಲ್ಲಿ ಪ್ರಸ್ತರ ಒಂಭತ್ತು ವಿಧಗಳನ್ನು ವಿವರಿಸಿದೆ. ಇವುಗಳಲ್ಲಿ ವಾಜನವು ಮಧ್ಯೆ ಮಧ್ಯೆ ಕಾಣಿಸಿಕೊಳ್ಳುವ ಉಪಭಾಗ. ಪಟ್ಟಿಗಳಲ್ಲಿ ಭೂತಾಲಿಗಳಲ್ಲಿ ಮಕರ, ಭ್ರಮರ, ಭೂತಗಣ, ಯಕ್ಷ, ವಿದ್ಯಾಧರ ಇವರುಗಳ ಚಿತ್ರಗಳನ್ನು ಬಿಡಿಸಲಾಗಿರುತ್ತದೆ. ಕಾಮಿಕಾಗಮದಲ್ಲಿ ಪ್ರಸ್ತರವನ್ನು ಇನ್ನೊಂದು ವಿಂಗಡಣೆಯಲ್ಲಿ ಸ್ವಸ್ತಿಕ, ವರ್ಧಮನ, ನಂದ್ಯಾವರ್ತ ಮತ್ತು ಸರ್ವತೋಭದ್ರಗಳೆಂದು ಹೆಸರಿಸಿದೆ. ಸುಪ್ರಭೇದಾಗಮದಲ್ಲಿ ಗಜಶ್ರೇಣಿ, ಮೃಗಶ್ರೇಣಿಗಳನ್ನು ಪ್ರಸ್ತರದ ಕೊನೆಯಲ್ಲಿ ಯೋಜಿಸಬೇಕೆಂದು ಸೂಚಿಸಿದೆ. ಕಂಬದ ಮೇಲಿನ ಪ್ರಸ್ತರದ ಕೆಳಭಾಗವಾದ ಉತ್ತರ (ತೊಲೆ)ದ ದಪ್ಪ ಹಾಗೂ ಅಗಲಗಳಿಗೆ ಸಂಬಂಧಿಸಿದಂತೆ ಕಂಡೋತ್ತರ, ಪತ್ರೋತ್ತರ ಮತ್ತು ರೂಪೋತ್ತರವೆಂಬ ಮೂರು ವಿಧಗಳನ್ನು ಗುರುತಿಸಿದೆ. ಗರ್ಭಗೃಹದ ಚಾವಣಿಯ ಸುತ್ತುವರಿದ ಗೋಡೆಗಳ ಮೇಲಿನ ತುದಿಗಳು ಮುಂದೆ ಚಾಚುವಂತೆ ಮಾಡುವ ಕ್ರಿಯೆಗೆ ಕದಲಿಕಾಕರಣವೆನ್ನುತ್ತಾರೆ. ಇದರಿಂದ ಗರ್ಭಗೃಹದ ಮೇಲ್ಕಟ್ಟಡಕ್ಕೆ ಹೆಚ್ಚು ಅಗಲವಾದ ಆಧಾರ ದೊರಕಿದಂತಾಗುತ್ತದೆ.

ಗರ್ಭಗೃಹದ ಮೇಲಿನ ಭಾಗ ವಿಮಾನ. ವಾಸ್ತವಿಕವಾಗಿ ಈ ಮಾತನ್ನು ಅಧಿಷ್ಠಾನದ ಕೆಳಗಿನ ಉಪಪೀಠದಿಂದ ಹಿಡಿದು ಸ್ತೂಪಿಯವರೆಗಿನ ಅಂದರೆ ಮೇಲಿನ ತುದಿಯವರೆವಿಗೂ ಸಂಪೂರ್ಣ ಕಟ್ಟಡಕ್ಕೆ ಅನ್ವಯಿಸಲಾಗಿದೆ. ವಿಮಾನದ ಮಾದರಿಗಳನ್ನು ಕುರಿತು ಮೇಲೆ ಸೂಕ್ಷ್ಮವಾಗಿ ಪ್ರಸ್ತಾಪಿಸಿದೆ. ಮಾನ ಎಂದರೆ ಅಳತೆಗೋಲು, ಅಳೆಯುವಿಕೆ. ಎಲ್ಲಾ ಭಾಗಗಳನ್ನು ಪ್ರಮಾಣಬದ್ಧವಾಗಿ ಆದ್ಯಂತವಾಗಿ ಅಳೆಯಲಾದುದು ದೇವಗೃಹ. ಕ್ರಮಬದ್ಧವಾಗಿ ಅರಸನ ಅರಮನೆ ಮುಂತಾದ ಯಾವುದೇ ಕಟ್ಟಡಕ್ಕೂ ಈ ಹೆಸರನ್ನು ಅನ್ವಯಿಸಬಹುದು. ಆದರೆ ಗರ್ಭಗೃಹದ ಮೇಲ್ಕಟ್ಟಡಕ್ಕೂ ಇದೇ ಪದವನ್ನು ಪ್ರಯೋಗಿಸಿದೆ. ಇದು ಒಂದರಿಂದ ಹನ್ನೆರಡು ಅಂತಸ್ತುಗಳವರೆವಿಗೂ ಮೇಲಕ್ಕೇರಿರಬಹುದು. ಒಂದೊಂದು ಅಂತಸ್ತಿಗೂ ತಲ ಅಥವಾ ತಲಚ್ಛಂದ ಎಂದು ಹೆಸರು. ಮೇಲ್ಕಟ್ಟಡದ ವಿನ್ಯಾಸದಲ್ಲಿ ಸಾಮಂಜಸ್ಯವನ್ನು ಇದು ಸೂಚಿಸುತ್ತದೆ. ಒಂದೇ ಅಂತಸ್ತುಳ್ಳ ಏಕತಲ (ಅಥವಾ ಏಕಭೂಮಿ)ದಲ್ಲಿ ಎಂಟು ಬಗೆಗಳನ್ನು ಗುರುತಿಸಿದೆ. ಮೊದಲ ಐದು, ಏಳು, ಎಂಟು ತಲಗಳಲ್ಲಿಯೂ ಎಂಟೆಂಟು ಬಗೆಗಳಿವೆ. ಆರು ತಲಗಳ ವಿಮಾನಗಳಲ್ಲಿ ೧೩ ಬಗೆಗಳನ್ನೂ ಒಂಬತ್ತು ತಲಗಳ ಏಳು, ಹತ್ತು–ಹನ್ನೊಂದು ತಲಗಳ ಆರು ಮತ್ತು ಹನ್ನೆರಡು ತಲಗಳ ೧೦ ಬಗೆಗಳನ್ನೂ ಆ ಗ್ರಂಥದಲ್ಲಿ ವಿವರಿಸಿದೆ.

ಏಕತಲದ ವಿಮಾನ ಆರು ಭಾಗ (ಷಡಂಗ–ಷಡ್ವರ್ಗ)ಗಳನ್ನು ಹೊಂದಿರುತ್ತದೆ. ಈ ತಲದ ಮೇಲೆ ಇನ್ನೊಂದು ಹರ್ಮ್ಯ–ಸಣ್ಣಗೋಪುರ–ಮತ್ತು ಪ್ರಸ್ತರಗಳನ್ನು ಸೇರಿಸಿದ ಇನ್ನೊಂದು ಕಟ್ಟಡವನ್ನೇರಿಸಿದಾಗ ಅದು ದ್ವಿತಲವೆನಿಸಿಕೊಳ್ಳುತ್ತದೆ. ಇದಕ್ಕೆ ಅಷ್ಟಾಂಗ ವಿಮಾನವೆನ್ನುತ್ತಾರೆ. ಇದೇ ರೀತಿ ಒಂದೊಂದು ತಲವನ್ನೂ ಹನ್ನೆರಡು ಅಂತಸ್ತುಗಳವರೆವಿಗೂ ಏರಿಸಿಕೊಂಡು ಹೋಗಬಹುದು. ಮೂರು ಅಥವಾ ನಾಲ್ಕು ತಲಗಳುಳ್ಳ ಇಂತಹ ವಿಮಾನಗಳು ಜಾತಿವಿಮಾನಗಳೆಂದೂ ಐದರಿಂದ ಹೆಚ್ಚಿನ ೧೬

ಅಂತಸ್ತುಗಳವರೆವಿಗೂ ಮೇಲೇರಿದ ವಿಮಾನಗಳು ಮುಖ್ಯವಿಮಾನಗಳೆಂದೂ ಕರೆಯಲ್ಪಡುತ್ತವೆ. ಒಂದೊಂದು ತಲದಲ್ಲೂ ಗೂಡುಗಳಿಂದ ಅಥವಾ ಹೂಜಿಗಂಬಗಳಿಂದ ಸೇರಿಸಲಾದ ಕೂಟ, ಕೋಷ್ಠ, ಶಾಲಾ (ಅಥವಾ ಪಂಜರ)ಗಳನ್ನೊಳಗೊಂಡ ಸಣ್ಣ ಪ್ರಮಾಣದ ಗುಡಿಗಳ ಸರವಿರುತ್ತದೆ. ಇದಕ್ಕೆ ಹಾರ ಎಂಬ ಹೆಸರಿದೆ. ಸಹಜವಾಗಿಯೇ ಈ ಹಾರ ಏಕತಲ–ಅಲ್ಪ– ವಿಮಾನದಲ್ಲಿ ಕಾಣಬರುವುದಿಲ್ಲ. ಕ್ರಿ.ಶ. ಏಳನೆಯ ಶತಮಾನದವರೆಗಿನ ಕಟ್ಟಡಗಳಲ್ಲಿ ಈ ಹಾರ ಪ್ರತಿಯೊಂದು ತಲದಲ್ಲಿಯೂ ಕಾಣಿಸಿಕೊಳ್ಳುತ್ತದೆ. ಆದರೆ ನಂತರದ ಶತಮಾನಗಳಲ್ಲಿ ಮೇಲಿನ ಕೊನೆಯ ತಲದಲ್ಲಿ ಹಾರಕ್ಕೆ ಬದಲಾಗಿ ಗರ್ಭಗೃಹದಲ್ಲಿರುವ ದೇವರಿಗೆ ಸಂಬಂಧಿಸಿದ ವಾಹನ ಅಥವಾ ಲಾಂಛನಗಳನ್ನು ಅಳವಡಿಸುವ ಸಂಪ್ರದಾಯ ಆರಂಭವಾಯಿತು. ಆದುದರಿಂದ ಶಿವನ ಆಲಯಗಳಲ್ಲಿ ನಂದಿಯನ್ನೋ ಭೂತಗಣವನ್ನೋ, ದೇವಿ, ವಿಷ್ಣು ಅಥವಾ ಜೈನ ಆಲಯಗಳಲ್ಲಿ ಸಿಂಹವನ್ನೋ, ವಿಷ್ಣುವಿನ ಆಲಯಗಳಲ್ಲಿ ಗರುಡನನ್ನೋ ಈ ಸನ್ನಿವೇಶದಲ್ಲಿ ಅಳವಡಿಸಲಾಗಿರುವುದನ್ನು ಕಾಣುತ್ತೇವೆ. ಕೂಟ, ಶಾಲ, ಪಂಜರಗಳನ್ನು ತಲಗಳ ಮೂಲೆಗಳಲ್ಲಿ ಅಥವಾ ಪಕ್ಕಗಳ ಮೇಲ್ಭಾಗದಲ್ಲಿ ರಚಿಸಿದ್ದು ಅವುಗಳಿಗಿಂತ ಕಡಿಮೆ ಎತ್ತರದ ಕೈಪಿಡಿಯಂತಹ ಗೋಡೆಗಳಿಂದ ಸೇರಿಸಲಾಗಿರುತ್ತದೆ. ಈ ಕೈಪಿಡಿಗೋಡೆಗಳಲ್ಲಿ ಮುಂಚಾಚಿದ ಕಿಟಕಿಗಳಿದ್ದು ಅವುಗಳ ಮೇಲೆ ಬಾಗಿದ ಇಳಿಜಾರಾದ ಚಾವಣಿಗಳಿರುತ್ತವೆ. ಇವುಗಳನ್ನು ಕ್ಷುದ್ರ (ಅಲ್ಪ) ನಾಸಿಕಗಳೆಂದು ಕರೆಯುತ್ತಾರೆ. ಶಿಖರಗ್ರೀವದಲ್ಲಿ ಇಂತಹ ದೊಡ್ಡ ಪ್ರಮಾಣದ ಮುಂಚಾಚು ಗೂಡುಗಳಿದ್ದು ಅವುಗಳು ಮಹಾನಾಸಿಕಗಳು. ಒಂದು ತಲದ ಹಾರವನ್ನು ಅದರ ಮೇಲಿನ ತಲದ ಹಾರದ ನಡುವಣ ಗೋಡೆಯಿಂದ ಬೇರ್ಪಡಿಸಿ ಅಲ್ಲಿ ಪ್ರದಕ್ಷಿಣೆಗೆಂಬಂತೆ ಸಣ್ಣ ಪಥವನ್ನು ಬಿಟ್ಟಿದ್ದರೆ ಅಂತಹವುಗಳನ್ನು ಅನರ್ಪಿತಹಾರಗಳೆಂದು ಕರೆದಿದೆ. ಸಾಂಧಾರ ಗುಡಿಗಳಲ್ಲಿ ಹೊರಗೋಡೆ ಮೊದಲ ತಲದಷ್ಟು ಎತ್ತರಕ್ಕೆ ಮಾತ್ರವಿದ್ದು ಒಳಗೋಡೆ ಎರಡನೆಯ ತಲದ ಹರ್ಮ್ಯದವರೆಗೂ, ಹೊರಗೋಡೆಗಿಂತಲೂ ಎತ್ತರವಾಗಿ, ಮೇಲೆದ್ದಿರುತ್ತದೆ. ಮುಂಚಾಚಿದ ಅರೆಗಂಬಗಳ ಗೂಡುಗಳಲ್ಲಿ ವಿಗ್ರಹಗಳನ್ನು ಸ್ಥಾಪಿಸಲಾಗಿರುತ್ತದೆ. ಇಂತಹ ಗೂಡುಗಳನ್ನು ದೇವಕೋಷ್ಠಗಳೆನ್ನುತ್ತಾರೆ. ಇವು ಗರ್ಭಗೃಹದ ಸುತ್ತಲ ಹೊರಗೋಡೆಗಳಲ್ಲೂ ಕಾಣಿಸಿಕೊಳ್ಳುವುದು ಸಾಮಾನ್ಯ. ತಲಗಳ ಹಿಂಜರಿದ ಗೋಡೆಗಳಲ್ಲಿ ಆರಂಭದ ಶತಮಾನಗಳಲ್ಲಿ ಯಾವ ಅಲಂಕರಣಗಳಾಗಲೀ ವಿಗ್ರಹಗಳಾಗಲೀ ಇರದೆ ಕೇವಲ ಅರೆಗಂಬಗಳನ್ನು ಮಾತ್ರ ಕೆತ್ತಲಾಗುತ್ತಿತ್ತು. ಅನಂತರ ಅವುಗಳಲ್ಲಿ ಶಿಲ್ಪ ಫಲಕಗಳ, ಆಳವಿಲ್ಲದ ಗೂಡುಗಳು ಕಾಣಿಸಿಕೊಂಡುವು. ಅರೆಗಂಬಗಳು ಸಹ ಅಲಂಕೃತವಾದುವು.

ತಲಗಳು ಹೆಚ್ಚಿದಂತೆಲ್ಲಾ ಎತ್ತರದಲ್ಲೂ ಅಗಲದಲ್ಲೂ ಕಿರಿದಾಗುತ್ತಾ ಮೆಟ್ಟಿಲು ಮೆಟ್ಟಿಲಾಗಿ ಮೇಲೇರುತ್ತವೆ. ಇಂತಹ ವಿಮಾನಗಳನ್ನು ದ್ರಾವಿಡ ವಿಮಾನಗಳೆಂದು ಹೆಸರಿಸಿದೆ. ಇಲ್ಲಿ ಅಡ್ಡ ಸಮಾನಾಂತರ ಗೆರೆಗಳ ವಿನ್ಯಾಸವಿದೆ. ಮೇಲೇರಿದಂತೆಲ್ಲ ಸ್ವಲ್ಪವಾಗಿ ಒಳಬಾಗಿರುವ ನೇರ ಸಮಾನಾಂತರ ಪಟ್ಟಿಕೆಗಳಿದ್ದು, ಕೆಲವೆಡೆಗಳಲ್ಲಿ ನಾಲ್ಕು ಮೂಲೆಗಳಲ್ಲಿ ಚಿಕ್ಕ ಆಮಲಕಗಳನ್ನು ಅಳವಡಿಸಲಾಗಿರುವ ವಿಮಾನ ನಾಗರಶೈಲಿಯದು. ಇಲ್ಲಿ ವಿನ್ಯಾಸದಲ್ಲಿ ನೇರ ಏರುರೇಖೆಗಳಿಗೆ ಪ್ರಾಧಾನ್ಯ. ದ್ರಾವಿಡಶೈಲಿಯ ಶಿಖರದ ಮೇಲ್ಭಾಗದಲ್ಲಿ ಕವುಚಿ ಹಾಕಿದ ಬೋಗುಣಿಯಂತಹ ಅಥವಾ ಘಂಟೆಯಂತಹ ಗ್ರೀವ, ಅದರ ಮೇಲೆ ಕಳಶ. ನಾಗರಶೈಲಿಯ ಶಿಖರಗಳಲ್ಲಿ ಮೇಲೆ ಕಲ್ಲಿನಲ್ಲಿ ಕಡೆದ (ನೆಲ್ಲಿ ಕಾಯಿ ಆಕಾರದ) ಆಮಲಕ ಮತ್ತು ಅದರ ಮೇಲೆ ಸ್ತೂಪಿ. ನಾಗರ ಶೈಲಿಯಲ್ಲಿ ಕದಂಬನಾಗರ ಮತ್ತು ರೇಖಾನಾಗರಗಳೆಂಬ ಎರಡು ಬಗೆಗಳನ್ನು ಇತ್ತೀಚೆಗೆ ತಜ್ಞರೊಬ್ಬರು ಗುರುತಿಸಿದ್ದಾರೆ. ಕದಂಬನಾಗರವೆಂಬುದು ಪ್ರಮುಖವಾಗಿ ರೇಖಾನಾಗರಕ್ಕಿಂತ ಸ್ವಲ್ಪಮಟ್ಟಿಗೆ ಭಿನ್ನವಾದುದಾಗಿದ್ದು ಇದರ ಮೇಲ್ಕಟ್ಟಡದಲ್ಲಿ ಕಪೋತ ಮತ್ತು ಕಂಠಗಳನ್ನೊಳಗೊಂಡ ಉಬ್ಬುಗಳಿದ್ದು ಅವುಗಳ ಮೇಲೆ ಒಂದು ವೃತ್ತಾಕಾರದ ಗ್ರೀವ ಮತ್ತು ಅದರ ಮೇಲೆ ಆಮಲಕ ಶಿಲೆ ಇರುತ್ತದೆ ಎಂದು ಅಭಿಪ್ರಾಯಪಡಲಾಗಿದೆ. ಇದನ್ನು ಕೆಲವರು ಕದಂಬ–ಚಾಲುಕ್ಯ ಎಂದೂ ಕರೆದಿದ್ದಾರೆ. ರೇಖಾನಾಗರ ಅಥವಾ ರೇಖಾ ಪ್ರಾಸಾದಗಳ ಮೇಲ್ಕಟ್ಟಡ ವಕ್ರರೇಖೆಯಲ್ಲಿ ಒಳಬಾಗಿದ್ದು ಪಕ್ಕಗಳಲ್ಲಿನ ಭದ್ರ ಎಂಬ ಮುಂಚಾಚಿದ ಅಲಂಕೃತ ದಿಂಡು ಮತ್ತು ರೇಖೆಗಳು ಪ್ರಧಾನವಾಗಿ ಎದ್ದು ಕಾಣುತ್ತವೆ. ಇದರ ಮೇಲೆ ಕ್ರಮವಾಗಿ ಗ್ರೀವ, ಆಮಲಕ ಮತ್ತು ಕಳಶಗಳಿರುತ್ತವೆ. ಹಂತ ಹಂತಕ್ಕೂ ನಾಲ್ಕು ಮೂಲೆಗಳಲ್ಲಿ ಆಮಲಕಗಳನ್ನು ಕಾಣಬಹುದು. ಸ್ತೂಪಿ ಎಂಬುದು ಮೇಲ್ಭಾಗದ ಕವಚಿ ಹಾಕಿದ ಬೋಗುಣಿ ಅಥವಾ ಘಂಟೆಯಾಕಾರದ ಗುಮ್ಮಟ. ತಲೆಯ ಮೇಲಿನ ಉಷ್ಣೀಷ ಅಥವಾ ಶಿರೋಲಂಕಾರದ ಕಲ್ಪನೆಯಿಂದ ಮೂಡಿ ಬಂದ ಇದು ನಂತರದ ಕಾಲದಲ್ಲಿ ಪೂರ್ಣಕುಂಭದ ವಿನ್ಯಾಸ ಪಡೆಯಿತು. ಇದು ವಿಮಾನದ ಮೇಲ್ಕಟ್ಟಡದ ತುದಿ. ನಾಗರಶೈಲಿಯಲ್ಲಿ ಈ ಮೇಲ್ತುದಿಯಲ್ಲಿ ಆಮಲಕ ಶಿಲೆ ಇದ್ದು ಅದರ ಮೇಲೆ ಕಳಶವಿರುತ್ತದೆ. ಕಳಶವೆಂಬುದು ಅಗಲವಾದ ಬಾಯುಳ್ಳ ಪಾತ್ರೆ (ತಂಬಿಗೆ). ಇದು ಕಂಬದ ಬೋದಿಗೆಗಳ ಕೆಳಗೂ ಕಾಣಿಸಿಕೊಳ್ಳುತ್ತದೆ.

ವಾಸ್ತುಶಿಲ್ಪದ ಆರಂಭದ ಶತಮಾನಗಳಲ್ಲಿ ತೆರೆದ ಗರ್ಭಗೃಹಗಳಿರುತ್ತಿದ್ದುವು ಎಂದರೆ ಪೂಜಿಸುವ ಲಿಂಗದ ಸುತ್ತಲೂ ಯಾವುದೇ ಗೋಡೆಗಳಿಲ್ಲದೆ ನಾಲ್ಕೂ ಕಡೆಗಳಲ್ಲಿ ಸ್ತಂಭಗಳನ್ನಾಧರಿಸಿ ನಿಂತ ಸರಳಶೈಲಿಯ ಮೇಲ್ಛಾವಣಿಯ ಮಂಟಪಗಳಲ್ಲಿ ಈ

ಲಿಂಗಗಳಿರುತ್ತಿದ್ದುವು. ಕರ್ನಾಟಕದಲ್ಲಿ ಇಂತಹ ಕೆಲವು ಆರಂಭಕಾಲದಲ್ಲಿನ ಗುಡಿಗಳನ್ನು ಐಹೊಳೆಯಲ್ಲಿ ಕಾಣುತ್ತೇವೆ. ಅನಂತರವಷ್ಟೇ ಗರ್ಭಗೃಹವನ್ನು ಗೋಡೆಗಳಿಂದ ಮೂರು ಕಡೆ ಮುಚ್ಚುವ ಏರ್ಪಾಡು ಆಚರಣೆಗೆ ಬಂದಿತು. ಆದರೆ ಒಮ್ಮೊಮ್ಮೆ, ಮಹಾರಾಷ್ಟ್ರದಲ್ಲಿ ಎಲಿಫಾಂಟ, ಎಲ್ಲೋರಾ, ಜೋಗೇಶ್ವರಿಗಳಲ್ಲಿದ್ದಂತೆ ನಾಲ್ಕು ಕಡೆಗಳಲ್ಲೂ ಗರ್ಭದ್ವಾರಗಳು ಕಂಡುಬಂದಿವೆ. ಇಂತಹವುಗಳನ್ನು ಸರ್ವತೋಭದ್ರ ಲಕ್ಷಣದ ಗರ್ಭಗೃಹಗಳೆಂದು ಹೆಸರಿಸಲಾಗಿದೆ. ಗರ್ಭಗೃಹದಲ್ಲಿ ಇನ್ನೊಂದು ಬೆಳವಣಿಗೆಯನ್ನೂ ಗುರುತಿಸಬಹುದು. ಐಹೊಳೆಯ ರಾವಳಫಡಿ ಗುಹೆಯ ಒಳಗೆ ಮಧ್ಯದ ಗುಡಿಯಲ್ಲದೆ, ಎರಡೂ ಬದಿಗಳಲ್ಲೂ ಸಹ ಎರಡು ಗುಡಿಗಳಿದ್ದು, ಒಟ್ಟು ಮೂರು ಗುಡಿಗಳು ಎಂದೇ ಮಾಳಿಗೆಯೊಳಗೆ ಕಂಡು ಬಂದಿವೆ. ಇಂತಹವುಗಳು ತ್ರಿಕೂಟ (ತ್ರಿಕೂಟಾಚಲ)ಗಳೆನಿಸಿಕೊಂಡಿವೆ. ಎರಡರಿಂದ (ದ್ವಿಕೂಟ) ನಾಲ್ಕು (ಚತುಷ್ಕೂಟ) ಮತ್ತು ಐದು (ಪಂಚಕೂಟ) ಗುಡಿಗಳಿರುವ ಉದಾಹರಣೆಗಳೂ ಇವೆ. ಶ್ರವಣಬೆಳಗೊಳದ ಸಮೀಪದ ಕಂಬದಹಳ್ಳಿಯಲ್ಲಿ ಪಂಚಕೂಟ ಬಸದಿಯನ್ನು ಇಲ್ಲಿ ಉದಾಹರಣೆಯಾಗಿ ಹೆಸರಿಸಬಹುದು.

ನಾಗರಶೈಲಿಯ ವಿಮಾನಗಳಲ್ಲಿ ಇನ್ನೂ ಕೆಲವು ಗಮನಿಸಬೇಕಾದ ಅಂಗಗಳಿವೆ. ಅವುಗಳಲ್ಲಿ ಶುಕನಾಸ ಎಂಬುದೊಂದು. ವಾಚ್ಯಾರ್ಥದಲ್ಲಿ ಇದು ಗಿಣಿಯ ಮೂಗು. ಬಾಗಿದ ಹೊರರೇಖೆಗಳನ್ನುಳ್ಳದ್ದು. ನಾಗರ ವಿಮಾನದ ವಕ್ರರೇಖೆಯಲ್ಲಿ ಇದು ಮುಂಚಾಚಿರುತ್ತದೆ. ಮತ್ಸ್ಯಪುರಾಣ ಹಾಗೂ ಅಗ್ನಿಪುರಾಣಗಳಲ್ಲಿ ಇದರ ಪ್ರಸ್ತಾಪ ಬಂದಿದೆ. ಶಿಖರವನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ಕೆಳಗಿನ ಮಂಜರಿ ಎರಡು ಭಾಗಗಳನ್ನೊಳಗೊಂಡಿದೆಯೆಂದು ಹೇಳಿ ಅದರ ಮೇಲಿನ ವೇದಿ ಮತ್ತು ಶುಕನಾಸಗಳು ಇನ್ನೆರಡು ಭಾಗಗಳೆಂದು ವಿವರಿಸಲಾಗಿದೆ. ಆದರೆ ಶಿಖರವನ್ನೇ ಮಂಜರಿ ಎಂದು ಕರೆದು ಶುಕನಾಸ ಅದರ ಎತ್ತರದ ಅರ್ಧದಷ್ಟಿರುತ್ತದೆ ಎಂದು ಹೇಳಿದೆ. ಇದು ಶಿಖರದ ಕೆಳ ಅರ್ಧದ ಮುಂದಿನ, ಅಂತರಾಳದ ಮೇಲಿನ ಭಾಗ. ಈ ಮುಂಚಾಚಿರುವಿಕೆ (ನಿರ್ಗಮ)ಯನ್ನು ಪ್ರಮಾಣಬದ್ಧವಾಗಿ ಕವಚದಂತೆ ಶಿಖರಕ್ಕೆ ಮುಂಭಾಗದಲ್ಲಿ ಹೊಂದಿಸಲಾಗಿರುತ್ತದೆ. ಆಧುನಿಕ ವಾಸ್ತುಶಿಲ್ಪದಲ್ಲಿ ಮಾಳಿಗೆಯ ಮುಂಚಾಚಿದ ಸೂರುಗಳನ್ನು ಮುಚ್ಚುವುದು ಈ ಅಂಗದ ಕರ್ತವ್ಯ. ಆದರೆ ದೇವಾಲಯ ವಾಸ್ತುಶಿಲ್ಪದಲ್ಲಿ ಇದು ಅಲಂಕೃತ ಭಾಗ. ಆಕಾರದಲ್ಲಿ ಇದು ಗವಾಕ್ಷದಂತಿರುತ್ತದೆ ಎಂದು ವಿವರಿಸಲಾಗಿದೆ. ಗವಾಕ್ಷ ಎಂದರೆ ಹಸುವಿನ ಕಣ್ಣು. ಇದು ಬಾಗಿದ ಕಮಾನಿನಾಕಾರದ ಕಿಟಕಿಯಂತಿರುತ್ತದೆ. ಶುಕನಾಸ ಮೂಲತಃ ಬೋದಿಗೆಯ ಮೇಲಿನ ತೊಲೆಯ ಮೇಲೆ ಗ್ರೀವ ಮತ್ತು ಆಮಲಕಗಳ ಕೆಳಗೆ ಗರ್ಭಗೃಹದ ಮೇಲಿನ ಶಿಖರದ ಮುಂಭಾಗದಲ್ಲಿ ಅಳವಡಿಸಲಾಗುವ ಅಂಗ. ಕಮಾನಿನಂತೆ ತೆರೆದಿರುವ ಈ ಭಾಗ ಮೇಲ್ಕಟ್ಟಡದ ಭಾರವನ್ನು ಹೊತ್ತಿರುತ್ತದೆ. ಮೊದಮೊದಲು ಇವನ್ನು ಇಟ್ಟಿಗೆಗಳ ಕಟ್ಟಡದಲ್ಲಿ ಅಳವಡಿಸಿದಾಗ ದೊಡ್ಡ ಕಮಾನಾಗಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಕಲ್ಲಿನ ಬಳಕೆ ಬಂದ ಮೇಲೆ ಈ ಭಾರ ಹೊರುವ ಮುಂಚಾಚನ್ನು ಆಳವಾಗಿ ಮಾಡಬಹುದಾಗಿತ್ತು. ಈ ಕಮಾನಿನೊಳಗೆ ಗರ್ಭಗೃಹದಲ್ಲಿನ ದೇವರಿಗೆ ಸಂಬಂಧಿಸಿದ ದೇವ ವಿಗ್ರಹಗಳನ್ನು ಸ್ಥಾಪಿಸಲಾಗುತ್ತಿತ್ತು. ಈ ಶುಕನಾಸದ ಕಮಾನು ಸಾಮಾನ್ಯವಾಗಿ ಒಂದು ಸಿಂಹದ ಕಟವಾಯಿಂದ ಹೊರಸೂಸಿದಂತೆ ತೋರಿಸಲಾಗಿರುತ್ತದೆ. ಇದನ್ನು ಕೀರ್ತಿಮುಖ ಎಂದು ಕರೆದಿದೆ. ಈ ಕೀರ್ತಿಮುಖವನ್ನು ದೇವಾಲಯದ ಕಮಾನಿನ ಕಿಟಕಿಗಳ ಮೇಲೂ ಗೂಡುಗಳ ಮೇಲೂ ಶುಕನಾಸಗಳ ಮೇಲೂ ಕಂಡರಿಸಲಾಗಿರುತ್ತದೆ. ಈ ಕೀರ್ತಿಮುಖಗಳನ್ನು ಹಲವಾರು ನಿದರ್ಶನಗಳಲ್ಲಿ ಶಿವನ ಜಟಾಮುಕುಟದಲ್ಲೂ, ಶಿರೋಲಂಕಾರದಲ್ಲೂ, ನಾಗದ ತಲೆಯ ಮೇಲೂ ದೇವಾಲಯಗಳ ಮುಂದುಗಡೆ ಇರುವ ಮೆಟ್ಟಿಲುಗಳ ಪಕ್ಕಗಳಲ್ಲಿಯೂ ಕಾಣಬಹುದಾಗಿದೆ. ಭಾವ–ಭಂಗಿಗಳಲ್ಲಿ ಇದು ಸಿಂಹದಂತೆ ಕಾಣಿಸುವುದರಿಂದ ಇದನ್ನು ಸಿಂಹ ಮುಖವೆಂದೂ ಕರೆಯಲಾಗಿದೆ. ಭಾರತೀಯ ಮೂರ್ತಿಶಿಲ್ಪದಲ್ಲಿ ಇದೊಂದು ಪ್ರಮುಖ ಲಾಂಛನವಾಗಿದೆ. ದೇವರ ವಿಗ್ರಹದ ಹಿಂದಿನ ಪ್ರಭಾವಳಿಗಳಲ್ಲೂ ಇದು ಕಾಣಿಸಿಕೊಳ್ಳುತ್ತದೆ.

ಬೃಹತ್ಸಂಹಿತೆ, ವಿಷ್ಣುಧರ್ಮೋತ್ತರ ಪುರಾಣ ಮುಂತಾದ ಗ್ರಂಥಗಳಲ್ಲಿ ವಿಮಾನಗಳ ಐದು ಪ್ರಮುಖ ಆಕಾರಗಳನ್ನೂ ಅವುಗಳ ತಳಪಾಯದ ನಕ್ಷೆಯನ್ನು ಮಾತ್ರ ಆಧರಿಸಿ ಗುರುತಿಸಲಾಗಿದೆಯೇ ಹೊರತು ಮೇಲ್ಮೈ ಮುಂತಾದ ಇತರ ಅಂಶಗಳನ್ನು ಅಲ್ಲಿ ಪರಿಗಣಿಸಿಲ್ಲ. ವೈರಾಜ, ಪುಷ್ಪಕ, ಮಣಿಕ, ಕೈಲಾಸ ಮತ್ತು ತ್ರಿವಿಷ್ಟಪಗಳೆಂದು ಹೆಸರಿಸಲಾದ ಈ ಐದು ಆಕಾರಗಳು ಕ್ರಮವಾಗಿ ಚೌಕ (ಚತುರಸ್ರ), ದೀರ್ಘ ಚತುರಸ್ರ (ಆಯತಾಸ್ರ), ಅಂಡವೃತ್ತ (ವೃತ್ತಾಯತ), ವರ್ತುಲ (ವೃತ್ತ) ಮತ್ತು ಅಷ್ಟಕೋನ (ಅಷ್ಟಾಶ್ರ) ಆಕಾರಗಳಲ್ಲಿದ್ದು ಇವು ದೈವಶ್ರೇಣಿಗಳಿಗೆ ಸಂಬಂಧಿಸಿದವುಗಳಾಗಿವೆ. ವೈರಾಜ ಎಂಬುದು – ವಿರಾಟ ವ್ಯಾಪಿಸಿದ – ನಾಲ್ಕು ದಿಕ್ಕುಗಳನ್ನು ಸೂಚಿಸುತ್ತದೆ. ಪುಷ್ಪಕವು ರಾವಣನ ವಿಮಾನವನ್ನು ಸೂಚಿಸುವುದರಿಂದ ಅದರ ವರ್ಣನೆಯಂತೆ ಅದು ದೀರ್ಘ ಚತುರಸ್ರವಾಗಿರುತ್ತದೆ. ಮಣಿಕವು ಅಂಡಾಕಾರದ ರತ್ನವನ್ನೂ, ಕೈಲಾಸವು ಹಿಮಾಚ್ಛಾದಿತ ಶಿಖರದ ವೃತ್ತಾಕಾರವನ್ನೂ ಪ್ರತಿನಿಧಿಸಿದರೆ ತ್ರಿವಿಷ್ಟಪವು ಇಂದ್ರನ ಅಮರಾವತಿಯನ್ನು ಅಲಂಕರಿಸುವ ಅಷ್ಟಮಂಗಲಗಳನ್ನು ಪ್ರತಿನಿಧಿಸುವ ಅಷ್ಟಕೋನವನ್ನು ಸೂಚಿಸುತ್ತವೆ. ಈ ಮೂಲ ಐದು ಆಕಾರಗಳೇ ನಂತರ ೨೦ ನಾಗರ ದೇವಾಲಯಗಳಾಗಿ ಕವಲೊಡೆದು ಕ್ರಮೇಣ ಅಗ್ನಿಪುರಾಣದಲ್ಲಿ ೪೫ ಮತ್ತು ಸಮರಾಂಗಣ ಸೂತ್ರಧಾರದಲ್ಲಿ ೬೪ ಭಿನ್ನ ಆಕೃತಿಗಳಾಗಿ ವಿಕಸಿಸಿವೆ. ಆದರೆ ಗರ್ಭಗೃಹದ ವಿನ್ಯಾಸ ದೀರ್ಘ

ಚತುರಸ್ರವಾಗಿದ್ದರೆ ಮೇಲಿನ ಶಿಖರ ಅರೆಕೊಳವಿ (ಕಮಾನುಬಂಡಿ) ಆಕಾರದಲ್ಲೂ, ವೃತ್ತವಾಗಿದ್ದರೆ ಅದೇ ಆಕಾರದಲ್ಲೂ ಇರುತ್ತವೆ. ಗರ್ಭಗೃಹ ಚೌಕಾಕಾರವಾಗಿದ್ದಾಗ ವಿಮಾನ ಯಾವುದೇ– ಚೌಕ, ವೃತ್ತ, ದೀರ್ಘ ಚತುರಸ್ರ – ಆಕಾರದಲ್ಲಿಯಾದರೂ ಇರಬಹುದಾಗಿದೆ.

ಒಂದರ ಮೇಲೊಂದರಂತೆ ಎರಡು ಗರ್ಭಗೃಹಗಳುಳ್ಳ ವಿಮಾನಗಳು ಸಾಮಾನ್ಯವಾಗಿ ಕೆಲವು ವೈಷ್ಣವಾಲಯಗಳಲ್ಲಿ ಕಂಡು ಬಂದಿವೆ. ವಿಷ್ಣು ನಿಂತಿರುವ (ಸ್ಥಾನಕ), ಕುಳಿತಿರುವ (ಆಸೀನ) ಮತ್ತು ಮಲಗಿರುವ (ಶಯನ) ಭಂಗಿಗಳಲ್ಲಿ ವೈಷ್ಣವಾಲಯಗಳಲ್ಲಿ ಕಾಣಸಿಕೊಂಡು ಒಮ್ಮೊಮ್ಮೆ ಈ ಮೂರು ಭಂಗಿಗಳೂ ಒಂದರ ಮೇಲೊಂದರಂತೆ ಮೂರು ಗರ್ಭಗೃಹಗಳಲ್ಲಿವೆ. ವಿಶೇಷವಾಗಿ ಇಂತಹ ಆಲಯಗಳು ತಮಿಳುನಾಡಿನಲ್ಲಿ ಕಾಂಚೀಪುರದ ವೈಕುಂಠನಾಥ, ಉತ್ತರಮೇರೂರಿನ ಸುಂದರವರದರಾಜ, ಮನ್ನಾರ್ ಕೋವಿಲಿನ ವಿಷ್ಣು ಮುಂತಾದ ಆಲಯಗಳಲ್ಲಿವೆ. ಕರ್ನಾಟಕದಲ್ಲಿ ಇಂತಹ ಒಂದೆರಡು ಪ್ರಾಚೀನ ನಿದರ್ಶನಗಳನ್ನು ನೋಡಬಹುದು. ಉದಾಹರಣೆಗೆ ಐಹೊಳೆಯ ಲಾಡಖಾನ್‌ನಲ್ಲಿ ಮಾಳಿಗೆಯ ಮೇಲೆ ಇನ್ನೊಂದು ಗರ್ಭಗೃಹವಿದೆ.

ಗರ್ಭಗೃಹದೊಳಗಿನ ಮೂರ್ತಿಯ ಭಂಗಿಯನ್ನಾಧರಿಸಿ ವಿಮಾನಗಳು ರೂಪುಗೊಳ್ಳುವುದಿದೆ. ಉದಾಹರಣೆಗೆ ಪಂಚವೀರ ಅಥವಾ ಸಪ್ತಮಾತೃಕೆಗಳನ್ನು ಪ್ರತಿಷ್ಠಿಸಿದ ಆಲಯಗಳಲ್ಲಿ ಅವು ಒಂದರ ಪಕ್ಕದಲ್ಲೊಂದರಂತೆ ಇರುವುದರಿಂದ ಗರ್ಭಗೃಹವೇ ದೀರ್ಘ ಚತರಸ್ರಾಕಾರದಲ್ಲಿ ಅಥವಾ ವೃತ್ತಾಯತವಾಗಿ ಇರುತ್ತದೆ. ಮದರಾಸಿನ ಪಾರ್ಥಸಾರಥಿ ದೇವಾಲಯದ ಗರ್ಭಗೃಹದಲ್ಲಿ ಪಂಚವೀರರ (ಕೃಷ್ಣ, ಬಲರಾಮ, ಅನಿರುದ್ಧ, ಪ್ರದ್ಯುಮ್ನ ಮತ್ತು ಸಾತ್ಯಕಿ) ಹಾಗೂ ಸುಭದ್ರೆಯ ವಿಗ್ರಹಗಳು ಸಾಲಾಗಿವೆ. ಆದಕಾರಣ ಗರ್ಭಗೃಹ ದೀರ್ಘ ಚತುರಸ್ರಾಕಾರದಲ್ಲಿದೆ. ರಂಗನಾಥನದು ಸಾಮಾನ್ಯವಾಗಿ ಶಯನಭಂಗಿಯ ವಿಗ್ರಹವಾದ ಕಾರಣ ಆ ವಿಗ್ರಹದ ಗರ್ಭಗೃಹವೂ ದೀರ್ಘ ಚತುರಸ್ರ ಅಥವಾ ವೃತ್ತಾಯತ ವಿನ್ಯಾಸಗಳಲ್ಲಿರಬೇಕಾದುದು ಸಹಜ. ಕರ್ನಾಟಕದಲ್ಲಿ ಹಂಪೆಯ ಸಮೀಪದ ಅನಂತಶಯನ ಗುಡಿಯನ್ನು ಇಲ್ಲಿ ಉದಹರಿಸಬಹುದಾಗಿದೆ. ಅಂತೆಯೇ ಸಾಮಾನ್ಯವಾಗಿ ಶಿವಾಲಯಗಳಲ್ಲಿರುವ ದೇವಿಯ ಗುಡಿಗಳೂ ದೀರ್ಘ ಚತುರಸ್ರಾಕಾರದಲ್ಲಿರುತ್ತವೆ.

ಗರ್ಭಗೃಹವನ್ನೂ ಮುಂದಿನ ಮಂಟಪಗಳನ್ನೂ ಸೇರಿಸುವ ಭಾಗ ಅಂತರಾಳ. ಗರ್ಭಗೃಹದ ಮುಂದಿನ ಈ ಮೊಗಸಾಲೆಯನ್ನು ಅರ್ಧಮಂಡಪ ಎಂದೂ ಕರೆಯುತ್ತಾರೆ. ಇದು ಗರ್ಭಗೃಹದ ಅಧಿಷ್ಠಾನದ ಮೇಲೆಯೇ ಕಟ್ಟಲ್ಪಟ್ಟ ಭಾಗ. ಸಾಮಾನ್ಯವಾಗಿ ವಿಮಾನದಲ್ಲಿನ ಶುಕನಾಸ ಈ ಅಂತರಾಳದ ಮೇಲೆ ಎಬ್ಬಿಸಲ್ಪಟ್ಟಿರುತ್ತದೆ. ಕೆಲವು ಸಂದರ್ಭಗಳಲ್ಲಿ ಸಾಂಧಾರ ದೇವಾಲಯಗಳಲ್ಲಿ ಗರ್ಭಗೃಹದ ಪ್ರದಕ್ಷಿಣೆಗಾಗಿ ಈ ಅಂತರಾಳದ ಎರಡು ಪಕ್ಕಗಳಲ್ಲಿಯೂ ಬಾಗಿಲುಗಳು ತೆರೆದಿರುತ್ತವೆ. ಸಾಮಾನ್ಯವಾಗಿ ಇದು ನೀಳ ಚೌಕಾಕಾರದಲ್ಲಿರುತ್ತದೆ. ಪ್ರಾಚೀನ ಶತಮಾನಗಳಲ್ಲಿ, ದೇವಾಲಯ ವಿನ್ಯಾಸದ ಆರಂಭದ ಶತಮಾನಗಳಲ್ಲಿ, ಗರ್ಭಗೃಹ, ಅಂತರಾಳ ಮತ್ತು ಅದರ ಮೇಲಿನ ವಿಮಾನ, ಇವಿಷ್ಟು ಮಾತ್ರ ದೇವಾಗಾರಗಳೆನಿಸಿಕೊಂಡಿದ್ದುವು. ಆಗಮಶಾಸ್ತ್ರಗಳೂ ಮತ್ತು ಸಂಸ್ಕಾರಗಳೂ ವಿಸ್ತರಿಸಿದಂತೆಲ್ಲಾ ದೇವಾಲಯಗಳೂ ವಿಸ್ತರಿಸಿದುವು. ಅರ್ಧ ಮಂಡಪದ ಮುಂದೆ ಮಹಾಮಂಡಪ, ಮುಖಮಂಡಪ, ಅಗ್ರಮಂಡಪ, ಉತ್ಸವಮಂಡಪ, ಸ್ನಪನಮಂಡಪ, ಅಲಂಕಾರಮಂಡಪ, ಸಭಾಮಂಡಪ ಮುಂತಾದವುಗಳು ಕಟ್ಟಲ್ಪಟ್ಟವು. ದಕ್ಷಿಣಭಾರತದ ದೇವಾಲಯಗಳಲ್ಲಿ ಈ ಮಂಡಪಗಳೆಲ್ಲಾ ಚಪ್ಪಟೆಯಾದ ಚಾವಣಿಗಳನ್ನೊಳಗೊಂಡಿವೆ. ಕೆಲವೆಡೆಗಳಲ್ಲಿ ವಿಶೇಷವಾಗಿ ಪಶ್ಚಿಮ ತೀರದಲ್ಲಿ ಹೆಚ್ಚಿನ ಮಳೆ ಬೀಳುವ ಕಾರಣದಿಂದ ಈ ಚಾವಣಿಗಳು ಇಳಿಜಾರಾಗಿರುತ್ತವೆ. ಆದರೆ ನಾಗರಶೈಲಿಯ ಗುಜರಾತ್, ಒರಿಸ್ಸಾ, ಮಧ್ಯಪ್ರದೇಶಗಳಲ್ಲಿನ ದೇವಾಲಯಗಳಲ್ಲಿ ಗರ್ಭಗೃಹದ ಮುಂದಿನ ಮಂಡಪಗಳ ಮೇಲೂ ವಿಮಾನಕ್ಕೆ ಹೊಂದಿಕೊಂಡಂತೆ ಸುತ್ತಲೂ ಶಿಖರಗಳು ಮೇಲಕ್ಕೆ ಎದ್ದಿರುತ್ತವೆ. ಒರಿಸ್ಸಾದಲ್ಲಿ ಕಾಣಸುವ ಕಳಿಂಗ ಶೈಲಿಯಲ್ಲಿ ಹೀಗೆ ಶಿಖರಗಳಿಂದ ಕೂಡಿದ ಮುಂದಿನ ಮಂಟಪವನ್ನು ಜಗಮೋಹನ ಎಂದು ಕರೆಯುತ್ತಾರೆ. ಇಂತಹ ದೇವಾಲಯಗಳಲ್ಲಿ ಮುಂದಿನ ಮಂಟಪದ ಮೇಲಿನ ಶಿಖರದಿಂದ ಆರಂಭಿಸಿ ಗರ್ಭಗೃಹದ ಮೇಲಿನ ವಿಮಾನದವರೆಗೂ ಅನುಕ್ರಮವಾಗಿ ದಿಗಂತದವರೆಗೂ ಮೇಲೇರುತ್ತ ಹೋದಂತಹ ಗೋಪುರಗಳ ಹಿಂಡೇ ಕಂಡು ಬರುತ್ತದೆ. ಸಹಜವಾಗಿಯೇ ಗರ್ಭಗೃಹದ ಮೇಲಿನ ವಿಮಾನ ಇವೆಲ್ಲವುಗಳಿಗಿಂತಲೂ ಎತ್ತರವಾಗಿರಲೇಬೇಕು. ದಕ್ಷಿಣ ಭಾರತದಲ್ಲಿನ ಮಂಡಪಗಳ ಮೇಲಿನ ಚಪ್ಪಟೆಯ ಛಾವಣಿಯಿಂದಾಗಿ ವಿಮಾನಕ್ಕೆ ಒಂದು ವಿಶೇಷವಾದ ಸ್ಥಾನ ಕಲ್ಪಿಸಿದಂತಾಗಿ ಅದಕ್ಕೆ ಒಂದು ಪ್ರಮುಖವಾದ ಔನ್ನತ್ಯ ಲಭಿಸಿದೆ. ದಿಗಂತದ ಹಿನ್ನೆಲೆಯಲ್ಲಿ ಅದು ಸ್ಪಷ್ಟವಾಗಿ ಮೂಡಿಬಂದಂತಾಗುತ್ತದೆ.

ಮಂಟಪಗಳು ನಿಂತಿರುವುದು ಸುತ್ತಲಿನ ಹಾಗೂ ಒಳಗಿನ ಕಂಬಗಳ ಆಧಾರದ ಮೇಲೆ. ಛಾವಣಿಗೆ ಊರುಗೋಲಾಗಿ ಈ ಕಂಬಗಳು. ಮಂಟಪ ವಿಸ್ತಾರವಾದಂತೆಲ್ಲ ಕಂಬಗಳೂ ಸಂಖ್ಯೆಯಲ್ಲಿ ಅಧಿಕಗೊಳ್ಳುತ್ತವೆ. ಕಂಬಗಳ ಸಂಖ್ಯೆಗಳನ್ನನುಸರಿಸಿ ಮಂಟಪಗಳಲ್ಲಿ ಹಲವಾರು ವಿಧಗಳನ್ನು ಶಿಲ್ಪಶಾಸ್ತ್ರಗಳಲ್ಲಿ ಗುರುತಿಸಲಾಗಿದೆ. ಮಾನಸಾರದಲ್ಲಿ ಹಿಮಜ, ನಿಕ್ಷದಜ, ವಿಜಯ,

ಮಾಲ್ಯಜ, ಪಾರಿಯಾತ್ರ, ಗಂಧಮಾದನ ಮತ್ತು ಹೇಮಕೂಟಗಳೆಂಬ ಏಳು ಬಗೆಗಳನ್ನು ಗುರುತಿಸಲಾಗಿದೆ. ಒಂದೊಂದು ಮಂಟಪವನ್ನೂ ಒಂದೊಂದು ನಿರ್ದಿಷ್ಟ ಕಾರ್ಯಕ್ಕಾಗಿ ಬಳಸಲಾಗುತ್ತಿತ್ತು. ಪದ್ಮಕ ಎಂಬುದು ದೇವಾಲಯಗಳಲ್ಲಿ, ಮಠಗಳಲ್ಲಿ ಊಟದ ಮನೆ. ವಿಜಯವು ಕಲ್ಯಾಣಗಳಿಗಾಗಿ, ಮಂಟಪವು ಗ್ರಂಥಾಲಯಕ್ಕಾಗಿ, ವೇದವು ಸಭೆಗಳಿಗಾಗಿ. ಮಂಟಪದಲ್ಲಿನ ಕಂಬಗಳ ಸಂಖ್ಯೆಗಳಿಗನುಗುಣವಾಗಿ ೨೭ ಬಗೆಯ ಮಂಟಪಗಳನ್ನು ಮತ್ಸ್ಯಪುರಾಣದಲ್ಲಿ ಹೆಸರಿಸಿದೆ. ಅತಿ ವಿಸ್ತಾರವಾದ ಮಂಟಪದಲ್ಲಿ ೬೪ ಕಂಬಗಳಿರುತ್ತವೆ ಎಂದಿದೆ. ಆದರೆ ಮಾನಸಾರದಲ್ಲಿ ೧೦೦ ಅಥವಾ ೧೦೦೦ ಕಂಬಗಳುಳ್ಳ ಮಂಟಪಗಳ ಪ್ರಸ್ತಾಪ ಬಂದಿದೆ. ಈಶಾನ ಶಿವಗುರು ಪದ್ಧತಿಯಲ್ಲಿ ೧೦೦ ಅಥವಾ ಹೆಚ್ಚು ಕಂಬಗಳ ಮಂಟಪಗಳನ್ನು ವಿಶಾಲಮಂಟಪಗಳೆಂದು ಕರೆದಿದೆ. ಸುಪ್ರಭೇದಾಗಮದಲ್ಲಿ ದೇವ, ಸ್ನಪನ, ವೃಷಭ ಮತ್ತು ನೃತ್ಯ ಮಂಟಪಗಳೆಂಬ ನಾಲ್ಕು ವಿಧಗಳನ್ನು ವಿವರಿಸಲಾಗಿದೆ.

ಮಂಟಪಗಳು ತೆರದವೂ, ಮುಚ್ಚಿದವೂ ಆಗಿರಬಹುದು. ಮುಚ್ಚಿದ ಮಂಟಪಗಳಲ್ಲಿ ಭಿತ್ತಿಯ ಒಳಮುಖದಲ್ಲಿ ಸರಳವಾದ ಅರೆಗಂಬಗಳಿದ್ದರೂ ಹೊರಮುಖದಲ್ಲಿ ವಿಮಾನದಲ್ಲಿನ ವಿನ್ಯಾಸ ಕಂಡುಬರುತ್ತದೆ. ಕಂಬಗಳ ತಳ ಮತ್ತು ಮೇಲಿನ ಭಾಗಗಳು ಚೌಕಾಕಾರದಲ್ಲಿದ್ದು ನಡುವಿನ ಭಾಗ ಅಷ್ಟ ಅಥವಾ ಅದಕ್ಕೂ ಹೆಚ್ಚಿನ ಭುಜಗಳನ್ನು ಹೊಂದಿದ್ದಾಗಿರುತ್ತವೆ. ಕಂಬದ ಎತ್ತರ ಹೆಚ್ಚಾಗಿದ್ದಾಗ ನಡುವೆ ಇನ್ನೊಂದು ಚೌಕಾಕೃತಿಯೂ ಇರಬಹುದು. ಚಾಲುಕ್ಯರ ಕಾಲದಲ್ಲಿ ನಡುವಿನ ಭಾಗ ಚರಕಿಯಿಂದ ತಿರುಗಿಸಿದ ದುಂಡನೆಯ ಅಥವಾ ಬಾಗಿದ ವಿನ್ಯಾಸಗಳನ್ನು ಹೊಂದಿದ್ದುವು. ನಂತರದ ಶತಮಾನಗಳಲ್ಲಿ ದಕ್ಷಿಣ ಭಾರತದಲ್ಲಿ ಈ ಸ್ತಂಭಗಳ ಮೇಲೆ ಮನುಷ್ಯರ, ಅಥವಾ ಪ್ರಾಣಿಗಳ ಚಿತ್ರಿತ ಪ್ರತಿಮೆಗಳನ್ನು ಸಣ್ಣ ಸಣ್ಣ ಸ್ತಂಭಗಳನ್ನು ಕೂಡಿಸುವ ಸಂಪ್ರದಾಯ ಕಂಡು ಬಂದಿದೆ.

ಚಾಲುಕ್ಯ–ರಾಷ್ಟ್ರಕೂಟರ ಆಳ್ವಿಕೆಗೊಳಪಟ್ಟ ದಕ್ಖನ್ ಪ್ರದೇಶದಲ್ಲಿ ಈ ಮಂಟಪಗಳಲ್ಲಿ ಎರಡು ನಮೂನೆಗಳನ್ನು ಕಾಣಬಹುದಾಗಿದೆ. ಮಧ್ಯಾಂಗಣದಲ್ಲಿ ಹೆಚ್ಚು ಎತ್ತರವಾದ ಕಂಬಗಳ ಮೇಲೆದ್ದ ಛಾವಣಿ ಅಥವಾ ಎರಡೂ ಪಕ್ಕಗಳಲ್ಲಿ ತಗ್ಗುಮಾಳಿಗೆಯ ಹಜಾರಗಳನ್ನೊಳಗೊಂಡ ಒಳಹಜಾರ ಒಂದು ಬಗೆ. ಇನ್ನೊಂದು ಬಗೆಯಲ್ಲಿ ಮಂಟಪ ಮುಖ್ಯವಾಗಿ ಚೌಕಾಕಾರದ್ದಾಗಿದ್ದು ಹೊರಮೈಯಲ್ಲಿ ಗಿಡ್ಡಾದ ಕಂಬಗಳನ್ನಾಧರಿಸಿದ ವೃತ್ತಗಳನ್ನು ಸಮಾನ ಕೇಂದ್ರದಲ್ಲಿ ಸುತ್ತಲೂ ವಿಸ್ತರಿಸಲಾಗಿರುತ್ತದೆ. ಮಧ್ಯದ ಚೌಕದ ಮೂಲೆಗಳಲ್ಲಿ ನಾಲ್ಕು ಕಂಬಗಳು. ಹೊರಮೈಯಲ್ಲಿ ಸಮಾನದೂರಗಳಲ್ಲಿ ಈ ಮಧ್ಯದ ಕಂಬಗಳ ಅಕ್ಷದ ಸುತ್ತಲೂ ಅಡ್ಡ ಕೊಯ್ತದ ಓರೆಯ ನಿಲುವಿನ ೧೨ ಕಂಬಗಳು. ಇದರಿಂದ ಮಧ್ಯದ ಅಂಕಣದ ಸುತ್ತಲೂ ೮ ಅಂಕಣಗಳು ರೂಪುಗೊಂಡು ಒಂಬತ್ತು ಅಂಕಣಗಳ ಈ ಮಂಟಪ ನವರಂಗವೆನಿಸಿಕೊಳ್ಳುತ್ತದೆ. ಈ ೧೨ ಕಂಬಗಳಿಗೆ ಸಾಲು ನಿಲುವಿನಲ್ಲಿ ಹಾಗೂ ನಾಲ್ಕು ಮೂಲೆಗಳಲ್ಲಿ ಇನ್ನೂ ೨೦ ಕಂಬಗಳನ್ನು ಸೇರಿಸಿದಾಗ ಇನ್ನೂ ವಿಸ್ತಾರವಾದ ೨೫ ಅಂಕಣಗಳ ದೊಡ್ಡ ಚೌಕದ ಮಂಟಪವಾಗುತ್ತದೆ. ಇದನ್ನು ಹೀಗೆಯೇ ವಿಸ್ತರಿಸುತ್ತಾ ೧೦೦ ಕಂಬಗಳ, ಅದಕ್ಕೂ ವಿಶಾಲವಾದ ಮಂಟಪಗಳನ್ನು ನಂತರದ ಶತಮಾನಗಳಲ್ಲಿ ರಚಿಸಲಾಯಿತು.

ಅಂತರಾಳದ ಮುಂದಿನ ಭಾಗ ಮಹಾಮಂಟಪ. ಗುಹಾಲಯಗಳಲ್ಲಿ ಕ್ರಮವಾಗಿ ಜೋಡಿಸಿದ ಎರಡು ಕಂಬಗಳ ಮುಂಭಾಗದ ಮಂಟಪ. ಶಿಲಾಗಾರಗಳಲ್ಲಿ ಇದರಲ್ಲಿ ಹೆಚ್ಚು ಕಂಬಗಳನ್ನಳವಡಿಸಲಾಗಿರುತ್ತದೆ. ಇದನ್ನು ಕರ್ನಾಟಕದಲ್ಲಿ 'ನವರಂಗ'ವೆನ್ನುತ್ತಾರೆ. ಇದು ತೆರೆದ ಅಥವಾ ಮುಚ್ಚಿದ ಮಂಟಪ. ದೇವಾಲಯದ ಮುಂದೆ ಮೊದಲು ಕಾಣಿಸುವುದು ಮುಖಮಂಟಪ. ಈ ಮುಖಮಂಟಪದಲ್ಲಿಯೋ ಮಹಾಮಂಟಪದಲ್ಲಿಯೋ ದೇವಾಲಯದ ಉತ್ಸವಗಳಿಗೆ ಸಂಬಂಧಿಸಿದ ಸಭೆಯೋ, ಲಲಿತಕಲೆಗಳ ಕಾರ್ಯಕ್ರಮವೋ ನಡೆಯುತ್ತಿತ್ತು. ಇದು ತೆರೆದ ಮಂಟಪವಾದರೂ ಇಂತಹ ಸಂದರ್ಭಗಳಿಗೆ ಅನುಕೂಲವಾಗಿರಲೆಂದು ಮಂಟಪದ ತುದಿಯ ಕಂಬಗಳ ಒಳವಲಯದಲ್ಲಿ ಅವುಗಳನ್ನು ಕೂಡಿಸಿ ಒಂದು ಕಲ್ಲಿನ ಆಸನವನ್ನು ಸುತ್ತಲೂ ಅಳವಡಿಸಿ ಒರಗಿ ಕುಳಿತುಕೊಳ್ಳಲು ಅನುಕೂಲವಾಗುವಂತಹ ಒರಗು ಬೆಂಚುಗಳು ಇರುತ್ತವೆ. ಇವುಗಳನ್ನು ಕಕ್ಷಾಸನಗಳೆಂದು ಕರೆಯುತ್ತಾರೆ. ನಂತರದ ಶತಮಾನಗಳಲ್ಲಿ ಮೇಲೆ ತಿಳಿಸಿದಂತೆ ಇತರ ಮಂಟಪಗಳೂ ಅಸ್ತಿತ್ವಕ್ಕೆ ಬಂದುವು. ದೇವಾಲಯ ಕೇವಲ ಪೂಜಾಗೃಹವಾಗದೆ ಸಾಂಸ್ಕೃತಿಕ ಕೇಂದ್ರವಾಗಿಯೂ ಮಾರ್ಪಟ್ಟು, ಧರ್ಮಪ್ರಚಾರಕೇಂದ್ರವೂ ಆದಾಗ ದೇವಾಲಯದ ಪೂಜಾವಿಧಿಗಳಲ್ಲೂ ಹೊಸ ಹೊಸ ಉತ್ಸವಗಳನ್ನು ಅಳವಡಿಸಿಕೊಳ್ಳಲಾಯಿತು. ಉತ್ಸವಗಳಿಗೆ ಬಳಸಲಾಗುವ ವಾಹನಗಳನ್ನು ರಕ್ಷಿಸಲು ವಾಹನಮಂಟಪ, ಸಭೆ–ಸಮಾರಂಭಗಳಿಗಾಗಿ ಸಭಾಮಂಟಪ, ಲಲಿತಕಲೆಗಳಿಗಾಗಿ ನೃತ್ಯಮಂಟಪ ಇತ್ಯಾದಿಗಳು ದೇವಾಲಯದ ಸುತ್ತಲೂ ರಚನೆಗೊಂಡುವು. ಇದನೆಲ್ಲಾ ಒಳಗೊಳ್ಳುವಂತೆ ಸುತ್ತಲೂ ಒಂದು ಪ್ರಾಕಾರದ ಗೋಡೆಯನ್ನು ಎಬ್ಬಿಸಲಾಯಿತು. ಮುಂದಿನ ಭಾಗದಲ್ಲಿ ಮಹಾದ್ವಾರಗಳು, ಅದರ ಮೇಲೆ ಗೋಪುರಗಳು ಬಂದುವು.

ಪ್ರಾಕಾರ ಎಂಬುದಕ್ಕೆ ಒಂದು ನಗರವನ್ನೇ ಸುತ್ತುವರಿದ ಗೋಡೆ ಎಂದು 'ಅಗ್ನಿಪುರಾಣ'ದಲ್ಲಿ ಹೇಳಿದೆ. ರಾಮಾಯಣ–ಮಹಾಭಾರತಗಳಲ್ಲಿ ಈ ಮಾತನ್ನು ಇದೇ ಅರ್ಥದಲ್ಲಿ ಬಳಸಿದೆ. ಮನೆಯ ಆವರಣದಲ್ಲಿ ಐದು ಅಂಗಗಳಲ್ಲಿ ಇದು ನಾಲ್ಕನೆಯದು ಎಂದು 'ಮಾನಸಾರ'ದಲ್ಲಿ ವಿವರಿಸಲಾಗಿದೆ. ಇದನ್ನು ದೇವಾಲಯಕ್ಕೂ ಅನ್ವಯಿಸಿ ಎಲ್ಲದಕ್ಕೂ ಒಳಗಿನ ಅಂಗಗಳನ್ನು ಅಂತರ್ಮಂಡಲವೆಂದೂ ಅಲ್ಲಿಂದ ಕ್ರಮವಾಗಿ ಅದರ ಹೊರಗಿನವುಗಳನ್ನು ಅಂತರ್ನಿಹಾರ, ಮಧ್ಯಮಹಾರ, ಪ್ರಾಕಾರ ಮತ್ತು ಮಹಾಮರ್ಯಾದಾ ಎಂದೂ ಹೆಸರಿಸಲಾಗಿದೆ. ಪ್ರಾಕಾರಗಳಲ್ಲಿ ಜಾತಿ, ಛಂದ, ವಿಕಲ್ಪ (ಆಭಾಸ) ಮತ್ತು ಕಾಮ್ಯ ಎಂಬ ನಾಲ್ಕು ವಿಧಗಳೆಂದು ಹೇಳಿದೆ. ಒಂದೊಂದು ಅಂಗಳಕ್ಕೂ ಗೋಪುರಗಳಿದ್ದು ಒಳಗಿನಿಂದ ಕ್ರಮವಾಗಿ ಅವುಗಳಿಗೆ ದ್ವಾರ ಶೋಭ, ದ್ವಾರಶಾಲ, ದ್ವಾರಪ್ರಾಸಾದ, ದ್ವಾರಹರ್ಮ್ಯ ಮತ್ತು ಮಹಾಗೋಪುರಗಳೆಂಬ ಹೆಸರನ್ನು ಕೊಟ್ಟಿದೆ.

ಗೋಪುರ ಎಂಬುದು ದೇವಾಲಯವನ್ನು ಸುತ್ತುವರೆದ ಪ್ರಾಕಾರದಲ್ಲಿನ ದ್ವಾರ ಹಾಗೂ ಅದರ ಮೇಲೆ ಹಂತಹಂತವಾಗಿ ಎಬ್ಬಿಸಲಾದ ಕಟ್ಟಡ. ವೇದಗಳಲ್ಲಿ ಗೋಮತಿಪುರ ಎಂದೂ ಮಹಾಕಾವ್ಯಗಳಲ್ಲಿ ಗೋಗೃಹ ಎಂದೂ ಕರೆಯಲಾದ ಇದು ಪ್ರಾಕಾರದಲ್ಲಿನ ದ್ವಾರ. ಪ್ರಾಕಾರಕ್ಕೆ ಇಂತಹ ಒಂದು, ಎರಡು ಅಥವಾ ನಾಲ್ಕು ಗೋಪುರ ದ್ವಾರಗಳಿರಬಹುದು. ಒಂದೊಂದು ಪ್ರಾಕಾರಕ್ಕೂ ಗೋಪುರ ದ್ವಾರಗಳನ್ನು ಅಳವಡಿಸಿದುದೂ ಇದೆ. ಇದರ ಔನ್ನತ್ಯ ಇದಕ್ಕೆ ಶೋಭೆಯನ್ನು ನೀಡಿದೆ. ಆರಂಭದಲ್ಲಿ ಗರ್ಭಗೃಹದ ಮೇಲಿನ ವಿಮಾನಕ್ಕಿದ್ದ ಪ್ರಾಶಸ್ತ್ಯವು ಗೋಪುರಕ್ಕಿರಲಿಲ್ಲ. ದೇವಾಲಯದ್ವಾರಕ್ಕೆ ಅಳವಡಿಸಲಾದ ಕಿರಿದಾದ ಅಲಂಕೃತ ಮೇಲ್ಕಟ್ಟಡವಾಗಿ ಆರಂಭವಾದ ಇದು ಕ್ರಮೇಣ ಹೆಚ್ಚು ಪ್ರಾಶಸ್ತ್ಯ ಪಡೆದು ಎತ್ತರದಲ್ಲಿ ವಿಮಾನವನ್ನು ಮೀರಿ ನಿಂತಿತು. ಅಮರಾವತಿ, ನಾಗಾರ್ಜುನಕೊಂಡ ಮುಂತಾದ ಕಡೆಗಳಲ್ಲಿ ಕಂಡು ಬಂದಿರುವಂತೆ ಆರಂಭದಲ್ಲಿ ಈ ಗೋಪುರ ದ್ವಾರಗಳು ಕೇವಲ ಒಂದು ಚೈತ್ಯದ ಕಿಟಕಿಯ ಮೇಲ್ಕಟ್ಟಡವನ್ನು ಹೊಂದಿತ್ತು. ನಂತರ ಶಾಲಾಶಿಖರಗಳು ಕಾಣಿಸಿಕೊಂಡುವು. ತಮಿಳುನಾಡಿನಲ್ಲಿ ಕಾಂಚಿಪುರದಲ್ಲಿನ ಕೈಲಾಸನಾಥ ಹಾಗೂ ಮಹಾಬಲಿಪುರದ ತೀರದ ದೇವಾಲಯಗಳ ದ್ವಾರಗಳ ಮೇಲಿರುವ ಶಾಲಾಶಿಖರಗಳು ಅತಿಪ್ರಾಚೀನವೆನ್ನಬಹುದಾದ ನಿದರ್ಶನಗಳು. ಕರ್ನಾಟಕದಲ್ಲಿ ಈ ಗೋಪುರಗಳು ವಿಶೇಷವಾಗಿ ಕಾಣಿಸಿಕೊಳ್ಳುವುದು ೧೧–೧೨ನೆಯ ಶತಮಾನಗಳ ನಂತರ ಹಾಗೂ ವಿಜಯನಗರದ ಅರಸರ ಕಾಲದಲ್ಲಿ. ವಿಜಯನಗರದ ಅರಸರನ್ನು ಸಾಮಾನ್ಯವಾಗಿ ರಾಯರೆಂದು ಕರೆದಿರುವುದರಿಂದಲೂ, ಕೃಷ್ಣದೇವರಾಯನ ಮತ್ತು ನಂತರದವರ ಕಾಲದಲ್ಲಿ ಗೋಪುರಗಳ ಜೀರ್ಣೋದ್ಧಾರ ಹಾಗೂ ಸ್ಥಾಪನೆಗಳು ಹೆಚ್ಚಿದುದರಿಂದಲೂ ಈ ಗೋಪುರಗಳನ್ನು ರಾಯಗೋಪುರಗಳೆಂದೂ ಹೆಸರಿಸಲಾಗಿದೆ. ತಮಿಳುನಾಡಿನಲ್ಲಿ ಇವು ವೈವಿಧ್ಯಮಯವಾಗಿ ರೂಪುಗೊಂಡುವು.

ಕರ್ನಾಟಕದಲ್ಲಿ ವಿಶೇಷವಾಗಿ ಕಾಣಸಿಗದ, ಆದರೆ ತಮಿಳುನಾಡಿನಲ್ಲಿ ಬೆಳೆದುಬಂದ ಇನ್ನೊಂದು ಲಕ್ಷಣ ಪರಿವಾರ ದೇವತೆಗಳಿಗಾಗಿ ರೂಪಿಸಲಾದ ಗುಡಿಗಳು. ಆಗಮಶಾಸ್ತ್ರಗಳಲ್ಲಿ ದೇವ–ದೇವಿಯರ ಗುಡಿಗಳ ಸ್ಥಾನವಿನ್ಯಾಸವನ್ನು ಕುರಿತು ಕಟ್ಟುನಿಟ್ಟಾದ ನಿಯಮಗಳನ್ನು ಸೂಚಿಸಿಲ್ಲವಾದರೂ ಉಗ್ರಸ್ವರೂಪದ ದೇವ–ದೇವಿಯರ ಆಲಯಗಳು ಊರ ಹೊರಗಿದ್ದು ಶಾಂತಸ್ವರೂಪಿಗಳ ಆಲಯಗಳು ಅವುಗಳಿಗಭಿಮುಖವಾಗಿರಬೇಕೆಂದಿದೆ. ನಂತರದ ಕಾಲದಲ್ಲಿ ಶಿವನ ಆಲಯಗಳು ಊರಿನ ಹೊರಮುಖವಾಗಿಯೂ ವಿಷ್ಣುವಿನ ಆಲಯಗಳು ಒಳಮುಖವಾಗಿಯೂ ಇರಬೇಕೆಂಬ ಅಭಿಪ್ರಾಯವನ್ನು ಮುಂದೂಡಲಾಯಿತು. ಶಿವಾಲಯಗಳನ್ನು ಸಾಮಾನ್ಯವಾಗಿ ಗ್ರಾಮದ ಈಶಾನ್ಯದಲ್ಲಿ ಹೊರಮುಖವಾಗಿರುವಂತೆ ಕಟ್ಟುವ ಪದ್ಧತಿ ಆರಂಭವಾಯಿತು. ವಿಷ್ಣುವಿನ ಆಲಯಗಳು ಪೂರ್ವ–ಪಶ್ಚಿಮಗಳಲ್ಲಿರಬಹುದಾಗಿತ್ತು. ಹಾಗೆಯೇ ಸುಬ್ರಹ್ಮಣ್ಯನ ಆಲಯ ಗ್ರಾಮದ ಉತ್ತರದಲ್ಲಿ ಮತ್ತು ದುರ್ಗಾದೇವತೆಯ ಗುಡಿ ಈಶಾನ್ಯ ಹಾಗೂ ವಾಯವ್ಯಗಳಲ್ಲಿ. ಆದರೆ ಇವು ಪ್ರತ್ಯೇಕ ಆಲಯಗಳಾದಾಗ ಮಾತ್ರ. ಶಿವ–ವಿಷ್ಣು ಆಲಯಗಳ ಪ್ರಾಕಾರಗಳಲ್ಲಿಯೇ ಸಾಮಾನ್ಯವಾಗಿ ಪರಿವಾರದೇವತೆಗಳಿಗೂ ಪ್ರತ್ಯೇಕವಾದ ಗುಡಿಗಳಿದ್ದು, ಅವು ಸೂಚಿಸಿದ ದಿಕ್ಕುಗಳಲ್ಲಿ ಇರಬೇಕೆಂದೂ ಶಾಸ್ತ್ರಗಳಲ್ಲಿ ಉಕ್ತವಾಗಿದೆ. ಗ್ರಾಮದೊಳಗೆ ಶಿವ ಮತ್ತು ವಿಷ್ಣುವಿನ ಆಲಯಗಳು ಒಂದಕ್ಕೊಂದು ಅಭಿಮುಖವಾಗಿರುವುದು ಬೆಳೆದು ಬಂದಿರುವ ಸಂಪ್ರದಾಯ. ಒಂದೇ ಪ್ರಾಕಾರದೊಳಗೆ ಮುಖ್ಯವಾದ ದೇವಾಲಯದ ಸುತ್ತಲೂ ಆ ದೇವರ ಪರಿವಾರ ದೇವತೆಗಳ ಗುಡಿಗಳು ಎಂಟು ಪ್ರಧಾನ ಮೂಲೆಗಳಲ್ಲಿರಬೇಕೆಂಬುದು 'ಮಾನಸಾರ'ದ ಹೇಳಿಕೆ. ಮೊದಲ ಪ್ರಾಂಗಣದಲ್ಲಿ ೮, ಎರಡನೆಯದರಲ್ಲಿ ೧೬, ಮೂರನೆಯದರಲ್ಲಿ ೩೨ ಗುಡಿಗಳಿರಬೇಕು. ಈ ವಿವರಗಳು ಕೆಲವು ದಾಕ್ಷಿಣಾತ್ಯ ಶಿಲ್ಪಶಾಸ್ತ್ರ ಕೃತಿಗಳಾದ 'ಮಯಮತ', 'ಮಾನಸಾರ' ಮತ್ತು 'ಶಿಲ್ಪರತ್ನ'ಗಳಲ್ಲಿ ಮಾತ್ರ ಉಲ್ಲೇಖವಾಗಿವೆ. ಕರ್ನಾಟಕದಲ್ಲಿ ವಿಜಯನಗರದ ಕಾಲದವರೆವಿಗೂ ಇಂತಹ ಪರಿವಾರ ದೇವತೆಗಳಿಗೆ ಪ್ರತ್ಯೇಕ ಗುಡಿಗಳ ಕಲ್ಪನೆ ಸಾಮಾನ್ಯವಾಗಿ ಕಾಣಿಸಿಕೊಂಡಿಲ್ಲ. ಪರಿವಾರ ದೇವತೆಗಳ ವಿಗ್ರಹಗಳನ್ನು ದೇವಾಲಯದ ಬೇರೆ ಬೇರೆ ಭಾಗಗಳಲ್ಲಿ ಕಂಡರಿಸಿರುವುದು ಹೆಚ್ಚಾಗಿ ಕಂಡು ಬರುತ್ತದೆ. ತಮಿಳುನಾಡಿನಿಂದ ಪ್ರಭಾವಿತವಾದ ಹೊಯ್ಸಳರ ಕೆಲವು ದೇವಾಲಯಗಳಲ್ಲಿ ಇಂತಹ ಪ್ರತ್ಯೇಕ ಗುಡಿಗಳು ನೆಲೆಗೊಂಡಿರುವುದನ್ನು ಕಾಣುತ್ತೇವಷ್ಟೆ,

ಇದಕ್ಕೂ ಹಿಂದಿನ ಕಾಲದಲ್ಲಿ ಅಪರೂಪವಾಗಿ ದೇವಲಯದ ಪಶ್ಚಿಮಕ್ಕೆ ಸಪ್ತಮಾತೃಕೆಗಳಿಗೆ ಸ್ಥಾನ ನೀಡಲಾಗಿದೆ. ಪಟ್ಟದಕಲ್ಲಿನ ವಿರೂಪಾಕ್ಷ ಗುಡಿಯ ಸಂಕೀರ್ಣದಲ್ಲಿ ೧೬ ಪರಿವಾರ ಗುಡಿಗಳ ವಿನ್ಯಾಸ ಕಂಡು ಬಂದಿರುವುದೊಂದು ಗಮನಾರ್ಹವಾದ ಅಂಶ.

ಗೋಪುರದ್ವಾರವನ್ನು ಹೊಕ್ಕ ಕೂಡಲೇ ನಮಗೆ ಕಾಣುವುದು ಧ್ವಜಸ್ತಂಭ. ಶಿವನ, ವಿಷ್ಣುವಿನ ಆಲಯಗಳಲ್ಲೂ ಜೈನರ ಬಸದಿಗಳಲ್ಲಿಯೂ ಮುಂಭಾಗದಲ್ಲಿ ಇದನ್ನು ಕಾಣಬಹುದು. ಧ್ವಜಸ್ತಂಭದ ಪ್ರಾಚೀನತೆಯನ್ನು ಅಶೋಕ–ಮೌರ್ಯನ ಕಾಲದವರೆಗೂ ಹಿಂದೂಡಬಹುದೆಂಬ ಅಭಿಪ್ರಾಯವಿದೆ. ಸಾಂಚಿಯಲ್ಲಿ ಮೊದಲನೆಯ ಸ್ತೂಪದ ದಕ್ಷಿಣಕ್ಕಿರುವ ಸಿಂಹ ಸ್ತಂಭ ಒಂದು ನಿದರ್ಶನ. ಈ ಕಂಬದ ಅಗ್ರದಲ್ಲಿ ಸಿಂಹವಿಗ್ರಹವನ್ನು ಕಂಡರಿಸಿದೆ. ಹೆಲಿಯೊಡೋರಸನು ಪ್ರತಿಷ್ಠಿಸಿದ ಹೆಸರುವಾಸಿಯಾಗಿರುವ ಗರುಡಸ್ತಂಭವನ್ನು ಉದಹರಿಸಬಹುದು. ಈ ಸ್ತಂಭದ ಸ್ಥಾಪನೆ ಸಾತವಾಹನರ ಕಾಲದಲ್ಲೂ ಆಚರಣೆಯಲ್ಲಿತ್ತೆಂಬುದು ನಾಗಾರ್ಜುನಕೊಂಡದಲ್ಲಿ ಕಂಡು ಬಂದಿರುವ ಇಂತಹ ಸ್ತಂಭಗಳಿಂದ ಸ್ಪಷ್ಟವಾಗುತ್ತದೆ. ಈ ಧ್ವಜಸ್ತಂಭಗಳ ಕೆಳಗೆ ಗರ್ಭಗೃಹಕ್ಕೆ ಎದುರಾಗಿ ಸಣ್ಣಗುಡಿ ಇದ್ದು ಅದರಲ್ಲಿ ಶಿವನ ವಾಹನವಾದ ನಂದಿಯ ಅಥವಾ ವಿಷ್ಣುವಿನ ವಾಹನವಾದ ಗರುಡನ ವಿಗ್ರಹವನ್ನು ಸ್ಥಾಪಿಸಲಾಗಿರುತ್ತದೆ. ಒಮ್ಮೊಮ್ಮೆ ನಂದಿಯನ್ನು ದೊಡ್ಡ ಆಕಾರದಲ್ಲಿ ಕೆತ್ತಲಾಗಿದ್ದು ಅವು ಗುಡಿಗಳಿಲ್ಲದೆಯೋ ಅಥವಾ ತೆರೆದ ದೊಡ್ಡ ಮಂಟಪದೊಳಗೋ ಇರುತ್ತವೆ. ಆದರೆ ಕರ್ನಾಟಕದಲ್ಲಿ ಧ್ವಜಸ್ತಂಭಗಳ ಉಪಯೋಗ ವಿಶೇಷವಾಗಿ ಆದುದು ೧೨–೧೩ನೆಯ ಶತಮಾನಗಳ ನಂತರ ಎನ್ನಬಹುದು. ಆಗಮಶಾಸ್ತ್ರಗಳು, ತಂತ್ರಗಳು ಬೆಳೆದ ಬಳಿಕ ದೇವಾಲಯಗಳ ಮುಂದೆ ಬಲಿಪೀಠಗಳನ್ನು ಸ್ಥಾಪಿಸುವ ಪದ್ಧತಿ ಆರಂಭವಾಯಿತು. ತಂತ್ರಸಮುಚ್ಚಯದಲ್ಲಿ ಬಲಿಪೀಠವು ದೇವಾಲಯದ ಅಧಿಷ್ಠಾನದಲ್ಲಿದ್ದಂತೆ ಹಲವಾರು ಅಂಗಗಳನ್ನು ಒಳಗೊಂಡಿದ್ದು ಅದರ ಎತ್ತರ ಗರ್ಭಗುಡಿಯಲ್ಲಿ ದೇವರನ್ನು ಸ್ಥಾಪಿಸಿರುವ ಪೀಠದ ಎತ್ತರದಷ್ಟಿರಬೇಕೆಂದು ಹೇಳಿದೆ. ಒಂದರ ಮೇಲೊಂದು ಕಿರಿದಾಗುತ್ತಾ ಹೋಗುವ ಕಲ್ಲುಗಳಿಂದ ಈ ಬಲಿಪೀಠವನ್ನು ಎತ್ತರಿಸಲಾಗಿರುತ್ತದೆ. ಒಮ್ಮೊಮ್ಮೆ ಬಲಿಪೀಠ ಒಂದು ಕಲ್ಲಿನಿಂದ ಮಾತ್ರ ಕಡೆದದ್ದೂ ಆಗಿರಬಹುದು. ಹೊಯ್ಸಳರ ಕಾಲದ ಬೇಲೂರಿನ ಶಾಸನದಲ್ಲಿ ಬಲಿಪೀಠವನ್ನು ಸೌಂದರ ಪಂಚರಾತ್ರವಿಧಿಯಿಂ ನಿರ್ಮಾಣ ಮಾಡಿಸಲಾಯಿತೆಂದು ಹೇಳಿದೆ.

ಮಂಟಪಗಳ, ಗರ್ಭಗೃಹಗಳ ಬಾಗಿಲುವಾಡಗಳನ್ನು ತೋರಣಗಳಿಂದ ಅಲಂಕರಿಸಲಾಗಿರುತ್ತದೆ. ತೋರಣಗಳು ಸಾಧಾರಣವಾಗಿ ವಾಸ್ತುಶಿಲ್ಪದ ಅಂಗಗಳಾಗಿರದೆ ಅಲಂಕಾರ ಭಾಗಗಳಾಗಿರುತ್ತವೆ. ಆದರೆ ಈ ತೋರಣಗಳ ವಿನ್ಯಾಸಗಳಲ್ಲಿ ಹಲವಾರು ವಿಧಗಳು. ಇದು ದೇವಾಲಯಗಳಿಗೆ ಭೂಷಣ, ವೃತ್ತ, ಅರ್ಧವೃತ್ತ, ತ್ರಿಕೋಣ, ಷಟ್ಕೋನ ಮತ್ತು ಇತರ ವಿನ್ಯಾಸಗಳಲ್ಲೂ ಇರಬಹುದೆಂದು 'ಮಾನಸಾರ'ದಲ್ಲಿ ಹೇಳಿದೆ. ಅಲಂಕರಣಗಳನ್ನಾಧರಿಸಿ ಇವುಗಳನ್ನು ಪತ್ರತೋರಣ, ಪುಷ್ಪತೋರಣ, ರತ್ನತೋರಣ ಮತ್ತು ಚಿತ್ರತೋರಣಗಳೆಂದು ವಿಂಗಡಿಸಲಾಗಿದೆ. ಇವುಗಳ ಮೇಲೆ ದೇವತೆಗಳು, ಉಪದೇವತೆಗಳು, ಋಷಿಗಳು, ಮಕರಗಳು, ಮೀನುಗಳು, ಸರ್ಪಗಳು, ಪತ್ರ–ಪುಷ್ಪ–ಫಲಗಳು, ಬಳ್ಳಿಗಳು ಇತ್ಯಾದಿಗಳನ್ನು ಶಿಲ್ಪದಲ್ಲಿ ಬಿಡಿಸಲಾಗಿರುತ್ತದೆ. ಇವುಗಳಲ್ಲಿ ಮಕರತೋರಣಗಳೂ ಒಂದು ವಿಧ. ರಾಜತ್ವಕ್ಕೆ ಇದೊಂದು ಲಾಂಛನವೆಂದು ಭಾವಿಸಲಾಗಿದೆ. ಈ ಮಕರ ತೋರಣಗಳನ್ನು ಬಂಗಾರ, ಬೆಳ್ಳಿ ಮುಂತಾದ ಲೋಹಗಳಲ್ಲಿ ಮಾಡಿಸಿ ದೇವಾಲಯಗಳಿಗೆ ಅಲಂಕಾರ ವಸ್ತುಗಳೆಂದು ದಾನ ಮಾಡುತ್ತಿದ್ದುದಕ್ಕೆ ಶಾಸನಾಧಾರಗಳಿವೆ. ಇದು ಗೌರವಲಾಂಛನವೂ ಹೌದು. 'ಈಶಾನಶಿವಗುರುಪದ್ಧತಿ' ಹಾಗೂ 'ತಂತ್ರಸಮುಚ್ಚಯ'ಗಳಲ್ಲಿ ತೋರಣಗಳನ್ನು ಪತ್ರ, ಚಿತ್ರ, ಮಕರ–ತೋರಣಗಳೆಂದು ವಿಂಗಡಿಸಿದೆ. ಗರ್ಭಗೃಹ ಅಥವಾ ಅಂತರಾಳದ ಬಾಗಿಲಿನ ಎರಡೂ ಕಡೆ ದ್ವಾರಪಾಲಕರನ್ನು, ಗಂಗೆ–ಯಮುನೆಯರನ್ನು ಶಿಲ್ಪದಲ್ಲಿ ಕಡೆದು ನಿಲ್ಲಿಸಲಾಗುತ್ತಿತ್ತೆಂಬುದನ್ನೂ ಇದು ಒಮ್ಮೊಮ್ಮೆ ಮಕರತೋರಣದ ಅಂಗವಾಗಿತ್ತೆಂಬುದನ್ನೂ ಇಲ್ಲಿ ಗಮನಿಸಬೇಕು.


ಈ ಅಧ್ಯಾಯದಲ್ಲಿ ದೇವಾಲಯ ವಾಸ್ತುಶಿಲ್ಪದ ಸಾಮಾನ್ಯ ಲಕ್ಷಣಗಳನ್ನೂ ದೇವಾಲಯದ ಅಂಗಗಳನ್ನೂ ಕುರಿತಂತೆ ಸ್ಥೂಲವಾಗಿ ವಿವರಿಸಲಾಗಿದೆ. ಇದರಲ್ಲಿನ ಹಲವಾರು ಪಾರಿಭಾಷಿಕ ಪದಗಳನ್ನು ಮೇಲಿಂದ ಮೇಲೆ ವಾಸ್ತುಶಿಲ್ಪಶಾಸ್ತ್ರದಲ್ಲಿ ಬಳಸಲಾಗಿದೆ. ಇವುಗಳ ಪರಿಚಯವಿದ್ದಷ್ಟೂ ಮುಂದೆ ಆ ಪದಗಳ ಪ್ರಯೋಗ ಅರ್ಥವತ್ತಾಗುತ್ತದೆ. ಆದರೆ ಇದು ಸಾರ್ವತ್ರಿಕ ವಾಗಿಲ್ಲವೆಂಬುದನ್ನೂ ದೇಶ ಕಾಲಗಳನ್ನನುಸರಿಸಿ ಈ ಪದಗಳಿಗೆ ಸೂಚ್ಯಾರ್ಥಗಳನ್ನು ನೀಡಲಾಗಿದೆ ಎಂಬುದನ್ನೂ ಮರೆಯಬಾರದು.

❒

ಇಂತಹ ಗುಹೆಗಳು ಕೊರೆಯಲ್ಪಟ್ಟಿವೆ. ಇಲ್ಲಿ ದೊರೆತ ಶಾಸನಗಳಲ್ಲೊಂದು ಇಮ್ಮಡಿ ಚಂದ್ರಗುಪ್ತನದು. ಇನ್ನೊಂದರಲ್ಲಿ ಗುಪ್ತ ಶಕೆಯ ೮೨ನೆಯ ವರ್ಷದ (ಕ್ರಿ. ಶ. ೪೦೧) ಪ್ರಸ್ತಾಪವಿದೆ. ಕೆಲವು ಆಲಯಗಳು ಸ್ವಲ್ಪಮಟ್ಟಿಗೆ ಬಂಡೆಯೊಳಗೆ ಕೊರೆಯಲ್ಪಟ್ಟಿದ್ದು, ಉಳಿದ ಭಾಗ ಕಲ್ಲಿನ ಕಟ್ಟಡಗಳಾಗಿವೆ. ಆಯಾಕಾರದ ಗರ್ಭಗೃಹದ ಮೇಲೆ ಚಪ್ಪಟೆಯಾದ ಛಾವಣಿಗಳನ್ನೆಬ್ಬಿಸಲಾಗಿದೆ. ಟಾವಾದ ಗುಹೆಯಲ್ಲಿ ಮಾತ್ರ ಏಕಶಿಲೆಯಲ್ಲಿ ಕೊರೆದ ವೃತ್ತಾಕಾರದ ಗರ್ಭಗೃಹವನ್ನು ಕಾಣುತ್ತೇವೆ. ಮುಂಬಯಿ ಮಹಾನಗರದ ಜೋಗೇಶ್ವರಿಯ ಗುಹಾಲಯ ಕ್ರಿ. ಶ. ೫೫೦ ಕ್ಕೂ ಹಿಂದಿನ ಕಾಲದ್ದವೆಂದು ಒಬ್ಬ ತಜ್ಞರು ಸೂಚಿಸಿ, ಕಾಲಾನುಕ್ರಮಣಿಕೆಯಲ್ಲಿ ಇವು ಮೇಲೆ ಹೇಳಿದ ಗುಪ್ತರ ಕಾಲದ ಗುಹಾಲಯಗಳ ನಂತರದವು ಎಂದಿದ್ದಾರೆ. ಆದರೆ ಈ ಅಭಿಪ್ರಾಯ ಸರ್ವಸಮ್ಮತವಾಗಿರದೆ ನಮ್ಮ ರಾಜ್ಯದಲ್ಲಿನ ಬಿಜಾಪುರಜಿಲ್ಲೆಯ ಬಾದಾಮಿಗೆ ದ್ವಿತೀಯ ಸ್ಥಾನವನ್ನು ಅನೇಕರು ಸೂಚಿಸಿದ್ದಾರೆ. ಇದರ ಜೋಡಿ ಮೂರು ಐಹೊಳೆಯ ಗುಹಾಲಯಗಳು. ಬಾದಾಮಿಯ ನಾಲ್ಕು ಗುಹೆಗಳೂ ಒಂದೇ ಕಡೆ ಸಾಲಾಗಿದ್ದರೆ, ಐಹೊಳೆಯಲ್ಲಿ ಇವು ನಾಲ್ಕು ಬೇರೆ ಬೇರೆ ಕಡೆಗಳಲ್ಲಿದ್ದು-ರಾವಳಫಡಿ (ಗುಡಿ), ಏಕಶಿಲೆಯ ಜೈನಗುಡಿ ಹಾಗೂ ಎರಡಂತಸ್ತಿನ ಬೌದ್ಧ ಚೈತ್ಯಾಲಯ-ಒಂದು ಗುಂಪಿಗೆ ಸೇರಿದವುಗಳಾಗಿವೆ. ಬಾದಾಮಿ ಹಾಗೂ ಐಹೊಳೆಯ ಈ ಆಲಯಗಳಲ್ಲಿ ಮೊದಲಿನದು ಯಾವುದು ಎಂಬುದರ ಬಗೆಗೂ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಐಹೊಳೆಯವು ಬಾದಾಮಿಯಲ್ಲಿನವುಗಳಂತೆ ವ್ಯವಸ್ಥಿತರೂಪದಲ್ಲಿ ವಿಕಾಸಗೊಂಡವುಗಳಲ್ಲ. ಕಟ್ಟುವ ವಿನ್ಯಾಸದಲ್ಲಿ, ಮೂರ್ತಿಶಿಲ್ಪಗಳ ಭಾವಭಂಗಿಗಳಲ್ಲಿ ಮೂಲಭೂತವಾದ ಏಕತೆ ಬಾದಾಮಿಯಲ್ಲಿ ಕಂಡುಬರುತ್ತದೆ. ಐಹೊಳೆಯ ಈ ಆಲಯಗಳಲ್ಲಿ ಅನಿಷ್ಕೃಷ್ಟತೆ ಇದೆ. ವಿನ್ಯಾಸದಲ್ಲಿಯೂ ನಾಜೂಕು ಕಾಣಿಸಿಕೊಳ್ಳುವುದಿಲ್ಲ. ಈ ಕಾರಣಗಳಿಂದ ಐಹೊಳೆಯ ಗುಹಾಲಯಗಳು ಬಾದಾಮಿಯ ಗುಹಾಲಯಗಳಿಗೂ ಪೂರ್ವದ್ದು ಎಂಬುದೊಂದು ಬಹುಜನ ಸಮ್ಮತವಾದ ವಾದ.

ಗುಹಾವಾಸ್ತು : ಕರ್ನಾಟಕ – ಐಹೊಳೆ

ಐಹೊಳೆಯ ರಾವಳಫಡಿಯ ಸಮೀಪದ ಶಿವಾಲಯ ನೆಲಮಟ್ಟಕ್ಕೇ ಕೊರೆಯಲ್ಪಟ್ಟಿದೆ. ಇದರ ಛಾವಣಿಯೂ ಕುಗ್ಗಿದಂತಿದ್ದು ಒಳಗೆ ದೀರ್ಘ ಚತುರಸ್ರ ಪೀಠದ ಮೇಲೆ ಉದ್ದನೆಯ ಲಿಂಗವೊಂದು ಕಂಡುಬರುತ್ತದೆ. ಈ ಲಿಂಗ ಛಾವಣಿಯನ್ನು ತಾಗುವಷ್ಟು ಎತ್ತರದ್ದಾಗಿದ್ದು, ಲಿಂಗವಾಗಲೀ, ಪೀಠವಾಗಲೀ ಗುಹೆಯ ಕೊರೆದ ಭಾಗಗಳಲ್ಲೊಂದಾಗಿರದೆ, ಬಹುಶಃ ನಂತರದ ಕಾಲದಲ್ಲಿ ಅದನ್ನು ಅಲ್ಲಿ ಪ್ರತಿಷ್ಠಿಸಿರಬಹುದೆಂಬ ಭಾವನೆ ಉಂಟಾಗುತ್ತದೆ. ಈ ದೃಷ್ಟಿಯಲ್ಲಿ ಇದನ್ನು ಗುಹಾಲಯ ಎಂದು ಕರೆಯುವುದಕ್ಕಿಂತಲೂ ಆಶ್ರಯಸ್ಥಾನವೆಂದು ಭಾವಿಸಬಹುದು ಎಂದು ತಜ್ಞರು ಸಲಹೆ ಮಾಡಿದ್ದಾರೆ.



ಚಿತ್ರ – ೧

ಇದನ್ನು ಕಡೆಗಣಿಸಿದರೆ, ನಂತರದ ಅತಿ ಪ್ರಾಚೀನವೆನಿಸಬಹುದಾದ ಗುಹಾಲಯ ರಾವಳಫಡಿ. ಇದು ರಾವಣಫಡಿ ಎಂಬ ಹೆಸರಿನಿಂದಲೂ ಕರೆಯಲ್ಪಡುವ ಗುಹಾಲಯ. ಈ ಹೆಸರಿಗೂ ರಾವಣನಿಗೂ ಏನೂ ಸಂಬಂಧವಿಲ್ಲ. ಗುಹೆಯಲ್ಲಿನ ನಟರಾಜನ ಮೂರ್ತಿಯನ್ನು ರಾವಣ ನದಿರಬಹುದೆಂದು ಭ್ರಮಿಸಿ ಇದಕ್ಕೆ ಈ ಹೆಸರು ಬಂದಿರಬಹುದೆಂದೂ ಅಥವಾ ರಾವಳ ಎಂಬ ವ್ಯಕ್ತಿಯೊಬ್ಬ ಇಲ್ಲಿ ವಾಸವಾಗಿದ್ದುದರಿಂದ ಅವನ ಹೆಸರೇ ಈ ಗುಹೆಗೆ ಅನ್ವಯಿಸಲ್ಪಟ್ಟಿರ ಬಹುದೆಂದೂ ಊಹೆಗಳನ್ನು ಮಾಡಲಾಗಿದೆ. ಮರಾಠೀ ಭಾಷೆಯಲ್ಲಿ ರಾವಳ್ ಎಂಬ ಮಾತಿಗೆ ಕಲ್ಲು ಎಂಬ ಅರ್ಥವಿದೆ. ಹಿಂದೆ ಈ ಭಾಗವೆಲ್ಲವೂ ಮುಂಬಯಿ ಪ್ರಾಂತಕ್ಕೆ ಸೇರಿದ್ದು ಮರಾಠೀ ಭಾಷೆಯ ಪ್ರಭಾವ ಇಲ್ಲೆಲ್ಲ ಕಂಡುಬರುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಇದೊಂದು ಮರಳುಗಲ್ಲಿನಲ್ಲಿ ಕೊರೆದ ಗುಹೆ. (ಛಾಯಾಚಿತ್ರ-೧) ವಿಸ್ತಾರದಲ್ಲಿ ಕಿರಿದು, ಮುಂದೆ ೩೦ ಅಡಿಗಳಷ್ಟು ಉದ್ದದ ಚಾವಡಿಯ ಗುಹೆ ೨೦ ಅಡಿಗಳಷ್ಟು ಹಿಂದಕ್ಕೆ ಸರಿದಿದೆ. ಎತ್ತರ ಸುಮಾರು ೧೦ ಅಡಿಗಳು. ಹೆಚ್ಚು ಕಡಿಮೆ ಅರ್ಧಸಮಾನ ಕೇಂದ್ರದ ವಿನ್ಯಾಸದ ಗುಹೆಯ ಮಧ್ಯದ ಮಂಟಪ ನಾಲ್ಕೂ ಕಡೆ ತೆರೆದಿದೆ. ಮುಂಭಾಗದಲ್ಲಿ ಎರಡೂ ಕಡೆ ಕೋಷ್ಠದೊಳಗೆ ಕುಬ್ಜಾಕಾರದ ಶಂಖನಿಧಿ ಮತ್ತು ಪದ್ಮನಿಧಿಗಳ ಕೊರೆದ ಉಬ್ಬು ವಿಗ್ರಹಗಳಿವೆ. ದ್ವಾರಪಾಲಕರ ವಿಗ್ರಹಗಳು, ಒಳಗಿನ ಸಪ್ತಮಾತೃಕೆಯರ ವಿಗ್ರಹಗಳು ಸಹ ಈ ಪ್ರದೇಶದಲ್ಲಿ ಕಾಣಿಸಿಕೊಂಡಿರುವ ವಿಗ್ರಹಗಳಿಗಿಂತ ಅಂಗರಚನೆಯಲ್ಲಿ ಭಿನ್ನವಾಗಿವೆ ಎಂಬುದು ಮೇಲು ನೋಟಕ್ಕೇ ಕಾಣಿಸುವ ಅಂಶ. ದ್ವಾರಪಾಲಕರು ಧರಿಸಿರುವ

ಬನವಾಸಿಯ ಉತ್ಖನನದಲ್ಲಿ ಗಜಪೃಷ್ಠಾಕೃತಿಯ ಚೈತ್ಯ (?)ದ ಅವಶೇಷವನ್ನು ಗುರುತಿಸಲಾಗಿದೆ. ತುಂಬಾ ದಪ್ಪದ ಮೂರು ಇಟ್ಟಿಗೆಗಳ ಗೋಡೆಗಳನ್ನು ಬಳಸಿದಂತೆ ಎರಡು ಪ್ರದಕ್ಷಿಣಾಪಥಗಳಿವೆ. ತಲವಿನ್ಯಾಸ ಕಂಡು ಬಂದರೂ ಇದರ ಪೂರ್ಣ ಸ್ವರೂಪ ಸ್ಪಷ್ಟವಾಗಿಲ್ಲ. ಗುಲ್ಬರ್ಗ ಜಿಲ್ಲೆಯ ಸನ್ನತಿಯಲ್ಲಿಯೂ ವೃತ್ತಾಕಾರದ ಸ್ತೂಪವೊಂದರ ಅವಶೇಷಗಳು ಮೇಲ್ನೋಟಕ್ಕೆ ಕಾಣಿಸಿಕೊಂಡಿವೆ. ಇದು ಬಹುಮಟ್ಟಿಗೆ ತುಂಡುಕಲ್ಲುಗಳಿಂದ ನಿರ್ಮಿಸಲ್ಪಟ್ಟಿದ್ದು ಮೇಲೆ ಶಿಲ್ಪಗಳ, ಶಿಲಾಫಲಕಗಳ ಆಚ್ಛಾದನವಿದ್ದಂತೆ ತೋರುತ್ತದೆ. ಇದರ ಪೂರ್ಣ ಕಲ್ಪನೆ ಸಹ ಮಾಡಲಾಗುವುದಿಲ್ಲವಾದರೂ ಇಲ್ಲಿ ದೊರೆತ ಆಯಕಸ್ತಂಭದ ಮೇಲಿರುವ ಅಲಂಕೃತ ಚೈತ್ಯ ಕಮಾನು ಅಂದಿನ ಚೈತ್ಯ ಅಥವಾ ವಿಹಾರದ ಮಾದರಿಯಾಗಿದ್ದಿರಬಹುದು. ನೆರೆಯ ಆಂಧ್ರಪ್ರದೇಶದಲ್ಲಿ ಸಾತವಾಹನರ ಕಾಲಕ್ಕೂ ಹಿಂದಿನದೆನ್ನಬಹುದಾದ ಅಮರಾವತಿ, ನಾಗಾರ್ಜುನ ಕೊಂಡಗಳಲ್ಲಿನ ಸ್ತೂಪಗಳನ್ನು ಇದು ಹೋಲುತ್ತದೆನ್ನಬಹುದು. ಪಟ್ಟದ ಕಲ್ಲಿನ ಸಾತವಾಹನರ ಕಾಲಕ್ಕೆ ಸೇರಿದುದೆನ್ನಬಹುದಾದ ಇಟ್ಟಿಗೆಯ ಕಟ್ಟಡದ ಅವಶೇಷಗಳು ಸಂಗಮೇಶ್ವರ ಮತ್ತು ಜೈನ ದೇವಾಲಯಗಳ ಪರಿಸರದಲ್ಲಿ ಇತ್ತೀಚೆಗೆ ನಡೆಸಿದ ಉತ್ಖನನಗಳಲ್ಲಿ ಕಂಡು ಬಂದಿವೆ. ಎರಡು ಸಾಲು ಕಂಬಗಳನ್ನುಳ್ಳ ದೀರ್ಘ ಚತುರಸ್ರ ವಿನ್ಯಾಸದ ಹಜಾರದ ದೇವಾಲಯದ ಅವಶೇಷವದು ಎಂದು ಹೇಳಲಾಗಿದೆ. ಇಂತಹುದೇ ಅವಶೇಷ ಐಹೊಳೆಯಲ್ಲಿಯೂ ಕಾಣಿಸಿಕೊಂಡಿದೆ.

ಗುಹಾವಾಸ್ತು : ಬಿಹಾರ

ಆದರೆ ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣಕ್ಕಿಂತಲೂ ಹೆಚ್ಚಾಗಿ ಗುಹಾವಾಸ್ತು ಶಿಲ್ಪಕ್ಕೆ ಆರಂಭದಲ್ಲಿ ಪ್ರೋತ್ಸಾಹ ದೊರೆಯಿತು. ಮೌರ್ಯ ಅಶೋಕ (ಕ್ರಿ. ಪೂ. ೩ನೆಯ ಶತಮಾನ) ಮತ್ತು ಆತನ ಮೊಮ್ಮಗ ದಶರಥ ಬಿಹಾರ ರಾಜ್ಯದ ಗಯೆಯ ಸಮೀಪದ ಬರಾಬರ್ ಮತ್ತು ನಾಗಾರ್ಜುನ ಬೆಟ್ಟಗಳಲ್ಲಿ ಗುಹೆಗಳನ್ನು ಕಂಡರಿಸುವ ಸಂಪ್ರದಾಯವನ್ನು ಆರಂಭಿಸಿದರೆನ್ನಬಹುದು. ಗಟ್ಟಿಯಾದ ಕಲ್ಲಿನಲ್ಲಿ ಹೀಗೆ ಗುಹೆಗಳನ್ನು ಕೊರೆಯಿಸುವ ಸಂಪ್ರದಾಯ ದಕ್ಷಿಣಭಾರತದ ದಕ್ಷಿಣತುದಿಗೂ ಪಸರಿಸಿತು. ಅಲ್ಲಿ ಕಾಣಿಸಿರುವ ಕಲ್ಲಿನ ಆಸರೆಗಳನ್ನು ಜೈನಮುನಿಗಳ ಆಶ್ರಯಕ್ಕಾಗಿ ಅವರಿಗೆ ಅನುಕೂಲಿಸುವಂತೆ ಹೊಸದಾಗಿ ರೂಪಿಸಲಾದಂತೆ ತೋರುತ್ತದೆ. ತಲೆಭಾಗದಲ್ಲಿ ಆಸರೆಗಾಗಿ ದಿಂಬಿನಂತೆ ಸ್ವಲ್ಪ ಎತ್ತರಿಸಿದ ಕಲ್ಲುಮಂಚಗಳು ಈ ಗುಹೆಗಳಲ್ಲಿ ಕಂಡುಬಂದಿವೆ. ಇವುಗಳಲ್ಲಿ ಅನೇಕವುಗಳು ಶಾಸನಸ್ಥವಾಗಿದ್ದು ಕ್ರಿ. ಪೂ. ೨ನೆಯ ಶತಮಾನದಿಂದ ಕ್ರಿ. ಶ. ೩ನೆಯ ಶತಮಾನದವರೆಗೂ ಇವುಗಳು ಅಸ್ತಿತ್ವದಲ್ಲಿದ್ದುವೆಂಬುದು ಸ್ಪಷ್ಟವಾಗಿದೆ. ಇವು ವಿಶೇಷವಾಗಿ ದಕ್ಷಿಣದ ಪಾಂಡ್ಯರ ಪ್ರದೇಶಕ್ಕೆ ಸೀಮಿತವಾಗಿತ್ತು. ಕ್ರಿ. ಶ. ೩ನೆಯ ಶತಮಾನದ ನಂತರ ಕಲ್ಲಿನ ಆಸರೆಗಳನ್ನೇ ಆಶ್ರಯಗಳಾಗಿ ಪರಿವರ್ತಿಸುವ ಪದ್ಧತಿ ಕೊನೆಗೊಂಡಿತಾದರೂ ಗುಹಾವಸ್ತು ಆನಂತರ ಹೆಚ್ಚು ಪ್ರಬಲವಾಗಿ ಕಾಣಿಸಿಕೊಂಡಿತು. ಇವುಗಳೆಲ್ಲ ಹೆಚ್ಚಾಗಿ ಬೌದ್ಧಧರ್ಮೀಯವೇ.

ಗುಹಾವಾಸ್ತು : ಮಹಾರಾಷ್ಟ್ರ

ಪಶ್ಚಿಮ ಭಾರತದಲ್ಲಿ ಬಹುತೇಕ ಮಹಾರಾಷ್ಟ್ರದಲ್ಲಿ ಇವು ಕೇಂದ್ರೀಕೃತವಾಗಿವೆ. ಇಲ್ಲಿನ ಸ್ವಾಭಾವಿಕ ಮೃದು ರಚನೆಯ ಜ್ವಾಲಾಮುಖಿಶಿಲೆ ಹಾಗೂ ಅದರ ಕೆಳಗಿನ ಚಪ್ಪಟೆಯ ಪದರಗಳು ಗುಹೆಗಳನ್ನು ಕೊರೆಯಲು ಸುಲಭವಾಗಿದ್ದುದೊಂದು ಇದಕ್ಕೆ ಪ್ರಮುಖ ಕಾರಣ. ಪೂರ್ವಕರಾವಳಿಯಲ್ಲಿನ ಒರಟಾದ ಮರಳುಗಲ್ಲು ಸಹ ಮೃದುತ್ವ ಪಡೆದಿದ್ದು ಗುಹಾವಾಸ್ತುವಿಗೆ ಅನುಕೂಲವಾದುದಾಗಿತ್ತು. ಪಶ್ಚಿಮ ಗೋದಾವರಿ ಜಿಲ್ಲೆಯ ಗುಂಟುಪಲ್ಲಿಯಲ್ಲಿ ಕ್ರಿ. ಪೂ. ೩ನೆಯ ಶತಮಾನದಿಂದಲೇ ಇಂತಹ ಗುಹಾಲಯಗಳ ರಚನೆ ಆರಂಭವಾಯಿತು. ಅತಿ ಪ್ರಾಚೀನವೆನಿಸಿದ ಇಲ್ಲಿನ ಗುಹಾಲಯವು ವಿನ್ಯಾಸದಲ್ಲಿ ವೃತ್ತವಾಗಿದ್ದು ಮಧ್ಯದಲ್ಲಿ ಕಲ್ಲಿನಿಂದ ಕಡೆದ ಸ್ತೂಪವಿದೆ. ಈ ವೃತ್ತ ವಿನ್ಯಾಸ ಮೌರ್ಯರಿಂದ ಬಂದ ಬಳುವಳಿ. ಪಶ್ಚಿಮದ ದಕ್ಖನ್ ಪ್ರದೇಶದಲ್ಲಿ ಮಹಾರಾಷ್ಟ್ರದ ಕೊಲಾಬಾ ಜಿಲ್ಲೆಯ ಕೊಂಡಾನೆ, ಪೂನಾ ಜಿಲ್ಲೆಯ ಭಾಜ, ಔರಂಗಾಬಾದಿನ ಅಜಂತಾ, ಪಿಥಲ್‌ಕೋರಾಗಳಲ್ಲಿನ ಗುಹಾಲಯಗಳ ಕಾಲವನ್ನು ಕ್ರಿ. ಪೂ. ೩ನೆಯ ಶತಮಾನದಷ್ಟು ಹಿಂದಕ್ಕೆ ಒಯ್ಯಬಹುದು. ಕ್ರಿ. ಶ. ೧ನೆಯ ಶತಮಾನದ ವೇಳೆಗೆ ನಾಸಿಕ, ಕಾರ್ಲೆ, ಕನ್ಹೇರಿ, ಜುನ್ನಾರ್‌ಗಳಲ್ಲಿ ಬೌದ್ಧ ಗುಹಾಲಯಗಳು ತಲೆ ಎತ್ತಿದುವು. ಅರಸರು, ಶ್ರೀಮಂತ ವಣಿಕರು ಇವುಗಳಿಗೆ ಆರ್ಥಿಕ ಪೋಷಕರಾದರು. ಇವರು ಬೌದ್ಧಧರ್ಮದ ಮಹಾಸಾಂಘಿಕ, ಭದ್ರಾಯಣೀಯ ಪಂಗಡಗಳಿಗೆ ಸೇರಿದವರು.


ಗುಹಾವಾಸ್ತು : ಮಧ್ಯಪ್ರದೇಶ

ಉತ್ತರ ಭಾರತದಲ್ಲಿ ಗುಪ್ತವಂಶದ ಅರಸರು ಆಳತೊಡಗಿದಾಗ ಹಿಂದೂ ಧರ್ಮದ ಪುನರುಜ್ಜೀವನ ಕಾಲ ಆರಂಭವಾಯಿತು. ಹಿಂದೂ ದೇವಾಲಯಗಳೂ ಗುಹಾಲಯಗಳೂ ಆಗ ರಚಿಸಲ್ಪಟ್ಟುವು. ಮಧ್ಯಪ್ರದೇಶದ ಉದಯಗಿರಿ ಬೆಟ್ಟಗಳಲ್ಲಿ, ಈ ಕಾಲದ

ಇಂತಹ ಗುಹೆಗಳು ಕೊರೆಯಲ್ಪಟ್ಟಿವೆ. ಇಲ್ಲಿ ದೊರೆತ ಶಾಸನಗಳಲ್ಲೊಂದು ಇಮ್ಮಡಿ ಚಂದ್ರಗುಪ್ತನದು. ಇನ್ನೊಂದರಲ್ಲಿ ಗುಪ್ತ ಶಕೆಯ ೮೨ನೆಯ ವರ್ಷದ (ಕ್ರಿ. ಶ. ೪೦೧) ಪ್ರಸ್ತಾಪವಿದೆ. ಕೆಲವು ಆಲಯಗಳು ಸ್ವಲ್ಪಮಟ್ಟಿಗೆ ಬಂಡೆಯೊಳಗೆ ಕೊರೆಯಲ್ಪಟ್ಟಿದ್ದು, ಉಳಿದ ಭಾಗ ಕಲ್ಲಿನ ಕಟ್ಟಡಗಳಾಗಿವೆ. ಆಯಾಕಾರದ ಗರ್ಭಗೃಹದ ಮೇಲೆ ಚಪ್ಪಟೆಯಾದ ಛಾವಣಿಗಳನ್ನೆಬ್ಬಿಸಲಾಗಿದೆ. ಟಾವಾದ ಗುಹೆಯಲ್ಲಿ ಮಾತ್ರ ಏಕಶಿಲೆಯಲ್ಲಿ ಕೊರೆದ ವೃತ್ತಾಕಾರದ ಗರ್ಭಗೃಹವನ್ನು ಕಾಣುತ್ತೇವೆ. ಮುಂಬಯಿ ಮಹಾನಗರದ ಜೋಗೇಶ್ವರಿಯ ಗುಹಾಲಯ ಕ್ರಿ. ಶ. ೫೫೦ ಕ್ಕೂ ಹಿಂದಿನ ಕಾಲದ್ದವೆಂದು ಒಬ್ಬ ತಜ್ಞರು ಸೂಚಿಸಿ, ಕಾಲಾನುಕ್ರಮಣಿಕೆಯಲ್ಲಿ ಇವು ಮೇಲೆ ಹೇಳಿದ ಗುಪ್ತರ ಕಾಲದ ಗುಹಾಲಯಗಳ ನಂತರದವು ಎಂದಿದ್ದಾರೆ. ಆದರೆ ಈ ಅಭಿಪ್ರಾಯ ಸರ್ವಸಮ್ಮತವಾಗಿರದೆ ನಮ್ಮ ರಾಜ್ಯದಲ್ಲಿನ ಬಿಜಾಪುರಜಿಲ್ಲೆಯ ಬಾದಾಮಿಗೆ ದ್ವಿತೀಯ ಸ್ಥಾನವನ್ನು ಅನೇಕರು ಸೂಚಿಸಿದ್ದಾರೆ. ಇದರ ಜೋಡಿ ಮೂರು ಐಹೊಳೆಯ ಗುಹಾಲಯಗಳು. ಬಾದಾಮಿಯ ನಾಲ್ಕು ಗುಹೆಗಳೂ ಒಂದೇ ಕಡೆ ಸಾಲಾಗಿದ್ದರೆ, ಐಹೊಳೆಯಲ್ಲಿ ಇವು ನಾಲ್ಕು ಬೇರೆ ಬೇರೆ ಕಡೆಗಳಲ್ಲಿದ್ದು-ರಾವಳಫಡಿ (ಗುಡಿ), ಏಕಶಿಲೆಯ ಜೈನಗುಡಿ ಹಾಗೂ ಎರಡಂತಸ್ತಿನ ಬೌದ್ಧ ಚೈತ್ಯಾಲಯ-ಒಂದು ಗುಂಪಿಗೆ ಸೇರಿದವುಗಳಾಗಿವೆ. ಬಾದಾಮಿ ಹಾಗೂ ಐಹೊಳೆಯ ಈ ಆಲಯಗಳಲ್ಲಿ ಮೊದಲಿನದು ಯಾವುದು ಎಂಬುದರ ಬಗೆಗೂ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಐಹೊಳೆಯವು ಬಾದಾಮಿಯಲ್ಲಿನವುಗಳಂತೆ ವ್ಯವಸ್ಥಿತರೂಪದಲ್ಲಿ ವಿಕಾಸಗೊಂಡವುಗಳಲ್ಲ. ಕಟ್ಟುವ ವಿನ್ಯಾಸದಲ್ಲಿ, ಮೂರ್ತಿಶಿಲ್ಪಗಳ ಭಾವಭಂಗಿಗಳಲ್ಲಿ ಮೂಲಭೂತವಾದ ಏಕತೆ ಬಾದಾಮಿಯಲ್ಲಿ ಕಂಡುಬರುತ್ತದೆ. ಐಹೊಳೆಯ ಈ ಆಲಯಗಳಲ್ಲಿ ಅನಿಷ್ಕೃಷ್ಟತೆ ಇದೆ. ವಿನ್ಯಾಸದಲ್ಲಿಯೂ ನಾಜೂಕು ಕಾಣಿಸಿಕೊಳ್ಳುವುದಿಲ್ಲ. ಈ ಕಾರಣಗಳಿಂದ ಐಹೊಳೆಯ ಗುಹಾಲಯಗಳು ಬಾದಾಮಿಯ ಗುಹಾಲಯಗಳಿಗೂ ಪೂರ್ವದ್ದು ಎಂಬುದೊಂದು ಬಹುಜನ ಸಮ್ಮತವಾದ ವಾದ.

ಗುಹಾವಾಸ್ತು : ಕರ್ನಾಟಕ - ಐಹೊಳೆ

ಐಹೊಳೆಯ ರಾವಳಫಡಿಯ ಸಮೀಪದ ಶಿವಾಲಯ ನೆಲಮಟ್ಟಕ್ಕೇ ಕೊರೆಯಲ್ಪಟ್ಟಿದೆ. ಇದರ ಛಾವಣಿಯೂ ಕುಗ್ಗಿದಂತಿದ್ದು ಒಳಗೆ ದೀರ್ಘ ಚತುರಸ್ರ ಪೀಠದ ಮೇಲೆ ಉದ್ದನೆಯ ಲಿಂಗವೊಂದು ಕಂಡುಬರುತ್ತದೆ. ಈ ಲಿಂಗ ಛಾವಣಿಯನ್ನು ತಾಗುವಷ್ಟು ಎತ್ತರದ್ದಾಗಿದ್ದು, ಲಿಂಗವಾಗಲೀ, ಪೀಠವಾಗಲೀ ಗುಹೆಯ ಕೊರೆದ ಭಾಗಗಳಲ್ಲೊಂದಾಗಿರದೆ, ಬಹುಶಃ ನಂತರದ ಕಾಲದಲ್ಲಿ ಅದನ್ನು ಅಲ್ಲಿ ಪ್ರತಿಷ್ಠಿಸಿರಬಹುದೆಂಬ ಭಾವನೆ ಉಂಟಾಗುತ್ತದೆ. ಈ ದೃಷ್ಟಿಯಲ್ಲಿ ಇದನ್ನು ಗುಹಾಲಯ ಎಂದು ಕರೆಯುವುದಕ್ಕಿಂತಲೂ ಆಶ್ರಯಸ್ಥಾನವೆಂದು ಭಾವಿಸಬಹುದು ಎಂದು ತಜ್ಞರು ಸಲಹೆ ಮಾಡಿದ್ದಾರೆ.




ಚಿತ್ರ - ೧

ಇದನ್ನು ಕಡೆಗಣಿಸಿದರೆ, ನಂತರದ ಅತಿ ಪ್ರಾಚೀನವೆನಿಸಬಹುದಾದ ಗುಹಾಲಯ ರಾವಳಫಡಿ. ಇದು ರಾವಣಫಡಿ ಎಂಬ ಹೆಸರಿನಿಂದಲೂ ಕರೆಯಲ್ಪಡುವ ಗುಹಾಲಯ. ಈ ಹೆಸರಿಗೂ ರಾವಣನಿಗೂ ಏನೂ ಸಂಬಂಧವಿಲ್ಲ. ಗುಹೆಯಲ್ಲಿನ ನಟರಾಜನ ಮೂರ್ತಿಯನ್ನು ರಾವಣ ನದಿರಬಹುದೆಂದು ಭ್ರಮಿಸಿ ಇದಕ್ಕೆ ಈ ಹೆಸರು ಬಂದಿರಬಹುದೆಂದೂ ಅಥವಾ ರಾವಳ ಎಂಬ ವ್ಯಕ್ತಿಯೊಬ್ಬ ಇಲ್ಲಿ ವಾಸವಾಗಿದ್ದುದರಿಂದ ಅವನ ಹೆಸರೇ ಈ ಗುಹೆಗೆ ಅನ್ವಯಿಸಲ್ಪಟ್ಟಿರ ಬಹುದೆಂದೂ ಊಹೆಗಳನ್ನು ಮಾಡಲಾಗಿದೆ. ಮರಾಠೀ ಭಾಷೆಯಲ್ಲಿ ರಾವಳ್ ಎಂಬ ಮಾತಿಗೆ ಕಲ್ಲು ಎಂಬ ಅರ್ಥವಿದೆ. ಹಿಂದೆ ಈ ಭಾಗವೆಲ್ಲವೂ ಮುಂಬಯಿ ಪ್ರಾಂತಕ್ಕೆ ಸೇರಿದ್ದು ಮರಾಠೀ ಭಾಷೆಯ ಪ್ರಭಾವ ಇಲ್ಲೆಲ್ಲ ಕಂಡುಬರುತ್ತದೆ ಎಂಬುದನ್ನು ನೆನಪಿನಲ್ಲಿಡಬೇಕು. ಇದೊಂದು ಮರಳುಗಲ್ಲಿನಲ್ಲಿ ಕೊರೆದ ಗುಹೆ. (ಛಾಯಾಚಿತ್ರ-೧) ವಿಸ್ತಾರದಲ್ಲಿ ಕಿರಿದು, ಮುಂದೆ ೩೦ ಅಡಿಗಳಷ್ಟು ಉದ್ದದ ಚಾವಡಿಯ ಗುಹೆ ೨೦ ಅಡಿಗಳಷ್ಟು ಹಿಂದಕ್ಕೆ ಸರಿದಿದೆ. ಎತ್ತರ ಸುಮಾರು ೧೦ ಅಡಿಗಳು. ಹೆಚ್ಚು ಕಡಿಮೆ ಅರ್ಧಸಮಾನ ಕೇಂದ್ರದ ವಿನ್ಯಾಸದ ಗುಹೆಯ ಮಧ್ಯದ ಮಂಟಪ ನಾಲ್ಕೂ ಕಡೆ ತೆರೆದಿದೆ. ಮುಂಭಾಗದಲ್ಲಿ ಎರಡೂ ಕಡೆ ಕೋಷ್ಠದೊಳಗೆ ಕುಬ್ಜಾಕಾರದ ಶಂಖನಿಧಿ ಮತ್ತು ಪದ್ಮನಿಧಿಗಳ ಕೊರೆದ ಉಬ್ಬು ವಿಗ್ರಹಗಳಿವೆ. ದ್ವಾರಪಾಲಕರ ವಿಗ್ರಹಗಳು, ಒಳಗಿನ ಸಪ್ತಮಾತೃಕೆಯರ ವಿಗ್ರಹಗಳು ಸಹ ಈ ಪ್ರದೇಶದಲ್ಲಿ ಕಾಣಿಸಿಕೊಂಡಿರುವ ವಿಗ್ರಹಗಳಿಗಿಂತ ಅಂಗರಚನೆಯಲ್ಲಿ ಭಿನ್ನವಾಗಿವೆ ಎಂಬುದು ಮೇಲು ನೋಟಕ್ಕೇ ಕಾಣಿಸುವ ಅಂಶ. ದ್ವಾರಪಾಲಕರು ಧರಿಸಿರುವ

ಕಿರೀಟ-ಮಕುಟಗಳು ಮೇಲಕ್ಕೆ ಹೋದಂತೆ ಕಿರಿದಾಗುವ, ಸಿಥಿಯನ್ ಶೈಲಿಯಂತಿವೆ. ಅವರು ಉಟ್ಟ ವಸ್ತ್ರದ ಮಡಕೆಗಳು ಸಹ ಭಿನ್ನ ಶೈಲಿಯವೇ.

ಗುಹೆಯೊಳಗಿನ ಅಂತರಾಳದ ಹಿಂಬದಿಯ ಮಧ್ಯದಲ್ಲಿ ಒಂದು ಗರ್ಭಗುಡಿ ಇದ್ದು ಅದರೊಳಗೆ ಶಿವಲಿಂಗವಿದೆ. ಬೌದ್ಧ ಸಂಪ್ರದಾಯದ ಸ್ತೂಪಗಳಲ್ಲಿದ್ದಂತೆ ಇದನ್ನು ಬಹುಮಟ್ಟಿಗೆ ಚತುರ್ಭುಜಾಕಾರವಾಗಿ ಕೊರೆಯಲಾಗಿದೆ. ಇದರ ಎರಡೂ ಬದಿಗಳಲ್ಲಿ ಇನ್ನೆರಡು ಕೋಣೆಗಳಿದ್ದು ಇವು ಮೂರು ಸೇರಿ ಇದೊಂದು ತ್ರಿಕೂಟಾಚಲವಾಗಿದೆ. ಈ ಎರಡೂ ಕೋಣೆಗಳ ಮುಂದೆ ಎರಡೆರಡು ಕಂಬಗಳಿವೆ. ಮಂಟಪದಿಂದ ಪಕ್ಕದ ಗುಡಿಗಳಿಗೆ ಹೋಗಲು, ಬಲಗಡೆ ಎರಡು ಹಾಗೂ ಎಡಗಡೆ ನಾಲ್ಕು ಮೆಟ್ಟಿಲುಗಳನ್ನೇರಬೇಕು. ಎದುರಿನ ಅಂತರಾಳಕ್ಕೂ ಸಹ ಎರಡು ಮೆಟ್ಟಿಲುಗಳಿವೆ. ಅಂತರಾಳದ ಬಲಬದಿಯ ಗುಡಿಯಲ್ಲಿ ಸಪ್ತಮಾತೃಕೆಯರ ವಿಗ್ರಹಗಳಿವೆ. ಎಡಬದಿಯಲ್ಲಿ ಗಂಗಾಧರಮೂರ್ತಿ, ಹರಿಹರ, ಅರ್ಧನಾರೀಶ್ವರ ಮುಂತಾದ ವಿಗ್ರಹಗಳು ಕೆತ್ತಲ್ಪಟ್ಟಿವೆ. ಮಂಟಪದ ಛಾವಣಿಯಲ್ಲಿ ಹೂವುಗಳ ಚೌಕಪಟ್ಟಿಗಳಿಂದ ಆವರಿಸಲ್ಪಟ್ಟ ದೊಡ್ಡ ಕಮಲವಿದೆ. ಮಧ್ಯಭಾಗದಲ್ಲಿ ಇಳಿಬಿದ್ದಿರುವ ಛತ್ತು; ಅಲ್ಲಲ್ಲಿ ಉಬ್ಬು ಕೆತ್ತನೆಗಳನ್ನು ನವಿರಾಗಿ ಕೆತ್ತಿದೆ. ಅಂತರಾಳದ ಛಾವಣಿಯನ್ನು ಮೂರು ವರ್ತುಳಗಳಾಗಿ ವಿಂಗಡಿಸಿದ್ದು ಒಂದರಲ್ಲಿ ಇಂದ್ರನು ಶಚಿಯೊಡನೆ ಐರಾವತದಲ್ಲಿ ಕುಳಿತು ವಿಹರಿಸುತ್ತಿರುವ, ಕೊನೆಯದರಲ್ಲಿ ವಿಷ್ಣುವು ಗರುಡಾಸೀನನಾಗಿರುವ ವಿಗ್ರಹಗಳಿವೆ. ಮೊದಲನೆಯ ವರ್ತುಳಕ್ಕೆ ಸೇರಿದಂತಿರುವ ಅಂತರಾಳದ ಗೋಡೆಯಲ್ಲಿ ಮನುಷ್ಯಾಕಾರದ ವರಾಹಮೂರ್ತಿಯನ್ನೂ ಅದರ ಎದುರಿನ ಗೋಡೆಯಲ್ಲಿ ಮಹಿಷಾಸುರಮರ್ದಿನಿಯನ್ನೂ ಕಂಡರಿಸಿದೆ. ಈ ಅಷ್ಟಭುಜವಿಗ್ರಹದ ಒಂದು ಕೈಯ ಮೇಲೆ ಗಿಳಿಯೊಂದು ಕುಳಿತಿರುವಂತೆ ತೋರಿಸಿರುವುದು ಗಮನಾರ್ಹವಾಗಿದೆ.

ಹೊರನೋಟಕ್ಕೆ ಬಹಳ ಸಾಧಾರಣವಾಗಿ ಕಾಣಿಸುವ, ವಿಸ್ತಾರದಲ್ಲಿ ಸಣ್ಣದಾದ ಈ ಗುಹೆಯನ್ನು ಒಳಹೊಕ್ಕಾಗ ಒಳಗಿನ ಶಿಲ್ಪ ಸಮುಚ್ಚಯ ಎಂತಹವರನ್ನೂ ಬೆರಗುಗೊಳಿಸುತ್ತದೆ. ಪಕ್ಕದ ಕೋಣೆಗಳ ಅಧಿಷ್ಠಾನ ಫಲಕದಲ್ಲಿ ಗಣಗಳ ಸಾಲುಗಳಿವೆ. ಇವು ಒಂದೊಂದೂ ಮುಗ್ಧ ರೀತಿಯ ಬಾಲಲೀಲೆಯನ್ನು ಸೂಚಿಸುವ ವಿಗ್ರಹಗಳು. ತಲೆಕೆಳಗಾಗಿ ನಿಂತಿರುವುದೊಂದು, ಕೈಯೂರಿ ಲಾಗ ಹಾಕುತ್ತಿರುವುದೊಂದು, ನೆಲದ ಮೇಲೆ ಮಲಗಿ, ಪಕ್ಕದಲ್ಲಿ ಅಂಗಾತ ಮಲಗಿದ ಮತ್ತೊಂದರ ಕೂದಲನ್ನು ಜಗ್ಗುತ್ತಿರುವುದೊಂದು–ಹೀಗೆ ಈ ಕುಬ್ಜಗಣಗಳು ಆಕರ್ಷಕವಾಗಿ ಅಲ್ಲಿನ ಹಿರಿದಾದ ಶಿಲ್ಪಗಳ ಸೌಂದರ್ಯವನ್ನು ಇಮ್ಮಡಿಸಿವೆ. ಇಲ್ಲಿರುವ ಶಿಲ್ಪಗಳಲ್ಲಿ ಅತಿ ಶ್ರೇಷ್ಠವೂ ಸುಪ್ರಸಿದ್ಧವೂ ಆದುದು ನಟರಾಜನ ಶಿಲ್ಪ. ವಿಸ್ತಾರವಾದ ಎಡಗೋಡೆಯಲ್ಲಿ ದಶಬಾಹುವಾಗಿ, ಒಂದೊಂದು ಕಡೆಯ ಒಂದೊಂದು ಕೈಯಲ್ಲಿ ಒಂದೊಂದು ಸರ್ಪವನ್ನೂ, ನಡುವಿಗೆ ಸುತ್ತಿದಂತೆ ಒಂದು ಸರ್ಪವನ್ನೂ ಇಲ್ಲಿ ಕಾಣುತ್ತೇವೆ. (ಛಾಯಾಚಿತ್ರ-೨) ಸಹಜ ಪ್ರಮಾಣದ ಅಂಗಾಂಗಗಳಲ್ಲಿ ನರ್ತನಲಾಸ್ಯ ಎದ್ದು ಕಾಣುತ್ತದೆ. ಈತ ಉಟ್ಟಿರುವ ಉತ್ತರೀಯ ಸಹ ನರ್ತನ ರಭಸಕ್ಕೆ ತೂಗಾಡುತ್ತಿರುವಂತೆ ತೋರುತ್ತದೆ. ಇದರ ಸುತ್ತಲೂ ಸಪ್ತಮಾತೃಕೆಯರು ಸಹ ನರ್ತಿಸುತ್ತಿರುವಂತೆ ಕಂಡರಿಸಿರುವುದು ಸೊಬಗನ್ನು ಹೆಚ್ಚಿಸಿದೆ. ಈ ಮಾತೃಗಳು ನೀಳದೇಹಿಗಳಾದರೂ ನಟರಾಜನಿಂದ ಪ್ರಭಾವಿತರಾಗಿ ಬಾಗಿ, ಬಳುಕಿ, ತಾವೂ ನಾಟ್ಯದಲ್ಲಿ ತನ್ಮಯರಾಗಿದ್ದಾರೆ.



ಚಿತ್ರ – ೨

ಈ ಶೈವಗುಹೆ ಕ್ರಿ. ಶ. ೭೦೦ರ ಸುಮಾರಿಗೆ ಕೊರೆಯಲ್ಪಟ್ಟಿರಬಹುದೆಂಬುದು ಕೆ. ಆರ್. ಶ್ರೀನಿವಾಸನ್‌ರವರು ಮುಂದಿಟ್ಟ ಒಂದು ಅಭಿಪ್ರಾಯವಾಗಿತ್ತು. ಈಗ ಇದನ್ನು ಒಪ್ಪಿಕೊಂಡಿಲ್ಲ. ಈ ಶಿವಾಲಯದ ಮುಂದೆ ಷೋಡಶ ಕೋನಗಳ ಕಂಬವೊಂದಿದೆ. ಈ ಕಂಬವು ಭೂಮಾರಾದಲ್ಲಿನ ಶಿವಾಲಯದಲ್ಲಿರುವ ಗುಪ್ತರ ಕಾಲದ ಕಂಬವನ್ನು ಹೋಲುವುದರಿಂದಲೂ ಇಲ್ಲಿನ ಮೂರ್ತಿಶಿಲ್ಪಗಳ ಅಂಗರಚನೆ, ಅವುಗಳ ಉದ್ದನೆಯ ಕಿರೀಟ-ಮುಕುಟಗಳು, ಉಟ್ಟ ಬಟ್ಟೆಯ ಮಡಿಕೆಗಳನ್ನು ಸೂಚಿಸುವ ತೋಡುಗಳು ಈ ಶೈವಗುಹೆ ೭ನೆಯ ಶತಮಾನಕ್ಕೂ ಪ್ರಾಚೀನವೆಂಬುದನ್ನು ತೋರಿಸುತ್ತದೆ. ಇದು ಆರನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿರಬಹುದೆಂಬುದು ಅ. ಸುಂದರರ ಅಭಿಪ್ರಾಯ. ಆರನೆಯ ಶತಮಾನದ ಆದಿಭಾಗವೆಂದು ಎಸ್. ನಾಗರಾಜು ಭಾವಿಸಿದ್ದಾರೆ. ಮೊಗಸಾಲೆಯ ಗೂಡುಗಳಲ್ಲಿ ಮೂರ್ತಿಗಳನ್ನು ಕೆತ್ತಿರುವ ಇಲ್ಲಿನ ಸಂಪ್ರದಾಯ ಪಲ್ಲವರ ರಾಜಸಿಂಹ (ಕ್ರಿ. ಶ. ೭೦೦-೭೨೦)ನು ಮಹಾಬಲಿಪುರದ ವರಾಹ ಮಂಟಪದಲ್ಲಿ ಆರಂಭಿಸಿದ ಸಂಪ್ರದಾಯದಿಂದ ಪ್ರಭಾವಿತವಾಗಿದ್ದು, ಇದೇ ಸಂಪ್ರದಾಯ ಐಹೊಳೆಯ ಜೈನ ಗುಹೆಯಲ್ಲಿಯೂ

ಕಾಣಿಸಿಕೊಳ್ಳುವುದರಿಂದ ಈ ಗುಹೆ ಎಂಟನೆಯ ಶತಮಾನದ ಆದಿಭಾಗದಲ್ಲಿ ಅಸ್ತಿತ್ವಕ್ಕೆ ಬಂದಿರಬಹುದೆಂದು ಹೆಚ್. ಸರ್ಕಾರರು ಅಭಿಪ್ರಾಯಪಟ್ಟಿದ್ದಾರೆ. ಈ ಗುಹೆಯ ನಟರಾಜನ ಶಿಲ್ಪವಿರುವ ಕೋಣೆಯ ಅಧಿಷ್ಠಾನದಲ್ಲಿ 'ಶ್ರೀ ಕಣಮಿಣ್ಚ' ಎಂಬ ಹೆಸರನ್ನು ಕೆತ್ತಿದ್ದು ಇದು ಒಬ್ಬ ಶಿಲ್ಪಿಯ ಹೆಸರೆಂದು ಬಹಳ ಹಿಂದೆ ಫ್ಲೀಟರು ಊಹಿಸಿದ್ದರು. ಇತ್ತೀಚೆಗೆ ಈ ಶಾಸನಪಾಠ ತಪ್ಪೆಂದು ಅಭಿಪ್ರಾಯಪಟ್ಟಿರುವ ಕೆ. ವಿ. ರಮೇಶರು ಇದನ್ನು 'ಶ್ರೀ ರಣವಿಕ್ರಾ (. .)' ಎಂದು ಓದಿ 'ರಣವಿಕ್ರಾ(ನ್ತ)' ಎಂಬುದು ಮಂಗಲೇಶನ ವಿಶಿಷ್ಟ ಬಿರುದು, ಅಲ್ಲದೆ ಚಾಲುಕ್ಯರು ಸಪ್ತಮಾತೃಕೆಯರಿಂದ ರಕ್ಷಿಸಲ್ಪಟ್ಟವರು (ಸಪ್ತಲೋಕ ಮಾತೃಭಿಃ ಸಪ್ತಮಾತೃಭಿಃ ಪರಿರಕ್ಷಿತಾಃ) ಎಂಬುದನ್ನು ಗಮನಿಸಿ, ನಟರಾಜನ ವಿಗ್ರಹದ ಸುತ್ತಲೂ ಕೆತ್ತಿದ ಸಪ್ತಮಾತೃಕೆಯರ ವಿಗ್ರಹವನ್ನು ಪರಿಶೀಲಿಸಿದಾಗ ಬಹುಶಃ ಆ ವಿಗ್ರಹ ದೈವತ್ವಕ್ಕೇರಿಸಲ್ಪಟ್ಟ ಚಾಲುಕ್ಯರ ಅರಸ ಮಂಗಲೇಶನದಾಗಿರಬಹುದೆಂದು ಸೂಚಿಸಿದ್ದಾರೆ. ಶಾಸನದ ಲಿಪಿ ಕ್ರಿ. ಶ. ೬-೭ನೆಯ ಶತಮಾನದ್ದು. ಮಂಗಲೇಶ ಆಳಿದುದು ಕ್ರಿ. ಶ. ೫೯೬ ರಿಂದ ೬೧೦ ರವರೆಗೆ. ಬಹುಶಃ ಅವನ ಕಾಲದಲ್ಲಿಯೇ ಈ ಗುಹೆ ಕೊರೆಯಲ್ಪಟ್ಟಿತು ಎನ್ನುವುದಾದರೆ ಇದು ಆರನೆಯ ಶತಮಾನದ ಆದಿಭಾಗದ್ದಾಗುತ್ತದೆ. ಇಲ್ಲಿ ಒಂದು ವಿಷಯವನ್ನು ಸೂಚಿಸಬಹುದು. ಪ್ರಸ್ತುತ ಶಾಸನಪಾಠ 'ಶ್ರೀಕಣಮಿಣ್ಚ' ಅಲ್ಲ. ರಮೇಶರು ಸೂಚಿಸಿರುವಂತೆ ಮೊದಲ ಮೂರು ಅಕ್ಷರಗಳು ಸ್ಪಷ್ಟವಾಗಿ 'ಶ್ರೀರಣ' ಎಂದೇ ಇದೆ. ಆದರೆ ೪-೫ನೆಯ ಅಕ್ಷರಗಳನ್ನು 'ವಿಕ್ರಾ' ಎಂದು ಓದಿರುವುದನ್ನು ಒಪ್ಪುವುದು ಕಷ್ಟ. ನನ್ನ ಮಟ್ಟಿಗೆ ಅದು 'ಮಿ(ಣ್ಚಿ) ಎಂದೇ ತೋರುತ್ತದೆ. ಅಕ್ಷರದ ವಿನ್ಯಾಸ 'ಮಿ' ಎಂಬುದನ್ನು ಸ್ಪಷ್ಟಗೊಳಿಸುತ್ತದೆ. 'ವಿಕ್ರಾ' ಎಂದು ಓದಲಾಗದು. 'ನ್ತ' ಎಂಬ ಅಕ್ಷರ ಕೇವಲ ಊಹಾ ಪಾಠ. ಆದುದರಿಂದ ಈ ನಟರಾಜನ ಶಿಲ್ಪ ದೈವತ್ವಕ್ಕೇರಿಸಲ್ಪಟ್ಟ ಮಂಗಲೇಶನ ಪ್ರತಿಕೃತಿ ಎಂಬುದು ಒಪ್ಪಲಾಗದ ಸಲಹೆ. ಇಲ್ಲಿ ರಮೇಶರು ಮಾಡಿರುವ ಇನ್ನೂ ಒಂದು ಊಹೆಯನ್ನು ಗಮನಿಸಬೇಕು. 'ರಾವಳ' ಎಂಬುದು 'ರಾಜಕುಲ' ಎಂಬುದರ ತದ್ಭವ. 'ಪಡಿ'ಯು 'ಪ್ರತಿಮಾ'ದ ಪ್ರಾಕೃತ ರೂಪ. ಆದುದರಿಂದ 'ರಾವಳಫಡಿ' ಎಂಬುದು 'ರಾಜಕುಲಪ್ರತಿಮಾಗೃಹ'. ಇಂತಹ ಒಂದನ್ನು ಕಲ್ಪಿಸಿ, ರೂಪಿಸಿದ ಮಂಗಲೇಶನು ಸ್ವತಃ ತನ್ನನ್ನೇ ನಟರಾಜನ ಪ್ರತಿಮೆಯಲ್ಲಿ ರೂಪಿಸಿಕೊಂಡಿದ್ದಾನೆ ಎಂದಿದ್ದಾರೆ ರಮೇಶರು. ಹಾಗಿದ್ದಲ್ಲಿ ಇಲ್ಲಿನ ವಿಗ್ರಹಗಳಲ್ಲಿ ಇತರ ಕೆಲವು ಮಂಗಲೇಶನ ಪೂರ್ವಜರನ್ನೋ, ಅರಮನೆಯ ಸ್ತ್ರೀ (ರಾಣಿ)ಯರನ್ನೋ ಪ್ರತಿನಿಧಿಸಬಹುದಲ್ಲ! ಇದು ಸಹ ಬಹುಶಃ ಸ್ವಾರಸ್ಯಕರವಾದ ಊಹೆಯೇ! ಆದರೆ ಬಾದಾಮಿಯ ವೈಷ್ಣವಗುಹೆಯೊಂದು ಕ್ರಿ. ಶ. ೫೭೮ರಲ್ಲಿ ಅಸ್ತಿತ್ವಕ್ಕೆ ಬಂದಿತೆನ್ನಲು ಶಾಸನಾಧಾರವಿದೆ. ಈ ಗುಹೆ ಅಲ್ಲಿನ ಗುಹೆಗಿಂತ ಪ್ರಾಚೀನ ಎಂದು ಮಾಡಿರುವ ಸಲಹೆ ಸ್ವೀಕಾರಾರ್ಹ ಎಂದ ಮೇಲೆ ಇದು ಆರನೆಯ ಶತಮಾನದ ಮೊದಲ ದಶಕಗಳಲ್ಲಿ ಅಸ್ತಿತ್ವಕ್ಕೆ ಬಂದಿರಬಹುದಾದ ಸಾಧ್ಯತೆ ಇದೆ.

ಇಲ್ಲಿನ ಇನ್ನೊಂದು ಗುಹೆ ಜೈನಧರ್ಮಕ್ಕೆ ಸಂಬಂಧಿಸಿದುದು, ವಾಸ್ತು ಹಾಗೂ ಮೂರ್ತಿಶಿಲ್ಪಗಳ ದೃಷ್ಟಿಯಿಂದಲೂ ಹಾಗೂ ವಿನ್ಯಾಸದ ದೃಷ್ಟಿಯಿಂದಲೂ ಇದು ಬಹುಮಟ್ಟಿಗೆ ರಾವಳಫಡಿಯನ್ನೇ ಹೋಲುತ್ತದೆ. ಒಳಗೆ ಹೋಗುತ್ತಲೇ ಒಂದು ಪಡಸಾಲೆ. ಇದರ ಒಳಭಾಗ ಬಂಡೆಯಲ್ಲಿ ಕೊರೆದುದು. ಆದರೆ ಮುಂಭಾಗದ ಗೋಡೆ ಮಾತ್ರ ದೊಡ್ಡ ಕಲ್ಲುಗಳಿಂದ ಕಟ್ಟಲ್ಪಟ್ಟುದು. ಪಡಸಾಲೆಯ ಎಡ ಮತ್ತು ಬಲ ಭಾಗಗಳಲ್ಲಿ ಬಾಹುಬಲಿ ಮತ್ತು ಸುಪಾರ್ಶ್ವನಾಥರ ವಿಗ್ರಹಗಳನ್ನು ಕಡೆದಿದೆ. ಬಾಹುಬಲಿ (ಗೊಮ್ಮಟ)ಯ ವಿಗ್ರಹ ಆಳೆತ್ತರದ್ದು. ಸುಮಾರು ಅಷ್ಟೇ ಎತ್ತರದ ಸುಪಾರ್ಶ್ವನಾಥನ ವಿಗ್ರಹ ಬಲಬದಿಯಲ್ಲಿದೆ. ಇಬ್ಬರೂ ಕಾಯೋತ್ಸರ್ಗ ಭಂಗಿಗಳಲ್ಲಿದ್ದಾರೆ. ಮುಂಭಾಗದಲ್ಲಿ ಆರು ಕಂಬಗಳಿದ್ದು ಮೂರು ಮೂರು ಕಂಬಗಳನ್ನು ಕೂಡಿಸುವಂತೆ ಕಲ್ಲಿನ ಗೋಡೆಯನ್ನು ಕಟ್ಟಿ ಮಧ್ಯದಲ್ಲಿ ದ್ವಾರವನ್ನು ಏರ್ಪಡಿಸಿದೆ. ಪಡಸಾಲೆಯ ಒಳಮಾಳಿಗೆಯಲ್ಲಿ ಸ್ವಸ್ತಿಕಗಳನ್ನೂ ಎಲೆ-ಬಳ್ಳಿಗಳನ್ನೂ ಕಮಲಗಳನ್ನೂ ಕೊರೆದಿದೆ.

ಪಡಸಾಲೆಯನ್ನೂ ಹಿಂದಿನ ಮಂಟಪವನ್ನೂ ಎರಡು ಕಂಬಗಳು ಬೇರ್ಪಡಿಸಿವೆ. ಈ ಮಂಟಪದ ಒಳಮಾಳಿಗೆಯಲ್ಲೂ ದೊಡ್ಡದಾದ ಕಮಲವನ್ನು ಬಿಡಿಸಿದ್ದು, ರಾವಳಫಡಿಯಲ್ಲಿದಂತೆ ಇಲ್ಲೂ ಆ ಕಮಲ ಕೆಳಗೆ ಇಳಿಬಿದ್ದಂತೆ ತೋರಿಸಲಾಗಿದೆ. ಇದರ ಸುತ್ತಲೂ ಚೌಕದ ನಾಲ್ಕೂ ಮೂಲೆಗಳಲ್ಲಿ ಒಂದೊಂದು ಕಮಲವನ್ನು ಬಿಡಿಸಲಾಗಿದೆ. ಮೊಸಳೆಗಳ, ಮತ್ಸ್ಯಗಳ, ಮತ್ಸ್ಯ ಕನ್ಯೆಯರ ಚಿತ್ರಗಳನ್ನೂ ಕಾಣಬಹುದು. ಮಂಟಪದ ಒಳಗೆ ಗುಹೆಯ ಬಾಗಿಲತ್ತ ಮುಖಮಾಡಿಕೊಂಡಿರುವ ಗರ್ಭಗುಡಿ ಇದೆ. ಇದನ್ನು ಹೊಗಲು ಮೂರು ಮೆಟ್ಟಲುಗಳನ್ನು ಹತ್ತಬೇಕು. ಇದರ ದ್ವಾರದಲ್ಲಿ ಹೂವಿನ, ಬಳ್ಳಿಗಳ ಕೆತ್ತನೆ ಇದೆ. ದ್ವಾರಪಾಲಕರು ಕೈಯ್ಯಲ್ಲಿ ಕಮಲ ಹಿಡಿದು ನಿಂತಿದ್ದಾರೆ. ಒಳಗೆ ಪರ್ಯಂಕಾಸನದಲ್ಲಿರುವ ಮಹಾವೀರ ತೀರ್ಥಂಕರನ ವಿಗ್ರಹವಿದೆ. ಪದ್ಮಾಸನದಲ್ಲಿ ಧ್ಯಾನ ಮುದ್ರೆಯಲ್ಲಿ ಕುಳಿತ ಈತನ ಹಿಂಬದಿಯಲ್ಲಿ ಪ್ರಭಾಮಂಡಲ. ಈ ದಿಂಬಿನ ಆನಿಕೆ ಒಂದು ವೈಶಿಷ್ಟ್ಯ. ಗರ್ಭಗೃಹದ ಎರಡೂ ಕಡೆಗಳಲ್ಲಿ, ಮಂಟಪದ ಎಡಬಲಗಳಲ್ಲಿ ಇನ್ನೆರಡು ಕೋಣೆಗಳಿವೆ. ಇವೆರಡನ್ನೂ ಎರಡೆರಡು ಕಂಬಗಳು ಗರ್ಭಗುಡಿಯಿಂದ

ಬೇರ್ಪಡಿಸಿವೆ. ಬಲಕೋಣೆಯಲ್ಲಿ ಪರ್ಯಂಕಾಸನದಲ್ಲಿ ಒಬ್ಬ ತೀರ್ಥಂಕರ ದಿಂಬಿಗೆ ಒರಗಿ ಕುಳಿತಿದ್ದಾನೆ. ಕೆಳಗಡೆ ಎರಡೂ ಪಕ್ಕಗಳಲ್ಲಿ ನಾಗರಾಜರು. ಅಲ್ಲದೆ ವಿಗ್ರಹದ ಬಲಕ್ಕೆ ನಾಲ್ಕು ವಿಗ್ರಹಗಳಿದ್ದು, ಅವುಗಳು ರಾಜ-ರಾಣಿ ಮತ್ತು ಇಬ್ಬರು ಪರಿಚಾರಿಕೆಯರನ್ನು ಪ್ರತಿನಿಧಿಸುವಂತೆ ತೋರುತ್ತದೆಯಾದರೂ ಆ ವಿಗ್ರಹಗಳನ್ನು ಗುರುತಿಸುವುದಾಗಿಲ್ಲ. ಎಡಗಡೆ ರಾಜ-ರಾಣಿಯರು ಆನೆಯ ಮೇಲೆ ಕುಳಿತು ಮೆರವಣಿಗೆ ಹೊರಟಂತೆ ತೋರಿಸಿದೆ. ಇದು ಇಂದ್ರ ಮತ್ತು ಶಚಿದೇವಿಯರು ಐರಾವತವನ್ನೇರಿ ಹೊರಟಿರುವ ದೃಶ್ಯವೆನ್ನಲಾಗಿದೆ. ಇವರು ತೀರ್ಥಂಕರನಿಗೆ ಗೌರವ ಸಲ್ಲಿಸಲೆಂದು ಹೊರಟಿರಬಹುದು. ಎಡಕೋಣೆಯಲ್ಲಿ ಯಾವುದೇ ವಿಗ್ರಹವಿಲ್ಲ. ಇಲ್ಲಿನ ಶಿಲ್ಪಗಳು ಕರ್ನಾಟಕದಲ್ಲಿ ಅತಿ ಪ್ರಾಚೀನ ಜೈನ ಶಿಲ್ಪಗಳೆಂಬುದನ್ನು ನೆನಪಿನಲ್ಲಿಡಬೇಕು. ಕದಂಬ ರವಿವರ್ಮನ ಗುಡ್ನಾಪುರದ ಶಾಸನದಲ್ಲಿ ಬಾಹುಬಲಿ (ಮನ್ಮಥ)ಯ ಆಲಯದ ಪ್ರಸ್ತಾಪವಿದ್ದು ಲಿಖಿತ ಆಧಾರಗಳಂತೆ ಅದು ಪ್ರಾಚೀನತಮವೆನ್ನಬಹುದಾದರೂ ಅಲ್ಲಿ ಯಾವುದೇ ವಿಗ್ರಹ ದೊರಕದಿರುವುದೊಂದು ದೌರ್ಭಾಗ್ಯ.

ರಾವಳಫಡಿಯಂತೆಯೇ ಇದು ಸಹ ಕ್ರಿ. ಶ. ಆರನೆಯ ಶತಮಾನದ ಆರಂಭದ ದಶಕಗಳಲ್ಲಿ ಅಸ್ತಿತ್ವಕ್ಕೆ ಬಂದಿತೆನ್ನಬಹುದು. ಇದು ಕ್ರಿ. ಶ. ೭೦೦ರ ಸುಮಾರಿಗೆ ಕೊರೆಯಲಾದ ರಾವಳಫಡಿಯ ನಂತರ ಅಸ್ತಿತ್ವಕ್ಕೆ ಬಂದ ಗುಹೆ ಎಂಬುದು ಕೆ. ಆರ್. ಶ್ರೀನಿವಾಸನ್‌ರವರ ಅಭಿಪ್ರಾಯ. ಎರಡೂ ಸಮಕಾಲೀನವೆನ್ನುವ ಹೆಚ್. ಸರ್ಕಾರರ ಅಭಿಪ್ರಾಯದಂತೆ ಇದು ಆನೆಯ ಶತಮಾನದ ಆರಂಭಕಾಲದ್ದು. ಗುಹಾಲಯದ ಸಮೀಪದ ಬಂಡೆಗಳಲ್ಲಿನ ಮೇಲಿರುವ ಸಣ್ಣ ಶಾಸನಗಳಲ್ಲಿ ಹಲವು ವ್ಯಕ್ತಿಗಳ - ಶ್ರೀಹರಿಯ, ವಿಕ್ರಮಪುತ್ರ, ಪದ್ಮಸ್ವಾಮಿ ಇತ್ಯಾದಿ- ಹೆಸರುಗಳಿವೆ. ಲಿಪಿಯನ್ನಾಧರಿಸಿ ಇವು ೭ನೆಯ ಶತಮಾನದ ಶಾಸನಗಳೆಂದು ನಿರ್ಧರಿಸಬಹುದು. ಇವರು ಬಹುಶಃ ಈ ಆಲಯಕ್ಕೆ ಭೇಟಿ ನೀಡಿದ ಭಕ್ತರಾಗಿರಬಹುದು. ಎ. ಎಮ್. ಅಣ್ಣಿಗೇರಿಯವರು ಇದರ ರಚನಾಕಾಲ ಸು. ಕ್ರಿ. ಶ. ೬೭೫-೭೦೦ಕ್ಕೆ ಸೇರುತ್ತದೆ ಎಂದಿದ್ದಾರೆ. ಬಹುಶಃ ಈ ಸಣ್ಣಶಾಸನಗಳ ಲಿಪಿಯನ್ನಾಧರಿಸಿ ಅವರು ಹೀಗೆ ತೀರ್ಮಾನಿಸಿರಬಹುದು. ರಾವಳಫಡಿಯನ್ನು ಇದು ಎಲ್ಲ ವಿಧಗಳಲ್ಲೂ ಬಹುಮಟ್ಟಿಗೆ ಹೋಲುತ್ತದೆಂಬ ಕಾರಣದಿಂದ ಇದು ಅದರ ಸಮಕಾಲೀನವೆಂದು ಹೇಳಬಹುದಾಗಿದೆ. ಒಂದೆರಡು ವ್ಯತ್ಯಾಸಗಳನ್ನು ಮಾತ್ರ ಗುರುತಿಸಬಹುದು. ಇಲ್ಲಿರುವ ಪಡಸಾಲೆ ಅಲ್ಲಿ, ಅಲ್ಲಿರುವ ಅಂತರಾಳ ಇಲ್ಲಿ, ಕಾಣುವುದಿಲ್ಲ.

ಐಹೊಳೆಯ ಈ ಜೈನ ಗುಹಾಲಯ ಅಲ್ಲಿನ ಮೇಗುಟಿ(ಡಿ)ಯ ನೈರುತ್ಯಕ್ಕಿದೆ. ಆದರೆ ಊರಿನೊಳಗಿಂದ ಮೇಗುಡಿಗೆ ಹೋಗುವಾಗ ದಿಬ್ಬವನ್ನೇರಲು ಅಳವಡಿಸಿರುವ ಪಾವಟಿಗೆಗಳನ್ನೇರುತ್ತಾ ಹೋದರೆ ಮಧ್ಯೆ ಬಲಗಡೆಗೆ ಎರಡು ಅಂತಸ್ತುಗಳ ಒಂದು ಆಲಯ ಕಾಣುತ್ತದೆ. ಇದನ್ನು ಮೊದಲು ಎರಡಂತಸ್ತಿನ ಜಿನಾಲಯವೆಂದು ಕರೆಯಲಾಗಿತ್ತು. ಇದರ ಅರ್ಧಭಾಗ ನೈಸರ್ಗಿಕ ಗುಹೆ. ಇಲ್ಲಿ ಗರ್ಭಗುಡಿಗಳಿವೆ. ಅದರ ಮುಂದೆ ಮಂಟಪ ಮತ್ತು ಕಂಬಗಳ ತೆರೆದ ಅಂಗಳಗಳಿವೆ. ಇವುಗಳು ನಯಗೊಳಿಸಿದ ಕಲ್ಲಿನಿಂದ ಕಟ್ಟಲ್ಪಟ್ಟವು. ಅಂಗಳಕ್ಕೆ ಹೊಂದಿ ನಾಲ್ಕು ಚೌಕಾಕಾರದ ಕಂಬಗಳು, ಎರಡು ಅರೆಗಂಬಗಳೂ ಇವೆ. ಒಳಗೆ ಮೂರು ಕೋಣೆಗಳಿದ್ದು ಮಧ್ಯದ್ದು ಗರ್ಭಗುಡಿ. ಇದರ ಎರಡೂ ಕಡೆಗಳಿಗಿರುವ ಕೋಣೆಗಳಲ್ಲಿ ಏನೂ ಇಲ್ಲ. ಇದರ ಮೇಲಿನ ಅಂತಸ್ತಿನಲ್ಲೂ ಕೆಳಗಿದ್ದಂತೆ ಒಂದು ಅಂಗಳವಿದೆ. ಇದರ ಹಿಂದೆ ಒಂದೇ ಒಂದು ಗರ್ಭಗುಡಿ ಇದೆ. ಮೇಲಂತಸ್ತಿಗೆ ಹೋಗಲು ಮೆಟ್ಟಿಲುಗಳಿಲ್ಲ. ಗುಹೆಯ ಹೊರಬದಿಯಿಂದಲೇ ಹೋಗಬೇಕು. ಕೆಳಭಾಗದಲ್ಲಿನ ಅಂಗಳ ಮತ್ತು ಮಂಟಪ (ಅಥವಾ ಅಂತರಾಳ)ವನ್ನು ಒಂದು ಗೋಡೆ ಬೇರ್ಪಡಿಸಿದೆ. ಇದರ ದ್ವಾರದ ಚೌಕಟ್ಟು ಅಲಂಕೃತವಾಗಿದೆ. ಇದರಲ್ಲಿ ಸುರುಳಿಗಳ, ಕುದುರೆಯ ಮಿಥುನದ, ಶಂಖ ಊದುತ್ತಿರುವ ಕುಬ್ಜನ ಚಿತ್ರಗಳಲ್ಲದೆ ಪದ್ಮಪಾಣಿಯ ವಿಗ್ರಹವನ್ನೂ ಕೆತ್ತಿವೆ. ಅಂತರಾಳದಿಂದ ಒಳಗಿನ ಗರ್ಭಗುಡಿಗಳಿಗೆ ಹೋಗಬೇಕು. ಗರ್ಭಗುಡಿಯ ದ್ವಾರಬಂಧ ಸಹ ಅಲಂಕೃತ. ಅದರ ಒಂದು ಶಾಖೆಯಲ್ಲಿ, ಎರಡೂ ಕಡೆಗಳಲ್ಲಿ ಆರು ಕಿರಿದಾದ ಗೂಡುಗಳಿದ್ದು ಅದರೊಳಗೆ ಅಲ್ಪ ಪ್ರಮಾಣದ ವಿಗ್ರಹಗಳನ್ನು ಕೆತ್ತಲಾಗಿದೆ. ಮೂಲತಃ ಈ ಗುಹಾಲಯವನ್ನು ಜಿನಾಲಯವೆಂದು ಭಾವಿಸಿದ್ದು ಈಗ ಇದು ಬೌದ್ಧರ ಚೈತ್ಯವಾಗಿದ್ದಿರಬಹುದೆಂದು ಗುರುತಿಸಲಾಗಿದೆ. ಈ ಶಾಖೆಗಳ ಗೂಡುಗಳಲ್ಲಿರುವ ಚಿತ್ರಗಳು ಬುದ್ಧನ ಜನನ, ಸಿದ್ಧಾರ್ಥನನ್ನು ಮಾರನು ಒಲಿಸಿಕೊಳ್ಳಲು ಯತ್ನಿಸಿದುದು, ಬುದ್ಧನು ಭಕ್ತರಿಗೆ ನೀಡುತ್ತಿರುವ ಉಪದೇಶ, ತನ್ನ ಶಿಷ್ಯರಾದ ಆನಂದ ಮುಂತಾದವರೊಂದಿಗಿರುವುದು ಇತ್ಯಾದಿ ಬುದ್ಧನ ಜೀವನಕ್ಕೆ ಸಂಬಂಧಿಸಿದ ಘಟ್ಟಗಳನ್ನು ಆ ಚಿತ್ರಗಳು ನಿರೂಪಿಸುತ್ತವೆ ಎಂದು ಈಗ ಹೇಳಲಾಗಿದೆ. ಗರ್ಭಗುಡಿಯಲ್ಲಿ ಈಗಿರುವುದು ಒಂದು ಪೀಠ ಮಾತ್ರ. ಇಲ್ಲಿ ಪ್ರತಿಷ್ಠಿಸಿದ್ದಿರಬಹುದಾದ ವಿಗ್ರಹ ಈಗ ಇಲ್ಲಿ ಕಾಣಿಸುವುದಿಲ್ಲ. ಆದರೆ ದೇವಾಲಯದ ಹೊರಗೆ, ಪದ್ಮಾಸನಸ್ಥನಾದ ಬುದ್ಧನ ವಿಗ್ರಹವೊಂದಿದ್ದು ಈತ ಧ್ಯಾನಮುದ್ರೆಯಲ್ಲಿ ಕುಳಿತಿರುವುದನ್ನು ಕಾಣಬಹುದು. ಎದೆಯ ಮೇಲೂ ಎಡಭುಜದ ಮೇಲೂ ಮಡಿಕೆಗಳ ಮೇಲುಹೊದಿಕೆಯನ್ನು ಇದರಲ್ಲಿ ಗುರುತಿಸಬಹುದು. ಆದರೆ ಇದರ ರುಂಡ ಮಾತ್ರ ಇಲ್ಲ.

ಗರ್ಭಗುಡಿಯ ಎರಡೂ ಬದಿಗಳ ಕಿರುಕೋಣೆಗಳು ಬೌದ್ಧ ಸನ್ಯಾಸಿಗಳು ಮಲಗುವ ಸ್ಥಳವೆಂದೂ ಅಲ್ಲಿ ಅವರಿಗಾಗಿ ಕಲ್ಲಿನ ಮಂಚವನ್ನು ಕೊರೆಯಲಾಗಿದೆಯೆಂದೂ ಎಸ್. ಶೆಟ್ಟರರು ಸೂಚಿಸಿದ್ದಾರೆ. ಈ ಮೂರೂ ಕೋಣೆಗಳಲ್ಲಿ ವಿಗ್ರಹಗಳನ್ನು ಸ್ಥಾಪಿಸಬೇಕೆಂಬ ಅಭಿಪ್ರಾಯವೇ ಇರಲಿಲ್ಲ. ಬದಲಿಗೆ ಅಲ್ಲಿ ಒರಟಾದ ಕಲ್ಲಿನ ಆಸನಗಳಿವೆ. ಇದು ಬೌದ್ಧ ವಿಹಾರವಾಗಿತ್ತು ಎಂಬುದು ಅವರ ವಾದಸರಣಿ. ಆದರೆ ಈ ಕಿರುಕೋಣೆಗಳಲ್ಲಿ ಕಲ್ಲಿನ ಮಂಚಗಳಿಲ್ಲ. ಅಲ್ಲದೆ ಅವು ವಿಸ್ತಾರದಲ್ಲಿ ಬಹಳ ಕಿರಿದಾಗಿದ್ದು ಅವುಗಳಲ್ಲಿ ಭಿಕ್ಷುಗಳು ಮಲಗಲು ಸಾಧ್ಯವಾಗುವುದಿಲ್ಲ. ಇದು ಭಿಕ್ಷುಗಳು ವಿಶ್ರಾಂತಿ ಪಡೆಯಲು ಕಲ್ಪಿಸಿದ ಸೌಲಭ್ಯ ಎಂದು ಅ. ಸುಂದರ ಹೇಳಿದ್ದಾರೆ. ದ್ವಾರದ ಚೌಕಟ್ಟಿನ ಚಿತ್ರಗಳು ಬುದ್ಧನ ಜೀವನದ ಘಟನೆಗಳನ್ನು ನಿರೂಪಿಸುತ್ತವೆ ಎಂದೂ ಅವರು ಸೂಚಿಸಿದ್ದಾರೆ. ಇದನ್ನು ಬೌದ್ಧರ ಚೈತ್ಯಾಲಯ ಎಂದು ಗುರುತಿಸಿದುದು, ಆ ವಿಗ್ರಹಗಳನ್ನು ಹಾಗೆ ಗುರುತಿಸಲು ಎಡೆ ಮಾಡಿತು.

ಮೇಲಿನ ಅಂತಸ್ತಿನಲ್ಲಿಯೂ ಒಂದು ಅಂಗಳವಿದೆ. ಅದಕ್ಕೆ ಹೊಂದಿದಂತೆ ಬಂಡೆಯಲ್ಲಿ ಕೊರೆದ ಒಂದು ಗರ್ಭಗುಡಿ. ಈ ಅಂಗಳದಲ್ಲೂ ನಾಲ್ಕು ಕಂಬಗಳು, ಎರಡು ಅರೆಗಂಬಗಳು, ಕಂಬಗಳಿಗೆ ಪೀಠಗಳಿಲ್ಲ. ಆದರೆ ಮೇಲೆ ದುಂಡಾದ ಸರಳವಾದ ಬೋದಿಗೆಗಳಿವೆ. ಗರ್ಭಗುಡಿಯ ದ್ವಾರಬಂಧ ಸಹ ಅಲಂಕೃತ. ಇಲ್ಲಿ ಏಳು ಶಾಖೆಗಳನ್ನು ಗುರುತಿಸಬಹುದು. ಆದರೆ ಅವುಗಳಲ್ಲಿ ಕೆಳಗಿನ ದ್ವಾರಶಾಖೆಗಳಲ್ಲಿದ್ದಂತಹ ಅಲಂಕರಣಗಳಿಲ್ಲ. ಮೇಲುಗಡೆ ಚೈತ್ಯದ ಕಿಂಡಿಗಳಲ್ಲಿನ ಚಿತ್ರಗಳು ಅಸ್ಪಷ್ಟ. ಅವು ಬೋಧಿಸುತ್ತಿರುವ ಬುದ್ಧನದು ಎಂದು ಈಗ ಹೇಳಿದೆ. ಒಳಮಾಳಿಗೆಯ ಮಧ್ಯದ ಅಂಕಣದಲ್ಲಿ ಮುಕ್ಕೊಡೆಯ ಕೆಳಗೆ ಕುಳಿತಿರುವ ಒಂದು ವಿಗ್ರಹವನ್ನು ಚಿತ್ರಿಸಲಾಗಿದೆ. ಈ ವಿಗ್ರಹ ಬಟ್ಟೆಯನ್ನು ತೊಟ್ಟಿದೆ. ಬಹುಶಃ ವಿಗ್ರಹದ ಮೇಲಿನ ಮುಕ್ಕೊಡೆಯನ್ನಾಧರಿಸಿ ಬಹಳ ಹಿಂದೆ ಕಸಿನ್ಸ್‌ರವರು ಇದು ಜಿನನ ವಿಗ್ರಹ ಎಂದು ಭಾವಿಸಿದರು. ಆದರೆ ದಕ್ಷಿಣ ಭಾರತದಲ್ಲಿ, ಕರ್ನಾಟಕದಲ್ಲಿ ಪ್ರಚಾರದಲ್ಲಿದ್ದುದು ಜೈನಧರ್ಮದ ದಿಗಂಬರ ಪಂಥ. ಈ ಪಂಥೀಯರು ವಸ್ತ್ರವನ್ನು ತೊಡುವುದಿಲ್ಲ. ಕರ್ನಾಟಕದಲ್ಲಿ ಕಂಡು ಬಂದಿರುವುದೆಲ್ಲ ದಿಗಂಬರಪಂಥದ ವಸ್ತ್ರರಹಿತವಿಗ್ರಹಗಳು. ಆದುದರಿಂದ ಇದು ಜಿನವಿಗ್ರಹವಾಗಿರದೆ ಬೌದ್ಧವಿಗ್ರಹವಾಗಿರಬಹುದೆಂದು ಮೊದಲ ಸಲಹೆ ಮಾಡಿದವರು ಎಸ್. ಶೆಟ್ಟರ್ ಅವರು. ಸೂಕ್ಷ್ಮವಾಗಿ ಗಮನಿಸಿದರೆ ಈ ವಿಗ್ರಹ ಪದ್ಮಪೀಠದ ಮೇಲೆ ಪರ್ಯಂಕಾಸನದಲ್ಲಿ (ಧ್ಯಾನಕ್ಕಾಗಿ ಕಾಲುಗಳನ್ನು ಮಡಿಸಿ ಕುಳಿತ ಧ್ಯಾನಾಸನ) ಕುಳಿತಿದೆ. ಈ ಆಸನ ಹಾಗೂ ಮೇಲಿನ ಮುಕ್ಕೊಡೆ, ಜೈನ ಮತ್ತು ಬೌದ್ಧ ಪಂಥಗಳ ವಿಗ್ರಹಗಳ ಸಾಮಾನ್ಯ ಲಕ್ಷಣ. ಆದರೆ ಇಲ್ಲಿನ ವಿಗ್ರಹದ ಬಲಗೈ ವ್ಯಾಖ್ಯಾನಮುದ್ರೆಯಲ್ಲಿದೆ. ಬಲ ಅಂಗೈ ಎದೆಯ ಮೇಲೆ ಹೊರಮುಖವಾಗಿದ್ದು, ಹೆಬ್ಬೆರಳು ಹಾಗೂ ತೋರುಬೆರಳುಗಳು ಕೂಡಿಕೊಂಡಿವೆ. ಕಿರುಬೆರಳು ಮೇಲುಗಡೆ ಇದೆ. ಎಡಗೈ ಬಲಗಾಲಿನ ಹಿಮ್ಮಡಿಯ ಮೇಲಿದೆ. ಇದು ಸ್ಪಷ್ಟವಾಗಿ ಬೌದ್ಧವಿಗ್ರಹಗಳಲ್ಲಿ ಬುದ್ಧನಿಗೆ ಸಂಬಂಧಿಸಿದಂತೆ ಮಾತ್ರ ಕಂಡು ಬರುವ ಮುದ್ರೆ. ಹಣೆಯಲ್ಲಿ ಎರಡು ಹುಬ್ಬುಗಳ ನಡುವೆ ಊರ್ಣ್ಣ (ಉಬ್ಬು ಚಿಪ್ಪೆ) ಇದೆ. ಇದು ಸಹ ಬುದ್ಧನಲ್ಲಿ ಕಂಡು ಬಂದ ೩೨ ಮಹಾಪುರುಷ ಲಕ್ಷಣಗಳಲ್ಲೊಂದು. ಉಟ್ಟವಸ್ತ್ರ ಮೊಣಕಾಲಿನವರೆಗೂ ಬಂದಿದ್ದು ಮೇಲ್ಭಾಗದಲ್ಲಿ ಬಲತೋಳಿನ ಕೆಳಗಿನಿಂದ ಎಡಭುಜದ ಮೇಲೆ ಇದನ್ನು ಹೊದೆಯಲಾಗಿದೆ. ದಕ್ಷಿಣಭಾರತದ ಯಾವ ಜೈನವಿಗ್ರಹಕ್ಕೂ ಇಂತಹ ಹೊದಿಕೆ ಇಲ್ಲ. ಆದುದರಿಂದ ಇದು ವಿಹಾರ ಎಂದು ಶೆಟ್ಟರ್ ಅವರು ಭಾವಿಸಿದರು. ಆದರೆ ಇದು ಬೌದ್ಧ ಧರ್ಮಕ್ಕೆ ಸಂಬಂಧಿಸಿದುದಾದರೂ ಇದು ವಿಹಾರವಲ್ಲ, ಬೌದ್ಧ ಚೈತ್ಯಾಲಯ ಎಂಬುದು ಸುಂದರರ ಅಭಿಪ್ರಾಯ.

ಇದು ಸುಮಾರು ಕ್ರಿ. ಶ. ಐದನೆಯ ಶತಮಾನದಲ್ಲಿ ಕೊರೆದ ಗುಹೆ ಎಂದು ಶೆಟ್ಟರ್ ಭಾವಿಸಿದ್ದಾರೆ. ಮುಂಭಾಗದ ಕಂಬಗಳ ಮೇಲೆ ಕೆಲವು ವ್ಯಕ್ತಿಗಳ – ಶ್ರೀಬಣ, ಶ್ರೀಬಿಣ ಅಮ್ಮನ್, ಶ್ರೀ ಬಿಸಾತನ್, ಶ್ರೀಮಹೇನ್ದ್ರ ಇತ್ಯಾದಿ–ಹೆಸರುಗಳನ್ನು ಕೆತ್ತಿದ್ದು ಲಿಪಿಯ ಆಧಾರದ ಮೇಲೆ ಅವು ೬-೭ ನೆಯ ಶತಮಾನಗಳದೆನ್ನಬಹುದು. ಇವು ೮ನೆಯ ಶತಮಾನದ್ದೆಂದು ಸಹ ಊಹಿಸಲಾಗಿದೆ. ಹೇಗೂ ಇದು ೫ ನೆಯ ಶತಮಾನದಷ್ಟು ಪ್ರಾಚೀನವಾದುದಲ್ಲವೆನ್ನಬಹುದು. ಬಹುಶಃ ಮೇಲೆ ಗಮನಿಸಿದ ಶೈವ, ಜೈನ ಗುಹೆಗಳ ನಂತರ ಇದು ಅಸ್ತಿತ್ವಕ್ಕೆ ಬಂದಿರಬಹುದು.

ಬಾದಾಮಿಯ ಗುಹೆಗಳು

ಬಾದಾಮಿಯ ಗುಹೆಗಳು ನಂತರದವು ಎಂಬುದು ಬಹುಮಟ್ಟಿಗೆ ಒಪ್ಪಿತವಾದ ಅಭಿಪ್ರಾಯ. ಇಲ್ಲಿನ ಮೂರನೆಯ ವೈಷ್ಣವ ಗುಹೆಯಲ್ಲಿನ ಕ್ರಿ. ಶ. ೫೭೮ನೆಯ ವರ್ಷದ ಶಾಸನ ಈ ಗುಹಾಲಯದ ರಚನೆಯ ಖಚಿತವಾದ ಕಾಲವನ್ನು ಒದಗಿಸುತ್ತದೆ. ಆದರೆ ಈ ಗುಹಾಲಯಕ್ಕೂ ಮುಂಚೆಯೇ ಮೊದಲ ಎರಡು ಗುಹಾಲಯಗಳು ಕೊರೆಯಲ್ಪಟ್ಟಿದ್ದುವೆಂಬುದು ಗ್ಯಾರಿ ಟಾರ್ ಎಂಬ ವಿದ್ವಾಂಸನ ಅಭಿಪ್ರಾಯ. ಆದರೆ ಇದು ಪ್ರಶ್ನಾತೀತವೇನೂ ಅಲ್ಲ. ಹೇಗೂ ಈ ಗುಹೆಗಳನ್ನು ಈಗ ವಿಸ್ತಾರವಾಗಿ ಗಮನಿಸಬಹುದು.

ಬಾದಾಮಿಯನ್ನು ಕ್ರಿ. ಶ. ೫೪೩ರ ಮೊದಲನೆಯ ಪುಲಕೇಶಿಯ ಶಾಸನದಲ್ಲಿ ಅವನು ಅಲ್ಲಿ ಅಜೇಯವಾದ ದುರ್ಗವೊಂದನ್ನು ಕಟ್ಟಿಸಿದನೆಂದು ಹೇಳಿದೆ. ಅದು ಆತನ ರಾಜಧಾನಿಯಾಯಿತೆಂದ ಮೇಲೆ ಆ ವೇಳೆಗಾಗಲೇ ಅದೊಂದು ನಗರವಾಗಿದ್ದಿರಬೇಕು. ಊರಿನ ಉತ್ತರ, ಪೂರ್ವ ಮತ್ತು ದಕ್ಷಿಣ ಈ ಮೂರು ದಿಕ್ಕುಗಳಲ್ಲಿ ಗುಡ್ಡ ಹಬ್ಬಿಕೊಂಡಿದೆ. ಊರಿನ ಹಿಂದುಗಡೆ ಗುಡ್ಡದ ಒಂದು ಸಾಲು ಬಾಗಿದೆ. ಇದರ ಮುಂದೆ ತಗ್ಗಾದ, ವಿಶಾಲವಾದ, ಭೂತನಾಥನ ಕೆರೆಯೊಂದಿದೆ. ದಕ್ಷಿಣದ ಗುಡ್ಡದ ಉತ್ತರದ ಅಂಚಿನ ಸಾಲಿನಲ್ಲಿ ಈಗ ಮೇಣಬಸ್ತಿ ಎಂದು ಕರೆಯುವ ನಾಲ್ಕು ಲಯನ (ಗುಹೆ)ಗಳಿವೆ. ಇವೆಲ್ಲ ಕೊರೆದ ಗುಹೆಗಳು. ಅಲ್ಲದೆ ಒಂದು ನೈಸರ್ಗಿಕ ಗವಿಯೂ ಇದೆ.

ದಕ್ಖನ್ ಪ್ರದೇಶದಲ್ಲಿ ವಾಕಾಟಕರ ಕೆಲವು ಗುಹೆಗಳೊಂದಿಗೆ ಇವುಗಳನ್ನು ಹೋಲಿಸಿದಾಗ ಇವೆರಡರ ನಡುವೆ ಕೆಲವು ಸಾಮಾನ್ಯ ಲಕ್ಷಣಗಳಿರುವುದಲ್ಲದೆ ಬಾದಾಮಿಯ ಚಾಲುಕ್ಯರ ಕಾಲದ ಈ ಗುಹೆಗಳಲ್ಲಿ ಕೆಲವು ಹೊಸ ಅಂಶಗಳನ್ನು ಸ್ಥಪತಿಗಳು ಅಳವಡಿಸಿರುವುದು ಕಂಡು ಬರುತ್ತದೆ. ಗುಹೆಯ ಹಿಂಬದಿಯ ಗೋಡೆಗೆ ಹೊಂದಿಕೊಂಡಂತೆ ಆಯತಾಸ್ರ ಅಥವಾ ಚೌಕ ಗರ್ಭಗುಡಿಯನ್ನಳವಡಿಸಿರುವುದು ಸಾಮಾನ್ಯ ಲಕ್ಷಣ. ಆದರೆ ಬಾದಾಮಿಯ ಗುಹೆಗಳಲ್ಲಿ ಒಳಗಿನಿಂದ ಕ್ರಮವಾಗಿ ಗರ್ಭಗೃಹ, ಮಹಾಮಂಟಪ, ಮುಖಮಂಟಪ ಮತ್ತು ತೆರೆದ ಅಂಗಳ ಅಥವಾ ಮೊಗಸಾಲೆಗಳನ್ನು ಅಳವಡಿಸಲಾಗಿದೆ. ಈ ಒಂದೊಂದು ಭಾಗವನ್ನು ಬೇರ್ಪಡಿಸುವ ಸ್ಪಷ್ಟವಾದ ಪ್ರಯತ್ನಗಳನ್ನೂ ಕಾಣಬಹುದು. ಕಂಬಗಳ ಜೋಡಣೆಯಲ್ಲೂ ಒಂದು ಸಮತಲ ವಿನ್ಯಾಸವಿದೆ. ಗರ್ಭಗೃಹದ ಮುಂದಿನ ಕಂಬಸಾಲಿನಲ್ಲಿ ಒಂದೊಂದರ ನಡುವಣ ಅಂತರವೂ ಹೆಚ್ಚಾಗಿದೆ. ಒಂದೊಂದು ಬಿಡಿ ಭಾಗದಲ್ಲೂ ಸಂಬದ್ಧತೆ, ಮತ್ತು ವಿನ್ಯಾಸದ ಸಮರೂಪ ಹಂಚಿಕೆ ಈ ಗುಹೆಗಳ ಮತ್ತೊಂದು ಲಕ್ಷಣ. ಇದನ್ನು ಮೊದಲೆರಡು ಗುಹೆಗಳಿಗಿಂತಲೂ ೩-೪ನೆಯ ಗುಹೆಗಳಲ್ಲಿ ಇನ್ನೂ ಸ್ಪಷ್ಟವಾಗಿ ಗುರುತಿಸಬಹುದು. ಆ ಎರಡು ಗುಹೆಗಳನ್ನು ಹೆಚ್ಚು ಆಳವಾಗಿ ಕೊರೆದಿರುವುದೂ ಗಮನಾರ್ಹ.

ಗುಹಾವಾಸ್ತು : ಆಂಧ್ರಪ್ರದೇಶ

ಐಹೊಳೆ–ಬಾದಾಮಿಗಳ ಗುಹಾವಾಸ್ತುಶಿಲ್ಪ ಪೂರ್ವ ತೀರದಲ್ಲಿ ಆಂಧ್ರಪ್ರದೇಶದ ವಿಜಯವಾಡ, ಮೊಗಲರಾಜಪುರಮ್ ಮತ್ತು ಉಂಡವಲ್ಲಿಗಳಲ್ಲಿನ ಗುಹಾಲಯಗಳಿಗೆ ಮಾದರಿಯಾಯಿತೇ ಎಂಬುದೊಂದು ಚರ್ಚಿಸಲಾಗಿರುವ ಪ್ರಶ್ನೆ. ಪೂರ್ವತೀರದಲ್ಲಿ ಆಂಧ್ರಪ್ರದೇಶದ ವಿಷ್ಣುಕುಂಡಿ, ವೇಂಗಿಯ ಚಾಲುಕ್ಯ ಹಾಗೂ ಕಂಚಿಯ ಪಲ್ಲವ ಮನೆತನದವರು ವಾಕಾಟಕರಿಂದ ಪ್ರೇರಿತರಾಗಿ ಬಂಡೆಗಳಲ್ಲಿ ಗುಹಾಲಯಗಳನ್ನು ಕೊರೆಯಲಾರಂಭಿಸಿದರು. ಈಗಾಗಲೇ ಪ್ರಸ್ತಾಪಿಸಲಾಗಿರುವ ಗುಂಟುಪಲ್ಲಿಯ ಗುಹೆಗಳಲ್ಲದೆ ಕೃಷ್ಣಾಕಣಿವೆಯಲ್ಲಿ ಮತ್ತು ನೆಲ್ಲೂರುಜಿಲ್ಲೆಯ ಭೈರವಕೊಂಡದಲ್ಲಿ ಗುಹಾಲಯಗಳ ಎರಡು ಗಂಪುಗಳಿವೆ. ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯ ಭೊಕರ್ದನ (ಭೋಗವರ್ಧನ)ದಲ್ಲಿ ಒಂದು ಗುಹಾಲಯವಿದೆ. ಇದು ಚಾಲುಕ್ಯರ ಗುಹಾಲಯಗಳಲ್ಲಿದ್ದಂತೆ ಕಂಬಗಳ ಮೊಗಸಾಲೆಯನ್ನು ಹೊಂದಿದ್ದು ಅದಕ್ಕೆ ಸೇರಿದಂತೆ ಹಿಂಭಾಗದಲ್ಲಿ ಗರ್ಭಗುಡಿಗಳ ಸಾಲನ್ನು ಹೊಂದಿದೆ. ಮೊಗಸಾಲೆಯ ಎಡ-ಬಲಬದಿಗಳಲ್ಲಿ ಅಂತಹುದೇ ಕಕ್ಷೆಗಳಿದ್ದು ಎಲ್ಲ ಒಂದೇ ಅಂಗಳದೊಳಗಿದ್ದಂತೆ ತೋರುತ್ತದೆ. ಮುಂದಿನ ಮಂಟಪದ ಪಕ್ಕದ ಗೋಡೆಗಳಲ್ಲಿ ಶೇಷಶಾಯಿ, ಬಲರಾಮ, ಸೂರ್ಯ ಮುಂತಾದ ದೇವತೆಗಳ ಮೂರ್ತಿಶಿಲ್ಪಗಳಿದ್ದು ಅವು ಬಾದಾಮಿಯಲ್ಲಿ ಕಾಣಿಸುವ ಶಿಲ್ಪಗಳನ್ನೇ ಹೋಲುತ್ತವೆ. 'ಉತ್ಪತ್ತಿಪಿಡುಗು' ಎಂಬ ಶಾಸನವೊಂದನ್ನು ಇಲ್ಲಿ ಕಂಡರಿಸಲಾಗಿದೆ. ಇದು ಬಹುಶಃ ಒಂದು ಬಿರುದಾಗಿದ್ದಿರಬಹುದೆಂದು ಊಹಿಸಲಾಗಿದೆ. ಇದೇ ಬಿರುದಿನ ಶಾಸನಗಳು ವಿಜಯವಾಡದ ಅಕ್ಕನ್ನ–ಮಾದನ್ನ ಗುಹೆಗಳಲ್ಲಿಯೂ ಉಂಡವಲ್ಲಿ ಮತ್ತು ಭೈರವಕೊಂಡಗಳಲ್ಲಿನ ಗುಹಾಲಯಗಳಲ್ಲೂ ಕಂಡು ಬಂದಿವೆ. ಇದು ಪಲ್ಲವರ ಮಾಮಲ್ಲನೆಂದು ಹೆಸರಾಂತ ನರಸಿಂಹವರ್ಮನ ಬಿರುದುಗಳಲ್ಲಿ ಒಂದು. ಇದರಿಂದಲೇ ಈ ಗುಹಾಲಯಗಳ ಕರ್ತೃ ಅವನೆಂದು ಹೇಳಲಾಗದು. ಬಾದಾಮಿಯನ್ನು ಮುತ್ತಿದ ಈತ ನಂತರ ಈ ಪ್ರದೇಶಗಳ ಮೇಲೂ ದಂಡೆತ್ತಿ ತನ್ನ ಸಾರ್ವಭೌಮತ್ವವನ್ನು ಸೂಚಿಸುವ ಸಲುವಾಗಿ, ಈ ಮೊದಲೇ ಕೊರೆಯಲಾಗಿದ್ದ ಈ ಗುಹಾಲಯಗಳಲ್ಲಿ ತನ್ನ ಬಿರುದನ್ನು ಕೆತ್ತಿಸಿದ. ಇವು ಪಲ್ಲವರಿಂದ ಪ್ರಭಾವಿತವಾದವುಗಳಲ್ಲ, ಚಾಲುಕ್ಯರಿಂದ ಪ್ರಭಾವಿತವಾದವುಗಳು. ಬಹುಶಃ ವೇಂಗಿಯ ಚಾಲುಕ್ಯರು ಕಟ್ಟಿಸಿರಬೇಕು ಎಂಬುದೊಂದು ವಾದ.

ವಿಜಯವಾಡದ ಗುಂಪಿಗೆ ಸೇರಿದ ಮೊಗಲರಾಜಪುರಂನ ಐದು ಗುಹೆಗಳಲ್ಲಿ ಏಕಕೂಟ ಹಾಗೂ ತ್ರಿಕೂಟಗಳೆಂದು ಎರಡು ಬಗೆಗಳು. ಏಕಕೂಟದ ಮೂರು ಗುಹಾಲಯಗಳಲ್ಲಿ ಎರಡು ದಕ್ಷಿಣಾಭಿಮುಖ. ಮತ್ತೊಂದು ಪೂರ್ವಾಭಿಮುಖ. ತ್ರಿಕೂಟಗಳೆರಡೂ ಉತ್ತರಾಭಿಮುಖವಾಗಿವೆ. ವಿಜಯವಾಡದ ಇಂದ್ರಕೀಲ ಬೆಟ್ಟದ ಪೂರ್ವದಿಕ್ಕಿನ ಇಳುಕಲಿನಲ್ಲಿ ಕಂಡು ಬಂದಿರುವ

ಆರು ಕೊರೆದ ಗುಹೆಗಳಲ್ಲಿ ಅಕ್ಕನ್ನ-ಮಾದನ್ನ ಗುಡಿಗಳು ಮತ್ತು ಬೆಟ್ಟದ ಕೆಳಗಿನ ದ್ವಿಕೂಟಾಲಯವು ಸಹ ಪ್ರಮುಖವಾದವು. ಮೊಗಲರಾಜಪುರಮ್‌ನ ಮೊದಲನೆಯ ಗುಹೆಯ ಗರ್ಭಗೃಹ ಮತ್ತು ಮೊಗಸಾಲೆಗಳು ಒಟ್ಟುಗೂಡಿದಂತೆ ಒಂದು ಅಖಂಡ ಅಂಗ. ಇಲ್ಲಿ ಯಾವ ಅಲಂಕರಣಗಳೂ ಇಲ್ಲ. ಮುಂಭಾಗದ ಎರಡು ಕಂಬಗಳು ಬುಡದಿಂದ ತುದಿಯವರೆಗೂ ಚೌಕಾಕಾರವಾಗಿದ್ದು ಕಪೋತವಿಲ್ಲ. ಅಕ್ಕನ್ನ-ಮಾದನ್ನ ಗುಹೆ ಇಲ್ಲಿರುವ ಗುಹೆಗಳಲ್ಲೆಲ್ಲ ವಿಶಾಲವಾದದ್ದು. ಮುಂಭಾಗದ ಕೈಸಾಲೆಯ ಹನ್ನೆರಡು ಅಷ್ಟಕೋನಾಕಾರದ ಕಂಬಗಳು ಮತ್ತು ನಾಲ್ಕು ಗೋಡೆಗಂಬಗಳಿಗೆ ಬೋದಿಗೆ ಕಲ್ಲುಗಳು, ಪೀಠ ಅಥವಾ ಕಪೋತಗಳು ಇಲ್ಲ. ಹಿಂದಿರುವ ಮೂರು ಗರ್ಭಗುಡಿಗಳು ದೀರ್ಘ ಚತುರಸ್ರಾಕಾರದವು. ಅಲಂಕಾರಿಕವಾದ ಭಾಗಗಳು ಇಲ್ಲ. ಇದರ ವಿನ್ಯಾಸವನ್ನು ಗಮನಿಸಿದರೆ ಇದು ಪಲ್ಲವರ ಗುಹೆಗಳಂತೆ ಕಂಡು ಬಂದರೂ ಕಂಬಗಳು ಪಲ್ಲವ ಶೈಲಿಯವಲ್ಲ. ಈ ಗುಹೆ ಹಾಗೂ ಮೊಗಲ ರಾಜಪುರದ ಮೊದಲ ಗುಹೆ ಪ್ರಾಚೀನ, ಸುಮಾರು ಆರನೆಯ ಶತಮಾನದ ಮಧ್ಯಭಾಗದ್ದು ಎಂದು ಎಚ್. ಸರ್ಕಾರರು ಅಭಿಪ್ರಾಯಪಟ್ಟಿದ್ದಾರೆ.

ಕೃಷ್ಣಾನದಿಯ ದಕ್ಷಿಣತೀರದಲ್ಲಿ ಗುಂಟೂರು ಜಿಲ್ಲೆಗೆ ಸೇರಿದ ಉಂಡವಲ್ಲಿಯಲ್ಲಿ ಅನಂತಶಯನ ಗುಡಿ ಎಂಬ ಗುಹಾಲಯವಿದೆ. ಮೂರು ಅಂತಸ್ತುಗಳ ಈ ಗುಡಿಯ ಮೊದಲ ಅಂತಸ್ತಿನ ಮುಂಭಾಗ ೯೦ ಅಡಿಗಳಷ್ಟು ಅಗಲವಿದೆ. ೫೦ ಅಡಿಗಳಷ್ಟು ಎತ್ತರದ ಇದರ ತಳಭಾಗವನ್ನು ಅಸಂಪೂರ್ಣವಾಗಿ ಕೊರೆದಂತೆ ತೋರುತ್ತದೆ. ಒಳಗಿನ ಮಂಟಪ ಅಲಂಕಾರರಹಿತವಾಗಿದ್ದು ಸ್ಥೂಲವಾದ ಚೌಕಾಕಾರದ ಕಂಬಗಳು ಕೊರೆದ ಹಜಾರವನ್ನು ಅಡ್ಡವಾಗಿ ಏಳು ಅಂಕಣಗಳಾಗಿ ಪ್ರತ್ಯೇಕಿಸಿವೆ. ಮೇಲಿನ ಮೊದಲ ಅಂತಸ್ತು ಹೆಚ್ಚು ಪರಿಷ್ಕೃತ; ಮುಂಭಾಗದ ಮೇಲ್ಚಾವಣಿ ಅಲಂಕೃತ, ಎಂಟು ದಿಂಡುಗಳ, ತುದಿಯಲ್ಲಿ ಚೌಕಾಕಾರದ ಕಂಬಗಳು ಒರಟು, ಅವುಗಳ ಮೇಲೆ ಕ್ರಮವಾಗಿ ತರಂಗ ಬೋದಿಗೆ, ಹಂಸಗಳನ್ನು ಕೊರೆದ ಪಟ್ಟಿ, ಉರುಳುಕಪೋತ, ಭಾರ ನಿವಾರಿಸುವ ಕಮಾನಿನ ಚೈತ್ಯ ಗೂಡುಗಳು, ಒಳಗಿನ ಮಂಟಪದ ಹಿಂದಿನ ಗೋಡೆಗೆ ಹೊಂದಿದಂತೆ ಗರ್ಭಗೃಹದಲ್ಲಿ ಒಂದು ಪೀಠವಿದ್ದು ಅದರಲ್ಲಿ ಲಿಂಗವನ್ನೋ ಅಥವಾ ಬೇರಾವುದೋ ಪ್ರತಿಮೆಯನ್ನೋ ಸ್ಥಾಪಿಸಲು ಒಂದು ಕುಳಿ ಇದೆ. ಇದರ ಬಲಭಾಗದಲ್ಲಿ ಒಂದು ಮತ್ತು ಎಡಭಾಗದಲ್ಲಿ ಸಾಲಾಗಿ ಮೂರು ಸಣ್ಣ ಗರ್ಭಗೃಹಗಳಿದ್ದು ಅವುಗಳ ಮುಂದೆಯೂ ನಾಲ್ಕು ಕಂಬಗಳ ಮಂಟಪಗಳಿವೆ. ಈ ಮಂಟಪಗಳು ಮಧ್ಯದ ಗುಡಿಯ ಮಂಟಪಕ್ಕಿಂತ ಹೆಚ್ಚು ವಿಸ್ತಾರವಾಗಿವೆ. ಈ ವಿನ್ಯಾಸ ಎಲ್ಲೋರಾದ ಬೌದ್ಧಾಲಯಗಳನ್ನು ಹೋಲುತ್ತದೆ. ಮೊದಲ ಅಂತಸ್ತಿಗೆ ತಳಭಾಗದಿಂದ ಏರಿಬರಲು ಯಾವುದೇ ಏರ್ಪಾಡು ಇಲ್ಲ. ಮೊದಲ ಅಂತಸ್ತಿನಿಂದ ಎರಡನೆಯದಕ್ಕೆ ಹೋಗಲು ಮೆಟ್ಟಿಲುಗಳಿವೆ. ಇದನ್ನು ಗಮನಿಸಿ ತಳಭಾಗದ ಗುಹೆಯನ್ನು ಕಾಲಾನಂತರದಲ್ಲಿ ಅಸಂಪೂರ್ಣವಾಗಿ ಕೊರೆದಿರಬಹುದೆಂದು ಊಹಿಸಲಾಗಿದೆ.

ಮೊದಲ ಅಂತಸ್ತು ವಿನ್ಯಾಸದಲ್ಲಿ ಪೂರ್ವ-ಪಶ್ಚಿಮವಾಗಿದ್ದರೆ ಇದರ ಮೇಲಿನ ಎರಡನೆಯ ಅಂತಸ್ತಿನ ವಿನ್ಯಾಸ ದಕ್ಷಿಣೋತ್ತರ. ಉತ್ತರದ ಗೋಡೆಯ ತುದಿಯಲ್ಲಿ ಪೂರ್ವ-ಪಶ್ಚಿಮಕ್ಕೆ ಬೃಹದಾಕಾರದ ಅನಂತಶಾಯಿಯ ವಿಗ್ರಹವನ್ನು ಕೆತ್ತಲಾಗಿದೆ. ಈ ವಿಗ್ರಹ ಬಹುಮಟ್ಟಿಗೆ ಔರಂಗಾಬಾದ್ ಗುಹೆಗಳಲ್ಲಿ ಕಂಡು ಬರುವ ಮಹಾಪರಿನಿರ್ವಾಣದಲ್ಲಿರುವ ಬುದ್ಧನ ವಿಗ್ರಹವನ್ನು ಹೋಲುವುದರಿಂದಲೂ ಇದು ಪಲ್ಲವರ ಶೈಲಿಯ ಅನುಕರಣೆಯಾಗಿರದೆ ಕರ್ನಾಟಕ ಮತ್ತು ದಕ್ಖನ್‌ಗಳಲ್ಲಿ ಕಂಡುಬರುವ ಶೈಲಿಯನ್ನು ಅನುಕರಿಸಿದೆಯಾದ ಕಾರಣ ಇದು ವೇಂಗಿಯ ಪೂರ್ವಚಾಲುಕ್ಯ ಅಥವಾ ವಿಷ್ಣುಕುಂಡಿ ಮನೆತನದ ಅರಸರ ಕಾಲದ್ದೆಂದು ಒಬ್ಬ ಪಂಡಿತರು ಅಭಿಪ್ರಾಯಪಟ್ಟಿದ್ದಾರೆ. ಅಕ್ಕನ್ನ-ಮಾದನ್ನ ಗುಹೆಯಂತಹ ವಾಸ್ತುಶಿಲ್ಪದಲ್ಲಿ ಇದು ವಿಷ್ಣುಕುಂಡಿಗಳ ಮೊದಲ ಪ್ರಯತ್ನವಾಗಿದ್ದು ಸುಮಾರು ಕ್ರಿ. ಶ. ೫೫೦ರ ಕಾಲದ್ದು, ಉಂಡವಲ್ಲಿಯ ಗುಹೆ ಬಾದಾಮಿಯ ಗುಹೆಗಳಿಂದ ಪ್ರೇರಿತವಾಗಿದ್ದು ಸುಮಾರು ಕ್ರಿ. ಶ. ೬೦೦ ಅದರ ಕಾಲವಾಗಿರಬಹುದು ಹಾಗೂ ಸುಮಾರು ಅದೇ ಸಮಯಕ್ಕೆ ಮೊಗಲರಾಜಪುರದ ಮೊದಲ ಗುಹೆ ಸಹ ಅಸ್ತಿತ್ವಕ್ಕೆ ಬಂದಿರಬಹುದು ಎಂಬುದು ಸರ್ಕಾರರ ಅಭಿಪ್ರಾಯ.

ನೆಲ್ಲೂರು ಜಿಲ್ಲೆಯ ಉದಯಗಿರಿಗೆ ಸುಮಾರು ೫೦ ಕಿ. ಮೀಟರ್‌ಗಳ ದೂರದಲ್ಲಿ ಬೆಟ್ಟದ ಕೊರಕಲಿನ ಮುಂದಿನ ಭೈರವಕೊಂಡ ಗ್ರಾಮದಲ್ಲಿ ಎಂಟು ಗುಹಾಲಯಗಳಿವೆ. ಇವುಗಳಲ್ಲೊಂದರ ಗರ್ಭಗೃಹದಲ್ಲಿ ಲಿಂಗದ ಹಿಂದೆ ಗೋಡೆಯ ಮೇಲೆ ಮೂರು ಮುಖಗಳ ಮಹೇಶನೆನಿಸಿದ ಶಿವನ ಚಿತ್ರ ಕೊರೆಯಲಾಗಿದೆ. ಮತ್ತೊಂದು ಗುಡಿಯ ಕಂಬಗಳು ಬುಡದಲ್ಲಿ ಚೌಕಾಕಾರವಾಗಿದ್ದು, ಮಧ್ಯದಲ್ಲಿ ಎಂಟು ಕೋನಗಳುಳ್ಳ ಹಾಗೂ ಮೇಲ್ಭಾಗದಲ್ಲಿ ತಡಿ, ಕುಂಭಗಳ ಆಕಾರವನ್ನು ಹೊಂದಿದ್ದು ಅದರ ಮೇಲೆ ಬೋದಿಗೆ, ಬೋದಿಗೆಯ ಮೇಲೆ ಉರುಳು ಕಪೋತ, ಬೋದಿಗೆ-ಕಪೋತಗಳ ನಡುವಣ ಪಟ್ಟಿಯಲ್ಲಿ ಕುಬ್ಜರು, ಕಪೋತಗಳ ನಡುವೆ ಕಮಾನಿನಲ್ಲಿ ಗೂಡುಗಳು, ತೊಲೆಯಲ್ಲಿ ಜೋಡಿ ಸಿಂಹ ಮುಂತಾದ ಪ್ರಾಣಿಗಳ ಅಲಂಕರಣಗಳನ್ನು ಕಾಣಬಹುದು. ಇಲ್ಲಿನ

ಗುಡಿಗಳಲ್ಲಿ ಉತ್ತಮವಾದದ್ದು ಏಳನೆಯದೆನಿಸಿದ ಗುಡಿ. ಗರ್ಭಗುಡಿಯ ಮುಂದೆ ಎರಡು ಸ್ವತಂತ್ರಕಂಬಗಳು ಹಾಗೂ ಪಕ್ಕದ ಗೋಡೆಗೆ ಹೊಂದಿದಂತಹ ಎರಡು ಕಂಬಗಳನ್ನು ಹೊಂದಿರುವ ಮೊಗಸಾಲೆ. ಈ ಕಂಬಗಳ ವಿನ್ಯಾಸ ಗಮನಾರ್ಹವಾಗಿದೆ. ಕೆಳಭಾಗದಲ್ಲಿ ನಾಲ್ಕು ಕಾಲುಗಳನ್ನೂ ಊರಿ ಕುಳಿತಿರುವ ಸಿಂಹ, ಮಧ್ಯದ ಭಾಗದಲ್ಲಿ ಎಂಟು ದಿಂಡುಗಳು, ಮೇಲುಗಡೆ ಕುಣಿಕೆಯಾಕಾರದ ಹಾರ, ಅದರ ಮೇಲೆ ಕಳಶ ಮತ್ತು ಕುಂಭಗಳು, ಅದರ ಮೇಲೆ ಕುಳಿತಿರುವ ವ್ಯಾಳಿಯನ್ನು ಮಧ್ಯದಲ್ಲಿ ಹೊಂದಿರುವ ಬೋದಿಗೆ, ಅಡ್ಡ ತೊಲೆಯ ಮೇಲೆ ಕುಬ್ಜಾಕಾರಗಳನ್ನು ಕೆತ್ತಿರುವ ಪಟ್ಟಿ, ಮೇಲೆ ಉರುಳು ಕಪೋತದ ಕೆಳತುದಿಯಲ್ಲಿ ಕಮಲದ ದಳಗಳ ಅಲಂಕರಣ, ಮಧ್ಯದಲ್ಲಿ ಕಂಬಕ್ಕೆ ಸರಿಯಾಗಿ ಮೇಲೆ ಬರುವಂತೆ ಗೂಡುಗಳು, ಅದರೊಳಗೆ ಕೊರೆದ ಹೆಡೆಗಳ ನಾಗರಶಿಲ್ಪ, ಅದರ ಮೇಲಿನ ತೊಲೆಯಲ್ಲಿ ಒಂದನ್ನೊಂದು ಎದುರಿಸಿರುವ ಮೂರು ಜೋಡಿ ಸಿಂಹಗಳನ್ನು ಕೊರೆದಿದೆ. ಮೊಗಸಾಲೆಯಲ್ಲಿ ದ್ವಾರಪಾಲಕರ ಹಾಗೂ ಪಕ್ಕದ ಗೋಡೆಯ ಮಾಡಗಳಲ್ಲಿ ಬ್ರಹ್ಮ ಮತ್ತು ವಿಷ್ಣುವಿನ ವಿಗ್ರಹಗಳಿವೆ.

ಮೊಗಲರಾಜಪುರದ ೩-೫ಗುಹೆಗಳು, ಅಕ್ಕನ್ನ–ಮಾದನ್ನ ಗುಹೆಯ ಕೆಳಗಿನ ಕೊರೆದ ಗುಹೆಗಳ ಕಾಲ ಸುಮಾರು ಕ್ರಿ. ಶ. ೬೨೫ ಎನ್ನುವ ಸರ್ಕಾರರು ಅವು ವೇಂಗಿಯ ಪೂರ್ವ ಚಾಲುಕ್ಯರು ಕೊರೆಯಿಸಿರಬಹುದಾದ ಗುಹೆಗಳೆಂದು ಅಭಿಪ್ರಾಯಪಟ್ಟಿದ್ದಾರೆ. ಮೊಗಲ ರಾಜಪುರದ ೩ನೆಯ ಗುಹೆಯಲ್ಲಿ ಭಾರವಾದ ಕಪೋತ, ಅಲಂಕೃತ ಕೂಡುಗಳೂ ಚೌಕಾಕಾರದ ಮಧ್ಯೆ ಅಷ್ಟಕೋನದ ಕಟ್ಟುಗಳ ಕಂಬಗಳೂ ಇವೆ. ೪ನೆಯ ಗುಹೆ ಪಲ್ಲವರ ಮಹೇಂದ್ರನ ನಂತರದ ಕಾಲದ್ದು. ಇದರಲ್ಲಿನ ದ್ವಾರಪಾಲಕರ ತಲೆಯಲ್ಲಿ ಗೂಳಿಯ ಕೋಡುಗಳು ಮೂಡಿದಂತೆ ತೋರಿಸಲಾಗಿದೆ. ತರಂಗ ಬೋದಿಗೆಗಳ ಕಂಬಗಳಿವೆ. ಕೂಡುಗಳಲ್ಲಿ ಶಿವ–ವಿಷ್ಣು ಸಪತ್ನೀಕರಾಗಿ, ಬ್ರಹ್ಮನೊಡನೆ ಇರುವಂತೆ ವಿಗ್ರಹಗಳನ್ನು ಕೆತ್ತಿದೆ. ಗುಹೆಯ ಮುಂಭಾಗದಲ್ಲಿ ನೃತ್ಯ ಶಿವನ ವಿಗ್ರಹವೂ ಇದೆ. ಇದು ಈಗ ಬಹಳಷ್ಟು ಸವೆದಿದೆ. ಈ ಅಂಶಗಳನ್ನು ಗಮನಿಸಿ ಇದು ಸುಮಾರು ಕ್ರಿ. ಶ. ೭೦೦ ರಲ್ಲಿ ಕೊರೆಯಲಾದುದು ಎನ್ನಲಾಗಿದೆ. ಬಹುಶಃ ಇದೇ ಕಾಲವನ್ನೇ ೫ನೆಯ ಗುಹೆಗೂ ಅಕ್ಕನ್ನ–ಮಾದನ್ನ ಗುಹೆಯ ಕೆಳಗಿನ ದ್ವಿಕೂಟದ ಗುಹೆಗೂ ಅನ್ವಯಿಸಬಹುದೆಂಬುದೂ ಅವರ ಅಭಿಪ್ರಾಯವೇ.

ಭೈರವಕೊಂಡದ ಗುಹೆಗಳ ವಾಸ್ತು–ಮೂರ್ತಿ ಶಿಲ್ಪಗಳು ಪಲ್ಲವ ಶೈಲಿಯ ಕೀಳ್ಮಟ್ಟದ ಅನುಕರಣೆಯೇ ಹೊರತು ಪಲ್ಲವರು ಕಟ್ಟಿಸಿದ ಗುಡಿಗಳಲ್ಲ. ಚಾಲುಕ್ಯ ಶೈಲಿಯ ಅಂಶಗಳೂ ಅಲ್ಲಲ್ಲಿ ಕಂಡು ಬಂದಿರುವುದರಿಂದ ಇದು ಎರಡು ಶೈಲಿಗಳ ಮಿಶ್ರಣವೆಂಬುದು ಕೆ. ವಿ. ಸೌಂದರರಾಜನ್ನರ ಅನಿಸಿಕೆ. ಮೊಗಲರಾಜಪುರ ಮತ್ತು ಉಂಡವಲ್ಲಿಗಳಲ್ಲಿ ಮರಳುಗಲ್ಲನ್ನು ಉಪಯೋಗಿಸಿದ್ದರೆ ಭೈರವಕೊಂಡದಲ್ಲಿನ ರಚನೆ ಪದರುಗಲ್ಲಿನದು. ಪಲ್ಲವರ ಗುಹೆಗಳೆಲ್ಲ ಗಟ್ಟಿಯಾದ ಬೆಣಚುಕಲ್ಲಿನಲ್ಲಿ ಕೊರೆದವುಗಳು. ಅದು ಆ ಶೈಲಿಯ ವೈಶಿಷ್ಟ್ಯಗಳಲ್ಲೊಂದು. ಈ ಗುಹೆಗಳು ೭-೮ನೆಯ ಶತಮಾನಗಳ ಪೂರ್ವಾರ್ಧಕ್ಕೆ ಸೇರಿದವು. ಪಲ್ಲವ ಶೈಲಿಗಿಂತಲೂ ಹೆಚ್ಚಾಗಿ ಚಾಲುಕ್ಯ ಶೈಲಿಗಳಿಂದ ಪ್ರಭಾವಿತವಾದವುಗಳು. ವಿಷ್ಣುಕುಂಡಿ, ತೆಲುಗ–ಚೋಳ ಅಥವಾ ವೇಂಗಿಯ ಚಾಲುಕ್ಯ ಮನೆತನಗಳ ಅರಸರು ಈ ಗುಹೆಗಳ ಕರ್ತೃಗಳಾಗಿರಬಹುದು ಎಂದಿರುವ ಈ ವಿದ್ವಾಂಸರು ಬಹುಮಟ್ಟಿಗೆ ವೇಂಗಿಯ ಚಾಲುಕ್ಯರ ಕಡೆಗೇ ತಮ್ಮ ಒಲವನ್ನು ತೋರಿದ್ದಾರೆ.

ಮಾರೆಮಂಡ ರಾಮರಾಯರು ಈ ಅಭಿಪ್ರಾಯವನ್ನು ಅಲ್ಲಗಳೆದಿದ್ದಾರೆ. ಬಾದಾಮಿಯ ಚಾಲುಕ್ಯರ ಇಮ್ಮಡಿ ಪುಲಕೇಶಿ ಈ ಪ್ರದೇಶದಲ್ಲಿ ಆಳುತ್ತಿದ್ದ ವಿಷ್ಣುಕುಂಡಿ ಮನೆತನದ ಮಾಧವವರ್ಮನನ್ನು ಸೋಲಿಸಿದ. ಆದುದರಿಂದ ಮುಮ್ಮಡಿ ಮಾಧವವರ್ಮನಿಗೆ ಈ ಗುಹೆಗಳನ್ನು ಕೊರೆಯಿಸಲು ವ್ಯವಧಾನವೇ ಇರಲಿಲ್ಲ ಎಂಬ ವಾದ ತಪ್ಪು. ಈ ಅರಸರ ಆಳ್ವಿಕೆಯ ಕಾಲಕ್ಕೂ ಪುಲಕೇಶಿಯ ಆಳ್ವಿಕೆಯ ಕಾಲಕ್ಕೂ ತುಂಬ ಅಂತರವಿದೆ. ವೇಂಗಿಯ ಚಾಲುಕ್ಯರು ದೇವಾಲಯಗಳನ್ನು ಕಟ್ಟಿಸತೊಡಗಿದುದು ನರೇಂದ್ರ ಮೃಗರಾಜ ಇಮ್ಮಡಿ ವಿಜಯಾದಿತ್ಯನ ಕಾಲದಲ್ಲಿ (ಕ್ರಿ. ಶ. ೮೦೬-೪೬). ಆದುದರಿಂದ ವೇಂಗಿಯ ಚಾಲುಕ್ಯರು ಇವುಗಳನ್ನು ಕೊರೆಯಿಸಿದರೆನ್ನಲಾಗದು. ಆದರೆ ವಿಷ್ಣುಕುಂಡಿ ಮನೆತನದ ಮೊದಲನೆಯ ಮಾಧವವರ್ಮ ಖ್ಯಾತಿವೆತ್ತ ಅರಸ. ಈತನು ಅಚ್ಚುಹಾಕಿಸಿದನೆನ್ನಲಾದ ನಾಣ್ಯಗಳಲ್ಲಿ ಎಡಪಾದವನ್ನು ಮೇಲಕ್ಕೆತ್ತಿ ನಿಂತಿರುವ ಸಿಂಹದ ಹಾಗೂ ಪೂರ್ಣಘಟಗಳ ಚಿತ್ರಗಳಿವೆ. ಮೊಗಲರಾಜಪುರದ ಗುಹೆಯೊಂದರ ಕಲ್ಲಿನ ಬುಡದಲ್ಲಿ ಇಂತಹ ಪೂರ್ಣಘಟದ ಚಿತ್ರವೂ, ಉಂಡವಲ್ಲಿಯ ನಾಲ್ಕು ಕಂಬಗಳಲ್ಲಿ ಎಡಗಾಲಿನ ಪಂಜವನ್ನು ಮೇಲೆತ್ತಿರುವ ಸಿಂಹದ ಚಿತ್ರವೂ ಇರುವುದರಿಂದ ಈ ಎಲ್ಲ ಗುಹೆಗಳನ್ನೂ ಕೆತ್ತಿಸಿದಾತ ವಿಷ್ಣುಕುಂಡಿ ಮನೆತನದ ಮೇಲೆ ಹೇಳಿದ ಮಾಧವವರ್ಮ ಎಂಬುದು ಇವರ ವಾದದ ತಿರುಳು. ಆದುದರಿಂದ ಈ ಗುಹೆಗಳ ಕಾಲ ಸುಮಾರು ೫ನೆಯ ಶತಮಾನವಾಗುತ್ತದೆ. ಆದರೆ ಈ ಗುಹೆಗಳ ಗರ್ಭಗೃಹಗಳಲ್ಲಿನ ಲಿಂಗ ಅಥವಾ ಲಿಂಗಪೀಠಗಳು ಇಕ್ಕೆಲ್ಲಗಳಲ್ಲಿ ಮುಂಚಾಚಿದ, ನಂತರದ ತ್ರಿಕೂಟಗಳಿಗೆ ಎಡೆ ಮಾಡಿಕೊಟ್ಟ ಕಂಬ ಮಂಟಪಗಳು, ಕೆಲವು ದ್ವಾರಪಾಲ ವಿಗ್ರಹಗಳ ತಲೆಯ ಮೇಲೆ ಮಾಡಿದಂತೆ


ತೋರುವ ಗೂಳಿಯ ಕೋಡುಗಳು, ಸಿಂಹಪೀಠದ ಕಂಬಗಳು ಪಲ್ಲವ–ಚಾಲುಕ್ಯ ಶೈಲಿಗಳ ವಿಶಿಷ್ಟ ಅಂಶಗಳು. ಆದುದರಿಂದ ಇವು ರಾಮರಾಯರು ಊಹಿಸಿದಷ್ಟು ಪ್ರಾಚೀನ ಗುಹೆಗಳಲ್ಲ. ಸೌಂದರರಾಜನ್ನರ ವಾದ ಹೆಚ್ಚು ಸಾಧಾರವೆನಿಸುತ್ತದೆ.

ಗುಹಾವಾಸ್ತುವಿಗೆ ಸಂಬಂಧಿಸಿದಂತೆ ಆಂಧ್ರಪ್ರದೇಶದ ಕೆಲವೆಡೆಗಳಲ್ಲಿ ಬಾದಾಮಿ ಚಾಲುಕ್ಯರ ಶೈಲಿಯಿಂದ ಪ್ರಭಾವಿತವಾದ ಅಥವಾ ಭಿನ್ನವಾಗಿ ಅದಕ್ಕೂ ಹಿಂದಿನ ಕಾಲದ್ದೆಂದು ಹಲವರಿಂದ ಭಾವಿಸಲಾದ ಕೆಲವು ಅಂಶಗಳನ್ನು ಮೇಲೆ ವಿವೇಚಿಸಲಾಗಿದೆ. ಬಾದಾಮಿಯ ಗುಹೆಗಳನ್ನೇ ಈಗ ಪರಿಶೀಲಿಸಬಹುದು.

ಗುಹಾವಾಸ್ತು : ಕರ್ನಾಟಕ – ಬಾದಾಮಿ

ಬಾದಾಮಿಯ ಭೂತನಾಥನ ಕೆರೆಯನ್ನು ಅಗಸ್ತ್ಯತೀರ್ಥವೆಂದೂ ಕರೆಯುತ್ತಾರೆ. ಇದರ ದಕ್ಷಿಣ ದಿಕ್ಕಿನಲ್ಲಿ ಗುಡ್ಡದ ಅಡಿಯಿಂದ ಸುಮಾರು ೩೦-೩೫ ಮೆಟ್ಟಿಲುಗಳನ್ನೇರಿದರೆ ಮೊದಲನೆಯ ಗುಹೆಯನ್ನು ಸೇರುತ್ತೇವೆ. ಇದು ಅಲ್ಲಿನ ಗುಹೆಗಳಲ್ಲೆಲ್ಲ ತಗ್ಗಾದದ್ದು. ಇದರಲ್ಲಿ ಶಿವನಿಗೆ ಸಂಬಂಧಿಸಿದ ಚಿತ್ರಗಳೇ ವಿಶೇಷವಾಗಿರುವುದರಿಂದ ಇದನ್ನು ಶೈವಗುಹೆ ಎಂದು ಗುರುತಿಸಲಾಗಿದೆ. ಜೀರ್ಣೋದ್ಧಾರ ಮಾಡುವ ಸಮಯದಲ್ಲಿ ಶೈವಗುಹೆಯ ಮುಂದುಗಡೆ ಒಂದು ಜಗಲಿಯನ್ನು ಕಟ್ಟಿಸಿ ಅದರ ಆಸರೆಯಾಗಿ ಒಂದು ಗೋಡೆಯನ್ನೂ ಎಬ್ಬಿಸಲಾಗಿದೆ. ಈ ಜಗಲಿಯಿಂದ ಕಲ್ಲಿನಲ್ಲಿ ಕಡೆದ ಕೆಲವು ಮೆಟ್ಟಲುಗಳನ್ನೇರಿ ಹೋದರೆ ಗುಹೆಯ ಸ್ಥಳವನ್ನು ತಲುಪುತ್ತೇವೆ. ಇದರ ಮುಂದೆ 'L' ಆಕಾರದ ಒಂದು ಜಗಲಿ ಇದ್ದು, ಇದರ ಕಿರಿದಾದ ಭಾಗ ಕುಸಿದು ಬಿದ್ದಿದ್ದ ಸಣ್ಣ ಗರ್ಭಗುಡಿಯನ್ನು ಆವರಿಸಿದೆ. ಈ ಶೈವ ಗುಹೆಯಿಂದ ಮುಂದಕ್ಕೆ ಎರಡನೆಯ ಗುಹೆಗೆ ಮೆಟ್ಟಿಲುಗಳನ್ನೇರಿ ಹೋಗಬೇಕು. ಇದೂ ನಂತರದ ನಾಲ್ಕನೆಯದೂ ವೈಷ್ಣವ ಗುಹೆಗಳು. ಎರಡನೆಯ ಗುಹೆಯ ಬಲಕ್ಕೆ ಒಂದು ನೈಸರ್ಗಿಕ ಗುಹೆ. ಇದು ಬೌದ್ಧ ಧರ್ಮದ ಗುಹೆ. ಎರಡನೆಯ ಗುಹೆಯ ಬಲಗಡೆಯ ಮೆಟ್ಟಿಲುಗಳನ್ನು ಹತ್ತಿದರೆ ಗುಡ್ಡದ ಮೇಲಿನ ಕೋಟೆಗೆ ಹೋಗುತ್ತೇವೆ. ಇದು ೧೮ನೆಯ ಶತಮಾನದ ಕೋಟೆ. ಫಿರಂಗಿ ಹಾರಿಸಲು ಪ್ರಶಸ್ತವಾದ ಹಾಗೂ ಅದರ ಹೊಡೆತವನ್ನು ತಡೆಯಬಲ್ಲ ಭದ್ರವಾದ ಕಲ್ಲಿನ ಕಟ್ಟಡವಿದು. ಇದಕ್ಕೆ ಏರಿ ಬರಲು ಕಿರಿದಾದ ಪ್ರವೇಶದ್ವಾರವಿದೆ. ಕೋಟೆಗೆ ಹೋಗುವ ಬಲಮೆಟ್ಟಿಲುಗಳನ್ನು ಹತ್ತಿ ಅಲ್ಲಿನ ಚೌಕಟ್ಟೊಂದರೊಳಗೆ ಹಾದುಹೋದರೆ ಹೆಚ್ಚು ವಿಸ್ತಾರವಾದ ಮೂರನೆಯ ಗುಹೆ ಸಿಗುತ್ತದೆ. ಇದನ್ನು ಕೊರೆಯಿಸಿದ ಕಾಲ ಕ್ರಿ. ಶ. ೫೭೮ ಎಂದು ಇಲ್ಲಿನ ಕೀರ್ತಿವರ್ಮನ ಶಾಸನದಿಂದ ಸ್ಪಷ್ಟವಾಗಿ ತಿಳಿದು ಬರುತ್ತದೆ. ಇದಕ್ಕೂ ಮುಂದಿನದು ಕೊನೆಯ ಜೈನ ಗುಹೆ. ಇದು ಎಲ್ಲ ಗುಹೆಗಳಿಗೂ ಎತ್ತರದಲ್ಲಿರುವುದರಿಂದ ಇದನ್ನು ಮೇಗಣ ಬಸದಿ ಎಂದು ಕರೆಯುತ್ತಾರೆ. ಇದಕ್ಕೆ 'ಮೇಣಬಸ್ತಿ' ಎಂಬ ಹೆಸರೂ ಇದೆ. ಇಲ್ಲಿನ ಕಲ್ಲನ್ನು ಮೇಣದಂತೆ ಬಳಸಿ ತಮಗೆ ಬೇಕಾದ ಆಕಾರಗಳನ್ನು ಶಿಲ್ಪಿಗಳು ಅವುಗಳಿಗೆ ಕೊಟ್ಟುದರಿಂದ ಇವುಗಳು 'ಮೇಣಬಸ್ತಿ'ಗಳೆನಿಸಿಕೊಂಡುವು ಎಂಬ ಅರ್ಥ ವಿವರಣೆಯೂ ಇದೆ. ಆದರೆ ಈ ನಾಲ್ಕು ಮಾನವನಿರ್ಮಿತ, ಬಂಡೆಯಲ್ಲಿ ಕೊರೆದ ಗುಹೆಗಳು.

ತಳವಿನ್ಯಾಸದಲ್ಲಿ ಇವೆಲ್ಲವೂ ಹೆಚ್ಚು ಕಡಿಮೆ ಒಂದೇ ಮಾದರಿಯವಾಗಿವೆ. ಆಯತಾಕಾರದ ಮುಖಮಂಟಪ, ವಿಶಾಲವಾದ ಮಹಾಮಂಟಪ ಮತ್ತು ಗರ್ಭಗೃಹ–ಇವು ಇವುಗಳ ಅಂಗಗಳು. ಮಹಾಮಂಟಪಕ್ಕೂ ಗರ್ಭಗುಡಿಗೂ ನಡುವೆ ಇದ್ದಿರಬೇಕಾದ ಅರ್ಧಮಂಟಪವು ಮಹಾಮಂಟಪ ಒಳಕ್ಕೆ ಚಾಚಿರುವುದರಿಂದ ತನ್ನ ಪ್ರತ್ಯೇಕತೆಯನ್ನು ಕಳೆದುಕೊಂಡಿದೆ. ಮೂರನೆಯ ಗುಹೆ ಅತಿ ವಿಸ್ತಾರವಾದುದು. ಎರಡನೆಯದು ಕಿರಿದು. ಕೆಲವು ಮೆಟ್ಟಿಲುಗಳು ಗರ್ಭಗೃಹವನ್ನು ಮಹಾಮಂಟಪದಿಂದ ಬೇರ್ಪಡಿಸಿವೆ. ಮಹಾಮಂಟಪ ಮುಖಮಂಟಪಗಳ ನಡುವೆ ಕಿರಿದಾದ ಕುಗ್ಗಿದ ಭಾಗವಿದೆ. ಮುಂಭಾಗ ಅಗಲವಾಗಿ ಎತ್ತರವಾಗಿ ಇದ್ದು ಸ್ಥೂಲವಾದ ಸಾಮಾನ್ಯವಾಗಿ ಚೌಕಾಕಾರದ ಕಂಬಗಳನ್ನೂ ಗೋಡೆಗಂಬಗಳನ್ನೂ ಹೊಂದಿವೆ. ಇವುಗಳ ಬೋದಿಗೆಗಳು ಮೇಲಿನ ತೊಲೆಗಳನ್ನಾಧರಿಸಿವೆ. ತೊಲೆಯ ಮೇಲಿನ ಸುದೃಢವಾಗಿ ಮುಂಚಾಚಿದ ಬಡುವನ್ನು ಕಪೋತವಾಗಿ ರೂಪಿಸಲಾಗಿದೆ. ಇದರ ಒಳ ಕಮಾನಿನ ಮತ್ತು ಬೋದಿಗೆಯ ಮೇಲಿನ ತೊಲೆಗಳನ್ನು ಹೆಣ್ಣುಬೊಂಬೆಯಾಕಾರದ ವೃತ್ತಾಕಾರದಲ್ಲಿ ಮಾನವ, ದೈವಿಕ ಅಥವಾ ಪ್ರಾಣಿ ಆಕಾರಗಳನ್ನು ಕಡೆದ ಒದೆಗಲ್ಲುಗಳಿಂದ ಆಧರಿಸಲಾಗಿದೆ. ಮುಖಮಂಟಪದ ಅಂಕಣಗಳ ಒಳ ಛಾವಣಿಗಳನ್ನು ಅಡ್ಡತೊಲೆಗಳಿಂದ ಚೌಕಾಕಾರದ ಆವರಣಗಳಾಗಿ ವಿಂಗಡಿಸಲಾಗಿದೆ. ಅಡ್ಡತೊಲೆಗಳಲ್ಲಿ ಪದಕಾಕಾರದ ಉಬ್ಬುಶಿಲ್ಪಗಳನ್ನು ಕೆತ್ತಲಾಗಿದೆ. ಮುಂಭಾಗದ ಮಧ್ಯದ ಎರಡು ಕಂಬಗಳ ನಡುವಣ ಭಾಗ ಪಕ್ಕದ ಕಂಬಗಳ ಭಾಗಗಳಿಗಿಂತಲೂ ಹೆಚ್ಚು ವಿಸ್ತಾರವಾಗಿದೆ. ಮುಖಮಂಪಟದ ಒಳಸಾಲು ಕಂಬಗಳು ಕೆಳಗೆ ಚೌಕಾಕಾರವಾಗಿದ್ದರೂ ಮೇಲೆ ವೃತ್ತಾಕಾರದ ಖಂಡಗಳನ್ನು ಹೊಂದಿದ್ದು ತುದಿಯಲ್ಲಿ ಕಲಶ, ಮೆತ್ತೆಯಾಕಾರದ ಗೆಡ್ಡೆಯಾಗಿ ಉಬ್ಬಿದ ಕುಂಭ ಇತ್ಯಾದಿಗಳಿಂದ ಅಲಂಕೃತವಾಗಿವೆ.



ಚಿತ್ರ – ೩

ಮೊದಲನೆಯ ಶೈವಗುಹೆಯ ಮುಂಭಾಗ ೪೨ ಅಡಿಗಳಷ್ಟು ಅಗಲವಾಗಿದೆ. ಮುಂಭಾಗದ ಎಡಬದಿಯಲ್ಲಿ ಸುಂದರವಾದ ನಟರಾಜನ ವಿಗ್ರಹವಿದೆ. ಹದಿನೆಂಟು ಬಾಹುಗಳುಳ್ಳ ಈತ ಕೈಗಳಲ್ಲಿ ಹಾವು, ಡಮರು, ತಂತುವಾದ್ಯ, ತ್ರಿಶೂಲ, ಪರಶು ಮುಂತಾದವುಗಳನ್ನು ಹಿಡಿದಿದ್ದು, ಪೀಠದ ಮೇಲೆ ತನ್ನ ಬಲಗಾಲನ್ನು ಊರಿ, ಎಡಗಾಲಿನ ಹಿಮ್ಮಡವನ್ನು ಮೇಲಕ್ಕೆತ್ತಿ, ಮೈಮಣಿಸಿ ಕುಣಿಯುತ್ತಿದ್ದಾನೆ. ಈತನ ಎಡಗಡೆ ನಿಂತಿರುವ ಗಣಪತಿ ಸಹ ನರ್ತಿಸುತ್ತಿರುವ ಹಾಗೆ ಕಂಡುಬರುತ್ತದೆ. ಗಣಪತಿಯ ಹಿಂದೆ ಮದ್ದಲೆಕಾರನೊಬ್ಬ ಮೃದಂಗವನ್ನು ನುಡಿಸುತ್ತಿದ್ದಾನೆ. ಗುಹೆಯ ಒಳಗಡೆ ಮುಖಮಂಟಪದ ಮುಂದೆ ನಾಲ್ಕು ಕಂಬಗಳೂ ಎರಡು ತುದಿಗಳಲ್ಲಿ ಒಂದೊಂದು ಗೋಡೆಗಂಬವೂ ಇವೆ. ಪಕ್ಕದ ಗೋಡೆಗಳ ತುಂಬಾ ಉಬ್ಬು ಚಿತ್ರಗಳಿವೆ. (ಛಾಯಾ ಚಿತ್ರ-೩) ಎಡಗೋಡೆಯ ಆಧಾರಪೀಠದ ಮುಂದಿನ ತಗ್ಗು ಅಂಕಣಗಳಲ್ಲಿ ವಿವಿಧ ಭಂಗಿಗಳಲ್ಲಿರುವ ಎಂಟು ಶಿವಗಣಗಳಿವೆ. ಕೆಲವು ನರ್ತಿಸುತ್ತಿರುವ, ಕೆಲವು ಹಾಡುತ್ತಿರುವ, ಉಳಿದವು ಕಹಳೆ, ಶಂಖ, ಮದ್ದಳೆ, ಕೊಳಲು, ಝಲ್ಲರಿ ಮುಂತಾದ ವಾದ್ಯಗಳನ್ನು ನುಡಿಸುತ್ತಿರುವ ಭಂಗಿಗಳಲ್ಲಿವೆ. ಆಧಾರಪೀಠದ ಮೇಲೆ ನಿಂತಿರುವ ಮೋಹಕವಾದ ಹರಿಹರನ ವಿಗ್ರಹವಿದೆ. ಬಲಗೋಡೆಯಲ್ಲಿ ಸುಮಾರು ೮ ಅಡಿಗಳ ಎತ್ತರದ ಅರ್ಧನಾರೀಶ್ವರನ ವಿಗ್ರಹ ಪೀಠವೊಂದರ ಮೇಲೆ ನಿಂತಿದೆ. ಈ ಪೀಠದ ಮುಂದಿನ ತಗ್ಗು ಅಂಕಣದಲ್ಲೂ ವಿವಿಧ ಭಂಗಿಗಳ ಎಂಟು ಗಣಗಳಿವೆ. ಮುಂಭಾಗದ ಮೆಟ್ಟಿಲುಗಳಿಂದ ಸುಮಾರು ೫೦ ಅಡಿಗಳಿಗೂ ಮೀರಿದಷ್ಟು ಆಳವಾಗಿರುವ ಈ ಗುಹೆಯ ಮುಂಬದಿಯ ಕಂಬಗಳ ಮತ್ತು ಗೋಡೆಗಂಬಗಳ ಮೇಲಿರುವ ತೊಲೆಯ ಎರಡು ಪಕ್ಕಗಳಲ್ಲಿಯೂ ಒಂದೊಂದು ಅರೆಯುಬ್ಬು ಚಿತ್ರವಿದೆ. ಮೊದಲನೆಯ ತೊಲೆಯ ಒಳಪಕ್ಕದಲ್ಲಿರುವ ಚಿತ್ರಪಂಕ್ತಿ ಎಲ್ಲದಕ್ಕಿಂತ ದೊಡ್ಡದಾಗಿದ್ದು ಶಿವ–ಪಾರ್ವತಿಯರ ಮದುವೆಗೆ ಸಂಬಂಧಿಸಿದ ಚಿತ್ರಾವಳಿ ಇದೆ. ಛತ್ತಿನ ಮಧ್ಯದಲ್ಲಿ ಐದು ಹೆಡೆಗಳ ನಾಗಪ್ರತಿಮೆ ಇದ್ದು ಇದರ ತಲೆ ಮತ್ತು ಸೊಂಟದವರೆಗಿನ ಭಾಗ ಮಾನವಾಕೃತಿ, ಕೆಳಗಿನ ಭಾಗ ಸರ್ಪಾಕೃತಿ, ಕಂಬಗಳ ಮೇಲೆ ಗರುಡ, ಪ್ರಹ್ಲಾದರೊಡಗೂಡಿದ ನರಸಿಂಹ, ಶಿವಪೂಜೆಯಲ್ಲಿ ನಿರತನಾದ ಯೋಗಿ ಮುಂತಾದವರ ಕಿರಿಯ ಪ್ರಮಾಣದ ಶಿಲ್ಪಗಳನ್ನು ಕೆತ್ತಿದೆ. ಮಧ್ಯದ ಗರ್ಭಗುಡಿಯಲ್ಲಿ ಕೊರೆದ ಪೀಠದ ಮೇಲೆ ಶಿವಲಿಂಗ.



ಚಿತ್ರ – ೪

ಶೈವಗುಹೆಯಿಂದ ಮೊದಲನೆಯ ವೈಷ್ಣವ ಗುಹೆಗೆ ಹೋಗಲು ೬೪ ಮೆಟ್ಟಿಲುಗಳನ್ನೇರಬೇಕು. ಸುಮಾರು ೩೩ ಅಡಿಗಳ ಅಗಲದ ಈ ಎರಡನೆಯ ಗುಹೆಯ ಮುಂದೆಯೂ ಒಂದು ಚಿಕ್ಕ ನೇರವಾದ ಜಗಲಿ ಇದೆ. ಇದರ ಕೆಳಗೆ ಹಲಗೆಗಲ್ಲಿನ ಮೇಲೆ, ಕುಬ್ಜಾಕಾರದ ಶಿವಗಣಗಳನ್ನು ಕೆತ್ತಿದೆ. ಇವು ಚಿತ್ರ ವಿಚಿತ್ರಾಕಾರಗಳಲ್ಲಿವೆ. ಬಲಗೈಯಲ್ಲಿ ತಂಬಿಗೆಯನ್ನಿಟ್ಟುಕೊಂಡು ಒಂದು ಕುಣಿಯುತ್ತಿದ್ದರೆ ಇನ್ನೊಂದು ಲಂಗೋಟಿಯನ್ನು ಕೈಯಲ್ಲಿ ಹಿಡಿದು ಓಡುತ್ತಿದೆ. ಒಂದು ಕೊಂಬನ್ನು ಊದುತ್ತಿದ್ದರೆ ಮತ್ತೊಂದು ತಲೆಯನ್ನು ಕೆದರಿಕೊಂಡು ನರ್ತಿಸುತ್ತಿದೆ. ಮಗುದೊಂದಕ್ಕೆ ನಾಲ್ಕು ಕೈಗಳು. ಜಗಲಿಯ ಒಂದೊಂದು ಬದಿಯಲ್ಲೂ ದ್ವಾರಪಾಲಕರ ಉಬ್ಬು ಚಿತ್ರಗಳು. ಎಡಗೈಯಲ್ಲಿ ದುಂಡಾದ ವಸ್ತುವೊಂದನ್ನು ಹಿಡಿದಿರುವ ಒಬ್ಬನ ಬಲಗೈ ವಸ್ತ್ರದ ಗಂಟಿನ ಮೇಲಿದೆ. ಪಟ್ಟೆಯಿಂದ ಬಿಗಿದ ಒಂದು ವಸ್ತ್ರವನ್ನುಟ್ಟಿರುವ ಈತ ಆಭರಣಗಳನ್ನು ಧರಿಸಿ ಕಿರೀಟಧಾರಿಯಾಗಿದ್ದಾನೆ. ಇವನ ಎಡಗಡೆಗೆ ಪುಷ್ಪವೊಂದನ್ನು ಹಿಡಿದ ಒಬ್ಬ ಸ್ತ್ರೀ. ಇನ್ನೊಬ್ಬ ದ್ವಾರಪಾಲಕನೂ ಹೀಗೆಯೇ ಚಿತ್ರಿಸಲ್ಪಟ್ಟಿದ್ದಾನೆ.

ಮುಖಮಂಟಪದ ಎರಡು ಪಕ್ಕದ ಗೋಡೆಗಳಲ್ಲೂ ವರಾಹಾವತಾರವನ್ನೂ ವಾಮನಾವತಾರವನ್ನೂ ನಿರೂಪಿಸುವ ದೊಡ್ಡ ವಿಗ್ರಹಗಳಿವೆ. ವರಾಹ 'ಪ್ರತ್ಯಾಲೀಢ' ಎಂದು ಕರೆಯಲ್ಪಡುವ ಬಿಲ್ಲುಗಾರನ ಭಂಗಿಯಲ್ಲಿದೆ. (ಛಾಯಾ ಚಿತ್ರ - ೫) ಮುಂಭಾಗದ ನಾಲ್ಕು ಕಂಬಗಳು ಮತ್ತು ಎರಡು ಗೋಡೆಗಂಬಗಳ ಮೇಲೆ ಒಟ್ಟು ಐದು ಹಾಸುಗಲ್ಲುಗಳು. ಹಿಂಬದಿಯ ಎರಡು ಕಂಬಗಳು ಹಾಗೂ ನಾಲ್ಕು ಗೋಡೆಗಳ ಮೇಲೆ ಇನ್ನೈದು ಹಾಸುಗಲ್ಲುಗಳು. ಪ್ರತಿಯೊಂದರ ಮುಖದಲ್ಲೂ ನಿಮ್ನ ಫಲಕವಿದ್ದು



ಚಿತ್ರ – ೫

ಎರಡೂ ಕಡೆ ಗೋಡೆಗಂಬಗಳಿವೆ. ಕೆಳಗಡೆ ಕಮಲದಳಗಳ ಸಾಲು. ಅಮೃತಮಂಥನ, ಮಹಿಷಾಸುರ ಮರ್ದನಿ, ಕೃಷ್ಣನು ಕಂಸನನ್ನು ಕೊಲ್ಲುವವರೆಗಿನ ಬಾಲಲೀಲೆಗಳು ಇಲ್ಲಿನ ಚಿತ್ರಗಳ ಕಥಾವಸ್ತುಗಳು. ಈ ಮಂಟಪದ ಛಾವಣಿ ಐದು ಅಂಕಣಗಳಾಗಿ ವಿಭಾಗಿಸಲ್ಪಟ್ಟಿದ್ದು ಅವುಗಳ ಮುಂದುಗಡೆ ಮೊಸಳೆಯ ಮುಖದಿಂದ ಹೊರಬರುವ ಸಿಂಹಗಳ ಆಕಾರದ ಚಾಚುಪೀಠಗಳಿವೆ. ಛಾವಣಿಯ ಎಡ ಅಂಕಣದಲ್ಲಿ ಚದುರಾಕಾರದ ನಂದ್ಯಾವರ್ತಚಿಹ್ನೆ ಮತ್ತು ನಾಲ್ಕು ಮೂಲೆಗಳಲ್ಲಿ ನಾಲ್ಕು ಸ್ವಸ್ತಿಕಗಳು, ಮಧ್ಯದ ವಿಸ್ತಾರವಾದ ಅಂಕಣದಲ್ಲಿ ಒಂದರೊಳಗೊಂದರಂತೆ ಮೂರು ಚೌಕಗಳಿದ್ದು ಮೂರನೆಯ ಚೌಕದಲ್ಲಿ ಮೀನುಗಳ ರೂಪದ ಹದಿನಾರು ಅರೆಗಳ ಒಂದು ಚಕ್ರ ಮತ್ತು ಒಂದು ದೊಡ್ಡ ಕಮಲ ಅದರ ಗುಂಭವಾಗಿರುವಂತೆ ಬಿಡಿಸಿದೆ. ಇದು ವಿಷ್ಣುವಿನ ಚಕ್ರವನ್ನು ಪ್ರತಿನಿಧಿಸುತ್ತದೆ. ಇದರ ಬಲಗಡೆಯ ನಂದ್ಯಾವರ್ತ ಚಿಹ್ನೆಯ ಅಂಕಣದೊಳಗಣ ಸ್ವಸ್ತಿಕಗಳು ಮೂಲೆಗಳಲ್ಲಿರದೆ ಎದುರು ಬದುರಾಗಿದ್ದು ಮೂಲೆಗಳಲ್ಲಿ ಹಾರುತ್ತಿರುವ ಒಂದೊಂದು ಜೊತೆ ಗಂಧರ್ವರ ದೃಶ್ಯವಿದೆ. ಕೊನೆಯ ಅಂಕಣದಲ್ಲಿ ಗರುಡಾಸೀನನಾದ ಚತುರ್ಭುಜಗಳ ವಿಷ್ಣು. ಗರುಡನಿಗೆ ರೆಕ್ಕೆಗಳನ್ನು ಬಿಡಿಸದೇ ಇರುವುದು ಗಮನಾರ್ಹ. ಹಿಂದೊಮ್ಮೆ ಈ ಗುಹೆಗಳಲ್ಲಿ ವರ್ಣಚಿತ್ರಗಳನ್ನು ರೂಪಿಸಲಾಗಿದ್ದು ಈಗ ಅವು ಮಾಸಿಹೋಗಿವೆ. ಹೆಚ್ಚು ಬೆಳಕಿನ ಸಹಾಯದಿಂದ ಈಗಲೂ ಅವುಗಳನ್ನು ಅಸ್ಪಷ್ಟವಾಗಿ ಕಾಣಬಹುದು.

ಈ ಗುಹೆಯ ಎಡಕ್ಕೆ, ಸುಮಾರು ೨೫-೩೦ ಅಡಿಗಳ ಅಂತರದಲ್ಲಿ ಒಂದು ನೈಸರ್ಗಿಕ ಗುಹೆ ಇದೆ. ಇದರ ಪೂರ್ವದಿಕ್ಕಿನ ಗೋಡೆಯ ಮೇಲೆ ಬೋಧಿಸತ್ವ ಪದ್ಮಪಾಣಿಯ ಮೂರ್ತಿಯನ್ನು ಕಲ್ಲಿನಲ್ಲಿ ಕಡೆದಿದೆ. ಕಿರೀಟಧಾರಿಯಾದ ಈ ಮೂರ್ತಿಯು ಪಾದದವರೆಗೂ ವಸ್ತ್ರವನ್ನು ಉಟ್ಟಂತೆ ತೋರಿಸಿದೆ. ತಲೆಯ ಹಿಂದೆ ಪ್ರಭಾಮಂಡಲ. ವಿಗ್ರಹದ ಎರಡೂ ಕಡೆ ಹಲವಾರು ಸಣ್ಣ ಕುತೂಹಲಕರ ಆಕೃತಿಗಳಿವೆ. ಕೆಳಗಡೆಯ ಭಿತ್ತಿ ಚಿತ್ರದಲ್ಲೂ ಒಂದು ಸರ್ಪ, ಸುರಂಗದಿಂದ ಹೊರಬರುತ್ತಿರುವ ಒಬ್ಬ ಪುರುಷ, ಸುರಂಗದ ಕೆಳಗೆ ಎರಡು ಕೈಗಳನ್ನು ಮೇಲೆತ್ತಿ ದ್ರವಕುಂಡದಲ್ಲಿ ಮುಳುಗುತ್ತಿರುವಂತಿರುವ ಇಬ್ಬರು ಮನುಷ್ಯರು. ಬಹುಶಃ ಇದು ನರಕದ ಚಿತ್ರಣ ಎಂದು ಊಹಿಸಲಾಗಿದೆಯಾದರೂ ಆ ಊಹೆ ಸಂದೇಹಾಸ್ಪದ.

ಎರಡನೆಯ ಗುಹೆಯಿಂದ ಪೂರ್ವಕ್ಕೆ ಕಲ್ಲಿನಲ್ಲಿ ಕಡೆದ ಸುಮಾರು ೬೦ ಮೆಟ್ಟಿಲುಗಳನ್ನೇರಿ, ಅಲ್ಲಿ ಒಂದು ಚೌಕಟ್ಟನ್ನು ಹಾದುಹೋದರೆ ಮೂರನೆಯ ಗುಹೆ ಎದುರಾಗುತ್ತದೆ. ಇದು ಈ ಗುಹಾಲಯಗಳಲ್ಲೆಲ್ಲ ಹೆಚ್ಚು ವಿಸ್ತಾರವಾದದ್ದು. ಮುಂಭಾಗದಿಂದ ಗರ್ಭಗುಡಿಯನ್ನು ಸೇರಿಸದಂತೆ ಸುಮಾರು ೬೫ ಅಡಿಗಳಷ್ಟು ಆಳದ ಈ ಗುಹೆಯ ಮುಂಭಾಗವೇ ಸುಮಾರು ೭೦ ಅಡಿಗಳಷ್ಟು ಅಗಲವಾಗಿದೆ. ಚಾಲುಕ್ಯ ಮೊದಲನೆಯ ಕೀರ್ತಿವರ್ಮನ ತಮ್ಮನಾದ ಮಂಗಲೇಶನು ಇದನ್ನು ಕ್ರಿ. ಶ. ೫೭೮ರಲ್ಲಿ ಮಾಡಿಸಿದನೆಂಬುದು ಶಾಸನಾಧಾರದಿಂದ ತಿಳಿದ ವಿಷಯ. ಇದನ್ನು ಶಾಸನದಲ್ಲಿ ಮಹಾವಿಷ್ಣುಗೃಹವೆಂದು ಕರೆದಿದೆ. ಮುಖಮಂಟಪದಲ್ಲಿ ಆರು ಕಂಬಗಳು, ಎರಡು ತುದಿಗಳಲ್ಲಿ ಒಂದೊಂದು ಗೋಡೆಗಂಬವೂ ಇವೆ. ಮಹಾಮಂಟಪದಲ್ಲಿ ೧೪ ಕಂಬಗಳು, ಅಚ್ಚೊತ್ತಿದ ಮೆತ್ತೆಯ ಬೋದಿಗೆಯ ಮೇಲೆ ಸ್ಥೂಲವಾದ ಚಾಚುಪೀಠಗಳಲ್ಲಿ ಕಾರ್ತಿಕೇಯನೊಡನೆ ಶಿವ–ಪಾರ್ವತಿ, ಅರ್ಧನಾರೀಶ್ವರ, ರತಿ–ಮನ್ಮಥರ ವಿಗ್ರಹಗಳೂ ಮದನಿಕೆ ವಿಗ್ರಹಗಳೂ ಅಳವಡಿಸಲಾಗಿವೆ. ಒಟ್ಟು ಹದಿನಾರು, ವಿಸ್ತಾರವಾಗಿ ಬಿಡಿಸಿದ ಉಬ್ಬು ಚಿತ್ರಗಳಲ್ಲದೆ ಛಾವಣಿಗಳಲ್ಲೂ ಅನೇಕ ಚಿತ್ರಗಳಿವೆ. ಮುಖಮಂಟಪದ ಕಪೋತದ ಮಧ್ಯೆ ಗರುಡನ ಶಿಲ್ಪವಿದೆ. ಪಕ್ಕದ ಎರಡು ಗೋಡೆಗಳಲ್ಲಿ ಅನಂತಾಸೀನ ವಿಷ್ಣುವಿನ ಸುಮಾರು ೭-೮ ಅಡಿಗಳ ಅಗಲ ಮತ್ತು ೧೨೦೯ ಅಡಿ ಎತ್ತರದ ವಿಗ್ರಹವೂ ವಿಷ್ಣುವಿನ ನರಸಿಂಹಾವತಾರವನ್ನು ನಿರೂಪಿಸುವ ಇನ್ನೊಂದು ದೊಡ್ಡ ವಿಗ್ರಹ ಇದೆ. ೧೩.೧ ಅಡಿ ಎತ್ತರ ಮತ್ತು, ೧೧ ಅಡಿ ಅಗಲದ ತ್ರಿವಿಕ್ರಮನ ೧೨.೪ ಅಡಿ ಎತ್ತರ ಮತ್ತು ೫.೬ ಅಡಿ ಅಗಲ ಅಷ್ಟಭುಜಸ್ವಾಮಿಯ ವಿಗ್ರಹವೂ ಹೊರಗಿನ ಜಗಲಿಯ ಬಲ ಎಡ ಗೋಡೆಗಳಲ್ಲಿವೆ. ಇದಲ್ಲದೆ ಇನ್ನೂ ಹಲವಾರು ಶಿಲ್ಪಗಳು ಈ ಗುಹೆಯನ್ನು ಕಲಾಶಾಲೆಯನ್ನಾಗಿ ಮಾಡಿವೆ. ಕಂಬಗಳು ಬೇರೆ ಬೇರೆ ಶೈಲಿಗಳಲ್ಲಿ ಅಲಂಕೃತವಾಗಿವೆ. ಕಪೋತಗಳಿಗೆ ಮುಂಚಾಚಿದ ಒದೆಗಲ್ಲುಗಳನ್ನು ಆನಿಸಿ ಕುದುರೆಯ ದೇಹದ ಪ್ರಾಣಿಗಳನ್ನೂ ಇತರ ಪೌರಾಣಿಕ ಕಾಲ್ಪನಿಕ ಪ್ರಾಣಿಗಳನ್ನೂ ಕೆತ್ತಿದೆ. ಗರ್ಭಗುಡಿಯಲ್ಲಿ ವಿಷ್ಣುವಿನ ವಿಗ್ರಹದ ಪೀಠ ಮಾತ್ರ ಈಗ ಇದೆ, ಮೂಲ ವಿಗ್ರಹ ಇಲ್ಲ. ಗರ್ಭಗುಡಿಯ ಮುಂದಿನ ಗರುಡನ ಶಿಲ್ಪದ ಬಲಗಡೆಗೆ ಕೆಲವು ವರ್ಣಚಿತ್ರಗಳಿವೆ. ಅರಮನೆಯಲ್ಲಿ ನೃತ್ಯಪ್ರದರ್ಶನ, ರಾಜಸಭೆ, ಅಪ್ಸರೆಯರು ಮುಂತಾದ ದೃಶ್ಯಗಳನ್ನು ಇಲ್ಲಿ ಚಿತ್ರಿಸಲಾಗಿದೆ. ಮುಖಮಂಟಪದ ಛಾವಣಿಯಲ್ಲಿರುವ ಶಿಲ್ಪಗಳಿಗೂ ಬೇರೆ ಬೇರೆ ಬಣ್ಣಗಳನ್ನು ಬಳಿಯಲಾಗಿದೆ.

ಇಲ್ಲಿನ ಗುಹೆಗಳಲ್ಲಿ ಕೊನೆಯದು ಜೈನ ಗುಹೆ, ಎಲ್ಲ ಗುಹೆಗಳಿಗೂ ಎತ್ತರದಲ್ಲಿ ಇದೆ. ಬಹುಶಃ ಮೇಗಣ ಬಸದಿ ಎಂಬ ಅಭಿಧಾನಕ್ಕೆ ಇದೂ ಒಂದು ಕಾರಣ ಇರಬಹುದು. ಮುಂಭಾಗದಲ್ಲಿ ಚಾಚುಪೀಠದ ಬೋದಿಗೆಗಳುಳ್ಳ ನಾಲ್ಕು ಕಂಬಗಳು. ಈ ಗುಹೆಯು ಕೇವಲ ೩೧ ಅಡಿ ಅಗಲ ಮತ್ತು ೧೬ ಅಡಿ ಆಳವಾಗಿದ್ದು ಕಿರಿದಾಗಿದೆ. ಈ ನಾಲ್ಕು ಕಂಬಗಳು ಸಿಂಹದ ತಲೆಯ ಮೇಲಿಟ್ಟಂತೆ ತೋರುವುವು. ಪ್ರವೇಶದ್ವಾರದ ಬಂಧದಲ್ಲಿ ಹಲವಾರು ಶಾಖೆಗಳಿವೆ. ಗರ್ಭಗುಡಿಯಲ್ಲಿ ಮಹಾವೀರನು ಸಿಂಹಪೀಠದ ಮೇಲೆ ಮೆದುವಾದ ದಿಂಡಿಗೆ ಒರಗಿ ಕುಳಿತಿದ್ದಾನೆ. ಮುಖಮಂಟಪದ ಎಡಕ್ಕೆ, ಪಶ್ಚಿಮದ ಗೋಡೆಯ ಮೇಲೆ ಸುಪಾರ್ಶ್ವನಾಥನ ದಿಗಂಬರರ ಮೂರ್ತಿ ನಿಂತಿದೆ. ಇದರ ಎದುರು ಗೋಡೆಯ ಮೇಲೆ ಬಾಹುಬಲಿಯ ವಿಗ್ರಹವಿದೆ. ಬಳ್ಳಿಯು ಬಾಹುಬಲಿಯ ಕೈಕಾಲುಗಳನ್ನು ಸುತ್ತಿಕೊಂಡಿದೆ. ಈ ಎರಡೂ ವಿಗ್ರಹಗಳ ಸಮೀಪದಲ್ಲಿ ಒಂದೊಂದು ಜಿನಮೂರ್ತಿ ಇದ್ದು ಅದನ್ನು ಸುತ್ತುವರಿದಂತೆ ೨೪ ಜಿನಬಿಂಬಗಳಿವೆ. ಒಳಗಿನ ಮಂಟಪದಲ್ಲೂ ಎರಡೂ ಕಡೆ ಮಹಾವೀರನ ದೊಡ್ಡ ವಿಗ್ರಹಗಳೂ ಇತರ ಜೈನ ತೀರ್ಥಂಕರರ ಯಕ್ಷ ಯಕ್ಷಿಣಿಯರ ಮೂರ್ತಿಗಳಿವೆ. ಇಲ್ಲಿನ ಕಂಬಗಳು ಮಂಟಪ ಹಾಗೂ ಗರ್ಭಗುಡಿಯ ಬಾಗಿಲ ಚೌಕಟ್ಟುಗಳು ಕಲಾತ್ಮಕವಾಗಿ ಕೆತ್ತಲ್ಪಟ್ಟಿವೆ.

ಗುಹಾವಾಸ್ತು – ಪರಸ್ಪರ ಪ್ರಭಾವಗಳು : ಚಾಲುಕ್ಯ, ಪಲ್ಲವ, ಗಂಗ

ಐಹೊಳೆಯ ಗುಹೆಗಳು ಬಾದಾಮಿಯ ಗುಹೆಗಳಿಗೂ ಹಿಂದಿನವು ಎಂಬ ಅಭಿಪ್ರಾಯವಿರುವುದನ್ನು ಸೂಚಿಸಿದ್ದೇವೆ. ಬಾದಾಮಿಯ ಗುಹೆಗಳಲ್ಲಿ ಮೂರನೆಯ ವೈಷ್ಣವಗುಹೆಯ ಕಾಲ ಖಚಿತವಾಗಿ ಕಾಲ ಖಚಿತವಾಗಿ ಕ್ರಿ. ಶ. ೫೭೮ ಎಂಬುದಕ್ಕೆ ಅಲ್ಲಿನ ಶಾಸನವೇ ಸಾಕ್ಷಿ. ಪರ್ಸಿ ಬ್ರೌನರ ಅಭಿಪ್ರಾಯದಂತೆ ಇದೇ ಮೊದಲು ಕೆತ್ತಲ್ಪಟ್ಟ ಗುಹಾಲಯ. ಉಳಿದ ೨ ಮತ್ತು ೧ನೆಯ ಹಾಗೂ ಜೈನ ಗುಹೆಗಳು ನಂತರ ಆ ಕ್ರಮದಲ್ಲಿ ಅಸ್ತಿತ್ವಕ್ಕೆ ಬಂದುವೆಂಬುದು ಅವರ ವಾದ. ಕೊನೆಯದಾದ ಜೈನಗುಹೆಯು ಇತರ ಗುಹೆಗಳಿಂದ ಪ್ರಭಾವಿತವಾಗಿ ೭ನೆಯ ಶತಮಾನದಲ್ಲಿ ಕೊರೆಯಲ್ಪಟ್ಟಿತು ಎಂದು ಅವರು ಸೂಚಿಸಿದ್ದಾರೆ. ಹೆಚ್ಚು ಕಡಿಮೆ ಇದೇ ಅಭಿಪ್ರಾಯ ಕೆ. ಆರ್. ಶ್ರೀನಿವಾಸನ್‌ರವರಿಂದಲೂ ಮುಂದೂಡಲ್ಪಟ್ಟಿದೆ. ಗುಹೆಗಳು ಇರುವ ಕ್ರಮದಲ್ಲಿಯೇ ಅತಿ ಪ್ರಾಚೀನವಾದುದು ಶೈವ. ನಂತರ ಉಳಿದ ಮೂರು ಕಡೆಯಲ್ಪಟ್ಟಿವೆ. ತಮ್ಮ ಸರ್ವಧರ್ಮಸಮನ್ವಯನೀತಿಯನ್ನು ನಿರೂಪಿಸಲೆಂಬಂತೆ ಆರಂಭದ ಅರಸರು (ಮೊದಲ ಪುಲಕೇಶಿ ಪ್ರಮುಖವಾಗಿ) ಮೊದಲೆರಡು ಗುಹೆಗಳನ್ನು ಕೊರೆಯಿಸಿ, ಮನೆತನದ ಕೀರ್ತಿಯನ್ನು ಸಾರಲೆಂಬಂತೆ ೩ನೆಯ ಗುಹೆಯನ್ನು ಮಂಗಲೇಶನು ನಂತರ ಕೊರೆಯಿಸಿದನು. ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಜೈನಗುಹೆ ಅಸ್ತಿತ್ವಕ್ಕೆ ಬಂದಿತೆಂಬುದು ಗ್ಯಾರಿ ಟಾಡ್ ಮತ್ತು ಹೆಚ್. ಸರ್ಕಾರರ ಅಭಿಪ್ರಾಯ. ಮೂರನೆಯ ಹೆಚ್ಚು ವಿಸ್ತಾರವಾದ ವೈಷ್ಣವ ಗುಹೆಯಲ್ಲಿನ ಅಪೂರ್ವ ಶಿಲ್ಪಗಳು ಆ ಕಲೆ ಆ ವೇಳೆಗೆ ವಿಶೇಷವಾಗಿ ಹೊಮ್ಮಿದ್ದು ಮೊದಲ ಎರಡು ಗುಹೆಗಳಲ್ಲಿ ಅದು ಇನ್ನೂ ಆರಂಭದ ದೆಸೆಯಲ್ಲಿದ್ದುವೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಪಲ್ಲವರು ಬಾದಾಮಿಯನ್ನು ವಶಪಡಿಸಿಕೊಂಡ ನಂತರ ಈ ಗುಹೆಯಲ್ಲಿ ಬದಲಾವಣೆಗಳನ್ನು ಮಾಡಿ ಪರಿಷ್ಕರಿಸಿದರೆಂದು ಮಾಡಲಾದ ಸಲಹೆ ಸಾಧುವಾದುದಲ್ಲ. ವಾಸ್ತವಿಕವಾಗಿ ಬಹುಮಟ್ಟಿಗೆ ಬಾದಾಮಿಯನ್ನು ವಶಪಡಿಸಿಕೊಂಡ ಪಲ್ಲವ ಅರಸ ಈ ಗುಹೆಗಳನ್ನು ಕಂಡು ಮೋಹಿತನಾಗಿ ಇಲ್ಲಿನ ಶಿಲ್ಪಿಗಳನ್ನು ತನ್ನ ರಾಜಧಾನಿಗೆ ಕರೆದೊಯ್ದಿರಬಹುದೆಂಬ ಸಲಹೆ ಹೆಚ್ಚು ಮಾನ್ಯ.

ಪ್ರಾಸಂಗಿಕವಾಗಿ ಭವ್ಯವಾದ ಈ ವಿಗ್ರಹಗಳನ್ನು ಕಡೆದ ಶಿಲ್ಪಿಗಳನ್ನು ಕುರಿತು ಪ್ರಸ್ತಾಪಿಸಬಹುದು. ಇವರೆಲ್ಲ "ತಾನೆಲೆಯ ಪಿಂತಿರ್ದು ದೀನತೆಯ ತೋರಿ ಅಭಿಮಾನವನು ತೊರೆದು ಕೃತಕೃತ್ಯ" ರಾದ ವನಸುಮಗಳು. ಇಲ್ಲಿನ ಗುಹೆಗಳಲ್ಲಿ, ಕೆಲವು ಬಂಡೆಗಳ ಮೇಲೆ, ಮೆಟ್ಟಿಲುಗಳ ಮೇಲೆ, ಒಂದೆರಡು ವಿಗ್ರಹಗಳ ಮೇಲೆ ಅಯ್ಯಸ್ವಾಮಿ, ಕಲ್ಕುಟ್ಟಿ ದೋಣಸ್ವಾಮಿ ಮುಂತಾದ ಕ್ರಿ. ಶ. ೬-೭ನೆಯ ಶತಮಾನಗಳ ಕನ್ನಡ ಶಿಲ್ಪಿಗಳ ಹೆಸರುಗಳು ಕಂಡರಿಸಲ್ಪಟ್ಟಿವೆ. ಬೆಣ್ಣೆಯರ ಚೌಳುಗೇಸಿ ಕಲ್ಕುಟ್ಟಿವೋನ್ ಎಂಬ ಒಂದು ಲಿಪಿ ೪ನೆಯ ಗುಹೆಗೆ ಹೋಗುವ ಹಾದಿಯಲ್ಲಿ ಕಾಣಿಸಿದೆ. ೩ನೆಯ ಗುಹೆಯಲ್ಲಿ ಕಪೋತದ ಒಳಬದಿಯ ಗರುಡ ವಿಗ್ರಹದ ಮೇಲೆ 'ನೆಲವಳೆ' ಎಂಬ ಹೆಸರಿದೆ. 'ಎರಂಡರ ಗಣಾಚನ ಕೀರ್ತನ', 'ಶ್ರೀಚಂದ್ರ ಕೀರ್ತ್ತಿಯ ಭಟ್ಟಂ ಮಾಡಿದ ದುರ್ಗದೇವಿಯನ್' ಎಂಬುವು ಇನ್ನಿತರ ಶಾಸನಗಳು. ಇವುಗಳು ಬಹುಶಃ ಶಿಲ್ಪಿಗಳ ಹೆಸರುಗಳು. ಯಾರು ಯಾವ ಶಿಲ್ಪ ಕಡೆದರೆನ್ನಲು ಮಾತ್ರ ಆಗದು.

ಇದುವರೆವಿಗೂ ವಿವರಿಸಿದವುಗಳೆಲ್ಲ ಉತ್ತರ ಕರ್ನಾಟಕದ, ತುಂಗಭದ್ರೆಯ ಉತ್ತರದ ಭಾಗದ ಗುಹಾಲಯಗಳು. ಸಮಕಾಲೀನವಾಗಿ ತುಂಗಭದ್ರೆಯ ದಕ್ಷಿಣಕ್ಕೆ, ವಿಶೇಷವಾಗಿ ಕಾವೇರೀ ತೀರ ಪ್ರದೇಶಗಳು ತಲಕಾಡಿನ ಗಂಗರ ಅಧೀನಕ್ಕೊಳಪಟ್ಟಿದ್ದುವು. ಇವರ ರಾಜ್ಯದ ಪೂರ್ವಕ್ಕಿದ್ದುದು ತಮಿಳುನಾಡಿನ ಭಾಗಗಳು. ಅಲ್ಲಿ ಪಲ್ಲವರು, ಚೋಳರು, ಪಾಂಡ್ಯರು ಆಳುತ್ತಿದ್ದರು. ಒಂದು

ದೃಷ್ಟಿಯಲ್ಲಿ ಗಂಗರ ರಾಜ್ಯಸ್ಥಾಪನೆಗೆ ಸ್ಫೂರ್ತಿ ಇತ್ತವರೇ ಪಲ್ಲವರೆಂದರೂ ಸಂದೀತು. ಈ ಪ್ರದೇಶ ಕನ್ನಡದ ನೆಲವೆಂಬುದು ಸ್ಪಷ್ಟವಾಗಿತ್ತಾದರೂ ಪಲ್ಲವರನ್ನು ಧಿಕ್ಕರಿಸಿ ಸ್ವತಂತ್ರವಾಗಿ ರಾಜ್ಯಸ್ಥಾಪನೆ ಮಾಡಿದ ಬನವಾಸಿಯ ಕದಂಬರ ಪ್ರತಿಸ್ಪರ್ಧಿಗಳಾಗಿ ದಕ್ಷಿಣದಲ್ಲಿ ಗಂಗರನ್ನು ಇವರು ನೆಲೆಗೊಳಿಸುವಲ್ಲಿ ಉತ್ಸುಕರಾಗಿದ್ದರು. ರಾಜಕೀಯವಾಗಿ ಇದರಿಂದ ಪಲ್ಲವರಿಗೆ ಯಾವ ತೆರನ ಲಾಭವೂ ಆಗಲಿಲ್ಲವಾದರೂ ಗಂಗರ ಈ ಪ್ರದೇಶ ಪಲ್ಲವ ಸಾಂಸ್ಕೃತಿಕ ಪ್ರಭಾವಕ್ಕೊಳಗಾಯಿತೆನ್ನುವುದಂತೂ ನಿಜ. ಉತ್ತರದಲ್ಲಿ ಬಾದಾಮಿಯ ಚಾಲುಕ್ಯರು ಗುಹಾಲಯಗಳನ್ನು ಕಟ್ಟಿಸಿದಾಗ ಅದರಿಂದ ಪಲ್ಲವರು ಪ್ರಭಾವಿತರಾದರೆನ್ನಬಹುದು. ಈ ಗುಹಾವಾಸ್ತುಶಿಲ್ಪವನ್ನು ಗಂಗರು ವಿಶೇಷವಾಗಿ ಅನುಕರಿಸಲಿಲ್ಲವೆಂದು ತೋರುತ್ತದೆ. ಆದರೂ ಗಂಗರ ಕಾಲದ್ದೆನ್ನಬಹುದಾದ ಕೆಲವು ಗುಹಾಲಯಗಳು ಗಂಗವಾಡಿಯಲ್ಲಿ ಕಾಣಸಿಕೊಂಡಿವೆ.

ಇವುಗಳಲ್ಲಿ ಅತಿ ಪ್ರಾಚೀನವಾದುದು ಮೇಲುಕೋಟೆಯಲ್ಲಿರುವ ಗುಹೆ. ಬೆಟ್ಟದ ತುದಿಯಲ್ಲಿ ಗಡುಸಾದ ಕಗ್ಗಲ್ಲಿನ ಬಂಡೆಯಲ್ಲಿ ಅಪೂರ್ಣವಾಗಿ ಮುಖಮಂಟಪ ಮತ್ತು ಒಳಗಡೆ ಇನ್ನೊಂದು (ಸಭಾ?) ಮಂಟಪಗಳನ್ನು ಕೊರೆದಿರುವ ಈ ಗುಹೆಯೊಳಗೆ ಯಾವುದೇ ವಿಗ್ರಹಗಳೂ ಇಲ್ಲ. ಸಮೀಪದಲ್ಲಿ ಕಂಡು ಬಂದಿರುವ ಚಚ್ಚೌಕದ ಹಿರಿಯ ಗಾತ್ರದ ಕಂಬಗಳು ಗಂಗರ ಕಾಲಕ್ಕೆ ಸೇರಿದುವೆನ್ನಲು ಸಾಕ್ಷ್ಯಗಳಾಗಿವೆ. ಆದರೆ ಇದರ ಖಚಿತವಾದ ಕಾಲವನ್ನು ಮಾತ್ರ ಸೂಚಿಸುವುದಾಗದು. ಗಂಗರ ಕಾಲದ್ದೆನ್ನಬಹುದಾದ ಇನ್ನೊಂದು ಗುಹೆ ಕೋಲಾರ ಜಿಲ್ಲೆಯ ನಂದಿಬೆಟ್ಟದ ಪಕ್ಕದಲ್ಲಿರುವ ಗೋಪೀನಾಥ ಗುಡ್ಡದಲ್ಲೂ ಕಂಡು ಬಂದಿದೆ. ಗಂಗರು ತಾವು 'ನಂದಗಿರಿನಾಥ' ರೆಂದು ಕರೆದುಕೊಂಡಿದ್ದು, ಈ ನಂದಿಬೆಟ್ಟವೇ ನಂದಗಿರಿ ಎಂಬುದರಲ್ಲಿ ಯಾವ ವಿಧದ ಸಂದೇಹವೂ ಇಲ್ಲ. ಈ ಗುಹಾಲಯವನ್ನು ಈಗ ಗೋಪೀನಾಥನ ಆಲಯವೆಂದು ಕರೆಯುತ್ತಾರಾದರೂ ಅಲ್ಲಿರುವ ೮ನೆಯ ಶತಮಾನದ ಶಾಸನದಿಂದ ನಮಗೆ ತಿಳಿಯುವ ವಿವರಗಳೇ ಬೇರೆ ರೀತಿಯವು. ಅದು ದಶರಥನ ಮಗ ಶ್ರೀರಾಮನಿಂದ ಪ್ರತಿಷ್ಠಿತವಾದ ಅರ್ಹಂತರ ಚೈತ್ಯಭವನವೆಂದೂ ಕಾಲಾನಂತರ ಪಾಂಡವರ ತಾಯಿ ಕುಂತೀದೇವಿ ಅದನ್ನು ಜೀರ್ಣೋದ್ಧಾರಗೊಳಿಸಿದಳೆಂದೂ ಶಾಸನ ತಿಳಿಸುತ್ತದೆ. ಇದು ಹೊಸದಾಗಿ ಕೊರೆದ ಗುಹೆಯಾಗಿರದೆ ಸ್ವಾಭಾವಿಕ ಗುಹೆಯಾಗಿದ್ದು ಇಲ್ಲಿ ವೃಷಭನಾಥನಿಗೆ ಬಸದಿಯೊಂದನ್ನು ಸ್ಥಾಪಿಸಲಾಯಿತೆಂಬುದು ಸ್ಪಷ್ಟ. ಇದೇ ರೀತಿ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿನ ವಳ್ಳಿಮಲೈಯಲ್ಲಿಯೂ ಸ್ವಾಭಾವಿಕ ಗುಹೆಯೊಂದನ್ನು ಗಂಗರ ರಣವಿಕ್ರಮನ ಮಗ ರಾಚಮಲ್ಲನು ಜೈನಬಸದಿಯಾಗಿ ಮಾರ್ಪಡಿಸಿದನು. ಇದರೊಳಗೆ ಬಂಡೆಯ ಮೇಲೆ ಹಲವಾರು ವಿಗ್ರಹಗಳನ್ನು ಕೆತ್ತಲಾಗಿದೆ. ಈ ಕಾಲದ ಅಖಂಡ ಶಿಲೆಯೊಂದರಲ್ಲಿ ವಾಸ್ತುವಿನ್ಯಾಸವೊಂದನ್ನು ರೂಪಿಸಿದುದಕ್ಕೆ ಶ್ರವಣಬೆಳಗೊಳದಲ್ಲಿನ ದೊಡ್ಡಬೆಟ್ಟದ ಅಖಂಡ ದ್ವಾರವೊಂದು ಉತ್ತಮ ಮಾದರಿ. ಇದರ ಹಾಸುಗಲ್ಲಿನ ನಡುವೆ ಲಕ್ಷ್ಮಿಯು ಕುಳಿತಿದ್ದು ಎರಡೂ ಕಡೆ ನಿಂತಿರುವ ಆನೆಗಳಿಂದ ಅಭಿಷಿಕ್ತಳಾಗುತ್ತಿದ್ದಂತೆ ಚಿತ್ರಿಸಲಾಗಿದೆ. ಇಡೀ ದ್ವಾರ ಅಲಂಕೃತವಾಗಿದ್ದು ಇದನ್ನು ಗಂಗರ ಮಂತ್ರಿ ಚಾಮುಂಡರಾಯನು ಸ್ಥಾಪಿಸಿದನೆಂಬ ಸಾಂಪ್ರಾದಾಯಕ ಹೇಳಿಕೆ ಇದೆ.

ಚಾಲುಕ್ಯ–ರಾಷ್ಟ್ರಕೂಟ

ಬಾದಾಮಿಯ ಚಾಲುಕ್ಯರ ನಂತರ ಆಳತೊಡಗಿದ ರಾಷ್ಟ್ರಕೂಟರು ಮಹಾರಾಷ್ಟ್ರದ ದಕ್ಷಿಣ ಭಾಗದಲ್ಲಿ ತಮ್ಮ ರಾಜ್ಯದ ಭಾಗವಾಗಿದ್ದ ಔರಂಗಾಬಾದ್ ಜಿಲ್ಲೆಯಲ್ಲಿ ವಿಶ್ವವಿಖ್ಯಾತವಾದ ಗುಹಾಲಯಗಳನ್ನೂ ದೇವಾಲಯಗಳನ್ನೂ ರಚಿಸಿದರು. ಎಲ್ಲೋರದ ಕಪ್ಪು ಜ್ವಾಲಾಮುಖಿ ಶಿಲೆಯ ಬೆಟ್ಟದ ಸಾಲು ಇವರಿಗೆ ಉತ್ತಮ ಸಾಮಗ್ರಿಯನ್ನೊದಗಿಸಿತ್ತು. ಈ ಮೊದಲು ಇಲ್ಲಿ ಬೌದ್ಧ ಗುಹಾಲಯಗಳನ್ನು ಕೊರೆಯಲಾಗಿತ್ತು. ರಾಷ್ಟ್ರಕೂಟರು ಇದಕ್ಕೆ ಜೊತೆಜೊತೆಯಾಗಿ ಹಿಂದೂ ಮತ್ತು ಜೈನ ಆಲಯಗಳನ್ನು ಕಟ್ಟಿಸಿದರು. ವಾಸ್ತವವಾಗಿ ಬಾದಾಮಿಯ ಚಾಲುಕ್ಯರೇ ಇಲ್ಲಿ ಇಂಥ ಕಾರ್ಯಾರಂಭ ಮಾಡಿದ್ದರು. ೧೩ ರಿಂದ ೨೯ರ ವರೆಗಿನ ಎಲ್ಲೋರಾದ ಗುಹೆಗಳು ಹಿಂದೂ ಗುಹೆಗಳು. ಇವುಗಳಲ್ಲಿ ಮೊದಲು ಕೊರೆಯಿಸಿದ ಗುಹಾಲಯಗಳು ಹಿಂದಿನ ಬೌದ್ಧಾಲಯಗಳ ಶೈಲಿ–ರಚನೆಯನ್ನೇ ಅನುಸರಿಸಿದವು. ಎಂತಲೇ ಅವುಗಳಲ್ಲಿನ ಗರ್ಭಗೃಹಗಳಲ್ಲಿ ಲಿಂಗಗಳಾಗಲೀ ಮೂರ್ತಿಗಳಾಗಲೀ ಇಲ್ಲ. ಇವುಗಳಲ್ಲಿ ಖ್ಯಾತಿವೆತ್ತುದು ಕೈಲಾಸ ದೇವಾಲಯ. ವಾಸ್ತವಿಕವಾಗಿ ಇದು ಏಕಶಿಲೆಯಲ್ಲಿ ಕಡೆಯಲಾದ ದೇವಾಲಯ. ಇದರ ಪ್ರದಕ್ಷಿಣಾಪಥದ ಇಳಿಜಾರಿಗೆ ಹೊಂದಿಕೊಂಡಂತೆ ಕೆಲವು ಗುಹಾಲಯಗಳೂ ಇವೆ. ಈ ಗುಹೆಗಳಲ್ಲಿನ ಕಂಬಗಳು ಭಿನ್ನ ಭಿನ್ನ ಆಕೃತಿಗಳನ್ನು ಪಡೆದಿವೆ. ಚೌಕಾಕಾರ, ಅಷ್ಟಮೂಲೆ ಅಥವಾ ಸಾಮಾನ್ಯವಾಗಿ ಮಧ್ಯದಲ್ಲಿ ಎಲೆಗಳ ಗುಂಪು ಮತ್ತು ಪೂರ್ಣಕುಂಭಗಳನ್ನು ರೂಪಿಸಿದ ಕುಂಭವಲ್ಲಿ ಆಕಾರದ ಕಂಬಗಳಿವೆ. ಕೆಲವು ಕಂಬಗಳ ಬೋದಿಗೆಗಳಲ್ಲಿ ಮೆತ್ತೆಯಂತಹ ಕುಂಭಾಲಂಕರಣಗಳು, ಚಾಚುಕಲ್ಲುಗಳೂ ಒಮ್ಮೊಮ್ಮೆ ಅಲಂಕೃತವಾಗಿರುವುದುಂಟು. ಗುಡಿಗಳ ಮುಖಭಾಗದ ಮೇಲಿನ ಕಪೋತಗಳಲ್ಲಿ ಲಾಳಾಕಾರದ

ಗೂಡುಗಳು ಸಣ್ಣ ನಾಸಿಕಗಳಾಗಿ ತೋರಿವೆ. ಬಾಗಿಲ ಚೌಕಟ್ಟಿನ ಮೇಲಿನ ಉತ್ತರಂಗದಲ್ಲಿ ದಕ್ಷಿಣದ ವಿಮಾನ ಶೈಲಿಯ ಅಥವಾ ಉತ್ತರದ ಶಿಖರ ಅಥವಾ ಪ್ರಾಸಾದ ಶೈಲಿಯ ಗುಡಿಗಳ ಪ್ರತಿರೂಪಗಳನ್ನು ಸಣ್ಣಗಾತ್ರದಲ್ಲಿ ಕೆತ್ತಲಾಗಿದೆ.

ಇಲ್ಲಿನ ಈ ಗುಹೆಗಳಲ್ಲಿ ಪ್ರಾಚೀನವಾದುದು ರಾಮೇಶ್ವರ ಗುಹೆ. ದೀರ್ಘ ಚತುರಸ್ರಾಕಾರದ ಇದರ ಮುಖಮಂಟಪದ ಮುಖಭಾಗದಲ್ಲಿ ನಾಲ್ಕು ಸ್ಥೂಲವಾದ, ಕುಳ್ಳಾದ ಅಲಂಕೃತ ಕಂಬಗಳಿವೆ. ಕಂಬಗಳಲ್ಲಿ ಕಾಳಿ, ಪಾರ್ವತಿ ಮತ್ತು ಗಣಗಳ ಸಮೇತನಾದ ನಟರಾಜ, ಸಪ್ತಮಾತೃಕೆಯರೊಡಗೂಡಿದ ಗಣೇಶ ಮುಂತಾದ ವಿಗ್ರಹಗಳನ್ನು ಕೆತ್ತಲಾಗಿದೆ. ಎರಡೂ ತುದಿಗಳಲ್ಲಿರುವ ಚೆನ್ನಾಗಿ ಅಲಂಕರಿಸಲ್ಪಟ್ಟ ವೇದಿಗಳ ಮೇಲೆ ಒಂದೊಂದು ಗೋಡೆಗಂಬ, ಮಧ್ಯದ ಎರಡು ಕಂಬಗಳ ನಡುವೆ ಪ್ರವೇಶದ್ವಾರ, ಮುಖಮಂಟಪದ ಹಿಂದೆ ಕಂಬಗಳುಳ್ಳ ಮಹಾಮಂಟಪ. ಮಧ್ಯದ ಸಾಲಿನ ಕಂಬಗಳ ನಡುವಣ ಅಂತರವನ್ನು ಹೆಚ್ಚಿಸಿ ಅದನ್ನು ಮಧ್ಯಾಂಗಣವಾಗಿ ಪರಿವರ್ತಿಸಲಾಗಿದೆ. ಇದರ ಹಿಂಭಾಗದಲ್ಲಿ ಸಾಂಧಾರ ಗರ್ಭಗೃಹವಿದೆ. ಪಕ್ಕದ ಕಂಬಗಳ ಸಾಲುಗಳ ಅಂತರ ಕಡಿಮೆಯಾಗಿದ್ದು ಈ ಹಜಾರದಿಂದ ಪ್ರದಕ್ಷಿಣಾಪಥಕ್ಕೆ ಬರಬಹುದಾಗಿದೆ. ಗರ್ಭಗೃಹದ ದ್ವಾರದ ಇಕ್ಕೆಲಗಳಲ್ಲೂ ದ್ವಾರಪಾಲಕರು. ಕಂಬಗಳಲ್ಲಿ ಕುಂಭದ ಅಲಂಕರಣಗಳಿವೆ. ಮುಖಭಾಗದ ಪಾಗಾರದ ಮೇಲಿನ ಅಲಂಕರಣ ಪಟ್ಟಿಯಲ್ಲಿರುವ ಭೂತಗಣಗಳನ್ನು, ಕಮಾನು ವಿಗ್ರಹಗಳನ್ನು ಗಮನಿಸಿದರೆ ಈ ಗುಹಾಲಯ ಬಾದಾಮಿಯ ಗುಹಾಲಯಗಳನ್ನು ಬಹುಮಟ್ಟಿಗೆ ಹೋಲುತ್ತಿದ್ದು ಬಹುಶಃ ಸುಮಾರು ಕ್ರಿ. ಶ. ೭ನೆಯ ಶತಮಾನದ ಆದಿಭಾಗದಲ್ಲಿ ಅಸ್ತಿತ್ವಕ್ಕೆ ಬಂದಿರಬಹುದೆಂದು ಹೇಳಬಹುದಾಗಿದೆ.

ಎಲ್ಲೋರಾದ ೧೪ನೆಯ ಗುಹೆಯನ್ನು ರಾವಣಕೀ–ಖಾಯ್ ಎಂದು ಹೆಸರಿಸಲಾಗಿದೆ. ಇಲ್ಲಿಯೂ ಕಂಬಗಳ ಹಿರಿದಾದ ಮಂಟಪವಿದ್ದು ಹಿಂಬದಿಗೆ ಗರ್ಭಗೃಹ, ಇಮ್ಮಡಿಗೊಂಡ ಕಂಬಸಾಲುಗಳುಳ್ಳ ಕೈಸಾಲೆ ಅದನ್ನು ಮುಖಮಂಟಪವಾಗಿ ಮಾಡಿದೆ. ಕುಂಭದ ಶೈಲಿಯ ಕಂಬಗಳು, ಗರ್ಭಗುಡಿಯ ಇಕ್ಕೆಡೆಗಳಲ್ಲೂ ದ್ವಾರಪಾಲಕರ ವಿಗ್ರಹಗಳನ್ನೂ ಇತರ ಮೂರ್ತಿಗಳನ್ನೂ ಕೆತ್ತಲಾಗಿದೆ. ಮಂಟಪದ ಗೋಡೆಗಳ ಮೇಲೂ ಗೋಡೆಗಂಬಗಳ ನಡುವಣ ಹಿಂಜರಿದ ಸ್ಥಳಗಳಲ್ಲೂ ಹಲವಾರು ಶೈವ, ವೈಷ್ಣವ ಮೂರ್ತಿಗಳಿವೆ. ಗರ್ಭಗೃಹ ಆಯಾಕಾರದ್ದಾಗಿದ್ದು, ಒಳಗಿನ ಪೀಠದಲ್ಲಿ ಕುಳಿ ಇದೆ. ಇದು ವಿಷ್ಣು ಅಥವಾ ದುರ್ಗೆಯ ವಿಗ್ರಹವನ್ನು ನಿಲ್ಲಿಸಲು ಅನುವಾಗಿದ್ದಂತೆಯೇ ಹೊರತು ಶಿವಲಿಂಗ ಸ್ಥಾಪನೆಗಾಗಿ ಅಲ್ಲ. ಈ ಗುಹೆಯ ಕಾಲ ಸಹ ಸುಮಾರು ಕ್ರಿ. ಶ. ೭೦೦ ಎಂದು ಊಹಿಸಲಾಗಿದೆ.

ಬಹುಶಃ ೬ನೆಯ ಶತಮಾನಕ್ಕೆ ಸೇರಬಹುದಾದ ಇಲ್ಲಿನ ಧುಮರ್‌ಲೇನ ಸಹ ಇನ್ನೊಂದು ಗಮನಾರ್ಹವಾದ ಗುಹೆ. ಸಾಂಧಾರದ ಚತುರ್ಮುಖವಾಗಿರುವ ಇದರ ಗುಡಿ ಶಿಲುಬೆಯಾಕಾರದಲ್ಲಿ ಜೋಡಿಸಲಾದ ಮಂಟಪಗಳ ಮಧ್ಯೆ ಇದೆ. ಇದು ಎಲಿಫಾಂಟಾ ಮತ್ತು ಜೋಗೇಶ್ವರಿಯ ಗುಹಾಲಯಗಳನ್ನು ಹೋಲುತ್ತದೆ. ನಾಲ್ಕು ದ್ವಾರಗಳ ಪಕ್ಕಗಳಲ್ಲೂ ದೊಡ್ಡ ದೊಡ್ಡ ದ್ವಾರಪಾಲಕ ಮತ್ತು ಇತರ ವಿಗ್ರಹಗಳಿವೆ. ಗರ್ಭಗುಡಿಯ ಮುಂದಿನ ಹಾಗೂ ಸುತ್ತುವರಿದ ಮಹಾಮಂಟಪದ ಇಕ್ಕೆಡೆಗಳಲ್ಲೂ ಅಗಲವಾದ ಹಜಾರವಿದೆ. ಇದಕ್ಕೆ ಒಂದೊಂದು ಕಡೆಯೂ ಐದೈದು ಸ್ತಂಭಸಾಲುಗಳು. ಮುಖ್ಯಹಜಾರಕ್ಕೆ ಹೊಂದಿಕೊಂಡಂತೆ ಪಕ್ಕಗಳಲ್ಲಿ ಪರಿಷ್ಕರಿಸಿದ ಎರಡು ದ್ವಾರಗಳಿವೆ. ಭಾರಿ ಗಾತ್ರದ ಕಂಬಗಳಿಗೆ ಕುಂಭ ಅಥವಾ ತಿವಾಸಿ (ಮೆತ್ತೆ)ಗಳ ಆಕಾರದ ಬೋದಿಗೆಗಳಿವೆ. ಒಳಗಿನ ವಿಗ್ರಹಗಳು ಗಾತ್ರದಲ್ಲಿ ಹಿರಿದು. ಗುಡಿಯೊಳಗೆ ಏಕಶಿಲೆಯ ಪೀಠದ ಮೇಲೆ ಶಿವಲಿಂಗವಿದೆ.


ಇಲ್ಲಿನ ಗುಹೆಗಳಲ್ಲಿ ಅತಿವಿಸ್ತಾರವಾದದ್ದು ಮತ್ತು ಎರಡು ಅಂತಸ್ತುಗಳುಳ್ಳದ್ದೂ ೧೫ನೆಯ ದಶಾವತಾರ ಗುಹೆ. ಇದರ ಮುಂದಿನ ಮಂಟಪದ ಮೇಲೆ ದಂತಿದುರ್ಗನ ಶಾಸನವಿದೆ. ಬಹುಶಃ ಆತನ ಆಳ್ವಿಕೆಯ ಕಾಲದಲ್ಲಿ (ಸುಮಾರು ಕ್ರಿ. ಶ. ೭೫೩-೭೫೬) ಈ ಗುಹೆಯನ್ನು ಕೊರೆಯಿಸಲಾಯಿತೆನ್ನಬಹುದು. ಪ್ರತ್ಯೇಕವಾಗಿರುವ ನಂದಿಮಂಟಪದಲ್ಲಿ ೧೬ ಚೌಕಾಕಾರದ ಕಂಬಗಳಿವೆ. ಇದರ ಮೇಲಿನ, ಇದಕ್ಕೂ ವಿಸ್ತಾರವಾದ ಮಂಟಪದಲ್ಲಿ ಪ್ರತಿಸಾಲಿಗೂ ಒಂಬತ್ತರಂತೆ ಒಟ್ಟು ಆರು ಸಾಲುಗಳಲ್ಲಿ ೫೪ ಕಂಬಗಳಿವೆ. ಅಲ್ಲದೆ ಗರ್ಭಗುಡಿಯ ಮುಂದಿನ ಮೊಗಸಾಲೆಯಲ್ಲಿ ವಿಶೇಷವಾಗಿ ಅಲಂಕೃತವಾದ ಇನ್ನೆರಡು ಕಂಬಗಳಿವೆ. ಗೋಡೆಯಲ್ಲಿನ ಕಿರುಗಂಬಗಳ ನಡುವಣ ಹಿಂಜರಿದ ಸ್ಥಳದಲ್ಲಿ ಭವ್ಯವಾದ ವಿಗ್ರಹಗಳಿವೆ. ತಾಂಡವಮೂರ್ತಿ, ಪಾರ್ವತಿ, ಮಾರ್ಕಂಡೇಯ, ಲಿಂಗೋದ್ಭವಮೂರ್ತಿ, ಅನಂತ, ವರಾಹ, ವಾಮನ, ನರಸಿಂಹ, ಲಕ್ಷ್ಮಿ ಮೊದಲಾದ ದೇವತೆಗಳ ವಿಗ್ರಹಗಳು ಕಣ್ಮನಗಳನ್ನು ಸೆಳೆಯುತ್ತವೆ. ಎಂಟು ಕೈಗಳ ನಟರಾಜನ ವಿಗ್ರಹ ಅತ್ಯದ್ಭುತವಾಗಿದೆ. ಗರ್ಭಗುಡಿಯ ಲಿಂಗಪೀಠ ವೃತ್ತಾಕಾರದ್ದು.

೨೧ನೆಯ ಗುಹೆ ಎಂದು ಹೆಸರಿಸಲಾದ ಗಣೇಶ ಲಯನ ಸುಮಾರು ೨೦ ಗುಹಾಲಯಗಳ ಒಂದು ಗುಂಪು. ಒಂದೊಂದರಲ್ಲೂ ಮುಂದೆ ಮಂಟಪ, ಹಿಂದೆ ಗರ್ಭಗುಡಿ ಇದ್ದು ಮಂಟಪದ ಕಂಬಗಳು ಚೌಕಾಕಾರದಲ್ಲಿ ಸರಳವಾಗಿ ಕೆತ್ತಲ್ಪಟ್ಟಿವೆ. ಗೋಡೆಗಂಬಗಳೂ

ಅದೇ ಆಕಾರದಲ್ಲಿದ್ದು ಮುಖಭಾಗದಲ್ಲಿರುವ ಚಾಚುಕಲ್ಲುಗಳೂ ಬಾದಾಮಿಯ ಚಾಲುಕ್ಯರ ಇಂತಹ ಗುಹಾಲಯಗಳಲ್ಲಿದ್ದಂತಿವೆ. ಗುಡಿಯ ಹಿಂಬದಿಯ ಗೋಡೆಯಲ್ಲಿ ಮಹೇಶಮೂರ್ತಿಯ ಉಬ್ಬು ಶಿಲ್ಪವಿದೆ. ಬಹಳ ಗುಡಿಗಳಲ್ಲಿ ವೃತ್ತಾಕಾರದ ಏಕಶಿಲೆಯ ಪೀಠದಲ್ಲಿ ಲಿಂಗಗಳಿವೆ. ಒಂದು ಆಲಯದಲ್ಲಿ ಹಿಂಬದಿಯ ಕಲ್ಲಲ್ಲಿ ಕೊರೆದ ಲಿಂಗವಿದೆ. ಈ ಗುಹಾಲಯಗಳು ಸಹ ಕ್ರಿ. ಶ. ೮ನೆಯ ಶತಮಾನದ ಮಧ್ಯಭಾಗದಲ್ಲಿ ಅಸ್ತಿತ್ವಕ್ಕೆ ಬಂದುವೆನ್ನಬಹುದು.


ಇಲ್ಲಿನ ಆಲಯಗಳಲ್ಲೆಲ್ಲಾ ಅದ್ಭುತ ಸೃಷ್ಟಿ ಕೈಲಾಸದೇವಾಲಯ. ಇದನ್ನು ಗುಹಾಂತರ್ದೇವಾಲಯವೆನ್ನುವುದು ಸರಿಯಾಗದು. ಇದು ಬೆಟ್ಟದ ಬಂಡೆಯ ಒಂದು ಭಾಗವನ್ನು ಕೊರೆದು ಮಾಡಿದ ಆಲಯವಲ್ಲ. ಬೆಟ್ಟದ ಒಂದು ಭಾಗವನ್ನು ಸಂಪೂರ್ಣವಾಗಿ ಗುಡ್ಡದಿಂದ ಬೇರ್ಪಡಿಸಿ, ಹಾಗೆ ಬೇರೆಯಾದ ಗುಡ್ಡವನ್ನೇ ಮೇಲಿಂದ ಕೆಳಗಿನವರೆಗೂ ಕೊರೆದು ಕಡೆದು ಮಾಡಿದ ದೇವಾಲಯವಿದು. ರಾಷ್ಟ್ರಕೂಟರ ಅರಸ ಒಂದನೆಯ ಕೃಷ್ಣನ ಅಮೋಘವಾದ ಕೊಡುಗೆ ಇದು. ೨೭೬ X ೧೫೪ ಅಡಿಗಳ ವಿಶಾಲವಾದ ಅಂಗಳದ ಹಿಂದೆ ೧೦೭ ಅಡಿಗಳಷ್ಟು ಎತ್ತರದ ಕಡಿದಾದ ಓರೆ. ಇಡೀ ದೇವಾಲಯ ಮುಂದಿನ ಎರಡು ಆನೆಗಳಿಂದ ಎಳೆಯಲ್ಪಟ್ಟ ಒಂದು ರಥದಂತೆ ಕಂಡು ಬರುತ್ತದೆ. ಮಹಾಬಲಿಪುರದ ರಥಗಳನ್ನು ಇದು ಹೋಲುತ್ತದಾದರೂ ಇದು ದೇವಾಲಯದಲ್ಲಿನ ಎಲ್ಲ ಭಾಗಗಳನ್ನೂ ಸಮಗ್ರವಾಗಿ ಒಳಗೊಂಡಿದೆ. ಮುಖಮಂಟಪ, ಗರ್ಭಗುಡಿ, ಕಂಬಗಳ ಕೈಸಾಲೆಗಳು ಎಲ್ಲವೂ ಇಲ್ಲಿವೆ.

ತಳಪಾಯ ಎತ್ತರವಾಗಿದ್ದು ಈ ಉನ್ನತವಾದ ವೇದಿಕೆಯ ಮೇಲೆ ರಥದ ಮಾದರಿಯ ಈ ದೇವಾಲಯವನ್ನು ಸ್ಥಾಪಿಸಿದಂತೆ ತೋರುತ್ತದೆ. ವೇದಿಕೆಯ ಮಧ್ಯದಲ್ಲಿ ಆನೆ ಮತ್ತು ಸಿಂಹಗಳನ್ನೂ ಇತರ ಕಾಲ್ಪನಿಕ ಪ್ರಾಣಿಗಳನ್ನೂ ಕಡೆದ ಅಲಂಕೃತ ಪಟ್ಟಿಕೆ ಇದೆ. ಇವುಗಳ ಮುಂಭಾಗ ಮಾತ್ರ ಕಾಣಿಸುವುದರಿಂದ ಈ ಪ್ರಾಣಿಗಳು ಆ ದೇವಾಲಯವನ್ನು ಹೊತ್ತು ನಿಂತಂತೆ ತೋರುತ್ತದೆ. ಮಹಾಮಂಟಪದ ಹಿಂದಿನ ಮೂಲೆಗಳನ್ನು ಕೂಟ ಮಾದರಿಯ ದ್ವಿತಲ ವಿಮಾನಗಳಾಗಿ ವಿಭಜಿಸಿದಂತೆ ತೋರುತ್ತದೆ. ಇದರ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಶೆಗಳಲ್ಲಿ ಮಧ್ಯದಲ್ಲಿ ಮೂರು ಪ್ರಲಂಬರೇಖೆಯ ಮಂಟಪದ್ವಾರಗಳಿವೆ. ಗೋಪುರ ದ್ವಾರಗಳಂತೆ ತೋರಿಸಲೋಸುಗ ಇವುಗಳ ಮೇಲೆ ಎತ್ತರಿಸಿದ ಶಾಲಗಳಿವೆ. ಮಂಟಪದ ಮೇಲ್ಭಾಗ ಹೆಚ್ಚು ಕಡಿಮೆ ಚಪ್ಪಟೆಯಾಗಿದ್ದು ಮಧ್ಯದಲ್ಲಿನ ಕಳಶದ ಬುಡದ ಸುತ್ತಲೂ ಅನೇಕ ದಳಗಳ ಕಮಲವನ್ನು ಕೆತ್ತಿದೆ. ಮಹಾಮಂಟಪ ಮತ್ತು ಅಂತರಾಳಗಳ ಹಿಂದೆ ಮೂರು ಅಂತಸ್ತುಗಳ ವಿಮಾನ. ಮುಂದೆ ಚಾಚಿದ ಅಲಂಕೃತ ಕಮಾನಿನ ಸುಕನಾಸಿ. ಮೇಲೆ ಅರ್ಧಗೋಳಾಕೃತಿಯ ಶಿಖರ. ವಿಮಾನದ ಬುಡದಲ್ಲಿ ಗರ್ಭಗುಡಿಯ ಹೊರಗೋಡೆಗಳ ಮೇಲೆ ಉಪಪೀಠದ ಮೂರು ಪ್ರಧಾನ ದಿಕ್ಕುಗಳಲ್ಲಿ ಕಿರುಗಾತ್ರದ ದ್ವಿತಲ ಶಾಲಾ ವಿಮಾನಗಳು. ಹಿಂದಿನ ಎರಡು ಮೂಲೆಗಳಲ್ಲಿ ಎರಡು ತ್ರಿತಲಕೂಟ ವಿಮಾನಗಳು. ನಂದಿ ಮಂಟಪವನ್ನು ಸೇರಿಸಿದಂತೆ ಈ ಎಲ್ಲ ವಿಮಾನಗಳು ಎಂಟು ಪರಿವಾರ ದೇವತೆಗಳ ಗುಡಿಗಳಿದ್ದಂತೆ ಕಲ್ಪಿಸಲಾಗಿದೆ. (ಛಾಯಾ ಚಿತ್ರ –೬)



ಚಿತ್ರ – ೬

ದೇವಾಲಯದ ರಂಗಮಂಟಪದ ಹದಿನಾರು ಕಂಬಗಳು ನಾಲ್ಕು ಭಾಗಗಳಾಗಿ ಮಂಟಪವನ್ನು ವಿಭಜಿಸಿವೆ. ಒಂದೊಂದು ಭಾಗದಲ್ಲೂ ವಿಶೇಷವಾಗಿ ಅಲಂಕರಿಸಿದ ನಾಲ್ಕು ಕಂಬಗಳು. ಚೌಕಾಕಾರದ ನಂದಿಮಂಟಪ ಸಹ ದೇವಾಲಯದಂತೆ ಎತ್ತರವಾದ ಪೀಠದ ಮೇಲಿದೆ. ಎರಡನ್ನೂ ಕೂಡಿಸುವ ಒಂದು ಕಲ್ಲುಸೇತುವೆ, ನಂದಿಮಂಟಪವನ್ನು ಮಹಾದ್ವಾರಕ್ಕೆ ಸೇರಿಸುವ ಇನ್ನೊಂದು ಕಲ್ಲುಸೇತುವೆ. ನಂದಿಮಂಟಪದ ಎರಡೂ ಕಡೆಗಳಲ್ಲಿ ಧ್ವಜಸ್ತಂಭಗಳಿವೆ. ಮಹಾದ್ವಾರದ ಪಕ್ಕದಲ್ಲಿರುವ ಮೆಟ್ಟಿಲುಗಳನ್ನು ಹತ್ತಿಹೋದರೆ ಅಲ್ಲಿ ದೇವಾಲಯದ ಪರಿವಾರದವರಿಗೆ ವಾಸಯೋಗ್ಯವಾದ ಕೊಠಡಿಗಳಿವೆ. ಈ ದೇವಾಲಯದ ಶಿಲ್ಪಗಳು ಅದ್ಭುತವೂ ಭವ್ಯವೂ ಆಗಿವೆ. ಪೌರಾಣಿಕ ಘಟನೆಗಳನ್ನು ಚಿತ್ರಿಸುವ ಶಿಲ್ಪಗಳಿವು. ಒಂದು ಕಡೆ ದಶಗ್ರೀವನಾದ ರಾವಣ ಕೈಲಾಸವನ್ನೆತ್ತುತ್ತಿದ್ದರೆ ಇನ್ನೊಂದು ಕಡೆ ಶಿವಪಾರ್ವತಿಯರು ಪಗಡೆಯಾಟದಲ್ಲಿ ತನ್ಮಯರಾಗಿದ್ದಾರೆ. (ಛಾಯಾ ಚಿತ್ರ- ೭)



ಚಿತ್ರ – ೭

೩೦ ರಿಂದ ೩೪ರ ವರೆಗಿನ ಗುಹಾಲಯಗಳು ಜೈನಧರ್ಮಕ್ಕೆ ಸೇರಿದವುಗಳು. ಇವುಗಳಲ್ಲಿ ೩೨ ಮತ್ತು ೩೩ನೆಯ ಆಲಯಗಳನ್ನು ಇಂದ್ರಸಭೆ ಮತ್ತು ಜಗನ್ನಾಥಸಭೆ ಎಂದು ಹೆಸರಿಸಲಾಗಿದೆ. ವಿಸ್ತಾರದಲ್ಲಿ ಜಗನ್ನಾಥಸಭೆ ಚಿಕ್ಕದಾದರೂ ಎರಡೂ ರಚನೆಗಳು ಒಂದೇ ವಿಧವಾಗಿವೆ. ಗುಹೆಯ ಶಿಲೆಯನ್ನು ಸುಮಾರು ೨೦೦ ಅಡಿಗಳಷ್ಟು ಒಳಕ್ಕೆ ಕೊರೆದು ಎರಡು ಅಂತಸ್ತುಗಳ ಈ ಗುಡಿಗಳನ್ನು ಕೆತ್ತಲಾಗಿದೆ. ಇಂದ್ರಸಭೆಯ ಮುಂದಿನ ಚೌಕಾಕಾರದ ಅಂಗಳದಲ್ಲಿ ಛೋಟಾಕೈಲಾಸವೆಂದು ಪ್ರಸಿದ್ಧಿ ಪಡೆದ ಏಕಶಿಲೆಯ ಗುಡಿ ಇದೆ. ಇದರ ಬದಿಗಳನ್ನು ಶಿಲ್ಪಗಳಿಂದ ಅಲಂಕರಿಸಲಾಗಿದೆ. ಕಂಬಗಳ ಕಪೋತಗಳು, ಬೋದಿಗೆಗಳು ಸಹ ವಿಶೇಷವಾಗಿ ಅಲಂಕೃತವಾಗಿವೆ. ಆಲಯ ದ್ರಾವಿಡ ಶೈಲಿಯಲ್ಲಿದೆ. ಕೆಳಭಾಗದಲ್ಲಿನ ಗುಹೆಯ ಅಂಗಳದಲ್ಲಿ ಸರಳವಾದ ಕಂಬಗಳಿವೆ. ಗೋಡೆಗಳಲ್ಲಿ ಕಿರುಗುಡಿಗಳನ್ನು ಕೊರೆದಂತೆ ತೋರುತ್ತದೆ. ಮುಖಮಂಟಪದಲ್ಲಿ ಇಂದ್ರ ಮತ್ತು ಇಂದ್ರಾಣಿಯರ ವಿಗ್ರಹಗಳಿವೆ. ಆನೆಯ ಮೇಲೆ ಕುಳಿತ ಇಂದ್ರನ ವಿಗ್ರಹವು ಅಮರಾವತಿಯಲ್ಲಿ ತನ್ನ ಸಭೆಯನ್ನು ಅಲಂಕರಿಸಿ ಕುಳಿತಂತೆ ಭಾಸವಾಗುತ್ತದೆ. ಮೇಲಂತಸ್ತಿನ ನವರಂಗಮಂಟಪದಲ್ಲಿ ೧೨ ಕಂಬಗಳಿವೆ. ಕಂಬಗಳಿಂದ ಪ್ರತ್ಯೇಕಿಸಲ್ಪಟ್ಟಿರುವ ಮಧ್ಯಭಾಗದಲ್ಲಿ ಎತ್ತರದ ಚೌಮುಖದ ಜಗುಲಿ ಇದೆ. ಇದರ ಮೇಲ್ಛಾವಣಿಯಲ್ಲಿ ಅಲಂಕೃತವಾದ ಅರಳಿದ ದಳಗಳ ಕಮಲವನ್ನು ಕೆತ್ತಿದೆ. ಜಗನ್ನಾಥಸಭೆ ಇಂದ್ರಸಭೆಯನ್ನೇ ಹೋಲುತ್ತದೆಯಾದರೂ ಅದರ ರಚನೆಯಷ್ಟು ಕ್ರಮಬದ್ಧವಾಗಿಲ್ಲ. ಅಸಮಪ್ರಮಾಣದ ಮೂರು ಸ್ವತಂತ್ರವಾದ ಗುಡಿಗಳು. ಒಂದೊಂದಕ್ಕೂ ಅಗ್ರ ಮತ್ತು ಮಹಾಮಂಟಪಗಳು. ಮೇಲಿನ ಅಂತಸ್ತಿನ ನವರಂಗದಲ್ಲಿ ಹನ್ನೆರಡು ಕಂಬಗಳು. ಹಿಂಬದಿಗೆ ಒಂದು ಗರ್ಭಗೃಹ. ಮಂಟಪದ ಮೂಲೆಯಲ್ಲಿ ಕೆಳಗಿನ ಅಂತಸ್ತಿನಲ್ಲಿರುವಂತಹ, ಅದೇ ಅಳತೆಯ ಸ್ವತಂತ್ರವಾದ ಇನ್ನೊಂದು ಗುಡಿ. ಇದು ಮಾತ್ರ ಪೂರ್ಣವಾಗಿ, ವಿಶೇಷವಾಗಿ ಅಲಂಕೃತವಾಗಿದೆ.

ಮುಂಬಯಿನಗರಕ್ಕೆ ಆರು ಮೈಲುಗಳ ದೂರದಲ್ಲಿ ಈಗ ಎಲಿಫಾಂಟಾ ಎಂದು ಪ್ರಸಿದ್ಧಿಯಾಗಿರುವ ದ್ವೀಪ ಹಿಂದೊಮ್ಮೆ ಘರಾಪುರಿ ಎನಿಸಿತ್ತು. ಈ ಗುಹೆಯನ್ನು ಕಲ್ಲಿನ ಉದ್ದಕ್ಕೆ ಸಮಾನಾಂತರವಾಗಿ ಪೂರ್ವ–ಪಶ್ಚಿಮ ಅಕ್ಷರೇಖೆಯಲ್ಲಿ ಕೊರೆಯಲಾಗಿದೆ. ಇಪ್ಪತ್ತು ಕಂಬಗಳನ್ನು ಆಧರಿಸಿ ನಿಂತ ಮಹಾಮಂಟಪ, ಉದ್ದದ ಭಾಗದಲ್ಲಿ ಎಂಟೆಂಟು ಹಾಗೂ ಮುಂಬದಿ ಮತ್ತು ಹಿಂಬದಿಗಳಲ್ಲಿ ಮೂಲೆಯ ಕಂಬಗಳ ನಡುವೆ ಇನ್ನೂ ಎರಡೆರಡು. ಮುಂಬದಿಯ ಮತ್ತು ಹಿಂಬದಿಯ ಮಧ್ಯೆ ಮೆಟ್ಟಿಲುಗಳು–ಇವು ಈ ಕೊರೆದ ಗುಹಾಲಯವನ್ನು ಬಂಡೆಯಿಂದ ಪ್ರತ್ಯೇಕಿಸಿವೆ. ಇದರ ಪೂರ್ವದ ಅಂಗಳದಲ್ಲಿ ವೃತ್ತಾಕಾರದ ಕೊರೆದ ವೇದಿಕೆ. ಬಹುಶಃ ನಂದಿಯನ್ನು ಇಲ್ಲಿ ಸ್ಥಾಪಿಸಲು ಯೋಚಿಸಲಾಗಿತ್ತೆಂದು ತೋರುತ್ತದೆ. ಮಹಾಮಂಟಪದ ಉತ್ತರಭಾಗಕ್ಕೆ ಮುಂಚಾಚಿದಂತೆ ಅಗ್ರ ಮತ್ತು ಮುಖಮಂಟಪಗಳಿವೆ, ಹೊರಗಣ ಅಗ್ರಮಂಟಪಕ್ಕಿಂತ ದೀರ್ಘವಾದದ್ದು. ಮಹಾಮಂಟಪದ ಹಿಂದಕ್ಕೆ ಸಾಂಧಾರದ ಚತುರ್ಮುಖದ ಗರ್ಭಗುಡಿ. ಒಳಗೆ ಪೀಠದ ಮೇಲೆ ದೊಡ್ಡ ಗಾತ್ರದ ಲಿಂಗ. ಗರ್ಭಗುಡಿಯ ಮುಂದೆ ನಾಲ್ಕು ಕಂಬಗಳ ಎರಡು ಸಾಲುಗಳ ನಡುವೆ ಪ್ರದಕ್ಷಿಣ ಮಂಟಪ. ಉತ್ತರದ ಮುಖಮಂಟಪದ ಪೂರ್ವಕ್ಕೆ ಕಲ್ಲಿನಲ್ಲಿ ಕೊರೆದ ಬಾಗಿಲಿಂದ ಹೋದರೆ ಪೂರ್ವದಿಕ್ಕಿನ ಒಂದು ಅಂಗಳ ಮತ್ತು ದೇವಾಲಯದ ಮುಖ್ಯದ್ವಾರವಿದೆ. ಈ ಅಂಗಳದ ದಕ್ಷಿಣಕ್ಕೆ ದುರ್ಗಾದೇವಿಯ ಒಂದು ಸಣ್ಣ ಗುಹಾಲಯವಿದೆ. ಪಶ್ಚಿಮ ದಿಕ್ಕಿನಲ್ಲಿ ಇದೇ ರೀತಿ ಕೊರೆಯಲಾದ ಬಾಗಿಲು ಆಲಯದ ಹಿಂಭಾಗಕ್ಕೆ ಒಯ್ಯುತ್ತದೆ. ಇಲ್ಲೊಂದು ಶಿವಾಲಯ. ಚೌಕಾಕಾರದ ಗರ್ಭಗುಡಿ ಮತ್ತು ಮುಂದೆ ಒಂದು ಮಂಟಪವಿರುವ ಈ ಗುಡಿಯನ್ನು ಶಿಲೆಯಲ್ಲಿ ಕೊರೆಯಲಾಗಿದೆ. ಈ ಗುಡಿ ಬಹುಶಃ ಏಳನೆಯ ಶತಮಾನದ ಪೂರ್ವಾರ್ಧದಲ್ಲಿ ಅಸ್ತಿತ್ವಕ್ಕೆ ಬಂದಿರಬಹುದು. ಒಟ್ಟು ಏಳು ಗುಹೆಗಳಿರುವ ಎಲಿಫೆಂಟಾದಲ್ಲಿ ಮಧ್ಯದ ಗುಹೆಯಲ್ಲಿ ಖ್ಯಾತಿವೆತ್ತ ಮಹೇಶಮೂರ್ತಿ ಇದೆ. ನಟರಾಜ, ಗಜಾಸುರಸಂಹಾರಿ, ಅರ್ಧನಾರೀಶ್ವರ, ಗಂಗಾಧರ ಮುಂತಾದ ಇತರ ಶೈವ ದೇವತೆಗಳ ವಿಗ್ರಹಗಳೂ ಇಲ್ಲಿವೆ.

ಮುಂಬಯಿ ಸಮೀಪದ ಜೋಗೇಶ್ವರಿಯಲ್ಲಿರುವ ಗುಹಾಲಯ ಎಲಿಫಾಂಟಾದ ಗುಹಾಲಯಕ್ಕಿಂತ ಹೆಚ್ಚು ವಿಶಾಲವಾದುದು. ಮೇಲೆದ್ದು ಕಾಣಿಸಿಕೊಂಡ ಬಂಡೆಯ ಮೂರು ಕಡೆಗಳಲ್ಲಿ ಗುರುತಿಸಿದಂತೆ ಸೀಳಿಕೊಂಡು ಹೀಗೆ ಬೇರ್ಪಡಿಸಿದ ಬಂಡೆಯಲ್ಲಿ ಗುಹೆಯನ್ನು ಕೊರೆಯಲಾಗಿದೆ. ಆಯಾಕಾರದ ಈ ಬಂಡೆಯ ಪೂರ್ವದ ನೀಳಭಾಗದಲ್ಲಿ ಮಹಾದ್ವಾರ. ಎರಡು ಪಕ್ಕಗಳಲ್ಲೂ ಮಂಟಪಗಳು. ಇವುಗಳೊಂದರಲ್ಲಿ ಗಣೇಶನನ್ನು ಸ್ಥಾಪಿಸಲಾಗಿದೆ. ಮಧ್ಯದ ದ್ವಾರದಿಂದ ಒಳಹೊಕ್ಕರೆ ತೆರೆದ ಅಂಗಳ. ಪೂರ್ವದಲ್ಲಿ ಸ್ವಲ್ಪ ಎತ್ತರದಲ್ಲಿ ಅಗ್ರಮಂಟಪ. ಚೌಕಾಕಾರದ ಚತುರ್ಮುಖದ ಮುಖ್ಯ ಗುಡಿಯ ಸುತ್ತಲೂ ಕಂಬಗಳುಳ್ಳ ಹಾದಿ. ಒಂದೊಂದು ಬದಿಯಲ್ಲೂ ಆರಾರು ಕಂಬಗಳು. ಪಶ್ಚಿಮದ ಕಡೆಯಲ್ಲಿಯೂ ಇಂತಹುದೇ ಅಗ್ರಮಂಟಪ. ದಕ್ಷಿಣದ ಕಡೆ ಮುಖ್ಯ ಮಂಟಪಕ್ಕೆ ಹೋಗಲು ಮೂರು ಬಾಗಿಲುಗಳು. ಇದನ್ನು ದಾಟಿದರೆ ಕಿರಿದಾದ ತೆರೆದ ಅಂಗಳ. ಇದರ ಹಿಂಬದಿಗೆ ಬಂಡೆಯಲ್ಲಿ ಕೊರೆದ ಗುಡಿಗಳು. ಇವುಗಳಲ್ಲೊಂದು ಶಿವನಿಗಾಗಿ ಕೊರೆದ ಗುಡಿ. ಹೆಣ್ಣುಗೊಂಬೆಯಾಕಾರದ ಮುಖಭಾಗದ ಈ ಗುಡಿಯಲ್ಲಿನ ಕಂಬಗಳು ಗಮನಾರ್ಹವಾಗಿವೆ.

ಗೋವೆಯ ಅರ್ವಾಲೆಮ್‌ನಲ್ಲಿ ಎರಡು ಗುಹಾಲಯಗಳು ಅಕ್ಕಪಕ್ಕದಲ್ಲಿವೆ. ಪಶ್ಚಿಮ ತೀರದಲ್ಲಿ ಜಂಬುಮಣ್ಣಿನಲ್ಲಿ ಕೊರೆದ ಅಪರೂಪದ ಗುಹೆಗಳಿವು. ದಕ್ಷಿಣದಲ್ಲಿನ ಗುಹೆಯಲ್ಲಿ ಮೂರು ಗರ್ಭಗುಡಿಗಳಿವೆ. ಮೂರರಲ್ಲೂ ಕಲ್ಲಿನಲ್ಲಿ ಕೊರೆದ ಪೀಠದ ಮೇಲೆ ಲಿಂಗಗಳಿವೆ. ಆದರೆ ಇವು ಮೂರು ಬೇರೆ ಬೇರೆ ದೇವರನ್ನು (ತ್ರಿಮೂರ್ತಿಗಳನ್ನು) ಪ್ರತಿನಿಧಿಸುತ್ತವೆ. ಮಧ್ಯದಲ್ಲಿರುವುದು ಶಿವಲಿಂಗ, ಎರಡೂ ಕಡೆಗಳಲ್ಲಿ ಸೂರ್ಯ ಮತ್ತು ಕಾರ್ತಿಕೇಯರನ್ನು ರೂಪಿಸುವ ವಿಗ್ರಹಗಳು. ಇವುಗಳೆರಡರಲ್ಲೂ ಬುಡದ ಭಾಗ ಲಿಂಗದ ಕಾಂಡ. ಒಂದರಲ್ಲಿ ಇದರ ಮೇಲೆ ಸೂರ್ಯನನ್ನು ಪ್ರತಿನಿಧಿಸುವ ಮಂಡಲ. ಇನ್ನೊಂದರಲ್ಲಿ ಚಪ್ಪಟೆಯಾದ ಭರ್ಜಿಯ ಮೇಲ್ಭಾಗ–ಶಕ್ತಿ. ಇದು ಕಾರ್ತಿಕೇಯನ ಚಿಹ್ನೆ. ತ್ರಿಮೂರ್ತಿ, ಸೂರ್ಯಲಿಂಗದ ಕೆಳಗೆ ಶಾಸನವೊಂದಿದ್ದು ಅದು ಸ್ಪಷ್ಟವಾಗಿ ಆ ವಿಗ್ರಹ ಸೂರ್ಯನದೆಂಬುದನ್ನು ಸೂಚಿಸುತ್ತದೆ.

ಮಹಾರಾಷ್ಟ್ರದ ಈ ಆಲಯಗಳು ಚಾಲುಕ್ಯರ, ರಾಷ್ಟ್ರಕೂಟರ ಕಾಲಕ್ಕೆ ಸೇರಿದವುಗಳು. ಇವುಗಳಲ್ಲಿ ಈ ಮೊದಲೇ ಶತಮಾನಗಳಿಂದ ಬಂದಿದ್ದ ಬೌದ್ಧಾಲಯಗಳನ್ನು ನಿರ್ಮಿಸುವ ಕಲೆಯ ಪ್ರಭಾವವನ್ನು ಕಂಡರೂ ಚಾಲುಕ್ಯರು ತಮ್ಮ ರಾಜ್ಯದಲ್ಲಿ ಬೆಳೆಸಿಕೊಂಡ ಶೈಲಿಯನ್ನು ಇಲ್ಲಿ ಅಳವಡಿಸಿಕೊಂಡರು. ಗುಹಾಲಯಗಳ ಸಂಪ್ರದಾಯ ಬಹುಮಟ್ಟಿಗೆ ಬಾದಾಮಿಯ ಚಾಲುಕ್ಯರೊಂದಿಗೆ ಕರ್ನಾಟಕದಲ್ಲಿ ಕೊನೆಗೊಂಡಿತೆನ್ನಬಹುದಾದರೂ ಇಲ್ಲಿ ಆ ಸಂಪ್ರದಾಯ ರಾಷ್ಟ್ರಕೂಟರ ಕಾಲದಲ್ಲೂ ಮುಂದುವರಿದಿದ್ದನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ಅದು ಹುರುಪುಗೊಂಡಿತು. ಎಂತಲೇ ಎಲ್ಲೋರಾದ ಕೈಲಾಸ, ಇಂದ್ರಸಭೆಗಳು, ಎಲಿಫಾಂಟಾ, ಜೋಗೇಶ್ವರಿಗಳಲ್ಲಿನ ಗುಹೆಗಳ ರಚನೆ ಹಿರಿಯ ಗಾತ್ರದ್ದಾಗಿತ್ತು. ಕ್ರಮೇಣ ದಕ್ಖನ್ನಿನ ದಕ್ಷಿಣದಲ್ಲಿ ಆಳಿದ ಕರ್ನಾಟಕದ ಅರಸರು ಗುಹಾಲಯಗಳನ್ನು ಕೊರೆಯುವುದನ್ನು ಕೈಬಿಟ್ಟು ಇಟ್ಟಿಗೆ ಅಥವಾ ಮರದ ಮಾದರಿಗಳಲ್ಲಿ ಕಟ್ಟಲಾದ ಆಲಯಗಳನ್ನು ಕಲ್ಲಿನಲ್ಲಿ ಕಟ್ಟುವ ಪದ್ಧತಿಯನ್ನು ಆರಂಭಿಸಿದರು. ಎಂತಲೇ ಕರ್ನಾಟಕದಲ್ಲಿಯೂ, ಹೊರಗೂ ಇವರ ಆಳ್ವಿಕೆಯ ಕಾಲದ ದೇವಾಲಯಗಳು ಬಹಳ ಕಡಿಮೆ. ಇವರದೆಂದು ಹೇಳಲಾದ ಕೆಲವು ದೇವಾಲಯಗಳು ಸಹ ಕಿರಿಯ ಪ್ರಮಾಣದ್ದಾಗಿದ್ದು ಚಾಲುಕ್ಯರ ಕಟ್ಟಡಗಳ ಆಡಂಬರಗಳೂ ಅವುಗಳಲ್ಲಿಲ್ಲ.

ಮಹಾರಾಷ್ಟ್ರದ ಈ ಗುಹಾಲಯಗಳಲ್ಲಿ ಮೊದಲಿನ ಬೌದ್ಧಾಲಯಗಳಿಗೆ ಭಿನ್ನವಾಗಿ ಕಂಡುಬಂದ ಬೆಳವಣಿಗೆಗಳನ್ನು ಗುರುತಿಸಬಹುದು. ಇವುಗಳ ಮಾಳಿಗೆಯ ಎತ್ತರ ಒಂದೇ ಆಗಿದ್ದರೂ ಅಕ್ಷದಲ್ಲಿ ಕಟ್ಟಿದ ಮಂಟಪಗಳ ನೆಲಮಟ್ಟ ಒಂದಕ್ಕಿಂತ ಒಂದರಲ್ಲಿ ಹೆಚ್ಚಿದೆ. ಗರ್ಭಗುಡಿಯ ನೆಲಮಟ್ಟ ಎಲ್ಲಕ್ಕೂ ಹೆಚ್ಚಿನದು. ವಿಹಾರ, ಚೈತ್ಯಗಳ ಶೈಲಿಯಂತೆ ಗರ್ಭಗೃಹ ಮತ್ತು ಮುಂದೆ ಕಂಬಗಳ ಹಜಾರವನ್ನೂ ಆರಂಭದ ದೆಸೆಯಲ್ಲಿ ಕಾಣಬಹುದಾದರೂ ಕ್ರಮೇಣ ಹಿಂಬದಿಯಲ್ಲಿ ಪಕ್ಕಗಳಲ್ಲಿ ಮೂರು ಗರ್ಭಗುಡಿಗಳು, ಒಂದೊಂದರ ಮುಂಭಾಗದಲ್ಲೂ ಕಂಬಗಳಿರುವ ಅರ್ಧಮಂಟಪ, ಇದರ ಮುಂದೆ ಎಲ್ಲಕ್ಕೂ ಸೇರಿದಂತೆ ವಿಶಾಲವಾದ ಹಜಾರ (ಮಹಾಮಂಟಪ), ಕಿರಿದಾದ ಮುಖಮಂಟಪಗಳನ್ನು ಹೊಂದಿರುವುದು ಭಿನ್ನತೆಯ ಒಂದು ಲಕ್ಷಣ. ಇನ್ನು ಕೆಲವುದರಲ್ಲಿ ಹಿಂದಿನ ಗರ್ಭಗುಡಿ ಸಾಂಧಾರ ಅಥವಾ ನಿರಂಧಾರವಾಗಿದ್ದು ಇಕ್ಕೆಡೆಗಳಲ್ಲಿ ಸಪ್ತಮಾತೃಕೆಯರ ಅಥವಾ ಇತರ ದೇವತೆಗಳ ಗುಡಿಗಳು ಪ್ರತ್ಯೇಕವಾಗಿದ್ದು ಮೂಲಗುಡಿಯ ಮುಂದೆ ಅರ್ಧಮಂಟಪ, ಮಹಾಮಂಟಪಗಳು, ಇಕ್ಕೆಡೆಗಳ ಗೋಡೆಗಳಲ್ಲಿ ದೊಡ್ಡಳತೆಯ ಎತ್ತರದ ಮೂರ್ತಿಶಿಲ್ಪಗಳು, ಒಮ್ಮೊಮ್ಮೆ ನಂದಿಮಂಟಪ ಸಹ ಆಲಯದ ಮುಂದೆ ಇರುವುದುಂಟು. ಸರ್ವತೋಭದ್ರ ಗುಡಿ ಇನ್ನೊಂದು ಲಕ್ಷಣ. ಇಂತಹವುಗಳಲ್ಲಿ ಗರ್ಭಗುಡಿಯ ನಾಲ್ಕು ಕಡೆಗಳಲ್ಲೂ ದ್ವಾರಗಳಿದ್ದು ಪ್ರದಕ್ಷಿಣಾಪಥವಿರುತ್ತದೆ. ಇವು ಚಾಲುಕ್ಯಶೈಲಿಯಲ್ಲಿ ಕಂಡುಬಂದ ಆಲಯಗಳ ಲಕ್ಷಣಗಳೇ. ಇವುಗಳನ್ನು ರಾಷ್ಟ್ರಕೂಟರ ಕಾಲದಲ್ಲಿ ಸೂಕ್ತ ಕಂಡಂತೆ ಬದಲಾಯಿಸಿಕೊಂಡು ಅಳವಡಿಸಿಕೊಳ್ಳಲಾಯಿತು.

ಚಾಲುಕ್ಯರ ಗುಡಿಗಳಲ್ಲಿ ಕಂಬಗಳು ಸ್ಥೂಲವಾಗಿದ್ದ ಕಾರಣ ಅವುಗಳಲ್ಲಿ ಶಿಲ್ಪಗಳನ್ನು ಅರೆಗೋಳವಿಯಾಕಾರದ ಅಲಂಕರಣಗಳನ್ನು ಕೆತ್ತುವುದರ ಮೂಲಕ ಆ ಸ್ಥೂಲತೆ ಗೋಚರಿಸದಂತೆ ಯತ್ನಿಸಲಾಗಿದೆ. ಅಲ್ಲದೆ ಕಂಬಗಳ ಬೋದಿಗೆಯ ಮುಂಚಾಚಿದ ಬಾಗಿದ ಭಾಗದಲ್ಲಿ ಸುರುಳಿಯ ಅಲಂಕಾರಗಳನ್ನು ಕಾಣುತ್ತೇವೆ. ಆದರೆ ಮಹಾರಾಷ್ಟ್ರದಲ್ಲಿನ ರಾಷ್ಟ್ರಕೂಟರ ಆಲಯಗಳಲ್ಲಿ ಮೇಲ್ಭಾಗದ ತುದಿ ಸ್ವಲ್ಪಮಟ್ಟಿಗೆ ಸುತ್ತಿಕೊಂಡಂತಿದ್ದು ಇತರ ಅಲಂಕರಣಗಳಿಲ್ಲ.

ಗರ್ಭಗುಡಿಯ ದ್ವಾರಬಂಧಗಳೂ ಗಮನಾರ್ಹವೇ. ಚಾಲುಕ್ಯರ ಕಾಲದ ದ್ವಾರಬಂಧಗಳಿಗೆ ಪಕ್ಕದ ಚೌಕಟ್ಟುಗಳಿಗೆ ಮೂರು ಮತ್ತು ಹೆಚ್ಚಿನ ಶಾಖೆಗಳು. ಮೇಲಿನ ಚೌಕಟ್ಟಿನಲ್ಲಿ ನಡುವೆ ಲಲಾಟಬಿಂಬ. ಪಕ್ಕದ ಚೌಕಟ್ಟಿನ ಒಳಶಾಖೆಗಳಲ್ಲಿ ಗಂಗೆ–ಯಮುನೆಯರ ಉಬ್ಬು ಶಿಲ್ಪಗಳು. ಕರ್ನಾಟಕದಲ್ಲಿ ಚಾಲುಕ್ಯ ಗುಹಾಲಯಗಳಲ್ಲಿ ದ್ವಾರಪಾಲಕರ ವಿಗ್ರಹಗಳೂ ಇದೇ ಅಂಕಣದಲ್ಲಿರುತ್ತವೆ. ಹಿರಿಯ ಪ್ರಮಾಣದ ದ್ವಾರಪಾಲಕರ ವಿಗ್ರಹಗಳು ಮುಖಮಂಟಪದಲ್ಲಿ ಆಲಯದ ದ್ವಾರದ ಇಕ್ಕೆಡೆಗಳಲ್ಲಿ

ಇರುತ್ತವೆ. ಆದರೆ ಮಹಾರಾಷ್ಟ್ರದ ಸಮಕಾಲೀನ ಗುಹಾಲಯಗಳಲ್ಲಿ ಗರ್ಭಗುಡಿಯ ಎರಡೂ ಬದಿಗಳಲ್ಲಿಯೇ ಮನುಷ್ಯಾಕಾರಕ್ಕಿಂತಲೂ ಸ್ವಲ್ಪ ಕಿರಿದಾದ ದ್ವಾರಪಾಲಕರ ವಿಗ್ರಹಗಳಿರುತ್ತವೆ. ಎಲಿಫಾಂಟಾ, ಜೋಗೇಶ್ವರಿ ಮುಂತಾದ ಕೆಲವು ಕಡೆಗಳಲ್ಲಿ ಇವು ಮನುಷ್ಯಾಕಾರಕ್ಕಿಂತಲೂ ಎತ್ತರವಾಗಿದ್ದು ಮೇಲ್ಛಾವಣಿಗೆ ತಗಲುವಂತಹ ವಿಗ್ರಹಗಳಾಗಿರುತ್ತವೆ. ಮಂಟಪದ ಛಾವಣಿ (ಭುವನೇಶ್ವರಿ)ಯಲ್ಲಿ ದೊಡ್ಡ ಕಮಲದ ಅಥವಾ ಬಳ್ಳಿಗಳ ಚಿತ್ರಗಳಿರುತ್ತವೆ. ಕ್ರಮೇಣ ಇಲ್ಲಿ ಸುತ್ತಲೂ ಅಷ್ಟದಿಕ್ಪಾಲಕರನ್ನೂ ನಡುವೆ ಶಿವ ಅಥವಾ ವಿಷ್ಣುವಿನ ಅಥವಾ ಆ ದೇವಾಲಯ ಯಾವ ದೇವತೆಗಾಗಿ ನಿರ್ಮಾಣವಾಗಿದೆಯೋ ಆ ದೇವರ ವಿಗ್ರಹವನ್ನು ಹೊಂದಿರುತ್ತದೆ. ಗರ್ಭಗುಡಿಯಲ್ಲಿ ಸಾಮಾನ್ಯವಾಗಿ ಕೊರೆದ ವಿಗ್ರಹವೋ ಅಥವಾ ಮೂಲಶಿಲೆಯಲ್ಲಿಯೇ ಕೊರೆದ ಪೀಠ ಮತ್ತು ಅದಕ್ಕೆ ಹೊಂದಿಸಿದ ಶಿವಲಿಂಗವೋ ಇರುತ್ತಿತ್ತು. ಚೌಕಾಕಾರದ ಪೀಠದ ಬದಿಗೆ ಅಭಿಷೇಕದ ನೀರು ಹರಿದು ಹೋಗಲು ಮುಂಚಾಚಿದ ಧಾರೆ. ಈ ನೀರು ತುಂಬಿಕೊಳ್ಳಲು ಅನುಕೂಲಿಸುವಂತೆ ಧಾರೆಯ ಕೆಳಗೆ ಒಂದು ಸಣ್ಣ ತೊಟ್ಟಿ.

ಚಾಲುಕ್ಯ ಶೈಲಿಯ ಈ ಕೆಲವು ಲಕ್ಷಣಗಳನ್ನು ಮಹಾರಾಷ್ಟ್ರದಲ್ಲಿ ಮೇಲೆ ವಿವರಿಸಿದ ಆಲಯಗಳಲ್ಲಿ ಕಾಣುವುದಲ್ಲದೆ, ತಮಿಳುನಾಡಿನಲ್ಲಿ ಪಾಂಡ್ಯರ ಆಳ್ವಿಕೆಗೆ ಸೇರಿದ ಪ್ರದೇಶದಲ್ಲಿನ ಆಲಯಗಳಲ್ಲೂ ನೋಡಬಹುದಾಗಿದೆ. ಪಲ್ಲವರ ಅಧೀನದಲ್ಲಿದ್ದ ತೊಂಡೈ ಮಂಡಲದಲ್ಲಿನ ಸಮಕಾಲೀನ ದೇವಾಲಯಗಳಲ್ಲಿ ಇವುಗಳು ಕಾಣಿಸಿಕೊಂಡಿಲ್ಲ. ಚಾಲುಕ್ಯಶೈಲಿಯ ಪ್ರಭಾವ ಗಂಗಮಂಡಲ (ಗಂಗವಾಡಿ)ದ ಮೂಲಕ ತಮಿಳುನಾಡಿನ ದಕ್ಷಿಣಭಾಗಕ್ಕೆ ಹರಿದಿರಬೇಕು. ಪಲ್ಲವರ ಪ್ರಾಚೀನ ಗುಡಿಗಳಲ್ಲಿ ಗರ್ಭಗೃಹದಲ್ಲಿ ಲಿಂಗಗಳಾಗಲೀ ಲಿಂಗಪೀಠಗಳಾಗಲೀ ಇರುವುದಿಲ್ಲ. ಬದಲು ಹಿಂಬದಿಯ ಗೋಡೆಯಲ್ಲಿ ಕೊರೆದ ಅರೆಯುಬ್ಬು ವಿಗ್ರಹ ಅಥವಾ ರೇಖಾಮೂರ್ತಿಯ ಅಥವಾ ದೇವತೆಯ ವರ್ಣಚಿತ್ರವನ್ನು ಅಳವಡಿಸಲಾಗುತ್ತಿತ್ತು. ಆದರೆ ಸಮಕಾಲೀನ ಪಾಂಡ್ಯರ ಹಲವಾರು ದೇವಾಲಯಗಳಲ್ಲಿ ಇದಕ್ಕೆ ಬದಲು ಕಲ್ಲಿನಲ್ಲಿಯೇ ಕೊರೆದ ಚೌಕಾಕಾರದ ಲಿಂಗಪೀಠ ಮತ್ತು ಲಿಂಗಗಳನ್ನು ಕಾಣುತ್ತೇವೆ. ಅಲ್ಲದೆ ಈ ದೇವಾಲಯಗಳಲ್ಲಿ ಚಾಲುಕ್ಯರ ದೇವಾಲಯಗಳಲ್ಲಿದ್ದಂತೆ ಮುಂದಿನ ಮಂಟಪದಲ್ಲಿನ ಕಂಬಗಳು ಸ್ಥೂಲವಾಗಿದ್ದು ಬೋದಿಗೆಯ ಮಂಚಾಚಿದ ಭಾಗದಲ್ಲಿ ಒಳಮುಖವಾಗಿರುವ ಸುರುಳಿಯ ಅಲಂಕಾರಗಳನ್ನು ಕಾಣುತ್ತೇವೆ.

ಚಾಲುಕ್ಯರ ಆಲಯಗಳಲ್ಲಿ ನಾವು ಕಾಣುವ ಇನ್ನೊಂದು ವಿಶೇಷ ಅಲ್ಲಿನ ಮೂರ್ತಿಶಿಲ್ಪಗಳು. ಎಲ್ಲೋರದಲ್ಲಿ ಗಣೇಶ, ಕಾರ್ತಿಕೇಯ, ಸರಸ್ವತಿ, ಗಜಲಕ್ಷ್ಮಿ, ಸಪ್ತಮಾತೃಕೆಯರು ಹಾಗೂ ಶೈವಪುರಾಣಗಳಲ್ಲಿ ಘಟನೆಗಳನ್ನವಲಂಬಿಸಿದ ಚಿತ್ರಫಲಕಗಳು, ಪಾರ್ವತಿಯ ತಪಸ್ಸು, ಕೈಲಾಸ ತೋಲನ, ಶಿವತಾಂಡವ ಇತ್ಯಾದಿಗಳು, ಕೃಷ್ಣ–ಬಲರಾಮ, ಸುಭದ್ರ, ಸೂರ್ಯ, ಅನಂತಶಾಯಿ ಮುಂತಾದ ವಿಗ್ರಹಗಳೂ ಕಾಣಿಸಿವೆ. ರಾಷ್ಟ್ರಕೂಟರ ಆಲಯಗಳಲ್ಲಿ ದುರ್ಗಿ, ಮಹಿಷಮರ್ದಿನಿ, ಕಲ್ಯಾಣ ಮಂದಿರ, ಕೈಲಾಸದ ದೃಶ್ಯ, ಅರ್ಧನಾರೀ, ಗೋವರ್ಧನಧಾರಿ, ಕಾಳಿಯಮರ್ದನ, ವರಾಹ, ನಾರಸಿಂಹ, ಲಕ್ಷ್ಮಿ, ಗಣೇಶ ಇತ್ಯಾದಿಗಳನ್ನು ಕಾಣಬಹುದು.

ಇಲ್ಲಿ ಒಂದು ವಿಷಯ ಗಮನಾರ್ಹ. ಗಣೇಶ, ಸಪ್ತಮಾತೃಕೆಯರ ವಿಗ್ರಹಗಳನ್ನು ಆರಂಭದಲ್ಲಿ ನಾವು ಕರ್ನಾಟಕದಲ್ಲಿ ಮತ್ತು ಚಾಲುಕ್ಯಕ ಆಳ್ವಿಕೆಯ ಪ್ರದೇಶಗಳಲ್ಲಿ ಕಾಣುತ್ತೇವೆ. ಆದರೆ ತಮಿಳುನಾಡಿನ ತೊಂಡೈಮಂಡಲಮ್‌ನಲ್ಲಿ ಗಣಪತಿ ಮತ್ತು ಸಪ್ತಮಾತೃಕೆಯರ ವಿಗ್ರಹಗಳು ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಕಂಡುಬರುವುದಿಲ್ಲ. ಪಾಂಡ್ಯರ ನಾಡಿನಲ್ಲಿ ಈ ವಿಗ್ರಹಗಳು ಕಾಣಿಸಿಕೊಂಡಿವೆ. ಈ ವಿಗ್ರಹಗಳ ಆರಾಧನೆ ಕರ್ನಾಟಕದಿಂದ ತಮಿಳುನಾಡಿಗೆ ಹೋದುದಾಗಿ ತಜ್ಞರು ಊಹಿಸಿದ್ದಾರೆ. ತಿರುಚಿನಾಪಳ್ಳಿಯ ಸಮೀಪದಲ್ಲಿ ಒಂದು ಗಣೇಶಾಲಯವಿದೆ. ಇದರಲ್ಲಿನ ಮೂರ್ತಿ ಮೂಲತಃ ಚಾಲುಕ್ಯರ ರಾಜಧಾನಿಯಾದ ಬಾದಾಮಿ (ವಾತಾಪಿ)ಯಲ್ಲಿತ್ತೆಂದೂ, ಪಲ್ಲವ ಇಮ್ಮಡಿ ನರಸಿಂಹವರ್ಮ ಬಾದಾಮಿಯನ್ನು ಮುತ್ತಿದಾಗ ಅಲ್ಲಿನ ಈ ವಿಗ್ರಹವನ್ನು ಕೊಂಡೊಯ್ದನೆಂದೂ ಒಂದು ಪ್ರತೀತಿ ರೂಢಿಯಲ್ಲಿದೆ. ಕಳೆದ ಶತಮಾನದ ಶ್ರೇಷ್ಠ ಸಂಗೀತಜ್ಞರಾದ ಮುತ್ತುಸ್ವಾಮಿ ದೀಕ್ಷಿತರು ಈ ಪ್ರತೀತಿಯನ್ನಾಧರಿಸಿ ಆ ದೇವರನ್ನು ಕುರಿತು 'ವಾತಾಪಿಗಣಪತಿಂ ಭಜೇಹಂ' ಎಂಬ ಕೀರ್ತನೆಯನ್ನು ರಚಿಸಿದ್ದಾರೆ ಎಂಬುದೊಂದು ನಂಬಿಕೆ. ಬಾದಾಮಿಯ ಕೆಳಗಣ ಶಿವಾಲಯ ಮೂಲತಃ ಗಣೇಶಾಲಯವಾಗಿದ್ದು ಇದರಲ್ಲಿದ್ದ ಮೂರ್ತಿಯನ್ನೇ ಪಲ್ಲವ ಅರಸ ತಮಿಳುನಾಡಿಗೆ ಒಯ್ದಿರಬಹುದೆಂದೂ ಡಾ. ಅ. ಸುಂದರ ಅವರು ಊಹಿಸಿದ್ದಾರೆ.

□

ದೇವಾಲಯ ವಾಸ್ತುಶಿಲ್ಪ –ಆರಂಭ ಕಾಲ

ದೇವಾಲಯ ವಾಸ್ತು–ಶೈಲಿಗಳು

ಹಿಂದಿನ ಅಧ್ಯಾಯದಲ್ಲಿ ಕರ್ನಾಟಕದ ಗುಹಾವಾಸ್ತುಶಿಲ್ಪದ ಪರಿಚಯ ಮಾಡಿಕೊಂಡೆವು. ದೇವಾಲಯದ ಕಟ್ಟಡಗಳನ್ನು ಕಟ್ಟುವ ಮೊದಲು ಗುಹೆಗಳನ್ನು ಕೊರೆಯಲಾಗುತ್ತಿತ್ತು. ಕ್ರಮೇಣ ದೇವರಿಗೆ ಪ್ರತ್ಯೇಕವಾದ ಆಲಯವನ್ನು ಕಟ್ಟುವ ಆಲೋಚನೆ ಉಂಟಾದಾಗ ದೇವಾಲಯಗಳ ಕಟ್ಟುವಿಕೆಯಲ್ಲಿ ಭಿನ್ನಭಿನ್ನ ಶೈಲಿಗಳು ಕಾಣಿಸಿಕೊಂಡುವು. ಈ ಮೊದಲೇ ಹೇಳಿದಂತೆ ವಾಸ್ತುಶಿಲ್ಪ ಗ್ರಂಥಗಳಲ್ಲಿ ವಿವರಿಸಿದುದನ್ನು ಅನುಸರಿಸಿ ಈ ಆಲಯಗಳನ್ನು ನಿರ್ಮಿಸಲಾಯಿತೆಂದು ಭಾವಿಸಬೇಕಾಗುದಿಲ್ಲ. ಆ ಗ್ರಂಥಗಳಲ್ಲಿದ್ದಂತೆಯೇ ಚಾಚೂತಪ್ಪದೆ ಎಲ್ಲ ವಿವರಗಳನ್ನೂ ಒಳಗೊಂಡ ನಿಯಮಗಳನ್ನು ಪಾಲಿಸಲಾಯಿತೆಂದೂ ಇಲ್ಲ. ಹಲವೊಮ್ಮೆ ವಾಸ್ತು ಶಿಲ್ಪ ಗ್ರಂಥಗಳಲ್ಲಿ ಆ ಮೊದಲೇ ಕಟ್ಟಲ್ಪಟ್ಟ ಕಟ್ಟಡಗಳ ವಿವರಗಳನ್ನು ನಿಯಮಗಳೆಂದು ರೂಪಿಸಲಾಯಿತೆಂದೂ ಹೇಳಬಹುದು.

ಈ ದೇವಾಲಯಗಳನ್ನು ಅಂದಿನ ಸಮಕಾಲೀನ ಅರಸರೋ, ಮಾಂಡಲಿಕರೋ ಶ್ರೀಮಂತ ಪ್ರಜೆಗಳೋ ಆಯಾ ರಾಜ್ಯದೊಳಗೆ ಕಟ್ಟಿಸಿದರಾದ ಕಾರಣ ಆ ಅರಸರ, ಮಾಂಡಲಿಕರ ಮನೆತನದ ಹೆಸರನ್ನೇ ಆ ಕಟ್ಟಡಗಳ ಶೈಲಿಗೂ ಇಡಲಾಗಿದೆ. ಉದಾ: ಬಾದಾಮಿ ಚಾಲುಕ್ಯಶೈಲಿ, ನೊಳಂಬ ಶೈಲಿ, ಕದಂಬ ಶೈಲಿ, ಗಂಗರ ಶೈಲಿ ಇತ್ಯಾದಿ. ಆದರೆ ಇಂತಹ ಶೈಲಿಗಳು ಒಂದಕ್ಕೊಂದು ಸಂಬಂಧವಿಲ್ಲದ, ಒಂದರ ಮೇಲೊಂದು ಪ್ರಭಾವ ಬೀರದ ಶೈಲಿಗಳಲ್ಲ. ಆದುದರಿಂದ ಕರ್ನಾಟಕದ ವಾಸ್ತುಶಿಲ್ಪ ಅಧ್ಯಯನ ಮಾಡುವ ಈ ಸಂದರ್ಭದಲ್ಲಿ ಈ ಎಲ್ಲ ಶೈಲಿಗಳನ್ನೂ ಪ್ರತ್ಯೇಕವಾಗಿ ಪರಿಶೀಲಿಸಿದರೂ ಇಲ್ಲಿ ವಾಸ್ತುಶಿಲ್ಪದ ಆರಂಭಕಾಲ, ಉಚ್ಛ್ರಾಯಕಾಲ, ಅವನತಿಯ ಕಾಲ ಎಂದು ವಾಸ್ತುಶಿಲ್ಪದ ಇತಿಹಾಸವನ್ನು ನಿರೂಪಿಸಲಾಗಿದೆ.

ಕರ್ನಾಟಕದಲ್ಲಿ ದೇವಾಲಯ ವಾಸ್ತು–ಆರಂಭ ಕಾಲ

ಕರ್ನಾಟಕದ ಉತ್ತರಭಾಗದ ಚಿತ್ರದುರ್ಗ–ಬಳ್ಳಾರಿ–ರಾಯಚೂರು ಹಾಗೂ ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಗಳಲ್ಲಿ ಮೌರ್ಯರ ಅಶೋಕನ ಶಾಸನಗಳು ಲಭಿಸಿದ್ದು ಈ ಪ್ರದೇಶಗಳೆಲ್ಲವೂ ಮೌರ್ಯ ಸಾಮ್ರಾಜ್ಯದ ಭಾಗಗಳಾಗಿದ್ದುವೆಂದು ನಿಸ್ಸಂದೇಹವಾಗಿ ಹೇಳಬಹುದು. ಆದರೆ ಕರ್ನಾಟಕದಲ್ಲಿ ಮೌರ್ಯರ ಕಾಲದ ಯಾವುದೇ ಕಟ್ಟಡಗಳ ಅಥವಾ ಶಿಲ್ಪಗಳ ಅವಶೇಷಗಳೂ ಲಭ್ಯವಾಗಿಲ್ಲ. ಮೌರ್ಯರ ಉತ್ತರಾಧಿಕಾರಿಗಳು ಸಾತವಾಹನರು. ಇವರು ಹಲವಾರು ಬೌದ್ಧ ಸ್ತೂಪಗಳ ನಿರ್ಮಾತೃಗಳು. ಆದರೆ ಕರ್ನಾಟಕದಲ್ಲಿ ಸನ್ನತಿಯನ್ನು ಹೊರತುಪಡಿಸಿದರೆ ಅನ್ಯತ್ರ ಇವರ ಕಟ್ಟಡಗಳ ಅವಶೇಷಗಳು ಲಭ್ಯವಾಗಿಲ್ಲ. ಐಹೊಳೆಯ ಗೌಡರಗುಡಿಯ ಸುತ್ತಲೂ ನಡೆಸಿದ ಉತ್ಖನನದಿಂದ ಅದರ ಕೆಳಗೆ ಬಹುಶಃ ಸಾತವಾಹನರ ಕಾಲದ್ದೆನ್ನಬಹುದಾದ ಕಟ್ಟಡದ ಅವಶೇಷಗಳು ಕಾಣಿಸಿಕೊಂಡಿವೆ. ಪಟ್ಟದಕಲ್ಲಿನ ಸಂಗಮೇಶ್ವರಾಲಯದ ಅಧಿಷ್ಠಾನದ ಕೆಳಗಡೆಯೂ ಸಾತವಾಹನರ ಕಾಲದ ಕಟ್ಟಡದ ಅವಶೇಷ ಕಾಣಿಸಿಕೊಂಡಿದೆ. ಇವು ಇಟ್ಟಿಗೆಗಳಿಂದ ಕಟ್ಟಲ್ಪಟ್ಟವುಗಳು. ಬೆಳಗಾಂಗೆ ಸೇರಿದಂತಿರುವ ವಡಗಾಂವ್ ಮಾಧವಪುರದ ಉತ್ಖನನಗಳಲ್ಲಿಯೂ ಕೆಲವು ಇಟ್ಟಿಗೆಯ ಕಟ್ಟಡಗಳು ಕಂಡುಬಂದುವು. ಆದರೆ ಅದು ಯಾವುದೇ ದೇವಾಲಯದ ಅವಶೇಷವೆಂದು ಹೇಳಲಾಗದು. ಇನ್ನು ಸನ್ನತಿ. ಭೀಮಾನದಿಯಿಂದ ಆವೃತವಾದ ಈ ಸ್ಥಳ ಅತಿಪ್ರಾಚೀನ ಕಾಲದಿಂದಲೂ ಜನವಸತಿಯುಳ್ಳ ಗ್ರಾಮ. ಸಾತವಾಹನರ ಕಾಲದಲ್ಲಿ ಇದೊಂದು ಬೌದ್ಧಕ್ಷೇತ್ರವಾಗಿದ್ದು ಇಲ್ಲೊಂದು ಸ್ತೂಪವನ್ನು ಕಟ್ಟಲಾಗಿತ್ತು. ಸುಮಾರು ಮೂರು ಮೈಲಿಗಳ ಸುತ್ತಳತೆಯಲ್ಲಿ ಸಾತವಾಹನರ ಕಾಲದ್ದೆಂದು ಹೇಳಬಹುದಾದ ದೊಡ್ಡಗಾತ್ರದ ದಪ್ಪ ಇಟ್ಟಿಗೆಗಳು, ಹೊಳಪುನೀಡಿದ ಕೆಂಪು–ಕಪ್ಪು ಮಡಕೆಯ ಬೋಕಿಗಳು, ಮಣ್ಣಿನ ವಿಗ್ರಹಗಳ ಆಟದ ಸಾಮಾನುಗಳು ಇಲ್ಲಿನ ನಿವೇಶನದ ಮೇಲೆಲ್ಲಾ ಚೆಲ್ಲಾಡಿವೆ. ಸ್ತೂಪದ ಅವಶೇಷಗಳು ಎಲ್ಲೆಂದರಲ್ಲಿ ಕಾಣಸಿಗುತ್ತವೆ. ಕೆಲವು ಬೌದ್ಧಶಿಲ್ಪಗಳ ಕೆಳಗೆ, ಆಯಕ ಸ್ತಂಭಗಳಲ್ಲಿ ಬ್ರಾಹ್ಮೀಲಿಪಿಯ ಶಾಸನಗಳೂ ಕಂಡುಬಂದಿವೆ. ಲಭ್ಯ ಆಧಾರದ ಮೇಲೆ ಸ್ತೂಪ ವೃತ್ತಾಕಾರದ್ದಾಗಿತ್ತೆನ್ನಬಹುದು. ಸ್ತೂಪದ ಒಳಮೈ ಕಲ್ಲಿನ ಕಟ್ಟಡ. ಹೊರಮೈಗೆ ಶಿಲ್ಪಗಳನ್ನು ಕಡೆದ, ನಯಗೊಳಿಸಿದ ಚಪ್ಪಡಿಗಳನ್ನು ಜೋಡಿಸಲಾಗಿತ್ತು. ಆಯಕಸ್ತಂಭಗಳ ಅವಶೇಷಗಳು ಅಮರಾವತಿ ನಾಗಾರ್ಜುನಕೊಂಡಗಳಲ್ಲಿದ್ದಂತೆ ಅವುಗಳನ್ನೂ ಬಳಸಿರಬಹುದೆಂಬುದನ್ನು ಸೂಚಿಸುತ್ತವೆ. ಸ್ತೂಪದೊಳಗಣ ಧಾತುಗರ್ಭದ ಸಂಪುಟ ಒಡೆದುಬಿದ್ದಿದೆ. ಶಿಲ್ಪ ಫಲಕಗಳಲ್ಲಿ ಜಾತಕ ಕಥೆಗಳನ್ನೂ ಅಂದಿನ ಸಂತಸಭರಿತ ತೃಪ್ತ ಸಮಾಜದ ಚಿತ್ರಗಳನ್ನೂ

ಮೂಡಿಸಲಾಗಿದೆ. ಕಾರವಾರ ಜಿಲ್ಲೆಯ ಶಿರಸಿ ಸಮೀಪದ ಬನವಾಸಿ ಸಹ ಒಂದು ಬೌದ್ಧ ಕ್ಷೇತ್ರವಾಗಿತ್ತೆನ್ನಲು ಸಾಕಷ್ಟು ಸಾಹಿತ್ಯಕ ಆಧಾರಗಳಿವೆ. ಆದರೆ ಸ್ತೂಪದ ಅವಶೇಷಗಳು ವಿಶೇಷವಾಗಿ ಕಂಡುಬಂದಿಲ್ಲ. ಅಲ್ಲಿ ಸ್ವಲ್ಪಮಟ್ಟಿನ ಉತ್ಖನನ ಕಾರ್ಯ ಆಗಿದ್ದರೂ ಪುರಾತತ್ವ ಇಲಾಖೆ ಅದರ ವರದಿಯನ್ನು ಎರಡು ದಶಕಗಳ ನಂತರವೂ ಪ್ರಕಟಿಸದಿರುವುದು ದುರದೃಷ್ಟಕರ. ಶಿವಮೊಗ್ಗ ಜಿಲ್ಲೆಯ ತಾಳಗುಂದದ ಶಾಸನದ ಪ್ರಕಾರ ಅಲ್ಲಿನ ಪ್ರಣವೇಶ್ವರ ದೇವರನ್ನು ಸಾತವಾಹನಕುಲದ ಸಾತಕರ್ಣಿ ಮುಂತಾದವರು ಪೂಜಿಸುತ್ತಿದ್ದರು. ಈಗಿನ ದೇವಾಲಯದ ಗರ್ಭಗುಡಿಯಲ್ಲಿರುವ ಸುಮಾರು ಆರು ಅಡಿಗಳಷ್ಟು ಎತ್ತರದ ಲಿಂಗ ಬಹುಶಃ ಅಂದಿನಿಂದ ಪೂಜಿಸಲ್ಪಟ್ಟ ಶಿವಲಿಂಗವಾಗಿರಬೇಕು. ದೇವಾಲಯದ ಉಳಿದ ಭಾಗಗಳೆಲ್ಲವೂ ಜೀರ್ಣೋದ್ಧಾರಕ್ಕೊಳಗಾಗಿ ಮೊದಲಿನ ವಾಸ್ತುಶಿಲ್ಪ ಶೈಲಿ ಎಂತಹುದಾಗಿತ್ತೆಂದು ಹೇಳಲಾಗುವುದಿಲ್ಲ.

ಕದಂಬರ ಕಾಲ

ಕಾಲಾನುಪೂರ್ವಿಯಲ್ಲಿ ಕರ್ನಾಟಕದಲ್ಲಿ ನಂತರ ಆಳಿದವರು ಉತ್ತರದಲ್ಲಿ ಬನವಾಸಿಯ ಕದಂಬರು ಹಾಗೂ ದಕ್ಷಿಣದಲ್ಲಿ ತಲಕಾಡಿನ ಗಂಗರು. ಕದಂಬರು ದೇವಾಲಯಗಳನ್ನು ಕಟ್ಟಿಸಿದರೆನ್ನಲು ಅವರ ಶಾಸನಗಳಲ್ಲಿನ ಹೇಳಿಕೆಗಳೇ ಸಾಕ್ಷಿ. ತಾಳಗುಂದದ ಪ್ರಣವೇಶ್ವರಾಲಯವನ್ನು ಕುರಿತು ಮೇಲೆ ಹೇಳಿದೆ. ಕಾಕುಸ್ಥವರ್ಮ ಹಾಗೂ ಮೃಗೇಶವರ್ಮನ ಪತ್ನಿ ಪ್ರಭಾವತಿ ಬಹುಶಃ ಆ ದೇವಾಲಯದ ಜೀರ್ಣೋದ್ಧಾರ ಕಾರ್ಯದಲ್ಲಿ ತೊಡಗಿರಬೇಕು. ಬನವಾಸಿಯ ಮಧುಕೇಶ್ವರಾಲಯ ಸಹ ಕದಂಬರ ಕಾಲದಲ್ಲಿ ಕಟ್ಟಲ್ಪಟ್ಟಿರಬೇಕೆಂದು ಊಹಿಸಲಾಗಿದೆ. ಆದರೆ ಈಗಿದ್ದಂತೆ ಪ್ರಣವೇಶ್ವರ ಹಾಗೂ ಮಧುಕೇಶ್ವರಾಲಯಗಳ ಗರ್ಭಗುಡಿಗಳು ಬಹುಶಃ ಬಾದಾಮಿಯ ಚಾಲುಕ್ಯರ ಕಾಲಕ್ಕೆ ಸೇರಿದವುಗಳು. ಮೃಗೇಶವರ್ಮನು ಪಲಾಶಿಕಾ (ಈಗಿನ ಹಲಸಿ)ದಲ್ಲಿ ದೇವಾಲಯವೊಂದನ್ನು ನಿರ್ಮಿಸಿದ. ರವಿವರ್ಮನು ಗುಡ್ನಾಪುರದಲ್ಲಿ ಕಾಮಜಿನಾಲಯವನ್ನೂ ಕಲ್ಲೀಲಿಯಲ್ಲಿ ಪದ್ಮಾವತ್ಯಾಲಯವನ್ನೂ ಕಟ್ಟಿಸಿದ. ಈತನ ವೈದ್ಯ (ರಾಜವೈದ್ಯ) ನೀಲಕಂಠಮಹದೇವನು ಸಹ ಒಂದು ಆಲಯವನ್ನು ಕಟ್ಟಿಸಿದ. ಹಲಸಿಯಲ್ಲಿನ ಹಾಳು ಬಸದಿ ಬಹುಶಃ ಮೃಗೇಶನು ಕಟ್ಟಿಸಿದ ಬಸದಿಯಾಗಿರಬಹುದು. ಗರ್ಭಗುಡಿ ಮತ್ತು ಸುಕನಾಸಿಗಳನ್ನೊಳಗೊಂಡ ಆ ಆಲಯ ಶಿಥಿಲಗೊಂಡಿದೆ. ಶಿಲಾನಿರ್ಮಿತ ದೇವಾಲಯಗಳು ಬಾದಾಮಿಯ ಚಾಲುಕ್ಯರ ಕಾಲದಲ್ಲಿ ಆರಂಭವಾಯಿತೆನ್ನಬಹುದಾದಲ್ಲಿ ಈ ಆಲಯಗಳು ಬಹುಮಟ್ಟಿಗೆ ಮರ ಅಥವಾ ಇಟ್ಟಿಗೆಗಳಿಂದ ಕಟ್ಟಲ್ಪಟ್ಟವುಗಳಾಗಿರಬೇಕು. ಇವುಗಳು ಯಾವುದರ ಅವಶೇಷಗಳೂ ಈಗ ಲಭ್ಯವಿಲ್ಲದಾಗಿವೆ.

ಗಂಗರ ಕಾಲ

ದಕ್ಷಿಣ ಕರ್ನಾಟಕದಲ್ಲಿ ಗಂಗರೂ ಸಹ ಸುಮಾರು ಕ್ರಿ. ಶ. ೩೫೦ರ ವೇಳೆಗೆ ಕಿರಿದಾದ ರಾಜ್ಯವೊಂದನ್ನು ಕಟ್ಟಿದರು. ಆದರೆ ಇವರು ಸ್ವತಂತ್ರರಾಗಿ ಆಳಿದುದು ಬಹಳ ಕಡಿಮೆಯ ಕಾಲ. ಆರಂಭದಲ್ಲಿ ಪಲ್ಲವರ ಪ್ರಭಾವಕ್ಕೊಳಪಟ್ಟರೂ ನಂತರ ಬಾದಾಮಿ ಚಾಲುಕ್ಯರ ಮಿತ್ರರಾದರು. ರಾಷ್ಟ್ರಕೂಟರು ಇವರನ್ನು ಅಧೀನದಲ್ಲಿಟ್ಟುಕೊಳ್ಳಲು ವೃಥಾ ಶ್ರಮಿಸಿದರು. ಗಂಗರ ಶಾಸನಗಳಲ್ಲಿ ಅವರು ಕಟ್ಟಿಸಿದ ದೇವಾಲಯಗಳ ಬಸದಿಗಳ ಉಲ್ಲೇಖಗಳಿವೆ. ಹರಿವರ್ಮನ ಕಾಲದ ಮೂಲಸ್ಥಾನೇಶ್ವರ, ಅವಿನೀತ ಕಟ್ಟಿಸಿದ ವಿನೀತೇಶ್ವರ, ಮಾಧವ–ಅವಿನೀತರ ಕಾಲದ ಅರ್ಹದಾಯತನ, ನೀತಿಮಾರ್ಗೇಶ್ವರ, ಶಿವಮಾರೇಶ್ವರ, ಶಿವಮಾರನ ಬಸದಿ ಇತ್ಯಾದಿ. ಆದರೆ ಇವುಗಳಲ್ಲಿ ಬಹುಮಟ್ಟಿನವು ಶಿಥಿಲಗೊಂಡಿವೆ ಅಥವಾ ಜೀರ್ಣೋದ್ಧಾರಕೊಳ್ಳಪಟ್ಟಿವೆ. ಆರಂಭದಲ್ಲಿ, ಇತರ ಕಡೆಗಳಲ್ಲಿದ್ದಂತೆ, ಇಟ್ಟಿಗೆ, ಗಾರೆ, ಮರಗಳನ್ನು ಬಳಸಿದರು. ದಡಿಗ–ಮಾಧವರು ಕಟ್ಟಿಸಿದ ಬಸದಿಯನ್ನು ತದನಂತರ ಮರವೆಸನಾಗಿ ಕಟ್ಟಿಸಲಾಯಿತೆಂದು ಶಾಸನದಲ್ಲಿ ಹೇಳಿದೆ. ಶಿವಮೊಗ್ಗ ಜಿಲ್ಲೆಯ ಮಂಡಲಿಯಲ್ಲಿ, ಇವರ ರಾಜಧಾನಿಗಳಲ್ಲೊಂದಾಗಿದ್ದ ಮಣ್ಣೆಯಲ್ಲಿ ಇವರು ಕಟ್ಟಿಸಿದ ಇಟ್ಟಿಗೆಯ ಕಟ್ಟಡಗಳ ಅವಶೇಷವಿದೆ. ನರಸಮಂಗಲದ ರಾಮೇಶ್ವರಾಲಯ ಇಟ್ಟಿಗೆಯ ಪ್ರಾಚೀನ ಕಟ್ಟಡ. ಕರಿಯ ಕಲ್ಲಿನ ತಳಹದಿಯ ಮೇಲೆ ಇಟ್ಟಿಗೆ–ಗಾರೆಗಳಿಂದ ಎಬ್ಬಿಸಲಾದ ಈ ಕಟ್ಟಡದ ಹೊರಗೋಡೆಗಳಲ್ಲಿ ಜೋಡಿ ಅರೆಗಂಬಗಳನ್ನೂ ಗೂಡುಗಳಲ್ಲಿ ಗಾರೆಯ ಮೂರ್ತಿಗಳನ್ನೂ ಕಡೆದಿಡಲಾಗಿದೆ. ನವರಂಗದಲ್ಲಿ ಘಂಟಾಕೃತಿ ಹಾಗೂ ಕಳಶಾಕಾರದ ಕಂಬಗಳಿದ್ದು ಮಧ್ಯದ ಭುವನೇಶ್ವರಿಯಲ್ಲಿ ನಟರಾಜನ ಮೂರ್ತಿ ಇದೆ. ಸುತ್ತಲೂ ಅಷ್ಟದಿಕ್ಪಾಲಕರ ವಿಗ್ರಹಗಳು, ತೆರೆದ ಸುಕನಾಸಿ, ಸಣ್ಣ ನವರಂಗ, ಚೌಕಾಕೃತಿಯ ಪೀಠದ ಮೇಲೆ ವೃತ್ತಾಕಾರದ ಕಂಬಗಳು, ಮೇಲೆ ಕಲಶ ಅಥವಾ ಹೂಜಿಯ ಅಲಂಕರಣ. ಅರಳಗುಪ್ಪೆಯ ಕಲ್ಲೇಶ್ವರ ದೇವಾಲಯ ಸುಮಾರು ೧೦ನೆಯ ಶತಮಾನದ್ದು. ಇದರ ನವರಂಗದ ಭುವನೇಶ್ವರಿಯಲ್ಲಿ ಸುತ್ತಲೂ ಆರು ಅಡಿಗಳ ಸುತ್ತಳತೆಯ ಕಲ್ಲಿನಲ್ಲಿ ದಿಕ್ಪಾಲಕರನ್ನು ಕೆತ್ತಿದ್ದು ಮಧ್ಯದಲ್ಲಿ ತಾಂಡವೇಶ್ವರನ ಭವ್ಯ ವಿಗ್ರಹ ಇದೆ. ಗಂಗರ ಆರಂಭದ ವಾಸ್ತುಶೈಲಿ ಪಲ್ಲವ ಪ್ರಭಾವಿತ. ಮೈಸೂರು ಜಿಲ್ಲೆಯ ಕಿತ್ತೂರಿನ ರಾಮೇಶ್ವರಾಲಯದಲ್ಲಿ ಪಲ್ಲವ ಶೈಲಿಯ ಸಿಂಹದ

ಕಂಬಗಳು, ಸುಂದರವಾಗಿ ಕಾಣುವ ದ್ವಾರಪಾಲಕರು, ಭಾವಪೂರಿತವಾದ ಮಹಿಷಮರ್ದಿನಿಯ ವಿಗ್ರಹಗಳಿವೆ. ಆದರೆ ಕ್ರಮೇಣ ಬಾದಾಮಿ ಚಾಲುಕ್ಯರ ವಾಸ್ತುಶೈಲಿ ಮೂರ್ತಿಶಿಲ್ಪಶೈಲಿಗಳ ಪ್ರಭಾವಗಳನ್ನು ಗುರುತಿಸಬಹುದಾಗಿದೆ. ಆಸಂದಿಯ ವೀರಭದ್ರ ದೇವಾಲಯದ ಮೆಟ್ಟಿಲುಗಳ ಎರಡು ಬದಿಗಳಲ್ಲಿಯೂ ನಟರಾಜ, ತ್ರಿವಿಕ್ರಮ ಮುಂತಾದ ವಿಗ್ರಹಗಳನ್ನು ಕೆತ್ತಿರುವ ಗಂಗರ ಕಾಲದ ಕಟಾಂಜನಗಳನ್ನು ನಿಲ್ಲಿಸಿದೆ. ಇವುಗಳಲ್ಲಿ ಬಾದಾಮಿ ಚಾಲುಕ್ಯರ ಶಿಲ್ಪದ ಪ್ರಭಾವವನ್ನು ಕಾಣಬಹುದು.

ಬಾದಾಮಿಯ ಚಾಲುಕ್ಯರ ಕಾಲ : ಬಾದಾಮಿ, ಐಹೊಳೆ, ಪಟ್ಟದಕಲ್ಲು, ಆಲಂಪುರ

ಸುಮಾರು ಕ್ರಿ. ಶ. ೫೦೦ ರಿಂದ ೭೫೭ ರವರೆಗೆ ಇನ್ನೂರೈವತ್ತು ವರ್ಷಗಳ ಕಾಲ ಆಳಿದ ಬಾದಾಮಿಯ ಚಾಲುಕ್ಯರ ವಾಸ್ತುಕೃತಿಗಳೆಲ್ಲವೂ ಬಹುಮಟ್ಟಿಗೆ ಅವರ ರಾಜಧಾನಿಯಾಗಿದ್ದ ಬಾದಾಮಿ ಹಾಗೂ ಪರಿಸರ ಪ್ರಾಂತದಲ್ಲಿಯೇ ಕಂಡುಬಂದಿವೆ. ಬಾದಾಮಿಯಲ್ಲದೆ ಮಹಾಕೂಟ, ನಾಗರಾಳ, ಪಟ್ಟದಕಲ್ಲು, ಐಹೊಳೆ ಇತ್ಯಾದಿಗಳಿಗೆ ಸೀಮಿತವಾಗಿದೆ. ಹೊರಗೆ ಆಂಧ್ರಪ್ರದೇಶದ ಮೆಹಬೂಬ್‌ನಗರ ಜಿಲ್ಲೆಯ ಅಲಂಪುರ, ಕರ್ನೂಲು ಜಿಲ್ಲೆಯ ಸತ್ಯವೋಲು ಮತ್ತು ಮಹಾನಂದಿಗಳಲ್ಲೂ ಈ ವಂಶದ ಅರಸರು ದೇವಾಲಯಗಳನ್ನು ರಚಿಸಿದರು. ಅಧಿಕ ಸಂಖ್ಯಾಕ ಆಲಯಗಳು ಐಹೊಳೆಯಲ್ಲಿವೆ. ಬಹಳ ಹಿಂದೆ ಕಸೆನ್ಸನು ಐಹೊಳೆಯಲ್ಲಿ ೩೧ ಗುಡಿಗಳಿವೆ ಎಂದು ಲೆಕ್ಕ ಹಾಕಿದ್ದನು. ವಿಚಿತ್ರವೆಂದರೆ ಇವುಗಳಲ್ಲಿ ಬಹುಮಟ್ಟಿನವನ್ನು ವೈಯಕ್ತಿಕ ಆಸ್ತಿಗಳೆಂಬಂತೆ ಬಳಸಲಾಗುತ್ತಿದ್ದು ಅವು ನಿವಾಸಸ್ಥಾನಗಳಾಗಿದ್ದುವು. ಗುಡಿಗಳ ಹೊರಮಂಟಪ ದನದಕೊಟ್ಟಿಗೆ, ಒಳಗಿನದು ಮಲಗುವ ಮನೆ. ಗರ್ಭಗೃಹವು ಪೂಜಾಗೃಹವೂ ಅಡಿಗೆ ಮನೆಯೂ ಆಗಿದ್ದಿತು. ಆದರೆ ಈಗ ಸರ್ಕಾರದವರು ಅವುಗಳನ್ನೆಲ್ಲಾ ಸ್ವಾಧೀನಪಡಿಸಿಕೊಂಡಿದ್ದಾರೆ. ಗುಡಿಗಳು ದುರಸ್ತಿಯಾಗಿವೆ. ಈಗ ಐಹೊಳೆಯಲ್ಲಿಯೇ ಸುಮಾರು ೧೨೫ ಗುಡಿಗಳಿವೆ. ಪುರಾತತ್ವ ಸರ್ವೇಕ್ಷಣ ಇಲಾಖೆಯವರು ಇವುಗಳನ್ನು ೨೨ ಗುಂಪುಗಳಾಗಿ–ಹುಚ್ಚಿಮಲ್ಲಿ, ಚಿಕ್ಕಿ, ಅಂಬಿಗೇರ, ದುರ್ಗ, ಗೌಡರ, ಲಾಡ್‌ಖಾನ್, ಸೂರ್ಯನಾರಾಯಣ, ಚಕ್ರ, ಬಡಿಗೇರ, ರಾಜಿ, ವಣಿಯಾರ್, ಹುಚ್ಚಪ್ಪಯ್ಯನಮಠ, ಕುಂತಿ, ಚರಂತಿಮಠ, ತ್ರ್ಯಂಬಕೇಶ್ವರ, ಗೌರಿ, ಜೈನ, ಮಲ್ಲಿಕಾರ್ಜುನ, ಗುಡ್ಡದ ಮೇಲಿನ ಜೈನ, ಮೇಗುಡಿ, ಜ್ಯೋತಿರ್ಲಿಂಗ, ರಾವಳಫಡಿ, ಹುಚ್ಚಪ್ಪಯ್ಯ, ಗಳಗನಾಥ ಮತ್ತು ರಾಮಲಿಂಗ–ವಿಂಗಡಿಸಿದ್ದಾರೆ. ಧರ್ಮಗಳನ್ನನುಸರಿಸಿ ಇವುಗಳನ್ನು ಬೌದ್ಧ, ಜೈನ ಹಾಗೂ ಹಿಂದೂ ಸಂಪ್ರದಾಯಗಳಿಗೆ ಸೇರಿದ ಗುಡಿಗಳಾಗಿಯೂ ವಿಂಗಡಿಸಬಹುದು. ಇವುಗಳ ಕಾಲವನ್ನನುಸರಿಸಿ ಚಾಲುಕ್ಯ ಪೂರ್ವ, ಚಾಲುಕ್ಯ ಹಾಗೂ ಚಾಲುಕ್ಯ ನಂತರದ ಗುಡಿಗಳೆಂದೂ ವಿಭಜಿಸಬಹುದು. ಆದರೆ ಐಹೊಳೆಯಲ್ಲಿ ನಾವು ಕಾಣುವುದು ಎಲ್ಲೆಲ್ಲೂ ಗುಡಿಗಳು. ಇದೊಂದು ಕಲಾ ಶಾಲೆ, ವಾಸ್ತುಶಿಲ್ಪದ ಬಯಲು ಪ್ರದರ್ಶನ ಶಾಲೆ ಎಂಬುದಂತೂ ಸ್ಪಷ್ಟ.

ಬಾದಾಮಿಯಲ್ಲಿ ಸುಮಾರು ೨೦, ಪಟ್ಟದಕಲ್ಲಿನಲ್ಲಿ ೧೨, ಮಂಕುಂದದಲ್ಲಿ ೧೦, ನಾಗರಾಳದಲ್ಲಿ ೧, ಆಂಧ್ರಪ್ರದೇಶದ ಆಲಂಪುರದಲ್ಲಿ ೯, ಸತ್ಯವೋಲು, ಮಹಾನಂದಿಗಳಲ್ಲಿ ಒಂದೊಂದು–ಹೀಗೆ ಸುಮಾರು ೧೭೯ ಗುಡಿಗಳು ಬಾದಾಮಿಯ ಚಾಲುಕ್ಯರು ಕಟ್ಟಿಸಿದ ಅಥವಾ ಸಮಕಾಲೀನ ದೇವಾಲಯಗಳು. ಇದರ ಪ್ರಭಾವಕ್ಕೊಳಪಟ್ಟ ಸಮಕಾಲೀನ ಗುಡಿಗಳೂ ಸೇರಿದಂತೆ ಈ ಸಂಖ್ಯೆ ಸುಮಾರಾಗಿ ೨೦೦ ಆಗಬಹುದು. ಈಗಾಗಲೇ ಹೇಳಿದಂತೆ ಧಾರ್ಮಿಕವಾಗಿ ಪರಿಶೀಲಿಸಿದಲ್ಲಿ ಐದಾರು ಜೈನ, ಒಂದೆರಡು ಬೌದ್ಧ ದೇವಾಲಯಗಳನ್ನು ಹೊರತುಪಡಿಸಿ ಉಳಿದವುಗಳೆಲ್ಲ ಹಿಂದೂ ಧರ್ಮಕ್ಕೆ ಸೇರಿದ ಆಲಯಗಳು. ಇವೆಲ್ಲವೂ ಬಹುಮಟ್ಟಿಗೆ ಬಿಜಾಪುರದ–ಬಾದಾಮಿಯ ಪರಿಸರ ಪ್ರಾಂತದ–ನಸುಗೆಂಪು ಅಥವಾ ತಿಳಿ ಹಳದಿ ಬಣ್ಣದ ಮರಳುಗಲ್ಲಿನಲ್ಲಿ ಕಟ್ಟಲಾದ ಕಟ್ಟಡಗಳು. ಚಪ್ಪಡಿಯಂತಹ ದೊಡ್ಡ ಕಲ್ಲುಗಳನ್ನು ಒಂದರ ಮೇಲೊಂದರಂತೆ ಯಾವ ಬಂಧಕ ಸಾಮಗ್ರಿಯೂ ಇಲ್ಲದಂತೆ ಪೇರಿಸಿ ರೂಪಿಸಿದ ಗೋಡೆಗಳು, ಅಂತಹುದೇ ದಪ್ಪಕಲ್ಲುಗಳನ್ನು ಕಂಬ ತೊಲೆಗಳಾಗಿ ಬಳಸಿರುವುದು, ಚಪ್ಪಡಿಗಳನ್ನು ಛಾವಣಿಗಾಗಿ ಕವಚುವುದು–ಇವು ವಾಸ್ತು ತಂತ್ರಗಳು. ಶಿಲಾ ಕಟ್ಟಡಗಳು ಚಾಲುಕ್ಯ ಪೂರ್ವ ಕಾಲದ ದಕ್ಷಿಣ ಭಾರತದಲ್ಲಿ ಇನ್ನೂ ಬಳಕೆಗೆ ಬಾರದೆ ಕೇವಲ ಮರ ಅಥವಾ ಇಟ್ಟಿಗೆಗಳನ್ನು ಕಟ್ಟಡಗಳಿಗಾಗಿ ಬಳಸುತ್ತಿದ್ದ ಕಾಲದಲ್ಲಿ ಇಂತಹ ಚಪ್ಪಡಿಗಳ ಉಪಯೋಗವನ್ನು ಅವರು ಕಂಡುಕೊಂಡುದೇ ಅತಿಶಯ. ಬೃಹತ್ ಶಿಲಾಯುಗದ ಸಮಾಧಿ ರಚನೆ ಇವರಿಗೆ ಈ ಯೋಚನೆ ನೀಡಿರಬಹುದು. ಇಲ್ಲಿ ನಾವು ಭದ್ರತೆಯ ದೃಷ್ಟಿಯಿಂದ ಅಗತ್ಯಕ್ಕಿಂತಲೂ ಹೆಚ್ಚಾದ ದಪ್ಪನೆಯ ಕಲ್ಲುಗಳ ಬಳಕೆ, ತತ್ಪರಿಣಾಮವಾಗಿ ಸಾಮಗ್ರಿ ಮತ್ತು ಶಕ್ತಿಗಳ ಅಪವ್ಯಯವನ್ನು ಕಾಣುತ್ತೇವೆ. ಆದಕಾರಣ ಇದು ವಾಸ್ತುಶಿಲ್ಪಕಲೆಯ ಶೈಶವಾವಸ್ಥೆಯ ಸಾಮಾನ್ಯ ಲಕ್ಷಣವೆಂದು ವಾಸ್ತುತಂತ್ರಜ್ಞರು ಭಾವಿಸಿದ್ದಾರೆ. ಆದರೆ ವಾಸ್ತುವಿಜ್ಞಾನದ ಯಾವ ಪರಿಚಯವೂ ಇಲ್ಲದಿದ್ದರೂ ಶತಮಾನಗಳ ಕಾಲ ಉಳಿಯುವಂತಹ ದೇವಾಲಯಗಳನ್ನು ಹೊಸ ಪ್ರಯೋಗಗಳ ಮೂಲಕ ರೂಪಿಸಿದುದೇ ಒಂದು ಸಾಧನೆ ಎನ್ನಬಹುದು. ಈ ವಾಸ್ತು ಸಂಪ್ರದಾಯವನ್ನು ಪ್ರಯೋಗಾತ್ಮಕ ವಾಸ್ತು ಸಂಪ್ರದಾಯವೆಂದು ಹಲವು ನಿಷ್ಣಾತರು ಭಾವಿಸಿರುವುದು ಈ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ.

ಎಂತಲೇ ಬಿಜಾಪುರದ ಜಿಲ್ಲೆಯನ್ನು ಶಿಲಾದೇವಾಲಯ ಸಂಪ್ರದಾಯದ ತೊಟ್ಟಿಲು ಎಂದು ಕರೆದಿರುವುದು ಸಮಂಜಸವಾಗಿ ತೋರುತ್ತದೆ.

ಈ ದೇವಾಲಯಗಳಲ್ಲಿ ಅತಿ ಪ್ರಾಚೀನವೆನಿಸುವುದು ಬಾದಾಮಿಯ ಮೇಲಿನ ಹಾಗೂ ಕೆಳಗಿನ ಶಿವಾಲಯಗಳು. ಕೆಳಗಿನ ಶಿವಾಲಯ ಬಹುಶಃ ಈ ಮೊದಲು ವಿಷ್ಣುವಿನ ಆಲಯವಾಗಿದ್ದಿರಬಹುದು. ಈಗ ಉಳಿದಿರುವುದೆಲ್ಲ ಕೇವಲ ಗರ್ಭಗೃಹ. ಇದು ಎರಡು ಗೋಡೆಗಳನ್ನು ಹೊಂದಿದ್ದು ಸುತ್ತಲೂ ಪ್ರದಕ್ಷಿಣಾಪಥವಿದ್ದಂತೆ ತೋರುತ್ತದೆ. ಆದುದರಿಂದ ಇದು ಸಾಂಧಾರ. ಗರ್ಭಗುಡಿಯ ಮೇಲಿನ ಶಿಖರದ ಮೊದಲ ತಲವು ಗರ್ಭಗುಡಿಯನ್ನೆಲ್ಲ ಆಕ್ರಮಿಸುವಷ್ಟು ದೊಡ್ಡದಾಗಿದೆ. ಸ್ತೂಪಿಯ ಮೂಲೆಗಳಲ್ಲಿ ಎರಡೆರಡು ದೇವತೆಗಳ ಶಿಲ್ಪಗಳಿರುವುದೊಂದು ವಿಶೇಷ. ಗರ್ಭಗುಡಿಯ ದ್ವಾರದ ಶಾಖೆಗಳಿರುವ ಚೌಕಟ್ಟಿನ ಕೆಳಗೆ ಕುಬ್ಜ ದ್ವಾರಪಾಲಕರಿದ್ದಾರೆ. ಒಳಗಿನ ಪದ್ಮಪೀಠ ಅಂಡಾಕಾರವಾಗಿದ್ದು ವಿಗ್ರಹ ನಿಲ್ಲಿಸಲು ಬೇಕಾದ ಗುಳಿ ಇದೆ. ಮೂಲತಃ ಇದರಲ್ಲಿ ಗಣೇಶನ ಮೂರ್ತಿಯಿದ್ದಿತೆಂಬುದೊಂದು ಅಭಿಪ್ರಾಯ. ಮೇಲಿನ ಶಿವಾಲಯ ಸಾಂಧಾರ ಗರ್ಭಗುಡಿಯನ್ನೊಳಗೊಂಡಿದೆ. ಇದರ ಮುಂದೆ ಮುಚ್ಚಿದ ಸಭಾಮಂಟಪ. ಮಧ್ಯದಲ್ಲಿ ಸ್ತಂಭಗಳು. ಇದರ ಮುಂದೆ ಇನ್ನೊಂದು ಮುಖಮಂಟಪ. ಗರ್ಭಗುಡಿಯ ಮೇಲೆ ನಾಗರಶೈಲಿಯ ಶಿಖರ. ಅಧಿಷ್ಠಾನದ ಪಟ್ಟಿಕೆಗಳಲ್ಲಿ ರಾಮಾಯಣ, ಕೃಷ್ಣಲೀಲೆಗಳಿಂದಾಯ್ದ ಘಟನೆಗಳನ್ನು ಉಬ್ಬುಶಿಲ್ಪಗಳ ಮೂಲಕ ಚಿತ್ರೀಕರಿಸಲಾಗಿದೆ. ಗರ್ಭಗೃಹದ ಮೂರು ಹೊರಗೋಡೆಗಳಲ್ಲೂ ಒಂದೊಂದು ಕೋಷ್ಠವಿದ್ದು ಗೋವರ್ಧನಧಾರಿ ಕೃಷ್ಣ, ಕಾಳಿಂಗಮರ್ದನ ಕೃಷ್ಣ ಹಾಗೂ ಷಡ್ಬಾಹು ನರಸಿಂಹನ ಮೂರ್ತಿ ಶಿಲ್ಪಗಳನ್ನು ಅಳವಡಿಸಲಾಗಿದೆ.


ಕಾಲಾನುಕ್ರಮದಲ್ಲಿ ಐಹೊಳೆಯ ಕೊಂತಗುಡಿ ಸುಮಾರು ಕ್ರಿ. ಶ. ೬೦೦ ಕ್ಕೂ ಹಿಂದಿನದೆನ್ನಬಹುದಾಗಿದೆ. ಈ ಹೆಸರು ವಿಚಿತ್ರವಾಗಿದೆ. ಕೊಂತ–ಕೊಂತಿ–ಎಂದರೆ ತ್ರಿಶೂಲವನ್ನು ಹಿಡಿದವನು ಎಂದು ಅರ್ಥವಾಗುತ್ತದೆ. ದಸರೆಯ ಸಮಯದಲ್ಲಿ, ಇತರ ವಿಶೇಷ ಪೂಜಾಕಾಲದಲ್ಲಿ ದೇವರ ಮೆರವಣಿಗೆ ಹೊರಟಾಗ ದೇವರ ಮುಂದೆ ಈ ಕೊಂತವನ್ನು ಹಿಡಿಯುವ ಗೌರವ ಒಬ್ಬರಿಗೆ ಸಂದಿರುತ್ತದೆ. ಅದು ಅವರ ಹಕ್ಕು ಹಾಗೂ ಕರ್ತವ್ಯ. ಬಹುಶಃ ವಂಶಪಾರಂಪರ್ಯವಾಗಿ ಬಂದ ಹಕ್ಕು. ಆ ಗುಡಿಯ ಸಮೀಪದಲ್ಲಿಯೋ ಗುಡಿಯಲ್ಲಿಯೋ (?) ಈ ಮನೆತನಕ್ಕೆ ಸೇರಿದವನೊಬ್ಬ ವಾಸಿಸುತ್ತಿದ್ದಿರಬೇಕು. ಎಂತಲೇ ಆ ಗುಡಿಗೆ ಕೊಂತಗುಡಿ ಎಂಬ ಹೆಸರು ಬಂದಂತಿದೆ. ಇತ್ತೀಚೆಗೆ ಕೆಲವು ಸಂಶೋಧಕರು ಕೊಂತಿ ಎಂಬುದು ಕುಂತಿ ಎಂಬ ಹೆಸರಿನ ಇನ್ನೊಂದು ರೂಪವೆಂದು ಹೇಳಿ ಇದನ್ನು ಕುಂತೀಗುಡಿ ಎಂದು ಕರೆದಿದ್ದಾರೆ. ಬಹುಶಃ ಇದು ಅಷ್ಟೇನೂ ಸಮಂಜಸವೆನಿಸದು.

ಹಾಗೆ ನೋಡಹೋದಲ್ಲಿ ಐಹೊಳೆಯ ದೇವಾಲಯಗಳ ಹೆಸರುಗಳೇ ವಿಚಿತ್ರವಾಗಿವೆ. ಗ್ರಾಮವನ್ನು ಪ್ರವೇಶಿಸುತ್ತಿದ್ದಂತೆಯೇ ನಾವು ಮೊದಲು ಕಾಣುವ ಗುಡಿ ದುರ್ಗಗುಡಿ. ಇದಕ್ಕೂ ದುರ್ಗಾದೇವತೆಗೂ ಏನೂ ಸಂಬಂಧವಿಲ್ಲ. ಮೂಲತಃ ಇದೊಂದು ವೈಷ್ಣವಾಲಯವಾಗಿತ್ತೆನಿಸುತ್ತದೆ. ಇದು ಕೋಟೆಯ ಬಾಗಿಲಬಳಿ ಇರುವುದರಿಂದ ಇದಕ್ಕೆ ದುರ್ಗಗುಡಿ ಎಂಬ ಹೆಸರು ಬಂದಿದೆ. ಗುಡ್ಡದ ಮೇಲಿರುವ ಗುಡಿ ಮೇಗುಡಿ. ಆಂಗ್ಲರ ಬಾಯಿಗೆ ಬಿದ್ದು ಮೇಗುಡಿ ಆಗಿ ಈಗ ಮೇಗುತಿ ಎಂದೂ ಕರೆಸಿಕೊಳ್ಳುತ್ತಿದೆ. ಲಾಡಖಾನ್ ಎಂಬೊಬ್ಬ ಮಹಮದೀಯ ಈ ಶತಮಾನಾರಂಭದಲ್ಲಿ ವಾಸಿಸುತ್ತಿದ್ದ ಗುಡಿಗೆ ಅದೇ ಹೆಸರು–ಲಾಡಖಾನ್ ಗುಡಿ –ಬಂದಿದೆ. ಏಣಿಯರ್–ಎಣ್ಣೆಯವರು ವಾಸಿಸುತ್ತಿದ್ದ ನಿವಾಸಗಳು. ಏಣಿಯರ್ ಗುಡಿಗಳೆಂದೇ ಪ್ರಸಿದ್ಧವಾಗಿವೆ. ಹಾಗೆಯೇ ಅಂಬಿಗೇರ, ಗೌಡರ ಗುಡಿಗಳು.

ಕೊಂತ ಗುಡಿಗಳ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಇದು ಮೂರು ಗುಡಿಗಳ ಒಂದು ಕೂಟ. ಮೊದಲನೆಯದು ಆಯಾಕಾರದ ಮಟ್ಟವಾದ ಛಾವಣಿಯ ಮಂಟಪ. ಆರು ಕಂಬಗಳ ಎರಡು ಸಾಲುಗಳಿರುವ ಇದರ ಹಿಂಬದಿಯ ಗೋಡೆಗೆ ಸೇರಿದಂತೆ ಗರ್ಭಗೃಹವಿದೆ. ಇದರ ಎರಡೂ ಬದಿಯ ಕಂಬಗಳನ್ನು ಗಣಿಸಿದರೆ ಹಿಂದಿನ ಸಾಲಿನಲ್ಲಿ ಎಂಟು ಕಂಬಗಳಿದ್ದಂತಾಗುತ್ತದೆ. ಗರ್ಭಗೃಹ ಆಯಾಕಾರವಾಗಿದೆ. ಕಂಬಗಳಲ್ಲಿ ಬಣ್ಣಗಳ ಮಣಿಗಳ ಮಾಲೆಗಳನ್ನು ಬಿಡಿಸಲಾಗಿದೆ. ಗರ್ಭಗೃಹಕ್ಕೆ ಹೊಂದಿದ ಎರಡು ಕಂಬಗಳಲ್ಲಿ ದ್ವಾರಪಾಲಕರ ವಿಗ್ರಹಗಳಿವೆ. ಇತರ ಕಂಬಗಳಲ್ಲಿಯೂ ಮೂರ್ತಿಶಿಲ್ಪಗಳನ್ನು ಕೆತ್ತಲಾಗಿದೆ. ನರಸಿಂಹಾವತಾರದ ವಿಷ್ಣು ನಿಲುವಿನ ಭಂಗಿಯಲ್ಲಿ ತೊಡೆಗಳ ಮೇಲೆ ಹಿರಣ್ಯಕಶಿಪುವನ್ನು ಮಲಗಿಸಿಕೊಂಡು ಅವನ ಹೊಟ್ಟೆಯನ್ನು ತನ್ನ ನಖಗಳಿಂದ ಬಗೆಯುತ್ತಿದ್ದಾನೆ. ಇತರ ಕಂಬಗಳಲ್ಲಿ ತ್ರಿಪುರಾಂತಕ ಶಿವ, ಅರ್ಧನಾರೀಶ್ವರ, ಗಜಸಂಹಾರಮೂರ್ತಿ, ಮುಂತಾದ ವಿಗ್ರಹಗಳನ್ನು ಕಾಣುತ್ತೇವೆ. ಗರ್ಭಗುಡಿಯ ದ್ವಾರಬಂಧದಲ್ಲಿ ಗರುಡನ ವಿಗ್ರಹ. ಅಲಂಕೃತ ದ್ವಾರಬಂಧ. ಹೊರಗೋಡೆಗಳ ಗೂಡುಗಳಲ್ಲಿ ವಿಷ್ಣು ಹಾಗೂ ನೃತ್ಯ ಶಿವನ ಮೂರ್ತಿಗಳು. ಗರ್ಭಗೃಹದ ಒಳಮಾಳಿಗೆಯಲ್ಲಿ ಬ್ರಹ್ಮ, ಮಹೇಶ್ವರ ಹಾಗೂ ಅನಂತಾಸೀನ ವಿಷ್ಣುವಿನ ವಿಗ್ರಹಗಳನ್ನು ಅಡ್ಡ ತೊಲೆಗಳ ಮೇಲೆ ಬಿಡಿಸಲಾಗಿದೆ. ಆದರೆ ಈ ವಿಗ್ರಹಗಳು ಭವ್ಯವಾಗಿದ್ದರೂ ಇವುಗಳಲ್ಲಿ

ನಂತರದ ಕಾಲದ ಲಾಲಿತ್ಯವಿಲ್ಲ. ಪಶ್ಚಿಮಾಭಿಮುಖವಾಗಿರುವ ಎರಡನೆಯ ಗುಡಿಯನ್ನು ದ್ವಾರಮಂಟಪವೊಂದು ಮೊದಲನೆಯ ಗುಡಿಗೆ ಸೇರಿಸಿದೆ. ನಾಲ್ಕು ಕಂಬಗಳ ಈ ಮಂಟಪದ ಸೂರು ಮುಂಚಾಚಿದೆ. ಕಂಬದಿಂದ ಹೊರಬಿದ್ದ ಚಾಚುಪೀಠ ಮಂಟಪದ ಮಾಳಿಗೆಗೆ ಆಸರೆ. ಇಲ್ಲಿ ಸಿಂಹಮುಖದ ಯಾಳಿ, ಕೆಳಗೊಬ್ಬ ಕುಬ್ಜ. ಎರಡನೆಯ ಗುಡಿಯಲ್ಲೂ ಪ್ರದಕ್ಷಿಣಪಥ ಅಥವಾ ಸಭಾಮಂಟಪಗಳಿಲ್ಲ. ಆದರೆ ದೇವಾಲಯದಲ್ಲಿನ ಮಂಟಪದ ಮೇಲೆ ಚೌಕಾಕಾರದ ಕಟ್ಟಡ ಎದ್ದಿದೆ. ಇದು ದೇವಾಲಯಗಳ ರಚನೆಯಲ್ಲಿ ಅಸ್ತಿತ್ವಕ್ಕೆ ಬಂದ ಶಿಖರದ ಆರಂಭ ಎನ್ನಬಹುದು. ಐದಡಿ ಎತ್ತರದ ಇದರ ನಾಲ್ಕು ಕಡೆಗಳಲ್ಲಿಯೂ ಶೈವ–ವೈಷ್ಣವ ವಿಗ್ರಹಗಳನ್ನು ಕೆತ್ತಿದೆ. ಈ ಶಿಖರವನ್ನು ತಲುಪಲು ಆಲಯದ ಹೊರಗಡೆ ಉತ್ತರ ಭಾಗದಲ್ಲಿ ಕಲ್ಲಿನ ಏಣಿಯನ್ನು ಕಡೆದಿದೆ. ದೇವಾಲಯದ ದ್ವಾರಬಂಧದ ಲಲಾಟಬಿಂಬದಲ್ಲಿ ಸರ್ಪಗಳ ಬಾಲಗಳನ್ನು ಹಿಡಿದಿರುವ ಗರುಡನ ವಿಗ್ರಹವಿದೆ. ಗುಡಿಯ ಕಂಬಗಳ, ಗೋಡೆಗಂಬಗಳ ಮೇಲಿರುವ ವಿಗ್ರಹಗಳಲ್ಲಿ ಕೆಲವು ಅಪೂರ್ಣ, ಕೆಲವು ಭಿನ್ನ. ಗರ್ಭಗುಡಿಯ ದಕ್ಷಿಣದ ಗೋಡೆಗಂಬದಲ್ಲಿ ನಾಲ್ಕು ಹಸ್ತಗಳ ಮಹಿಷಮರ್ದಿನಿಯ ವಿಗ್ರಹವಿದೆ. ಬಲಗೈಯೊಂದರಲ್ಲಿ ಚಕ್ರ, ಇನ್ನೊಂದರಿಂದ ಅಸುರನನ್ನು ಇರಿಯುತ್ತಿದ್ದಾಳೆ. ಎಡ ಮೇಲುಗೈಯಲ್ಲಿ ಶಂಖ. ಇನ್ನೊಂದು ಕೈ ಸಿಂಹದ ಮೇಲೆ. ೩ನೆಯ ಶೈವಗುಡಿಯಲ್ಲೂ ಎರಡೇ ಕಾಲುಗಳ ಮೇಲೆ ನಿಂತಿರುವ ಮೂವರು ಸ್ತ್ರೀಯರ ಸಂಯುಕ್ತ ಶಿಲ್ಪ ಹಾಗೂ ಇತರ ವಿಗ್ರಹಗಳೂ ಇವೆ. ಗರ್ಭಗುಡಿಯ ದ್ವಾರದ ಇಕ್ಕೆಲದಲ್ಲಿ ಶಂಖನಿಧಿ, ಪದ್ಮನಿಧಿಗಳನ್ನು ಬಿಡಿಸಲಾಗಿದೆ. ೧-೨ನೆಯ ಗುಡಿಗಳು, ೭ನೆಯ, ಮಧ್ಯದ ಮಂಟಪ, ೯ನೆಯ ಹಾಗೂ ೩ನೆಯದು, ೧೦ನೆಯ ಶತಮಾನಗಳಿಗೆ ಸೇರಿದುದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ದೂರದಿಂದ ನೋಡಿದರೆ ಈ ದೇವಾಲಯಗಳಿಗೆ ವಿಶಿಷ್ಟವಾದ ಪರಿಚಿತ ವಿನ್ಯಾಸ ಇಲ್ಲ. ರಚನೆಯಲ್ಲಿ ಒರಟುತನ, ಕಂಬ ಮತ್ತು ಕಟ್ಟಡಗಳ ಕುಬ್ಜತೆ–ಇವು ಈ ಗುಡಿಗಳು ಪ್ರಯೋಗಾತ್ಮಕ ಘಟ್ಟಕ್ಕೆ ಸೇರಿದ ಪ್ರಾಚೀನ ಗುಡಿಗಳೆಂಬ ಇನ್ನೊಂದು ಅಭಿಪ್ರಾಯವಿದೆ.


ಬಾದಾಮಿಯ ಮಾಲೆಗಿತ್ತಿ ಶಿವಾಲಯದ ಕಾಲದ ಬಗೆಗೂ ಭಿನ್ನಾಭಿಪ್ರಾಯಗಳಿವೆ. ಈ ಶಿವಾಲಯದಲ್ಲಿ, ಸಭಾಮಂಟಪ ಮತ್ತು ಮುಖಮಂಟಪಗಳಿವೆ. ಶಿಖರ ದ್ರಾವಿಡ ಶೈಲಿಯದು. ಅಲ್ಲದೆ ದ್ರಾವಿಡ ಶೈಲಿಯ ಲಕ್ಷಣಗಳೆನಿಸಿದ ಚೌಕಾಕಾರದ ಗರ್ಭಗೃಹ, ದಪ್ಪಕಂಬಗಳು ಗೋಡೆಗಳನ್ನು ಬಳಸದ ಸೀಮಿತ ಹೊರ ಅಲಂಕರಣ. ಗರ್ಭಗೃಹದ ಮೇಲಿನ ಶಿಖರ ಮೆಟ್ಟಿಲು ಮೆಟ್ಟಿಲಾಗಿ ಮೇಲೇರಿದೆ. (ಛಾಯಾ ಚಿತ್ರ-೮) ಅಧಿಷ್ಠಾನದಲ್ಲಿ ಜಗತಿ, ಉಪಾನ, ಕುಮುದ, ಕೂಡುವರಿ ಅಡ್ಡಪಟ್ಟಿಗಳಿವೆ. ಸಭಾಮಂಟಪದ ಹೊರಗೋಡೆಯ ಕೋಷ್ಠಗಳಲ್ಲಿ ಶಿವ, ವಿಷ್ಣು, ದ್ವಾರಪಾಲಕರ ವಿಗ್ರಹಗಳನ್ನಳವಡಿಸಿದೆ. ಗರ್ಭಗೃಹದ ದ್ವಾರಬಂಧದಲ್ಲಿ ನಟರಾಜನ ಶಿಲ್ಪ. ಒಳಗೆ ಶಿವಲಿಂಗ. ಈ ದೇವಾಲಯದ ಸ್ಥಪತಿ ಆರ್ಯಮಿಞ್ಚಿ ಉಪಾಧ್ಯಾಯನೆಂದು ಇಲ್ಲಿನ ಶಾಸನವೊಂದರಲ್ಲಿ ಉಲ್ಲೇಖಿಸಲಾಗಿದೆ. ಇದು ೭ನೆಯ ಶತಮಾನದ ಕೊನೆಯ ಭಾಗದ್ದೆಂಬ ಅಭಿಪ್ರಾಯವಿದೆ.



ಚಿತ್ರ – ೮

ಕ್ರಿ. ಶ. ೪೫೦ರ ಸುಮಾರಿನಲ್ಲಿ ಕಟ್ಟಲಾದ ದೇವಾಲಯ ಲಾಡಖಾನ್ ಎಂಬುದು ಕೆಲವರ ಅಭಿಪ್ರಾಯ. ಆದರೆ ಇತ್ತೀಚಿನ ಸಂಶೋಧನೆಗಳಿಂದ ಈ ವೇಳೆಗಾಗಲೇ ಐಹೊಳೆಯಲ್ಲಿ ಇತರ ಗುಡಿಗಳು ಅಸ್ತಿತ್ವದಲ್ಲಿದ್ದುವು ಎಂಬುದು ತಿಳಿದು ಬಂದಿದೆ. ಆದುದರಿಂದ ಇದು ಸಹ ಸುಮಾರು ೬೦೦-೭೦೦ರ ಕಾಲದ್ದೆನ್ನಬಹುದು. ಇದರ ಪಕ್ಕದಲ್ಲೇ ಇರುವ ಗೌಡರ ಗುಡಿಯ ತಳಪಾಯ ಈ ಗುಡಿಯ ತಳಪಾಯಕ್ಕಿಂತಲೂ ಕೆಳಗಿದ್ದಂತೆ ಉತ್ಖನನದ ಸಂದರ್ಭದಲ್ಲಿ ಕಂಡುಬಂದಿರುವುದು ಇಂತಹ ಅಭಿಪ್ರಾಯಕ್ಕೆ ಎಡೆಮಾಡಿದೆ. ಆದರೆ ಈ ಅಭಿಪ್ರಾಯಗಳು ಇನ್ನೂ ಖಚಿತಗೊಂಡಿಲ್ಲ. ವಾಸ್ತುಶಿಲ್ಪದ ದೃಷ್ಟಿಯಿಂದ ಗಮನಿಸಿದರೆ ಗೌಡರಗುಡಿ ನಂತರದ ಕಾಲದ್ದೆನ್ನಲು ಆಧಾರಗಳಿದ್ದಂತಿವೆ.

ಮೊದಲ ನೋಟಕ್ಕೆ ಲಾಡಖಾನ್ ಗುಡಿ ಒಂದು ಗುಡಿ ಎಂಬ ಭಾವನೆಯೇ ಬರುವುದಿಲ್ಲ. (ಛಾಯಾ ಚಿತ್ರ–೯) ಅದು ಒಂದು ಸಭಾಮಂಟಪವಿದ್ದಂತಿದೆ. ಒಳಗೆ ಹೋದವರಿಗೆ ಒಂದು ಗುಹಾಲಯವನ್ನು ಹೊಕ್ಕಂತೆ ಭಾಸವಾಗುತ್ತದೆ. ಅಲ್ಲಿನ



ಚಿತ್ರ – ೯

ಕಲ್ಲು ಕಂಬಗಳು, ಗೋಡೆಗಳು ಸದೃಢವೂ ಸ್ಥೂಲವೂ ಆಗಿವೆ. ಮೂಲತಃ ಮರದಲ್ಲಿ ಮಾಡಲಾದ ಮಾದರಿಗಳನ್ನು ನೋಡಿಕೊಂಡು ಅವುಗಳನ್ನು ಅದರಂತೆಯೇ ಕಟ್ಟಿದಂತೆನಿಸುತ್ತದೆ. ಅದರ ಚಪ್ಪಟೆಯಾದ ಮಾಳಿಗೆ ಗುಹಾಲಯಗಳಲ್ಲಿದ್ದಂತಿದೆ. ದೇವಾಲಯದ ಹೊರಗೋಡೆಗಳನ್ನು ಗಮನಿಸಿದರೆ ಅವುಗಳ ನಡುವೆ ಕಂಬಗಳನ್ನು ನಿಲ್ಲಿಸಿ ಕಂಬಗಳ ನಡುವೆ ಅನಂತರ ಜಾಲಂದರಗಳನ್ನು ರೂಪಿಸಿರುವುದನ್ನು ಕಾಣಬಹುದು. ಕಂಬಗಳು ಅದರ ಚಾಚು ಪೀಠದ ಬೋದಿಗೆಗಳು ಗಟ್ಟಿಮುಟ್ಟಾಗಿವೆ. ಆದರೆ ಇವುಗಳಲ್ಲಿ ಮೃದುತ್ವ, ಕೋಮಲತೆಗಳನ್ನು ಕಾಣಲಾಗದು. ಗರ್ಭಗೃಹವು ಆಯಾಕಾರವಾಗಿದ್ದು ದೊಡ್ಡ ಪಡಸಾಲೆಯ ಹಿಂದಿನ ಗೋಡೆಗೆ ಹೊಂದಿಕೊಂಡು ನಿರಂಧಾರವಾಗಿದೆ. ಮಂಟಪದ ಮಧ್ಯಭಾಗದಲ್ಲಿ ನಾಲ್ಕು ಕಂಬಗಳ ಮೇಲೆ ಬೋದಿಗೆಯ ತೊಲೆಗಳಿವೆ. ಈ ಕಂಬಗಳ ಪಕ್ಕದ ಪಡಸಾಲೆಯಿಂದ ಒಳಹಜಾರಕ್ಕೆ ಬೆಳಕು ಬರುತ್ತದೆ. ಇದಕ್ಕಾಗಿಯೇ ಆ ಗೋಡೆಗಳ ನಡುವೆ ಜಾಲಂದರಗಳನ್ನು ನಂತರ ಕೂಡಿಸಿರುವುದು. ಈ ನಡುವಣ ಭಾಗ ಬಿಟ್ಟು ಉಳಿದ ಮಾಳಿಗೆ ಹೊರಭಾಗಕ್ಕೆ ಇಳಿಜಾರಾಗಿದೆ. ಇದರ ಹೊರಗಡೆ ತೆರೆದ ಮುಖಮಂಟಪ. ಮಂಟಪದ ಎಡಕ್ಕೆ ಕಂಬಗಳು ಮತ್ತು ತೊಲೆಗಳಿಂದ ಪ್ರತ್ಯೇಕಿಸಲ್ಪಟ್ಟ ಭಾಗದಲ್ಲಿ ಮಾಳಿಗೆಯ ಮೇಲೆ ಹೋಗಲು ಕಲ್ಲಿನ ಏಣಿಯನ್ನು ಕಡೆದು ಮೇಲೆ ರಂಧ್ರವನ್ನು ಕೊರೆದಿದೆ.

ಕೆಳಗಿನ ಗರ್ಭಗುಡಿಗೆ ಸರಿಯಾಗಿ ಮೇಲಿನ ಮಾಳಿಗೆಯಲ್ಲೂ ಒಂದು ಗರ್ಭಗೃಹವಿದೆ. ಕೆಳಗಣ ಗರ್ಭಗೃಹದ ದ್ವಾರದ ಮೇಲೆ ಪುರುಷಾಕಾರದ ಗರುಡ ವಿಗ್ರಹವಿದೆ. ಆದರೆ ಇದು ಶಿವಾಲಯ, ಒಳಗೆ ಲಿಂಗವಿದೆ. ಮುಂದಿನ ಮೂರು ಚೌಕಾಂಕಣಗಳ ಛಾವಣಿಗಳು ಬೇರೆ ಬೇರೆ ಮಟ್ಟದಲ್ಲಿವೆ. ಮಧ್ಯದಲ್ಲಿ ಚಪ್ಪಟೆಯ ಛಾವಣಿ. ಉಳಿದೆಲ್ಲ ಇಳಿಜಾರುಗಳು.

ಮುಖಮಂಟಪ ೧೮’ ೭.೫” ಉದ್ದ ಮತ್ತು ೩೩’ ೫” ಅಗಲವಾಗಿದೆ. ಮೂರು ಸಾಲುಗಳಲ್ಲಿ ೧೨ ಕಂಬಗಳು, ಕಂಬದ ಹೊರಮುಖದಲ್ಲಿ ಪೂರ್ಣ ಕುಂಭಗಳನ್ನು ಕೆತ್ತಿದೆ. ಪೂರ್ಣಕುಂಭ ಸಮೃದ್ಧಿಸೂಚಕ ಚಿಹ್ನೆ. ನೀರಿನಿಂದ ತುಂಬಿ ತುಳುಕುತ್ತಿರುವ ಘಟದಲ್ಲಿ ಬಳ್ಳಿಯೊಂದು ಹೊರಬಿದ್ದಿರುವುದು ಇದರ ಸಂಕೇತ. ಕಂಬಗಳ ಮೇಲೆ ಮೂರ್ತಿಗಳು ಕಂಡರಿಸಲ್ಪಟ್ಟಿವೆ. ಒಂದರಲ್ಲಿ ಆಮೆಯ ಮೇಲೆ ಕಾಲನ್ನೂರಿರುವ ಯಮುನೆ, ಇನ್ನೊಂದರಲ್ಲಿ ಮಕರದ ಮೇಲೆ ಕಾಲಿಟ್ಟಿರುವ ಗಂಗೆ. ಚಿತ್ರಾಕಾರದ ಜಾಲಂದರಗಳು. ಚಕ್ರಗಳ ಅರೆಗಳಲ್ಲಿ ಮೀನಿನ ಚಿತ್ರಗಳನ್ನು ಬಿಡಿಸಿದೆ. ಕಂಬಗಳ ಮೇಲೆ ಪ್ರಣಯಾಸಕ್ತ ದಂಪತಿಗಳ ವಿಗ್ರಹಗಳು. ಒಂದರ ಮೇಲೆ ತರುಣಿಯೊಬ್ಬಳು ಬ್ರಹ್ಮಚಾರಿಯೊಬ್ಬನನ್ನು ಕೆಣಕುತ್ತಿರುವ ಚಿತ್ರ, ಆಕೆಯಿಂದ ಪಾರಾಗಲು ಕಮಂಡಲವನ್ನು ಬಳಸಲು ಎತ್ತಿದ ಅವನ ಕೈಯನ್ನು ಆಕೆ ತಡೆಹಿಡಿದಿದ್ದಾಳೆ. ಬ್ರಹ್ಮಚಾರಿಯ ನಿರಾಕರಣೆಗೆ ಸರ್ವ ಸುಂದರಿಯಾದ ಆಕೆಯ ಗಾರ್ದಭ ಮುಖವೇ ಕಾರಣ. ಮೇಲಿನ ಗರ್ಭಗೃಹದ ಹೊರಗೋಡೆಗಳಲ್ಲಿ ಚತುರ್ಭುಜ ವಿಷ್ಣು ಹಾಗೂ ಸೂರ್ಯನ ವಿಗ್ರಹಗಳಿವೆ. ಈ ಕಾರಣದಿಂದ ಕೆಲವರು ಇದನ್ನು ಸೂರ್ಯನಾರಾಯಣನ ಗುಡಿ ಎಂದೂ ಕರೆದಿದ್ದಾರೆ.

ದುರ್ಗಗುಡಿ ಅಸಾಮಾನ್ಯ ರೀತಿಯದು. ಬೌದ್ಧರ ಚೈತ್ಯಾಲಯದ ಮಾದರಿಗಳನ್ನು ಹೋಲುವಂತೆ ಯೋಜಿಸಲಾದ ಗಜಪೃಷ್ಠಾಕೃತಿ ವಿನ್ಯಾಸದ ಈ ಗುಡಿ ಬಹುಶಃ ಕ್ರಿ. ಶ. ೬೦೦ಕ್ಕೂ ಹಿಂದಿನದೆಂದು ಒಂದು ಅಭಿಪ್ರಾಯವಿದೆ. ಮುಂಭಾಗದಲ್ಲಿ ಆಯಾಕಾರದ ಮುಂಚಾಚಿದ ಕಿರುಮಂಟಪ. ಪಕ್ಕದ ಗೋಡೆಗಳು ಅದೇ ನೇರದಲ್ಲಿ ಹಿಂಭಾಗದಲ್ಲಿ ಅರ್ಧವೃತ್ತಾಕಾರದಲ್ಲಿ ಸೇರುತ್ತವೆ. ಗೋಡೆಗಳನ್ನು, ಕಂಬಗಳನ್ನು ಎತ್ತರದ ಜಗುಲಿಯ ಮೇಲೆ ಎಬ್ಬಿಸಿದೆ. ದೇವಾಲಯದ ಪ್ರವೇಶ ಎರಡೂ ಪಕ್ಕದ ಪಾವಟಿಗೆಗಳ ಮೂಲಕ. ಮೇಲಿನ ವೇದಿಕೆಗೆ ಹೊಂದಿದಂತೆ ಮುಖಮಂಟಪ. ಪಾಗಾರದ ನಾಲ್ಕು ಕಂಬಗಳು ಈ ಮುಖಮಂಟಪದ ಆಧಾರಗಳಾಗಿ ನಿಂತಿವೆ. ಒಳಮಂಟಪ (ಸಭಾಮಂಟಪ) ದ್ವಾರಪುಷ್ಪಗಳು, ಬಳ್ಳಿಗಳು, ಪೂರ್ಣಕಲಶಗಳಿಂದ ಅಲಂಕೃತ. ಸಭಾಮಂಟಪವನ್ನು ನಾಲ್ಕು ಕಂಬಗಳ ಹೊರಗಿನ ಸುತ್ತುಮಂಟಪದಿಂದ ಬೇರ್ಪಡಿಸಿವೆ. ಈ ಮೊಗಸಾಲೆ ಸಭಾಮಂಟಪ ಹಾಗೂ ಗರ್ಭಗೃಹಗಳನ್ನು ಸುತ್ತುವರಿದಿದೆ. ಹೊರ ಪಾಗಾರದ ಮೇಲಿನ ೩೩ ಕಂಬಗಳು ಈ ಮೊಗಸಾಲೆಯ ಹೊರಭಾಗಕ್ಕೆ ಆಸರೆಯಾಗಿವೆ. ಮೊಗಸಾಲೆಯ ಒಳಗೋಡೆಯಲ್ಲಿ ಸಭಾಮಂಟಪ ಹಾಗೂ ಗರ್ಭಗೃಹದ ಗೋಡೆಗೆ ಸೇರಿದಂತೆ ಮಾಡುಗಳನ್ನು ಕೊರೆಯಲಾಗಿದೆ. ಮೊಗಸಾಲೆಯ ಮಾಳಿಗೆ ಇಳಿಜಾರಾಗಿದ್ದು ಅಲ್ಲಿ ನೀರು ನಿಲ್ಲದಂತೆ ಎಚ್ಚರವಹಿಸಲಾಗಿದೆ. ಗರ್ಭಗೃಹ ಹಾಗೂ ಸಭಾಮಂಟಪವನ್ನು ಸೇರಿಸಿದಂತೆ ಇನ್ನೊಂದು ಮಾಳಿಗೆ ಇದ್ದು ಗರ್ಭಗೃಹದ ಮೇಲೆ ಶಿಖರ ಎದ್ದು ನಿಂತಿದೆ. ಮೇಲಿನ ಮಾಳಿಗೆಯ ಕೆಳಗೆ ಒಳಗಿನ ಪ್ರದಕ್ಷಿಣಾ ಪಥ ಮತ್ತು ಸಭಾಮಂಟಪದ ಎರಡೂ ಭಾಗಗಳಿಗೆ ಸೇರಿದಂತೆ ಒಂದು ಇಳಿಜಾರು ಛಾವಣಿ. ಅದಕ್ಕೂ ಕೆಳಮಟ್ಟದಲ್ಲಿ ಹೊರಗಿನ ಕೈಸಾಲೆಗೆ ಸೇರಿದಂತೆ ಇನ್ನೂ ಒಂದು ಇಳಿಜಾರು ಛಾವಣಿ. ಮೇಲಿನ ಶಿಖರ ಚತುರಸ್ರಾಕಾರದಲ್ಲಿದ್ದು, ರೇಖಾನಾಗರ ವಿನ್ಯಾಸವನ್ನು ಪ್ರತಿನಿಧಿಸುತ್ತದೆ. ಕಂಬಗಳಿಗೆ ಪೀಠಗಳಿಲ್ಲದಿರುವುದೊಂದು ಗಮನಾರ್ಹ. ಚಚ್ಚೌಕಾಕಾರದ ಈ ಕಂಬದ ಬೋದಿಗೆಗಳು ಸುಮಾರು ನಾಲ್ಕು ಅಡಿಗಳಷ್ಟು ಎತ್ತರವಾಗಿದ್ದು ಅಲಂಕಾರಪಟ್ಟಿಕೆಗಳಿಂದ ಕೂಡಿವೆ. ಅಜಂತಾದ

೨೯ನೆಯ ಗುಹೆಯನ್ನು ಇದು ಹೋಲುತ್ತದೆಂದು ಕಸೆನ್ಸ್‌ರವರು ಅಭಿಪ್ರಾಯಪಟ್ಟಿದ್ದಾರೆ. ಐಹೊಳೆಯಲ್ಲಿಯೇ ಅತ್ಯುತ್ತಮವಾದ ಹಲವಾರು ಮೂರ್ತಿಶಿಲ್ಪಗಳನ್ನು ಈ ದೇವಾಲಯದಲ್ಲಿ ಕಾಣಬಹುದು. ಮುಂಭಾಗದ ಕಂಬಗಳಲ್ಲಿ ಪ್ರಣಯಾಸಕ್ತ ದಂಪತಿಗಳ ಚಿತ್ರಗಳು. ಇಲ್ಲಿನ ವಿಗ್ರಹಗಳಲ್ಲಿ ಅಂದಿನ ಶಿಲ್ಪಿಯು ಶಿಲ್ಪದಲ್ಲಿ ಭಾವನೆಗಳನ್ನು ಮೂರ್ತಸ್ವರೂಪದಲ್ಲಿ ಕಾಣಿಸುವ ಕಲೆಯಲ್ಲಿ ಕಂಡ ಯಶಸ್ಸನ್ನು ಗುರುತಿಸಬಹುದು. ಮುಖಮಂಟಪದ ಕಂಬಗಳಲ್ಲಿ ಹಿರಣ್ಯಕಶಿಪುವಿನ ಹೊಟ್ಟೆಯನ್ನು ಬಗೆಯುತ್ತಿರುವ ನರಸಿಂಹ, ಅರ್ಧನಾರೀಶ್ವರ ಇತ್ಯಾದಿ ದೇವತಾವಿಗ್ರಹಗಳನ್ನು ಕಡೆಯಲಾಗಿದೆ. ಮೊಗಸಾಲೆಯ ಮಾಡುಗಳಲ್ಲಿ ವೃಷಭವಾಹನ ಶಿವ, ಗರುಡಾಸೀನ ವಿಷ್ಣು, ನಿಂತಿರುವ ನರಸಿಂಹ, ವರಾಹ, ಮಹಿಷಾಸುರ ಮರ್ದಿನಿಯರ ವಿಗ್ರಹಗಳು ಅಂದಿನ ಶಿಲ್ಪಕಲಾ ಚಾತುರ್ಯಕ್ಕೆ ಸಾಕ್ಷಿಯಾಗಿವೆ.

ಮಹಾಕೂಟದ ಮಹಾಕೂಟೇಶ್ವರಾಲಯ ಸಹ ಸುಮಾರು ಕ್ರಿ. ಶ. ೬೦೦ರ ಸುಮಾರಿನದು. ಇನ್ನೊಂದು ಮಲ್ಲಿಕಾರ್ಜುನ ದೇವಾಲಯ. ಎರಡೂ ಒಂದೇ ತರಹದ ಗುಡಿಗಳು. ಚೌಕಾಕಾರದ, ಸಾಂಧಾರ ಗರ್ಭಗೃಹ, ಇದರ ಮುಂದೆ ಕಿರಿದಾದ ಮುಖಮಂಟಪ ಮತ್ತು ಇನ್ನೂ ಅಗಲವಾದ ಸಭಾಮಂಟಪ. ಮುಂಭಾಗದಲ್ಲಿ ಪ್ರತ್ಯೇಕವಾದ ನಂದಿಮಂಟಪ, ಗರ್ಭಗೃಹದ ಮೇಲೆ ದ್ರಾವಿಡ ಶಿಖರ. ಎತ್ತರವಾದ ಅಧಿಷ್ಠಾನದ ಅಡ್ಡಪಟ್ಟಿಗಳಲ್ಲಿ ಶೈವ ಪುರಾಣಗಳಿಂದ ಆಯ್ದ ಕಥಾನಕಗಳ ಶಿಲ್ಪಗಳು, ಲೌಕಿಕ ವಿಷಯಗಳ ಶಿಲ್ಪಗಳು. ಗೋಡೆಯ ಹೊರಮುಖದ ಗೂಡುಗಳಲ್ಲಿ ಶೈವದ್ವಾರಪಾಲಕರು, ಶಿವಗಣಗಳು, ಶಿವ, ಅರ್ಧನಾರೀಶ್ವರ, ವಿಷ್ಣು ಮುಂತಾದ ದೇವತಾವಿಗ್ರಹಗಳಿವೆ. ಮಹಾಕೂಟ ಮಲ್ಲಿಕಾರ್ಜುನದೇವಾಲಯಗಳ ನಡುವೆ ಕೊಳದ ಸುತ್ತಲೂ ಕೆಲವು ಸಣ್ಣ ಪ್ರಮಾಣದ ಗರ್ಭಗೃಹ ಮತ್ತು ಮುಖಮಂಟಪಗಳನ್ನು ಮಾತ್ರ ಒಳಗೊಂಡ ದೇವಾಲಯಗಳಿವೆ. ಇವುಗಳಲ್ಲಿ ಮೂರು ರೇಖಾನಾಗರ ಶೈಲಿಯ, ಏಳು ಪೂರ್ವಭಾವಿ ಕದಂಬನಾಗರ ಶೈಲಿಯ ಶಿಖರಗಳನ್ನು ಹೊಂದಿವೆ. ಇವು ಇನ್ನೂ ಆರಂಭದ ದೆಶೆಯ ಶಿಖರಗಳು. ಹೊರಗೋಡೆಗಳ ಹೊರಕೋಷ್ಠಗಳಲ್ಲಿ ಲಕುಲೀಶ, ಶಿವ, ಅರ್ಧನಾರೀಶ್ವರ, ನರಸಿಂಹ, ಭೂವರಾಹ, ಹರಿಹರರ ಶಿಲ್ಪಗಳಿವೆ. ಮಹಾಕೂಟೇಶ್ವರದ ಮುಂದೆ ನಿಲ್ಲಿಸಲಾಗಿದ್ದ ಚಾಲುಕ್ಯ ಮಂಗಲೇಶನ ಕ್ರಿ. ಶ. ೫೨೪ರ ಶಾಸನಸ್ತಂಭ ಈಗ ಬಿಜಾಪುರದ ಪುರಾತತ್ತ್ವ ಮತ್ತು ವಸ್ತು ಸಂಗ್ರಹಾಲಯದಲ್ಲಿದೆ. ದೇವಾಲಯದ ಇನ್ನೊಂದು ಕಂಬದ ಮೇಲೆ ಚಾಲುಕ್ಯ ವಿಜಯಾದಿತ್ಯನ ಪ್ರಾಣವಲ್ಲಭೆ ವಿನಾಪೋಟಿಯ ಶಾಸನವಿದೆ. ಸುಮಾರು ಒಂದು ಕಿಲೋಮೀಟರ್ ದೂರದ ಹಳೆಯ ಮಹಾಕೂಟದಲ್ಲಿ ಗಜಪೃಷ್ಠಾಕೃತಿಯ ಸರಳ ವಿನ್ಯಾಸದ ಶಿವದೇವಾಲಯವೊಂದಿದೆ. ಗರ್ಭಗೃಹದ ಮುಂದಿನ ಸಭಾಮಂಟಪದ ಮಧ್ಯದಲ್ಲಿ ನಾಲ್ಕು ಕಂಬಗಳು. ಸಾಂಧಾರವಾದ ಗರ್ಭಗುಡಿಯಲ್ಲಿ ವರ್ತುಲಾಕಾರದ ಜಲಧಾರೆಯುಳ್ಳ ಪೀಠದಲ್ಲಿ ಹಿರಿದಾದ ಲಿಂಗವಿದೆ. ದ್ವಾರಬಂಧದ ಮೇಲೆ ಪುರುಷಾಕಾರದ ಗರುಡನ ಉಬ್ಬುಶಿಲ್ಪ. ಈ ದೇವಾಲಯ ಸುಮಾರು ೯ನೆಯ ಶತಮಾನದ್ದೆನ್ನಲಾದರೂ ಇದು ಸ್ವಲ್ಪ ನಂತರದ ಕಾಲದ್ದೆಂದು ತೋರುತ್ತದೆ.

ವಾಸ್ತುಶಿಲ್ಪದ ಬೆಳವಣಿಗೆಯ ದೃಷ್ಟಿಯಿಂದ ನಂತರದ ಕಾಲದ್ದೆಂದು ಹೇಳಬಹುದಾದ್ದು ಐಹೊಳೆಯ ತಾರಬಸಪ್ಪನ ಗುಡಿ. ಇದರ ಮುಖಮಂಟಪಕ್ಕೆ ಹೋಗಲು ಮೆಟ್ಟಿಲುಗಳಿವೆ. ಮುಖಮಂಟಪವನ್ನು ನಾಲ್ಕು ಕಂಬಗಳು ಹೊತ್ತಿವೆ. ಮುಂದಿನ ಎರಡು ಕಂಬಗಳ ಮೇಲೆ ನಾಲ್ಕು ಮುಖಗಳ ಹಾಗೂ ಹಿಂದಿನ ಎರಡು ಕಂಬಗಳ ಮೇಲೆ ಎರಡು ಮುಖಗಳ ಬೋದಿಗೆಗಳಿವೆ. ಸಭಾಮಂಟಪಕ್ಕೆ ಹೋಗುವ ದ್ವಾರದ ಮೇಲೂ ಗರ್ಭಗೃಹದ ದ್ವಾರದ ಮೇಲೂ ಗರುಡನ ಚಿತ್ರಗಳಿವೆ. ಸಭಾಮಂಟಪದ ದ್ವಾರದ ಎರಡೂ ಪಕ್ಕದ ಗೋಡೆಗಳಲ್ಲಿ ಜಾಲಂದರಗಳಿದ್ದು ತನ್ಮೂಲಕ ಬೆಳಕು ಒಳಗೆ ಹಾಯುತ್ತದೆ. ಸಭಾಮಂಟಪದ ಮಧ್ಯೆ ನಾಲ್ಕು ಕಂಬಗಳು, ಹಿಂಬದಿಯ ಮತ್ತು ಮುಂಬದಿಯ ಗೋಡೆಗಳಿಗೆ ಹೊಂದಿದಂತೆ ಎರಡೆರಡು ಗೋಡೆಗಂಬಗಳಿವೆ. ಈ ಚೌಕಾಕಾರದ ಕಂಬಗಳಿಗೆ ಪೀಠಗಳಿಲ್ಲ. ಮೇಲ್ಭಾಗದ ಪೀಠಪಂಕ್ತಿಗಳಲ್ಲಿ ಚೈತ್ರದ ಕಮಾನುಗಳನ್ನು ಕೊರೆಯಲಾಗಿದೆ. ಸಭಾಗೃಹದ ಎರಡೂ ಬದಿಗಳ ಗೋಡೆಗಂಬಗಳ ಬೋದಿಗೆಗಳಲ್ಲಿ ಚೈತ್ಯಾಕೃತಿಗಳನ್ನು ಕೆತ್ತಿದೆ. ಇವುಗಳ ಮೇಲೆ ಅಮಲಕದ ಬೋದಿಗೆಗಳು, ತುದಿಯಲ್ಲಿ ಕಲಶಾಲಂಕಾರ. ಇಲ್ಲಿ ಶಿಲ್ಪಿ ಪ್ರಗತಿಯ ಇನ್ನೊಂದು ಹೆಜ್ಜೆ ಇಟ್ಟಿದ್ದಾನೆ. ಗರ್ಭಗೃಹಕ್ಕೇ ಪ್ರತ್ಯೇಕ ಸ್ಥಾನ ನೀಡಲಾಗಿದ್ದು, ಇದು ಸಭಾ ಮಂಟಪದಿಂದ ಪ್ರತ್ಯೇಕಿಸಲ್ಪಟ್ಟಿದೆ. ಗರ್ಭಗುಡಿಯನ್ನು ನಾಲ್ಕು ಕಂಬಗಳು ಆಧರಿಸಿವೆ. ಹಿಂದಿನ ಎರಡು ಚೌಕಾಕಾರದ್ದು–ಆದರೆ ಮುಂದಿನ ಒಂದರ ಕೆಳಭಾಗ ಮಾತ್ರ ಚೌಕವಾಗಿದ್ದು ಮೇಲುಗಡೆ ಅಷ್ಟಕೋನಗಳ ದಿಂಡುಗಳಿವೆ. ಗರ್ಭಗೃಹದೊಳಗೆ ಹೀಗೆ ಕಂಬಗಳನ್ನು ಐಹೊಳೆಯ ಬೇರಾವ ಸಮಕಾಲೀನ ಯಾ ನಂತರದ ಗುಡಿಗಳಲ್ಲಿ ಕಾಣಲಾಗದು. ಗರ್ಭಗೃಹದ ಮೂರು ಗೋಡೆಗಳಲ್ಲಿ ಒಂದೊಂದು ಮಾಡು. ಆದರೆ ಅದರೊಳಗಿದ್ದಿರಬಹುದಾದ ವಿಗ್ರಹಗಳು ಈಗಿಲ್ಲ. ಮೂಲ ವಿಗ್ರಹ ಮುತ್ತಿನ ಸರ, ಯಜ್ಞೋಪವೀತ, ನಡುಪಟ್ಟಿಗಳನ್ನು; ಕರಂಡ ಮುಕುಟವನ್ನು ಧರಿಸಿರುವ ಸೂರ್ಯನದು. ವಿಗ್ರಹದ

ಪೀಠದಲ್ಲಿ ಸಪ್ತಾಶ್ವಗಳಿಂದ ಸೆಳೆಯಲ್ಪಟ್ಟ ರಥವನ್ನು ಎರಡು ಕೈಗಳಲ್ಲಿಯೂ ಕಮಲವನ್ನು ಹಿಡಿದಿರುವ ಅರುಣನನ್ನು ಬಿಡಿಸಿದೆ. ವಿಗ್ರಹದ ಹಿಂಬದಿಯ ಪ್ರಭಾವಳಿಯಲ್ಲಿ ಇನ್ನೂ ಎಂಟು ಗ್ರಹಗಳನ್ನು ಬಿಡಿಸಿದೆ. ಸೂರ್ಯ ಬರಿಗಾಲಲ್ಲಿ ನಿಂತಿರುವುದೊಂದು ವಿಶೇಷ–ಸಾಮಾನ್ಯವಾಗಿ ಸೂರ್ಯ ಪಾದರಕ್ಷೆಗಳನ್ನು ಧರಿಸಿದಂತೆ ಚಿತ್ರಿಸುವುದು ಶಿಲ್ಪಸಂಪ್ರದಾಯ.

ಲಾಡಖಾನ್ ದೇವಾಲಯದ ಸಮೀಪದಲ್ಲಿ ಮಂಟಪದಂತೆಯೇ ಇರುವ ಕಟ್ಟಡ ಗೌಡರಗುಡಿ ಎನಿಸಿಕೊಂಡಿರುವ ಗುಡಿ. ಇದರಲ್ಲಿ ಗರ್ಭಗುಡಿ ಸಭಾಮಂಟಪದಿಂದ ಪ್ರತ್ಯೇಕಿಸಲ್ಪಟ್ಟಿದೆ. ಆದರೆ ಇದಕ್ಕೆ ಪ್ರದಕ್ಷಿಣಾಪಥವೂ ಇದೆ. ಎತ್ತರದ ಅಧಿಷ್ಠಾನದ ಮೇಲಿರುವ ಈ ಗುಡಿಯ ತಳಪಾಯದಲ್ಲಿ ಈಚೆಗೆ ಉತ್ಖನನ ನಡೆಸಲಾಗಿದ್ದು ಕೆಳಗೆ ಮತ್ತೊಂದು ಕಟ್ಟಡದ ಅವಶೇಷ ಕಾಣಿಸಿಕೊಂಡ ಕಾರಣ ಇವು ಲಾಡಖಾನ್ ದೇವಾಲಯಕ್ಕಿಂತಲೂ ಪ್ರಾಚೀನವಾದುದೆಂದು ಪುರಾತತ್ವ ಇಲಾಖೆಯವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ವಿವರಗಳು ಲಭ್ಯವಿಲ್ಲ. ಆದರೆ ಲಾಡಖಾನ್ ದೇವಾಲಯದಂತೆಯೇ ಇದರ ಮಾಳಿಗೆಯೂ ಇಳಿಜಾರಾಗಿದ್ದು ಮಾಳಿಗೆಯನ್ನು ೧೬ ಚೌಕಾಕಾರದ ದಪ್ಪಕಂಬಗಳು ಆಧರಿಸಿವೆ. ಸುತ್ತಲೂ ಕಕ್ಷಾಸನಗಳು. ಒಳ ಹಜಾರದಲ್ಲಿ ನಾಲ್ಕು ಕಂಬಗಳು. ಇವು ಸಭಾಮಂಟಪದ ಮಧ್ಯಭಾಗವನ್ನು ಇಕ್ಕೆಲದ ಹಜಾರಗಳಿಂದ ಪ್ರತ್ಯೇಕಗೊಳಿಸಿದಂತಿವೆ. ಗರ್ಭಗೃಹದ ದ್ವಾರ ಚಿತ್ರಮಯ. ಬಾಗಿಲುವಾಡದ ಹಾಸುಗಲ್ಲಿನಲ್ಲಿ ಮಾನವಾಕೃತಿಯ ಗರುಡ. ಪಕ್ಕದ ಗೋಡೆಗಂಬಗಳ ಕಂಠದಲ್ಲಿ ಪೂರ್ಣಕಲಶಗಳು. ಇದರ ಮೇಲಿನ ಬೋದಿಗೆಗಳು ದ್ರಾವಿಡ ಶೈಲಿಯ ಶಿಖರಗಳನ್ನು ಹೊತ್ತಿವೆ. ಇವುಗಳ ನಡುವಣ ಚೈತ್ಯದಲ್ಲಿ ಕಮಲದ ಮೇಲೆ ಪದ್ಮಾಸನದಲ್ಲಿ ಕುಳಿತ ಲಕ್ಷ್ಮಿಯ ವಿಗ್ರಹ – ಎರಡೂ ಬದಿಗಳಲ್ಲಿ ಒಂದೊಂದು ಆನೆ ತನ್ನ ಸೊಂಡಿಲಿನಿಂದ ಜಲವನ್ನು ಆಕೆಯ ಮೇಲೆ ಸಿಂಪಡಿಸುತ್ತಿವೆ. ಗರ್ಭಗೃಹದಲ್ಲಿ ಈಗ ವಿಗ್ರಹವಿಲ್ಲ. ಸುಮಾರು ೮ನೆಯ ಶತಮಾನದ ಶಾಸನ–ಇದು ಭಗವತಿ ಗುಡಿಯಾಗಿದ್ದಿರಬಹುದೆಂದು ಸೂಚಿಸುತ್ತದೆ.

ಪ್ರವಾಸೀಮಂದಿರದ ಹಿಂದೆ ಪಶ್ಚಿಮಾಭಿಮುಖವಾಗಿರುವ ಹುಚ್ಚಿಮಲ್ಲಿ ಗುಡಿ ಸಹ ಗೌಡರಗುಡಿಯಂತೆ ಸುಮಾರು ೭ನೆಯ ಶತಮಾನದ್ದು. ಇದರಲ್ಲಿ ಮೊದಲಬಾರಿ ಸಭಾಮಂಟಪ ಮತ್ತು ಗರ್ಭಗೃಹಗಳ ನಡುವೆ ಒಂದು ಅಂತರಾಳವನ್ನು ಸೇರಿಸಿದೆ. ದೇವಾಲಯದ ಮುಖಮಂಟಪಕ್ಕೆ ಸುಮಾರು ಎಂಟು ಮೆಟ್ಟಲುಗಳಿವೆ. ಎಂದಮೇಲೆ ಇದು ಏಳಡಿ ಎತ್ತರದ ವೇದಿಕೆಯ ಮೇಲಿದ್ದಂತಿದೆ. ಅಂತರಾಳ, ಗರ್ಭಗೃಹಗಳು ಸಭಾಮಂಟಪಕ್ಕೂ ಸ್ವಲ್ಪ ಎತ್ತರದಲ್ಲಿವೆ. ಜಾಲಂದರಗಳ ಒಂದು ಗೋಡೆ ಅಂತರಾಳವನ್ನು ರಂಗಮಂಟಪದಿಂದ ಬೇರ್ಪಡಿಸಿದೆ. ಮುಖಮಂಟಪದ ಮಾಳಿಗೆಯಲ್ಲಿ ಕಾರ್ತಿಕೇಯನ ವಿಗ್ರಹ. ಗರ್ಭಗೃಹ ಚೌಕಾಕಾರವಾಗಿರುವುದೊಂದು ವೈಶಿಷ್ಟ್ಯ. ಗರ್ಭಗೃಹದ ಮೇಲೆ ರೇಖಾನಾಗರ ಶಿಖರ. ಇದರ ಉತ್ತರ ಮತ್ತು ಪೂರ್ವದ ದಿಕ್ಕುಗಳಲ್ಲಿ ಬ್ರಹ್ಮ ಸೂರ್ಯರ ಮೂರ್ತಿಗಳು ಪಶ್ಚಿಮದ ಸುಕನಾಸಿಯಲ್ಲಿ ನಟರಾಜನ ವಿಗ್ರಹವೂ ಇದೆ. ಇದನ್ನು ಇತ್ತೀಚೆಗೆ ಕಾರ್ತಿಕೇಯನ ಗುಡಿ ಎಂದು ಕರೆಯಲಾಗಿದೆ. ಶಿಖರದ ಮೇಲಿನ ಅಮಲಕ ಈಗ ಕೆಳಗೆ ಬಿದ್ದಿದೆ. ರೇಖಾನಾಗರ ಶಿಖರಗಳನ್ನುಳ್ಳ ಬಡಿಗೇರ ಹಾಗೂ ಚಕ್ರಗುಡಿಗಳು ಸುಮಾರು ೯ನೆಯ ಶತಮಾನಕ್ಕೆ ಸೇರಿದವುಗಳು. ಬಡಿಗೇರ ಗುಡಿಯ ಶಿಖರದ ಮುಂಭಾಗದ ಗೂಡಿನಲ್ಲಿ ಸೂರ್ಯನ ವಿಗ್ರಹವಿದ್ದು ಇದು ಸೂರ್ಯಾಲಯವೆನ್ನಬಹುದು.

ಸುಮಾರು ಗೌಡರ ಗುಡಿಯ ವಿನ್ಯಾಸದ್ದೇ ಆದ ಚಿಕ್ಕೀಗುಡಿ ೭ನೆಯ ಶತಮಾನದ್ದೆನ್ನಲಾಗಿದೆ. ಗರ್ಭಗೃಹದ ಸುತ್ತಲಿನ ಪ್ರದಕ್ಷಿಣಾಪಥದ ಹೊರಗೋಡೆಗಳಲ್ಲಿ ಮೂರು ಮೂರು ಜಾಲಂದರಗಳಿವೆ. ಮಧ್ಯದ್ದು ಹಿರಿದು. ಎರಡೂ ಪಕ್ಕಗಳಲ್ಲಿರುವುದು ಕಿರಿಯದು. ದ್ವಾರಪಟ್ಟಿಯ ಮೇಲೆ ಗರುಡ. ಅದರ ಮೇಲಿನ ಪಟ್ಟಿಯ ಚೈತ್ಯಕಿಟಕಿಗಳಲ್ಲಿ ವೃಷಭಸಮೇತನಾದ ಶಿವ, ಬ್ರಹ್ಮ ಮತ್ತು ವಿಷ್ಣುಗಳ ಶಿಲ್ಪಗಳಿವೆ. ಗರ್ಭಗುಡಿಯ ಮುಂದಿನ ಮಂಟಪದಲ್ಲಿ ಗಂಧರ್ವರ, ಅನಂತಾಸೀನ, ಲಕ್ಷ್ಮೀಸಮೇತ ವಿಷ್ಣು, ತ್ರಿವಿಕ್ರಮ, ನಟರಾಜ ಮುಂತಾದ ದೇವತೆಗಳ ಶಿಲ್ಪಗಳಿವೆ. ಮಂಟಪದ ಮಧ್ಯದ ಛಾವಣಿಯನ್ನು ಮೇಲೆ ಎತ್ತಿ ಅದರ ಪಕ್ಕಗಳಲ್ಲಿ ಕಿಂಡಿಗಳನ್ನು ಕೊರೆದು ಛತ್ತಿನ ಈ ಶಿಲ್ಪಗಳಿಗೆ ಬೆಳಕು ಬೀಳುವಂತೆ ಮಾಡಿರುವುದೊಂದು ವಿಶೇಷ.

ಸ್ಪಷ್ಟವಾಗಿ ಕಾಲದ ಸೂಚನೆ ಇರುವ ಗುಡಿ ಮೇಗುಡಿ. ಶಕ ೫೫೬ ರಲ್ಲಿ (ಕ್ರಿ. ಶ. ೬೩೪ರಲ್ಲಿ) ಅಸ್ತಿತ್ವಕ್ಕೆ ಬಂದ ಈ ಗುಡಿಯನ್ನು ಕಟ್ಟಿಸಿರುವ ರವಿಕೀರ್ತಿ–ಇಮ್ಮಡಿ ಪುಲಿಕೇಶಿಯ ಸೇನಾನಿ. ಇದೊಂದು ಜೈನಾಲಯ. ಒರಟು ಗೋಡೆಗಳಿಂದ ಸುತ್ತುವರಿದ ವಿಶಾಲವಾದ ಪ್ರಾಂಗಣದ ನಡುವೆ ಇರುವ ದೇವಾಲಯದ ಮುಂಭಾಗದಲ್ಲಿ ನಾಲ್ಕು ಕಂಬಗಳ ನಾಲ್ಕು ಸಾಲುಗಳಿರುವ ಚೌಕಮಂಟಪ. ಅದರ ಮುಂದೆ ಎರಡು ಬದಿಗಳಿಂದಲೂ ಏರಲು ಮೆಟ್ಟಿಲುಗಳು, ಮಂಟಪದ ಹಿಂದಕ್ಕೆ ಆಯಾಕಾರದ ಅಂತರಾಳ, ಚೌಕ ಸಾಂಧಾರ ಗರ್ಭಗುಡಿ. ಆದರೆ ಈ ಪ್ರದಕ್ಷಿಣಾಪಥವನ್ನು ಬೇರಾವಾಗಲೋ ಗೋಡೆಗಳ ಮೂಲಕ ಬೇರ್ಪಡಿಸುವ ಕೋಣೆಗಳಾಗಿ ಮಾಡಿರುವುದರಿಂದ ಈಗ ಪ್ರದಕ್ಷಿಣೆ ಸಾಧ್ಯವಿಲ್ಲ. ಗರ್ಭಗುಡಿಯ ಮೇಲೆ ಸರಿಯಾಗಿ ಇನ್ನೊಂದು ಗರ್ಭಗುಡಿ.

ಅಂತರಾಳದ ಮೂಲಕ ಇದಕ್ಕೆ ಮೆಟ್ಟಿಲುಗಳು. ಹಲವು ಅಡ್ಡಪಟ್ಟಿಗಳಿಂದ ಕೂಡಿರುವ ಎತ್ತರದ ಅಧಿಷ್ಠಾನದ ಮೇಲಿನ ಪಟ್ಟಿಯಲ್ಲಿ ಮನುಷ್ಯಮುಖವಿರುವ ಚೈತ್ಯಗಳು. ಕೆಳಗಿನ ಪಟ್ಟಿಗಳಲ್ಲಿ ವಾದ್ಯಗಾರರು, ಮಲ್ಲರು, ಹಾವಾಡಿಗರು ಚಿತ್ರಿಸಲ್ಪಟ್ಟಿದ್ದಾರೆ. ಭಿತ್ತಿಯ ಮೇಲೆ ಕೋಷ್ಠಗಳಿದ್ದರೂ ಶಿಲ್ಪಗಳಿಲ್ಲ. ಗರ್ಭಗೃಹದಲ್ಲಿ ಸಿಂಹಾಸನಾಸೀನ ತೀರ್ಥಂಕರ.


ನರಸೊಬ್ಬನೆಂಬ–ಜಂಬೂದ್ವೀಪದಲ್ಲಿ ಹಿಂದೆಂದೂ ಇರದ, ಮುಂದೆಂದೂ ಹುಟ್ಟದ–ಶಿಲ್ಪಿ ಕಟ್ಟಿರಬಹುದಾದ ಗುಡಿ ಹುಚ್ಚಪ್ಪಯ್ಯನ ಗುಡಿ. ರೇಖಾನಾಗರ ಶಿಖರದ ಈ ಆಲಯಕ್ಕೆ ನಾವು ಮಹತ್ವ ಕೊಡಬೇಕಾದದ್ದು ಇಲ್ಲಿನ ಅಸಾಧಾರಣ ಶಿಲ್ಪಗಳಿಗಾಗಿ. ಕಾಲ ಸುಮಾರು ೮ನೆಯ ಶತಮಾನ. ಇದೇ ಕಾಲದ ಗಳಗನಾಥ ದೇವಾಲಯದ ಮಂಟಪಕ್ಕೆ ಪೂರ್ವ, ದಕ್ಷಿಣ ಮತ್ತು ಉತ್ತರ ದಿಕ್ಕುಗಳಲ್ಲಿ ಪ್ರವೇಶದ್ವಾರಗಳಿವೆ. ಈಗ ಗರ್ಭಗೃಹದಲ್ಲಿ ಶಿವಲಿಂಗವಿದ್ದರೂ ಈ ಮೇಲಿನ ರೇಖಾನಾಗರ ಶಿಖರದ ಮುಂಚಾಚಿನಲ್ಲಿರುವುದು ವಿಷ್ಣುವಿನ ವಿಗ್ರಹ. ೧೦ ರಿಂದ ೧೨ನೆಯ ಶತಮಾನಗಳವರೆಗಿನ ಕಲ್ಯಾಣದ ಚಾಲುಕ್ಯರ ಕಾಲದ ಗುಡಿಗಳೂ ಐಹೊಳೆಯಲ್ಲಿವೆ.

ಪಟ್ಟದಕಲ್ಲಿನ ಗುಡಿಗಳು ಬಾದಾಮಿಯ ಚಾಲುಕ್ಯ ಅರಸರ ಕಾಲದ ವಾಸ್ತುಶಿಲ್ಪದ ಅತ್ಯುತ್ತಮ ನಿದರ್ಶನಗಳು. ಎರಡು ಶತಮಾನಗಳ ಹಿಂದೆ ರೂಪುಗೊಂಡ ದೇವಾಲಯಗಳು ಶೈಲಿಯಲ್ಲಿ ವಿವಿಧ ಲಕ್ಷಣಗಳನ್ನು ಕೂಡಿಸಿಕೊಂಡು ಈ ವೇಳೆಗೆ ವೈಶಿಷ್ಟ್ಯಪೂರ್ಣವಾದ ಸುಂದರ ಕಟ್ಟಡಗಳಾಗಿ ಬೆಳೆದು ಬಂದುವು. ಪಟ್ಟದಕಲ್ಲು ಒಂದು ಪ್ರಾಚೀನ ಸ್ಥಳ. ಪಟ್ಟದ ಕಿಸುವೊಳಲು ಎಂದು ಕರೆಯಲಾದ ಇಲ್ಲಿ ಚಾಲುಕ್ಯ ಅರಸರ ಪಟ್ಟಾಭಿಷೇಕ ನೆರವೇರಲ್ಪಡುತ್ತಿತ್ತು. ಮಲಪ್ರಭಾ ಎಡ ತೀರದಲ್ಲಿರುವ ಎತ್ತರವಾದ ಬಯಲಿನಲ್ಲಿ ಅವರ ಕಾಲಕ್ಕೆ ಸೇರಿದ್ದೆನ್ನಬಹುದಾದ ಮೃಣ್ಪಾತ್ರೆಗಳೂ, ಶಿಲಾಸ್ತಂಭಗಳೂ ಲಭಿಸಿವೆ. ಇದೇ ಪಟ್ಟಬಂಧೋತ್ಸವಕ್ಕೆ ಸಂಬಂಧಿಸಿದ ಸಭಾಮಂಟಪವಾಗಿದ್ದಿರಬಹುದೆಂದೂ ಊಹಿಸಲಾಗಿದೆ. ಸುತ್ತಲಿನ ಸ್ವಲ್ಪ ಕೆಂಪುಬಣ್ಣದ ಕಲ್ಲಿನ ಗುಡ್ಡಗಳಿಂದ ಇದಕ್ಕೆ ಕಿಸುವೊಳಲ್ (ಸಂಸ್ಕೃತದಲ್ಲಿ ರಕ್ತಪುರ) ಎಂಬ ಹೆಸರು ಬಂದಂತಿದೆ.

ವಾಸ್ತುಶಿಲ್ಪದ ದೃಷ್ಟಿಯಿಂದ ಇಲ್ಲಿನ ದೇವಾಲಯಗಳು ಮಹತ್ವಪೂರ್ಣವಾದವುಗಳು. ದ್ರಾವಿಡ ಮತ್ತು ನಾಗರ ಶೈಲಿಯ ಶಿಖರಗಳನ್ನುಳ್ಳ ದೇವಾಲಯಗಳನ್ನು ಇಲ್ಲಿ ಪಕ್ಕಪಕ್ಕದಲ್ಲಿಯೇ ನೋಡಬಹುದು. ಈಗ ಇಲ್ಲಿ ಹತ್ತು ದೇವಾಲಯಗಳಿದ್ದು, ಊರ ಹೊರಗಿನ ಜಿನಾಲಯವನ್ನು ಹೊರತುಪಡಿಸಿದಂತೆ ಉಳಿದೆಲ್ಲವೂ ನದೀ ತೀರದಲ್ಲಿ ದಕ್ಷಿಣದಿಂದ ಉತ್ತರಕ್ಕೆ ಹಬ್ಬಿರುವ ಶೈವಾಲಯಗಳು. ಕಾಲಾನುಕ್ರಮದ ದೃಷ್ಟಿಯಿಂದ ಈ ಎಂಟು ಶೈವಾಲಯಗಳು–ಪಾಪನಾಥ, ಸಂಗಮೇಶ್ವರ (ವಿಜಯೇಶ್ವರ), ವಿರೂಪಾಕ್ಷ (ಲೋಕೇಶ್ವರ), ಮಲ್ಲಿಕಾರ್ಜುನ (ತ್ರೈಲೋಕೇಶ್ವರ), ಗಳಗನಾಥ, ಜಂಬುಲಿಂಗ, ಕಾಡಸಿದ್ಧೇಶ್ವರ ಹಾಗೂ ಕಾಶಿವಿಶ್ವೇಶ್ವರ–ಸುಮಾರು ಕ್ರಿ. ಶ. ೬೫೦ ರಿಂದ ೭೫೦ ಅಥವಾ ನಂತರದ ಒಂದೆರಡು ದಶಕಗಳಲ್ಲಿ ಕಟ್ಟಲ್ಪಟ್ಟ ಗುಡಿಗಳು. ಶೈಲಿಯ ದೃಷ್ಟಿಯಿಂದಲೂ ಶಾಸನಾಧಾರಗಳಿಂದಲೂ ಈ ತೇದಿಗಳ ನಿರ್ಣಯವನ್ನು ಸಾಕಷ್ಟು ಖಚಿತತೆಯಿಂದಲೇ ಮಾಡಬಹುದಾಗಿದೆ.

ಪಾಪನಾಥ ದೇವಾಲಯದ ಕಾಲದ ಬಗೆಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಸುಮಾರು ಕ್ರಿ. ಶ. ೬೫೦ ರಿಂದ ೭೪೦ರವರೆಗೂ ಬೇರೆ ಬೇರೆ ತೇದಿಗಳನ್ನು ಸೂಚಿಸಲಾಗಿದೆ. ಈ ದೇವಾಲಯದ ಕಿರು ಶಾಸನಗಳಲ್ಲಿ ಸರ್ವಸಿದ್ಧಿ ಆಚಾರಿ, ಬಲದೇವ, ಚೆಜ್ಜಮ್ಮ ಎಂಬ ಶಿಲ್ಪಿಗಳ ಹೆಸರುಗಳಿವೆ. ಈ ಹೆಸರುಗಳು ವಿರೂಪಾಕ್ಷ ದೇವಾಲಯದಲ್ಲಿನ ಶಾಸನಗಳಲ್ಲೂ ಕಂಡುಬಂದಿವೆ. ಆದುದರಿಂದ ಇವು ಸುಮಾರು ಒಂದೇ ಕಾಲದವೆನ್ನಬಹುದಾದರೂ ವಿರೂಪಾಕ್ಷ ದೇವಾಲಯದ ಕೆತ್ತನೆಯಲ್ಲಿ ಕಂಡು ಬರುವ ನುಣುಪು, ಕೈಚಳಕಗಳು, ಪಾಪನಾಥ ದೇವಾಲಯದಲ್ಲಿ ಕಂಡು ಬರುವುದಿಲ್ಲ. ಮೊದಲು ಗರ್ಭಗೃಹ, ಅಂತರಾಳಗಳು ಕಟ್ಟಲ್ಪಟ್ಟು ತದನಂತರ ಸಭಾಮಂಟಪ, ಮುಖಮಂಪಟಗಳು ಹಾಗೂ ಮೇಲಿನ ನಾಗರಶಿಖರಗಳು ಸೇರಿಸಲ್ಪಟ್ಟವುಗಳು. ಇಲ್ಲಿ ಇನ್ನೊಂದು ವಿಷಯವನ್ನು ಗಮನಿಸಬೇಕು. ಈ ಆಲಯದಲ್ಲಿ ದ್ರಾವಿಡ ಮತ್ತು ನಾಗರ ಶೈಲಿಗಳ ಮಿಶ್ರಣ ಆಗಿದೆ. ಬಹುಮಟ್ಟಿಗೆ ಶಿಥಿಲವಾಗದೆ ಉಳಿದಿರುವ, ಮುಖಮಂಟಪ, ಸಭಾಮಂಟಪ, ಅರ್ಧಮಂಟಪ ಹಾಗೂ ಪ್ರದಕ್ಷಿಣಾಪಥವಿರುವ ಚೌಕಾಕಾರದ ಗರ್ಭಗೃಹಗಳನ್ನೊಳಗೊಂಡಿರುವ ಈ ಆಲಯ ವಿಶಾಲವಾಗಿದೆ. ಪ್ರದಕ್ಷಿಣಾಪಥ ಮುಚ್ಚಿದೆ. ವಿಶಾಲವಾದ ಅಂತರಾಳದ ದ್ವಾರ ಶಾಖೆಗಳಲ್ಲಿ ಕೋಡುಗಳುಳ್ಳ ಮಾನವಾಕಾರದ ನಂದಿ ಹಾಗೂ ವೀರಭದ್ರರ ವಿಗ್ರಹಗಳಿವೆ. ಲಲಾಟಬಿಂಬದಲ್ಲಿ ಸರ್ಪಗಳ ಬಾಲಗಳನ್ನು ಹಿಡಿದ ಗರುಡ, ಅವನ ಮೇಲೆ ಗಜಲಕ್ಷ್ಮಿ. ಮುಂದಿನ ಮಹಾಮಂಟಪದ ಮಧ್ಯದಲ್ಲಿ ನಾಲ್ಕು ಸಾಲುಗಳಲ್ಲಿ ನಾಲ್ಕು–ನಾಲ್ಕು ಕಂಬಗಳಿವೆ. ಗೋಡೆಯಲ್ಲಿ ಅರೆಗಂಬಗಳು. ಇವುಗಳ ಮೇಲೆಲ್ಲಾ ಸ್ತ್ರೀಯರ ಹಾಗೂ ದಂಪತಿಯರ ಶಿಲ್ಪಗಳು. ಗೋಡೆಗೆ ಸೇರಿಸಿ ಕಕ್ಷಾಸನಗಳನ್ನು ರೂಪಿಸಿರುವುದೊಂದು ವೈಶಿಷ್ಟ್ಯ. ಸಭಾಮಂಟಪದ ಭಾವಣಿಯಲ್ಲಿ ಗಜಲಕ್ಷ್ಮಿ, ಅನಂತಶಾಯಿ ವಿಷ್ಣುಗಳ ಉಬ್ಬು ಶಿಲ್ಪಗಳಿವೆ. ಮುಖ ಮಂಟಪ ಚಿಕ್ಕದು. ಎತ್ತರಿಸಿದ ಕಟ್ಟೆಯ ಮೇಲಿದೆ. ಅಧಿಷ್ಠಾನದಲ್ಲಿ ಸಿಂಹ ಮತ್ತು ಆನೆ ಸವಾರರ ಶಿಲ್ಪಗಳಿವೆ.

ಸಂಗಮೇಶ್ವರಾಲಯ ದ್ರಾವಿಡ ಶೈಲಿಯದು. ಕ್ರಿ. ಶ. ೬೯೬ರಿಂದ ೭೩೩ರ ವರೆಗೆ ಆಳಿದ ವಿಜಯಾದಿತ್ಯ ಈ ದೇವಾಲಯವನ್ನು ಕಟ್ಟಿಸಿದನೆಂದು ಶಾಸನ ತಿಳಿಸುತ್ತದೆ. ಇದನ್ನು ವಿಜಯೇಶ್ವರ ಎಂಬ ಹೆಸರಿನಿಂದ ಅಂದು ಕರೆಯಲಾಗಿತ್ತು. ಈಗ ಇದು ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಗರ್ಭಗೃಹ, ಅಂತರಾಳ, ಸಭಾಮಂಟಪಗಳು ಮಾತ್ರ ಇದ್ದು ಸಭಾಮಂಟಪದ ಮೂರು ಕಡೆಗಳಲ್ಲೆಬ್ಬಿಸಲಾಗಿದ್ದ ಮುಖಮಂಟಪಗಳು ಈಗಿಲ್ಲ. ಸರಳವಾದ ಗರ್ಭಗುಡಿಯೊಳಗಿರುವುದು ಕಪ್ಪು ಕಲ್ಲಿನ ಶಿವಲಿಂಗ. ದ್ವಾರಬಂಧ, ತ್ರಿಶಾಖೆಗಳನ್ನೊಳಗೊಂಡಿದ್ದರೂ ಅಲಂಕರಣರಹಿತಶಿಲ್ಪಗಳು ಇಲ್ಲ. ಕೆಳಗಿನ ಎರಡು ಬದಿಗಳಲ್ಲಿ ಗಂಗೆ ಯಮುನೆಯರ ಚಿತ್ರಗಳು. ಚೌಕಟ್ಟಿನ ಎರಡೂ ಕಡೆಗಳಲ್ಲಿ ಕ್ರಮವಾಗಿ ನಂದಿ ಮತ್ತು ವೀರಭದ್ರರ ಶಿಲ್ಪಗಳಿವೆ. ಪಶ್ಚಿಮ ಮತ್ತು ಉತ್ತರದ ಹೊರಗೋಡೆಗಳ ಮೇಲೆ ನಟರಾಜ ಮತ್ತು ಗಜಾಸುರಮರ್ದನರ ಉಬ್ಬು ಶಿಲ್ಪಗಳು. ದಕ್ಷಿಣ ಭಾಗದಲ್ಲಿ ಉಗ್ರ ನರಸಿಂಹನ ರೇಖಾ ಚಿತ್ರ ಮಾತ್ರ ಇದ್ದು ಶಿಲ್ಪವನ್ನು ಪೂರ್ಣವಾಗಿ ಕೆತ್ತಿಲ್ಲ. ಗರ್ಭಗೃಹ ಮತ್ತು ಅಂತರಾಳಗಳನ್ನು ಕೂಡಿಸಿದ ಪ್ರದಕ್ಷಿಣಾಪಥ. ಮೂರೂ ದಿಕ್ಕಿನ ಗೋಡೆಗಳಲ್ಲಿ ವಿವಿಧ ವಿನ್ಯಾಸಗಳ ಮೂರು–ಮೂರು ಜಾಲಂದರಗಳು. ಸಭಾಮಂಟಪವನ್ನು ಐದೈದು ಕಂಬಗಳಿರುವ ನಾಲ್ಕು ಸಾಲಿನ ಒಟ್ಟು ೨೦ ಕಂಬಗಳು ಆಧರಿಸಿ ನಿಂತಿವೆ. ಕಂಬಗಳ ವಿನ್ಯಾಸಗಳು ಭಿನ್ನ-ಸರಳ, ಚೌಕ, ಭೇದ. ಹೊರಭಿತ್ತಿ ಶಿಲ್ಪಗಳಿಂದ ಅಲಂಕೃತವಾಗಿದೆ. ಗರ್ಭಗೃಹದ ಮೇಲೆ ಎರಡು ತಲಗಳ ದ್ರಾವಿಡ ಶಿಖರ, ಮೇಲೆ ಚೌಕಾಕಾರದ ಸ್ತೂಪಿ ಮತ್ತು ಕಳಶ.



ಚಿತ್ರ – ೧೦

ಸ್ವಲ್ಪ ನಂತರದ, ಅತಿ ಭವ್ಯವೆನಿಸಿದ ಆಲಯ ಲೋಕೇಶ್ವರ. (ಛಾಯಾ ಚಿತ್ರ-೧೦) ಇಮ್ಮಡಿ ವಿಕ್ರಮಾದಿತ್ಯ ಮೂರುಬಾರಿ ದಕ್ಷಿಣದ ಕಂಚಿಯ ಮೇಲೆ ದಂಡೆತ್ತಿ ಪಲ್ಲವನನ್ನು ಸೋಲಿಸಿ ಆ ರಾಜಧಾನಿಯನ್ನು ಆಕ್ರಮಿಸಿದುದರ ನೆನಪಿಗಾಗಿ ಆತನ ರಾಣಿ ಲೋಕಮಹಾದೇವಿ ಇದನ್ನು ಕಟ್ಟಿಸಿದಳು. ಇಡೀ ದೇವಾಲಯ ಆಯತಾಕಾರದ ೬೭ಮೀ. ಉದ್ದ, ೩೨ ಮೀ. ಅಗಲದ ಅಂಗಳದಲ್ಲಿದೆ. ಸುತ್ತಲೂ ಪ್ರಾಕಾರ; ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ದ್ವಾರಗಳು. ಪ್ರಾಕಾರದೊಳಗೆ ಪ್ರಾಕಾರಕ್ಕೆ ಹೊಂದಿಕೊಂಡಂತೆ ಸಣ್ಣ ಗುಡಿಗಳು. ಪೂರ್ವದ ದ್ವಾರದಿಂದ ನದಿಗೆ ಮಾರ್ಗವಿದೆ. ಅಲ್ಲಿನ ದ್ವಾರದ ಮೇಲೆ ಕುಬ್ಜಾಕಾರದ ಶಾಲಾಶಿಖರ. ಮುಂದೆ ಅಸ್ತಿತ್ವಕ್ಕೆ ಬಂದ ಗೋಪುರಗಳ ಆರಂಭವನ್ನು ಬಹುಶಃ ಇಲ್ಲಿ ಕಾಣಬಹುದು.

ಪ್ರಾಕಾರದ ಒಳಹೊಕ್ಕಾಗ ಮೊದಲು ಕಾಣುವುದು ೭.೫ ಮೀ. ಗಳ ಸಮಚತುರ್ಭುಜಾಕಾರದ ತಳವಿನ್ಯಾಸದ ೨.೫ಮೀ. ಎತ್ತರದ ಜಗುಲಿಯ ನಂದಿ ಮಂಟಪ. ನಾಲ್ಕು ದೊಡ್ಡ ವೃತ್ತಾಕಾರದ ಕಂಬಗಳು ಜಗುಲಿಯ ಮಂಟಪವನ್ನು ಹೊತ್ತಿವೆ. ಸುತ್ತಲೂ ಆನೆಗಳ, ಕುಬ್ಜರ, ಮಿಥುನ, ಕಿನ್ನರ, ಇಂದ್ರಾಣಿ, ಶುಕಭಾಷಿಣಿ ಮುಂತಾದ ಉಬ್ಬು ಶಿಲ್ಪಗಳು. ಇದೊಂದು ದೇವಾಲಯದ ಘಟಕದಂತಿದ್ದು ಮೂಲಘಟಕ ನಂದಿಮಂಟಪದಿಂದ ೫ ಮೀಟರುಗಳ ದೂರದಲ್ಲಿದೆ. ಅಂತರಾಳವನ್ನು ಸೇರಿಸಿದಂತೆ ಸಾಂಧಾರ ಗರ್ಭಗೃಹ, ಹಿರಿದಾದ ಸಭಾಮಂಟಪ ಮತ್ತು ಇದರ ಮೂರು ದೆಶೆಗಳಲ್ಲಿ-ಪೂರ್ವ, ಉತ್ತರ, ದಕ್ಷಿಣ-ಮುಖಮಂಟಪಗಳು. ಮುಖಮಂಟಪಗಳಲ್ಲಿ ಆನೆ, ಸಿಂಹಗಳ ಶಿಲ್ಪಗಳ ಎತ್ತರದ ಅಧಿಷ್ಠಾನ, ಮೇಲಕ್ಕೆ ಬರಲು ಮುಂಭಾಗದಲ್ಲಿ ಮೆಟ್ಟಿಲುಗಳು. ಎರಡೂ ಕಡೆಗಳಲ್ಲಿ ಕಕ್ಷಾಸನ, ಮುಂದೆ ಎತ್ತರವಾದ, ದಂಪತಿಶಿಲ್ಪಗಳಿಂದ ಕೂಡಿದ ಎರಡು ಕಂಬಗಳು. ಹಿಂದೆ ಗೋಡೆ ಮೇಲೆ ಮಟ್ಟ ಛಾವಣಿ, ಪೂರ್ವದ ಮುಖಮಂಟಪದ ಕಂಬಗಳಲ್ಲಿ ದ್ವಾರಪಾಲಕರ, ಪದ್ಮನಿಧಿ–ಶಂಖನಿಧಿಗಳ ವಿಗ್ರಹಗಳಿವೆ. ಛಾವಣಿಯ ಮೇಲೆ ಉಷಾ ಮತ್ತು ಪ್ರತ್ಯೂಷಾ ಸಹಿತ, ಮೋಡದಲ್ಲಿ ರಥಾರೂಢನಾಗಿ ಚಲಿಸುತ್ತಿರುವ ಸೂರ್ಯನ ಅಪರೂಪದ ವಿಗ್ರಹವಿದೆ. ದಕ್ಷಿಣ ಮುಖಮಂಟಪದಲ್ಲಿ ನರಸಿಂಹ-ಹಿರಣ್ಯಕಶಿಪುಗಳ ದ್ವಂದ್ವ ಯುದ್ಧದ ಚಿತ್ರ, ರಾವಣ ಕೈಲಾಸವನ್ನೆತ್ತಿ ಹಿಡಿದಿರುವ ಶಿಲ್ಪ. ಉತ್ತರದ ಮುಖಮಂಟಪದಲ್ಲಿ ಗಜೇಂದ್ರ ಮೋಕ್ಷಕ್ಕೆ ಸಂಬಂಧಿಸಿದ ಚಿತ್ರಗಳು. ಪಂಚಶಾಖೆಗಳ ದ್ವಾರಗಳ ಚೌಕಟ್ಟುಗಳು ಚಿತ್ರಮಯ. ಕೆಳಬದಿ ಗಂಗೆ ಯಮುನೆಯರ ಚಿತ್ರಗಳು. ಮೇಲುಗಡೆ ಎಂದಿನಂತೆ ನಾಗಬಾಲಗಳನ್ನು ಹಿಡಿದಿರುವ ಗರುಡರು, ದ್ವಾರಪಾಲಕರು. ಸಭಾಮಂಟಪ ವಿಶಾಲವಾಗಿದ್ದು ೧೮ ಕಂಬಗಳನ್ನು ನಾಲ್ಕು ಸಾಲುಗಳಲ್ಲಿ ನಿಲ್ಲಿಸಲಾಗಿದ್ದು ಅವುಗಳ ಮೇಲೆಲ್ಲ ರಾಮಾಯಣ, ಮಹಾಭಾರತ, ಭಾಗವತಗಳಿಗೆ ಸಂಬಂಧಿಸಿದ ಚಿತ್ರರೂಪಕಗಳನ್ನು ಕೆತ್ತಲಾಗಿದೆ. ಭುವನೇಶ್ವರಿಯಲ್ಲಿ ಸುರಳಿ ಸುತ್ತಿದ ನಾಗ

ಹಾಗೂ ಗಜಲಕ್ಷ್ಮಿಯರ ವಿಗ್ರಹಗಳು. ಅಂತರಳದ ದ್ವಾರಬಂಧ ಸಹ ಅಲಂಕಾರಮಯವಾಗಿದೆ. ಎಂದಿನಂತೆ ಕೆಳಗೆ ಗಂಗೆ-ಯಮುನೆಯರ ವಿಗ್ರಹಗಳು. ಚೌಕಾಕಾರದ ಗರ್ಭಗೃಹದಲ್ಲಿ ಅದೇ ಆಕಾರದ ಪಾಣಿಪೀಠದ ಮೇಲೆ ಶಿವಲಿಂಗ. ದೇವಾಲಯದ ಹೊರಗಿನ ಏರು ವಿನ್ಯಾಸದ ಭಿತ್ತಿಯಲ್ಲಿ ಕೆಳಗೆ ಪಟ್ಟಿಕೆಗಳು, ನಂತರ ಅಧಿಷ್ಠಾನ, ಭಿತ್ತಿಯಲ್ಲಿ ಅರೆಗಂಬಗಳು, ಕೋಷ್ಠಗಳು, ಅದರ ಮೇಲೆ ದಿಂಡಿನ ಕಪೋತ, ಶಾಲಾಕೂಟಗಳ ಹಾರ. ಇಲ್ಲಿ ಅತ್ಯುತ್ತಮವಾದ ವಿಗ್ರಹಗಳನ್ನು ಕೋಷ್ಠಗಳಲ್ಲಿ ಸಮತಟ್ಟಿನಲ್ಲಿ, ಲಿಂಗೋದ್ಭವ ಶಿವ, ನಟರಾಜ, ಹರಿಹರ, ಅಷ್ಟಭುಜ ಶಿವ, ನರಸಿಂಹ, ಜನಾರ್ದನ ಇತ್ಯಾದಿ ದೇವತೆಗಳ ಉಬ್ಬು ಶಿಲ್ಪಗಳನ್ನು ರಮ್ಯವಾಗಿ ಕೆತ್ತಲಾಗಿದೆ. ಮೇಲೆ ತ್ರಿತಲದ ದ್ರಾವಿಡ ಶಿಖರ. ಗರ್ಭಗೃಹದ ಹೊರಭಾಗದ ವಾಸ್ತು ಅಂಶಗಳನ್ನು ಪ್ರತಿ ತಳದಲ್ಲೂ, ಮೆಟ್ಟಿಲು ಮೆಟ್ಟಿಲಾಗಿ ಕಾಣುವಂತೆ ರೂಪಿಸಿದೆ. ಮೇಲೆ ಚೌಕಾಕಾರದ ಸ್ತೂಪಿ ಹಾಗೂ ಕಳಶ. ಬಾದಾಮಿಯ ಚಾಲುಕ್ಯರು ಕಟ್ಟಿಸಿದ ದೇವಾಲಯಗಳಲ್ಲೆಲ್ಲಾ ಅತಿ ವಿಸ್ತಾರವಾದುದು ಈ ಆಲಯ. ಇದಕ್ಕೆ ಕಂಚಿಯ ಕೈಲಾಸನಾಥ ದೇವಾಲಯ ಸ್ಫೂರ್ತಿ ನೀಡಿದೆ ಎಂಬೊಂದು ಅಭಿಪ್ರಾಯವಿದೆ. ಸರ್ವಸಿದ್ಧಿ ಆಚಾರಿ, ಚೆಙ್ಗಮ್ಮ, ಬಲದೇವ ಮುಂತಾದವರು ಇದರ ಶಿಲ್ಪಿಗಳು.

ಸಮಕಾಲೀನವಾದ, ವಿಕ್ರಮಾದಿತ್ಯನ ಎರಡನೆಯ ಪತ್ನಿ ತ್ರೈಲೋಕ್ಯ ಮಹಾದೇವಿ ಕಟ್ಟಿಸಿದ ತ್ರೈಲೋಕ್ಯೇಶ್ವರಾಲಯಕ್ಕೆ ಈಗ ಮಲ್ಲಿಕಾರ್ಜುನ ದೇವಾಲಯ ಎಂಬ ಹೆಸರಿದೆ. (ಛಾಯಾ ಚಿತ್ರ-೧೧) ಲೋಕೇಶ್ವರ (ವಿರೂಪಾಕ್ಷ)ದ ಪ್ರತಿರೂಪವಾದರೂ ವಿಸ್ತಾರದಲ್ಲಿ ಕಿರಿದು. ಪ್ರಾಕಾರದ ಗೋಡೆ ಹಾಗೂ ನಂದಿ ಮಂಟಪಗಳು ಶಿಥಿಲವಾಗಿವೆ. ಶಿಖರದ ಸ್ತೂಪ ವೃತ್ತಾಕಾರದ್ದು, ಮುಖಮಂಟಪದ ಕಂಬಗಳ ಮೇಲೆ ಸುಂದರಿಯರ ವಿಗ್ರಹಗಳ ದ್ವಾರಬಂಧದಲ್ಲಿ ಲಲಾಟ ಕಂಬದ ಮೇಲೆ ಗರುಡ ಹಾಗೂ ವಿಷ್ಣುವಿನ ವಿಗ್ರಹಗಳಿವೆ. ಒಳಗಿನ ಗರ್ಭಗೃಹದಲ್ಲಿರುವುದು ಶಿವಲಿಂಗ. ಸಭಾಮಂಟಪದ ಕಂಬಗಳ ಮೇಲೆ ಕಾವ್ಯಗಳ, ಹರಿವಂಶ, ಪಂಚತಂತ್ರಗಳ ಕೆಲವು ಕಥಾನಕಗಳನ್ನು ರೂಪಿಸಲಾಗಿದೆ. ಭುವನೇಶ್ವರಿಯಲ್ಲಿ ನಂದಿಯೊಡಗೂಡಿದ ಪಾರ್ವತೀ ಪರಮೇಶ್ವರರ ವಿಗ್ರಹಗಳು.



ಚಿತ್ರ – ೧೧


ನಂತರದ ನಾಲ್ಕು ಆಲಯಗಳು–ಗಳಗನಾಥ, ಜಂಬುಲಿಂಗ, ಕಾಡಸಿದ್ಧೇಶ್ವರ ಹಾಗೂ ಕಾಶೀವಿಶ್ವೇಶ್ವರ – ನಾಗರ ರೇಖಾ ವಿನ್ಯಾಸದವುಗಳು. (ಛಾಯಾ ಚಿತ್ರ - ೧೨) ಗಳಗನಾಥ ದೇವಾಲಯದ ಸಭಾಮಂಟಪ ೧೨೯ ಮೀ. ವಿಸ್ತಾರವಾದುದು. ಅಂತರಾಳ ಮತ್ತು ಗರ್ಭಗುಡಿಗಳನ್ನು ಸೇರಿಸಿದಂತೆ ಪ್ರದಕ್ಷಿಣಾಪಥ. ಇದರ ಹೊರಗೋಡೆಯ ಸುತ್ತಲೂ ಜಾಲರಿಯುಳ್ಳ ಗೋಡೆ. ಸಭಾಮಂಟಪ ಹಾಳಾಗಿದ್ದು ಅಧಿಷ್ಠಾನ ಮಾತ್ರ ಉಳಿದಿದೆ. ಅಂತರಾಳದ ನಾಲ್ಕು ಶಾಖೆಗಳ ದ್ವಾರಬಂಧ ಸೂಕ್ಷ್ಮ ಕೆತ್ತನೆಯಿಂದ ಅಲಂಕೃತವಾಗಿದೆ. ಸಭಾಮಂಟಪದ ದಕ್ಷಿಣದಲ್ಲಿ ಒಂದು ಚಿಕ್ಕ ಅರ್ಧಮಂಟಪ. ಅದರಲ್ಲಿ ಎಂಟು ಕೈಗಳುಳ್ಳ ಅಂಧಕಾಸುರನ ಭಗ್ನವಿಗ್ರಹ. ರೇಖಾನಾಗರ ಶಿಖರದಲ್ಲಿ ಚೈತ್ಯಗೂಡುಗಳ ಅಡ್ಡಸಾಲುಗಳಿಂದ ಚಿತ್ರಿತವಾದ ಉದ್ದಪಟ್ಟಿಕೆಗಳು. ನಾಲ್ಕು ಮೂಲೆಗಳಲ್ಲಿ ಅಲ್ಲಲ್ಲಿ ಅಮಲಕಗಳು, ಮಧ್ಯದಲ್ಲಿ ಉಬ್ಬಿದಂತೆ ತೋರುವ ಶಿಖರ ಮೇಲೆ ಸಾಗಿದಂತೆ ಒಳಬಾಗಿದೆ. ತುದಿಯಲ್ಲಿ ಅಮಲಕ ಮತ್ತು ಕಲಶ. ಈ ಶಿಖರ ಮೊದಲು ಇರಲಿಲ್ಲವೆಂದೂ ಇದನ್ನು ಆ ನಂತರ ಸೇರಿಸಲಾಗಿದೆಯೆಂದೂ ಕೆಲವರು ಊಹಿಸಿದ್ದಾರೆ.



ಚಿತ್ರ – ೧೨

ಜಂಬುಲಿಂಗ ಮತ್ತು ಕಾಡಸಿದ್ಧೇಶ್ವರಾಲಯಗಳು ಗಾತ್ರ ಹಾಗೂ ವಿನ್ಯಾಸಗಳಲ್ಲಿ ಪರಸ್ಪರ ಹೋಲುತ್ತವೆ. ಎರಡೂ ದೇವಾಲಯಗಳ ಗರ್ಭಗೃಹ ಹೊರಗೋಡೆಯ ದೇವಕೋಷ್ಠಗಳಲ್ಲಿ ಲಕುಲೀಶ, ಹರಿಹರ ಮತ್ತು ಅರ್ಧನಾರೀಶ್ವರರನ್ನು ಕೆತ್ತಲಾಗಿದೆ. ಕಾಡಸಿದ್ಧೇಶ್ವರಾಲಯದ ಗರ್ಭಗೃಹದ ಲಲಾಟದ ಮುಂದೆ ಶಿವಪಾರ್ವತಿಯರು ನಂದಿವಾಹನದ ಮೇಲೆ ಕುಳಿತಿದ್ದು ಎಡ-ಬಲ ಭಾಗಗಳಲ್ಲಿ ವಿಷ್ಣು, ಬ್ರಹ್ಮರ ವಿಗ್ರಹಗಳಿವೆ. ಮಲ್ಲಿಕಾರ್ಜುನಾಲಯದ ಉತ್ತರದ ಪ್ರಾಕಾರದ ಬಳಿ ಇರುವ ಕಾಶೀವಿಶ್ವೇಶ್ವರದ ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಈಗ


ಉಳಿದಿವೆ. ರೇಖಾನಾಗರ ಶಿಖರದ ಅಮಲಕ, ಕಲಶಗಳು ಬಿದ್ದುಹೋಗಿವೆ. ಸುಕನಾಸಿಯ ಮುಖ ಪಟ್ಟಿಯಲ್ಲಿನ ಚೈತ್ಯಗೂಡಿನಲ್ಲಿ ನಟರಾಜನ ಉಬ್ಬುಶಿಲ್ಪ, ಅಂತರಾಳದ ನಾಲ್ಕು ಕಂಬಗಳು, ಕೆಲವು ಸ್ತ್ರೀಯರ ಉಬ್ಬು ಶಿಲ್ಪಗಳಿಂದ ಹಾಗೂ ಪೌರಾಣಿಕ ಮತ್ತು ಹರಿವಂಶದಲ್ಲಿ ವಿವರಿಸಿದ ಕೃಷ್ಣಲೀಲೆಯ ಸನ್ನಿವೇಶಗಳುಳ್ಳ ಉಬ್ಬುಶಿಲ್ಪಗಳಿಂದ ಅಲಂಕೃತವಾಗಿದೆ. ಛಾವಣಿಯಲ್ಲಿ ಸೋಮಸ್ಕಂದನ ವಿಗ್ರಹ. ಇವು ಸುಮಾರು ೮ನೆಯ ಶತಮಾನದಲ್ಲಿ ಕಟ್ಟಿದವೆನ್ನಲಾಗಿದೆ.



ಚಿತ್ರ – ೧೩


ಕರ್ನಾಟಕದ ಹೊರಗೆ, ಒಮ್ಮೆ ಚಾಲುಕ್ಯ ರಾಜ್ಯದ ಭಾಗವಾಗಿದ್ದ ಈಗಿನ ಆಂಧ್ರಪ್ರದೇಶದ ಮೆಹಬೂಬ್‌ನಗರ ಹಾಗೂ ಕರ್ನೂಲ್ ಜಿಲ್ಲೆಗಳಲ್ಲಿ ಅವರು ಕಟ್ಟಿಸಿದ ಆಲಯಗಳಿವೆ. ಇವುಗಳಲ್ಲಿ ಪ್ರಮುಖವಾದವುಗಳು ತುಂಗಭದ್ರೆಯ ದಕ್ಷಿಣ ತೀರದಲ್ಲಿ ಮೆಹಬೂಬ್ ಜಿಲ್ಲೆಗೆ ಸೇರಿದ ಅಲಂಪುರದ ಆಲಯಗಳು. ಈ ಗ್ರಾಮ ಶ್ರೀಶೈಲಕ್ಕೆ ಹೋಗಲು ಪಶ್ಚಿಮ ದ್ವಾರದಂತಿದೆ. ಇಲ್ಲಿನ ಮುಖ್ಯ ದೇವತೆ ಜೋಗುಳಾಂಬಾ. ಪರಶುರಾಮನು ಇಲ್ಲಿ ತಾಯಿ ರೇಣುಕೆಯ ಶಿರಚ್ಛೇದನ ಮಾಡಿದನೆಂಬುದೊಂದು ಪ್ರಚಲಿತ ಕತೆ. ಬ್ರಹ್ಮನು ಇಲ್ಲಿ ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ಬ್ರಹ್ಮೇಶ್ವರ ಲಿಂಗವನ್ನು ಸ್ಥಾಪಿಸಿದನೆಂಬುದು ಇನ್ನೊಂದು ದಂತಕತೆ. ಪುಣ್ಯವತಿ ಎಂಬ ವಿಧವೆಯಲ್ಲಿ ಕಾಶೀವಿಶ್ವೇಶ್ವರನ ಕೃಪೆಯಿಂದ ಜನಿಸಿದ ಮಗ ರಸವಿದ್ಯೆಯಲ್ಲಿ ಪರಿಣತನಾಗಿ ಆಲಂಪುರಕ್ಕೆ ಬಂದು ಸುವರ್ಣವನ್ನು ರಸವಿದ್ಯೆಯಿಂದ ಸೃಷ್ಟಿಸಿ ದೇವಾಲಯಗಳನ್ನು ಕಟ್ಟಿಸಿದ. ಆದರೆ ಸ್ಥಳೀಯ ಅರಸನಾದ ವಿಲಸದ್ರಾಜನು ಇವುಗಳನ್ನು ಭಗ್ನಗೊಳಿಸಿ ರಸಸಿದ್ಧನ ಮಡಿಕೆಯನ್ನು ಕಸಿಯುವುದರಲ್ಲಿ ವಿಫಲನಾಗಿ ಪ್ರಾಯಶ್ಚಿತ್ತಕ್ಕಾಗಿ ಇಲ್ಲಿನ ಆಲಯಗಳನ್ನು ಪುನರುಜ್ಜೀವಗೊಳಿಸಿದನೆಂದೂ ಹೇಳಿದೆ.

ಇಲ್ಲಿ ಪೂರ್ವಾಭಿಮುಖವಾಗಿರುವ ಪದ್ಮಬ್ರಹ್ಮ, ಸ್ವರ್ಗಬ್ರಹ್ಮ, ಗರುಡ, ಬಾಲ, ವಿಶ್ವ, ವೀರ, ಅರ್ಕ, ಕುಮಾರ ಮತ್ತು ತಾರಕ ಬ್ರಹ್ಮಗಳೆಂದು ಕರೆಯಲಾದ ಒಂಬತ್ತು ಗುಡಿಗಳಿವೆ. ವೀರಬ್ರಹ್ಮನನ್ನು ಹೊರತುಪಡಿಸಿ ಉಳಿದೆಲ್ಲ ಅಲಂಕೃತವಾದವುಗಳು. ಬಾಲಬ್ರಹ್ಮ ಗುಡಿಯ ಉತ್ತರದಲ್ಲಿ ಅಶ್ವತ್ಥ ಕಟ್ಟೆಯ ಪಕ್ಕದಲ್ಲಿರುವ ಕುಮಾರ ಬ್ರಹ್ಮ ಅತಿಪ್ರಾಚೀನವಾದ, ಬಹುಶಃ ಮಾದರಿಗಾಗಿ ಕಟ್ಟಿದ ಗುಡಿ. (ಛಾಯಾ ಚಿತ್ರ-೧೪) ಇದರಲ್ಲಿನ ಕಂಬಗಳು ಗಮನಾರ್ಹ. ಎರಡು ಮಾದರಿಗಳಿವೆ. ಒಂದರಲ್ಲಿ ಕೆಳಗಿನಿಂದ ಮೇಲೆ ಕ್ರಮವಾಗಿ ಪೂರ್ಣಘಟ, ಅಷ್ಟಾಕಾರದ ಕಾಂಡ, ಕಮಲದ ಬಳ್ಳಿ, ಪುನಃ ಅಷ್ಟಮಾಲೆಯ ಕಾಂಡ, ಪೂರ್ಣಘಟ ಮತ್ತು ಕಮಲಗಳ ಬೋದಿಗೆ. ಇನ್ನೊಂದು ಮಾದರಿಯಲ್ಲಿ ಬುಡದಲ್ಲಿ ಗಜಲಕ್ಷ್ಮಿ, ಮೇಲೆ ಅರ್ಧವೃತ್ತಾಕಾರದ ಕಮಲದ ಪದಕ, ತೆಳುವಾದ ಕಾಂಡ, ಮೇಲೆ ವೃತ್ತಾಕಾರದ ಕಮಲದ ಪದರಗಳಿವೆ. ದ್ವಾರದ ಎರಡೂ ಕಡೆ ಜಾಲಂದ್ರಗಳು. ಮಂಟಪದ ಮುಂದಿನ ಸಾಲಿನ ಕಂಬಗಳ ಮೇಲೆ ತೊಲೆಯಲ್ಲಿ ಏಳು ಮಾನವ ಶಿರಗಳು.



ಚಿತ್ರ – ೧೪

ಬಾಲಬ್ರಹ್ಮ ಜೀವಂತಗುಡಿ. (ಛಾಯಾ ಚಿತ್ರ- ೧೫) ಚಾಲುಕ್ಯ ವಿಜಯಾದಿತ್ಯ ಕ್ರಿ. ಶ. ೭೦೪ರಲ್ಲಿ ಕಟ್ಟಿಸಿದ ಈ ಗುಡಿ ಗರ್ಭಗೃಹ, ಅಂತರಾಳ, ಮಂಟಪಗಳನ್ನೊಳಗೊಂಡಿದೆ. ಮುಚ್ಚಿದ ಪ್ರದಕ್ಷಿಣಾಪಥದ ಹೊರಗೆ ತೆರೆದ ಪ್ರದಕ್ಷಿಣಾಪಥ, ಮುಖಮಂಟಪ ದ್ವಾರ ಮತ್ತು ಪ್ರಾಕಾರಗಳಿವೆ. ಪ್ರಾಕಾರವನ್ನು ಕಟ್ಟಿದಾತ ಈಶಾನಾಚಾರ್ಯ. ಹೊರಗಿನ ಪ್ರದಕ್ಷಿಣಾಪಥಕ್ಕೆ ಹೊಂದಿಕೊಂಡು ಉತ್ತರ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳಲ್ಲಿ ತಗ್ಗಾದ ಕೈಪಿಡಿ ಗೋಡೆ. ಇದರ ಹೊರಮುಖವನ್ನು ಅಂಕಣಗಳಾಗಿ ವಿಂಗಡಿಸಿ ಒಂದೊಂದರ ಮೇಲೂ ಕಮಲವನ್ನು ಕೂಡಿಸಿದೆ. ಅದರ ಮೇಲೆ ಕಪೋತ, ನಡುವೆ



ಚಿತ್ರ – ೧೫



ಚಿತ್ರ – ೧೬

ನಾಸಿಕಗಳು. ಪೂರ್ವದಿಕ್ಕಿನ ಒಳಮುಖದ ಗೂಡುಗಳಲ್ಲಿ ಮಹಿಷಾಸುರ ಮರ್ದಿನಿ, ಆಲಿಂಗನ ಮೂರ್ತಿ, ವೀರಭದ್ರ, ಸಪ್ತಮಾತೃಕೆ, ಕಾರ್ತಿಕೇಯ. (ಛಾಯಾ ಚಿತ್ರ-೧೬) ಜೋಗುಳಾಂಬ ಮಂಟಪದಲ್ಲಿ ದೇವತೆಗಳ ವಿಗ್ರಹಗಳನ್ನು ಅಳವಡಿಸಲಾಗಿದೆ. ಎರಡನೆಯ ದ್ವಾರ ದಾಟಿ ಒಳಬಂದರೆ ರಂಗಮಂಟಪದ ಮತ್ತು ಒಳಗಿನ ಪ್ರದಕ್ಷಿಣಾ ಪಥಗಳನ್ನು ಕಾಣುತ್ತೇವೆ. ಗರ್ಭಗೃಹದ ದ್ವಾರಬಂಧದಲ್ಲಿ ದ್ರಾವಿಡ ಶೈಲಿಯ ಕಂಬ, ಶಾಲಾಪಂಜರಗಳು. ಮೂರು ಪಕ್ಕದ ಹೊರಗೋಡೆಗಳ ಗೂಡುಗಳಲ್ಲಿ ರಸಸಿದ್ಧ, ಗಣಪತಿ, ಅಲಿಂಗನ ಮೂರ್ತಿ ಮತ್ತು ದುರ್ಗೆಯ ವಿಗ್ರಹಗಳು. ವಾಸ್ತವವಾಗಿ ಅಲಿಂಗನ ಮೂರ್ತಿಯ ಸ್ಥಾನದಲ್ಲಿ ಕಾರ್ತಿಕೇಯನ ವಿಗ್ರಹ ಇರಬೇಕಾಗಿತ್ತು.

ಕುಮಾರ ಬ್ರಹ್ಮಗುಡಿಯ ಉತ್ತರಕ್ಕೆ ಇರುವ ಮೂರು ಆಲಯಗಳಲ್ಲಿ ಅರ್ಕಬ್ರಹ್ಮಾಲಯವನ್ನು ಚಾಲುಕ್ಯ ವಿಕ್ರಮಾದಿತ್ಯನ ಪಟ್ಟಮಹಾದೇವಿ ಕಟ್ಟಿಸಿದಳು. ಶ್ರೀಕಂಠಾಚಾರ್ಯ, ಮಚ್ಚರಿಪರ ಪರಮೇಶ್ವರ, ಸಂಸಾರಭೀತ ಮುಂತಾದ ಹೆಸರು–ಬಿರುದುಗಳನ್ನುಳ್ಳ ಶಿಲ್ಪಿಗಳ ಹೆಸರುಗಳನ್ನು ಅಲ್ಲಲ್ಲಿ ಕಂಡರಿಸಲಾಗಿದೆ. ವಿಮಾನ, ರಂಗಮಂಟಪದ ಮೇಲಿನ ಭಾವಣಿಗಳು ಈಗ ಇಲ್ಲ. ಒಳಭಾಗ ಜೀರ್ಣೋದ್ಧಾರಗೊಂಡಿದೆ. ಪ್ರವೇಶದ್ವಾರದ ಮೇಲಿನ ತೊಲೆಯ ಎರಡು ತುದಿಗಳಲ್ಲಿ ಅಮಲಕ ಶಿಖರಗಳ ಕೂಟ, ಅಂಥದೇ ಶಿಖರಗಳ ಪಂಜರ ಮತ್ತು ಶಾಲಾಗಳನ್ನು ಬಿಡಿಸಲಾಗಿದೆ. ಕಂಬಗಳ ಮೇಲೆ ಅರ್ಧ ವೃತ್ತಾಕಾರದ ಕಮಲದ ಪದಕಗಳು. ಈ ಗುಡಿಯ ಪಕ್ಕದ ವೀರಬ್ರಹ್ಮಗುಡಿ ನಿರಾಡಂಬರವಾದುದು. ಇದರ ವಿಮಾನದ ಸುಕನಾಸಿಯಲ್ಲಿ ನಟರಾಜನ ವಿಗ್ರಹವಿದೆ.

ವಿಶ್ವಬ್ರಹ್ಮಗುಡಿಯಲ್ಲಿ ಗರ್ಭಗೃಹ, ಅಂತರಾಳ, ಮಂಟಪ, ಮುಚ್ಚಿದ ಪ್ರದಕ್ಷಿಣಾಪಥ–ಇವುಗಳನ್ನಾವರಿಸಿದ ಪ್ರಾಕಾರ ಗೋಡೆಗಳನ್ನು ಕಾಣಬಹುದು. ಮುಖ್ಯದ್ವಾರದ ಹೊರಗೆ ಹಿಂಭಾಗಗಳ ಎರಡು ಕಡೆಗಳ ಕೋಷ್ಠಗಳಿಗೆ ಮುಂಚಾಚಿದ ಮಂಟಪ. ದಕ್ಷಿಣ ಉತ್ತರದ ಗೋಡೆಗಳಲ್ಲೊಂದೊಂದರಲ್ಲೂ ಏಳು ಕೋಷ್ಠಗಳಿದ್ದರೂ ಮೂರರಲ್ಲಿ ಮಾತ್ರ ವಿಗ್ರಹಗಳಿವೆ. ಮಂಟಪದೊಳಗಣ ಕಂಬಗಳಲ್ಲಿ ಒಂದರಲ್ಲಿ ನಾಲ್ಕು ಸಿಂಹಗಳಿದ್ದು ಮೇಲಿನ ಕಾಂಡವನ್ನು ಹನ್ನೆರಡು ಅರೆಗೋಳವಿಗಳಾಗಿ ರೂಪಿಸಿದ್ದು ಅದರ ಮೇಲೆ ಕ್ರಮವಾಗಿ ಪದಕ, ದ್ವಿಕಮಲಗಳು, ಆಮಲಕ, ಸಿಂಹಮುಖದ ಬೋದಿಗೆ. ಬೋದಿಗೆಗಳಲ್ಲಿ ಕೆಲವುಗಳಲ್ಲಿ ಮುಂಚಾಚಿದ ಸಿಂಹ ಅಥವಾ ಕುದುರೆಗಳು. ಇನ್ನು ಕೆಲವು ಕಂಬಗಳ ಕೆಳಭಾಗದಲ್ಲಿ ಪೂರ್ಣಘಟ, ಮೇಲೆ ಹನ್ನೆರಡು ಅರೆಗೋಳವಿಗಳ ಕಾಂಡ, ಇಳಿಬಿಟ್ಟ ಕಮಲದ ಸುರುಳಿಗಳು. ಬೋದಿಗೆಯ ಮಧ್ಯದಲ್ಲಿ ಕಮಲ, ಪಕ್ಕದಲ್ಲಿ ತೂಗಿಬಿಟ್ಟ ಸುರುಳಿಗಳ ಗರ್ಭಗೃಹದಲ್ಲಿ ನಾಲ್ಕು ಕಂಬಗಳ ನಡುವಣ ವೇದಿಯ ಮೇಲೆ ಲಿಂಗ.

ಗರುಡ ಬ್ರಹ್ಮ ಗುಡಿಯಲ್ಲೂ ಗರ್ಭಗೃಹ, ಅಂತರಾಳ, ಮಂಟಪ ಮತ್ತು ಮುಚ್ಚಿದ ಪ್ರದಕ್ಷಿಣಾ ಪಥಗಳಿದ್ದು ಅಂತರಾಳದ ದ್ವಾರದಲ್ಲಿ ಅಪ್ಸರೆಯರ ಚಿತ್ರಗಳು, ಅದರ ಮೇಲಿನ ತೊಲೆಯಲ್ಲಿ ಅಮಲಕ ಶಿಖರ, ಪಂಜರಗಳನ್ನೊಳಗೊಂಡ ಅಲಂಕರಣವನ್ನು ಕಾಣುತ್ತೇವೆ. ಇದರ ಹಿಂದಿರುವುದು ಚಾಲುಕ್ಯ ವಿನಯಾದಿತ್ಯನ ಪಟ್ಟದ ರಾಣಿ ಕಟ್ಟಿಸಿದ ಸ್ವರ್ಗಬ್ರಹ್ಮ ಗುಡಿ. ಶ್ರೀಕಂಠಾಚಾರ್ಯ, ಮಚ್ಚರಿಪರ ಪರಮೇಶ್ವರ, ನಮನಪ್ರಿಯ ಎಂಬುವರು ಇದರ ರುವಾರಿಗಳಲ್ಲಿ ಹೆಸರಿಸಲ್ಪಟ್ಟ ಹಲವರು. ಮುಖಮಂಟಪದ ದ್ವಾರಬಂಧದ ಎರಡೂ ಕಡೆ ಮೃಗಶರೀರಧಾರಿಗಳಾದ ದ್ವಾರಪಾಲಕರು. ಗೋಡೆಗಳ ಕೋಷ್ಠಗಳಲ್ಲಿ ಗಂಗಾವತರಣ, ತ್ರಿಪುರಾಂತಕ, ನಟರಾಜ, ತ್ರಿವಿಕ್ರಮ, ಲಿಂಗೋದ್ಭವ ಮೂರ್ತಿಗಳ ವಿಗ್ರಹಗಳಿವೆ. ಅಧಿಷ್ಠಾನದ ಪಟ್ಟಿಗಳಲ್ಲಿ, ಸಂಗೀತಲೋಲುಪರಾದ ಗಣಗಳು, ಗೋಡೆಗಳ ಮೇಲ್ಪಟ್ಟಿಗಳಲ್ಲಿ ಮಿಥುನ ಶಿಲ್ಪಗಳು. ಮಂಟಪದ ಕಂಬಗಳ ಶಿಖರದಲ್ಲಿ ಪೂರ್ಣಘಟ, ಸಿಂಹಲಲಾಟ–ಇವುಗಳನ್ನು ಕಂಡರಿಸಲಾಗಿದೆ.

ಆಲಂಪುರದ ಈ ಆಲಯಗಳ ಲಕ್ಷಣಗಳನ್ನು ಗಮನಿಸಿದಾಗ ಕೆಲವು ವೈಶಿಷ್ಟ್ಯಗಳು ಕಂಡುಬರುತ್ತವೆ. ಸ್ಥೂಲಾಕಾರ, ಪಾರ್ಶ್ವದಿಂದ ಕಾಣುವ ಉನ್ನತಿ, ಗರ್ಭಗೃಹ ಮತ್ತು ಮಂಟಪಗಳ ಸ್ತಂಭಸಾಲು, ವಿಮಾನ ಮತ್ತು ಗೂಢಮಂಟಪಗಳನ್ನು ಸಮರೇಖೆಯಲ್ಲಿ ಕೂಡಿಸಿ ಸುಕನಾಸಿಯ ರೂಪ ಕೊಟ್ಟಿರುವುದು, ಅಲಂಕರಣಕ್ಕೆ ಆಸರೆಯಾಗಿ ಮೂಡಿಬಂದ ಶಿಲ್ಪಕಲೆಯ ಅಂತರ್ಭಾವ, ಮೇಲುಪಾಯ, ಗೋಡೆಗಂಬ, ಭಿತ್ತಿ ಮತ್ತು ಮಾಳಿಗೆಗಳ ರಚನೆಯಲ್ಲಿ ಸಾಮರಸ್ಯವನ್ನುಂಟುಮಾಡಲು ಬಳಸಲಾದ ವಾಸ್ತುತಂತ್ರಗಳು, ಒಳಮುಖವಾಗಿ ಹೊರಮುಖವಾಗಿ ಸಹ ಕಾಣುವ ದೇವಾಲಯದ ಒಟ್ಟು ಆಕಾರ–ಇವುಗಳನ್ನು ಎಲ್ಲ ಆಲಯಗಳಲ್ಲೂ ಕಾಣಬಹುದು. ವಿನ್ಯಾಸದಲ್ಲಿ ಇವು ಚಾಲುಕ್ಯ ಗುಹಾಲಯಗಳಿಂದ ಮೂಡಿಬಂದಿವೆ. ಐಹೊಳೆಯ ಲಾಡಖಾನ್, ಕುಂತಿ, ಹುಚ್ಚಮಲ್ಲಿ ಗುಡಿಗಳ ಸ್ಥೂಲರಚನೆ ಹಾಗೂ ವಿಮಾನಗಳ ಶೈಲಿ ಇಲ್ಲಿ ಪರಿಣಾಮಕಾರಿಯಾಗಿ ಕಾಣಿಸಿಕೊಂಡಿವೆ. ಅಲ್ಲದೆ

ಪಟ್ಟದಕಲ್ಲಿನ ಪಾಪನಾಥ ಮತ್ತು ಗಳಗನಾಥ ದೇವಾಲಯಗಳನ್ನು ಇವು ಬಹಳಮಟ್ಟಿಗೆ ಹೋಲುತ್ತವೆ. ಗೋಡೆಗಂಬಗಳ ಅಲಂಕರಣಗಳು, ಜಾಲಂದ್ರಗಳು, ಪತ್ರ ವಿನ್ಯಾಸಗಳು, ಪಶ್ಚಿಮ ಚಾಲುಕ್ಯ ಶೈಲಿಯಿಂದ ಪ್ರಭಾವಿತವಾದವು. ಈ ಪ್ರದೇಶವೆಲ್ಲ ಆ ಅರಸರ ಆಡಳಿತಕ್ಕೊಳಪಟ್ಟಿದ್ದು, ಆ ಅರಸನಿಂದ ಅವರ ರೂವಾರಿಗಳಿಂದ ಕಟ್ಟಲ್ಪಟ್ಟವು.

ಆಲಂಪುರಕ್ಕೆ ಸಮೀಪದ ಪಾಪನಾಶನದಲ್ಲಿ ೨೨ ಗುಡಿಗಳಿವೆ. ಇವುಗಳ ಮೂಲನಕ್ಷೆ ಔನ್ನತ್ಯಗಳಲ್ಲಿ ಮಾರ್ಪಾಡುಗಳಿವೆ. ಬಹುಮಟ್ಟಿನ ವಿಮಾನಗಳು ಕದಂಬ ನಾಗರ ಶೈಲಿಯವು. ವಿಮಾನವನ್ನು ಚೌಕಾಕಾರದಲ್ಲಿ ಒಂದರ ಮೇಲೊಂದರಂತೆ ಕಿರಿದು ಗೊಳಿಸುತ್ತಾ ಕಟ್ಟುವ ಪದ್ಧತಿಗೆ ಈ ಹೆಸರು. ಒಂದೊಂದು ಸ್ತರವೂ ಸೇರುವ ಮೇಲ್ಮಟ್ಟದ ಸಂಪಾತ (ಗಂಟು)ಗಳಲ್ಲಿ ಒಂದೊಂದು ಕಪೋತ ಮತ್ತು ಕಂಠ, ಅಗ್ರದಲ್ಲಿ ವೃತ್ತಾಕಾರದ ಕಂಠ ಮತ್ತು ಅಮಲಕ. ಇದನ್ನೇ ಒರಿಸ್ಸಾ ಮುಂತಾದ ಕಡೆ ಪೀಡಾ ದೇಉಲ್ ಎನ್ನುತ್ತಾರೆ. ಪಾಪನಾಶನದ ಕೆಲವು ಗುಡಿಗಳು ಗಜಪೃಷ್ಠಾಕಾರದ್ದು, ಕೆಲವಕ್ಕೆ ಎರಡು ಪ್ರದಕ್ಷಿಣಾ ಪಥಗಳಿವೆ. ಎರಡು ತ್ರಿಕೂಟಾಚಲಗಳು. ಎರಡರ ಶಿಖರಗಳು ಅರೆಕೊಳವಿ (ಬಂಡಿಚಾವಣಿ) ಆಕಾರದಲ್ಲಿವೆ. ಇವೆಲ್ಲ ಸುಮಾರು ೯ನೆಯ ಶತಮಾನದ ನಂತರ ಅಸ್ತಿತ್ವಕ್ಕೆ ಬಂದವುಗಳು.

ಇವಲ್ಲದೆ ಕರ್ನೂಲು ಜಿಲ್ಲೆಯ ಸತ್ಯವೋಲು, ಮಹಾನಂದಿ, ಪಂಚಲಿಂಗಾಲ, ಒಂಡಿ ತಾಂಡ್ರಪಾಡು ಗ್ರಾಮಗಳಲ್ಲಿಯೂ ಇಂತಹ ಗುಡಿಗಳು ಕಂಡುಬಂದಿವೆ. ಇವುಗಳಲ್ಲಿ, ಔತ್ತರೇಯ ದಾಕ್ಷಿಣಾತ್ಯ ಶಿಲ್ಪಗಳ ಮೇಳವಿಕೆಯನ್ನು ಕಾಣುತ್ತೇವೆ. ನೀಟುಗಾರಿಕೆಯ ಘಟ್ಟವನ್ನು ಇಲ್ಲಿ ಗುರುತಿಸಬಹುದು.

ಇವುಗಳನ್ನೆಲ್ಲ ಗಮನಿಸಿದಾಗ ಬಾದಾಮಿಯ ಚಾಲುಕ್ಯರು ವಾಸ್ತುಶಿಲ್ಪದಲ್ಲಿ ಭಿನ್ನ ಭಿನ್ನ ಮಾರ್ಗಗಳನ್ನು ಅನ್ವೇಷಿಸಿ, ವಿವಿಧ ಶೈಲಿಗಳನ್ನು ರೂಪಿಸಲು ಯತ್ನಿಸಿದರೆಂಬುದು ಸ್ಪಷ್ಟವಾಗುತ್ತದೆ. ಈ ದೃಷ್ಟಿಯಲ್ಲಿ ಐಹೊಳೆಯನ್ನು ವಾಸ್ತುಶಿಲ್ಪದಲ್ಲಿ ತರಬೇತಿ ಶಾಲೆ ಎಂದು ಪರಿಗಣಿಸಬೇಕು. ಆರಂಭದ ಘಟ್ಟಕ್ಕೆ ಸೇರಿದ ಕೊಂತಿ, ಲಾಡಖಾನ್‌ಗಳಿಂದ, ವಿಕಸನ ಹಂತಕ್ಕೆ ಸೇರಿದ ಹುಚ್ಚಮಲ್ಲಿ, ಮಹಾಕೂಟದ ಮಹಾಕೂಟೇಶ್ವರ, ಬಾದಾಮಿಯ ಮಾಲಗಿತ್ತಿ ಆಲಯಗಳು ಬೆಳವಣಿಗೆಯ ಹಂತಗಳನ್ನು ನಿರೂಪಿಸುವ ಮಾದರಿಗಳಾಗಿವೆ. ನಾಗರಶೈಲಿಯಾಗಲೀ, ದ್ರಾವಿಡಶೈಲಿಯಾಗಲೀ, ಈ ಪರಿಸರದಲ್ಲಿ ಅವುಗಳ ಬೆಳವಣಿಗೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಪಟ್ಟದಕಲ್ಲು, ಆಲಂಪುರಗಳು ಈ ದೃಷ್ಟಿಯಲ್ಲಿ ವಿಕಸನಗೊಂಡ ಬಾದಾಮಿ ಚಾಲುಕ್ಯರ ದೇವಾಲಯಗಳ ಪ್ರದರ್ಶನ ಶಾಲೆಗಳೆನ್ನಬಹುದು.

ಈ ದೇವಾಲಯಗಳ ಕೆಲವು ವಿಶಿಷ್ಟ ಲಕ್ಷಣಗಳನ್ನು ಈಗ ಗುರುತಿಸಬಹುದು. ಆರಂಭದ ದೆಸೆಯಲ್ಲಿ ಗುಹಾವಾಸ್ತು ಶೈಲಿಯ ಮುಂದಿನ ಹೆಜ್ಜೆಯಾಗಿ ಸ್ತಂಭಗಳನ್ನೊಳಗೊಂಡ ಮಂಟಪ ದೇವಾಲಯಗಳು ತಲೆ ಎತ್ತಿದವು. ಮಟ್ಟಚಾವಣಿಯ ಈ ಕಟ್ಟಡಗಳು ಗೃಹಾವಾಸ್ತುಶೈಲಿಯನ್ನು ಹೋಲುತ್ತವೆ ಎಂಬುದು ಗಮನಾರ್ಹವಾದ ಅಂಶ. ಈಗಾಗಲೇ ಗಮನಿಸಿದಂತೆ ಲಾಡಖಾನ್, ಕೊಂತಿಗುಡಿಗಳು, ಜ್ಯೋತಿರ್ಲಿಂಗ ದೇವಾಲಯಗಳ ಸಂಕೀರ್ಣದಲ್ಲಿ ಕಂಡುಬರುವ ಕೆಲವು ಸಣ್ಣಗುಡಿಗಳು ಮಂಟಪಶೈಲಿಗೆ ನಿದರ್ಶನಗಳು. ಇಲ್ಲಿ ಗರ್ಭಗುಡಿಗಳು ಪ್ರತ್ಯೇಕವಾಗಿರದೆ ಮಂಟಪದೊಳಗೆ ಹಿಂದಿನ ಗೋಡೆಗೆ ಮತ್ತೆರಡು ಗೋಡೆಗಳನ್ನು ಕೂಡಿಸಿ ಸಣ್ಣ ಕೋಣೆಯೊಂದನ್ನು ಅಳವಡಿಸಿದಂತೆ ಮಾಡಿ ಅದನ್ನು ಗರ್ಭಗೃಹವೆಂದು ಕಲ್ಪಿಸಿದರು. ಇಂತಹ ಮಂಟಪಗಳ ಹೊರಛಾವಣಿಗಳು ಇಳಿಜಾರಾಗಿದ್ದು ಮಂಟಪದ ಮಧ್ಯ ಅಂಕಣ ಎತ್ತರವಾಗಿದ್ದು ಗಾಳಿ–ಬೆಳಕುಗಳಿಗೆ ಅನುಕೂಲ ಮಾಡಿದೆ. ಹೊರಗೋಡೆಗಳಲ್ಲಿ ಹಲವಾರು ವಿನ್ಯಾಸಗಳ ಜಾಲಂಧರಗಳು.

ರೇಖಾನಾಗರ ಶಿಖರಗಳ ದೇವಾಲಯಗಳು ಹೆಚ್ಚು ವಿಸ್ತಾರವುಳ್ಳವುಗಳಾದರೂ ದೊಡ್ಡ ದೊಡ್ಡ ಕಲ್ಲುಗಳನ್ನು ಜೋಡಿಸಿ ಎಬ್ಬಿಸಲಾದ ಗೋಡೆಗಳಲ್ಲಿ ಗೂಡುಗಳು ಹಾಗೂ ಉದ್ಗಮಗಳು ಹೊರತುಪಡಿಸಿ ಉಳಿದ ಭಾಗಗಳು ನಿರಾಡಂಬರವಾಗಿವೆ. ಶಿಖರದಲ್ಲಿ ಮುಂಚಾಚಿದ ಸುಕನಾಸಿ ಇದ್ದು ಅದರೊಳಗೆ ಸಾಮಾನ್ಯವಾಗಿ ತಾಂಡವ ಶಿವನ ವಿಗ್ರಹವಿರುತ್ತವೆ.


ದೇವಾಲಯದ ಮುಂದೆ ಶಂಖನಿಧಿ, ಪದ್ಮನಿಧಿಗಳ ವಿಗ್ರಹಗಳನ್ನು ಕೆಲವು ಸಂದರ್ಭಗಳಲ್ಲಿ ಸ್ಥಾಪಿಸಲಾಗಿದೆ. ಗರ್ಭಗೃಹದ ದ್ವಾರಬಂಧಗಳಲ್ಲಿ ಹಲವಾರು ಶಾಖೆಗಳನ್ನು ವಿಂಗಡಿಸುವುದು ಸಾಮಾನ್ಯ. ಒಳಭಾಗದಲ್ಲಿ ನಾಗ ಶಾಖೆ. ಕೆಳಭಾಗದಲ್ಲಿ ಸರ್ಪದ ತಲೆಗಳ ಎರಡೂ ಕಡೆಗಳಿಂದ ಮೇಲೆ ಹೋಗಿರುವ ನಾಗಗಳ ಬಾಲಗಳನ್ನು ಗರುಡನು, ಕೈಯಲ್ಲಿ–ದ್ವಾರಬಂಧದ ಮೇಲೆ–ಹಿಡಿದಿರುವಂತೆ ತೋರಿಸಿರುವುದು ಒಂದು ಲಕ್ಷಣ. ಲಲಾಟಬಿಂಬದಲ್ಲಿ ಸಾಮಾನ್ಯವಾಗಿ ಗರುಡನ ವಿಗ್ರಹವಿದ್ದರೂ ಇವುಗಳನ್ನು ವಿಷ್ಣುಗೃಹಗಳೆಂದು ಭಾವಿಸಲಾಗದು. ನಾಗಗಳಿಗೆ ಸಂಬಂಧಿಸಿದಂತೆ ಗರುಡನನ್ನು ತೋರಿಸಲಾಗಿದೆಯೇ ಹೊರತು ಗರ್ಭಗೃಹದೊಳಗಿನ ಶಿವ ಅಥವಾ ವಿಷ್ಣುವಿಗೂ ಇದಕ್ಕೂ ಸಂಬಂಧವಿಲ್ಲ. ದ್ವಾರಬಂಧದ ಕೆಳಭಾಗಗಳಲ್ಲಿ ದ್ವಾರಪಾಲಕರ, ಪರಿಚಾರಕ ಸಮೇತ ಗಂಗೆ–ಯಮುನೆಯರ ವಿಗ್ರಹಗಳು ಇರುತ್ತವೆ. ದ್ವಾರಶಾಖೆಯ ಮೇಲ್ಭಾಗದ ಉತ್ತರಾಂಗದಲ್ಲಿ ನಾಗರ ಅಥವಾ ದ್ರಾವಿಡ ಶೈಲಿಗಳ ದೇವಾಲಯಗಳ ಮಾದರಿಗಳನ್ನು ರೂಪಿಸಿರುವುದೂ ಉಂಟು.

ಈ ಆಲಯಗಳ ಕಂಬಗಳು ರುಚಿರ ಎಂದು ವರ್ಣಿಸಲಾದ ಗುಂಪಿಗೆ ಸೇರಿದವುಗಳು. ಚೌಕಾಕಾರದ ಈ ಕಂಬಗಳ ಕಾಂಡಭಾಗಗಳಲ್ಲಿ ಅಡ್ಡಪಟ್ಟಿಕೆಗಳಿದ್ದು, ಇವುಗಳ ಮೇಲ್ಭಾಗದಲ್ಲಿ, ಕೆಲವೊಮ್ಮೆ ಅರ್ಧ ಅಥವಾ ಪೂರ್ಣ ಪದಕಗಳಿರುತ್ತವೆ. ಮೂಲಸ್ಥಾನದಲ್ಲಿ ವ್ಯಾಳಿಗಳ ಬಾಯಿಂದ ಹೊಮ್ಮಿದ ಹೂವಿನ ಸುಳಿಗಳು, ಬಳ್ಳಿಗಳು, ಮುತ್ತಿನ ಸರಗಳು. ಇದರ ಮೇಲೆ ಕ್ರಮವಾಗಿ ಪದ್ಮಬಂಧ, ಕಳಶ ಮತ್ತು ಕುಂಭಗಳು. ಕೆಲವು ಸಂದರ್ಭಗಳಲ್ಲಿ ಈ ಕುಂಭಗಳನ್ನು ಘಟಪಲ್ಲವಗಳಾಗಿ ಮಾರ್ಪಡಿಸಿದೆ. ಹಲವಾರು ದೇವಾಲಯಗಳಲ್ಲಿ (ವಿರೂಪಾಕ್ಷ, ಮಲ್ಲಿಕಾರ್ಜುನ, ಲಾಡಖಾನ್, ದುರ್ಗಾ ಇತ್ಯಾದಿ) ಕಂಬಗಳ ಮುಖಗಳಲ್ಲಿ ನಾಲ್ಕಡಿಗಳ ಎತ್ತರದ ಸುಂದರ ವಿಗ್ರಹಗಳನ್ನು–ನರಸಿಂಹ, ಅರ್ಧನಾರೀಶ್ವರ, ರಾವಣ, ರಸಿಕ ದಂಪತಿಗಳು ಇತ್ಯಾದಿ–ಕೆತ್ತಲಾಗಿದೆ. ಕಂಬದ ಬೋದಿಗೆಗಳು ಅರ್ಧ ವೃತ್ತಾಕಾರ ಅಥವಾ ಸುರುಳಿ (ತರಂಗ) ಆಕಾರದ್ದು ವಿಶೇಷವಾಗಿ ಕಾಣಬರುವುದು. ಅರ್ಧ ವೃತ್ತಾಕಾರದ ಬೋದಿಗೆಗಳ ಗಜಪೃಷ್ಠಾಕಾರದ ತಲವಿನ್ಯಾಸವುಳ್ಳ ದೇವಾಲಯಗಳನ್ನು ಕೆಲವನ್ನು ಐಹೊಳೆ ಮಹಾಕೂಟಗಳಲ್ಲಿ ಕಾಣುತ್ತೇವೆ. ಆಂಧ್ರದಲ್ಲಿ ಸತ್ಯವೋಲು ಮತ್ತು ಪಾಪನಾಶನಗಳಲ್ಲಿಯೂ ಇಂತಹ ವಿನ್ಯಾಸದ ದೇವಾಲಯಗಳಿವೆ. ಗರ್ಭಗೃಹ, ಪ್ರದಕ್ಷಿಣಾಪಥ, ಸಭಾಮಂಟಪ, ಮುಖಮಂಟಪಗಳನ್ನೊಳಗೊಂಡ ಇನ್ನೊಂದು ಗಜಪೃಷ್ಠಾಕಾರದ ಪ್ರದಕ್ಷಿಣಾಪಥಗಳುಳ್ಳ ದೇವಾಲಯದ ಗರ್ಭಗೃಹದೊಳಗೆ ವೃತ್ತಾಕಾರದ ಪೀಠ. ಇದಲ್ಲದೆ ಮೇಲೆ ನೋಡಿದಂತೆ ಜಂಬುಲಿಂಗ ದೇವಾಲಯ ತ್ರಿಕೂಟ ಅಪರೂಪದ ವಿನ್ಯಾಸ.

ಚಾಲುಕ್ಯರ ಗುಡಿಗಳಲ್ಲಿ ಕೆಲವು ಸಾಮಾನ್ಯ ಲಕ್ಷಣಗಳನ್ನು ಕಾಣಬಹುದು. ಮಂಟಪಶೈಲಿಯ ಸಾಂಧಾರಗುಡಿಗಳ ಅಧಿಷ್ಠಾನ ಮಂಚಬಂಧ ಪದ್ಧತಿಯಲ್ಲಿದ್ದರೆ ಒಳಗಿನ ಗರ್ಭಗೃಹ ಪದ್ಮಬಂಧದಲ್ಲಿರುತ್ತದೆ. ವಿಮಾನಶೈಲಿಯಲ್ಲಿ ಇದು ಸಂಪೂರ್ಣವಾಗಿ ಪದ್ಮಬಂಧದಲ್ಲೂ, ರೇಖಾನಾಗರ ಗರ್ಭಗೃಹದ ಅಧಿಷ್ಠಾನ ಪದ್ಮಬಂಧದಲ್ಲೂ, ಸಭಾಮಂಟಪ ಹಾಗೂ ಮುಖಮಂಟಪಗಳ ಅಧಿಷ್ಠಾನಗಳು ಮಂಚಬಂಧದಲ್ಲೂ ಇರುತ್ತವೆ. ಮಂಚಬಂಧ ಸರಳವಾದುದು. ಕೆಳಗೆ ಉಪಾನ ಮತ್ತು ಮೇಲೆ ಪಟ್ಟಿಕೆಯನ್ನೊಳಗೊಂಡ ಎತ್ತರದ ಕಂಠದ ಮಾದರಿಯ ಅಧಿಷ್ಠಾನ. ಪಟ್ಟಿಕೆಗೆ ಬದಲು ಕಪೋತವನ್ನು ಸಾಮಾನ್ಯವಾಗಿ ಚಾಲುಕ್ಯ ದೇವಾಲಯಗಳಲ್ಲಿ ಕಾಣುತ್ತೇವೆ. ರೇಖಾನಾಗರ ಹಾಗೂ ಕದಂಬನಾಗರ ಶಿಖರಗಳೂ ಇರುತ್ತವೆ. ಪೀಠಗಳಿಲ್ಲದ ಕಂಬಗಳೇ ಹೆಚ್ಚು. ಆದರೆ ಈ ಕಾಲದ ಅಂತಿಮ ಭಾಗದಲ್ಲಿ ಪಟ್ಟದಕಲ್ಲಿನಲ್ಲಿ ಪಾಪನಾಥ ಅಥವಾ ಕಾಶೀ ವಿಶ್ವೇಶ್ವರಾಲಯಗಳಲ್ಲಿದ್ದಂತೆ ಅಲಂಕೃತ ಪಟ್ಟಿಕೆಗಳನ್ನೊಳಗೊಂಡ ಕಂಬಗಳು ಕಾಣಿಸಿಕೊಳ್ಳುತ್ತವೆ. ಆರಂಭ ಕಾಲದ ಭಿತ್ತಿಗಳು ಬೋಳು ಬೋಳಾಗಿದ್ದು, ನಂತರ ಇವುಗಳಲ್ಲಿ ಕೋಷ್ಠ, ಜಾಲಂಧರ ಹಾಗೂ ಶಿಲ್ಪಗಳನ್ನಳವಡಿಸಲಾಗಿದೆ. ಸಾಮಾನ್ಯವಾಗಿ ಗರ್ಭಗೃಹದ ಹೊರಗೋಡೆಗಳಲ್ಲೂ ಕೋಷ್ಠಗಳಿದ್ದು ಇವುಗಳಲ್ಲಿ ವಿವಿಧ ಮೂರ್ತಿಗಳನ್ನು ಸ್ಥಾಪಿಸಲಾಗಿದೆ. ಜಾಲಂದರಗಳ ಉದ್ದೇಶ ಆಲಯದ ಒಳಗೆ ಗಾಳಿ–ಬೆಳಕು ಬರುವುದು. ಇದನ್ನು ಇಂದಿನ ಕಿಡಕಿ ಎನ್ನಬಹುದು. ಕಾಲಕ್ರಮದಲ್ಲಿ ಈ ಜಾಲಂದರಗಳು ದೊಡ್ಡವೂ ಅಲಂಕೃತವೂ ಆಗಿರುತ್ತವೆ. ಇವುಗಳ ಮೇಲ್ಭಾಗದಲ್ಲಿ ಮಕರತೋರಣಗಳೋ ನಾಸಿಕಗಳೋ ಇರುತ್ತವೆ. ಇವು ವೃತ್ತಾಕಾರ, ಚೌಕ ಅಥವಾ ದೀರ್ಘ ಚತುರಸ್ರಗಳಲ್ಲಿದ್ದು ಅವುಗಳಲ್ಲಿ ಜ್ಯಾಮಿತಿಯ ಆಕೃತಿಗಳು, ಹೂಬಳ್ಳಿಗಳ, ಪ್ರಾಣಿಗಳ, ಸ್ವಸ್ತಿಕದ ಆಕಾರದಲ್ಲಿರುತ್ತವೆ. ಉದಾಹರಣೆಗಾಗಿ ಐಹೊಳೆಯ ಲಾಡಖಾನ್, ಪಟ್ಟದಕಲ್ಲಿನ ವಿರೂಪಾಕ್ಷ ಹಾಗೂ ಮಲ್ಲಿಕಾರ್ಜುನ, ಆಲಂಪುರದ ಗರುಡ ಬ್ರಹ್ಮ ಮುಂತಾದವುಗಳನ್ನು ಹೆಸರಿಸಬಹುದು. ಗರ್ಭಗುಡಿಯ ಚೌಕಟ್ಟಿನ ಮೇಲೆ ಒಳಗಿನ ವಿಗ್ರಹದ ಉಬ್ಬುಶಿಲ್ಪವಿರುವುದೊಂದು ವೈಶಿಷ್ಟ್ಯ. ಮಾಳಿಗೆಗಳು ಸಾಮಾನ್ಯವಾಗಿ ಇಳಿಜಾರಾಗಿ ಇರುತ್ತವೆ. ಭುವನೇಶ್ವರಿ ಸಹ ಯಾವುದೇ ವಿಶೇಷ ಅಲಂಕರಣಗಳನ್ನೊಳಗೊಂಡಿರುವುದಿಲ್ಲ.


ರಾಜಕೀಯವಾಗಿ ಚಾಲುಕ್ಯರ ಉತ್ತರಾಧಿಕಾರಿಗಳು ರಾಷ್ಟ್ರಕೂಟರು. ಗುಹಾವಾಸ್ತುಶಿಲ್ಪಕ್ಕೆ ಇವರ ಕೊಡುಗೆ ಗಮನಾರ್ಹ. ಇದನ್ನು ಈಗಾಗಲೇ ಗಮನಿಸಿದ್ದೇವೆ. ಆದರೂ ಇವರು ಕಟ್ಟಿಸಿದ ದೇವಾಲಯಗಳು ಕಡಿಮೆ ಎಂದೇ ಹೇಳಬೇಕು. ಧಾರವಾಡ, ಬಿಜಾಪುರ ಜಿಲ್ಲೆಗಳಲ್ಲಿ ಇವರ ಕಾಲದಲ್ಲಿ ಕಟ್ಟಿದ್ದೆನ್ನಲಾದ ಕೆಲವು ಗುಡಿಗಳನ್ನು ಗುರುತಿಸಲಾಗಿದೆ. ಕೇವಲ ಒಂದೇ ಗರ್ಭಗೃಹ(ಕೂಟ)ದ ಆಲಯದಿಂದ ತ್ರಿಕೂಟಾಲಯಗಳವರೆಗೆ ಇವರ ದೇವಾಲಯಗಳು ವಿಸ್ತೃತಗೊಂಡಿವೆ. ತಲವಿನ್ಯಾಸವನ್ನಾಧರಿಸಿ ಈ ದೇವಾಲಯಗಳಲ್ಲಿ ಏಳು ಮಾದರಿಗಳನ್ನು ಅ. ಸುಂದರ ಗುರುತಿಸಿದ್ದಾರೆ. ಏಕಕೂಟದಲ್ಲಿ ಪಟ್ಟದಕಲ್ಲಿನ ಜೈನನಾರಾಯಣ ಗುಡಿ ಹೆಸರಿಸಬಹುದಾದುದು. ಅಂತರಾಳದೊಳಗಿಂದ ಹೋಗಬಹುದಾದ ಮುಚ್ಚಿದ ಪ್ರದಕ್ಷಿಣಾಪಥ, ಕಂಬಗಳ ತೆರೆದ ಮುಂಭಾಗ, ಕಂಬಗಳ ಮಂಟಪ, ವಿಸ್ತಾರವಾದ ಮುಖಮಂಟಪಗಳು ಇದರ ಲಕ್ಷಣ. ಸಭಾಮಂಟಪಕ್ಕೆ ಹೋಗುವಾಗ ಎರಡೂ ಕಡೆ ಆನೆಯನ್ನೇರಿ ಕುಳಿತ (ಐರಾವತದ ಮೇಲಿನ) ಇಂದ್ರನ ವಿಗ್ರಹಗಳಿವೆ. ಗರ್ಭಗೃಹದ ಮೇಲಿನ ಶಿಖರ ನಾಗರವಿಮಾನ ಶೈಲಿಯದು.

ಸುಮಾರು ೮ನೆಯ ಶತಮಾನದ ದ್ವಿತೀಯಾರ್ಧಕ್ಕೆ ಸೇರಬಹುದಾದ ಬಚ್ಚನಗುಡ್ಡದ ಬಾಚಲಿಂಗೇಶ್ವರದ ದೇವಾಲಯವನ್ನು ಗಮನಿಸಿದಾಗ ಚೌಕಾಕಾರದ ವಿಮಾನವಿರುವುದು ಕಂಡು ಬರುತ್ತದೆ. (ಛಾಯಾ ಚಿತ್ರ-೧೭) ಇದರ ಮೇಲ್ಕಟ್ಟಡ ಇಲ್ಲ. ಎತ್ತರದ ಪೀಠ (ಕಾಯ) ಮತ್ತು ಪಟ್ಟಿಕೆ (ಅನುಕಾಯ)ಗಳು ಅನಲಂಕೃತ ಕೂಟದಾಕಾರದ ದೇವಕೋಷ್ಠಗಳು ಕೊರೆಯಲ್ಪಟ್ಟಿದ್ದು ಪಶ್ಚಿಮ ದಿಕ್ಕಿನಲ್ಲಿ ಉಗ್ರನರಸಿಂಹನ ವಿಗ್ರಹವಿದೆ. ದ್ವಾರಬಂಧ ಪಂಚಶಾಖೆಗಳುಳ್ಳದ್ದು. ಪತಂಗದಲ್ಲಿ ಗುಡಿಗಳ ಮಾದರಿಗಳನ್ನು ಕೆತ್ತುವ ಉದ್ದೇಶವಿದ್ದಂತೆ ತೋರುತ್ತದೆ.




ಚಿತ್ರ – ೧೭

ಐಹೊಳೆಯಲ್ಲಿ ಕೊಂತಿಗುಡಿಯ ಗುಂಪಿನ ಆಲಯಗಳಲ್ಲಿ ಮೂರನೆಯದು ೯ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದುದು. (ಛಾಯಾ ಚಿತ್ರ-೧೮) ಕೈಸಾಲೆಯ ಹಿಂಬದಿಗೆ ಗರ್ಭಗೃಹ. ಕೈಸಾಲೆಯ ಬೋಳುಭಿತ್ತಿ ಒಂದು ಲಕ್ಷಣ. ಸೂರು ಇಳಿಜಾರಾಗಿದೆ. ಕಕ್ಷಾಸನದಲ್ಲಿ ಪೂರ್ಣ ಘಟದ ಚಿಹ್ನೆ. ಆದರೆ ಇದನ್ನು ನಂತರ ಸೇರಿಸಲಾಗಿದೆ ಎನ್ನಬಹುದು. ಗರ್ಭಗೃಹದ ಆರು ಶಾಖೆಗಳ ದ್ವಾರಬಂಧದಲ್ಲಿ ಪದ್ಮ, ಮಿಥುನ, ಸ್ತಂಭ, ರಥ, ನಾಗ ಮತ್ತು ವಲ್ಲಿಗಳು ಸೇರಿವೆ. ಲಲಾಟದಲ್ಲಿರುವ ಹಿರಿಯಾಕೃತಿಯ ಗರುಡ ನಾಗಗಳ ಬಾಲಗಳನ್ನು ಹಿಡಿದಿದೆ. ಪೇದ್ಯಾಪಿಂಡ (ಎಲ್ಲ ಶಾಖೆಗಳ ಬುಡಗಳನ್ನು ಒಟ್ಟುಗೂಡಿಸಿರುವ ದ್ವಾರಬಂಧದ ಕೆಳಭಾಗ)ದಲ್ಲಿ ಪೂರ್ಣಘಟವಿದೆ. ಆಕರ್ಷಕವಲ್ಲದ ಮಂಚಬಂಧ ಉಪಪೀಠದ ಮೇಲೆ ಆಲಯವನ್ನು ಕಟ್ಟಿದೆ. ಅಧಿಷ್ಠಾನ ಪಟ್ಟಿಕೆಗಳು ಸವೆದಿವೆ.



ಚಿತ್ರ – ೧೮


ಗಮನಿಸಬಹುದಾದ ಇನ್ನೊಂದು ಗುಡಿ ಮಲಖೇಡದ ಜೈನಾಲಯ. (ಛಾಯಾ ಚಿತ್ರ-೧೯) ಇದು ಪಾರ್ಶ್ವನಾಥ ತೀರ್ಥಂಕರನ ಆಲಯ–ಇತ್ತೀಚಿನದು. ಆದರೆ ಇದಕ್ಕೆ ಬಳಸಿರುವ ಕಂಬ ಇತ್ಯಾದಿಗಳು ೯ನೆಯ ಶತಮಾನದ ಉತ್ತರಾರ್ಧದ ರಾಷ್ಟ್ರಕೂಟರ ಶಿವಾಲಯವೊಂದಕ್ಕೆ ಸೇರಿದುದು. ಇದರ ಸ್ತಂಭಗಳಲ್ಲಿ ಅಲಂಕರಣ, ಕಂಬಗಳ ಕುಬ್ಜಾಕೃತಿ, ರಾಷ್ಟ್ರಕೂಟ ಶೈಲಿಯ ಲಕ್ಷಣಗಳು. ಬುಡದಿಂದ ಮೇಲಕ್ಕೆದ್ದ ಕಂಬದ ಆರಂಭದ ಚೌಕದ ಮೇಲೆ ನಾಲ್ಕೂ ದಿಕ್ಕುಗಳಲ್ಲಿ ಎರಡೆರಡು ಸಿಂಹಗಳು ಕಂಬದ ಇತರ ಭಾಗವನ್ನು ಹೊತ್ತಿವೆ. ಮೇಲೆ ಅಷ್ಟ ಮುಖದ ಪಟ್ಟಿ. ನಂತರ ಶಿಲ್ಪಗಳುಳ್ಳ ಚತುರಸ್ರ ಭಾಗ. ಇದರಲ್ಲಿ ಮಿಥುನ ಶಿಲ್ಪಗಳೂ, ಯುದ್ಧದ ಚಿತ್ರಗಳೂ ಇವೆ.




ಚಿತ್ರ – ೧೯

ಕುಕ್ಕನೂರಿನ ನವಲಿಂಗೇಶ್ವರಾಲಯದಲ್ಲಿ ೯ ವಿಮಾನಗಳನ್ನು ಸೇರಿಸಲಾಗಿದೆ. ಇವು ಬೇರೆ ಬೇರೆ ಕಾಲಕ್ಕೆ ಸೇರಿದವುಗಳು. ಇವುಗಳಲ್ಲಿ ಎರಡು ಮಾತ್ರ ರಾಷ್ಟ್ರಕೂಟರ ಕಾಲದವು. ಇವುಗಳ ಅಧಿಷ್ಠಾನದ ಕಪೋತಬಂಧ ಸವೆದು ಜೀರ್ಣವಾಗಿದೆ. ವಿಮಾನ ಕರ್ಣ ಮತ್ತು ಭದ್ರ ಮಾದರಿಯದು. ಮಧ್ಯೆ ಮಧ್ಯೆ ಸಲಿಲಾಂತರ ಹಿಂಜರಿತ. ಬ್ರಹ್ಮಕಾಂತದ ಕಿರುಗಂಬಗಳ ಮಾಲಾಸ್ಥಾನ ಬಹುಮಟ್ಟಿನ ಅಲಂಕರಣವನ್ನು ಪಡೆದಿವೆ. ಕರ್ಣ್ನದಲ್ಲಿ ಗೂಡುಗಳಿದ್ದು ಅವುಗಳ ಕಂಬಗಳ ಮೇಲೆ ಹಿರಿಯಾಕಾರದ ಮಕರಗಳಿವೆ. ಅವು ತೋರಣ ಮತ್ತು ನಾಸಿಕಗಳನ್ನು ಆಧರಿಸಿವೆ. ಒಳಗೆ ದಿಕ್ಪಾಲರ ವಿಗ್ರಹಗಳು. ಮೂಲದಲ್ಲಿ ಸಣ್ಣಕಪೀಲಿ (ಅಂತರಾಳದ ಹೊರಭಿತ್ತಿ)ಗೆ ಹೊಂದಿ ಗೂಢಮಂಟಪ (ಮುಚ್ಚಿದ ಕೈಸಾಲೆ). ದಕ್ಷಿಣಭಿತ್ತಿಯ ಒಂದು ಭಾಗ ಮಾತ್ರ ಈಗ ಲಭ್ಯವಿದೆ. ದ್ವಾರಬಂಧದ ಪಂಚಶಾಖೆಯ ಮೇಲೆ ಲಲಾಟದಲ್ಲಿ ಗಜಲಕ್ಷ್ಮಿಯ ವಿಗ್ರಹ.

ಹಳ್ಳೂರಿನ ವಿಶ್ವೇಶ್ವರ ಗುಡಿ ತ್ರಿಚಲ ವಿಮಾನವನ್ನು ಹೊಂದಿದೆ. (ಛಾಯಾ ಚಿತ್ರ-೨೦) ಅಲ್ಲದೆ ಅಂತರಾಳ ಗೂಢಮಂಟಪ ಮತ್ತು ಮುಖಮಂಟಪಗಳಿವೆ. ಮುಖಮಂಟಪಕ್ಕೆ ಸೇರಿದಂತೆ ದ್ವಿತಲ ಗುಡಿಯಲ್ಲಿ ನಂದಿ. ಇವೆಲ್ಲವೂ ಕಪೋತಬಂಧದ ಅಧಿಷ್ಠಾನದ ಮೇಲೆ ನಿಂತಿವೆ. ವಿಮಾನದ ಕಪೋತದ ಕೆಳಗೆ ಹಂಸಮಾಲೆ. ಮೇಲಿನ ಎರಡು ತಲದ ಮೇಲೆ ಸರಳವಾದ ಹಾರ. ಗೂಢಮಂಟಪದ ಉತ್ತರ ಮತ್ತು ದಕ್ಷಿಣ ಭಿತ್ತಿಗಳಲ್ಲಿ ೧೨ ಕುಡ್ಯಸ್ತಂಭಗಳಿವೆ. ಅಲಂಕೃತ ಕುಬ್ಜಾಕಾರದ ಸ್ತಂಭಗಳು. ಕಕ್ಷಾಸನದಲ್ಲಿ ಪೂರ್ಣಘಟ. ಇದು ಒಂಭತ್ತನೆಯ ಶತಮಾನದ ಕೊನೆಯ ಭಾಗಕ್ಕೆ ಸೇರಿದ ಆಲಯ.



ಚಿತ್ರ – ೨೦




ಚಿತ್ರ – ೨೧

ಇದೇ ಗ್ರಾಮದ ಮಲಗುಡಿ ಸಾಂಧಾರ ವಿಮಾನವನ್ನು ಹೊಂದಿದೆ. (ಛಾಯಾಚಿತ್ರ–೨೧) ಗೂಢಮಂಟಪ. ದೊಡ್ಡ ಆಲಯದ ಒಟ್ಟು ಉದ್ದ ೬೯'. ಗೂಢಮಂಟಪದ ಅಗಲ ೪೧'. ಕಪೋತ ಬಂಧದ ಅಧಿಷ್ಠಾನ, ಪಶ್ಚಿಮ ದಿಕ್ಕಿನ ಪ್ರತಿಕಂಠದ ಮುಂಚಾಚಿದ ವ್ಯಾಲಗಳು. ಅಲಂಕೃತ ನಾಸಿಕಗಳಲ್ಲಿ ಗಂಧರ್ವ ಕಿನ್ನರರ ತಲೆಗಳು. ದ್ವಾರಬಂಧ ಪಂಚಶಾಖೆಯದು. ಸುಮಾರು ಕ್ರಿ. ಶ. ೮೮೦ನೆಯ ವರ್ಷದ ಇದು ಒಂದು ಜೈನಾಲಯ. ಎರಡೂ ಪಕ್ಕಗಳ ಭಿತ್ತಿಗಳಲ್ಲಿ ಕಂಬಗಳ ನಡುವೆ ನಿಂತಿರುವ ತೀರ್ಥಂಕರ ವಿಗ್ರಹಗಳು. ಅವುಗಳ ತಲೆಯ ಮೇಲೆ ಛತ್ರ.

ಸೂಡಿಯ ಗಣೇಶಾಲಯದ ಗರ್ಭಗೃಹ ಚೌಕಾಕೃತಿಯಲ್ಲಿದ್ದು ಮುಖಮಂಪಟ ಗರ್ಭಗೃಹಕ್ಕಿಂತ ಸಣ್ಣದು. ಇದು ಈಗ ಶಿಥಿಲವಾಗಿದ್ದು ದ್ವಾರದ ಎರಡು ಬದಿಯ ಶೈವ ದ್ವಾರಪಾಲಕರ ವಿಗ್ರಹಗಳೂ ಈಗ ಭಿನ್ನವಾಗಿ ಬಿದ್ದಿವೆ. ಹೊಸ ಮಹಾಕೂಟದ ಅಡಕೇಶ್ವರ, ರೋಣದ ಶಿವಾಲಯ, ನರೇಗಲ್ಲಿನ ತ್ರಿಪುರಾಂತಕೇಶ್ವರ, ಗದಗಿನ ತ್ರಿಕೂಟೇಶ್ವರ, ಲಕ್ಷ್ಮೇಶ್ವರದ ಬಾಲೇಶ್ವರಾಲಯಗಳು ಮತ್ತೊಂದು ಮಾದರಿಗೆ ಸೇರಿದವುಗಳು. ಇವುಗಳಲ್ಲಿ ಪ್ರದಕ್ಷಿಣಾಪಥ, ಅಂತರಾಳದೊಳಗಿನ ದೇವಕೋಷ್ಠಗಳು, ಸಭಾಮಂಟಪದ ದ್ವಾರದಲ್ಲಿನ ಆನೆಗಳು ಕಂಡುಬಂದಿಲ್ಲ. ನಾಗರವಿಮಾನ. ಕೆಲವು ಬದಲಾವಣೆಗಳೂ ಇವೆ. ನರೇಗಲ್ಲಿನ ನಾರಾಯಣ ದೇವಾಲಯದ ಸಭಾಮಂಟಪದಲ್ಲಿ ಅಧಿಕಸಂಖ್ಯೆಯ ಕಂಬಗಳಿವೆ. ಪಕ್ಕದ ಸಣ್ಣ ಗುಡಿಗಳಲ್ಲಿ ದೀರ್ಘಚತುರಸ್ರಾಕಾರದ ಪೀಠವಿದ್ದು ಅದರಲ್ಲಿ ೨೪ ತೀರ್ಥಂಕರರನ್ನು ಸ್ಥಾಪಿಸಲು ೨೪ ಗುಳಿಗಳಿವೆ. ಬಾದಾಮಿ ತಾಲೂಕಿನ ಬೇಲೂರಿನ ತ್ರಿಮೂರ್ತಿ ದೇವಾಲಯದ ದೀರ್ಘ ಚತುರಸ್ರಾಕಾರದ ಗರ್ಭಗೃಹದಲ್ಲಿ ಅದೇ ಆಕಾರದ ಪೀಠ, ಮಧ್ಯದಲ್ಲಿ ಬ್ರಹ್ಮ, ವಿಷ್ಣು, ಶಿವರ ವಿಗ್ರಹಗಳು. ವಿಶಾಲವಾದ ಸಭಾಮಂಟಪದ ಮಧ್ಯದಲ್ಲಿ ೧೬ ಕಂಬಗಳು. ಪಟ್ಟದಕಲ್ಲಿನ ಚಂದ್ರಶೇಖರ ಹಾಗೂ ಐಹೊಳೆಯ ಅಳ್ಳಿ(ಹಳ್ಳಿ)ಬಸಪ್ಪನ ಗುಡಿಗಳಲ್ಲಿ ಸಭಾಮಂಟಪಗಳು ಎತ್ತರವಾಗಿದ್ದು ಮುಂಭಾಗದಲ್ಲಿ ಮೆಟ್ಟಿಲುಗಳಿವೆ. ಚಪ್ಪಟೆಯ ಮಾಳಿಗೆ, ರೋಣದ ಅನಂತಶಯನ, ಗಳಗನಾಥ ಗುಂಪಿನ ಪಂಚಲಿಂಗೇಶ್ವರ ಗುಡಿಗಳಲ್ಲಿ ದ್ವಾರಗಳು ಪಕ್ಕಗಳಲ್ಲಿವೆ. ಸೂಡಿಯ ಜೋಡು ಕಳಸದ ಗುಡಿಯ ಗರ್ಭಗೃಹ ಸ್ವಲ್ಪ ಮಟ್ಟಿಗೆ ನಕ್ಷತ್ರ ವಿನ್ಯಾಸದಲ್ಲಿದೆ. ತ್ರಿಕೂಟಾಚಲಗಳ ಪ್ರಧಾನ ದಿಕ್ಕುಗಳಲ್ಲಿ ಗರ್ಭಗೃಹ, ಅಂತರಾಳ ಮತ್ತು ಮಧ್ಯದಲ್ಲಿ ಸಭಾ ಮಂಟಪಗಳಿದ್ದು ನಾಲ್ಕನೆಯ ದಿಕ್ಕಿನ ಮುಂಭಾಗದಲ್ಲಿ ಮುಖಮಂಟಪ. ಮುಖಮಂಟಪಗಳ ದ್ವಾರಗಳಲ್ಲಿ ಕೆಲವೆಡೆ ತೋರಣಗಳು ಕಂಡುಬಂದಿವೆ. ಸೂಡಿಯ ಮಲ್ಲಿಕಾರ್ಜುನ ದೇವಾಲಯ ಇದಕ್ಕೊಂದು ಉತ್ತಮ ನಿದರ್ಶನ. ಕಳಸಾಪುರದ ಈಶ್ವರಾಲಯದ ಮೂರು ಗರ್ಭಗೃಹಗಳಲ್ಲಿ ಅನಂತಶಯನ, ಶಿವಲಿಂಗ, ಉಮಾಮಹೇಶ್ವರರ ವಿಗ್ರಹಗಳಿದ್ದು ಪೂರ್ವಾಭಿಮುಖದ ಅಂತರಾಳದ ಮಕರ ತೋರಣದಲ್ಲಿ ಬ್ರಹ್ಮ, ನಟರಾಜ, ವಿಷ್ಣುಗಳ ಮೂರ್ತಿಗಳಿವೆ. ಈ ಗುಡಿಗಳೆಲ್ಲವೂ ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಅವರ ಸಾಮಂತರೋ, ಅಧಿಕಾರಿಗಳೋ ಕಟ್ಟಿಸಿದುದು. ರಾಷ್ಟ್ರಕೂಟ ಅರಸರೇ ಕಟ್ಟಿಸಿದ ದೇವಾಲಯಗಳು ಕಡಿಮೆ.


ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಸಿರಿವಾಳದಲ್ಲಿ ಶಾಸನಾಧಾರದ ಮೇಲೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ಕಟ್ಟಿಸಿದ



ಚಿತ್ರ – ೨೨


ದೇವಾಲಯಗಳ ಒಂದು ಗುಂಪೇ ಕರ್ನಾಟಕ ಸರಕಾರದ ಪುರಾತತ್ವ ಇಲಾಖೆಯವರ ಗಮನಕ್ಕೆ ಬಂದಿವೆ. (ಛಾಯಾ ಚಿತ್ರ–೨೨) ಇದು ಭೀಮಾ ನದಿಯ ಬಲದಂಡೆಯಲ್ಲಿದ್ದು ಇನ್ನೊಂದು ದಡದಲ್ಲಿ ಬೌದ್ಧಾವಶೇಷಗಳನ್ನೊಳಗೊಂಡ ಸನ್ನತಿ ಗ್ರಾಮವಿದೆ. ಸಿರಿವಾಳದಲ್ಲಿ ಸುಣ್ಣಕಲ್ಲಿನಲ್ಲಿ ಕಟ್ಟಲಾದ ೨೦ ಗುಡಿಗಳ ಒಂದು ಗುಂಪೇ ಇದೆ. ಈ ಗ್ರಾಮದಲ್ಲಿಯೇ ಸುಣ್ಣಕಲ್ಲು ಹೆಚ್ಚಿನ ಪ್ರಮಾಣದಲ್ಲಿ ಸಿಗುವುದೊಂದು ವಿಶೇಷ. ದೇವಾಲಯಗಳು ಈಗ ಬಹುಮಟ್ಟಿಗೆ ಭಿನ್ನವಾಗಿವೆ.

ಪ್ರಾಚೀನ ಗ್ರಾಮವಿದ್ದಿರಬಹುದಾದ ನಿವೇಶನದ ಪಶ್ಚಿಮ ತುದಿಯಲ್ಲಿರುವ ೧೫ನೆಯ ಆಲಯ ಬಹುಶಃ ಇವುಗಳಲ್ಲಿ ಮೊದಲನೆಯದು. (ಛಾಯಾ ಚಿತ್ರ –೨೩) ಈಗ ಉಳಿದಿರುವುದು ವಿತಾನ ಮತ್ತು ಅಂತರಾಳ. ಪ್ರಸ್ತರದ ಕೆಳಗೆ ಭೂತಮಾಲೆ. ಕಪೋತದಲ್ಲಿ ಅಲ್ಪನಾಸಿ. ಅಂತರಾಳದಲ್ಲಿ ಎರಡು ಸಿಂಹಪಾದ ರುದ್ರಕಾಂತ ಸ್ತಂಭಗಳಿವೆ. ಇಂತಹ ಸಿಂಹಪಾದದ ಸ್ತಂಭಗಳು ರಾಷ್ಟ್ರಕೂಟ ಶೈಲಿಗೆ ಅಪರೂಪವಾದವುಗಳೆಂದೇ ಹೇಳಬೇಕು. ಸಿಂಹದ ಮೇಲೆ ನಿಲುವಿನ ಹಾಗೂ ಅಡ್ಡಡ್ಡ ಪಟ್ಟಿಕೆಗಳಲ್ಲಿ ಕೆತ್ತನೆಯ ಕೆಲಸ ಮಾಡಲಾಗಿದೆ.




ಚಿತ್ರ – ೨೩

೧೬ನೆಯ ದೇವಾಲಯವು ಸಮೀಪದ ಒಂದು ಹೊಲದಲ್ಲಿದೆ. ಈಗ ಕಂಡು ಬರುವುದೆಲ್ಲ ಭಗ್ನವಾದ ಗೂಢಮಂಟಪ. ಅಧಿಷ್ಠಾನ ಹೂತು ಹೋಗಿದೆ. (ಛಾಯಾ ಚಿತ್ರ –೨೪) ಪಾದದಲ್ಲಿ ಮುಂಚಾಚಿದ ಭದ್ರ ಹಾಗೂ ಕರ್ಣಗಳನ್ನು ಕಾಣಬಹುದು. ಭಿತ್ತಿಯಲ್ಲಿ, ಗೂಡುಗಳಲ್ಲಿ, ಕಂಬಗಳು ಅನಲಂಕೃತ. ಪ್ರಸ್ತರದ ಮೇಲೆ ಹಾರ ಕಂಡುಬಂದಿರುವುದರಿಂದ ಬಹುಶಃ ದ್ವಿತಲ ವಿಮಾನವಿದ್ದಿರಬಹುದು.




ಚಿತ್ರ – ೨೪

ಪೂರ್ವದ ತುದಿಯಲ್ಲಿ ಮೂರು ಗುಡಿಗಳಿವೆ. ಮೊದಲನೆಯ ಗುಡಿ ಪೂರ್ವಾಭಿಮುಖವಾಗಿದೆ. ಸುಮಾರು ಹತ್ತನೆಯ ಶತಮಾನದ ದ್ವಿತೀಯಾರ್ಧದ ಈ ಗುಡಿ ದೊಡ್ಡದಾಗಿದ್ದು, ದ್ವಿ ಅಂಗ ವಿಮಾನ ಹಾಗೂ ದ್ವಿ ಅಂಗ ಗೂಢಮಂಟಪ ಭದ್ರಾವಲೋಕನಗಳಿದ್ದು ಗೂಢಮಂಟಪಕ್ಕೆ ಸೇರಿಸಿದಂತೆ ಒಂದು ನಂದಿ ಮಂಟಪವಿದೆ. (ಛಾಯಾ ಚಿತ್ರ-೨೫) ಅನಲಂಕೃತ ಕಪೋತಬಂಧ ಅಧಿಷ್ಠಾನ. ಬ್ರಹ್ಮಕಾಂತ ಅರೆಗಂಭಗಳು ಹೊರಗೋಡೆಯ ಸುತ್ತಲೂ ಇವೆ. ವಿಮಾನ ಅಥವಾ ಗೂಢ ಮಂಟಪಗಳಲ್ಲಿ ಕೋಷ್ಠಗಳಿಲ್ಲ. ಆದರೆ ಕಪೀಲಿ ಗೋಡೆಗಳಲ್ಲಿ ಒಂದು ಕೋಷ್ಠವನ್ನು ಕಾಣಬಹುದು. ಗೂಢಮಂಟಪದ ಎಲ್ಲ ಗೋಡೆಗಳಲ್ಲೂ ಹೊರಬದಿಯಲ್ಲಿ ಅಗಲವಾದ ಮುಂಚಾಚುಗಳಿವೆ. ದಕ್ಷಿಣ ಭಿತ್ತಿಯಲ್ಲಿ ಜಾಲವನ್ನಳವಡಿಸಿದ ಒಂದು ಭದ್ರಾವಲೋಕವಿದ್ದಂತೆ ತೋರುತ್ತದೆ. ನಂದಿಮಂಟಪ ಈಗ ಶಿಥಿಲವಾಗಿದೆ. ಅಧಿಷ್ಠಾನ ಮತ್ತು ನಂದಿಯನ್ನು ನಿಲ್ಲಿಸಿದ್ದ ಪೀಠಗಳು ಮಾತ್ರ ಉಳಿದಿವೆ.




ಚಿತ್ರ – ೨೫




ಚಿತ್ರ – ೨೬

ಮೊದಲಗುಡಿಗೆ ಸ್ವಲ್ಪ ದಕ್ಷಿಣಕ್ಕೆ ಪೂರ್ವಾಭಿಮುಖವಾದ ಎರಡನೆಯ ಗುಡಿ ಇದೆ. (ಛಾಯಾ ಚಿತ್ರ–೨೬) ಮೂರುಗುಡಿಗಳ ಗುಂಪಿನಲ್ಲಿ ಇದೇ ದೊಡ್ಡದು. ದೀರ್ಘ ಚತುರಸ್ರಾಕಾರದ ವಿಮಾನ. ಇದರ ಒಂದೊಂದು ಗೋಡೆಯಲ್ಲೂ ಮುಂಚಾಚಿದ ಭದ್ರ, ಪಶ್ಚಿಮ ಕಡೆ ಎರಡು ಪ್ರನಾಳಗಳನ್ನು ಭದ್ರಕ್ಕೆ ಅಳವಡಿಸಿದೆ. ಈ ವಿನ್ಯಾಸದ ಆಧಾರದ ಮೇಲೆ ಇದು ತ್ರೈಪುರುಷ ದೇವಾಲಯು ವಾಗಿದ್ದಿರಬಹುದೆಂದು ಕೆ. ವಿ. ಸೌಂದರರಾಜನ್ ಊಹಿಸಿದ್ದಾರೆ. ಪ್ರಸ್ತರದಲ್ಲಿ ಭೂತಮಾಲೆ. ಕೆಲವು ಭೂತಗಳು ವಾದ್ಯಗಳನ್ನು ಬಾರಿಸುತ್ತಿವೆ. ಕೆಲವು ನರ್ತನ ಭಂಗಿಯಲ್ಲಿವೆ. ವಿಮಾನದ ದಕ್ಷಿಣಭಿತ್ತಿಯಲ್ಲಿ ಮಿಥುನ ಭೂತಗಣಗಳಿವೆ. ಮೂಲೆಗಳಲ್ಲಿ ಸಿಂಹ ಅಥವಾ ವ್ಯಾಲಗಳು ಭೂತಗಳನ್ನು ರಕ್ಷಿಸುತ್ತಿರುವಂತಿದೆ. ದ್ವಿಕೂಟಗಳ ೩ನೆಯ ಗುಡಿ ೨ನೆಯ ಗುಡಿಗೆ ಸ್ವಲ್ಪ ಪೂರ್ವಕ್ಕಿದೆ. ಇದು ಶಿಥಿಲವಾಗಿ ಮಣ್ಣಿನಲ್ಲಿ ಹೂತುಹೋಗಿದೆ. ಮೇಲೆ ಗಿಡಗಳು ಬೆಳೆದು ಇದು ಮೇಲ್ನೋಟಕ್ಕೆ ಕಾಣಿಸುವುದೇ ಇಲ್ಲ. ಅಧಿಷ್ಠಾನದ ಅಲ್ಪನಾಸಿ ಉತ್ತಮ ಕೆತ್ತನೆಯ ಭಾಗ. ಪ್ರತಿಕಂಠದ ಮೇಲಿನ ಕಪೋತದಲ್ಲಿ ಭವ್ಯವಾದ ವ್ಯಾಲಗಳನ್ನು ಕೆತ್ತಲಾಗಿದೆ.




ಚಿತ್ರ – ೨೭

ಮೇಲಿನ ಮೂರು ಗುಡಿಗಳಿಗಿಂತ ಸ್ವಲ್ಪ ಪಶ್ಚಿಮಕ್ಕಿರುವುದು ಅಲಂಕೃತವಾದ ನಾಲ್ಕನೆಯ ಗುಡಿ. ಮುಮ್ಮಡಿ ಕೃಷ್ಣನ ಕ್ರಿ. ಶ. ೯೩೯ನೆಯ ವರ್ಷದ ಶಾಸನ ಇದರ ಕಾಲಕ್ಕೆ ಖಚಿತವಾದ ಆಧಾರವನ್ನೊದಗಿಸಿದೆ. ತ್ರಿಅಂಗವಿರುವ ಭದ್ರದಲ್ಲಿ ಮುಂಚಾಚಿದ ಸುಭದ್ರ ಸಲಿಲಾಂತರಗಳ ಕರ್ಣಗಳನ್ನು ಭದ್ರದಿಂದ ಬೇರ್ಪಡಿಸಿದೆ. ಪದ್ಮಬಂಧದ ಅಧಿಷ್ಠಾನ. ಪದ್ಮದ ಪಟ್ಟಿಕೆಯ ಮೇಲೆ ದಳಗಳ ಕಮಲದ ಚಿತ್ರೀಕರಣ. (ಛಾಯಾಚಿತ್ರ-೨೭) ತ್ರಿಪಟ್ಟಕುಮುದದ ಮಧ್ಯ ಪಟ್ಟಿಯಲ್ಲಿ ವಿವಿಧ ರೇಖಾವಿನ್ಯಾಸಗಳ ವಲ್ಲಿಗಳ ಚಿತ್ರಗಳನ್ನು ಬಿಡಿಸಿದೆ. ಪ್ರತಿಕಂಠದಲ್ಲಿ ಪೂರ್ಣಾಕಾರದ ವ್ಯಾಲಗಳು. ಬ್ರಹ್ಮಕಾಂತ ಅರೆಗಂಬಗಳಲ್ಲಿ ಮಾಲಾಸ್ಥಾನಗಳಿದ್ದು ಅದರಲ್ಲಿ ವಿಗ್ರಹಗಳ, ಪುಷ್ಪಗಳ ಕೆತ್ತನೆಗಳಿವೆ. ಕಪೋತದ ಕೆಳಗೆ ಹಂಸಮಾಲೆ. ವಿಮಾನಕ್ಕೆ ಮುಂದೆ ಉತ್ತರ ಹಾಗೂ ದಕ್ಷಿಣಭಾಗಗಳಲ್ಲಿ ದ್ವಾರಗಳಿರುವುವು. ಅರ್ಧಮಂಟಪಕ್ಕೆ ಮೆಟ್ಟಿಲುಗಳಿವೆ. ಇದು ಕರ್ನಾಟಕ ಶೈಲಿಗೆ ಅಪರೂಪ. ಆದರೆ ಸಮಕಾಲೀನ ಚೋಳರ ಆಲಯಗಳಲ್ಲಿ ಇದೊಂದು ವೈಶಿಷ್ಟ್ಯ. ಬೋಳಾದ ಅರ್ಧಮಂಟಪದ ಭಿತ್ತಿಯಲ್ಲಿ ಒಂದೇ ಒಂದು ದೇವಕೋಷ್ಠ (ಗೂಡು) ಇದೆ. ಉತ್ತರದ್ವಾರಬಂಧದಲ್ಲಿ ವಲ್ಲಿ, ವಜ್ರ, ವ್ಯಾಲ (ರೂಪ), ಬಾಹ್ಯಗಳೆಂಬ ನಾಲ್ಕು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ. ಗೂಢಮಂಟಪವು (ಛಾಯಾ ಚಿತ್ರ-೨೮) ಚತುರಸ್ರಾಕಾರದ ಕೈಸಾಲೆಯಂತಿದೆ. ತ್ರಿಪಟ್ಟ ಕುಮುದದ ಮಧ್ಯೆ ಪಟ್ಟಿಯಲ್ಲಿ ರಾಮಾಯಣ (ವಾಲಿ ಸುಗ್ರೀವರ ಕಾಳಗ, ಜಟಾಯುವಧ), ಮಹಾಭಾರತ ಹಾಗೂ ಪಂಚತಂತ್ರದಿಂದ ಆಯ್ದ ಭಾಗಗಳ ಚಿತ್ರಪಟ್ಟಿಗಳಿವೆ. ಜೊತೆಗೆ ಜಿಂಕೆ, ಕೋತಿ, ಸಿಂಹ, ಕರಡಿ ಮುಂತಾದ ಪ್ರಾಣಿಗಳ, ಪ್ರಣಯಾಸಕ್ತ ಮಿಥುನ ದಂಪತಿಗಳ ಚಿತ್ರಗಳಿವೆ. ಗೂಢಮಂಟಪದೊಳಗೆ ಅಲಂಕೃತವಾದ ನಾಲ್ಕು ಕಂಬಗಳಿವೆ. ಗೋಡೆಗೆ ಹೊಂದಿಸಿರುವ ಗೋಡ ಗಂಬಗಳು ಸರಳರೀತಿಯವು. ಮಹಾಮಂಟಪ ಮತ್ತು ನಂದಿಮಂಟಪಗಳನ್ನು ಎದುರು ಬದುರಾಗಿರುವ ಮೆಟ್ಟಿಲುಗಳು ಕೂಡಿಸಿವೆ. ನಂದಿಮಂಟಪದ ಪೂರ್ವದ್ವಾರ ಅನಲಂಕೃತ. ಪಶ್ಚಿಮದಲ್ಲಿ ಒಂದು ಜಾಲಂದರವಿದೆ.



ಚಿತ್ರ – ೨೮



ಚಿತ್ರ – ೨೯

ಹತ್ತನೆಯ ಶತಮಾನದ ದ್ವಿತೀಯಾರ್ಧಕ್ಕೆ ಸೇರಿದ ೯ನೆಯ ಗುಡಿಯ ಉತ್ತರ–ದಕ್ಷಿಣ ಗೂಢಮಂಟಪಗಳಲ್ಲಿ ಹಿರಿದಾದ ರಕ್ಷಣೆಗೊಳಪಟ್ಟ ಮುಂಚಾಚಿದ ಭದ್ರಗಳಿವೆ. (ಛಾಯಾ ಚಿತ್ರ-೨೯) ಕಪೋತಬಂಧ, ಅಧಿಷ್ಠಾನ ಸರಳವಾಗಿವೆ. ಗೋಡೆಗಂಬಗಳ ಮಾಲಾಸ್ಥಾನಗಳಲ್ಲಿ ಸುರುಳಿಗಳಿದ್ದು ಅವುಗಳಲ್ಲಿ ಗಣಗಳ, ಅಪ್ಸರೆಯರ, ಗಣೇಶ, ದುರ್ಗ, ಮಹಿಷಮರ್ದಿನಿಗಳ ವಿಗ್ರಹಗಳಿವೆ. ಗೂಢಮಂಟಪದೊಳಗೆ ಬ್ರಹ್ಮಕಾಂಡ ಕಂಬಗಳಿವೆ. ಅವುಗಳ ಮಧ್ಯಪಟ್ಟಿಯಲ್ಲಿ ದ್ರಾಕ್ಷಾರಸದ ಬಳ್ಳಿಗಳನ್ನು ಕಂಡರಿಸಿದೆ. ಮಧ್ಯದ ಮೇಲ್ಛಾವಣಿಯಲ್ಲಿ ಎಂಟು ಹಸ್ತಗಳ, ಬಲಹೀನವಾಗಿಯೇ ಕಾಣಿಸುವ ನಟರಾಜನ ವಿಗ್ರಹವಿದೆ. ಗೂಢಮಂಟಪದ ಅಧಿಷ್ಠಾನ ಪ್ರತಿಗಳು ನಾಲ್ಕನೆಯ ದೇವಾಲಯದ ವಿನ್ಯಾಸವನ್ನು ಹೋಲುತ್ತವೆ. ಆದರೆ ಇಕ್ಕಟ್ಟಾದ ಉದ್ದನೆಯ ಮೂರು ಜಾತಿಗಳನ್ನು ಕ್ರಮವಾಗಿ ದಕ್ಷಿಣ–ಉತ್ತರಗಳಲ್ಲಿ ಅಳವಡಿಸಿದೆ. ಪೂರ್ವದ್ವಾರದ ಪಟ್ಟಿಯ ಕೆಳಗೆ ಎರಡೂ ಕಡೆ ಒಂದೊಂದು ಆನೆಗಳು ಮುಂಚಾಚಿದಂತಿವೆ. ಗೂಢಮಂಟಪದೊಳಗೆ, ಮೇಲ್ಭಾಗದಲ್ಲಿ ಉತ್ತಮ ಲಕ್ಷಣದ ಕುಂಭಾಕಾರವುಳ್ಳ ನಾಲ್ಕು ಬ್ರಹ್ಮಕಾಂಡ ಕಂಬಗಳಿವೆ. ಚತುರಸ್ರದ ಪಟ್ಟಿಯಲ್ಲಿ ಮೂರು ಮಾಲಾಕಾರದ ವಿನ್ಯಾಸವಿದ್ದು ಒಂದೊಂದರ ಮಧ್ಯೆಯೂ ನರ್ತನ ಭಂಗಿಯ ವಿಗ್ರಹಗಳಿವೆ.

ರಾಷ್ಟ್ರಕೂಟರ ಸಮಕಾಲೀನರಾಗಿ ಅವರೊಡನೆ ರಾಜಕೀಯ ಸಂಬಂಧಗಳನ್ನು ಹೊಂದಿದ್ದ ನೊಳಂಬರು ಆಂಧ್ರಪ್ರದೇಶದ ಅನಂತಪುರ, ಕರ್ನಾಟಕದ ತುಮಕೂರು, ಕೋಲಾರ, ಚಿತ್ರದುರ್ಗ ಜಿಲ್ಲೆಗಳ ಭಾಗಗಳನ್ನೊಳಗೊಂಡ ನೊಳಂಬವಾಡಿ ಪ್ರಾಂತವನ್ನು ಆಳುತ್ತಿದ್ದರು. ಅವರ ರಾಜಧಾನಿ ಹೇಮಾವತಿ. ಅವರೂ ಸಹ ಹಲವಾರು ಆಲಯಗಳನ್ನು ಕಟ್ಟಿಸಿದರು. ಈ ಆಲಯಗಳು ನೊಳಂಬಶೈಲಿಗೆ ಸೇರಿದುವೆನ್ನಲಾದರೂ ಒಂದು ಉಪಶೈಲಿಯೆಂದೇ ಭಾವಿಸಬಹುದಾಗಿದೆ. ವಾಸ್ತವಿಕವಾಗಿ ನೊಳಂಬರು ವಾಸ್ತುಶಿಲ್ಪಕ್ಕಿಂತಲೂ ಹೆಚ್ಚಾಗಿ ಮೂರ್ತಿಶಿಲ್ಪದಲ್ಲಿ ವಿಶೇಷವಾದ ಆಸಕ್ತಿವಹಿಸಿದ್ದು, ಆ ಕಾಲದ ಆ ಮೂರ್ತಿಗಳನ್ನು ನೊಳಂಬ ಶೈಲಿಯದೆಂದು ವರ್ಣಿಸಬಹುದಾಗಿದೆ.

ಚೌಕಾಕಾರದ ಗರ್ಭಗೃಹದ ಮುಂದೆ ಅಂತರಾಳ (ಅರ್ಧಮಂಟಪ), ನವರಂಗ ಹಾಗೂ ಮುಖಮಂಟಪಗಳನ್ನು ಇವರ ದೇವಾಲಯಗಳಲ್ಲಿ ಕಾಣುತ್ತೇವೆ. ಅಂತರಾಳದಲ್ಲಿ ಎರಡು ಕಂಬಗಳಿರಬಹುದು. ಹಲವಾರು ಸಂದರ್ಭಗಳಲ್ಲಿ ಕಂಬಗಳೇ ಇಲ್ಲ. ನವರಂಗದಲ್ಲಿ ಮಾತ್ರ ನಾಲ್ಕು ಕಂಬಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಇದರ ಬಹುತೇಕ ಎಲ್ಲ ದೇವಾಲಯಗಳ ಮುಖಮಂಟಪಗಳೂ ಈಗ ಶಿಥಿಲಗೊಂಡು ಬಿದ್ದುಹೋಗಿವೆ. ದೇವಾಲಯದ ಮುಂದೆ ನಂದಿವಿಗ್ರಹವನ್ನಿಡಲೆಂದೇ ಒಂದು ನಂದಿಮಂಟಪ. ಆದರೆ ಒಮ್ಮೊಮ್ಮೆ ಈ ನಂದಿ ಮಂಟಪಗಳು ನಂತರ ಸೇರಿಸಲ್ಪಟ್ಟವೆನಿಸುತ್ತವೆ. ಅಧಿಷ್ಠಾನದಲ್ಲಿ ಸ್ಪಷ್ಟವಾಗಿ ಕೆತ್ತಿದ ನಾಲ್ಕು ಕಪೋತಗಳು, ಪ್ರಾಣಿಗಳನ್ನು ಚಿತ್ರಿಸಿದ ಅಲಂಕಾರ ಪಟ್ಟಿಗಳು, ನೆಲಮಟ್ಟದ ಮೇಲಿನ ಚಾಚು ಭಾಗದ ಅಲಂಕಾರಪಟ್ಟಿಗಳು ನಾಲ್ಕು–ಜಗತಿ, ಕುಮುದ, ಕಪೋತ ಹಾಗೂ ಕಂಠ. ಜಗತಿಯು ದೀರ್ಘಚತುರಸ್ರಾಕಾರದಲ್ಲಿದ್ದು ಒಮ್ಮೊಮ್ಮೆ ಅವನ್ನು ಮಧ್ಯಮಂಜರಿಯ ಪುಷ್ಪವಿನ್ಯಾಸದಲ್ಲಿ ಛೇದಿಸಲಾಗಿರುತ್ತದೆ. ಕುಮುದ ಎಂಬುದು ಅಳಿಯುರುಳಿಯ ದಿಂಡಿನಾಕಾರವನ್ನು ಹೋಲುತ್ತದೆ. ಅರ್ಧವೃತ್ತಾಕಾರದ ಒಳರಚನೆ ಒಮ್ಮೊಮ್ಮೆ ಮುಮ್ಮುಖವಾಗಿ ಕಾಣಿಸಲೆಂಬಂತೆ ಕೆತ್ತಲಾಗಿರುತ್ತದೆ.

ರಾಷ್ಟ್ರಕೂಟರ ಕಾಲದ ಗುಡಿಗಳ ಕೆಲವು ವಿಶಿಷ್ಟ ಲಕ್ಷಣಗಳನ್ನು ಹಲವರು ವಿದ್ವಾಂಸರು ಗಮನಿಸಿದ್ದಾರೆ. ಅಧಿಷ್ಠಾನದ ಕಪೋತದ ಮೇಲಿನ ನಾಸಿಕ ಈಗ ಕಾಣಿಸದೆ, ಬದಲಿಗೆ ಚಪ್ಪಟೆಯಾದ ತ್ರಿಕೋಣಾಕಾರದ ಉಬ್ಬು ಚಿತ್ರಗಳು ಕಾಣಿಸತೊಡಗಿವೆ. ನಂತರದ ಚಾಲುಕ್ಯ–ಹೊಯ್ಸಳ ದೇವಾಲಯಗಳ ದುಂಡಾಕಾರದ ಉಬ್ಬು ಚಿತ್ರಗಳಿಗೆ ಇವು ಮುನ್ಸೂಚಕಗಳಾಗಿವೆ. ಸಾಧಾರಣ ಅಥವಾ ಎದ್ದು ಕಾಣುವ ಎತ್ತರದ ಅರೆಗಂಬಗಳು ಗೋಡೆಗಳ ಹೊರಮೈಯಲ್ಲಿ ಕಾಣಿಸಿವೆ. ಈ ಅರೆಗಂಬಗಳಿಗೆ ಕೀರ್ತಿಮುಖಗಳು, ಅವುಗಳ ಬಾಯಿಂದ ಹೊರಟ ಮುತ್ತಿನ ಅಥವಾ ಬಳ್ಳಿಯ ಸರಗಳು ಒಂದು ವಿಶೇಷ. ಕೋಷ್ಠಗಳ ಮೇಲ್ಭಾಗದಲ್ಲಿ ಶಿಖರಗಳು ಅಥವಾ ಮಕರ ತೋರಣಗಳು. ಕಂಬಗಳ ಬೋದಿಗೆಗಳು ಸಾಂಪ್ರದಾಯಿಕ ರೂಪಗಳನ್ನು ಹೊಂದಿರುತ್ತವೆ. ಆದರೆ ಮೊದಲಿನ ಆಕೃತಿ ಹಾಗೂ ದಾರ್ಢ್ಯತೆಗಳು ಕಂಡು ಬರುವುದಿಲ್ಲ.

ಕಾಂಡಭಾಗದಲ್ಲಿ ಅಡ್ಡಪಟ್ಟಿಗಳಿರುವ ಚೌಕಾಕಾರ ಅಥವಾ ಚೌಕ ಹಾಗೂ ವೃತ್ತಾಕಾರಗಳ ಕಂಬಗಳು ಈಗ ಸಾಮಾನ್ಯ. ಪಟ್ಟಿಗಳಲ್ಲಿ ಬಳ್ಳಿಗಳು, ಮುತ್ತಿನ ಸುರುಳಿಗಳು ಹಾಗೂ ಮನುಷ್ಯರ, ಪ್ರಾಣಿಗಳ, ದೇವತೆಗಳ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಚೌಕಾಕಾರದ ಪೀಠವಿದ್ದಲ್ಲಿ ಮೇಲ್ಭಾಗ ವೃತ್ತಾಕಾರದ್ದು. ಒಮ್ಮೊಮ್ಮೆ ಮಧ್ಯಭಾಗ ಕಬ್ಬಿನ ಜಲ್ಲೆಯಂತೆ ದುಂಡಾಗಿದ್ದು ಅಗ್ರಭಾಗ ವೃತ್ತಾಕಾರ. ಅದರ ಮೇಲೆ ಚೌಕಾಕಾರದ ಹಲಗೆ, ಮಾಳಿಗೆಗಳು ಚಪ್ಪಟೆ. ಇಳಿಜಾರಾದ ಮಾಳಿಗೆಗಳು ಕಾಣಿಸುವುದಿಲ್ಲ. ಮಂಟಪದೊಳಗೆ ಕಕ್ಷಾಸನಗಳನ್ನು ಅಳವಡಿಸುವ ಪದ್ಧತಿ ಈಗ ಆರಂಭವಾಗುತ್ತದೆ. ದ್ವಾರಬಂಧಗಳಲ್ಲಿ ನಾಲ್ಕರಿಂದ ಏಳರವರೆಗೆ ಶಾಖೆಗಳಿರುತ್ತವೆ. ಕೆಳಭಾಗದಲ್ಲಿ ದ್ವಾರಪಾಲಕರು. ಅಂತರಾಳದ ಮುಂಭಾಗದಲ್ಲಿ ಮಕರ ತೋರಣದ ಎರಡು ಕಡೆಗಳಲ್ಲಿ ಮಹಿಷಮರ್ದಿನಿ, ಬ್ರಹ್ಮ, ವಿಷ್ಣು, ನಟರಾಜ, ಕಾರ್ತಿಕೇಯರ ಅರೆಯುಬ್ಬು ಚಿತ್ರಗಳನ್ನು ಕಾಣಬಹುದು. ರೇಖಾನಾಗರ ಅಥವಾ ಕದಂಬನಾಗರ ಶೈಲಿಯ ಶಿಖರಗಳು ಮೊದಲನೆಯ ತಲದ ಮೂಲೆಗಳಲ್ಲಿ ಕುಳಿತಿರುವ ದಿಕ್ಪಾಲರ ಮೂರ್ತಿಗಳು ಗಮನಾರ್ಹ.

❐


ಉಚ್ಛ್ರಾಯ ಕಾಲ

ಕರ್ನಾಟಕದ ವಾಸ್ತುಶಿಲ್ಪದ ಇತಿಹಾಸದಲ್ಲಿ ೧೧ನೆಯ ಶತಮಾನದಿಂದ ೧೪ನೆಯ ಶತಮಾನದವರೆಗಿನ ಕಾಲವನ್ನು ಉಚ್ಛ್ರಾಯ ಕಾಲವೆಂದು ಗುರುತಿಸಬಹುದು. ಈ ಮಾತು ಕೇವಲ ವಾಸ್ತುಶಿಲ್ಪಕ್ಕಷ್ಟೇ ಸೀಮಿತವಾಗಿರದೆ, ಚಾಲುಕ್ಯರ ರಾಜಕೀಯ, ಆರ್ಥಿಕ, ಸಾಮಾಜಿಕ ಸ್ಥಿತಿಗಳಿಗೂ ಅನ್ವಯಿಸುತ್ತದೆ. ರಾಜಕೀಯವಾಗಿ ರಾಷ್ಟ್ರಕೂಟರ ಉತ್ತರಾಧಿಕಾರಿಗಳಾಗಿ ರಾಜ್ಯವಾಳತೊಡಗಿದವರು ಚಾಲುಕ್ಯರು. ಇವರು ಬಾದಾಮಿಯ ಚಾಲುಕ್ಯರ ರಕ್ತಸಂಬಂಧಿಗಳೇ. ಇವರಲ್ಲಿ ಇಮ್ಮಡಿ ತೈಲಪ ಮುಮ್ಮಡಿ ಕೃಷ್ಣನ ಅಧೀನ ಸಾಮಂತನಾಗಿದ್ದನು. ಕೃಷ್ಣನ ಬಳಿಕ, ಬಹುಶಃ ರಾಜ್ಯಕ್ಕಾಗಿ ನಡೆದ ಸಹೋದರರ ತಿಕ್ಕಾಟಗಳಲ್ಲಿ ತಲೆ ಹಾಕಿ ಯಶಸ್ವಿಯಾಗಿ ಅವರನ್ನೆಲ್ಲಾ ಹಿಮ್ಮೆಟ್ಟಿ ರಾಜ್ಯವನ್ನು ಕಸಿದು ಚಾಲುಕ್ಯರಾಜ್ಯ ಪುನಃಪ್ರತಿಷ್ಠಾಪಕನೆನಿಸಿಕೊಂಡಾತ. ಶೀಘ್ರದಲ್ಲಿಯೇ ತಮಿಳುನಾಡಿನ ಚೋಳರು ಮತ್ತೊಮ್ಮೆ ತಲೆ ಎತ್ತಿ, ಪಲ್ಲವರ ಉತ್ತರಾಧಿಕಾರಿಗಳಾದರು. ಚಾಲುಕ್ಯ–ಚೋಳರ ನಡುವಣ ಹೋರಾಟಗಳು ಈಗ ಆರಂಭವಾಗಿ ಸುಮಾರು ಎರಡು ಶತಮಾನಗಳು ಮುಂದುವರಿದುವು. ಚೋಳರು ಚಾಲುಕ್ಯ ರಾಜ್ಯದ ಮೇಲೆ ಆಕ್ರಮಣಕಾರಿಗಳಾಗಿ ಎರಗಿದರು. ಅವರನ್ನು ತಡೆದು ರಾಜ್ಯವನ್ನು ಸಹ ವಿಸ್ತರಿಸಿಕೊಂಡ ಕೀರ್ತಿ ಚಾಲುಕ್ಯ ಅರಸರದಾಗಿತ್ತು. ಆದರೆ ತಾವು ರಾಜಕೀಯ ಯಶಸ್ಸನ್ನು ಪಡೆಯಬೇಕಾದಲ್ಲಿ ಆಂತರಿಕ ಶಾಂತಿ–ಸಮೃದ್ಧಿಗಳು ಅವಶ್ಯಕವೆಂಬುದನ್ನು ಅರಿತಿದ್ದ ಅರಸರು ಪ್ರಜೆಗಳ ಹಿತಕ್ಕಾಗಿ ಹಲವಾರು ಉತ್ತೇಜಕರ ಕಾರ್ಯಕ್ರಮಗಳನ್ನು ರೂಪಿಸಿಕೊಂಡರು. ಪ್ರಜೆಗಳ ಬೆನ್ನೆಲುಬಾಗಿದ್ದ ಬೇಸಾಯವನ್ನು ಅಭಿವೃದ್ಧಿ ಪಡಿಸಲು ಕೆರೆಗಳನ್ನು ಜೀರ್ಣೋದ್ಧಾರಗೊಳಿಸಿದರು, ಕಾಲುವೆಗಳನ್ನು ತೋಡಿಸಿದರು, ಹೆಚ್ಚು ಹೆಚ್ಚು ಭೂಮಿಯನ್ನು ಬೇಸಾಯಕ್ಕೊಳಪಡಿಸಿದರು. ವ್ಯವಹಾರ–ವಾಣಿಜ್ಯಗಳಿಗೆ ಈ ಮೊದಲೇ ರೂಪಿಸಲ್ಪಟ್ಟಿದ್ದ ಅಯ್ಯಾವೊಳೆ ಎಂಬ ಸಂಸ್ಥೆಯನ್ನು ಬಲಪಡಿಸಿದರು. ಅದು ಹಲವಾರು ಶಾಖೆಗಳನ್ನು ರಾಜ್ಯದ ಮೂಲೆ ಮೂಲೆಗಳಲ್ಲೂ ಹಬ್ಬಿಸಿತು. ಇದರಿಂದ ಗ್ರಾಮಾಂತರ ಪ್ರದೇಶದ ವ್ಯವಹಾರ ಸಾಮಗ್ರಿಗಳು, ಒಳನಾಡು ಹಾಗೂ ಹೊರನಾಡಿನ ಮಾರುಕಟ್ಟೆಗಳನ್ನು ಸೇರುವಂತೆ ಮಾಡಿದರು. ಇದರಿಂದ ವಣಿಕಸಂಘಗಳಿಗೆ ಪ್ರೋತ್ಸಾಹ ದೊರೆತು ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳಮಟ್ಟಿಗೆ ಸುಧಾರಿಸಿತು. ಸಹಜವಾಗಿಯೇ ಪ್ರಜೆಗಳ ಗಮನ ಕಲೆಗಳತ್ತಲೂ ಹರಿಯಿತು.

ಈ ದಿಶೆಯಲ್ಲಿ ದೇವಾಲಯಗಳ ಪಾತ್ರ ವಿಶಿಷ್ಟವಾದುದು. ಅದು ಕೇವಲ ಧಾರ್ಮಿಕ ಸಂಸ್ಥೆಗಳಾಗಿರದೆ ಸಾಮಾಜಿಕ, ಆರ್ಥಿಕ ಸಂಸ್ಥೆಗಳಾಗಿಯೂ ಪರಿವರ್ತನೆಗೊಂಡವು. ಗ್ರಾಮದ, ಊರಿನ ಹಿರಿಯರು ದೇವಾಲಯದ ಅಂಗಳದಲ್ಲಿ ಸಭೆ ಸೇರಿ ದೇವಸ್ಥಾನಕ್ಕೆ ಸೇರಿದ ಆಸ್ತಿಯನ್ನು ಅಭಿವೃದ್ಧಿಪಡಿಸುವ ಸಲುವಾಗಿಯೇ ಹಲವಾರು ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಗ್ರಾಮಸ್ಥರ ಹಿತರಕ್ಷಣೆಗಾಗಿ ಕೆರೆಗಳನ್ನು ಕಟ್ಟಿಸಿ, ಕಾಲುವೆಗಳನ್ನು ತೋಡಿಸಿದರು. ಕಲಾಪ್ರೋತ್ಸಾಹಕ್ಕಾಗಿ ಗೀತ, ವಾದ್ಯ, ನರ್ತನಗಳನ್ನು ಏರ್ಪಡಿಸಿದರು. ಇವುಗಳ ಸಲುವಾಗಿ ದೇವಾಲಯಗಳನ್ನು ವಿಸ್ತಾರಗೊಳಿಸಿ ಹಲವಾರು ಮಂಟಪಾದಿಗಳನ್ನು ಸೇರಿಸಬೇಕಾಯಿತು. ವಾಸ್ತುಶೈಲಿಯಲ್ಲಿಯೂ ಬದಲಾವಣೆಗಳುಂಟಾದವು. ಇದು ಬಾದಾಮಿಯ ಚಾಲುಕ್ಯರ ಶೈಲಿಯಿಂದ ವಿಕಾಸಗೊಂಡ ಮುಂದಿನ ಹೆಜ್ಜೆ. ಆದರೆ ಆ ವೇಳೆಗೆ ಅನೇಕ ಪ್ರಮುಖ ಬದಲಾವಣೆಗಳೂ ಉಂಟಾದುವು. ಮುಖ್ಯವಾಗಿ ಬಳಸುವ ವಸ್ತುಗಳಲ್ಲಿಯೇ ಬದಲಾವಣೆಗಳುಂಟಾದವು. ಅದರಂತೆ ಶೈಲಿಯೂ ರೂಪಿಸಿಕೊಂಡಿತು. ಮರಳುಗಲ್ಲಿನ ಬದಲು ಕರಿಯಕಲ್ಲು ಬಳಕೆಗೆ ಬಂದಿತು. ಆದರೆ ಹೆಚ್ಚಿನ ಭಾರ ತಾಳುತ್ತಿರಲಿಲ್ಲ. ಆದುದರಿಂದ ಎತ್ತರ ಕಡಿಮೆಯಾಗಿ ವಿಸ್ತಾರ ಹೆಚ್ಚಾಯಿತು. ವಿಸ್ತೀರ್ಣ ಹೆಚ್ಚಿಸಲು ಕಂಬಗಳನ್ನು ಅಳವಡಿಸಲಾಯಿತು. ಕಲ್ಲು ಮೃದು. ಉಜ್ಜಿದಷ್ಟೂ ಹೊಳಪು ಹೆಚ್ಚುವಂತಹುದು. ಅದರಿಂದ ಕಲ್ಲು ಕೊರೆಯುವ ಕೆಲಸ ಹಗುರವಾಯಿತು. ಹೆಚ್ಚು ಅಲಂಕರಣೆಗೆ ಇದು ಎಡೆ ಮಾಡಿತು. ತಂತ್ರಜ್ಞಾನದಲ್ಲೂ ಮಾರ್ಪಾಡುಗಳುಂಟಾದವು. ಬಂಧನ ಸಾಮಗ್ರಿಗಳ ಬಳಕೆ ಇಲ್ಲದೆ ಚಪ್ಪಡಿಗಳನ್ನು ಒಂದರ ಮೇಲೊಂದರಂತೆ ಜೋಡಿಸಿಕೊಂಡು ಹೋಗುವ ತಂತ್ರಜ್ಞಾನವನ್ನು ಬಳಸಲಾಯಿತು.


ಸಮಕೋನಗಳ ಬಳಕೆ ಇನ್ನೊಂದು ಗಮನಾರ್ಹವಾದ ವೈಶಿಷ್ಟ್ಯ. ತಳವಿನ್ಯಾಸದಲ್ಲಿ ನಕ್ಷತ್ರಾಕಾರದ ಡಂಬಳದ ದೊಡ್ಡಬಸಪ್ಪ ಗುಡಿಯನ್ನು ಹೊರತುಪಡಿಸಿದರೆ ಉಳಿದುವೆಲ್ಲವೂ ಆಯತಾಸ್ರವು. ಒಂದು ಅಥವಾ ಹಲವಾರು ಆಯಗಳ ಜೋಡಣೆ ಇಲ್ಲಿನ

ಮೂಲಸೂತ್ರ. ನೇರವಾಗಿರುವ ಗೋಡೆಗಳನ್ನು ಭಗ್ನದಂತಗಳಂತೆ ಚಿಕ್ಕ ಹಿಂಚಾಚು ಮುಂಚಾಚುಗಳಿಂದ ಒಡೆಯುವುದು ಇನ್ನೊಂದು ಲಕ್ಷಣ. ಆದರೆ ಲಭ್ಯವಿನ್ಯಾಸದಲ್ಲಿ ಈ ಸರಿತಗಳು ಆಯಾಕಾರದಲ್ಲಿರುತ್ತವೆ. (ಛಾಯಾಚಿತ್ರ-೩೦ ರಿಂದ ೩೫)




ಚಿತ್ರ – ೩೦

ಧಾರವಾಡ ಜಿಲ್ಲೆಯ ಡಂಬಳದಲ್ಲಿ ೧೧ನೆಯ ಶತಮಾನ ಹಾಗೂ ಆನಂತರದ ದೇವಾಲಯಗಳು ಹಲವಾರು ಇವೆ. ಹಿಂದೊಮ್ಮೆ ಇದೊಂದು ಹಿರಿದಾದ ಬೌದ್ಧಕ್ಷೇತ್ರವಾಗಿದ್ದು ಬುದ್ಧ ಮತ್ತು ತಾರಾನಾಥರ ಎರಡು ವಿಹಾರಗಳಿದ್ದುವೆಂಬುದು ನಮಗೆ ಶಾಸನಗಳಿಂದ ತಿಳಿದಿರುವ ಅಂಶ. ಈಗ ಅಲ್ಲಿರುವುದು ಕ್ರಿ. ಶ. ೧೦೯೮ರಲ್ಲಿ ಸಂಗಮಶೆಟ್ಟಿ ಎಂಬಾತ ಕಟ್ಟಿಸಿದ ನಗರಜಿನಾಲಯ. ಇದರಲ್ಲಿ ಹೆಚ್ಚಿನ ವಿಶೇಷಗಳೇನೂ ಕಂಡು ಬಂದಿಲ್ಲ. ಕ್ರಿ. ಶ. ೧೧೨೪ ಯಾ ೧೧೨೬ರಲ್ಲಿ ಅಜ್ಜಯ್ಯನಾಯಕ ಅಜ್ಜಮೇಶ್ವರ ಎಂಬ ಹೆಸರಿನಲ್ಲಿ ಒಂದು ಭವನವನ್ನು ನಿರ್ಮಿಸಿದ. ಇದೇ ದೊಡ್ಡ ಬಸಪ್ಪನ ಗುಡಿ ಎಂದು ಹೆಚ್ಚು ಪ್ರಸಿದ್ಧವಾದ ಆಲಯವಾಗಿದ್ದಂತೆ ತೋರುತ್ತದೆ. ವಾಸ್ತುಶಿಲ್ಪ ದೃಷ್ಟ್ಯಾ ಹೆಚ್ಚು ಪರಿಪೂರ್ಣವಾದ, ಚಾಲುಕ್ಯರ ಶೈಲಿಯನ್ನೇ ಅಳವಡಿಸಿಕೊಂಡ ಆಲಯ ಇದು. ಇದರ ತಳವಿನ್ಯಾಸ ನಕ್ಷತ್ರಾಕಾರದ್ದು. ಚಿಕ್ಕ ಚಿಕ್ಕ ಹಿಂಜರಿತ–ಮುಂಜರಿತಗಳಿಂದ ಒಡೆದ ಭಿತ್ತಿ. ಅಡ್ಡ ವಿನ್ಯಾಸದಲ್ಲಿ ಇದು ಆಯತಾಸ್ರಾಕಾರವಾಗಿಯೇ ಇತ್ತು. ಗರ್ಭಗೃಹ, ಅರ್ಧಮಂಟಪ, ಸಭಾಮಂಟಪ ಮತ್ತು ಪೂರ್ವ ಮತ್ತು ದಕ್ಷಿಣಾಭಿಮುಖಗಳ ಎರಡು ಮುಖಮಂಟಪಗಳು ಈ ಆಲಯದ ಅಂಗಗಳು. ಇವೆಲ್ಲವುಗಳೂ ಕೂಡಿ ವೃತ್ತಾಕಾರದ ನಕ್ಷತ್ರಾಕೃತಿಯ ತಳವಿನ್ಯಾಸ. ಗೋಡೆಗಳ ಸರಿತಗಳಿಂದ ಅಧಿಷ್ಠಾನದ ಅಡ್ಡಪಟ್ಟಿಕೆಗಳು ಮಡಿಕೆಗಳಿಂದ ಜೋಡಿಸಿದಂತಿವೆ. ಏರು ತಗ್ಗುಗಳಲ್ಲಿ ಅಲಂಕೃತ ತೋರಣಗಳು. ಕಂಬಗಳಲ್ಲಿ ಉಬ್ಬು ಶಿಲ್ಪಗಳೂ ಇವೆ. ಇವುಗಳ ಮೇಲೆ ದೇವ ದೇವತೆಗಳ ಅಲ್ಪವಾಗಿ ಉಬ್ಬಿದ ಸಣ್ಣಸಣ್ಣ ಶಿಲ್ಪಗಳು. ಹಿನ್–ಮುನ್‌ಸರಿತಗಳ ಪರಿಣಾಮವಾಗಿ ಊರ್ಧ್ವವಾಗಿ ಶಿಖರದ ತನಕ ಉದ್ದನೆಯ ಪಟ್ಟಿಗಳನ್ನು ಕ್ರಮಬದ್ಧವಾಗಿ ಜೋಡಿಸಿದಂತಿವೆ. ತಳಭಾಗದಲ್ಲಿ ತಗ್ಗಾದ, ತಗ್ಗಿಸಲ್ಪಟ್ಟ ಗ್ರೀವ ದಾಕ್ಷಿಣಾತ್ಯ ಶಿಖರದಲ್ಲಿದ್ದಂತಿದೆ. ಆದರೆ ಈ ವಿಮಾನ ದಾಕ್ಷಿಣಾತ್ಯ ಶೈಲಿಯದೇ. ಜಗತಿಯ ಕಟಿಗಳಲ್ಲಿ ಪದ್ಮ, ಅಂತರಿಕರ್ಣಿಕ, ವ್ಯಾಳವರಿ ಮತ್ತು ಎತ್ತರದ ವೇದಿಗಳನ್ನು ಕಾಣುತ್ತೇವೆ.




ಚಿತ್ರ – ೩೧




ಚಿತ್ರ – ೩೨

ಆದರೆ ಈ ಶೈಲಿಯ ಆರಂಭದ ಘಟ್ಟಗಳನ್ನು ಕುಕ್ಕನೂರಿನ ನವಲಿಂಗೇಶ್ವರ ಹಾಗೂ ಕಲ್ಲೇಶ್ವರಾಲಯಗಳಲ್ಲಿ ಕಾಣಬಹುದು. ನವಲಿಂಗೇಶ್ವರ ಒಂಭತ್ತು ಚಿಕ್ಕ ಶೈವಾಲಯಗಳ ಒಂದು ಗುಂಪು. ಮೂರು ನವರಂಗಗಳಿದ್ದು ಅವಕ್ಕೆ ಹೊಂದಿಕೊಂಡಂತೆ ೯ ಗರ್ಭಗೃಹಗಳಿವೆ. ಪಟ್ಟದಕಲ್ಲಿನ ದೇವಾಲಯಗಳ ಹೊರಮೈಯ ಅಲಂಕೃತ ಶಿಖರವಿನ್ಯಾಸಗಳನ್ನು ಇಲ್ಲಿ ಕಾಣಬಹುದು. ಇದು ಸುಮಾರು ೯ನೆಯ ಶತಮಾನದ ಅಂತ್ಯದಲ್ಲಿ ಅಸ್ತಿತ್ವಕ್ಕೆ ಬಂದಿತೆನ್ನಲಾಗಿದೆ. ಆದರೆ ಈ ಗುಡಿಗಳ ಗುಂಪೆಲ್ಲಾ ಒಂದೇ ಬಾರಿ ಕಟ್ಟಿಸಿದವುಗಳಲ್ಲ. ಮೂಲ, ಪ್ರಾಚೀನ ಗುಡಿ ದ್ವಿತಲದ್ದು. ನಂತರ ಇನ್ನೂ ೮ ಆಲಯಗಳನ್ನು ಸೇರಿಸಲಾಗಿದೆ. ನವಲಿಂಗೇಶ್ವರ

ಎಂಬ ಹೆಸರು ನವಲಿಂಗಗಳನ್ನು ಸೂಚಿಸುತ್ತದೆಯೇ ಹೊರತು ಖಚಿತವಾಗಿ ಯಾವ ದೈವದ ಹೆಸರೂ ಇದಲ್ಲ. ಆಲಯದೊಳಗಡೆ ಸ್ವಲ್ಪಮಟ್ಟಿಗೆ ತಿರುಗಣೆಯಿಂದ ರೂಪಿಸಲ್ಪಟ್ಟ ಕಂಬಗಳು. ಇಲ್ಲಿನದೇ ಕಲ್ಲೇಶ್ವರಾಲಯದಲ್ಲಿ ಮುಂದಿನ ಹೆಜ್ಜೆಯನ್ನು ಕಾಣುತ್ತೇವೆ. ಗರ್ಭಗೃಹ, ಅಂತರಾಳ, ನಾಲ್ಕು ಕಂಬಗಳ ನವರಂಗ, ಮುಖ (ನಂದಿ) ಮಂಟಪಗಳುಳ್ಳ ಮರಳುಗಲ್ಲಿನಿಂದ ಕಟ್ಟಲ್ಪಟ್ಟ ದ್ರಾವಿಡ ಶೈಲಿಯ ಕಟ್ಟಡ ಇದು. ಶಿಖರಗಳಲ್ಲಿ ಸಮಗೆರೆಗಳ ಧಾಟಿಯೂ ಇದೆ. ತಲವಿನ್ಯಾಸ ಸರಳವಾದುದು. ಮುಂದಿನ ಶತಮಾನಗಳಲ್ಲಿ ಈ ವಿನ್ಯಾಸಕ್ಕೆ ಮತ್ತಷ್ಟು ಭಾಗಗಳನ್ನು ಜೋಡಿಸಿದೆ. ಹೊರಭಿತ್ತಿಯಲ್ಲಿ ಒಂಟಿ ಅರೆಗಂಬಗಳ ಮೇಲೆ ದ್ರಾವಿಡ ಅಥವಾ ನಾಗರ ಶಿಖರಗಳು ಯಾ ಕೋಷ್ಠಗಳನ್ನು ಕೆತ್ತಲಾಗಿದೆ. ಮುನ್‌ಸರಿತ–ಹಿನ್‌ಸರಿತದ ಗೋಡೆಗಳು ಆಕರ್ಷಕವಾಗಿವೆ. ಹೊರಗೋಡೆಗಳಲ್ಲಿ ಅಲ್ಲಲ್ಲಿ ಜಾಲಂಧರಗಳೂ ಇವೆ. ಲಕ್ಕುಂಡಿಯ ಬ್ರಹ್ಮಜಿನಾಲಯ ಮತ್ತಷ್ಟು ಮುಂದುವರೆದದ್ದು. ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಅರೆತೆರೆದ




ಚಿತ್ರ – ೩೩




ಚಿತ್ರ – ೩೪

ಮುಖಮಂಟಪಗಳಿರುವ ಈ ಆಲಯಕ್ಕೆ ಪ್ರವೇಶ ಮುಖಮಂಟಪದಿಂದಲೇ. ಇದರಲ್ಲಿ ೩೦ ಕಂಬಗಳಿದ್ದು ಇದು ವೈಶಾಲ್ಯಕ್ಕೆ ಕಾರಣವಾಗಿದೆ. ಗರ್ಭಗೃಹದ ಮೇಲೆ ಇಲ್ಲಿ ಇನ್ನೊಂದು ಗರ್ಭಗೃಹವಿರುವುದೊಂದು ವೈಶಿಷ್ಟ್ಯ. ಮೇಲಿನ ಗರ್ಭಗೃಹದ ಮೇಲೆ ಶಿಖರ. ಹೊರಭಿತ್ತಿ ಕಲ್ಲೇಶ್ವರಾಲಯದಲ್ಲಿದ್ದಂತೆಯೇ ಇದೆ. ಗುಡಿಯ ದ್ವಾರಗಳು ಕಲಾಪೂರ್ಣವಾದುವು. ಗೋಡೆಗಂಬಗಳ ಮೇಲೆ ಗೋಪುರ, ಎರಡು ಪಕ್ಕಗಳಲ್ಲಿ ಇನ್ನೆರಡು ಗೋಡೆಗಂಬಗಳು. ಇವುಗಳಿಂದ ಹೊಮ್ಮಿ ಗೋಪುರದ ಮೇಲೆ ಬಾಗಿವಂತೆ ತೇಲುವ ಸುರುಳಿ. ಬಳುಕುವ ಕಮಾನಿನಂತಹ ಅಲಂಕರಣಗಳನ್ನುಳ್ಳ ಈ ಆಲಯ ಕರಿಕಲ್ಲಿನ ಕಟ್ಟಡ. ಚೌಡದಾನಪುರದ ಮುಕ್ತೇಶ್ವರಾಲಯದಲ್ಲಿ ಕಪೋತದ ಕೆಳಭಿತ್ತಿಯ ರಕ್ಷಣೆಗೆಂಬಂತೆ ಮುಂಚಾಚಿದ ಒರೆ ಕಪೋತಗಳಿವೆ. ಆಳವಾದ ಕೋಷ್ಠಗಳ ಎರಡೂ ಕಡೆ ಆನೆಗಳಿವೆ. ಹಾವೇರಿಯ ಸಿದ್ಧೇಶ್ವರಾಲಯದ ಅಧಿಷ್ಠಾನದಲ್ಲಿ ಕುಸುರಿಯ ಕೆತ್ತನೆಯ ಸಾಲುಪಟ್ಟಿಗಳಿವೆ. ಶಿಖರ ಪ್ರಮಾಣಬದ್ಧವಾಗಿ ಮನೋಹರವಾಗಿದೆ. ಮುಖಮಂಟಪದ ಭುವನೇಶ್ವರಿಯಲ್ಲಿ ನೃತ್ಯಭಂಗಿಯಲ್ಲಿ ಅಷ್ಟಮಾತೃಕೆಯ ಶಿಲ್ಪಗಳನ್ನು ಕೆತ್ತಲಾಗಿದೆ. ಒಂಭತ್ತು ಚೌಕಗಳಿದ್ದು ಮಧ್ಯದ ಚೌಕದಲ್ಲಿ ಶಿವನನ್ನು ಕಂಡರಿಸಲಾಗಿದೆ. ಇದಲ್ಲದೆ ದೇವಾಲಯದ ಹೊರಗೋಡೆಗಳಲ್ಲಿ ಸುಂದರವಾದ ಭಾವನಾಮಯವಾದ ಉಮಾಮಹೇಶ್ವರಿ, ಕೈಯಲ್ಲಿ ಲಿಂಗವನ್ನು ಹಿಡಿದ ವಿಷ್ಣು, ಮಹಿಷಮರ್ದಿನಿ, ಮಹಾಲಕ್ಷ್ಮಿ, ನಾಗ–ನಾಗಿಣೆಯರು, ಸೂರ್ಯರ ವಿಗ್ರಹಗಳು ಕಣ್ಸೆಳೆಯುತ್ತವೆ. (ಛಾಯಾ ಚಿತ್ರ–೩೬,೩೭).




ಚಿತ್ರ – ೩೫



ಚಿತ್ರ – ೩೬

ಚಾಲುಕ್ಯರ ಬೆಳೆದ ಶೈಲಿ ಕುರುವತ್ತಿಯ ಮಲ್ಲೇಶ್ವರ (ಮಲ್ಲಿಕಾರ್ಜುನ)ದಲ್ಲಿ ಗೋಚರವಾಗಿದೆ. ಗರ್ಭಗೃಹ, ಸುಕನಾಸಿ, ನವರಂಗಗಳಿದ್ದು, ನವರಂಗಕ್ಕೆ ಮೂರು ಕಡೆಗಳಲ್ಲಿ ಪ್ರವೇಶದ್ವಾರವಿವೆ. ಇವು ಅಲಂಕೃತ ದ್ವಾರಗಳು. ಪೂರ್ವದ್ವಾರದಲ್ಲಿ




ಚಿತ್ರ – ೩೭


ಏಳು ಶಾಖೆಗಳಿದ್ದು, ಅದರಲ್ಲಿ ಹೂ ಮತ್ತು ವಜ್ರಾಕಾರದ ಕೆತ್ತನೆಗಳು, ನಾಗದೇವತೆಗಳ, ಸಂಗೀತಗಾರರ, ನೃತ್ಯಗಾರರ ಚಿತ್ರಗಳು, ಪಶುಪಕ್ಷಿಯ ಲತಾಸುರುಳಿಗಳು, ಹೂಬಳ್ಳಿಗಳು ಮುಂತಾದವುಗಳ ಅಂದವಾದ ಕೆತ್ತನೆಯ ಕೆಲಸವನ್ನು ಕಾಣಬಹುದು. ಅಕ್ಕಪಕ್ಕದ ದ್ವಾರಗಳ ಮಧ್ಯೆ ಮುಖಭದ್ರ. ಗರ್ಭಗೃಹದ ಹೊರಗೋಡೆಗಳ ನಡುವೆ ಮೂರುಕಡೆ ಮುಂಚಾಚಿರುವ ಮಂಟಪಗಳು. ಎರಡು ಕಿರುಕಂಬಗಳ ಮೇಲೆ ಆಳವಾಗಿ ಇಳಿಜಾರಾಗಿ ಮುಂದಕ್ಕೆ ಬಾಗಿರುವ ಲೋವೆಯ ಮೇಲೆ ದೇವಾಲಯದ ಗೋಪುರವನ್ನು ಅನುಕರಿಸುವ ಸೂಂದರ ಅರೆಗೋಪುರ. ಮಂಟಪದೊಳಗೆ ದೇವರಮೂರ್ತಿ. ಎರಡೂ ಕಡೆ ಮದನಿಕೆಯರನ್ನು ಹೊತ್ತಿರುವ ಕುಬ್ಜರು. ಈ ಭಿತ್ತಿ ಮಂಟಪಗಳು ಚಾಲುಕ್ಯಶೈಲಿಯಲ್ಲಿಯೇ ವಿಶಿಷ್ಟವಾದವುಗಳು. ಹೆಚ್ಚು ಕಚ್ಚು ಕಚ್ಚಾಗಿ ಮುಂಚಾಚಿರುವ ಹೊರಗೋಡೆಗಳ ಮೇಲಿನ ನೀಳವಾದ ಅರೆಗಂಬಗಳು ಜೋಡಿ ಜೋಡಿಯಾಗಿ, ಒಂಟಿಯಾಗಿ ಸಹ, ಇದ್ದು ಅವುಗಳ ಮೇಲೆ ಬಗೆ ಬಗೆಯ ವಿನ್ಯಾಸಗಳ ಕಿರುಗೋಪುರಗಳಿವೆ. ಈ ಗೋಪುರಗಳನ್ನು ಮಕರ ತೋರಣಗಳು ಆವರಿಸಿವೆ. ಇಕ್ಕೆಲಗಳಲ್ಲಿ ನೀಳ ಅರೆಗಂಬಗಳ ಮೇಲಿರುವ ಮಕರಗಳ ಬಾಯಿಂದ ಸುರುಳಿಯಾಗಿ ಹೊರಟು ಕಮಾನಾಗಿ ಬಳಸಿ ಬಂದಿರುವ ರೀತಿ ವಿನೂತನವಾದದ್ದು. ನವರಂಗದ ದ್ವಾರಶಾಖೆಗಳು ಕುಸುರಿ ಕೆಲಸಕ್ಕೆ ಉತ್ತಮ ನಿದರ್ಶನ. ದ್ವಾರಬಂಧಗಳ ಮೇಲೆ ಬಳ್ಳಿಗಳ ಸುರುಳಿಗಳು, ನಾಗಬಂಧಗಳು, ಪಕ್ಷಿಗಳು, ಮೂರ್ತಿಶಿಲ್ಪಗಳು ಹಾಗೂ ವಜ್ರಾಕೃತಿಗಳು. ನಡುನಡುವೆ ವಾದ್ಯಗಾರರ, ನರ್ತಕರ ಚಿತ್ರಗಳು. ಹೊರಪಕ್ಕಗಳ ಅರೆಗಂಬಗಳು, ದಪ್ಪ, ಅಗಲ, ಅವುಗಳ ಮೇಲೆ ಮುಂದಕ್ಕೂ ಬಾಗಿಲಿನ ಕಡೆಗೂ ಲತಾವಿತಾನಗಳ ಕೆಳಗೆ ಬಾಗಿನಿಂತಿರುವ ಮದನಿಕೆಯರು. ಇವುಗಳಲ್ಲಿ ಹಲವಾರು ಈಗ ಭಿನ್ನವಾಗಿವೆ. ಮದನಿಕೆಯರ ಹಿಂಭಾಗದಲ್ಲಿ, ನಯವಾಗಿ, ಆಕರ್ಷಕವಾಗಿ, ಕೆತ್ತಿದ ಲತಾಸುರುಳಿಗಳಿವೆ. ಆಭರಣಗಳ ಧರಿಸುವಿಕೆಯಲ್ಲಿ ಹಿತ, ಮಿತ ಎದ್ದು ಕಾಣುತ್ತದೆ. ಈಗ ಉಳಿದಿರುವ ಮೂರು ಮದನಿಕೆಯರಲ್ಲಿ ಇಬ್ಬರು ತ್ರಿಭಂಗಿಯಲ್ಲಿದ್ದಾರೆ. ಮೂರನೆಯಾಕೆ ನರ್ತಿಸುತ್ತಾ ಮದ್ದಳೆ ಬಾರಿಸುತ್ತಿರುವಳು. ಮೂರೂ ಮದನಿಕೆಯರ ಪಕ್ಕದಲ್ಲಿ ಸಂಗೀತಗಾರರಿದ್ದಾರೆ. ನವರಂಗದಿಂದ ಸುಕನಾಸಿಗೆ ಹೋಗುವ ದ್ವಾರದ ಎರಡು ಬದಿಗಳಲ್ಲಿ ದುಂಡಾದ ಕಂಬಗಳ ಮೇಲೆ ಅಲಂಕೃತ ಮಕರತೋರಣ. ಅಡ್ಡ ಹಲಗೆಯ ನಡುವಣ ಮೂರು ಗೂಡುಗಳಲ್ಲಿ ವಿಷ್ಣು, ಶಿವ, ಬ್ರಹ್ಮರ ಮೂರ್ತಿಗಳಿದ್ದು ಇವುಗಳನ್ನು ಬಳಸಿದಂತೆ ಅರೆಗೋಲಿನ ಕಮಾನು. ಮಕರಗಳ ಬಾಯಿಂದ ಹೊರಟು ಸಿಂಹಲಲಾಟವನ್ನು ಸೇರುವ ಸುರುಳಿಗಳು ಹಲಗೆಯನ್ನು ಹಬ್ಬಿವೆ. (ಛಾಯಾಚಿತ್ರ – ೩೮ ರಿಂದ ೪೧)

ದೇವಾಲಯಚಕ್ರವರ್ತಿ ಎಂದು ಆ ಕಾಲದ ಶಾಸನದಲ್ಲೇ ವರ್ಣಿತವಾದ ಇಟ್ಟಗಿಯ ಮಹಾದೇವಾಲಯ ಚಾಲುಕ್ಯಶೈಲಿಯ ಪರಾಕಾಷ್ಠತೆಯ ಮಾದರಿ. ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ದಂಡನಾಯಕ ಮಹಾದೇವ ಕಟ್ಟಿಸಿದ ಈ ಆಲಯ ಕ್ರಿ. ಶ. ೧೧೧೨ರಲ್ಲಿ ಅಸ್ತಿತ್ವಕ್ಕೆ ಬಂದಿತು. ಪೂರ್ವಾಭಿಮುಖವಾಗಿ ೧೨೬ ಅಡಿ ಉದ್ದ ಮತ್ತು ೬೬ ಅಡಿ ಅಗಲದ ಈ ಆಯಾಕಾರದ ಆಲಯದಲ್ಲಿ ಗರ್ಭಗೃಹ, ಅಂತರಾಳ, ಮುಚ್ಚಿದ ನವರಂಗ, ತೆರೆದ ಮಹಾಮಂಟಪಗಳಿವೆ. ನವರಂಗಕ್ಕೆ ನಾಲ್ಕು ಕಡೆಯೂ ದ್ವಾರಗಳಿವೆ. ಒಂದು ಅಂತರಾಳದ ಕಡೆಯದು. ಎರಡನೆಯದು ಮಹಾಮಂಟಪಕ್ಕೆ ಹೋಗುವ ದ್ವಾರ. ಉತ್ತರ–ದಕ್ಷಿಣದ ದ್ವಾರಗಳು ಹೊರಾಂಗಣಕ್ಕೆ ತೆರೆದಿವೆ. ಈ ದ್ವಾರಗಳೆಲ್ಲವೂ ಅಲಂಕೃತ. ಪಕ್ಕದ ದ್ವಾರದ ಮುಖಮಂಟಪಗಳಲ್ಲಿನ ಭುವನೇಶ್ವರಿಗಳು ಅಷ್ಟಕೋನದಲ್ಲಿವೆ. ಇವುಗಳ ಗೊಮ್ಮಟದ ಮಧ್ಯೆ ತಲೆಕೆಳಗಾದ ದೊಡ್ಡ ಕಮಲ. ಕಮಲದ ಮಧ್ಯದಿಂದ ನಕ್ಷತ್ರಾಕಾರದ ಲೋಲಕ. ಇದು ಗೊಮ್ಮಟದ ಮಧ್ಯ ಬಿಂದು. ಎಂಟು ಕಂಬಗಳ ಮೇಲೆ ನಿಂತ ಭುವನೇಶ್ವರಿಯ ಅಂಚಿನಲ್ಲಿ ಪ್ರತಿಯೊಂದು ಕಂಬದ ಮೇಲೂ ದಿಕ್ಪಾಲಕರ ಒಂದೊಂದು ಮೂರ್ತಿಯನ್ನು ಕಂಡರಿಸಲಾಗಿದೆ. ಒಂದು ಭುವನೇಶ್ವರಿಯಲ್ಲಿ, ಸುರುಳಿ ಕೀರ್ತಿ ಮುಖ ಮತ್ತು ಮಧ್ಯಭಾಗದಲ್ಲಿ ನಟರಾಜನ ಶಿಲ್ಪಗಳಿವೆ. ನಟರಾಜನ ಬಲಕ್ಕೆ ಬ್ರಹ್ಮ ಮತ್ತು ಎಡಕ್ಕೆ ವಿಷ್ಣುವಿನ ಮೂರ್ತಿಗಳನ್ನು ಕಂಡರಿಸಿದ್ದಾರೆ. ತೆರೆದ ಮಂಟಪದ ಸುತ್ತಲೂ ಕಕ್ಷಾಸನಗಳು. ಮಧ್ಯಾಂಗಣದಲ್ಲಿ ೨೬ ಸ್ತಂಭಗಳು ಮಂಟಪದ ಛಾವಣಿಯನ್ನು ಹೊತ್ತು ನಿಂತಿವೆ. ಹಲವಾರು ವಿನ್ಯಾಸಗಳಲ್ಲಿರುವ ಮಧ್ಯದ ನಾಲ್ಕು ಕಂಬಗಳಲ್ಲಿ ಶಿಲ್ಪಗಳಿವೆ. ಹೊರಭಿತ್ತಿಯಲ್ಲಿ ಅರೆಗಂಬಗಳು, ಕೋಷ್ಠಗಳು. ಒಂಟಿ ಅರೆಗಂಬಗಳ ಮೇಲೆ ಲತೆಗಳಿಂದ ಆವೃತವಾದ ಕಲಶ ಅಥವಾ ನಾಗರಶೈಲಿಯ ಶಿಖರ. ಸ್ವಲ್ಪ ಮುನ್ಸರಿದ ಕಟ್ಟಡದ ಸುತ್ತಲೂ ಮೂರು ಹರಿಯುವ ಅಡ್ಡಪಟ್ಟಿಕೆಗಳ ಕಪೋತ ಹಾರದಲ್ಲಿ ಕೂಟ ಮತ್ತು ಪಂಜರಗಳನ್ನು ಅರೆಉಬ್ಬು ಶಿಲ್ಪದಲ್ಲಿ ಕೆತ್ತಲಾಗಿದೆ. ಈಗ ಭಗ್ನವಾಗಿರುವ ಶಿಖರದ ಮೇಲ್ಭಾಗ ದ್ರಾವಿಡ ನಾಗರ ಶಿಖರಗಳನ್ನು ಒಗ್ಗೂಡಿಸುವ ವೇಸರ ಶೈಲಿಯಲ್ಲಿದ್ದಿತು.

ಈ ಮೇಲಿನ ಕಲ್ಯಾಣ ಚಾಲುಕ್ಯರ ಕಾಲದ ಕಟ್ಟಡಗಳ ಆರಂಭ, ಬೆಳವಣಿಗೆಗಳನ್ನು ಗಮನಿಸಿದಾಗ ಈ ನಂತರದ ಚಾಲುಕ್ಯರ ಶೈಲಿಯ ಕೆಲವು ವಿಶಿಷ್ಟ ಲಕ್ಷಣಗಳನ್ನು ಗುರುತಿಸಬಹುದಾಗಿದೆ. ಬಾದಾಮಿಯ ಚಾಲುಕ್ಯ ಶೈಲಿಯ ಸಂಪ್ರದಾಯದ ಮುಂದುವರಿಕೆ ಇದು. ಕೆಲಸಮಯ ಇದಕ್ಕೆ ಮುಸುಕು ತಾಗಿದ್ದು ರಾಷ್ಟ್ರಕೂಟರ ನಂತರ ಪುನಃ ಚಾಲುಕ್ಯರು ಆಳತೊಡಗಿದಾಗ ಈ ಶೈಲಿಗೆ ಮತ್ತೊಮ್ಮೆ ಇಂಬು ದೊರಕಿದಂತಾಗಿ ಹೊಸ ಆಯಾಮಗಳನ್ನು ಬೆಳಸಿಕೊಂಡುವು. ಕುಕ್ಕನೂರಿನ ನವಲಿಂಗ, ಕಲ್ಲೇಶ್ವರ ದೇವಾಲಯಗಳಲ್ಲಿ ಹಳೆಯ ಶೈಲಿಯ ಮುಂದುವರಿದ ಮಾರ್ಗವನ್ನು ಕಾಣಬಹುದು. ಗರ್ಭಗೃಹವು ಸುಕನಾಸಿಗೆ ಸೇರಿಸಲ್ಪಟ್ಟು ನಂತರ ನವರಂಗ ಬರುತ್ತಿತ್ತು. ಅದರ ಮುಂದೆ ತೆರೆದ ಅಥವಾ ಭಾಗಶಃ ಮುಚ್ಚಿದ ಸ್ತಂಭಗಳ ಮಂಟಪ–ಮುಖಮಂಟಪ. ಇದರ ಮುಂದೆ ಮುಖ್ಯದ್ವಾರ. ಈ ಭಾಗಗಳೆಲ್ಲವೂ ಸಾಮಾನ್ಯವಾಗಿ ಆಯಾಕಾರದಲ್ಲಿದ್ದರೂ ಒಂದೊಂದೂ ಬೇರೆ ಬೇರೆ ಗಾತ್ರದಲ್ಲಿರುವುದರಿಂದ ಹಲವಾರು ಸಮಕೋನಗಳು ಕಾಣಿಸಿಕೊಂಡಿವೆ. ಇದರಿಂದ ದೀಪ–ನೆರಳುಗಳ ಉತ್ತಮ ಸಂಯೋಜನೆಯನ್ನು ನೋಡುತ್ತೇವೆ. ಎದುರು ಬದುರಾಗಿರುವ ದ್ವಿಕೂಟಗಳಲ್ಲಿ ಮುಖ್ಯ ದ್ವಾರವನ್ನು ಒಂದು ಪಕ್ಕದಲ್ಲಿ ಅಳವಡಿಸಲಾಗಿರುತ್ತದೆ. ಹೊರಭಿತ್ತಿಗಳು ಅರೆಗಂಬ, ಪೂರ್ಣಕುಂಭ, ಸುರುಳಿಗಳು ಇತ್ಯಾದಿಗಳಿಂದ ಅಲಂಕೃತವಾಗಿರುತ್ತವೆ. ಒಂದಕ್ಕಿಂತಲೂ ಹೆಚ್ಚು ಗರ್ಭಗೃಹಗಳುಳ್ಳ ದ್ವಿಕೂಟ, ತ್ರಿಕೂಟ, ಅಪರೂಪವಾಗಿ ಚತುಷ್ಕೂಟ ದೇವಾಲಯಗಳೂ ಈಗ ಅಸ್ತಿತ್ವಕ್ಕೆ ಬಂದುವು. ಸಾಮಾನ್ಯವಾಗಿ ಎಲ್ಲವೂ ನಿರಂಧಾರಗಳು. ಉಣಕಲ್ಲಿನ ಚಂದ್ರಮೌಳೇಶ್ವರ ದೇವಾಲಯ ಸಾಂಧಾರ ಶೈಲಿಯದು. ಅಧಿಷ್ಠಾನ ಭಿನ್ನ ಭಿನ್ನ ಎತ್ತರದವುಗಳು. ಇವುಗಳಲ್ಲಿ ಎದ್ದುಕಾಣುವ ಭಾಗಗಳು ಉಪಾನ, ಜಗತಿ, ಕಂಪ, ಕಂಠ ಮತ್ತು ಪಟ್ಟಿಕೆಗಳು. ಇಲ್ಲಿ ಮಕರ, ಕೀರ್ತಿಮುಖ, ದೇವತೆಗಳು, ಯಕ್ಷರು, ನರ್ತಕರು, ಸಿಂಹ ಮತ್ತು ಆನೆಗಳು ಇತ್ಯಾದಿಗಳನ್ನು ಕೆತ್ತಲಾಗಿರುತ್ತದೆ. ಭಿತ್ತಿಗಳು ಹಿಂಜರಿತ ಹಾಗೂ ಮುನ್‌ಜರಿತಗಳಿಂದ ಅಲಂಕರಿಸಲ್ಪಟ್ಟಿರುತ್ತವೆ. ಅಲ್ಲಲ್ಲಿ ಅಲಂಕೃತ ಕೋಷ್ಠಗಳು. ಒಂದು ಅಥವಾ ಜೋಡಿ ಅರೆಗಂಬಗಳ ಮೇಲೆ ಶಿಖರಾಕೃತಿಗಳು. ಕಪೋತಗಳ ಕೆಳಗೆ ಪಟ್ಟಿಕೆಗಳು. ಒಳಭಾಗದ ದ್ವಾರಬಂಧ ಮತ್ತು ಜಾಲಂಧರಗಳು ಬಹಳ ಕೆತ್ತನೆಯ ಕೆಲಸಕ್ಕೆ ಒಳಪಟ್ಟಿರುವುವು. ಕಂಬಗಳು ತಿರುಗಣೆಯಿಂದ ಹೊಳಪು ಪಡೆದವುಗಳು. ದ್ರಾವಿಡ ಶೈಲಿಯ ಸಮಾನಾಂತರ ಅಡ್ಡಗೆರೆಗಳು ಹಾಗೂ ನಾಗರ ಶೈಲಿಯ ಸಮಾನಾಂತರ ಉದ್ದಗೆರೆಗಳನ್ನು ಸಂಯೋಜಿಸಿದ ವೇಸರ ಶೈಲಿಯ ಶಿಖರ. ಕೂಟ–ಪಂಜರಗಳನ್ನು ಅರೆಉಬ್ಬು ಶಿಲ್ಪದಲ್ಲಿ ಬಿಡಿಸಲಾಗಿದೆ.




ಚಿತ್ರ – ೩೮




ಚಿತ್ರ – ೩೯

ಸ್ಥಪತಿಯು ರೂಪಿಸಿದ ಈ ಲಕ್ಷಣಗಳಿಗೆ ಪೋಷಕವಾದುದು ಬಳಸಲಾದ ಮಾಧ್ಯಮ. ಕಪ್ಪುಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲು. ಇದನ್ನು ಕ್ಲೋರೈಟಿಕ್ ಷಿಸ್ಟ್ ಎಂದು ಭೂವಿಜ್ಞಾನಿಗಳು ಕರೆಯುತ್ತಾರೆ. ಅಲಂಕರಣಗಳಿಗೆ ಈ ಕಲ್ಲು ಬಹಳ ಉಪಯುಕ್ತ. ಇಲ್ಲಿ ಒಂದು ಮಾತನ್ನು ಗಮನಿಸಬೇಕು. ಈ ಕಲ್ಲಿನ ಹೊರತು ಬೇರೆ, ಮರಳು ಶಿಲೆಗಳಂತಹ ಕಲ್ಲುಗಳನ್ನು ಈ ಕಾಲದ ಸ್ಥಪತಿಗಳು ಬಳಸಲೇ ಇಲ್ಲ ಎನ್ನುವುದು ತಪ್ಪಾಗುತ್ತದೆ. ಪರಿಸರದ ಸೌಲಭ್ಯ, ಸಾಗಾಣಿಕೆಯ ಅನುಕೂಲ ಮುಂತಾದವುಗಳನ್ನು ಸಹ ಆ ಸ್ಥಪತಿಗಳು ಗಮನಿಸಬೇಕಾಗುತ್ತಿತ್ತು. ದೇವಾಲಯಗಳನ್ನು ಕಟ್ಟಿಸುವ ದಾನಿಗಳ ಆರ್ಥಿಕ ಶಕ್ತಿಯೂ ಒಂದು ಅಂಶ. ಎರಡನೆಯದಾಗಿ,



ಚಿತ್ರ – ೪೦



ಚಿತ್ರ – ೪೧

ಈ ದೇವಾಲಯಗಳೆಲ್ಲವೂ ಒಂದೇ ಮಾದರಿಯದಾಗಿರಲಿಲ್ಲ. ವಿನ್ಯಾಸದಲ್ಲಿ, ಜೋಡಣೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುವ ಸ್ವಾತಂತ್ರ್ಯ ಸ್ಥಪತಿಗಳಿಗಿತ್ತು. ವಾಸ್ತುಶಿಲ್ಪಶಾಸ್ತ್ರಗಳು ಈ ವೇಳೆಗೆ ಪ್ರಚಾರದಲ್ಲಿದ್ದರೂ ಕಟ್ಟುನಿಟ್ಟಾಗಿ ಅವುಗಳಲ್ಲಿನ ಆದೇಶಗಳನ್ನು ಅನುಸರಿಸಬೇಕೆಂಬ ಯಾವುದೇ ನಿಯಮಗಳಿಗೆ ಆತ ಬದ್ಧನಾಗಿರಲಿಲ್ಲ. ಆದರೆ ಮೂರ್ತಿಶಿಲ್ಪಗಳನ್ನು ಕಡೆಯುವುದರಲ್ಲಿ ಮಾತ್ರ ಇವರು ಆಗಮಶಾಸ್ತ್ರ, ಶಿಲ್ಪಶಾಸ್ತ್ರಗಳಲ್ಲಿ ವಿಧಿಸಲಾದ ರೂಪುರೇಷೆಗಳನ್ನು ವಿಶೇಷವಾಗಿ ಅನುಸರಿಸಿದರು. ಇದರಿಂದ ಕಲಾಪ್ರೌಢಿಮೆಯನ್ನು ಸಾಬೀತುಗೊಳಿಸಲು ಶಿಲ್ಪಿಗಳಿಗೆ ಬಹಳ ಸ್ವಾತಂತ್ರ್ಯವಿದ್ದಂತೆ ತೋರುವುದಿಲ್ಲ. ಎಂತಲೇ ಮೂಲಶಿಲ್ಪಗಳನ್ನು ಬಿಟ್ಟು ಪ್ರಮುಖವಾದ ಅಂಗಗಳೆಂದು ಭಾವಿಸಿದ ದ್ವಾರಬಂಧಗಳಲ್ಲಿ, ಲತಾಪಟ್ಟಿಗಳಲ್ಲಿ ಶಿಲ್ಪಿ ತನ್ನ ಕಲ್ಪನಾಶಕ್ತಿಯನ್ನು ಪ್ರದರ್ಶಿಸಿದ್ದಾನೆ. ಗುಲ್ಬರ್ಗಾ ಜಿಲ್ಲೆಯ ಹಿರೇಮಣ್ಣೂರಿನ ಕೇಶವನ ಮೂರ್ತಿ ಭಾವರಹಿತ. ಯುವಕನೊಬ್ಬನಿಗಿರಬೇಕಾದ ಪ್ರಮಾಣಬದ್ಧ ಅಂಗಸೌಷ್ಠವ ಮಾತ್ರ ಉಳಿದಿದೆ. ಕುರುವತ್ತಿಯ ಮಲ್ಲಿಕಾರ್ಜುನ ದೇವಾಲಯದ ಮದನಿಕೆಯರ ವಿಗ್ರಹಗಳು, ಮುಖ್ಯ ಅಂಗವಾಗಿಲ್ಲದ ಕಾರಣ, ಶಾಸ್ತ್ರಗಳ ಚೌಕಟ್ಟಿನೊಳಗೆ ಸೇರಿಲ್ಲ. ಮೈಹೊಳಪು, ಆಭರಣಗಳಲ್ಲಿ ಕುಸುರಿ ಕೆಲಸ, ದೇಹಲಾಲಿತ್ಯ, ಬಳುಕು ವಿನ್ಯಾಸಗಳು ಇಲ್ಲಿ ಶಿಲ್ಪಿಯ ಕಲ್ಪನಾಚಾತುರ್ಯಕ್ಕೆ ಸಾಕ್ಷಿಗಳಾಗಿ ಮೈವೆತ್ತು ನಿಂತಿವೆ. ಈ ಕಾಲದ ಮಹತ್ತರವಾದ ಇಂತಹ ಒಂದು ಶಿಲ್ಪವನ್ನು ಜಲಸಂಗ್ವಿಯಲ್ಲಿ ಕಾಣುತ್ತೇವೆ. ಇಲ್ಲಿ ಅರಸನಾದ ವಿಕ್ರಮಾದಿತ್ಯನ ಪ್ರಿಯೆಯೊಬ್ಬಳು ಪ್ರಿಯಕರನಿಗೆ ಪತ್ರವೊಂದನ್ನು ಬರೆಯುತ್ತಿರುವಂತೆ ರೂಪಿಸಲಾದ ಶಿಲ್ಪವಿದು. ಈಕೆ ಸಂತುಷ್ಟ ಗೃಹಿಣಿ. ಚಂಚಲರಹಿತ ತೃಪ್ತಿಯ ಆನಂದ ಮುಖಭಾವದಲ್ಲಿ ಗೋಚರಿಸಿದೆ. ಪತ್ರಲೇಖನದಲ್ಲಿ ತಲ್ಲೀನಳಾದ ಇವಳಲ್ಲಿ ಕಾರ್ಯಮಗ್ನತೆಯನ್ನು ಕಾಣಬಹುದಾಗಿದೆ. ಬಿಡಿಶಿಲ್ಪಗಳಲ್ಲದೆ ಜಾಲಂಧರಗಳಲ್ಲಿ ದ್ವಾರಶಾಖೆಗಳಲ್ಲಿ ಸಣ್ಣ ಮೂರ್ತಿಗಳೂ ಲತಾವಿನ್ಯಾಸಗಳ ಅಲಂಕರಣಗಳೂ, ವಿವಿಧ ಭಂಗಿಗಳ ನರ್ತಕರು, ವಾದ್ಯಗಾರರು ಶಿಲ್ಪಿಯ ಕುಸುರಿಕೆಲಸದ ಕುಶಲತೆಯನ್ನು ನಿರೂಪಿಸಲು ಮಾಧ್ಯಮಗಳಾಗಿವೆ.


ಕಲ್ಯಾಣ ಚಾಲುಕ್ಯರ ಸಾಮಂತರೂ ಸಮಕಾಲೀನರೂ ಆದ ದಕ್ಷಿಣ ಕರ್ನಾಟಕದ ಕಾವೇರಿ ತುಂಗಭದ್ರೆಗಳ ಪ್ರಾಂತದಲ್ಲಿ ಅಧಿಕಾರದಲ್ಲಿದ್ದ ಹೊಯ್ಸಳರು ದೇವಾಲಯಗಳ ನಿರ್ಮಾಣದಲ್ಲಿ ಹೊಸ ಆಯಾಮವನ್ನೇ ರೂಪಿಸಿದರು. ಕರ್ನಾಟಕದ ವಾಸ್ತುಶಿಲ್ಪ ಸೌಂದರ್ಯದ ಪರಾಕಾಷ್ಠೆಯ ಕಾಲ ಇದು. ಫರ್ಗ್ಯುಸನ್, ಪರ್ಸಿಬ್ರೌನ್ ಮುಂತಾದ ಕಲಾ ಇತಿಹಾಸಕಾರರು ಚಾಲುಕ್ಯ ಶೈಲಿಯದೇ ಅವಿಭಾಜ್ಯವಾದುದು ಹೊಯ್ಸಳರ ಶೈಲಿ ಎಂದು ಭಾವಿಸಿದ್ದ ಕಾಲವೊಂದಿತ್ತು. ಆದರೆ ಈಗ ಹೊಯ್ಸಳ ಶೈಲಿ ಎಂಬ ಪ್ರತ್ಯೇಕವಾದ ಶೈಲಿಯನ್ನು ಗುರುತಿಸಲಾಗಿದೆ. ತಮಿಳುನಾಡಿನ ಚೋಳ–ಪಾಂಡ್ಯರ, ಮೈಸೂರಿನ ಸುತ್ತಲಿನ ಗಂಗರ–ನೊಳಂಬರ, ಉತ್ತರ ಕರ್ನಾಟಕದ ಚಾಲುಕ್ಯರ ದೇವಾಲಯಗಳ ಶೈಲಿಗಳು ಹೊಯ್ಸಳರ ಕಾಲದ ಸ್ಥಪತಿಗಳಿಗೆ ಸ್ಫೂರ್ತಿಯನ್ನಿತ್ತವು. ಇದು ಅನ್ಯಶೈಲಿಗಳ ಕೇವಲ ಅನುಕರಣವಲ್ಲದೆ, ಆ ಶೈಲಿಗಳ ವೈಶಿಷ್ಟ್ಯಗಳನ್ನು ಒಂದೆಡೆ ಸಂಯೋಜಿಸಿದ ಪ್ರಯೋಗಪರ ಶೈಲಿ. ಚಾಲುಕ್ಯರ ಸಾಮಂತರಾಗಿ, ನಂತರ ಅವರ ರಾಜ್ಯಕ್ಕೂ ಕಲೆಗೂ ಉತ್ತರಾಧಿಕಾರಿಗಳಾದ ಹೊಯ್ಸಳರು ಚಾಲುಕ್ಯ ಶೈಲಿಯಿಂದ ಬಹಳಮಟ್ಟಿಗೆ ಪ್ರಭಾವಿತರಾಗಿದ್ದಾರೆ. ಚಾಲುಕ್ಯರು ಬಳಸಿದ ಬಳಪದಕಲ್ಲುಗಳನ್ನೇ ಹೊಯ್ಸಳರು ಬಳಸಿದರಾದರೂ ತಮಿಳುನಾಡಿನ ರಾಜ್ಯಗಳ–ಚೋಳ, ಪಾಂಡ್ಯ–ಮೇರೆಯಲ್ಲಿರುವ, ಒಮ್ಮೊಮ್ಮೆ ಆ ರಾಜ್ಯಗಳ ಭಾಗಗಳಾಗಿದ್ದ ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿನ ದೇವಾಲಯಗಳಲ್ಲಿ ಗ್ರಾನೈಟ್ ಶಿಲೆಯನ್ನು ಬಳಸಿ ದ್ರಾವಿಡ ಸಂಪ್ರದಾಯದಲ್ಲಿ ಕಟ್ಟಿದ ದೇವಾಲಯಗಳೂ ಇವೆ. ಉದಾಹರಣೆಗೆ ಮೈಸೂರು ಜಿಲ್ಲೆಯ ತಲಕಾಡಿನಲ್ಲಿರುವ ಕೀರ್ತಿನಾರಾಯಣ ದೇವಾಲಯವನ್ನು ಹೆಸರಿಸಬಹುದು. ಕ್ರಿ. ಶ. ೧೧೧೭ರಲ್ಲಿ ವಿಷ್ಣುವರ್ಧನನು ಚೋಳರ ಮೇಲೆ ಸಾಧಿಸಿದ ವಿಜಯದ ನೆನಪಿಗಾಗಿ ಈ ದೇವಾಲಯವನ್ನು ಕಟ್ಟಿಸಿದ. ಎತ್ತರವಾದ ಜಗತಿಯ ಮೇಲಿನ ದೇವಾಲಯದಲ್ಲಿ, ಗರ್ಭಗುಡಿ, ಸುಕನಾಸಿ ಮತ್ತು ಮೂರು ದ್ವಾರಗಳ ನವರಂಗಗಳನ್ನು ಹೊಂದಿದೆ. ಹೊರಭಿತ್ತಿಯಲ್ಲಿ ಅರೆಗಂಬಗಳ ನಡುವೆ ಅರೆ ಗೋಪುರಗಳು, ಅರೆಮಂಟಪಗಳು ಇವೆ. ನವರಂಗದ ನಡುವೆ ತಿರುಗಣೆಯಲ್ಲಿ ಹೊಳಪು ಮಾಡಲ್ಪಟ್ಟ ಬಳಪದ ಕಲ್ಲಿನ ನಾಲ್ಕು ಕಂಬಗಳು. ಕಂಬದಹಳ್ಳಿಯ ಶಾಂತಿನಾಥ ಬಸದಿ ದ್ರಾವಿಡ ಸಂಪ್ರದಾಯಕ್ಕೆ ಸೇರಿದುದು. ವಿಷ್ಣುವರ್ಧನನ ದಂಡನಾಯಕ ಗಂಗರಾಜನ ಮಗ ಬೊಪ್ಪನು ದ್ರೋಹಘರಟ್ಟಾಚಾರಿ ಎಂಬ ಬಿರುದನ್ನು ಹೊಂದಿದ್ದ ಶಿಲ್ಪಿಯೊಬ್ಬನ ನೆರವಿನಿಂದ ಕಟ್ಟಿಸಿದ ಈ ಬಸದಿಯ ನವರಂಗದಲ್ಲಿ ನಾಲ್ಕು ಬಳಪದಕಲ್ಲಿನ ಕಂಬಗಳಿವೆ. ನವರಂಗದಲ್ಲಿ ಒಂಭತ್ತು ಅಂಕಣಗಳಿವೆ. ಬೆಳಗೊಳದ ಜನಾರ್ಧನಾಲಯ ಚೋಳ ಶೈಲಿಯಿಂದ ಪ್ರಭಾವಿತ. ಗರ್ಭಗೃಹದ ಸುತ್ತಲೂ ವೃತ್ತಾಕಾರದ ಪ್ರಾಕಾರ. ವಿನ್ಯಾಸದಲ್ಲಿ ಬಿಲ್ಲಿನಂತೆ

ಕಮಾನಾಗಿದ್ದು ಕಲಶಗಳಿವೆ. ಭಿತ್ತಿಯಲ್ಲಿ ಅಲ್ಲಲ್ಲಿ ಸಣ್ಣ ಗೂಡುಗಳು. ಅಲ್ಲಿ ನಾಲ್ಕು ದಳಗಳನ್ನೊಳಗೊಂಡ ಹೂಗಳ ಕೆತ್ತನೆ. ಆದರೆ ಇವುಗಳನ್ನು ಹೊರತುಪಡಿಸಿ ಅವರು ಪ್ರಮುಖವಾಗಿ ಬಳಸಿದ ಮಾಧ್ಯಮ ಬಳಪದಕಲ್ಲು.

ಮೊದಲು ಸಾಮಂತರಾಗಿ, ನಂತರ ಸ್ವತಂತ್ರವಾಗಿ ಆಳಿದ ಹೊಯ್ಸಳರ ಸುಮಾರು ೩೫೦ ವರ್ಷಗಳ ಕಾಲದಲ್ಲಿ ೧೦೦ಕ್ಕೂ ಹೆಚ್ಚಾದ ೧೫೦ರೊಳಗಣ ದೇವಾಲಯಗಳು ಅಸ್ತಿತ್ವಕ್ಕೆ ಬಂದುವು. ಇದರಲ್ಲಿ ಮೊದಲ ಎರಡು ಶತಮಾನಗಳ ಕಾಲ ಇವರ ಸಮಕಾಲೀನರಾಗಿ ಕಲ್ಯಾಣದ ಚಾಲುಕ್ಯರು ಆಳಿದರು. ಮೊದಲೇ ಹೇಳಿದಂತೆ ಇದು ಶಾಂತಿ ಸಮೃದ್ಧಿಗಳ ಕಾಲ. ಆರ್ಥಿಕ ಸಂಪನ್ನತೆ ಒಂದು ಪ್ರಮುಖ ಅಂಶ. ಅರಸರು, ಸಾಮಂತರು ಕಲಾ ಸಹೃದಯರಾಗಿದ್ದುದರಿಂದ ವಾಸ್ತುಶಿಲ್ಪ, ಲಲಿತಕಲೆಗಳಿಗೆ ಅಪಾರವಾದ ಪ್ರೋತ್ಸಾಹ ದೊರಕಿದ ಕಾಲ. ಅರಸರು ಸಾರ್ವಭೌಮರಾಗಿ ಮೆರೆದು ಸಾಮಂತರಿಗೆ ಎಲ್ಲ ವಿಧದ ಸ್ವಾತಂತ್ರ್ಯವನ್ನೂ ನೀಡಿದ್ದ ಕಾಲ. ಹೊಯ್ಸಳರು ದಕ್ಷಿಣ ಕರ್ನಾಟಕದಲ್ಲಿ ದೇವಾಲಯಗಳನ್ನು ಕಟ್ಟಿಸುತ್ತಿದ್ದಂತೆಯೇ ಉತ್ತರ ಕರ್ನಾಟಕದಲ್ಲಿ ಚಾಲುಕ್ಯ ಶೈಲಿಯ ದೇವಾಲಯಗಳು ಅಸ್ತಿತ್ವಕ್ಕೆ ಬಂದುವು. ಆದರೆ ಸಂಖ್ಯೆಯ ದೃಷ್ಟಿಯಿಂದಾಗಲೀ ಕಲಾವೈಭವದ ದೃಷ್ಟಿಯಿಂದಾಗಲೀ ಹೊಯ್ಸಳರ ದೇವಾಲಯಗಳು ತಮ್ಮದೇ ಆದ ಮಾರ್ಗವನ್ನು ಕಂಡುಕೊಂಡಿವೆ. ಬಹುಮಟ್ಟಿಗೆ ಚಾಲುಕ್ಯ ದೇವಾಲಯಗಳ ವಿನ್ಯಾಸವನ್ನೇ ಇವರು ಬಳಸಿದರಾದರೂ ತಮ್ಮ ಜಾಣ್ಮೆ, ಕಲಾತ್ಮಕತೆ, ಕೈಚಳಕಗಳಿಂದ ಹೊಯ್ಸಳ ಶಿಲ್ಪಿಗಳು ದೇವಾಲಯಗಳನ್ನು ಆಭರಣ ಸಂಪುಟಗಳಾಗಿ ಪರಿವರ್ತಿಸಿದರು. ಭಿತ್ತಿಗಳ ತುಂಬ, ಕಂಬಗಳ ತುಂಬ, ಮಂಟಪದ ಎಲ್ಲಾ ಭಾಗಗಳೂ ಶಿಲ್ಪಿಯ ಕಲಾ ಪ್ರೌಢಿಮೆಗೆ ಜೀವಂತ ಸಾಕ್ಷಿಗಳಾಗಿ ಉಳಿದು ಬಂದಿವೆ. ಹೊಯ್ಸಳರ ಶಿಲ್ಪಿ ಕೇವಲ ವಾಸ್ತುಶಿಲ್ಪಿಯಾಗಿರದೆ ಅತ್ಯುತ್ತಮ ಕುಸುರಿ ಕೆಲಸವನ್ನು ಮಾಡಬಲ್ಲ ಅಕ್ಕಸಾಲಿಗನಾಗಿದ್ದ. ಪರ್ಸಿಬ್ರೌನ್ ಹೇಳುವಂತೆ ಹೊಯ್ಸಳರ ಆಲಯಗಳು ಮೇಸ್ತ್ರಿಗಳು ಕಟ್ಟಿದ ಕಟ್ಟಡವಾಗಿರದೆ, ಗಂಧದ ಗುಡಿಗಾರರ, ದಂತವನ್ನು ಕೊರೆಯುವವರ, ಲೋಹಕಾರರ, ಸ್ವರ್ಣಕಾರರ ಕುಶಲ ಕಸಬುಗಳ ಮೇಳವಿಕೆಯಾಗಿತ್ತು. ವಾಸ್ತುಶಿಲ್ಪಿ ಕಲ್ಲಿನಲ್ಲಿ ಕಲೆಯನ್ನು ನಿರೂಪಿಸುವ ಕತೆಗಾರನಾಗಿದ್ದ. ಅವು ವಾಸ್ತುಶಿಲ್ಪ ಕೃತಿಗಳಷ್ಟೇ ಅಲ್ಲ, ಪ್ರಯೋಗಾತ್ಮಕ ಕಲೆ ಸಹ ಆಗಿದ್ದುವು.

ಹೊಯ್ಸಳ ದೇವಾಲಯಗಳನ್ನು ಕಾಲದ ಚೌಕಟ್ಟಿನಲ್ಲಿ ಮೂರು ಭಾಗಗಳಾಗಿ ವಿಂಗಡಿಸಬಹುದು. ವಿಷ್ಣುವರ್ಧನನಿಗೂ ಮೊದಲಿನ ಹಾಗೂ ಆತನ ಕಾಲದ ದೇವಾಲಯಗಳು (ಸುಮಾರು ೧೦೦೦-೧೧೪೨), ಇಮ್ಮಡಿ ಬಲ್ಲಾಳ ಹಾಗೂ ಆತನ ನಂತರದ ಮುಮ್ಮಡಿ ನರಸಿಂಹನ ಕಾಲದವರೆಗಿನ ದೇವಾಲಯಗಳು (ಸುಮಾರು ೧೧೪೨-೧೨೫೩), ಮತ್ತು ಅಂತಿಮವಾಗಿ ಮುಮ್ಮಡಿ ನರಸಿಂಹನ ಕಾಲದಿಂದ ಹೊಯ್ಸಳರ ಅಂತ್ಯದ ವರೆಗಿನ ಕಾಲದಲ್ಲಿ ಕಟ್ಟಲಾದವುಗಳು (ಸುಮಾರು ೧೨೫೩-೧೩೪೬). ಸ್ಥೂಲವಾಗಿ ಇಲ್ಲಿ ಕೆಲವು ದೇವಾಲಯಗಳನ್ನು ಪರಿಶೀಲಿಸಬಹುದು.

ಹೊಯ್ಸಳ ಶೈಲಿಯ ಮೊದಲ ಹೆಜ್ಜೆಯನ್ನು ಹಾಸನ ಜಿಲ್ಲೆಯ ದೊಡ್ಡ ಗದ್ದವಳ್ಳಿಯಲ್ಲಿರುವ ಲಕ್ಷ್ಮೀ ದೇವಾಲಯದಲ್ಲಿ ಗುರುತಿಸಬಹುದು. ಕುಲಹಣ ರಾಹುತ ಹಾಗೂ ಆತನ ಪತ್ನಿ ಸಹಜಾದೇವಿಯರು ಕ್ರಿ. ಶ. ೧೧೧೩ರಲ್ಲಿ ಕಟ್ಟಿಸಿದ ಈ ಆಲಯದಿಂದ ಗ್ರಾಮವನ್ನೇ ಅಭಿನವ ಕೊಲ್ಲಾಪುರವೆಂದು ಕರೆಯಲಾಗಿದೆ. ದೇವಾಲಯಕ್ಕೆ ಜಗತಿ ಇಲ್ಲ. ೧೧೮' ೬ "x ೧೧೬' ೯" ವಿಸ್ತೀರ್ಣದ ಅಂಗಳದ ಮಧ್ಯೆ ಇರುವ ದೇವಾಲಯದ ಸುತ್ತಲೂ ೭ ಅಡಿಗಳ ಎತ್ತರದ ಗೋಡೆ. ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಎರಡು ಮಹಾದ್ವಾರಗಳು. ಪೂರ್ವದ್ವಾರದ ಶಾಖೆಗಳು ಅಲಂಕೃತ. ಪಶ್ಚಿಮ ದ್ವಾರದ ಮುಂದಿನ ಮಂಟಪದಲ್ಲಿ ೧೬ ಕಂಬಗಳು ೭ ಭುವನೇಶ್ವರಿಗಳು. ಭುವನೇಶ್ವರಿಗಳೊಳಗೆ ಅಷ್ಟದಿಕ್ಪಾಲಕರ, ತಾಂಡವೇಶ್ವರನ ಉತ್ತಮ ಕೆತ್ತನೆಯ ಮೂರ್ತಿಗಳಿವೆ. ಈ ದ್ವಾರಗಳ ಮಧ್ಯೆ ಚತುಷ್ಕೂಟದ ಲಕ್ಷ್ಮೀ ಗುಡಿ. ನಾಲ್ಕು ಮೂಲೆಗಳಲ್ಲಿ ನಾಲ್ಕು ಸಣ್ಣಗುಡಿಗಳು. ಅಂಗಳದ ಈಶಾನ್ಯದಲ್ಲಿ ಗರ್ಭಗುಡಿ ಮತ್ತು ಸುಕನಾಸಿಗಳನ್ನೊಳಗೊಂಡ ಇನ್ನೊಂದು ಸಣ್ಣಗುಡಿ. ಎಲ್ಲದರ ಮೇಲೂ ಶಿಖರಗಳು. (ಛಾಯಾ ಚಿತ್ರ–೪೨, ೪೩) ಹೊಯ್ಸಳರ ಲಾಂಛನವಾದ, ಸಳನು ಸಿಂಹವನ್ನು ಕೊಲ್ಲುವ ಶಿಲ್ಪಗಳಿವೆ. ಶಿಖರ ಪಿರಮಿಡ್ಡಿನಂತೆ ಮೇಲೇರಿದೆ. ಕದಂಬ ನಾಗರಶೈಲಿ ಎಂದು ಇದನ್ನು ಹೆಸರಿಸಬಹುದು. ನಾಲ್ಕು ಮುಖ್ಯ ಗರ್ಭಗುಡಿಗಳಲ್ಲಿ ಪೂರ್ವ, ಪಶ್ಚಿಮ, ದಕ್ಷಿಣ ಮತ್ತು ಉತ್ತರಗಳಲ್ಲಿ ಕ್ರಮವಾಗಿ




ಚಿತ್ರ – ೪೨

ಲಕ್ಷ್ಮಿ, ಭೂತನಾಥಲಿಂಗ, ವಿಷ್ಣು ಮತ್ತು ಕಾಳಿಗಳ ವಿಗ್ರಹಗಳಿವೆ. ಇವುಗಳ ದ್ವಾರದಲ್ಲಿ ತಾಂಡವೇಶ್ವರ, ಗಜಲಕ್ಷ್ಮಿ, ಯೋಗಾನರಸಿಂಹರ ವಿಗ್ರಹಗಳಿವೆ. ಈ ದೇವಾಲಯದ ಶಿಲ್ಪಿ ಮಲ್ಲೋಜ ಮಣಿಯೋಜ.

ದೊಡ್ಡಗದ್ದವಳ್ಳಿಯ ದೇವಾಲಯವನ್ನು ಕಟ್ಟಿದ ನಾಲ್ಕು ವರ್ಷಗಳಲ್ಲಿ, ಕ್ರಿ. ಶ. ೧೧೧೭ರಲ್ಲಿ ಮೂರು ಪ್ರಸಿದ್ಧ ದೇವಾಲಯಗಳು ಅಸ್ತಿತ್ವಕ್ಕೆ ಬಂದುವು. ಅವುಗಳು ಶ್ರವಣಬೆಳಗೊಳ, ತಲಕಾಡು ಹಾಗೂ ಬೇಲೂರುಗಳ ದೇವಾಲಯಗಳು. ಶ್ರವಣಬೆಳಗೊಳದಲ್ಲಿ ಕಟ್ಟಲ್ಪಟ್ಟವು ದಂಡನಾಯಕ ಗಂಗರಾಜನ ತಾಯಿ ಪೋಚಿಕಬ್ಬೆ ಕಟ್ಟಿಸಿದ ಕತ್ತಲೆ ಬಸದಿ, ಪತ್ನಿ ಲಕ್ಷ್ಮಿ ಕಟ್ಟಿಸಿದ ಎರಡು ಕಟ್ಟೆ ಬಸದಿ ಹಾಗೂ ಸ್ವತಃ ಗಂಗರಾಜನೇ ಕಟ್ಟಿಸಿದ ಇಂದಿರಾ ಕುಳಗೃಹವೆಂದು ಅಂದು ಹೆಸರಾಂತ ಶಾಸನಕಟ್ಟೆ ಬಸದಿ. ಚಿಕ್ಕಬೆಟ್ಟದಲ್ಲಿ ಇವೆಲ್ಲವೂ ಒಂದು ಆವರಣದಲ್ಲಿವೆ. ಕತ್ತಲೆ ಬಸದಿ ಇವುಗಳಲ್ಲೆಲ್ಲಾ ದೊಡ್ಡದು. ಸಾಂಧಾರದ ಗರ್ಭಗೃಹ, ತೆರೆದ ಸುಕನಾಸಿ ಹಾಗೂ ನವರಂಗ, ಅದರ ಮುಂದೆ ಮುಖಮಂಟಪ ಮತ್ತು ಕೈಸಾಲೆ. ಈ ಕೈಸಾಲೆಯಲ್ಲಿ ಪದ್ಮಾವತಿಯ ವಿಗ್ರಹವಿದೆ. ಆದರೆ ಗರ್ಭಗೃಹದಲ್ಲಿರುವುದು ೬ ಅಡಿಗಳ ಎತ್ತರದ ಆಸೀನ ಆದಿನಾಥನ ವಿಗ್ರಹ. ಶಾಸನ ಬಸದಿಯಲ್ಲಿಯೂ ಗರ್ಭಗೃಹ, ತೆರೆದ ಸುಕನಾಸಿ ಮತ್ತು ನವರಂಗಗಳಿವೆ. ಇವೆಲ್ಲವೂ ದ್ರಾವಿಡ ಶೈಲಿಯಲ್ಲಿ ಕಟ್ಟಲಾದುವು.

ತಲಕಾಡಿನಲ್ಲಿ ಒಮ್ಮೆ ಮೂವತ್ತಕ್ಕೂ ಹೆಚ್ಚಿನ ಸಂಖ್ಯೆಯ ದೇವಾಲಯಗಳೂ, ಬಸದಿಗಳೂ ಇದ್ದುವು. ಬಹುಮಟ್ಟಿಗೆ ಎಲ್ಲವೂ ಚೋಳರ, ಗಂಗರ ಕಾಲದ ಕಟ್ಟಡಗಳು. ಕೀರ್ತಿನಾರಾಯಣ ದೇವಾಲಯ ಮಾತ್ರ ಹೊಯ್ಸಳ ವಿಷ್ಣುವರ್ಧನ ಕಟ್ಟಿಸಿದುದು. ಚೋಳರನ್ನು ಹೊರದೂಡಿದುದರ ಕೀರ್ತಿಯ ಕುರುಹಾಗಿ ಈ ದೇವಾಲಯ. ಇದಕ್ಕೆ ಬಳಸಿರುವುದು ಕಗ್ಗಲ್ಲು ಮತ್ತು ಇಟ್ಟಿಗೆ. ಎತ್ತರದ ಜಗತಿ, ಮೇಲೆ ಗರ್ಭಗೃಹ, ಸುಕನಾಸಿ ಮತ್ತು ಮೂರು ದ್ವಾರಗಳ ನವರಂಗ. ಹೊರಭಿತ್ತಿಯಲ್ಲಿ ಅರೆಗಂಬಗಳು, ಅರೆಗೋಪುರಗಳು ಮತ್ತು ಅರೆಮಂಟಪಗಳು. ನವರಂಗದ ನಡುವೆ ನಾಲ್ಕು ದಪ್ಪವಾದ, ತಿರುಗಣೆಯಲ್ಲಿ ಹೊಳಪನ್ನಿತ್ತ ಬಳಪದ ಕಲ್ಲಿನ ಕಂಬಗಳು. ಉಳಿದ ಕಂಬಗಳು ಅಷ್ಟ ಅಥವಾ ಷೋಡಶ ಕೋನಗಳದ್ದು. ಚಪ್ಪಟೆಯ ಛಾವಣಿ. ಒಂದೆರಡು ಅಂಕಣಗಳಲ್ಲಿನ ಭುವನೇಶ್ವರಿಯ ಆಕಾರಗಳಲ್ಲಿ ಬಳ್ಳಿಗಳ, ಪ್ರಾಣಿಗಳ, ನರ್ತಕಿಯರ ಶಿಲ್ಪಗಳಿವೆ. ಹತ್ತು ಅಡಿಗಳ ಎತ್ತರದ ಕೀರ್ತಿನಾರಾಯಣ ವಿಗ್ರಹದ ಹಿಂದಿನ ಪ್ರಭಾವಳಿಯಲ್ಲಿ ದಶಾವತಾರಗಳನ್ನು ಕಂಡರಿಸಲಾಗಿದೆ. ಮೂರ್ತಿ ಭವ್ಯ ಮತ್ತು ಸುಂದರ.



ಚಿತ್ರ – ೪೩

ಆದರೆ ಇವುಗಳಲ್ಲಿ ಜಗದ್ವಿಖ್ಯಾತಿ ಪಡೆದಿರುವುದು ಅದೇ ವರ್ಷ (೧೧೧೭)ದಲ್ಲಿ ಕಟ್ಟಲಾದ ಬೇಲೂರಿನ ಚನ್ನಕೇಶವಾಲಯ. ತಲಕಾಡಿನಿಂದ ಚೋಳರನ್ನು ಹೊರದೂಡಿದುದರ ಕುರುಹಾಗಿ ವಿಷ್ಣುವರ್ಧನ ಕಟ್ಟಿಸಿದ ಆಲಯಗಳಲ್ಲಿ ಇದೂ ಒಂದು. ಅದೇ ವರ್ಷ ಕ್ರಿ. ಶ. ೧೧೧೭ರಲ್ಲಿ, ಇದನ್ನು ಕಟ್ಟಲಾಯಿತು. ಶಾಸನದಲ್ಲಿ ಇದನ್ನು ವಿಜಯನಾರಾಯಣನ ಆಲಯವೆಂದು ಕರೆಯಲಾಗಿದೆ. ಇವಲ್ಲದೆ ಮೇಲುಕೋಟೆ, ತೊಣ್ಣೂರು ಮತ್ತು ಗದಗುಗಳಲ್ಲಿಯೂ ಇಂತಹುದೇ ಆಲಯ–ಪಂಚನಾರಾಯಣ–ವನ್ನು ಪ್ರತಿಷ್ಠಾಪಿಸಿದನೆಂಬುದು ಒಂದು ಪ್ರತೀತಿ ಅಷ್ಟೆ.

ನಕ್ಷತ್ರಾಕಾರದ ಸುಮಾರು ನಾಲ್ಕು ಅಡಿಗಳ ಎತ್ತರದ ಜಗತಿಯ ಮೇಲೆ ಈ ಆಲಯ ನಿಂತಿದೆ. ೧೭೮ 'X ೧೫೬' ವಿಸ್ತೀರ್ಣದ ಆಲಯ ನಿಂತಿರುವುದು ೪೪೩.೫ 'X ೩೯೬' ವಿಸ್ತೀರ್ಣದ ವಿಶಾಲ ಜಗತಿಯ ಮೇಲೆ. ದೇವಾಲಯಕ್ಕೆ ಪ್ರದಕ್ಷಿಣಾ ಪಥವಿಲ್ಲ. ಅಲ್ಲದೆ ಹೊರಭಿತ್ತಿಗಳೆಲ್ಲವೂ ಸುಂದರ ಕಲಾಕೃತಿಗಳಿಂದ, ಶಿಲ್ಪಗಳಿಂದ ತುಂಬಿವೆ. ಭಿತ್ತಿಯ ಹೊರಗೆ ಸ್ವಲ್ಪ ದೂರ ನಿಂತೇ ಇದರ ಸೊಬಗನ್ನು ಸವಿಯಬೇಕು. ಎಂತಲೇ ಜಗತಿ ವಿಶಾಲವಾಗಿದೆ. ಎಂದಿನಂತೆ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಮುಖಮಂಟಪವನ್ನೊಳಗೊಂಡ ಆಲಯದ ಮುಖ್ಯದ್ವಾರ ಪೂರ್ವಾಭಿಮುಖವಾಗಿದೆ. ಈ ದ್ವಾರದ ಪಕ್ಕದ ಕಂಬಗಳ ಮೇಲೆ ರತಿ–ಮನ್ಮಥರ ಶಿಲ್ಪಗಳು. ತೋರಣದಲ್ಲಿ ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವ ನರಸಿಂಹನ ಮೂರ್ತಿ. ಈ ಪಟ್ಟಿಯ ಮೇಲೆ ಮಕರಗಳ ಮಧ್ಯೆ ಗರುಡನ ಶಿಲ್ಪ. ದ್ವಾರದ ಎರಡೂ ಕಡೆ ಗೋಡೆಯ ಮೇಲ್ಭಾಗದಲ್ಲಿ ಅರಸನ ಆಸ್ಥಾನದ ಚಿತ್ರಗಳನ್ನು ಕಂಡರಿಸಲಾಗಿದೆ. ವಿಷ್ಣುವರ್ಧನ ಹಾಗೂ ಆತನ ಮಗ ನರಸಿಂಹರನ್ನು ಇವುಗಳಲ್ಲಿ ಗುರುತಿಸಲಾಗಿದೆ. ಈ ಮೇಲ್ಭಾಗದ ಉಳಿದ ಸ್ಥಳಗಳಲ್ಲಿ ೨೦ ಶಿಲ್ಪಪಟ್ಟಿಕೆಗಳಿವೆ. ಅವುಗಳಲ್ಲಿ ೧೦ ಹೂ ಮತ್ತು ಬಳ್ಳಿಗಳನ್ನೊಳಗೊಂಡ ಕೊರೆದ ಜಾಲಂಧರಗಳು. ಉಳಿದ

ಹತ್ತರಲ್ಲಿ ಪ್ರಹ್ಲಾದ, ಬಲಿಚಕ್ರವರ್ತಿ ಮತ್ತು ಕಾಳಿಯಮರ್ದನರಿಗೆ ಸಂಬಂಧಿಸಿದ ಕಥೆಗಳನ್ನು ಚಿತ್ರಿಸುವ ಸಣ್ಣ ಶಿಲ್ಪಗಳಿವೆ. ಗೋಡೆಗಳ ಕೆಳಭಾಗದಲ್ಲಿ ಸುತ್ತಲೂ ಆನೆಗಳ, ಕುದುರೆ ಸವಾರರ, ಬಳ್ಳಿಗಳ, ರಾಮಾಯಣ ಮಹಾಭಾರತಗಳಲ್ಲಿನ ಘಟನಾವಳಿಗಳ ಚಿತ್ರಗಳಿವೆ. ಇವು ಸೂಕ್ಷ್ಮ ಶಿಲ್ಪಗಳಾದರೂ ಸತ್ವಯುತವಾಗಿ, ಜೀವನದ ಸಮೃದ್ಧಿ ಹಾಗೂ ಸಂತಸಗಳನ್ನು ನಿರೂಪಿಸುತ್ತಿವೆ. ನವರಂಗಕ್ಕೆ ಉತ್ತರ ದಕ್ಷಿಣ ದಿಕ್ಕುಗಳಲ್ಲೂ ಒಂದೊಂದು ದ್ವಾರವಿದೆ. ಒಂದು ಶುಕ್ರವಾರದ ಬಾಗಿಲು, ಮತ್ತೊಂದು ಸ್ವರ್ಗದ ಬಾಗಿಲು. ಇವುಗಳ ದ್ವಾರಬಂಧದ ಮೇಲ್ಭಾಗದಲ್ಲೂ ವರಾಹ ಹಿರಣ್ಯಾಕ್ಷನನ್ನು ಕೊಲ್ಲುವ ಹಾಗೂ ಮೋಹಿನೀ ಭಸ್ಮಾಸುರರ ವಿಗ್ರಹಗಳು ಸುಂದರವಾಗಿ ಕಡೆಯಲ್ಪಟ್ಟಿವೆ. ದೇವಾಲಯದ ಹಿಂಬದಿಯ ಗೋಡೆಯ ಮಧ್ಯದಲ್ಲಿ ಉಬ್ಬು ಶಿಲ್ಪದ, ದೇವರುಗಳ, ಪೌರಾಣಿಕ ಪುರುಷರ ಶಿಲ್ಪಗಳಿವೆ. ಆನೆಗಳ ಸಾಲುಗಳುಳ್ಳ ಪಟ್ಟಿ ದೇವಾಲಯದ ಗೋಡೆಯ ಸುತ್ತಲೂ, ವಿಮಾನದ ಹೊರಗೋಡೆಗಳಲ್ಲೂ ಕಾಣಿಸಿಕೊಂಡಿವೆ. ವಿಷ್ಣುವರ್ಧನ ಕಟ್ಟಿಸಿದಾಗ ಈ ಅಡ್ಡಪಟ್ಟಿಗಳ ಮೇಲೆ ಗೋಡೆಗಳಿರಲಿಲ್ಲ. ಕಂಬಗಳನ್ನು ಛಾವಣಿಯ ಸೂರು ಆಧರಿಸಿತ್ತು. ಆದರೆ ಸುಮಾರು ೭೦ ವರ್ಷಗಳ ಬಳಿಕ ಇಮ್ಮಡಿ ಬಲ್ಲಾಳನ ಕಾಲದಲ್ಲಿ ಕಂಬಗಳ ನಡುವೆ ಅಲಂಕೃತ ಜಾಲಂಧರಗಳನ್ನೂ ಚಿತ್ರಫಲಕಗಳನ್ನೂ ಅಳವಡಿಸಲಾಯಿತು. ಇವು ದಕ್ಷಿಣ ಮತ್ತು ಉತ್ತರಗಳಲ್ಲಿ ಹತ್ತು–ಹತ್ತು ಇವೆ. ನವರಂಗದ ಛಾವಣಿಗೆ ಆಧಾರವಾಗಿ ೪೦ ಕಂಬಗಳ–ಬೋದಿಗೆಗಳಿಂದ ಮುಂಬಾಗಿ ಮದನಿಕೆಯ ವಿಗ್ರಹಗಳಿವೆ. ಒಳಗಿನ ಎರಡು ಮಂಟಪಗಳಲ್ಲಿರುವ ಕಂಬಗಳೂ ಸೇರಿ ಒಟ್ಟು ೪೮ ಕಂಬಗಳು. ನವರಂಗದ ಮಧ್ಯೆ ಅತ್ಯುತ್ತಮವಾದ ನಾಲ್ಕು ಕಂಬಗಳು. ಇವೆಲ್ಲವೂ ತಿರುಗಣೆಯಲ್ಲಿ ಹೊಳಪು ಪಡೆದವುಗಳು. ಈ ನಾಲ್ಕು ಕಂಬಗಳು ಮಧ್ಯದ ಭುವನೇಶ್ವರಿಗೆ ಆಶ್ರಯವಾಗಿವೆ. ನವರಂಗದ ದಕ್ಷಿಣದಲ್ಲಿರುವ ನರಸಿಂಹ ಮತ್ತು ಮೋಹಿನೀ ಸ್ತಂಭಗಳು ಶಿಲ್ಪಕಲೆಯ ಔನ್ನತ್ಯದ ಉತ್ತಮ ನಿದರ್ಶನಗಳು. ಭುವನೇಶ್ವರಿಯಲ್ಲಿ ಲತೆಗಳ, ಬಳ್ಳಿಗಳ ಉತ್ತಮ ಕೆತ್ತನೆ ಇದೆ. ಭುವನೇಶ್ವರಿಯ ಮಧ್ಯದಲ್ಲಿ ಮಗುಚಿದ ಕಮಲ ಮೇಲಿನಿಂದ ಜೋತಾಡುವ ೩ ಅಡಿಗಳ ಉದ್ದದ ಕಂಬದಂತಿದೆ. ಭುವನೇಶ್ವರಿಯ ಸುತ್ತಳತೆ ೧೦'; ಆಳ ೬'. ಒಳಗಿನ ೧೭ ಪಟ್ಟಿಗಳಲ್ಲಿ ಹಲವಾರು ದೃಶ್ಯಾವಳಿಗಳು–ಸಂಗೀತಗಾರರ, ಮದ್ದಳೆಗಾರರ, ನರ್ತಕರ, ಮಲ್ಲಯುದ್ಧ– ಕೋಲಾಟಗಳ, ರಾಮಾಯಣ–ಮಹಾಭಾರತಗಳಿಂದ ಆಯ್ದ ದೃಶ್ಯಗಳು–ಕೆತ್ತಲ್ಪಟ್ಟಿವೆ. ವಿಷ್ಣುವಿನ ದಶಾವತಾರಗಳ ಚಿತ್ರೀಕರಣವನ್ನೂ ಕಾಣಬಹುದು. ಭುವನೇಶ್ವರಿಯೊಳಗಿನ ಕಮಲದ ತುದಿಯಲ್ಲಿ ಉಗ್ರನರಸಿಂಹನ ಚಿತ್ರವಿದೆ. ಈತ ದಶಭುಜನಾಗಿದ್ದಾನೆ. ನವರಂಗದ ಉಳಿದ ಅಂಕಣಗಳು ಚಪ್ಪಟೆ.

ಕಂಬಗಳನ್ನು ಸ್ಥಪತಿಗಳು ಸ್ಪರ್ಧೆಯ ದೃಷ್ಟಿಯಿಂದ ಕೆತ್ತಿದಂತೆ ತೋರುತ್ತದೆ. ಒಂದೊಂದೂ ಬೇರೆ ಬೇರೆ ವಿನ್ಯಾಸದ್ದು, ಅಲಂಕರಣದ್ದು; ವೃತ್ತಾಕಾರದ ವಿನ್ಯಾಸಗಳ ನಡುವೆ ಸೂಕ್ಷ್ಮವಾಗಿ ಪ್ರಾಣಿಪಕ್ಷಿಗಳನ್ನು ಕೊರೆದಿದೆ. ನವರಂಗದ ನಾಲ್ಕು ಕಂಬಗಳಲ್ಲಿ ಎರಡು ಅತಿಮೋಹಕವಾಗಿವೆ. ನರಸಿಂಹ ಕಂಬ ಹಿಂದೊಮ್ಮೆ ತನ್ನ ಅಕ್ಷದ ಸುತ್ತಲೂ ಸುತ್ತುವಂತಿದ್ದು ಛಾವಣಿ ಕುಸಿದ ಸಂದರ್ಭದಲ್ಲಿ ಸಂಗಮವಂಶದ ಇಮ್ಮಡಿ ಹರಿಹರ ಇದನ್ನು ಜೀರ್ಣೋದ್ಧಾರಗೊಳಿಸಿದಾಗ ಕಂಬ ಕುಸಿದು ಮೇಲೆ ಛಾವಣಿ ಕೂತಿತು. ಸುತ್ತುವಿಕೆ ನಿಂತಿತು. ಇದರ ತುಂಬ ಇರುವ ಗೂಡುಗಳಲ್ಲಿ ದೇವತಾವಿಗ್ರಹಗಳು. ಅವುಗಳಲ್ಲೊಂದು ಕಡಲೇಕಾಳಿನ ಗಾತ್ರದ ಬಸವ. ಗೋಡೆಗಳ ಹಿಂಜರಿತ ಮುಂಜರಿತಗಳಿಂದ ನೆರಳು ಬೆಳಕುಗಳು ಚೆಲ್ಲಾಟ ಹಾಗೂ ಕೆತ್ತನೆಯ ಕೆಲಸಕ್ಕೆ ಸಾಕಷ್ಟು ವಿಸ್ತಾರವಾದ ಸ್ಥಳ ದೊರಕಿದೆ. ವಿಮಾನದ ಗೋಡೆಗಳಿಗೆ ಸೇರಿದಂತೆ ದಕ್ಷಿಣ, ಪಶ್ಚಿಮ ಮತ್ತು ಉತ್ತರ ದಿಕ್ಕುಗಳಲ್ಲಿ ಎರಡಂತಸ್ತಿನ ಒಂದೊಂದು ರಥ ಇದೆ. ಇದನ್ನು ಗೂಡು ಎಂದೂ ಹೆಸರಿಸಬಹುದು. ಇವುಗಳು ಒಂದೊಂದನ್ನೂ ಒಂದೊಂದು ಆಲಯದಂತೆ ಭಾವಿಸಿ, ಕೆಳಗೆ ಚಿತ್ರಗಳ ಅಡ್ಡಪಟ್ಟಿಗಳನ್ನು ಅವುಗಳ ಮೇಲೆ ಆನೆಗಳ, ಸಿಂಹಗಳ ಸಾಲು, ಕುದುರೆ ಸವಾರರು, ಗೋಪುರದ ಕಂಬಗಳು, ಮಧ್ಯದ ಕಟಕಟೆಯಲ್ಲಿ ಎರಡು ತಿರುಗಂಬಗಳ ನಡುವೆ ಮಾನವ ಸ್ತ್ರೀಯರು–ಇಂತಹ ಚಿತ್ರಗಳನ್ನು ಕೆತ್ತಲಾಗಿದೆ. ಇಡೀ ದೇವಾಲಯವನ್ನು ಒಂದು ಆಭರಣದ ಸಂಪುಟದಂತೆ ಕೆತ್ತನೆಗಳಿಂದ ತುಂಬಿಸಲಾಗಿದೆ.

ಕೇಶವಾಲಯದ ಬಲಕ್ಕೆ ಸ್ವಲ್ಪ ಹಿಂದೆ ಶಾಂತಲೆ ಅದೇ ವರ್ಷ ಕಟ್ಟಿಸಿದ ಕಪ್ಪೆ ಚೆನ್ನಿಗರಾಯನ ಮಂದಿರವಿದೆ. ಕೇಶವಾಲಯದ ಹಿಂದಿರುವ ವೀರನಾರಾಯಣನ ಆಲಯ ಸಹ ವಿಷ್ಣುವರ್ಧನನ ಕಾಲದ್ದೇ. ಕೇಶವಾಲಯದಲ್ಲಿ ಕಾಣಬರುವ ಅಲಂಕರಣ ಇವುಗಳಲ್ಲಿಲ್ಲದಿದ್ದರೂ ಇವು ಹೊಯ್ಸಳ ಶೈಲಿಯ ಅತ್ಯುತ್ತಮ ಪ್ರತಿನಿಧಿಗಳು. ವೀರನಾರಾಯಣಾಲಯದ ವಿಸ್ತೀರ್ಣ ೭೦' X ೫೬'. ವಿಮಾನದ ಮೂರು ದಿಕ್ಕುಗಳೂ ಹೊರಕ್ಕೆ ಉಬ್ಬಿವೆ. ಹೊರಗೋಡೆಗಳ ಮೇಲೆ ೫೬ ಉಬ್ಬುಶಿಲ್ಪಗಳಿವೆ. ಇವೆಲ್ಲಾ ದೇವತಾಮೂರ್ತಿಗಳವು. ಇದು ಸಹ ಕ್ರಿ. ಶ. ೧೧೧೭ರಲ್ಲಿ ಕಟ್ಟಲಾದದ್ದು.

ಕಪ್ಪೆ ಚೆನ್ನಿಗರಾಯನ ಮಂದಿರ ಹೆಚ್ಚು ವಿಸ್ತೀರ್ಣವುಳ್ಳದ್ದು–೧೨೪ 'X೧೦೫' ಗಳ ದ್ವಿಕೂಟಾಚಲ. ನಾಲ್ಕಡಿಗಳ ಎತ್ತರದ

ಜಗತಿ. ಚತುರಸ್ರಾಕಾರದ ನವರಂಗ. ನಕ್ಷತ್ರಾಕಾರದ ವಿಮಾನ. ನವರಂಗದ ದಕ್ಷಿಣದಲ್ಲಿ ಚತುರಸ್ರಾಕಾರದ ಗುಡಿ, ಉತ್ತರದಲ್ಲಿ ಬಾಗಿಲು. ತೆರೆದ ನವರಂಗಗಳನ್ನು ಇಮ್ಮಡಿ ಬಲ್ಲಾಳ ೧೨೦೬ ರಲ್ಲಿ ಮುಚ್ಚಿಸಿದ. ಹೋರಗೋಡೆಗಳು ಅಲಂಕಾರರಹಿತ. ಗರ್ಭಗುಡಿಯೊಳಗೆ ಆರೂವರೆ ಅಡಿಗಳ ಎತ್ತರದ ಚನ್ನಿಗರಾಯನ ವಿಗ್ರಹ. ದಶಾವತಾರ, ಅಷ್ಟದಿಕ್ಪಾಲಕರ ಮೂರ್ತಿಗಳಿಂದ ಅಲಂಕೃತವಾದ ಪ್ರಭಾವಳಿ. ಪೀಠದ ಮೇಲೆ ಗರುಡ. ಶಾಂತಲೆಯ ಶಾಸನ ಸಹ ಇದೆ.

ದೇವಾಲಯದ ಮೂಲೆಯಲ್ಲಿನ ಅಂಡಾಳ್ ಗುಡಿಯನ್ನು ತದನಂತರದ ಕಾಲದಲ್ಲಿ ಇನ್ನಾವುದೋ ಜೀರ್ಣವಾದ ಕಲ್ಲುಗಳನ್ನುಪಯೋಗಿಸಿ ಕಟ್ಟಲಾಗಿದೆ. ಬೇಚಮ, ಮಧುವಣ ಮುಂತಾದ ಶಿಲ್ಪಿಗಳು ಕೊರೆದ ವಿಗ್ರಹಗಳನ್ನು ಹೊರಗೋಡೆಗಳ ಮೇಲೆ ಬಳಸಲಾಗಿದೆ. ಪ್ರಾಕಾರದೊಳಗಣ ಇತರ ಗುಡಿಗಳು–ನರಸಿಂಹ, ರಾಮ, ಕೃಷ್ಣ, ರಾಮಾನುಜಾಚಾರ್ಯ, ವೇದಾಂತ ದೇಶಿಕ ಇತ್ಯಾದಿ ಸಹ ನಂತರದ ಕಟ್ಟಡಗಳೇ.

ಚಿಕ್ಕಮಗಳೂರು ತಾಲೂಕಿನ ಮರಲೆ ಗ್ರಾಮದ ಚೆನ್ನಕೇಶವ ಮತ್ತು ಸಿದ್ಧೇಶ್ವರಾಲಯಗಳು ಸಹ ಹೊಯ್ಸಳರ ಕಾಲದವೇ. ೧೧೩೦ರ ಸುಮಾರಿಗೆ ಹೊಯ್ಸಳರ ದಂಡನಾಯಕ ಈ ದೇವಾಲಯಗಳನ್ನು ನಿರ್ಮಾಣ ಮಾಡಿದ. ಆ ವರ್ಷ ವಿಷ್ಣುವರ್ಧನನು ಈ ಆಲಯಗಳನ್ನು ನೋಡಿದುದಕ್ಕೆ ಶಾಸನಾಧಾರಗಳಿವೆ. ಸಿದ್ಧೇಶ್ವರಾಲಯದಲ್ಲಿ ವಿನ್ಯಾಸದ ದೃಷ್ಟಿಯಿಂದ ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪಗಳಿವೆ. ಇದೇ ವಿನ್ಯಾಸದಲ್ಲಿದೆ ಚೆನ್ನಕೇಶವ ದೇವಾಲಯ ಸಹ. ಆದರೆ ಉತ್ತರಾಭಿಮುಖದ ಚೆನ್ನಕೇಶವಾಲಯ ಹೆಚ್ಚು ವಿಸ್ತಾರವಾಗಿ ಸುಂದರವಾಗಿ ಇದೆ. ಸಿದ್ಧೇಶ್ವರಾಲಯದ ಸುಖನಾಸಿಯ ಮೇಲ್ಛಾವಣಿಯಲ್ಲಿ, ಅಷ್ಟಕಮಲಗಳಿಂದಾವೃತವಾದ ತಾಂಡವೇಶ್ವರ ವಿಗ್ರಹ, ನವರಂಗದಲ್ಲಿನ ನಾಲ್ಕು ಕಂಬಗಳ ಮೇಲಿರುವ ತೊಲೆಗಳ ಒಳಭಾಗದಲ್ಲಿ ಕಿರಾತಾರ್ಜುನನ ಶಿಲ್ಪ, ಸಮುದ್ರಮಥನ, ತಾಂಡವನೃತ್ಯ ಇತ್ಯಾದಿ ದೃಶ್ಯಾವಳಿಗಳಿವೆ. ಹೊರಭಿತ್ತಿಯಲ್ಲಿ ಗಜಾಸುರ ಮರ್ದನ, ಅಷ್ಟಭುಜ ನಾಟ್ಯ ಸರಸ್ವತಿ, ವಿಷ್ಣುವಿನ ವರಾಹ, ವಾಮನ, ತ್ರಿವಿಕ್ರಮರ ಅವತಾರಗಳು ಇತರ ಹಲವಾರು ವಿಗ್ರಹಗಳೂ ಕೆತ್ತಲ್ಪಟ್ಟಿವೆ. ಗರ್ಭಗೃಹ, ನವರಂಗಗಳ ದ್ವಾರದ ಮೇಲೆ ಗಜಲಕ್ಷ್ಮಿಯ ವಿಗ್ರಹಗಳು. ಹೆಚ್ಚು ವಿಸ್ತೀರ್ಣದ ಚೆನ್ನಕೇಶವಾಲಯದ ಮೂಲವಿಗ್ರಹದ ಎರಡು ಬದಿಗಳಲ್ಲೂ ದೇವಿಯರ ವಿಗ್ರಹಗಳು. ಪ್ರಭಾವಳಿಯ ಹಿಂದೆ ವಿಷ್ಣುವಿನ ದಶಾವತಾರದ ಚಿತ್ರಗಳು. ಗರ್ಭಗೃಹದ ಭುವನೇಶ್ವರಿಯಲ್ಲಿ ಅಷ್ಟದಿಕ್ಪಾಲಕರ ಹಾಗೂ ನಡುವಿನ ಅಂಕಣದಲ್ಲಿ ಲಕ್ಷ್ಮೀನಾರಾಯಣನ ವಿಗ್ರಹವಿದೆ. ಇದನ್ನೇ ನವರಂಗದ ಮೇಲ್ಛಾವಣಿಯಲ್ಲೂ ಚಿತ್ರಿಸಲಾಗಿದೆ. ಮುಖಮಂಟಪವನ್ನು ಎರಡು ಕಂಬಗಳು ಆಸರೆಯಾಗಿ ಹೊತ್ತಿವೆ.

ಇದಕ್ಕೂ ಮೊದಲು ಸುಮಾರು ೧೧೨೧ರ ವೇಳೆಗೆ, ವಿಷ್ಣುವರ್ಧನನ ಅಧಿಕಾರಿ ಕೇತಮಲ್ಲ ಹೊಯ್ಸಳೇಶ್ವರ ದೇವಾಲಯವನ್ನು ಹಳೇಬೀಡಿನಲ್ಲಿ ಕಟ್ಟಿಸಿದ. ಇದಕ್ಕೆ ಕೆಲವು ಭಾಗಗಳನ್ನು ಮೊದಲನೆಯ ನರಸಿಂಹ ಹಾಗೂ ಇಮ್ಮಡಿ ಬಲ್ಲಾಳರ ಕಾಲದಲ್ಲಿ ಸೇರಿಸಲಾಯಿತು. ಲಭ್ಯವಿರುವ ಹೊಯ್ಸಳ ದೇವಾಲಯಗಳಲ್ಲಿಯೇ ಹಿರಿದಾದುದು ಇದು. ಬೇಲೂರಿನ ಚೆನ್ನಕೇಶವಾಲಯದ ವಿನ್ಯಾಸವನ್ನೇ ಹೋಲುವ ಇದು ದ್ವಿಕೂಟಾಚಲ. ಪೂರ್ವಾಭಿಮುಖವಾಗಿ ಒಂದರ ಪಕ್ಕದಲ್ಲೊಂದಿರುವ ಆಲಯಗಳ ನವರಂಗಗಳನ್ನು ಒಂದು ಕೈಸಾಲೆಯ ಮೂಲಕ ಜೋಡಿಸಿದೆ. ಎರಡು ಭಿನ್ನದ್ವಾರಗಳು. ಎರಡರ ಮುಂದೆಯೂ ನಂದಿಮಂಟಪಗಳು. ನಕ್ಷತ್ರಾಕಾರದ ಗರ್ಭಗೃಹ, ಸುಕನಾಸಿ ಹಾಗೂ ಒಂದೊಂದು ಗುಡಿ. ಜಗತಿ ೪ ಅಡಿಗಳ ಎತ್ತರ. ದೇವಾಲಯದ ಉದ್ದ ೧೧೨'. ಅಗಲ ಸುಮಾರು '೧೦೦'. ನಂದಿಮಂಟಪಗಳನ್ನು ಇವಕ್ಕೆ ಸೇರಿಸಿಲ್ಲ. ಒಟ್ಟು ವಿಸ್ತೀರ್ಣ ೪೦,೦೦೦ ಚದರ ಅಡಿಗಳು. ಗರ್ಭಗುಡಿಗಳ ಮೂರು ಕಡೆಗಳಲ್ಲೂ ಆಸರೆ ಮಂಟಪಗಳನ್ನು ನಂತರದ ಕಾಲದಲ್ಲಿ ಅಳವಡಿಸಲಾಗಿದೆ. ಇವು ಗರ್ಭಗುಡಿಯ ಹೊರಗೋಡೆಗೆ ಭದ್ರತೆ ನೀಡುವುದಲ್ಲದೆ ಶಿಲ್ಪಿಗಳಿಗೆ ತಮ್ಮ ಶಿಲ್ಪಕಲಾ ಪ್ರದರ್ಶನಕ್ಕೆ ಹೆಚ್ಚಿನ ಸ್ಥಳವನ್ನೊದಗಿಸಿದೆ. ಈಗ ಗೋಪುರಗಳಿಲ್ಲ. ಆದರೆ ಬಹುಶಃ ಆ ಗೋಪುರಗಳೂ ನಕ್ಷತ್ರಾಕಾರದಲ್ಲಿಯೇ ಮೇಲೆದ್ದಿರಬಹುದಾದ ಸಾಧ್ಯತೆ ಇದೆ. ದೇವಾಲಯವನ್ನು ಸುತ್ತುವರಿದಿರುವ ೨೦೦ ಅಡಿಗಳ ಸ್ಥಳ ಪಟ್ಟಿಕೆಗಳಿಗೆ, ಪ್ರಾಣಿಗಳ ಸಾಲುಗಳಿಗೆ, ಲತಾ ಸುರುಳಿಗಳಿಗೆ, ಹಂಸಗಳಿಗೆ ವಿಶೇಷವಾದ ಸ್ಥಾನವನ್ನೊದಗಿಸಿದೆ. ಹಲವಾರು ಶೈವ ಪುರಾಣಗಳ, ರಾಮಾಯಣ, ಭಾರತ, ಭಾಗವತಗಳ ಕತೆಗಳು ಇಲ್ಲಿ ದೃಶ್ಯಗಳಂತೆ ನಿರೂಪಿತವಾಗಿವೆ. ರೂವಾರಿಗಳು ಈ ಸ್ಥಳದ ಸಂಪೂರ್ಣ ಅವಕಾಶವನ್ನು ಪಡೆದು ಹಲವಾರು ಸಣ್ಣ ದೊಡ್ಡ ವಿಗ್ರಹಗಳನ್ನು ಕೆತ್ತಿದ್ದಾರೆ. ನವರಂಗಗಳ ನಡುವಣ ಮುಂಚಾಚಿದ ಭಾಗ ಸಹ ಶಿಲ್ಪಿಗಳ ಸೊತ್ತಾಯಿತು. ತಿರುಗಣೆಯಿಂದ ಹೊಳಪು ನೀಡಿದ ಕಂಬಗಳ ಮೇಲಿನ ಅಲಂಕರಣ ಗಮನಾರ್ಹ. ಈ ಆಲಯದಲ್ಲಿಯೂ ಹಲವಾರು ಮದನಿಕೆಯ ವಿಗ್ರಹಗಳು ಪ್ರತಿಷ್ಠಿತವಾಗಿದ್ದರೂ ಈಗ ಅವುಗಳು ಇಲ್ಲವಾಗಿವೆ. ಬಾಗಿಲುವಾಡಗಳು ಅಲಂಕೃತ, ವೈವಿಧ್ಯಮಯ. ಶಿಲ್ಪಗಳು ಕಿಕ್ಕಿರಿದ ಪ್ರದರ್ಶನಾಲಯವಿದು. ರೂವಾರಿಗಳಲ್ಲಿ ಈ ಶಿಲ್ಪಗಳನ್ನು ಕೆತ್ತುವಲ್ಲಿ ಸ್ಪರ್ಧೆಯ ಮನೋಭಾವ ಕಂಡು ಬರುತ್ತದೆ. ಕಾಳಿದಾಸ, ದೇವೋಜ, ಕೇತಣ, ಹರಿಷ, ಮಾಣುಬಲ್ಲಕಿ,

ಬಲ್ಲಣ, ರೇವೋಜ, ಆತನ ಮಗ ಹವುಗ, ಕೇಸಿಮೋಜನ ಮಗ ಮಸ ಇವರು ಕೆಲವರು ಶಾಸನಸ್ಥ ರೂವಾರಿಗಳು, ಹಳೇಬೀಡಿನ ಈ ದೇವಾಲಯದ ನಿರ್ಮಾಣದಲ್ಲಿ ಪಾಲುಗೊಂಡವರು. ಇಲ್ಲಿ ಕಾಣುವುದು ಕೇವಲ ಶಿಲ್ಪಗಳನ್ನಲ್ಲ, ಅವುಗಳ ಸುತ್ತಲಿನ ಪ್ರಭಾವಳಿ, ಧರಿಸಿರುವ ಆಭರಣಗಳು ಮುಂತಾದವುಗಳಲ್ಲಿ ಕಂಡು ಬರುವ ಅಕ್ಕಸಾಲಿಗನ ಕುಸುರಿಕೆಲಸ, ಅಡ್ಡ ನೀಳಗಳ ಕಲಾತ್ಮಕ ಹೊಂದಾಣಿಕೆ. ಬೆಳಕು ನೆರಳುಗಳ ವೈಜ್ಞಾನಿಕವಾಗಿ ಸಾಧಿಸಿದ ಚೆಲ್ಲಾಟ, ಇವುಗಳು ಬಹುಶಃ ಭಾರತದ ಇನ್ನೆಲ್ಲೂ ಕಾಣಬಾರದ ಅಂಶಗಳು.

ಮೊದಲನೆಯ ಕಾಲಮಾನಕ್ಕೆ ಸೇರಬೇಕಾದವುಗಳಲ್ಲಿ ನಾಗಮಂಗಲದ ಸೌಮ್ಯ ಕೇಶವಾಲಯ ಒಂದು. ವಿಷ್ಣುವರ್ಧನನ ರಾಣಿ ಬಮ್ಮಲಾದೇವಿ ಕ್ರಿ. ಶ. ೧೧೩೫ರಲ್ಲಿ ಈ ಅಗ್ರಹಾರವನ್ನು ಜೀರ್ಣೋದ್ಧಾರಗೊಳಿಸಿದಳು. ಬಹುಶಃ ಆ ಸುಮಾರಿಗೆ ಈ ದೇವಾಲಯ ಸಹ ನಿರ್ಮಿತವಾಗಿದ್ದಿರಬೇಕು. ೪.೫' ಎತ್ತರದ ಜಗತಿಯ ಮೇಲೆ ಕಟ್ಟಲಾದ ಈ ಆಲಯ ತ್ರಿಕೂಟಾಚಲ. ಮಧ್ಯದಲ್ಲಿ ಕೇಶವ ಎರಡೂ ಕಡೆಗಳಲ್ಲಿ ನರಸಿಂಹ ಮತ್ತು ವೇಣುಗೋಪಾಲರ ಗುಡಿಗಳು. ಜಗತಿ ನಕ್ಷತ್ರಾಕಾರದ್ದು. ಆದರೆ ಆಲಯಗಳ ಹೊರಗೋಡೆಗಳ ಮೇಲೆ ಕೇವಲ ಅರೆಗಂಬಗಳ ಅಲಂಕರಣಗಳಿವೆ. ಮಹಾದ್ವಾರದ ಮೇಲೆ ಏಳು ಅಂತಸ್ತುಗಳ ಗೋಪುರ ದ್ರಾವಿಡ ಶೈಲಿಯದು. ಪಾತಾಳಾಂಕಣದಲ್ಲಿ ಆಳ್ವಾರರ, ಶ್ರೀ ವೈಷ್ಣವ ಸಂಪ್ರದಾಯದ ದೇವರುಗಳ ಗುಡಿಗಳಿವೆ. ೫೫'ಗಳ ಎತ್ತರದ ಗರುಡಗಂಬ ಕಲಾತ್ಮಕವಾಗಿದೆ. ಆದರೆ ಬಹುಶಃ ಇವು ನಂತರ ಸೇರಿಸಲ್ಪಟ್ಟ ಭಾಗಗಳಾಗಿರಬೇಕು. ಜಗದೇವರಾಯ ಇವುಗಳನ್ನು ಕಟ್ಟಿಸಿದನೆಂಬುದೊಂದು ಐತಿಹ್ಯವಿದೆ.

ಸುಮಾರು ಕ್ರಿ. ಶ. ೧೧೪೨ ರಿಂದ ೧೨೫೩ ರವರೆಗಿನ ಕಾಲಮಾನ ಹೊಯ್ಸಳ ಶೈಲಿಯ ಎರಡನೆಯ ಘಟ್ಟಕ್ಕೆ ಸೇರಿದುದು. ಇದು ಹೊಯ್ಸಳ ಶೈಲಿಯ ಪರಾಕಾಷ್ಠೆಯ ಕಾಲ. ಆದರೆ ಈಗ ಕಟ್ಟಲಾದ ಗುಡಿಗಳೆಲ್ಲವುಗಳಲ್ಲಿಯೂ ಇದನ್ನು ಕಾಣಲಾಗದೆಂಬುದನ್ನು ನೆನಪಿನಲ್ಲಿಡಬೇಕು. ಕ್ರಿ. ಶ. ೧೧೬೩ರಲ್ಲಿ ಹೊಯ್ಸಳ ಒಂದನೆಯ ನರಸಿಂಹ ಅರಸೀಕೆರೆ ತಾಲೂಕಿನ ಹುಲ್ಲೇಕೆರೆಯಲ್ಲಿ ಒಂದು ಆಲಯ (ಚನ್ನಕೇಶವ) ಕಟ್ಟಿಸಿದ. ದೇವಾಲಯದೊಳಗೆ, ಗೋಪುರ ಭಾಗಗಳಲ್ಲಿ ಉತ್ತಮ ಕೆತ್ತನೆಯ ಕೆಲಸವನ್ನು ಕಾಣುತ್ತೇವೆ. ಮುಖಮಂಟಪದಲ್ಲಿ, ವಿಷ್ಣುಮೂರ್ತಿಗಳೂ ಅರೆಗಂಬಗಳೂ ಗೋಪುರಗಳೂ ಸಹ ಸುಂದರವಾಗಿವೆ. ಗೊರೂರು (ಗೊರ ಊರು, ಶತರುದ್ರೀಯಪುರ) ಅರಕಲಗೂಡಿನ ಸಮೀಪದ ಹೇಮಾವತಿ ತೀರದ ಗ್ರಾಮ. ಇಲ್ಲಿ ವಿಜಯಾದಿತ್ಯ ಸ್ಥಾಪಿಸಿದ ತ್ರಿಕೂಟೇಶ್ವರಾಲಯ ೧೧೬೦ರಲ್ಲಿ ಅಸ್ತಿತ್ವಕ್ಕೆ ಬಂದಿತು. ಮೂರು ಗರ್ಭಗುಡಿಗಳೊಂದೊಂದರ ಮುಂದೆಯೂ ತೆರೆದ ಸುಕನಾಸಿಗಳು. ಇವು ಮಧ್ಯದ ನವರಂಗವನ್ನು ಮುಖಮಾಡಿವೆ. ಮುಂದುಗಡೆ ಅರ್ಧಮಂಟಪ. ಕದಂಬನಾಗರ ಶೈಲಿಯ ಮೂರು ವಿಮಾನಗಳು, ಮೆಟ್ಟಿಲು ಮೆಟ್ಟಿಲುಗಳಾಗಿ ಮೇಲೆದ್ದಿವೆ. ಇವುಗಳ ಮುಂದೆ ಸಳನು ಹುಲಿಯನ್ನು ಕೊಲ್ಲುವ ದೃಶ್ಯದ ಹೊಯ್ಸಳ ಲಾಂಛನದ ಶಿಲ್ಪವಿದ್ದಿರಬಹುದಾದ ಸಾಧ್ಯತೆ ಇದೆ. ಆದರೆ ಈ ಶಿಖರಗಳು ಅಲಂಕಾರರಹಿತ. ಹೊರಭಿತ್ತಿಯ ಅರೆಗಂಬಗಳು ಮಾತ್ರ ಅಲಂಕೃತ, ತಿರುಗಣೆಯಲ್ಲಿ ಕಡೆದ ಕಂಬಗಳು, ನವರಂಗದಲ್ಲಿ ಗಣಪತಿ, ಮಹಿಷಮರ್ದಿನಿ, ಸಪ್ತಮಾತೃಕೆಯರು ಹಾಗೂ ಸೂರ್ಯರ ಉತ್ತಮ ವಿಗ್ರಹಗಳಿವೆ. ನವರಂಗದ ಎರಡೂ ಕಡೆ ಇರುವ ದ್ವಾರಪಾಲಕರ ವಿಗ್ರಹಗಳು ಈಗ ಭಗ್ನ. ಭುವನೇಶ್ವರಿಗಳು ಆಳವಾಗಿದ್ದು ಉತ್ತಮ ಕೆತ್ತನೆಗಳಿಂದ ಕೂಡಿವೆ.

ಇಮ್ಮಡಿ ಬಲ್ಲಾಳನ ಅಧಿಕಾರಿ ಬೂಚಿರಾಜ ತನ್ನ ಹೆಸರಿನಲ್ಲಿ ೧೧೭೩ರಲ್ಲಿ ಅರಸನ ಸಿಂಹಸನಾರೋಹಣದ ನೆನಪಿಗಾಗಿ ಬೂಚೇಶ್ವರ ದೇವಾಲಯವನ್ನು ಹಾಸನ ತಾಲೂಕಿನ ಕೋರಮಂಗಲದಲ್ಲಿ ಕಟ್ಟಿಸಿದ. ಇದಲ್ಲದೆ ಈ ಗ್ರಾಮದಲ್ಲಿ ನಾಗೇಶ್ವರ, ಗೋವಿಂದೇಶ್ವರ ದೇವಾಲಯಗಳಿದ್ದರೂ, ಅವು ಇದಕ್ಕಿಂತ ಸ್ವಲ್ಪ ಮೊದಲಿನವಾದರೂ ಶಿಥಿಲವಾಗಿವೆ. ಇವುಗಳಲ್ಲಿ ನಾವು ತೆರೆದ ಸುಕನಾಸಿಯನ್ನು ಕಾಣುತ್ತೇವೆ. ಇದೊಂದು ವೈಶಿಷ್ಟ್ಯ. ಬೂಚೇಶ್ವರಾಲಯದಲ್ಲಿ ನವರಂಗದ ಮುಂದೆ ೧೮ ಕಂಬಗಳ ಮುಖಮಂಟಪವಿದೆ. ಈ ಮಂಟಪದ ಎರಡೂ ಬದಿಗಳಲ್ಲಿ ದ್ವಾರಗಳು. ಹೊರಭಿತ್ತಿಯಲ್ಲಿ ಕೆಳಗಡೆ ಎಂದಿನಂತೆ ಪಟ್ಟಿಗಳು, ಮೇಲೆ ಕಂಬಗಳ ನಡುವೆ ದೇವ ದೇವತೆಯರ ಶಿಲ್ಪಗಳು, ಕೆಲವು ಗೂಡುಗಳಲ್ಲಿ ವಿಗ್ರಹಗಳ ಮೇಲೆ ಶಿಖರಗಳ ವಿನ್ಯಾಸಗಳಿವೆ. ಶಿಖರದಲ್ಲೂ ಶಿಲ್ಪಗಳಿವೆ. ಕಂಬಗಳು ಎಂದಿನಂತೆ ತಿರುಗಣೆಯಲ್ಲಿ ಹೊಳಪು ಕೊಟ್ಟವುಗಳು. ಮುಖಮಂಟಪದ ಸುತ್ತಲೂ ಕಕ್ಷಾಸನಗಳು. ಮಂಟಪ ತೆರೆದಿದೆ. ಆಂಜನೇಯನ, ಶಿವ-ಪಾರ್ವತಿಯರ, ಅರೆನಗ್ನ ಸ್ತ್ರೀ ವಿಗ್ರಹಗಳು ಸುಂದರ ಕಲಾಕೃತಿಗಳು. ಗರ್ಭಗುಡಿಯ ನೇರೆದುರಿನಲ್ಲಿ ಪೂರ್ವಭಾಗಕ್ಕೆ ಸೂರ್ಯನ, ಈಶಾನ್ಯನ, ಭೈರವನ ಸಮಕಾಲೀನ ಗುಡಿಗಳಿವೆ. ಈ ಅರಸನ ಕಾಲದಲ್ಲಿ ಭಂಡಾರವಾಡವಾಗಿದ್ದ ಈ ಊರು ರಾಣಿ ಉಮಾದೇವಿಯ ತವರುಮನೆ. ಇಲ್ಲಿ ಲಭಿಸಿರುವ ಹಲವಾರು ಶಾಸನಗಳನ್ನು ದೇವಾಚಾರ್ಯ, ತ್ರಿವಿಕ್ರಮಪಂಡಿತ, ಶಾಂತಿನಾಥ ಮುಂತಾದ ಕವಿಗಳು ರಚಿಸಿದ್ದಾರೆ. ಶಾಸನಗಳಲ್ಲಿ ಇಲ್ಲಿನ ಪ್ರಸನ್ನ ಚೆನ್ನಕೇಶವ,

ನಗರಜಿನಾಲಯ, ಕೊಯ್ಲಾಳೇಶ್ವರ, ಜಗತೀಶ್ವರ, ಮೇಳೇಶ್ವರ, ಬಲ್ಲೇಶ್ವರ, ಬ್ರಹ್ಮ, ಕತ್ತಮೇಶ್ವರ ಮುಂತಾದ ಗುಡಿಗಳನ್ನು ಪ್ರಸಿದ್ಧ ರೂವಾರಿಗಳಾಗಿದ್ದ ಪುಲಿಗೆರೆಯ ಏತೋಜ, ಸರಸ್ವತೀ ಗಣದಾಸಿ ಕೇತೋಜ, ಸಿಂಗೋಜ ಮುಂತಾದವರು ಕಟ್ಟಿದರೆಂದು ಹೇಳಿದೆ. ಆದರೆ ಈಗ ಈ ದೇವಾಲಯಗಳೆಲ್ಲ ಬಹಳ ಶಿಥಿಲವಾಗಿವೆ. ಸದ್ಯಕ್ಕೆ ಉಳಿದಿರುವುದು ಇಮ್ಮಡಿ ಬಲ್ಲಾಳ ಕಟ್ಟಿಸಿದ ಈಶ್ವರಾಲಯ. ಸಣ್ಣಗರ್ಭಗುಡಿ, ಅದರ ಮೇಲೆ ನಕ್ಷತ್ರಾಕಾರದಲ್ಲಿಯೇ ಮೇಲೆದ್ದಿರುವ ವಿಮಾನ, ಮೇಲ್ಭಾಗದಲ್ಲಿ ಕಳಶ. ನವರಂಗದೊಳಗಿನ ಗೋಡೆಗಳಲ್ಲಿನ ಕಲಾತ್ಮಕ ಗೂಡುಗಳು, ಕಡೆದ ಕಂಬಗಳು, ಕುಸುರಿ ಕೆಲಸದ ಗರ್ಭಗುಡಿಯ ದ್ವಾರಬಂಧ, ಮುಖಮಂಟಪವನ್ನೆಲ್ಲಾ ಆವರಿಸಿದಂತೆ ವಿಸ್ತರಿಸಲಾದ ಅಪರೂಪದ್ದೆನಿಸುವ ಭುವನೇಶ್ವರಿ. ಹೊರಭಿತ್ತಿಗಳಲ್ಲಿ ಮುನ್‌ಚಾಚು, ಹಿನ್‌ಚಾಚುಗಳಲ್ಲಿ ಸ್ಥಳವನ್ನು ಬಿಡದಂತೆ ಕೆತ್ತಲಾದ, ಒಂದು ಸಾಲಿನ ಮೂರ್ತಿ ಶಿಲ್ಪಗಳು–ಎಲ್ಲವೂ ವೈಶಿಷ್ಟ್ಯಪೂರ್ಣ ಹೊಯ್ಸಳಶೈಲಿಯ ಮಾದರಿಗಳು. ಇದು ಪುಟ್ಟದಾದರೂ ಸಹ ಲಾವಣ್ಯ ಭರಿತವಾದ, ಮುದ್ದಾದ ಹೊಯ್ಸಳ ದೇವಾಲಯ. ಈ ದೇವಾಲಯದ ಕಾಲ ಸುಮಾರು ೧೧೮೪.

ತರೀಕೆರೆ ತಾಲೂಕಿನ ಅಮೃತಾಪುರದಲ್ಲಿ ಇಮ್ಮಡಿ ವೀರಬಲ್ಲಾಳನ ದಂಡನಾಯಕ ಸುಮಾರು ೧೧೯೬ರಲ್ಲಿ ಕಟ್ಟಿಸಿದ ಆಲಯ ಅಮೃತೇಶ್ವರಾಲಯ. ಇಲ್ಲಿನ ಶಾಸನವನ್ನು ರಚಿಸಿದಾತ ಕವಿ ಜನ್ನ. ಹೊಯ್ಸಳ ದೇವಾಲಯಗಳ ಎಲ್ಲ ಅಂಗಗಳನ್ನೂ ಹೊಂದಿರುವ ಈ ದೇವಾಲಯದ ಸುತ್ತಲೂ ಎತ್ತರದ ಪ್ರಾಕಾರ, ಗರ್ಭಗುಡಿ ಹೊರತುಪಡಿಸಿ ಉಳಿದವು ಚೌಕಾಕಾರದ, ಶಿಲುಬೆ. ಮಹಾಮಂಟಪ ಸುಮಾರು ೧೨೦೬ರಲ್ಲಿ ಸೇರ್ಪಡೆಯಾಯಿತು. ಗರ್ಭಗುಡಿ, ಮುನ್‌ಚಾಚು ಹಿನ್‌ಚಾಚುಗಳು ಫಲವಾಗಿ ನಕ್ಷತ್ರಾಕಾರವನ್ನು ಪಡೆದಿದೆ. ದ್ವಾರಬಂಧಗಳಲ್ಲಿ ಉತ್ತಮವಾದ ಕೆತ್ತನೆಗಳು. ಸುಕನಾಸಿಯ ದ್ವಾರಬಂಧದಲ್ಲಿ ರತಿ–ಮನ್ಮಥರ ಅಪರೂಪದ ವಿಗ್ರಹಗಳು, ಪಕ್ಕಗಳಲ್ಲಿ ಕುಸುರಿ ಕೆಲಸದ ಜಾಲಂಧರಗಳು. ನವರಂಗದಲ್ಲಿ ೨ ಅಡಿ ಆಳದ ಭುವನೇಶ್ವರಿಗಳಲ್ಲಿ ಪದ್ಮಗಳು ಇಳಿಬಿದ್ದಿವೆ. ನವರಂಗದೊಳಗೆ ನಾಗದಂಪತಿಗಳ ವಿಗ್ರಹಗಳಿವೆ. ನವರಂಗದಲ್ಲಿ ನಾಲ್ಕು ಕಂಬಗಳಿದ್ದರೆ ಮಹಾಮಂಟಪದಲ್ಲಿ ೩೬ ಇವೆ. ಇಲ್ಲಿನ ಭುವನೇಶ್ವರಿಗಳ ಶಿಲ್ಪಗಳಲ್ಲಿ ಮಲ್ಲಿತಮ್ಮ, ಬಲುಗ, ಮಲಯ, ಪದುಮಣ್ಣ ಮುಂತಾದವರು ಪ್ರಮುಖರು. ಹೊರಭಿತ್ತಿಗಳಲ್ಲಿ ಅರೆಗಂಬಗಳ ಗೂಡುಗಳ ಮೇಲೆ ದ್ರಾವಿಡ ಹಾಗೂ ನಾಗರಶೈಲಿಗಳ ಶಿಖರಗಳು. ವಿಮಾನದ ಮೇಲೂ ನಿಂತಂತಿರುವ ಶಿಲ್ಪಗಳು ಹಲವು ಸಾಲುಗಳಲ್ಲಿವೆ. ಸುಕನಾಸಿಯ ಮೇಲಿರುವ ವಿಮಾನದ ಮುಂಚಾಚಿನಲ್ಲಿ ಸಳನ ಶಿಲ್ಪ.


ಪುಟ್ಟದಾದರೂ ಸುಂದರವಾದ, ಎರಡನೆಯ ಘಟ್ಟಕ್ಕೆ ಸೇರಿದ ಆಲಯಗಳಲ್ಲಿ ಹೆಸರಿಸಬಹುದಾದುದು ಮಂಡ್ಯ ತಾಲೂಕಿನ ಬಸರಾಳುವಿನಲ್ಲಿ ಇಮ್ಮಡಿ ನರಸಿಂಹನ ಸೇನಾಧಿಪತಿ ಹರಿಹರನು ೧೨೩೪ರಲ್ಲಿ ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯ. ಇದೊಂದು ತ್ರಿಕೂಟಾಚಲ ನಾಲ್ಕು ಅಡಿಗಳ ಎತ್ತರದ ಜಗತಿಯ ಮೇಲಿನ ಪಶ್ಚಿಮದ ಗುಡಿಯಲ್ಲಿ ಮುಂಚಾಚಿದ ಸುಕನಾಸಿ, ಉತ್ತರ–ದಕ್ಷಿಣ ಗರ್ಭಗುಡಿಗಳ ಮುಂದೆ ಪೂರ್ವಾಭಿಮುಖವಾಗಿ ಒಂದು ನವರಂಗ. ಪಶ್ಚಿಮದ ಗುಡಿಯಲ್ಲಿ ಹಿರಿದಾದ ಶಿವಲಿಂಗ. ದಕ್ಷಿಣದ ಗುಡಿಯಲ್ಲಿ ಈಗ ಸೂರ್ಯನ ವಿಗ್ರಹವಿದ್ದರೂ ಮೂಲತಃ ಅಲ್ಲೊಂದು ವಿಷ್ಣುವಿನ ವಿಗ್ರಹವಿದ್ದಿರಬೇಕು. ದ್ವಾರಪಾಲಕರು ವೈಷ್ಣವರು. ಉತ್ತರದ ಗುಡಿಯಲ್ಲೂ ಈಗ ವಿಗ್ರಹ ಇಲ್ಲ. ನವರಂಗದ ದ್ವಾರಬಂಧದ ಮೇಲೆ ತಾಂಡವೇಶ್ವರ ಮೂರ್ತಿಯನ್ನು ಕಂಡರಿಸಲಾಗಿದೆ. ಎರಡೂ ಬದಿಗಳಲ್ಲಿ ಶೈವ ವಿಗ್ರಹಗಳು– ದ್ವಾರಪಾಲಕರು. ನವರಂಗದ ಕಂಬಗಳೂ ಜಾಲಂದರಗಳೂ ಉತ್ತಮ ಕೆತ್ತನೆಯವು. ಗೋಡೆ ಗೂಡುಗಳಲ್ಲಿ ದೇವತಾ ಮೂರ್ತಿಗಳ–ಗಣೇಶ, ಮಹಿಷಮರ್ದಿನಿ, ಸರಸ್ವತಿ ಇತ್ಯಾದಿ–ವಿಗ್ರಹಗಳಿವೆ. ಹೊರಭಿತ್ತಿಯಲ್ಲಿ ಆರುಪಟ್ಟಿಗಳಿದ್ದು ಒಂದೊಂದರಲ್ಲೂ ಆನೆಗಳೂ ಕುದುರೆಗಳೂ ಸಿಂಹಗಳೂ ಪೌರಾಣಿಕ ಕಥೆಗಳೂ ಮಕರಗಳೂ ಹಂಸಗಳೂ ಚಿತ್ರಿತವಾಗಿವೆ. ಪೌರಾಣಿಕ ಪಟ್ಟಿಯಲ್ಲಿ ರಾಮಾಯಣ, ಮಹಾಭಾರತ, ಭಾಗವತ ಹಾಗೂ ಇತರ ಕಥೆಗಳ ಆಯ್ದ ಕೆಲವು ಭಾಗಗಳನ್ನು ಕೆತ್ತಲಾಗಿದೆ. ಗಜಾಸುರ ಮರ್ದನ, ಕೃಷ್ಣಲೀಲೆ, ಹಿರಣ್ಯಕಶಿಪು ಸಂಹಾರ, ರಾವಣವಧೆ, ಭೀಮ–ದುರ್ಯೋಧನರ ಯುದ್ಧ ಇವುಗಳು ಕೆಲವು ಕಥೆಗಳು. ಈ ಪಟ್ಟಿಗಳ ಮೇಲೆ ದುರ್ಗ, ಯೋಗನರಸಿಂಹ, ಹಲಾಯುಧ, ಬಲಿ–ವಾಮನ, ವೇಣುಗೋಪಾಲ ಮುಂತಾದ ಮೂರ್ತಿಶಿಲ್ಪಗಳನ್ನು ನೋಡುತ್ತೇವೆ. ಇಂತಹ ವಿಗ್ರಹಗಳು ನೂರಾರು ಇಲ್ಲಿವೆ.

ಇನ್ನೊಂದು ತ್ರಿಕೂಟಾಚಲ, ಕ್ರಿ. ಶ. ೧೨೪೬ರಲ್ಲಿ ಬೊಮ್ಮಣ್ಣ ದಂಡನಾಯಕ ಕಟ್ಟಿಸಿದ ವಿಷ್ಣು ದೇವಾಲಯ, ಚನ್ನರಾಯಪಟ್ಟಣದ ತಾಲೂಕಿನ ನುಗ್ಗೇಹಳ್ಳಿಯಲ್ಲಿದೆ. ಮಧ್ಯದ ಗುಡಿಯಲ್ಲಿ ಪ್ರಸನ್ನಕೇಶವನ ವಿಗ್ರಹ. ಇನ್ನೆರಡರಲ್ಲಿ ಲಕ್ಷ್ಮೀನರಸಿಂಹ ಮತ್ತು ವೇಣುಗೋಪಾಲರ ಮೂರ್ತಿಗಳು. ಹೊರಭಿತ್ತಿಗಳಲ್ಲಿ ಆನೆಗಳ, ಕುದುರೆಗಳ, ಪೌರಾಣಿಕ ಕಥಾಭಾಗಗಳ, ಮಕರಗಳ, ಹಂಸಗಳ ಕಂಡರಣೆಗಳನ್ನು ಪಟ್ಟಿಗಳಲ್ಲಿ ಮೂಡಿಸಲಾಗಿದೆ. ಈ ಪಟ್ಟಿಗಳ ಮೇಲೆ ಮೂರ್ತಿ ಶಿಲ್ಪಗಳು. ಬಳ್ಳಿಗಳ ಕೆಳಗಿರುವ ಈ ಮೂರ್ತಿಗಳು ಆಕಾರದಲ್ಲಿ ಸ್ವಲ್ಪ ಸ್ಥೂಲ. ಆದರೆ ಹೊಯ್ಸಳ ಶೈಲಿ ಇವುಗಳಲ್ಲಿ ಮೈವೆತ್ತಿವೆ. ನವರಂಗದ ದ್ವಾರ ಸುಂದರ.

ಮೇಲ್ಭಾಗದಲ್ಲಿ ಸರಸ್ವತಿ. ಭಿನ್ನಾಕೃತಿಗಳ ಭುವನೇಶ್ವರಿಗಳು, ಮಧ್ಯದ ಗರ್ಭಗುಡಿಯ ಮೇಲೆ ಹೊಯ್ಸಳ ಶೈಲಿಯ ವಿಮಾನ. ಉಳಿದೆರಡು ಗುಡಿಗಳ ಗೋಪುರಗಳು ನಂತರ ಸೇರಿಸಲ್ಪಟ್ಟವು. ಜೊತೆಗೆ ಪಾತಾಳಂಕಣ, ಹಜಾರ, ಹೊರಗಿನ ನವರಂಗಗಳು, ೧೬ನೆಯ ಶತಮಾನದಲ್ಲಿ ಇಲ್ಲಿ ಅಧಿಕಾರದಲ್ಲಿದ್ದ ಪಾಳಯಗಾರರು ಸೇರಿಸಿದ ಅಂಗಗಳು. ದೇವಾಲಯದ ಉತ್ತರ ಭಾಗದ ಮೂರ್ತಿಗಳ ಶಿಲ್ಪಿ ಪ್ರಸಿದ್ಧನಾದ ಮಲ್ಲಿತಮ್ಮ. ದಕ್ಷಿಣ ದಿಕ್ಕಿನ ಮೂರ್ತಿಗಳು ಅನೇಕ ಬಿರುದುಗಳನ್ನು ಪಡೆದ ನಂದಿ ಬೈಚೋಜನ ಕೃತಿಗಳು.

ಹೊಯ್ಸಳ ಶೈಲಿಯಲ್ಲಿ ಕಟ್ಟಲಾದ ಕರ್ನಾಟಕದ ಬೇರೆಲ್ಲೂ ಕಂಡುಬರದ ಅತಿ ಸೂಕ್ಷ್ಮಾಲಂಕರಣಗಳಿಂದ ಕೂಡಿದ ಶಾಂತಿನಾಥ ಬಸದಿಯನ್ನು ಇಲ್ಲಿ ಉಲ್ಲೇಖಿಸಬೇಕು. ಸುಮಾರು ೧೨೦೦ರಲ್ಲಿ ಇದನ್ನು ಬಲ್ಲಾಳನ ದಂಡನಾಯಕ ರೇಚಣ ಕಟ್ಟಿಸಿದ. ತಳವಿನ್ಯಾಸದ ಹೊರ ಆಕಾರವನ್ನು ಹೋಲುವ ಜಗಲಿಯ ಮೇಲಿನ ಈ ಆಲಯದಲ್ಲೂ ಗರ್ಭಗೃಹ, ಸುಕನಾಸಿ, ನವರಂಗಗಳಿವೆ. ಚೌಕಾಕಾರದ ತಳವಿನ್ಯಾಸ. ಆದರೆ ಹೊರಭಿತ್ತಿ ಹಲವು ಮುಖಗಳಾಗಿ ವಿಂಗಡಿಸಲ್ಪಟ್ಟಿದ್ದು ಅದು ಹಿಂದಕ್ಕೆ ಮುಂದಕ್ಕೆ ಚಾಚಿಕೊಂಡಿದೆ. ಮುಂಚಾಚಿದ ಭಾಗಗಳಲ್ಲಿ ಅರೆಗಂಬಗಳ ನಡುವೆ ಅರೆಮಂಟಪ. ಮೇಲೆ ವಿಮಾನದ ವಿನ್ಯಾಸಗಳು. ಇವುಗಳ ಕೆಳಗೆ ಮುತ್ತಿನ ತೋರಣದ ಕಾರ್ನಿಸು. ಮಂಟಪದೊಳಗೆ ಜನ, ಯಕ್ಷ, ಯಕ್ಷಿಯರ ಮೂರ್ತಿಗಳು. ಹಿಂಚಾಚಿದ ಭಾಗಗಳಲ್ಲಿಯೂ ಅರೆಗಂಬಗಳ ಮೇಲೆ ಗೋಪುರ. ಗೋಪುರದ ಮೇಲೆ ಕೀರ್ತಿಮುಖ. ಆದರೆ ಎರಡು ಕೋರೆ ಹಲ್ಲುಗಳಿಂದ ಇಳಿಬಿದ್ದ ಬಳ್ಳಿಗಳ ಸುರುಳಿಗಳು. ಅರೆಮಂಟಪದ ಎರಡೂ ಕಡೆಗಳಲ್ಲಿ ಲತೆಗಳ, ಬಳ್ಳಿಗಳ ಕೆಳಗೆ ವಿವಿಧ ಭಂಗಿಗಳಲ್ಲಿ ನರ್ತಕಿಯರ, ವಾದ್ಯಗಾರರ, ಯಕ್ಷ ಯಕ್ಷಿಯರ ಮೂರ್ತಿ ಶಿಲ್ಪಗಳು. ಅಲ್ಲಿರುವ ೩೦ ಅರೆಗೋಪುರಗಳೂ ಅಲಂಕಾರದಲ್ಲಿ ವಿಭಿನ್ನ. ನವರಂಗದೊಳಗೂ ಸಂಪೂರ್ಣ ಅಲಂಕರಣಗಳಿಂದ ಕಿಕ್ಕಿರಿದ ಕಂಬಗಳು. ಭುವನೇಶ್ವರಿಗಳೂ ಚಿತ್ರಮಯ. ನವರಂಗದ ಎರಡೂ ಕಡೆ ಕುಸುರಿಗಳಿಂದ ತುಂಬಿದ ಅರೆಮಂಟಪಗಳು. ಗರ್ಭಗುಡಿಯಲ್ಲಿ ಶಾಂತಿನಾಥನ ನಿಂತ ಮೂರ್ತಿ. ಗಾಂಭೀರ್ಯದಿಂದ ಕೂಡಿದ ಮುಖಮುದ್ರೆ. ಬಸದಿಯೊಂದರಲ್ಲಿ ಇಷ್ಟು ಸಮೃದ್ಧವಾದ, ಕಲಾತ್ಮಕವಾದ ಕೆತ್ತನೆಯ ಕೆಲಸ ಬಹಳ ಅಪರೂಪ. ಇಂತಹುದೊಂದು ಕರ್ನಾಟಕದಲ್ಲಿ ಬೇರೆಲ್ಲೂ ಇಲ್ಲ.


ಮೂರನೆಯ ಘಟ್ಟದಲ್ಲಿ ಹೊಯ್ಸಳ ಶೈಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿದುದಲ್ಲದೆ ೧೪ನೆಯ ಶತಮಾನದಿಂದ ಇಳಿಮುಖವನ್ನೂ ಕಂಡಿತು. ಈ ಕಾಲಘಟ್ಟದಲ್ಲಿನ ದೇವಾಲಯಗಳು ಸಂಖ್ಯಾದೃಷ್ಟಿಯಿಂದ ಕಡಿಮೆ. ತುರುವೇಕೆರೆಯನ್ನು ಈ ಘಟ್ಟದ ಒಂದು ಮಾದರಿ ಎನ್ನಬಹುದು. ತುಮಕೂರು ಜಿಲ್ಲೆಯ ಈ ಗ್ರಾಮ ಮುಮ್ಮಡಿನರಸಿಂಹನ ಸೇನಾನಿ ಸೋಮಣ್ಣನಿಂದ ಸ್ಥಾಪಿಸಲ್ಪಟ್ಟ ಗ್ರಾಮ (೧೨೬೮). ಅಂದು ಇದರ ಹೆಸರು ಸರ್ವಜ್ಞ ಶ್ರೀ ವಿಜಯ ನರಸಿಂಹಪುರ. ಆದರೆ ಗ್ರಾಮದಲ್ಲಿರುವ ಹಿರಿದಾದ ಕೆರೆಯಿಂದ ಇದು ಈಗ ತುರುವೇಕೆರೆ ಎನಿಸಿಕೊಂಡಿದೆ. ಇಲ್ಲಿನ ಚನ್ನಕೇಶವ ಮತ್ತು ಮೂಲೆಶಂಕರ ದೇವಾಲಯಗಳನ್ನು (ಛಾಯಾ ಚಿತ್ರ–೪೪, ೪೫, ೪೬) ಕಟ್ಟಿಸಿದ ಈ ಸೋಮಣ್ಣನೇ ಸೋಮನಾಥಪುರದ ಆಲಯಕ್ಕೂ ಕರ್ತೃ. ಚನ್ನಕೇಶವಾಲಯ ಪೂರ್ವಾಭಿಮುಖವಾಗಿದ್ದರೆ ಮೂಲೆ ಶಂಕರನ ಆಲಯದ ದ್ವಾರ ದಕ್ಷಿಣಾಭಿಮುಖ. ಎರಡೂ ಒಂದೇ ವಿನ್ಯಾಸದ ಕಟ್ಟಡಗಳು. ಗರ್ಭಗೃಹ, ಸುಕನಾಸಿ, ನವರಂಗ, ಮುಖಮಂಟಪಗಳನ್ನುಳ್ಳ ಈ ಆಲಯದ ಹೊರಭಿತ್ತಿಯಲ್ಲಿ ಅರೆಗಂಬಗಳ ಅಲಂಕರಣ, ಆದರೆ ಶಿಲ್ಪರಹಿತ. ಚೆನ್ನಕೇಶವಾಲಯದ ಗರ್ಭಗೃಹದ ಮೇಲಿನ ಶಿಖರದಲ್ಲಿ ಹೆಚ್ಚು ಕೆತ್ತನೆಯ ಕೆಲಸಗಳಿಲ್ಲ. ಆದರೆ ಮೂಲೆಶಂಕರ ದೇವಾಲಯದ ವಿಮಾನದಲ್ಲಿ ಚಿಕ್ಕ ಚಿಕ್ಕ ಶಿಖರಗಳನ್ನು ಸಾಲಾಗಿ ಮೇಲಕ್ಕೆ ಎತ್ತರಿಸಲಾಗಿದೆ.



ಚಿತ್ರ – ೪೪


ಸಂಪೂರ್ಣ ಹೊಯ್ಸಳ ಶೈಲಿಯಲ್ಲಿ ಕಟ್ಟಲಾದ ಅಂತಿಮಘಟ್ಟದ ಗುಡಿಗಳಲ್ಲಿ ತಿಪಟೂರು ತಾಲೂಕಿನ ವಿಘ್ನಸಂತೆ ಗ್ರಾಮದಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯವನ್ನು ಹೆಸರಿಸಬೇಕು. ಮಲ್ಲಿದೇವ ದಂಡನಾಯಕನ ಮಕ್ಕಳಾದ ಅಪ್ಪಯ್ಯ, ಗೋಪಾಲ, ಮಾಧವ ದಂಡನಾಯಕರು ೧೨೮೬ರಲ್ಲಿ ಈ ದೇವಾಲಯವನ್ನು ಕಟ್ಟಿಸಿದರು. ಉತ್ತರಾಭಿಮುಖವಾಗಿರುವ ಈ

ತ್ರಿಕೂಟಾಚಲದ ಮಧ್ಯದಲ್ಲಿ ನವರಂಗ, ಪೂರ್ವಪಶ್ಚಿಮಗಳಲ್ಲಿ ಗರ್ಭಗುಡಿಗಳು, ದಕ್ಷಿಣದಲ್ಲಿ ಗರ್ಭಗುಡಿಯ ಮುಂದೆ ಸುಕನಾಸಿ, ಪೂರ್ವದಲ್ಲಿ ಮುಖಮಂಟಪ. ವಿಮಾನ ಮಧ್ಯದ ಗುಡಿಯ ಮೇಲೆ ನಾಲ್ಕು ಅಂತಸ್ತುಗಳುಳ್ಳದ್ದು. ಒಂದೊಂದು ಅಂತಸ್ತಿನಲ್ಲಿಯೂ ಅಲ್ಪ ಉಬ್ಬಿನ ಶಿಖರಗಳು. ಸುಕನಾಸಿ ಮೇಲಿನ ಶಿಖರದ ಮುಂಚಾಚಿನ ನಾಲ್ಕು ಕಡೆಗಳಲ್ಲಿ ಯೋಗಾನರಸಿಂಹ, ನಟರಾಜ, ಮಾಧವ ಮುಂತಾದ ದೇವರ ಶಿಲ್ಪಗಳು. ಮುಖಮಂಟಪದ, ನವರಂಗದ ಕಂಬಗಳಲ್ಲಿ ಅತಿಸೂಕ್ಷ್ಮವಾದ ಕೆತ್ತನೆಯ ಕೆಲಸವನ್ನು ಕಾಣಬಹುದಾಗಿದೆ.



ಚಿತ್ರ – ೪೫

ಅಂತಿಮ ಘಟ್ಟಕ್ಕೆ ಸೇರಿದಂತೆ ಮೇಲೆ ವಿವರಿಸಿದ ದೇವಾಲಯಕ್ಕೂ ಮೊದಲು ಕಟ್ಟಲಾದುದು ಸುಪ್ರಸಿದ್ಧವಾದ ತಿರುಮಕೂಡಲು ನರಸೀಪುರ ತಾಲ್ಲೂಕಿನ ಸೋಮನಾಥಪುರದ ಚನ್ನಕೇಶವ ದೇವಾಲಯ. ಹೊಯ್ಸಳ ಶೈಲಿಯ ಎಲ್ಲಾ ಅಂಗಗಳನ್ನು ಸುಸಂಬದ್ಧವಾಗಿ ಒಳಗೊಂಡ ಹೊಯ್ಸಳ ಶೈಲಿಯ ಉತ್ಕೃಷ್ಟ ಪ್ರತಿನಿಧಿ ಎಂದು ವರ್ಣಿಸಬಹುದಾದ ಈ ಆಲಯದ ನಿರ್ಮಾಣಕಾಲ ಸು. ಕ್ರಿ. ಶ. ೧೨೬೮. ನಿರ್ಮಾತೃವು ಮುಮ್ಮಡಿ ನರಸಿಂಹನ ದಂಡನಾಯಕನಾದ ಸೋಮನಾಥ. ಆ ಗ್ರಾಮ ಸರ್ವನಮಸ್ಯ ಮಹಾಗ್ರಹಾರ ವಿದ್ಯಾನಿಧಿ ಪ್ರಸನ್ನ ಸೋಮನಾಥಪುರವಾಗಿ ನೆಲೆಗೊಳಿಸಿಲ್ಪಟ್ಟುದೂ ಆತನಿಂದಲೇ. ಬೇಲೂರು ದೇವಾಲಯಕ್ಕಿಂತಲೂ ವಿಸ್ತಾರದಲ್ಲಿ ಕಿರಿದಾದ ಈ ಆಲಯ ಹೊಯ್ಸಳ ಶೈಲಿಯ ಪರಾಕಾಷ್ಠತೆಗೆ ಉತ್ತಮ ಮಾದರಿ. ೨೧೭' x ೧೭೭' ಅಡಿಗಳಷ್ಟು ವಿಸ್ತಾರವಾದ ಅಂಗಳದ ಮಧ್ಯೆ ಈ ಸಂಪುಟವನ್ನು ಸ್ಥಾಪಿಸಲಾಗಿದೆ. ಅಂಗಳದ ಸುತ್ತಲೂ ಪ್ರಾಕಾರದ ಗೋಡೆಗಳಿಗೆ ಹೊಂದಿಕೊಂಡು ಎರಡು ಅಂಕಣಗಳ ೬೪ ಕೈಸಾಲೆ ಮಂಟಪಗಳು. ಅಂಕಣಗಳನ್ನು ಕಂಬಗಳು ಹೊತ್ತಿವೆ. ಮಹಾದ್ವಾರ ಪೂರ್ವದ ಪ್ರಾಕಾರದ ಗೋಡೆಯ ಮಧ್ಯೆ ಇದೆ. ಇದರ ಮೇಲೆ ಎದ್ದು ಕಾಣುವ ಆದರೆ ಭಾರವಾಗಿ ಕೂತ ಗೋಪುರ. ಅಂಗಳದ ಮಧ್ಯೆ ಮಹಾದ್ವಾರವನ್ನು ಅಭಿಮುಖವಾಗಿ ಹೊಂದಿದ ತ್ರಿಕೂಟಾಚಲ, ನಾಲ್ಕು ಅಡಿಗಳ ಎತ್ತರದ ಜಗತಿಯ ಮೇಲಿದೆ. ಇದರಲ್ಲಿ ಹಲವಾರು ಚೂಪಾದ ಮುಂಚಾಚುಗಳು ಸಮಾನ ಸಂಖ್ಯೆಯ ಕೋನಗಳಾಗಿ ಇದನ್ನು ವಿಭಜಸಿವೆ. ಹಿಂಬದಿಯಲ್ಲಿ ನಕ್ಷತ್ರಾಕಾರದ ವಿನ್ಯಾಸಗಳಿವೆ. ಒಟ್ಟು ೧೬ ಕೋನಗಳು. ಜಗತಿಯನ್ನು ಹತ್ತುವ ಮೆಟ್ಟಿಲುಗಳ ಎರಡೂ ಕಡೆ ಕಿರುದೇವಾಲಯಗಳನ್ನು ಕೆತ್ತಿದೆ. ಕೆಳಗಿನ ಮೂಲೆಗಳಲ್ಲಿ ದೇವಾಲಯವನ್ನು ಹೊತ್ತಂತೆ ನಿಂತಿರುವ ಆನೆಗಳ ಚಿತ್ರಣ. ದೇವಾಲಯದ ವಿಸ್ತೀರ್ಣ ೮೭ 'x ೮೩'. ಸುತ್ತಲಿನ ಪ್ರದಕ್ಷಿಣಾ ಪಥ ಸುಮಾರು ೭ ಅಡಿಗಳಷ್ಟು ವಿಶಾಲ. ಮಂಜರಿಯಲ್ಲಿ ಒಂದು ಮುಖಮಂಟಪ ಮತ್ತು ನವರಂಗ. ಮುಖಮಂಟಪವನ್ನು ನಾಲ್ಕು ಹಾಗೂ ನವರಂಗವನ್ನು ೧೨ ಸ್ತಂಭಗಳು ಹೊತ್ತಿವೆ. ನವರಂಗದ ಹಿಂದೆ ಒಂದೊಂದು ಸುಖನಾಸಿಯುಳ್ಳ ಮೂರು ಗರ್ಭಗುಡಿಗಳು. ಒಂದು, ಮಧ್ಯದ್ದು ಪೂರ್ವಾಭಿಮುಖ. ಎಡಬಲಗಳಲ್ಲಿ ದಕ್ಷಿಣೋತ್ತರಮುಖವಾಗಿ ಇನ್ನೆರಡು, ಒಂದೊಂದರ ಮೇಲೂ ಶಿಖರಗಳು. ವಾಸ್ತವವಾಗಿ ಹೊಯ್ಸಳ ಶೈಲಿಯ ಶಿಖರಗಳು ಭಿನ್ನವಾಗದೆ ಉಳಿದಿರುವುದು ಈ ಒಂದು ಆಲಯದಲ್ಲಿ ಮಾತ್ರ. ಇವುಗಳ ತುಂಬ ಶಿಲ್ಪಗಳು ಅಡಕವಾಗಿವೆ. ಹಲವಾರು ಶಿಲ್ಪಗಳ ಕೆಳಗೆ ಶಿಲ್ಪಿಯ ಹೆಸರನ್ನು ಕೆತ್ತಲಾಗಿದೆ. ಶಿಖರಗಳಲ್ಲೂ ೧೬ ಕೋನಗಳು ಗರ್ಭಗುಡಿಯ ಕೆಳಗಣ ಗೋಡೆಯನ್ನೇ ಶಿಖರಗಳಲ್ಲಿ ಎತ್ತರಿಸಿ ಮುಂದುವರಿಸಲಾದಂತೆ ಕಂಡು ಬರುತ್ತದೆ. ಮೇಲೆ ಹೋದಂತೆಲ್ಲಾ ಸುತ್ತಲಿನ ಪ್ರಮಾಣ ಕಿರಿದಾಗುತ್ತ ಹೋಗಿದೆ. ಸುಖನಾಸಿಗಳ ಭಾಗದಲ್ಲಿ ಸ್ವಲ್ಪ ಮುಂಚಾಚು ಇದ್ದು ತುದಿಯಲ್ಲಿ ಮಗುಚಿ ಹಾಕಿದ ಬೋಗುಣಿಯಂತಿರುವ ಕಮಲದ ವಿನ್ಯಾಸವಿದೆ.



ಚಿತ್ರ – ೪೬

ಹೊಯ್ಸಳ ಶೈಲಿಯ ಎಲ್ಲ ಅಂಶಗಳು ಗರ್ಭಗುಡಿ, ಸುಕನಾಸಿ, ನವರಂಗ ಹಾಗೂ ಮುಖಮಂಟಪಗಳು ಈಗಾಗಲೇ ಹೇಳಿದಂತೆ ನವರಂಗದಲ್ಲಿ ೧೨ ಕಂಬಗಳಿದ್ದರೂ ಮಧ್ಯದ ನಾಲ್ಕನ್ನು ಹೊರತುಪಡಿಸಿ ಉಳಿದೆಲ್ಲವೂ ಒಂದೇ ಮಾದರಿಯವು. ಇವುಗಳಲ್ಲಿ ಎರಡು ನಕ್ಷತ್ರಾಕೃತಿಯಲ್ಲಿದ್ದು ೩೨ ಕೋನಗಳಿವೆ. ಕಂಬಗಳ ಕೆಳಭಾಗದಲ್ಲಿ ನಾಲ್ಕೂ ಮುಖಗಳಲ್ಲಿ ಯಕ್ಷರ ವಿಗ್ರಹಗಳಿವೆ. ೧೬ ಅಂಕಣಗಳಲ್ಲಿಯೂ ಭುವನೇಶ್ವರಿಗಳು. ಒಂದರಲ್ಲಿ ಅಷ್ಟದಿಕ್ಪಾಲಕರು, ಮತ್ತೊಂದು ಪರಿವಾರ ಸಮೇತ ಅಷ್ಟದಿಕ್ಪಾಲಕರು. ಎಲ್ಲವೂ ವೈವಿಧ್ಯಮಯ. ಹೊರಭಿತ್ತಿಗಳ ಕೆಳಗೆ ಪಟ್ಟಿಗಳಲ್ಲಿ ಎಂದಿನಂತೆ ಆನೆಗಳು, ಅಶ್ವಾರೋಹಿಗಳು, ಲತಾವಲ್ಲರಿ, ಮಕರ, ಹಂಸಗಳು, ಜೊತೆಗೆ ಪೌರಾಣಿಕ ಕತೆಗಳ ಚಿತ್ರೀಕರಣಕ್ಕಾಗಿಯೇ ಒಂದು ಪಟ್ಟಿ, ಒಂದೊಂದು ಏಳು ಅಂಗುಲಗಳಷ್ಟು ಅಗಲ. ಇವುಗಳ ಕೂಲಂಕಷ ಅಧ್ಯಯನದಿಂದ ಅಂದಿನ ಸಾಮಾಜಿಕ, ಆರ್ಥಿಕ ಜನಜೀವನ, ಸೌಂದರ್ಯ ಕಲ್ಪನೆ, ಕಲಾಪೋಷಣೆ ಇತ್ಯಾದಿ ಹಲವಾರು ಅಂಶಗಳನ್ನು ತಿಳಿಯಬಹುದು. ಈ ಕೆಲಸವನ್ನು ಇತ್ತೀಚೆಗೆ ಪುರಾತತ್ವ ಇಲಾಖೆಯ ನಿರ್ದೇಶಕರಾದ ಡಾ. ದೇವರಾಜರು ಮಾಡಿದ್ದಾರೆ. ಮಲ್ಲತಮ್ಮ, ಮಸಣಿತಮ್ಮ, ಎಲೆಮಸೈಯ್ಯ, ಚೌಡಯ್ಯ, ಬಾಲಯ್ಯ ಇತ್ಯಾದಿ ಹಲವಾರು ರೂವಾರಿಗಳು. ಉತ್ತರ, ದಕ್ಷಿಣ ಗರ್ಭಗುಡಿಗಳಲ್ಲಿ ಜನಾರ್ದನ, ವೇಣುಗೋಪಾಲರ ವಿಗ್ರಹಗಳಿವೆ. ಮಧ್ಯದ ಗುಡಿಯಲ್ಲಿದ್ದಿತೆಂದು ಹೇಳಲಾದ ಚನ್ನಕೇಶವನ ವಿಗ್ರಹ ಈಗ ಇಲ್ಲ.

ಸಂಪದ್ಭರಿತ ಅಲಂಕರಣೆಗಳಿಂದ ಕಣ್ಣು ಕೋರೈಸುವಂತೆ ನವ್ಯವಾಗಿ ಕೆತ್ತಿದ ಮೂರ್ತಿಗಳು, ವಿನ್ಯಾಸಗಳು ಈ ಆಲಯದಲ್ಲಿದ್ದರೆ ಈ ಆಲಯವನ್ನು ಕಟ್ಟಿಸಿದ ಸೋಮನಾಥನೇ ಕಟ್ಟಿಸಿದ ಪಂಚಲಿಂಗೇಶ್ವರಾಲಯದಲ್ಲಿ ಈ ಶಿಲ್ಪಿಗಳು ಸರಳವಾದ, ಆದರೂ ಅತ್ಯಂತ ಸುಂದರವಾದ ಕಟ್ಟಡಗಳನ್ನು ಕಟ್ಟುವುದರಲ್ಲಿಯೂ ನಿಪುಣರಾಗಿದ್ದರೆಂಬ ಅಂಶವನ್ನು ಕಾಣಬಹುದು. ಹೆಸರೇ ಸೂಚಿಸುವಂತೆ ಇದು ಪಂಚಕೂಟಾಚಲ. ಒಂದರ ಪಕ್ಕದಲ್ಲೇ ಒಂದು ಗುಡಿ. ಸುಕನಾಸಿಯ ಮುಂಭಾಗದ ಒಂದು ಸಾಲು ಅಂಕಣಗಳು ಮಾತ್ರ ಒಂದಕ್ಕೊಂದು ಜೋಡಿಸಲ್ಪಟ್ಟಿವೆ. ಆದರೆ ಐದು ಗುಡಿಗಳನ್ನು ಒಂದಾಗಿಸಿರುವುದು ನೀಳವಾದ ಮೊಗಸಾಲೆ. ಜಗತಿಯಿಲ್ಲದ ಆಲಯಗಳು. ಗೋಡೆಗಳಲ್ಲಿ ಹೆಚ್ಚಿನ ಅಲಂಕರಣಗಳಿಲ್ಲ. ಅರೆಗಂಬಗಳೂ ಅವುಗಳ ಮೇಲೆ ಹೂಬಳ್ಳಿಗಳೂ ಗೋಡೆಗಳ ನಡುವಣ ಇನ್ನೊಂದು ಕಾರ್ನೀಸದಲ್ಲೂ ಗಂಟೆಯಾಕಾರದಲ್ಲಿರುವ ಅರೆಗಂಬಗಳು. ಗರ್ಭಗುಡಿಗಳ ಮೇಲೆ ಹಲವು ಅಂತಸ್ತುಗಳ ಚೌಕವಿನ್ಯಾಸದ ಗೋಪುರ. ಆದರೆ ವಿಶೇಷವೆಂದರೆ ಎಲ್ಲೂ ಮೂರ್ತಿಶಿಲ್ಪಗಳಾಗಲೀ ಬಳ್ಳಿ ಸುರುಳಿಗಳಾಗಲೀ ಇಲ್ಲ. ಗರ್ಭಗುಡಿಗಳಲ್ಲಿ ಮೂರ್ತಿಗಳೂ ಇಲ್ಲ. ದುಂಡಾದ ಪಾಣಿಪೀಠಗಳು ಬುಡಮೇಲಾಗಿ ಬಿದ್ದಿವೆ. ಇಲ್ಲಿ ಶಿವಪಂಚಾಯತನ ಮೂರ್ತಿಗಳಿದ್ದಿರಬೇಕೆಂದು ಊಹಿಸಲಾಗಿದೆ.

ಇದಾದ ಬಳಿಕ ಹೊಯ್ಸಳ ರಾಜ್ಯ ಅಸ್ತಂಗತವಾಯಿತು. ಅದರೊಂದಿಗೆ 'ಹೊಯ್ಸಳ' ಎನಿಸಿದ ಶೈಲಿಯೂ ಕಾಣದಾಯಿತು. ಹೊಯ್ಸಳ ಶೈಲಿಯ ಕೆಲವು ವಿಶಿಷ್ಟ ಅಂಶಗಳನ್ನು ಈಗ ಗಮನಿಸಬಹುದು. ಉತ್ತರದಲ್ಲಿ ಚಾಲುಕ್ಯರ, ದಕ್ಷಿಣದಲ್ಲಿ ಚೋಳರ ಸಂಪರ್ಕಗಳಿದ್ದ ಕಾರಣ ವಾಸ್ತುಶಿಲ್ಪದ ದೃಷ್ಟಿಯಿಂದಲೂ ಹಲವು ಕೊಟ್ಟು ತೆಗೆದುಕೊಳ್ಳುವ ಅಂಶಗಳನ್ನು ನಾವು ಕಾಣುತ್ತೇವೆ. ದ್ರಾವಿಡ ಶೈಲಿಯ ಭಾಗವಾದ ಗ್ರಾನೈಟ್ ಶಿಲೆಯ ದೇವಾಲಯಗಳು ಹಲವು ಹೊಯ್ಸಳರ ಆಲಯಗಳಲ್ಲೂ ಇವೆ. ಇವುಗಳಲ್ಲಿ ಜಗತಿ, ಭಿತ್ತಿಯ ಮೇಲಿನ ಅಲಂಕರಣಗಳಿಲ್ಲ. ತಲಕಾಡಿನ ಕೀರ್ತಿನಾರಾಯಣ, ಶ್ರವಣಬೆಳಗೊಳದ ಕೆಲವು ಬಸದಿಗಳು ಇದಕ್ಕೆ ಉದಾಹರಣೆಗಳು. ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ಕಾಣಿಸಿಕೊಂಡಿರುವ ಕಪ್ಪುಶಿಲೆಯ ಕೆಲವು ದೇವಾಲಯಗಳಲ್ಲಿ ಜಗತಿ, ನಕ್ಷತ್ರಾಕಾರದ ಅಥವಾ ಆಯಾಕಾರದ ತಳವಿನ್ಯಾಸಗಳು. ಅಲ್ಲಲ್ಲಿ ಹಿನ್-ಮುನ್ ಸರಿತಗಳು, ಭಿತ್ತಿಯಲ್ಲಿ ಅರೆಗಂಬಗಳು, ಗೂಡುಗಳು. ಆದರೆ ಶಿಲ್ಪಾಲಂಕರಣಗಳು, ಲತಾವಿನ್ಯಾಸಗಳು, ಕುಸುರಿಯ ಕೆತ್ತನೆಗಳು ಇವುಗಳಲ್ಲಿಲ್ಲ. ಆದರೆ ಅಲಂಕೃತ ದ್ವಾರಬಂಧಗಳು, ಯಂತ್ರಗಳಿಂದ ಕಡೆದ ಕಂಬಗಳು, ಜಾಲಂದರಗಳು ಚಾಲುಕ್ಯ ಹಾಗೂ ಹೊಯ್ಸಳದ ಶೈಲಿಗಳ ಸಮಾನ ಅಂಶಗಳು. ಆದರೂ ಹೊಯ್ಸಳ ಶೈಲಿ ತನ್ನದೇ ಆದ ವ್ಯಕ್ತಿತ್ವವನ್ನು ಪಡೆದಿದೆ. ಮುಂಚಾಚು ಹಿಂಚಾಚುಗಳಿಂದ ಗೋಡೆಗಳನ್ನು ಒಡೆದಂತೆ ಮಾಡಿ ನಕ್ಷತ್ರಾಕಾರದ ತಳವಿನ್ಯಾಸವನ್ನು ರೂಪಿಸಿರುವುದೊಂದು ಇದರ ವೈಶಿಷ್ಟ್ಯ. ಒಂದೇ ಕೇಂದ್ರವಿರುವ ಚೌಕಾಕಾರದ ಸಮಕೋನಗಳನ್ನು ಒಂದು ಅಕ್ಷದ ಮೇಲೆ ಉಂಟಾಗುವ ೮, ೧೨, ೧೬ ಕೋನಗಳನ್ನು ರೂಪಿಸಿಕೊಳ್ಳಲಾಗಿದೆ. ಈ ವಿನ್ಯಾಸ ಜಗತಿಯಿಂದ ವಿಮಾನದ ತುದಿಯ ಶಿಖರದವರೆಗೂ ಮೇಲೇರುತ್ತಾ ಹೋಗುತ್ತವೆ. ಜಗತಿಗಳು ಸಾಮಾನ್ಯವಾಗಿ ೪ ಅಡಿಗಳಷ್ಟು ಎತ್ತರ, ಹೆಚ್ಚು ವಿಸ್ತಾರವುಳ್ಳದ್ದು. ಬಳಪದ ಕಲ್ಲು ಭಾರ ಹೊರಲು ಅಸಮರ್ಥವಾದ ಕಾರಣ ದೇವಾಲಯಗಳು ಗಿಡ್ಡಾದುವು. ಈ ಕೊರತೆಯನ್ನು ನೀಗಲು ಜಗತಿಯನ್ನೆತ್ತರಿಸಿ ಅದರ ಮೇಲೆ ದೇವಾಲಯಗಳನ್ನೆಬ್ಬಿಸಬೇಕಾಯಿತು.

ಹೊರಭಿತ್ತಿಗಳ ಕೆಳಗಿನ ಅರ್ಧಭಾಗದಲ್ಲಿ ಪಟ್ಟಿಗಳಿದ್ದು ಅವುಗಳಲ್ಲಿ ಸೂಕ್ಷ್ಮವಾಗಿ ಕೆತ್ತಿದ ಆನೆಗಳು, ಕುದುರೆಗಳು, ನರ್ತನಗಳು, ಸಂಗೀತವಾದ್ಯಗಳನ್ನು ಬಾರಿಸುವವರು, ಲತೆಗಳು, ಹೂಬಳ್ಳಿಗಳು ಮುಂತಾದವುಗಳನ್ನು ಕಾಣಬಹುದು. ಕೆಲವು ಪಟ್ಟಿಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳು ಮುಂತಾದ ಕಾವ್ಯ-ಕಥನಗಳಿಂದ ಆಯ್ದ ಕಥಾಭಾಗಗಳನ್ನು ಚಿತ್ರಿಸಲಾಗಿದೆ. ಇವುಗಳಲ್ಲಿ ಸಮಕಾಲೀನ ಜನಜೀವನದ ಅಂಶಗಳನ್ನು ಗುರುತಿಸಬಹುದಾಗಿದೆ. ನವರಂಗ ಮತ್ತು ಮುಖಮಂಟಪಗಳ ಗೋಡೆಗಳ ಮೇಲೆ ಹಿರಿಯ ಗಾತ್ರದ ಶಿಲ್ಪಗಳನ್ನು ರಂಧ್ರಗಳನ್ನು ಕೊರೆದ ಜಾಲಂದರಗಳನ್ನು ಅಳವಡಿಸಲಾಗಿದೆ. ಇವುಗಳಲ್ಲಿ ಸಾಮಾನ್ಯವಾಗಿ ಅರಸರ ದರ್ಬಾರು ಹಾಗೂ ಇತರ ಕಥಾನಕಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಜಾಲಂದರಗಳಲ್ಲಿ ಸೂಕ್ಷ್ಮ ವಿನ್ಯಾಸಗಳನ್ನು ಸುಂದರವಾಗಿ ಬಿಡಿಸಲಾಗಿದೆ. ಸುಕನಾಸಿ, ಗರ್ಭಗೃಹಗಳ ಹೊರಭಿತ್ತಿಗಳಲ್ಲಿಯೂ ಮಧ್ಯಭಾಗದಲ್ಲಿ ೨-೩ ಅಡಿಗಳಷ್ಟು ಎತ್ತರದ, ದೇವ-ದೇವಿಯರ, ಪೌರಾಣಿಕ ನಾಯಕರ ಶಿಲ್ಪಗಳಿವೆ. ಒಮ್ಮೊಮ್ಮೆ ಪುರಾಣಗಳಲ್ಲಿನ ಕಥಾನಕಗಳನ್ನೊಳಗೊಂಡ ಫಲಕಗಳೂ ಇರುತ್ತವೆ. ಇವು ದೇವಾಲಯದ ಶಿಲ್ಪ ಸೌಂದರ್ಯವನ್ನು ಹೆಚ್ಚಿಸುತ್ತವೆ. ಈ ಫಲಕಗಳ ಮೇಲೆ ಕಾರ್ನೀಸು ಭಾಗದವರೆವಿಗೂ ಸಣ್ಣಸಣ್ಣ ಗೋಪುರಗಳನ್ನೂ ಕಿರಿದಾದ ಶಿಲ್ಪಗಳನ್ನೂ ಕೆತ್ತಿದೆ. ಗರ್ಭಗೃಹದ ಮೇಲೆ ಪಿರಮಿಡ್ಡಿನಾಕಾರದ ಅಥವಾ ನಕ್ಷತ್ರ ವಿನ್ಯಾಸದ ಸುತ್ತಿ ಮೇಲೇಳುವ ಶಿಖರಗಳು. ಅವುಗಳಲ್ಲೂ ಕಿರುಗುಡಿಗಳ ವಿನ್ಯಾಸಗಳು, ಅವುಗಳ ಗೂಡುಗಳೊಳಗೆ ದೇವತೆಗಳ ಶಿಲ್ಪಗಳು. ಈ ಶಿಖರ ವಿನ್ಯಾಸಗಳು ಈಗ ಅನೇಕ ಗುಡಿಗಳಲ್ಲಿ ಶಿಥಿಲವಾಗಿ ಕಾಣೆಯಾಗಿವೆ. ಶಿಖರದ ಮುಂಭಾಗ ಸುಕನಾಸಿಯ ಛಾವಣಿಗೂ ಮುಂಚಾಚಿದ್ದು ಬಂಡಿಯಾಕಾರದ ಇದರ ಗುಮ್ಮಟದ ಮೇಲೆ ಹೊಯ್ಸಳರ, ಸಳನು ಸಿಂಹವನ್ನು ಮರ್ದಿಸುವ ಲಾಂಛನವಿರುತ್ತದೆ. ಹೊಯ್ಸಳರ ಗುಡಿಗಳಲ್ಲಿನ ತಿರುಗಣೆ ಯಂತ್ರದಲ್ಲಿ ಹೊಳಪನ್ನಿತ್ತ ಕಂಬಗಳು ವಿಶಿಷ್ಟ ರೀತಿಯವು. ಕೆಳಭಾಗ ದೀರ್ಘ ಚತುರಸ್ರ, ಮಧ್ಯ ಭಾಗದಲ್ಲಿ ತಲೆಕೆಳಗಾಗಿಟ್ಟ ಘಂಟೆಯ ವಿನ್ಯಾಸ, ಮೇಲೆ ವೃತ್ತಾಕಾರ. ಇವು ಮೇಲಿನ ಚೌಕ ಅಥವಾ ವೃತ್ತಾಕಾರದ ಬೋದಿಗೆಗಳಿಗೆ ಆಧಾರವಾಗಿ ನಿಂತಿವೆ. ಬೋದಿಗೆಯ ಮೇಲೆ ಛಾವಣಿಯ ಅಡ್ಡದೂಲಗಳು. ಸೂಕ್ಷ್ಮವಾದ ಕೆತ್ತನೆಗಳನ್ನೊಳಗೊಂಡ ಈ ಸ್ತಂಭಗಳು ಸ್ವರ್ಣಕಾರನ, ದಂತದಲ್ಲಿ ಚಿತ್ರಬಿಡಿಸುವವನ ಕಲೆಯನ್ನು ಹೋಲುತ್ತದೆ. ಬೋದಿಗೆ ಛಾವಣಿಗಳನ್ನಾಧರಿಸಿ, ಸುಮಾರು ೧೩೫ ಡಿಗ್ರಿಗಳ ಬಾಗಿದ ಕೋನದಲ್ಲಿ ಮದನಿಕೆಯರ ಅತಿಸುಂದರವಾದ ವಿಗ್ರಹಗಳು. ಅವನ್ನು ಕಂಡೊಡನೆ ಅಲ್ಲಿಂದ ಇಳಿದು ಬರುತ್ತವೇನೋ ಎಂಬ ಭಾವನೆ ಉಂಟಾಗುತ್ತದೆ. ನೃತ್ಯದಲ್ಲಿ, ಗೀತದಲ್ಲಿ, ವಾದ್ಯದಲ್ಲಿ, ಬೇಟೆಯಲ್ಲಿ, ವಸ್ತ್ರಧಾರಣೆಯಲ್ಲಿ ತೊಡಗಿರುವಂತೆ ತೋರಿಸಲ್ಪಟ್ಟ ಈ ಶಿಲ್ಪಗಳು ಸ್ತ್ರೀ ಸೌಂದರ್ಯದ ಪರಮೋಚ್ಚಘಟ್ಟದ ಮಾದರಿಗಳು, ಹೊಯ್ಸಳ ಶಿಲ್ಪಿಯ ಅತ್ಯಪೂರ್ವ ಕೊಡುಗೆಗಳು. ಇಲ್ಲಿ ಲಾಲಿತ್ಯ, ಸಹಜತೆ, ಹಾಸ್ಯ, ಚೇಷ್ಟೆಗಳನ್ನು ಯಥಾವತ್ತಾಗಿ ಕಾಣಬಹುದು. ಸಭಾಮಂಟಪದ ಮಧ್ಯೆ ನಾಲ್ಕು ಕಂಬಗಳನ್ನಾಧರಿಸಿ ಕಡೆಯಲಾದ ಆಳವಾದ ಭುವನೇಶ್ವರಿಗಳು. ಅಷ್ಟಕೋನಗಳ ತಲೆಕೆಳಗಾದ ಕಮಲದ ಆಕಾರ ಪಡೆದಿವೆ. ಒಳಗೆ ಅಷ್ಟದಿಕ್ಪಾಲಕರ, ವಿಷ್ಣುವಿನ ದಶಾವತಾರಗಳನ್ನು ಸೂಚಿಸುವ ಶಿಲ್ಪಗಳು. ಲತಾಗುಲ್ಮಗಳ ಪಟ್ಟಿಗಳ ಮಧ್ಯದಲ್ಲಿ ಕಮಲದ ಮಧ್ಯದ ದಿಂಡು. ಅದರ ತುದಿಯಲ್ಲಿ ನಟರಾಜ ಅಥವಾ ನರಸಿಂಹರ ಶಿಲ್ಪಗಳು.

ಹೊಯ್ಸಳರ ದೇವಾಲಯಗಳನ್ನು ಸೌಂದರ್ಯದ ಸ್ವರ್ಗಸೀಮೆಗಳೆಂದು ವರ್ಣಿಸಲಾಗಿದೆ. ಇವನ್ನು ಕೆತ್ತಿದ ಶಿಲ್ಪಿಗಳು ಸರಸ್ವತೀ ಗಣದಾಸಿಯರೆಂದು ಬಿರುದಾಂಕಿತರಾದವರು, ಸರಸ್ವತಿಯ ಮಾನಸ ಪುತ್ರರು. ಪೆರ್ಸಿಬ್ರೌನ್ ಹೇಳುತ್ತಾನೆ : The temple builder became a story teller in stone so that his productions appertain more to an illuminated missal transmuted into sculpture than to a full scale archetectural composition. What they produced was in reality not architecutre, but applied art. ಇದಕ್ಕಿಂತಲೂ ಹೆಚ್ಚಿನ ವಿವರಣಾತ್ಮಕ ಟೀಕೆ ಅಸಾಧ್ಯ.

❐

ಅವನತಿಯ ಕಾಲ

ಕ್ರಿಸ್ತಶಕ ೧೩೩೬ರಲ್ಲಿ ದಕ್ಷಿಣ ಭಾರತದಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯಾಯಿತು. ಉತ್ತರ ಭಾರತದಲ್ಲಿ ಆಳುತ್ತಿದ್ದ ಖಿಲ್ಜಿ ಸಂತತಿಯ ಅಲಾಉದೀನನಿಗೆ ದಕ್ಷಿಣದ ರಾಜ್ಯಗಳ ಅಪಾರ ಸಂಪತ್ತಿನ ಆಕರ್ಷಣೆ ಇತ್ತು. ಆ ರಾಜ್ಯಗಳನ್ನು ಆಕ್ರಮಿಸಿ ಅದರ ಆಡಳಿತದ ಜವಾಬ್ದಾರಿ ಹೊರಲು ಮಾತ್ರ ಆತನು ಸಿದ್ಧನಾಗಿರಲಿಲ್ಲ. ಎಂತಲೇ ಸುಲ್ತಾನನಾಗುವ ಮೊದಲೇ, ೧೨೯೫ರಲ್ಲಿ ಸೇಉಣರ ರಾಜಧಾನಿಯಾದ ದೇವಗಿರಿಯನ್ನು ಮುತ್ತಿ ಅಲ್ಲಿನ ಸಂಪತ್ತನ್ನು ಸಾಗಿಸಿದನು. ಮರುವರ್ಷ ದೆಹಲಿಯ ಸುಲ್ತಾನನಾದ ಬಳಿಕ ತನ್ನ ದಂಡನಾಯಕ ಮಲ್ಲಿಕ್ ಕಾಫರನನ್ನು ೧೩೦೭ರಲ್ಲಿ ದಕ್ಷಿಣಕ್ಕೆ ಕಳುಹಿಸಿದ. ಮೂರನೆಯ ಬಾರಿ ದಕ್ಷಿಣಕ್ಕೆ ದಂಡೆತ್ತಿದ ಅಲಾಉದೀನನ ಸೈನ್ಯ ವಾರಂಗಲ್ಲನ್ನು ಮುತ್ತಿತು. ಸೇಉಣರ ರಾಮಚಂದ್ರ ಈ ಬಾರಿ ಮಹಮದೀಯರಿಗೆ ನೆರವು ನೀಡಬೇಕಾಯಿತು. ಮುಂದಿನ ಸರದಿ ಹೊಯ್ಸಳರದು. ೧೩೧೧ರಲ್ಲಿ ಮುಮ್ಮಡಿ ಬಲ್ಲಾಳ ಸೋತ. ಕೆಲವು ವರ್ಷಗಳಲ್ಲಿ ಸೇಉಣರ ರಾಜ್ಯ ಕುಸಿದು ಅಲ್ಲಿ ಮಹಮದೀಯ ಪ್ರಾಂತಾಧಿಕಾರಿಯೊಬ್ಬ ನೇಮಕಗೊಂಡ. ೧೩೨೩ರಲ್ಲಿ ವಾರಂಗಲ್ಲು ಅಲಾಉದೀನನ ವಶವಾಯಿತು. ತಮಿಳುನಾಡಿನ ಪಾಂಡ್ಯರು ಸಹ ರಾಜ್ಯ ಕಳೆದುಕೊಂಡು ಮಧುರೆಯಲ್ಲಿ ಒಬ್ಬ ಸುಲ್ತಾನನ ಆಳ್ವಿಕೆ ಆರಂಭವಾಯಿತು. ರಾಯಚೂರಿನ ಕಂಪಿಲಿಯಲ್ಲಿ ಆಳುತ್ತಿದ್ದ ಸಣ್ಣ ಸಾಮಂತ ಮನೆತನ ಸಹ ೧೩೨೭ರಲ್ಲಿ ಕಣ್ಮರೆಯಾಯಿತು.

ಈ ವೇಳೆಗೆ ದೆಹಲಿಯಲ್ಲಿ ತುಘಲಕ್ ಮನೆತನದ ಮಹಮ್ಮದನು ಅಧಿಕಾರಕ್ಕೆ ಬಂದಿದ್ದನು. ಸಮಗ್ರ ಭಾರತದ ಚಕ್ರವರ್ತಿಯಾಗುವ ಕನಸು ಈತನದಾಗಿದ್ದಿತು. ಎಂತಲೇ ಹಿಂದೂ ಅರಸರನ್ನು ಹೊರದೂಡಿ ತನ್ನ ಅಧಿಕಾರಿಗಳನ್ನು ಅಲ್ಲಿ ಪ್ರಾಂತಾಧಿಕಾರಿಗಳಾಗಿ ನೇಮಿಸಿದನು. ಹೊಯ್ಸಳರಾಜ್ಯ ಮಾತ್ರ ಇನ್ನೂ ಅಂತಿಮ ಉಸಿರನ್ನು ಎಳೆಯುತ್ತಿತ್ತು. ಮುಮ್ಮಡಿ ಬಲ್ಲಾಳ ನಾಡನ್ನು ಪರದೇಶೀಯರಿಂದ ರಕ್ಷಿಸಲು ಬಹಳಷ್ಟು ಶ್ರಮಿಸಿದ. ಆತನು ಸಾಯುವ ವೇಳೆಗೆ ವಿಜಯನಗರ ಸಾಮ್ರಾಜ್ಯ ಉದಯಿಸಿತ್ತು. ದಕ್ಷಿಣ ಭಾರತದ ಹಿಂದೂ ಅರಸರು ಮಹಮದೀಯರ ದಾಳಿಗಳ ಬಗೆಗೆ ಮೊದಲಿನಿಂದಲೂ ಉದಾಸೀನರಾಗಿದ್ದು ಪರಸ್ಪರ ಕದನಗಳಲ್ಲಿ ತೊಡಗಿದ್ದರು. ನೈಜ ಪರಿಸ್ಥಿತಿಯನ್ನು ಅರಿಯುವ ವೇಳೆಗೆ ಪರಿಸ್ಥಿತಿ ಹದಗೆಟ್ಟಿತ್ತು. ಅಳಿದುಳಿದ ಅರಸರಲ್ಲಿ ಮುಮ್ಮಡಿ ಬಲ್ಲಾಳನೊಬ್ಬ. ತುಂಗಭದ್ರೆಯ, ಉತ್ತರದಲ್ಲಿ ಹೊಸದುರ್ಗ (ವಿರೂಪಾಕ್ಷ ಹೊಸದುರ್ಗ, ಹೊಸಪಟ್ಟಣ) ವೆಂಬ ಕೋಟೆಯನ್ನು ಕಟ್ಟಿಸಿ ೧೩೩೦ ರಿಂದ ೧೩೪೦ರವರೆಗೆ ಅಲ್ಲಿ ನೆಲಸಿದ. ಆಡಳಿತ ವಿಕೇಂದ್ರೀಕರಣ ಮಾಡಿ, ಅಧಿಕಾರಿಗಳಿಗೆ, ಸಂಬಂಧಿಕರಿಗೆ ಹೆಚ್ಚಿನ ಸಮಾನ ಅಧಿಕಾರವನ್ನು ನೀಡಿದ. ಆತನಿಗೆ ನೆರವು ನೀಡಿದವರಲ್ಲಿ ಸೋದರರಾದ ಹರಿಯಪ್ಪ ಒಡೆಯ (ಹರಿಹರ), ಬುಕ್ಕ, ಕಂಪಣ್ಣ, ಮಾರಪ್ಪ ಮತ್ತು ಮುದ್ದಪ್ಪರು ಪ್ರಮುಖರು. ಮಹಾಮಂಡಲೇಶ್ವರ ಎನಿಸಿಕೊಂಡ ಹರಿಹರ ೧೩೩೬ ರಿಂದ ಅಧಿರಾಜನಾಗಿದ್ದರೂ ಸ್ವತಂತ್ರವಾಗಿ ಕಾರ್ಯಗಳನ್ನು ನಿಯೋಜಿಸಿ ನಂತರ ಒಂದು ದಶಕದ ಒಳಗೆ ಸ್ವತಂತ್ರ ರಾಜ್ಯವನ್ನು ಕಟ್ಟಿದ. ೧೩೪೭ರಲ್ಲಿ ಗುಲ್ಬರ್ಗದಲ್ಲಿ ಬಹಮನಿ ಸುಲ್ತಾನರ ರಾಜ್ಯ ಸ್ಥಾಪನೆಯಾಯಿತು. ಇವರು ವಿಜಯನಗರದ ಅರಸರೊಡನೆ ಸತತವಾಗಿ ಹೋರಾಡಿದರು.

ಫಲವತ್ತಾದ ಕೃಷ್ಣ–ತುಂಗಭದ್ರಾ ಬಯಲು ಪ್ರದೇಶವನ್ನು ಆಕ್ರಮಿಸುವುದು ಈ ಕದನಗಳ ಉದ್ದೇಶಗಳಲ್ಲಿ ಒಂದಾಗಿತ್ತು. ವಿಜಯನಗರ ಸಾಮ್ರಾಜ್ಯದ ವಿಶಿಷ್ಟ ಧ್ಯೇಯಗಳಲ್ಲಿ ಪರರಾಜ್ಯ, ಪರಧರ್ಮ, ಪರಸಂಸ್ಕೃತಿಗಳು ಸ್ವರಾಜ್ಯ, ಸ್ವಧರ್ಮ, ಸ್ವಸಂಸ್ಕೃತಿಗಳಿಗೆ ಗಂಡಾಂತರವನ್ನುಂಟು ಮಾಡಿದ ಸಂದರ್ಭದಲ್ಲಿ ಸ್ವಶಕ್ತಿಯನ್ನು ಸಂವರ್ಧಿಸಿ, ಹಿಂದೂ ಧರ್ಮವನ್ನು, ಭಾರತೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವುದು ಒಂದಾಗಿದ್ದಿತು. ಇದಕ್ಕಾಗಿ ಎಲ್ಲ ಧರ್ಮಗಳನ್ನು ಪೋಷಿಸುವ, ಪರಂಪರಾಗತವಾದ ವಿದ್ಯೆ–ಜ್ಞಾನ ಶಾಖೆಗಳನ್ನು ಊರ್ಜಿತಗೊಳಿಸುವ ಸ್ವಭಾಷೆ– ಸಾಹಿತ್ಯ– ಕಲೆಗಳಿಗೆ ಪ್ರೋತ್ಸಾಹ ನೀಡುವ ಅಭಿಲಾಷೆಯನ್ನು ಈ ಸಾಮ್ರಾಜ್ಯದ ಅರಸರು ಹೊಂದಿದ್ದರು.

ತಮ್ಮ ಉದ್ದೇಶದ ಸಾಫಲ್ಯತೆಗಾಗಿ, ಧರ್ಮಪ್ರಚಾರಕ್ಕಾಗಿ ವಿಜಯನಗರದ ಕಾಲದಲ್ಲಿ ದೇವಾಲಯಗಳನ್ನು ಮಾಧ್ಯಮಗಳಾಗಿ ಉಪಯೋಗಿಸಿಕೊಳ್ಳಲಾಯಿತು. ದೇವರ ಪೂಜೆಗೆ ಸಂಬಂಧಿಸಿದಂತೆ ಹೊಸ ಹೊಸ ಉತ್ಸವಗಳನ್ನು ಅಳವಡಿಸಿಕೊಳ್ಳಲಾಯಿತು. ಹಿಂದೂ ಸಂಸ್ಕೃತಿಯ ಎಲ್ಲ ವೈಶಿಷ್ಟ್ಯಗಳನ್ನೂ ಸಂರಕ್ಷಿಸಿ, ಪುನಶ್ಚೇತನಗೊಳಿಸಿ ವೈಭವೋಪೇತವಾಗಿ ಮಾಡುವುದು ಅಂದಿನ ಅರಸರ ಪ್ರಮುಖ ಕರ್ತವ್ಯವಾಗಿತ್ತು. ಎಂತಲೇ ಸಂಗೀತ, ಲಲಿತಕಲೆ ಮುಂತಾದವುಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಯಿತು.

ಧರ್ಮದ ಪುನರುತ್ಥಾನ ಕಾರ್ಯದ ಪರಿಣಾಮವಾಗಿ ಧಾರ್ಮಿಕ, ವೈದಿಕ ಗ್ರಂಥಗಳೂ ಅವುಗಳಿಗೆ ಟೀಕೆಗಳೂ ಕಾವ್ಯ, ನಾಟಕ, ಪುರಾಣಾದಿ ಸಾಹಿತ್ಯ ಪ್ರಕಾರಗಳೂ ಹುಟ್ಟಿಕೊಂಡುವು. ಈ ಪೌರಾಣಿಕ, ಕಾವ್ಯಾತ್ಮಕ ಕತೆಗಳ ಪ್ರಾತ್ಯಕ್ಷಿಕೆಗಳನ್ನು ಮೂಡಿಸಲಾಯಿತು. ಇದಕ್ಕಾಗಿ ಶಿಲ್ಪಿಗಳು, ರೂವಾರಿಗಳು ಶ್ರಮಿಸಿದರು. ವೀರತ್ವಕ್ಕೆ, ಶೌರ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಲೆಂಬಂತೆ ಆ ಗುಣಗಳ ಮೈವೆತ್ತಿ ಬಂದಂತಿದ್ದ ರಾಮ, ಹನುಮಂತ, ಕೃಷ್ಣ, ಭೀಮ, ಅರ್ಜುನ ಮುಂತಾದವರ ಕತೆಗಳನ್ನು ಶಿಲ್ಪಗಳಲ್ಲಿ ಮೂಡಿಸಲಾಯಿತು. ಸೈನ್ಯದ ವಿವಿಧ ಅಂಗಗಳಾದ ಪದಾತಿ, ಆನೆಗಳು, ಕುದುರೆಗಳು, ಯುದ್ಧದ ಚಿತ್ರಗಳು ಈ ಮೊದಲಿಲ್ಲದಷ್ಟು ವಿಪುಲವಾಗಿ ಕಲಾವಸ್ತುಗಳಾದುವು. ಪ್ರಜೆಗಳನ್ನು ವೀರಪುರುಷರನ್ನಾಗಿ ಮಾಡಲು ನಡೆಸಿದ ಯತ್ನಗಳಲ್ಲಿ ಇದು ಒಂದಾಗಿತ್ತು. ಇವು ಪ್ರಜೆಗಳಿಗೆ ಸ್ಫೂರ್ತಿಯನ್ನು ನೀಡಿ ಅವರು ದೇಶದ ರಕ್ಷಣೆಗಾಗಿ, ಧರ್ಮದ ರಕ್ಷಣೆಗಾಗಿ ಜೀವವನ್ನು ಮುಡುಪಾಗಿಡಲು, ಅವರನ್ನು ಹುರಿದುಂಬಿಸಲು ಹೂಡಿದ ತಂತ್ರವಿಧಾನವಾಗಿತ್ತು.

ಆರ್ಥಿಕವಾಗಿ ವಿಜಯನಗರ ಸಾಮ್ರಾಜ್ಯದ ಹೊರೆ ಹೆಚ್ಚಾಗಿತ್ತು. ಇಡೀ ದಕ್ಷಿಣಭಾರತವನ್ನು ಅರಸರು ನೇರವಾಗಿ ಆಳುವುದು ದುಸ್ಸಾಧ್ಯವೆನಿಸಿದ ಕಾರಣ ಪಾಳೆಯಗಾರರ, ನಾಯಕರ ಮೂಲಕ ರಾಜ್ಯವನ್ನು ಆಳಬೇಕಾದ ಪರಿಸ್ಥಿತಿ ಉಂಟಾಯಿತು. ಹೀಗೆ ಊಳಿಗಮಾನ್ಯ ಪದ್ಧತಿ ಆರಂಭವಾಯಿತು. ಆದರೆ ಇದರಿಂದ ಆಂತರಿಕವಾಗಿ ಪಾಳೆಯಗಾರರು, ನಾಯಕರು ಪ್ರಬಲರಾದಾಗ ದಂಗೆಗಳಾರಂಭವಾದುವು. ಆ ದಂಗೆಗಳನ್ನು ಅಡಗಿಸುವ ಹೊಣೆಗಾರಿಕೆಯೂ ಈ ಅರಸರದಾಗಿತ್ತು. ಇದರಿಂದ ಆರ್ಥಿಕ ಹೊರೆ ಹೆಚ್ಚಾಯಿತು. ಪ್ರಜೆಗಳ ಮೇಲೆ ಕರಭಾರ ಬಿದ್ದಿತು. ಪ್ರಜೆಗಳ ಸೌಕರ್ಯಕ್ಕಾಗಿ, ಮಿತಿಮೀರಿದ ಕದನಗಳ ವೆಚ್ಚವನ್ನು ಹೊಸಕರಗಳ ಮೂಲಕ ವಸೂಲು ಮಾಡಿ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಹೆಚ್ಚು ಹೆಚ್ಚು ಭೂಮಿಗಳನ್ನು ವ್ಯವಸಾಯಕ್ಕೊಳಪಡಿಸಲಾಯಿತು. ಇಂತಹ ಪರಿಸ್ಥಿತಿಗಳಲ್ಲಿ ವಿಜಯನಗರದ ಅರಸರು ದೇವಾಲಯಗಳನ್ನು ಹೊಸದಾಗಿ ಕಟ್ಟಿಸುವ ಯೋಚನೆಯನ್ನು ಮಾಡಲಿಲ್ಲ. ಇದ್ದ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ವಿಸ್ತರಿಸಿ ಕಟ್ಟಲಾಯಿತು.


ವಿಜಯನಗರದ ವಾಸ್ತುಶಿಲ್ಪದ ವೈಶಿಷ್ಟ್ಯವನ್ನು ಹಿರಿದಾದ ಗಾತ್ರ, ವೈಭವೋಪೇತವಾದ ಪೌರುಷತ್ವ, ಅತಿಶಯ ಅಲಂಕರಣಗಳಲ್ಲಿ ಕಾಣಬಹುದು. ಅದೆಲ್ಲವುಗಳೂ ಉತ್ತುಂಗ, ಭವ್ಯ. ದಕ್ಷಿಣಭಾರತದ ಭಿನ್ನಸಂಪ್ರದಾಯ, ಸಂಸ್ಕೃತಿಗಳ ಈ ಪ್ರದೇಶಗಳಲ್ಲಿ ರೂಢಿಯಲ್ಲಿದ್ದ ಶೈಲಿಗಳಲ್ಲಿ ಈಗ ಏಕರೂಪತೆಯನ್ನು ಸಾಧಿಸಲು ಯತ್ನಿಸಲಾಯಿತು. ಉತ್ತರ ಕರ್ನಾಟಕ, ಆಂಧ್ರಪ್ರದೇಶಗಳಲ್ಲಿ ಮೊದಲಿನ ಚಾಲುಕ್ಯ, ಹೊಯ್ಸಳ, ಕಾಕತೀಯ ಶೈಲಿಗಳನ್ನು ಉಳಿಸಿಕೊಂಡು ಪರಿಸ್ಥಿತಿಗನುಗುಣವಾಗಿ ಬೆಳಸಿಕೊಳ್ಳಲಾಯಿತು. ಅಂತೆಯೇ ತಮಿಳುನಾಡಿನಲ್ಲಿ ಪಾಂಡ್ಯ ಅರಸರು ರೂಪಿಸಿದ್ದ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಬರಲಾಯಿತು.

ಇವರು ಬಳಸಿದ ಶಿಲೆ ಗ್ರಾನೈಟ್. ಹೆಚ್ಚು ಭಾರವನ್ನು ಹೊರಬಲ್ಲುದಾಗಿತ್ತು. ಆದ್ದರಿಂದ ಕಂಬಗಳ ನೆರವಿನಿಂದ ವಿಸ್ತಾರವಾದ ಮಂಟಪಗಳನ್ನು ಕಟ್ಟುವುದು ಸಾಧ್ಯವಾಯಿತು. ಚಾಲುಕ್ಯ–ಹೊಯ್ಸಳರ ಶೈಲಿಯ ಕುಸುರಿ ಕೆತ್ತನೆ ಇಂತಹ ಕಲ್ಲುಗಳಲ್ಲಿ ಸಾಧ್ಯವಿರಲಿಲ್ಲ. ಆದುದರಿಂದ ಮೂರ್ತಿಶಿಲ್ಪಗಳು ಸಹ ಆಕಾರದಲ್ಲಿ ದೊಡ್ಡವಾದುವು. ತಮಿಳುನಾಡಿನಲ್ಲಿ ಚೋಳರು, ಪಾಂಡ್ಯರು ದೇವಾಲಯಗಳ ಮುಂಭಾಗದ ದ್ವಾರದಲ್ಲಿ ಗೋಪುರಗಳನ್ನು ಕಟ್ಟುವ ಸಂಪ್ರದಾಯವನ್ನು ಆರಂಭಿಸಿದ್ದರು. ಇದನ್ನು ವಿಜಯನಗರದ ಅರಸರು ಮುಂದುವರಿಸಿಕೊಂಡು ಬಂದರೂ ಗೋಪುರಗಳ ಎತ್ತರವನ್ನು ಹೆಚ್ಚಿಸಿದರು. ದೇವಾಲಯಗಳ ಎರಡು ಕಡೆ, ಕೆಲವು ಸಂದರ್ಭಗಳಲ್ಲಿ ನಾಲ್ಕೂ ಕಡೆಗಳಲ್ಲಿ, ಈ ಗೋಪುರಗಳನ್ನು ನಿರ್ಮಿಸಲಾಯಿತು. 'ರಾಯ' ಎಂಬ ನಾಮಾಂಕಿತ ಪಡೆದಿದ್ದ ಅರಸರ ನೆನಪಿನಲ್ಲಿ ಇವುಗಳನ್ನು ರಾಯಗೋಪುರಗಳೆಂದೇ ಕರೆಯಲಾಯಿತು. ದೇವಾಲಯದ ಸುತ್ತಲೂ ಪ್ರಾಕಾರಗಳನ್ನು ಅದಕ್ಕಾಗಿ ಕಟ್ಟಲಾಯಿತು. ಅವುಗಳಿಗೆ ಹೊಂದಿಕೊಂಡಂತೆ ಮಂಟಪಗಳೂ ಉಪಗುಡಿಗಳೂ ಅಸ್ತಿತ್ವಕ್ಕೆ ಬಂದುವು. ಈ ವಿಧದ ಅಲಂಕೃತ ಮಂಟಪಗಳಿಗೆ ಕಲ್ಯಾಣಮಂಟಪ, ಉಯ್ಯಾಲೆ (ಊಂಜಲ್) ಮಂಟಪ, ವಸಂತಮಂಟಪ, ವಾಹನಮಂಟಪ, ರಂಗಮಂಟಪ, ಕನ್ನಡಿ ಮಂಟಪಗಳೆಂಬ ಹೆಸರುಗಳನ್ನಿಡಲಾಯಿತು. ಇದರ ಪರಿಣಾಮವಾಗಿ ಈಗ ದೇವಾಲಯಗಳು ಅನೇಕ ಭಾಗಗಳನ್ನೊಳಗೊಂಡು ಸಂಕೀರ್ಣಗೊಂಡುದರಿಂದ ವೈಯಕ್ತಿಕವಾಗಿ ಇಂತಹ ದೇವಾಲಯಗಳನ್ನು ವಿಸ್ತರಿಸಿ ಕಟ್ಟಲಾಯಿತು. ಹೊಸ ಆಲಯಗಳೂ ಅರಸರಿಂದ, ನಾಯಕರಿಂದ ಕಟ್ಟಲ್ಪಟ್ಟುವು. ವಿಜಯನಗರದ ಕಾಲದಲ್ಲಿ ಹಲವಾರು ಧಾರ್ಮಿಕ ಹಾಗೂ ಲೌಕಿಕ ಕಟ್ಟಡಗಳು ಅಸ್ತಿತ್ವಕ್ಕೆ ಬಂದುವು. ಲೌಕಿಕ ಕಟ್ಟಡಗಳನ್ನು ಕುರಿತು ಈಗಾಗಲೇ ಚರ್ಚಿಸಿದ್ದೇವೆ.

ವಿಜಯನಗರದ ಕಾಲದಲ್ಲಿ ಕಂಡು ಬಂದ, ಹೊಸದಾಗಿ ರೂಪಿಸಲಾದ ಶಿಲ್ಪ ಇತ್ಯಾದಿಗಳ ಆಧಾರದ ಮೇಲೆ ಈ ಕಾಲದ ಶೈಲಿ ಸ್ವತಂತ್ರವಾದ ವಿಜಯನಗರ ಶೈಲಿ ಎಂದು ಹೆಸರಾಗಿದೆ. ಈ ಶೈಲಿಯಲ್ಲಿ ಪ್ರಮುಖವಾದ ಮೂರು ಘಟ್ಟಗಳನ್ನು ಗುರುತಿಸಬಹುದು.


ಮೊದಲ ಘಟ್ಟ ಸುಮಾರು ಕ್ರಿ. ಶ. ೧೩೩೬ ರಿಂದ ೧೫೦೦ ರವರೆಗ, ಎರಡನೆಯ ಘಟ್ಟ ೧೫೦೯ ರಿಂದ ೧೫೬೫ರ ವರೆಗೆ. ೧೫೬೫ರಲ್ಲಿ ತಾಳೀಕೋಟೆ ಕದನವಾಗಿ, ಆ ಬಳಿಕ ವಿಜಯನಗರ ಸಾಮ್ರಾಜ್ಯವು ಪಾಳೆಯಗಾರರ, ನಾಯಕರ ಸ್ವತಂತ್ರ ಸಂಸ್ಥಾನಗಳಾಗಿ ಒಡೆದುವು. ಅವರು ಸ್ಥಳೀಯ ಶೈಲಿಗಳನ್ನು ವಿಜಯನಗರದ ಶೈಲಿಯೊಂದಿಗೆ ಸಮ್ಮಿಳನಗೊಳಿಸಿದರು. ಇಂತಹವರಲ್ಲಿ, ಮಧುರೆಯ ನಾಯಕರು, ಕೆಳದಿಯ ನಾಯಕರು, ಮೈಸೂರಿನ ಒಡೆಯರು ಪಲವರು. ಈ ಘಟ್ಟ ಒಂದು ಶತಮಾನದ ಕಾಲ, ೧೫೬೫ ರಿಂದ ೧೬೫೦ ರವರೆಗೆ, ಹಬ್ಬಿದೆ.

ಹಂಪೆಯಲ್ಲಿರುವ ಅನೇಕ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ ಮತ್ತು ಅಂತರಾಳಗಳಿಗೆ ಹೊಂದಿದಂತೆ ಮುಚ್ಚಿದ ಕಂಬಗಳುಳ್ಳ ಪ್ರದಕ್ಷಿಣಾಪಥವಿರುತ್ತದೆ. ಗರ್ಭಗೃಹ ಮತ್ತು ಅಂತರಾಳಗಳಿಗೆ ಒಂದು ಅಧಿಷ್ಠಾನ. ಇದು ಪ್ರಾಕಾರಕ್ಕಿಂತ ಸ್ವಲ್ಪ ಕೆಳಮಟ್ಟದಲ್ಲಿರುತ್ತದೆ. ಪ್ರಾಕಾರದ ಭಿತ್ತಿಯ ಹೊರಭಾಗವನ್ನು ಗೋಡೆಗಳು, ಕುಂಭಪಂಜರ, ದೇವಕೋಷ್ಠ ಮತ್ತು ಅಧಿಷ್ಠಾನದಲ್ಲಿ ಕಂಡುಬರುವ ಅಲಂಕಾರಿಕ ಅಚ್ಚುಪಟ್ಟಿಗಳಿಂದ ಅಲಂಕರಿಸಲಾಗಿರುತ್ತದೆ. ಅರ್ಧಮಂಟಪದ ಮಧ್ಯದಲ್ಲಿ ನಾಲ್ಕು ಅಲಂಕೃತ ಕಂಬಗಳಿದ್ದು ಎರಡು ಬದಿಗಳಲ್ಲೂ ಕೈಸಾಲೆಗಳಿರುತ್ತವೆ. ಮಹಾಮಂಟಪವಂತೂ ವಿಸ್ತಾರವಾದ ಕೆತ್ತನೆಯ ಕೆಲಸವನ್ನೊಳಗೊಂಡ ಭಾಗ. ಇಲ್ಲಿನ ಕಂಬಗಳು ನೋಡಲು ರಮ್ಯ. ಕಂಬದ ಸುತ್ತಲೂ ಕಂಬವನ್ನು ಆಸರೆಯನ್ನಾಗಿ ಮಾಡಿಕೊಂಡು ಒರಿಯ ಪ್ರಮಾಣದ ಶಿಲ್ಪಗಳನ್ನು ಕೆತ್ತಲಾಗಿರುತ್ತದೆ. ಈ ಶಿಲ್ಪಗಳಲ್ಲಿ ಪ್ರಮುಖವಾದುದು ಮುಂದಿನ ಎರಡು ಕಾಲುಗಳನ್ನೆತ್ತಿ ಮುನ್ನುಗ್ಗುವಂತೆ ತೋರುವ ಕುದುರೆಗಳು ಮತ್ತು ಹುಲಿಗಳು. ಇನ್ನೊಂದು ವಿಧದ ಕಂಬಗಳಲ್ಲಿ ಮಧ್ಯಭಾಗ ತೆಳುವಾಗಿದ್ದು, ಅದರ ಸುತ್ತಲೂ ಮೂಲೆಗಂಬಗಳನ್ನು ಜೋಡಿಸಲಾಗಿದ್ದು, ಈ ಕಂಬಗಳನ್ನು ಸಣ್ಣ ಕೋಲಿನಿಂದ ಬಾರಿಸಿದಾಗ ನಾದ ಹೊರಡುತ್ತವೆ. ಕಂಬದ ಮೇಲೆ ಬೋದಿಗೆಯಲ್ಲಿ ಮುಂದೆ ಚಾಚಿದ ಪೀಠ, ಅದರ ಲೋಲಕದಲ್ಲಿ ಕೆಳಮುಖವಾಗಿರುವ ಕಮಲದ ಮೊಗ್ಗು.



ಚಿತ್ರ – ೪೭


ಕಲ್ಯಾಣಮಂಟಪ ವಿಜಯನಗರ ಶೈಲಿಯ ಒಂದು ವಿಶೇಷ. ಇದೊಂದು ತೆರೆದ ಮಂಟಪ. ಮಧ್ಯದಲ್ಲಿ ಎತ್ತರದ ವೇದಿಕೆ. ಇದರ ಮಧ್ಯದಲ್ಲಿ ಒಂದು ಪೀಠ. ದೇವಾಲಯದ ಉತ್ಸವ ವಿಗ್ರಹಗಳಿಗೆ ಕಲ್ಯಾಣೋತ್ಸವ ಮುಂತಾದ ಉತ್ಸವಗಳನ್ನು ನಡೆಸಿದಾಗ ಆ ವಿಗ್ರಹಗಳನ್ನು ಈ ಪೀಠದ ಮೇಲೆ ಕುಳ್ಳಿರಿಸಲಾಗುತ್ತಿತ್ತು. ಈ ಮಂಟಪಗಳಲ್ಲಿ ಸಂಯುಕ್ತ ಕಂಬಗಳನ್ನು ಅಳವಡಿಸಿ ಅವುಗಳನ್ನು ಬಳ್ಳಿಗಳು, ಪ್ರಾಣಿಗಳು, ಪಕ್ಷಿಗಳ ಚಿತ್ರಗಳಿಂದ ಅಲಂಕರಿಸಲಾಗುತ್ತಿತ್ತು. ಶಿಲ್ಪದ ಕೌಶಲವನ್ನು ಈ ಕೆತ್ತನೆಯ ಕೆಲಸಗಳಿಂದ ಅರಿತುಕೊಳ್ಳಬಹುದು. ಈ ಮಂಟಪಗಳ ತಳಪಾಯಗಳ ಪಟ್ಟಿಗಳಲ್ಲೂ ಇಂತಹುದೇ ಕೆತ್ತನೆಗಳು. ಮಂಟಪವನ್ನೇರಲು ಮೆಟ್ಟಿಲುಗಳಿದ್ದು ಅವುಗಳ ಪಕ್ಕದಲ್ಲಿ ಮಕರಗಳ, ಆನೆಗಳ ಶಿಲ್ಪಗಳು. (ಛಾಯಾಚಿತ್ರ –೪೭)



ಚಿತ್ರ – ೪೮

ದೇವಾಲಯದ ಸುತ್ತಲೂ ಪ್ರಾಕಾರದ ಗೋಡೆಗಳನ್ನೆಬ್ಬಿಸುವುದು ಈಗ ಸಾಮಾನ್ಯವಾಯಿತು. ಅಲ್ಲದೆ ಈ ಪ್ರಾಕಾರದೊಳಗೆ ಉಪಗುಡಿಗಳನ್ನು ಕಟ್ಟಲಾಯಿತು. ಸಾಮಾನ್ಯವಾಗಿ ದೇವಿಯ ಗುಡಿಗಳನ್ನು ನೈಋತ್ಯ ಮೂಲೆಯಲ್ಲಿ ಕಟ್ಟಲಾಗುತ್ತಿತ್ತು. ಶ್ರೀ ವೈಷ್ಣವರ ದೇವಾಲಯಗಳಲ್ಲಿ ಆಳ್ವಾರರುಗಳಿಗೂ ಆಚಾರ್ಯರಿಗೂ ಬೇರೆ ಬೇರೆ ಗುಡಿಗಳನ್ನು ರಚಿಸಲಾಗುತ್ತಿತ್ತು. ಈ ಆಳ್ವಾರರ, ಆಚಾರ್ಯರ ಹುಟ್ಟುಹಬ್ಬ (ತಿರುನಕ್ಷತ್ರ) ಮುಂತಾದ ವಿಶೇಷ ಉತ್ಸವಗಳ ಆಚರಣೆಗಾಗಿ ಅರಸರು ಪ್ರತ್ಯೇಕವಾದ ಏರ್ಪಾಡುಗಳನ್ನು ಮಾಡಿದ್ದರು. (ಛಾಯಾಚಿತ್ರ – ೪೮, ೪೯)


ಗೋಪುರಗಳ ರಚನೆ ವಿಜಯನಗರದ ಕಾಲದಲ್ಲಿ, ವಿಶೇಷವಾಗಿ ಕರ್ನಾಟಕದಲ್ಲಿ ಹೊಸದಾಗಿ ಕಾಣಿಸಿಕೊಂಡ ಒಂದು ಬೆಳವಣಿಗೆ. ತಮಿಳುನಾಡಿನಲ್ಲಿ ಇದು ಆ ವೇಳೆಗಾಗಲೇ ಪರಿಚಯವಾಗಿತ್ತು. ಇದು ಎತ್ತರವಾದಷ್ಟೂ ಗರ್ಭಗೃಹದ ಮೇಲಿನ ವಿಮಾನಕ್ಕೆ ಪ್ರಾಶಸ್ತ್ಯ ಕಡಿಮೆಯಾಯಿತು. ಈ ವಿಮಾನದಲ್ಲಿ, ಮಂಟಪಗಳ



ಚಿತ್ರ – ೪೯

ಹೊರಭಿತ್ತಿಗಳಲ್ಲಿ ದೇವಕೋಷ್ಠ (ಗೂಡು)ಗಳಲ್ಲಿ ಕಾಣಬರುತ್ತಿದ್ದ ಉಬ್ಬು ಶಿಲ್ಪಗಳು ಕ್ರಮೇಣ ಗೋಪುರಗಳಲ್ಲಿ ಸ್ಥಾನವನ್ನು ಪಡೆದವು. ಒಂದು ಮಟ್ಟದವರೆಗೆ ನಯವಾಗಿ ಕೆತ್ತಿದ ಕಲ್ಲುಗಳನ್ನು ಉಪಯೋಗಿಸಿ ಆ ಬಳಿಕ ಇಟ್ಟಿಗೆ ಮತ್ತು ಗಾರೆಗಳಿಂದ ಉಳಿದ ಭಾಗವನ್ನು ಎತ್ತರಿಸಲಾಯಿತು. ದಕ್ಷಿಣ ಭಾರತದಲ್ಲಿ ಗೋಪುರಗಳು ಸಾಮಾನ್ಯವಾಗಿ ಐದು ಅಂತಸ್ತುಗಳನ್ನು ಪಡೆದಿದ್ದು ಅನಂತರ ಅಂತಸ್ತುಗಳ ಸಂಖ್ಯೆ ಹೆಚ್ಚಿತು. ಹೆಚ್ಚು ಅಂತಸ್ತುಗಳ ಗೋಪುರಗಳನ್ನು ತಮಿಳುನಾಡಿನಲ್ಲಿ ಕಾಣುತ್ತೇವೆ. ವಿಶೇಷವಾಗಿ ಇವುಗಳೆಲ್ಲವೂ ಕೃಷ್ಣದೇವರಾಯನ ಆಳ್ವಿಕೆಯ ಕಾಲದಲ್ಲಿಯೇ ಅಸ್ತಿತ್ವಕ್ಕೆ ಬಂದವುಗಳು. ಗ್ರಾನೈಟ್ ಶಿಲೆಯ ತಳಹದಿಯ ಮೇಲೆ ಇಟ್ಟಿಗೆಯ ಗೋಪುರಗಳನ್ನು ಏರಿಸಲಾಗಿದೆ. ಈ ತಳಪಾಯದ ಭಾಗ ಅಲಂಕೃತ ಗಾರೆಯ ಶಿಲ್ಪಗಳನ್ನು ಹೊಂದಿವೆ. ದ್ವಾರಬಂಧ ಇನ್ನೊಂದು ಉತ್ಕೃಷ್ಟ ಭಾಗ. ಎರಡೂ ಕಡೆ ಎತ್ತರದ ಗ್ರಾನೈಟ್ ಶಿಲೆಯ ಏಕ ಶಿಲಾಸ್ತಂಭಗಳು, ಅವುಗಳಲ್ಲಿ ಒಂದೊಂದು ಕಡೆಯೂ ಗಂಗಾ–ಯಮುನೆಯರ ಅಥವಾ ಶಾಲಭಂಜಿಕೆಯರ ವಿಗ್ರಹಗಳು. ಶಿಲ್ಪಗಳಿಗೆ ಸುತ್ತುವರಿದ ವೃತ್ತಾಕಾರದ ಬಳ್ಳಿಗಳು. ಎತ್ತರದ ಛಾವಣಿಯಲ್ಲಿ ಪೌರಾಣಿಕ ಚಿತ್ರಗಳನ್ನು ಒತ್ತಾಗಿ ಬಿಡಿಸಲಾಗಿದೆ. ವಿಷ್ಣುವಿನ ದೇವಾಲಯಗಳಲ್ಲಿ ದ್ವಾರಬಂಧದ ಹೊರಭಿತ್ತಿಯಲ್ಲಿ ಶಂಖ, ಚಕ್ರ ಹಾಗೂ ಊರ್ಧ್ವಪುಂಡ್ರ (ನಾಮ)ಗಳ ಚಿಹ್ನೆಗಳನ್ನು ಕೆತ್ತಲಾಗಿರುತ್ತದೆ.

ಆರಂಭದ ಘಟ್ಟಕ್ಕೆ ಸೇರಿದವುಗಳಲ್ಲಿ ಮೊದಲ ಸ್ಥಾನ ಶೃಂಗೇರಿಯ ವಿದ್ಯಾಶಂಕರ ದೇವಾಲಯಕ್ಕೆ ಸಲ್ಲುತ್ತದೆ. ಶೃಂಗೇರಿಯ ಶ್ರೀ ಶ್ರೀಗಳಾದ ವಿದ್ಯಾತೀರ್ಥ ಶ್ರೀ ಪಾದಂಗಳವರ ನೆನಪಿಗೆ ಕ್ರಿ. ಶ. ೧೩೩೮ರಲ್ಲಿ ಕಟ್ಟಲಾದ ದೇವಾಲಯ ಮೂಲತಃ ಹೊಯ್ಸಳ ಶೈಲಿಯದೆನ್ನಬಹುದಾದರೂ ದಾಕ್ಷಿಣಾತ್ಯ ಸಂಪ್ರದಾಯಗಳನ್ನು ಅಳವಡಿಸಿಕೊಂಡಿರುವ ದೇವಾಲಯ. ಎತ್ತರದ ಉಪಪೀಠದ ಮೇಲೆ ಚೌಕಾಕಾರದ, ಚಾಪಗಳ ವಿನ್ಯಾಸ. ಗರ್ಭಗೃಹಕ್ಕೂ ಅಂತರಾಳಕ್ಕೂ ಒಂದೇ ಅಧಿಷ್ಠಾನ. ಎಂಟು ಅಂಗಗಳ ಪಟ್ಟಿಗಳು ಕುದುರೆಗಳ, ಆನೆಗಳ, ಪೌರಾಣಿಕ ಕಥೆಗಳನ್ನೊಳಗೊಂಡಿದೆ. ಅಧಿಷ್ಠಾನದ ಮೇಲಿನ ಗೋಡೆಗಳಲ್ಲಿ ಗಾತ್ರದಲ್ಲಿ ಹಿರಿದಾದ ಉಬ್ಬು ಶಿಲ್ಪಗಳ ಸಾಲು. ಇವೆಲ್ಲವೂ ದೇವಕೋಷ್ಠಗಳಲ್ಲಿವೆ. ಈ ಶಿಲ್ಪಗಳೂ ಅವುಗಳ ಸ್ಥಾನವೂ ಹೊಯ್ಸಳ ಶೈಲಿಯ ಪ್ರತೀಕಗಳಾಗಿವೆ. ಆಯಾ ದಿಕ್ಕುಗಳಲ್ಲಿ ದಿಕ್ಪಾಲರು, ಬುದ್ಧನನ್ನೊಳಗೊಂಡ ದಶಾವತಾರಗಳು, ಗಡ್ಡ ಬಿಟ್ಟಿರುವ ಬ್ರಹ್ಮನ ಶಿಲ್ಪ ಅಪರೂಪದ್ದು. ಆರು ದ್ವಾರಬಂಧಗಳಿವೆ. ಮೇಲ್ಭಾಗದಲ್ಲಿ ಗಜಲಕ್ಷ್ಮಿ. ನಕ್ಷತ್ರವಿನ್ಯಾಸದ ವಿಮಾನ. ಕೆಳಗಿನ ಎರಡು ತಲಗಳಿಂದ ಸುಕನಾಸಿ ಮುಂಚಾಚಿದೆ. ಮೇಲೆ ಬಂಡಿಯಾಕಾರದ ಛಾವಣಿ. ಮುಂದೆ ತೋರಣದ ಚೌಕಟ್ಟು. ನವರಂಗದ ಮಧ್ಯದ ಅಂಕಣದಲ್ಲಿ ನಾಲ್ಕು ಕಂಬಗಳು. ಸುತ್ತಲಿನ ಎಂಟು ಅಂಕಣಗಳಲ್ಲಿ ೧೨ ಸ್ತಂಭಗಳು. ಏಕಶಿಲೆಯ ಹಿರಿಯ ಗಾತ್ರದ ಮುಂಚಾಚಿದ ವ್ಯಾಳಿಗಳನ್ನೊಳಗೊಂಡ ೧೨ ಸ್ತಂಭಗಳು ೧೨ ರಾಶಿಗಳನ್ನು ಪ್ರತಿನಿಧಿಸುತ್ತವೆ. ಇವುಗಳನ್ನು ರಾಶಿಸ್ತಂಭಗಳೆಂದೇ ಕರೆಯಲಾಗಿದೆ. ಭುವನೇಶ್ವರಿಯಲ್ಲಿ ತಲೆಕೆಳಗಾದ ಅರಳುತ್ತಿರುವ ಕಮಲದ ಮೊಗ್ಗು. ದಳಗಳ ಮೇಲೆ ಪಾರಿವಾಳಗಳು ಕುಳಿತಂತೆ ಕಂಡರಿಸಲಾಗಿದೆ. ಇವೆಲ್ಲವೂ ಬಹುಮಟ್ಟಿಗೆ ಹೊಯ್ಸಳ ಶೈಲಿಯ ಅನುಕರಣೆಗಳೇ. ಇದರಲ್ಲಿ ನಾವು ಕಾಣುವ ದಾಕ್ಷಿಣಾತ್ಯ ಅಂಶಗಳು ವಿಮಾನದಲ್ಲಿ ಕುಗ್ಗುತ್ತ ಹೋಗುವ ತಲಗಳು, ಮೇಲ್ಭಾಗದಲ್ಲಿ ಗ್ರೀವ, ಗುಮ್ಮಟಾಕಾರದ ಶಿಖರದ ಮೇಲೆ ಸ್ತೂಪಿ, ತಾರಸಿಯ ನಾಲ್ಕು ಮೂಲೆಗಳಲ್ಲಿ ನಾಲ್ಕು ನಂದಿಗಳು ಶಿಖರದ ಗ್ರೀವದ ಕೆಳಗಡೆ ಕುಳಿತಂತೆ ಚಿತ್ರಿಸಲಾಗಿದೆ. ಸುಖಾಸನದಲ್ಲಿ ಒಂದು ಕಾಲನ್ನು ಅಪಸ್ಮರನ ಬೆನ್ನ ಮೇಲಿಟ್ಟಿರುವ ದಕ್ಷಿಣಾಮೂರ್ತಿಯ ಶಿಲ್ಪ ಕರ್ನಾಟಕದಲ್ಲಿ ಅಪರೂಪವಾದದ್ದು. ವಿಶೇಷವಾಗಿ ತಮಿಳುನಾಡಿನಲ್ಲಿ ಕಂಡುಬರುವ ಶಿಲ್ಪವಿದು. (ಛಾಯಾಚಿತ್ರ – ೫೦)



ಚಿತ್ರ – ೫೦

ವಿರೂಪಾಕ್ಷ ವಿಜಯನಗರದ ಅರಸರ ಕುಲದೈವ. ಹಂಪೆಯ ಅಧಿಪತಿ–ಪಂಪಾಪತಿ. ಪಂಪಾ ಎಂಬಾಕೆ ಬ್ರಹ್ಮನ ಮಾನಸಪುತ್ರಿ. ಶಿವನನ್ನು ಒಲಿದು ನಿಷ್ಠೆಯಿಂದ ತಪಗೈದು ಆತನಿಂದ ಅನುಗ್ರಹೀತಳಾಗಿ ಆತನನ್ನೇ ಮದುವೆಯಾದಳು.

ಪಂಪಾಂಬಿಕೆಯ ಪತಿ ಪಂಪಾಪತಿ ಎನಿಸಿದ ವಿರೂಪಾಕ್ಷ. ಈ ದೇವನ ಗುಡಿ ವಿರೂಪಾಕ್ಷಾಲಯ. ವಿಶಾಲವೂ ಭವ್ಯವೂ ಆದ ಈ ದೇವಾಲಯಕ್ಕೆ ವಿಜಯನಗರದ ಅರಸರ ಕಾಲಕ್ಕೂ ನಾಲ್ಕಾರು ಶತಮಾನಗಳ ಹಿಂದಿನ ಇತಿಹಾಸವಿದೆ. ಚಾಲುಕ್ಯ ವಿನಯಾದಿತ್ಯ ಕ್ರಿ. ಶ. ೬೮೬ರಲ್ಲಿ ಪಂಪಾತೀರ್ಥದಲ್ಲಿದ್ದಾಗ ಬ್ರಾಹ್ಮಣರಿಗೆ ಭೂದಾನ ಮಾಡಿದನೆಂದು ಆತನ ತಾಮ್ರಶಾಸನವೊಂದು ಹೇಳುತ್ತದೆ. ಪಲ್ಲವವಂಶದ ವೃದ್ಧಮ್ಬರಸಿ ಪಂಪಾಪತಿ ಎನಿಸಿದ ಮಹಾಕಾಲನಿಗೆ ಭೂದಾನ ಮಾಡಿದಳೆಂದು ಐದನೆಯ ವಿಕ್ರಮಾದಿತ್ಯನ ಕ್ರಿ. ಶ. ೧೦೧೩ನೆಯ ಶಾಸನ ಉಲ್ಲೇಖಿಸುತ್ತದೆ. ಪಂಪಾಪತಿಗೆ ಅಂದು ಮಹಾಕಾಲನೆಂಬ ಹೆಸರೂ ಇದ್ದಿತೆಂದು ಇದರಿಂದ ವೇದ್ಯವಾಗುತ್ತದೆ. ಕ್ರಿ. ಶ. ೧೧೯೯ನೆಯ ವರ್ಷದ, ನಾಗವಂಶದ ಕಲಿದೇವನ ಕಾಲದ ಶಾಸನದಲ್ಲಿ ದೇವರನ್ನು ವಿರೂಪಾಕ್ಷನೆಂದೂ ದೇವಿಯನ್ನು ಪಂಪಾದೇವಿಯೆಂದೂ ಕರೆಯಲಾಗಿದೆ. ಈ ಆಲಯದ ಗರ್ಭಗೃಹದ ಎಡಭಾಗದಲ್ಲಿರುವ ಭುವನೇಶ್ವರಿಯ ಗುಡಿಯು ಸಮರೇಖೆಯಲ್ಲಿಲ್ಲದೆ ಒಂದು ಮೂಲೆಯಲ್ಲಿರುವುದನ್ನು ಗಮನಿಸಿದರೆ ವಿರೂಪಾಕ್ಷಾಲಯ ಕಾಲಾನಂತರ ಜೀರ್ಣೋದ್ಧಾರಗೊಂಡಂತೆ ತೋರುತ್ತದೆ. ಭುವನೇಶ್ವರಿ ಗುಡಿಯಲ್ಲಿ ಹೊಳಪಾದ ಕಪ್ಪುಶಿಲೆಯ ಅಲಂಕೃತ ದ್ವಾರಬಂಧಗಳಿವೆ.

ಗರ್ಭಗುಡಿಗೆ ಹೊಂದಿದಂತೆ ಕ್ರಮವಾಗಿ ಅಂತರಾಳ, ಅರ್ಧಮಂಟಪ ಮತ್ತು ಮಹಾಮಂಟಪಗಳಿವೆ. ಮಹಾಮಂಟಪವನ್ನೇ ಶಾಸನದಲ್ಲಿ ರಂಗಮಂಟಪವೆಂದು ಕರೆಯಲಾಗಿದೆ. ಗರ್ಭಗುಡಿಯ ಮೇಲೆ ಮೂರು ಅಂತಸ್ತುಗಳ ತ್ರಿತಲ ವಿಮಾನವಿದೆ. ಮೇಲೆ ಚೌಕಾಕೃತಿಯ ಗುಮ್ಮಟದ ಶಿಖರ, ಮಧ್ಯದಲ್ಲಿ ನಿಡಿದಾದ ಸ್ತೂಪ, ನಾಲ್ಕು ಮೂಲೆಗಳಲ್ಲಿಯೂ ಅಂತಹುದೇ ಆದ, ಆದರೆ ಅಷ್ಟು ಎತ್ತರವಲ್ಲದ ಸ್ತೂಪಗಳು, ಗರ್ಭಗೃಹದ ಗೋಡೆಗಳನ್ನು ದೊಡ್ಡದಾದ, ನಯವಾಗಿ ಕೆತ್ತಿದ ಕಲ್ಲುಗಳಿಂದ ಕಟ್ಟಲಾಗಿದೆ. ಸುತ್ತಲೂ ಮುಚ್ಚಿದ ಪ್ರದಕ್ಷಿಣಾಪಥ. ಇದರ ಹೊರಗೋಡೆಗಳಿಗೆ ಒರಟಾದ ದಪ್ಪಕಲ್ಲುಗಳನ್ನು ಅಳವಡಿಸಿದೆ.

ರಂಗಮಂಟಪವನ್ನು ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕೋತ್ಸವ ಸಂದರ್ಭದಲ್ಲಿ ಕ್ರಿ. ಶ. ೧೫೧೦ರಲ್ಲಿ ಕಟ್ಟಿಸಿದನೆನ್ನಲು ಶಾಸನಾಧಾರವಿದೆ. ಈ ಮಂಟಪವನ್ನು ಐದು ಅಂಕಣಗಳಾಗಿ ವಿಂಗಡಿಸಲಾಗಿದ್ದು ಬೇರೆ ಬೇರೆ ಭಾಗಗಳಿಂದ ಕೂಡಿದ ವಿಧವಿಧದ ಕಂಬಗಳನ್ನು ಇಲ್ಲಿ ಕಾಣುತ್ತೇವೆ. ಮಧ್ಯದ ಆಯದಲ್ಲಿ ಹದಿನಾರು ಕಂಬಗಳಿವೆ. ಮುಂಗಾಲುಗಳನ್ನು ಮೇಲೆತ್ತಿ ಆಕ್ರಮಣ ಮಾಡುವಂತೆ ಹಿಂಗಾಲುಗಳ ಮೇಲೆ ನಿಂತಿರುವ ಸಿಂಹ (ಯಾಳಿ)ಗಳನ್ನು ಈ ಕಂಬಗಳಲ್ಲಿ ಕೆತ್ತಲಾಗಿದೆ. ಅವುಗಳ ಮೇಲೆ ಸವಾರರು; ಕಾಲಿನ ಕೆಳಗೆ ಮಕರದ ಬಾಯಿಂದ ತೂಗುಬಿದ್ದಿರುವ ಸರಪಳಿಗಳು, ಮಧ್ಯದ ಅಂಕಣದ ಛಾವಣಿ ಉಳಿದ ಭಾಗಗಳಿಗಿಂತ ಎತ್ತರವಾಗಿದ್ದು ಅದರ ನಾಲ್ಕು ದಿಕ್ಕುಗಳಿಗೆ ಕೂಡಿಸಿದ ತೊಲೆಗಳಿಗೆ ಸೇರಿಕೊಂಡಂತಿರುವ ಒಳ ಛಾವಣಿಯಲ್ಲಿ ವರ್ಣಚಿತ್ರಗಳಿವೆ. ದ್ರೌಪದೀ ಸ್ವಯಂವರದ ಸಂದರ್ಭದಲ್ಲಿ ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುತ್ತಿರುವ ಚಿತ್ರ, ಪಲ್ಲಕ್ಕಿಯಲ್ಲಿ ಕುಳಿತು ಮೆರವಣಿಗೆ ಹೋಗುತ್ತಿರುವ ಸನ್ಯಾಸಿಯ ಚಿತ್ರ, ದಶಾವತಾರ, ಕಾಮದಹನ ಮೂರ್ತಿ, ತ್ರಿಪುರ ಸಂಹಾರಿ, ಕಲ್ಯಾಣಸುಂದರ ಮುಂತಾದ ಶಿವನ ರೂಪಗಳ ಹಲವಾರು ವರ್ಣಚಿತ್ರಗಳು ಇಲ್ಲಿವೆ. ಆ ಕಾಲದ ಚಿತ್ರಕಲೆಗೆ ಇವು ಪ್ರತ್ಯಕ್ಷ ಸಾಕ್ಷಿಗಳು.

ರಂಗಮಂಟಪದ ಪಶ್ಚಿಮಕ್ಕೆ ಅರ್ಧಮಂಟಪ. ಇದರ ದ್ವಾರದಲ್ಲಿ ನಾಲ್ಕು ಹಸ್ತಗಳ ಎತ್ತರವಾದ ದ್ವಾರಪಾಲಕರ ವಿಗ್ರಹಗಳಿವೆ. ಮಂಟಪದ ಹೊರಗೋಡೆಗಳಲ್ಲಿ ಅರೆಯುಬ್ಬು ಚಿತ್ರಗಳನ್ನು ಕೊರೆಯಲಾಗಿದೆ. ಮಧ್ಯದ ಛಾವಣಿಯಲ್ಲಿ ಅನೇಕ ದಳಗಳುಳ್ಳ ಕಮಲದ ಅಲಂಕಾರ. ಈ ಮಂಟಪ ಸಹ ವಿಜಯನಗರದ ಕಾಲಕ್ಕೆ ಸೇರಿದುದೆನ್ನಬಹುದು. ಇದಕ್ಕೆ ಹೊರಗಡೆ ಪೂರ್ವ ದಿಕ್ಕಿನಲ್ಲಿರುವ ಮೂರು ಅಂತಸ್ತುಗಳ ಸಣ್ಣ ಗೋಪುರವನ್ನು ಸಹ ಕೃಷ್ಣದೇವರಾಯನೇ ಕಟ್ಟಿಸಿದನು. ದೇವಾಲಯದ ಮುಂದೆ ಪೂರ್ವಾಭಿಮುಖವಾಗಿರುವ ೫೨ ಮೀಟರುಗಳಷ್ಟು ಎತ್ತರದ ಗೋಪುರವನ್ನು ದಾಟಿ ಒಳಗೆ ಬಂದರೆ ವಿಶಾಲವಾದ ಅಂಗಳವಿದೆ. ಎರಡೂ ಬದಿಗಳಲ್ಲೂ ಅನೇಕ ಸಣ್ಣ ಗುಡಿಗಳೂ ಫಲಪೂಜಾಮಂಟಪಗಳೂ ಇವೆ. ನೈಋತ್ಯ ಮೂಲೆಯಲ್ಲಿರುವ ಇಂತಹುದೇ ಮಂಟಪದಲ್ಲಿ ಇದಕ್ಕೂ ಹಿಂದಿನ ಕಾಲದ ಕಂಬಗಳನ್ನು ನೋಡಬಹುದು. ಈ ಅಂಗಳವನ್ನೂ ದಾಟಿ ಒಳಗೆ ಹೋಗಲು ಇರುವ ಇನ್ನೊಂದು ಗೋಪುರ ದ್ವಾರವನ್ನೇ ಕೃಷ್ಣದೇವರಾಯ ಕಟ್ಟಿಸಿದುದು. ಉತ್ತರದಿಕ್ಕಿಗಿರುವ ಇನ್ನೊಂದು ಗೋಪುರವನ್ನು ಬಹುಶಃ ಕಣ್ಣಗಿರಿ (ಕನಿಗಿರಿ)ಯ ನಾಯಕನು ಕಟ್ಟಿಸಿದ ಕಾರಣ ಇದಕ್ಕೆ ಕನಿಗಿರಿ ಗೋಪುರವೆಂಬ ಹೆಸರಿದೆ. ಇದರಲ್ಲಿ ಅಲಂಕೃತ ಗೋಡೆಗಂಬಗಳಿವೆ.

ಒಳಗಣ ಅಂಗಳದ ಸಣ್ಣಗುಡಿಗಳಲ್ಲಿ ಸೂರ್ಯನಾರಾಯಣ, ಮುಕ್ತಿನರಸಿಂಹ, ತಾರಕೇಶ್ವರ, ಪಾತಾಳೇಶ್ವರ, ಸರಸ್ವತಿ ಮತ್ತು ನವದುರ್ಗಾ ಗುಡಿಗಳು ಗಮನಾರ್ಹವಾದವುಗಳು. ಮುಕ್ತಿನರಸಿಂಹನ ಗುಡಿಯೊಳಗಿನ ಮೂರ್ತಿ ಚಿಕ್ಕದಾಗಿ ಚಾಲುಕ್ಯ ಶೈಲಿಯ ಶಿಲ್ಪವಾಗಿದೆ. ತಾರಕೇಶ್ವರನ ಗುಡಿಯೊಳಗೆ ಶಿವನ ವಿಗ್ರಹ. ಪಾರ್ವತಿ ಶಿವನ ತೊಡೆಯಲ್ಲಿ ಆಸೀನಳಾಗಿದ್ದಾಳೆ. ಸರಸ್ವತಿ ಗುಡಿಯಲ್ಲಿ ವೀಣಾಪಾಣಿಯಾದ ಕಪ್ಪುಶೈಲಿಯ ಎರಡು ಹಸ್ತಗಳ ಸರಸ್ವತಿಯ ವಿಗ್ರಹವಿದೆ. ಹಿಂಭಾಗದಲ್ಲಿ ತೂತು ಕೊರೆದ ಪ್ರಭಾವಳಿ. ಹಿಂದಿನ ಪ್ರಾಕಾರದಲ್ಲಿ ಚಿಕ್ಕಗುಡಿ ವಿದ್ಯಾರಣ್ಯ ಯತಿಗಳದೆನ್ನಲಾಗಿದ್ದು ಇದನ್ನು ಇಮ್ಮಡಿ ಹರಿಹರನೇ ಕಟ್ಟಿಸಿದನೆಂದರೂ

ಶೈಲಿಯ ಆಧಾರದ ಮೇಲೆ ಇದು ಅದಕ್ಕೂ ಹಿಂದಿನ ಕಾಲದ್ದೆಂದು ಕೆಲವರು ಭಾವಿಸಿದ್ದಾರೆ. ಗುಡಿಯೊಳಗಿರುವ ಮೂರ್ತಿ ಮಾತ್ರ ಅರ್ವಾಚೀನ. ನೈಋತ್ಯ ದಿಕ್ಕಿನ ದೀಪಸ್ತಂಭವನ್ನು ಕ್ರಿ. ಶ. ೧೪೨೮ ರಲ್ಲಿ ಮಾನಮಾಮಾತ್ಯನ ಮೊಮ್ಮಗ ಐತನೆಂಬಾತ ಕಟ್ಟಿಸಿದನೆಂದು ಅಲ್ಲಿನ ಶಾಸನ ಹೇಳಿದೆ.

ಪ್ರವೇಶದ್ವಾರದ ಗೋಪುರ ದ್ವಾರಕ್ಕೆ ಎರಡು ಸ್ತರಗಳ ಕಲ್ಲಿನ ತಳಪಾಯ. ಮೇಲ್ಭಾಗವೆಲ್ಲಾ ಇಟ್ಟಿಗೆಯ ಕಟ್ಟಡ. ಗೋಪುರದ ಒಳಕೋಣೆಯಲ್ಲಿ ಚೌಕಾಕಾರದ ಕಲ್ಲು ಕಂಬಗಳಿದ್ದು ಅವುಗಳಲ್ಲಿ ಕೆತ್ತನೆ ಕೆಲಸವಿದೆ. ಕೆಳಭಾಗದಲ್ಲಿ ಸುರುಳಿಯ ಚಿತ್ರಗಳ ಪಟ್ಟಿಗಳು. ಬೋದಿಗೆಗಳ ಸ್ಥಾನದಲ್ಲಿ ಚಪ್ಪಟೆಯ ಕಲ್ಲುಗಳು. ಇಮ್ಮಡಿ ದೇವರಾಯನ ದಂಡನಾಯಕ ಪ್ರೋಲುಗಂಟಿ ತಿಪ್ಪ ಈ ಗೋಪುರ ದ್ವಾರದ ನಿರ್ಮಾತೃ ಎಂದು ಸಾಹಿತ್ಯಕ ಆಧಾರಗಳಿಂದ ಊಹಿಸಲಾಗಿದೆ. ಹನ್ನೊಂದು ಅಂತಸ್ತುಗಳ ಮೇಲೆ ದೀರ್ಘ ವರ್ತುಲಾಕಾರದ ಶಿಖರ–ಗೋಪುರದಲ್ಲಿ ಗಾರೆಯಿಂದ ಮಾಡಿದ ಸುಂದರ ವಿಗ್ರಹಗಳಿವೆ.

ಕಮಲಾಪುರದಿಂದ ಹಂಪೆಗೆ ಹೋಗುವ ಮಾರ್ಗದಲ್ಲಿ ಪಾತಾಳ ಶಿವಾಲಯವಿದೆ. ಪೂರ್ವಾಭಿಮುಖವಾಗಿರುವ ಈ ಆಲಯ ನೆಲಮಟ್ಟದಿಂದ ಬಹಳ ಕೆಳಗಿರುವ ಕಾರಣ ಈ ಹೆಸರನ್ನು ಪಡೆದಿದೆ. ದೇವಾಲಯಕ್ಕೆ ಇಳಿದು ಹೋಗಲು ಮೆಟ್ಟಿಲುಗಳಿವೆ. ಇಲ್ಲಿನ ಮಂಟಪವೊಂದರಲ್ಲಿನ ಶಾಸನದಲ್ಲಿ ಕೃಷ್ಣದೇವರಾಯನು ತನ್ನ ಪಟ್ಟಾಭಿಷೇಕೋತ್ಸವದ ಸಮಯದಲ್ಲಿ ಪ್ರಸನ್ನ ವಿರೂಪಾಕ್ಷ ದೇವರಿಗೆ ಮಾಡಿದ ದಾನದ ಪ್ರಸ್ತಾಪವಿದೆ. ಮುಖ್ಯದೇವಾಲಯವಾದ ವಿರೂಪಾಕ್ಷ ದೇವಾಲಯಕ್ಕಿಂತ ಭಿನ್ನವಾದ ಆಲಯ ಇದಾಗಿರಬಹುದು. ಗರ್ಭಗೃಹದ ಅಕ್ಷದ ಸುತ್ತಲೂ ಮಂಟಪಗಳಿವೆ. ಪೂರ್ವದ ತುದಿಯಲ್ಲಿರುವ ಮಹಾಮಂಟಪದಲ್ಲಿ ಏಳುಸಾಲಿನ ಕಂಬಗಳಿವೆ. ನಿಡಿದಾದ ಧ್ವಜಸ್ತಂಭ ಆವರಣೆಯಿಂದ ಹೊರಹೊಮ್ಮಿದೆ. ಮಂಟಪದ ಉತ್ತರ ಮತ್ತು ದಕ್ಷಿಣಗಳಲ್ಲಿ ಘನಾಕೃತಿಯ ಕಂಬಗಳುಳ್ಳ ಮೊಗಸಾಲೆಯ ಅವಶೇಷಗಳಿವೆ. ಗರ್ಭಗೃಹ ಮತ್ತು ಇತರ ಮಂಟಪಗಳಲ್ಲಿ ಎಲ್ಲ ಕಾಲದಲ್ಲಿ ನೀರು ನಿಂತಿರುತ್ತದೆ. ಗರ್ಭಗೃಹ ಮತ್ತು ಅಂತರಾಳಗಳ ಸುತ್ತಲೂ ಮುಚ್ಚಿದ ಪ್ರಾಕಾರ. ಈ ಘನಾಕೃತಿಯ ಕಂಬಗಳು ಘನಾಕಾರದ ಅಡಿ, ಅಷ್ಟಕೋನದ ದಿಂಡು, ನಿಡಿದಾದ ಚೂಪಾದ ಕುಂಭಗಳನ್ನು ಹೊಂದಿದ್ದು ಇವು ಪ್ರಾಚೀನ ಶೈಲಿಯ ಲಕ್ಷಣಗಳಾಗಿವೆ. ಕಲ್ಯಾಣಮಂಟಪ ಮಾತ್ರ ವಿಜಯನಗರ ಶೈಲಿಯದು.



ಚಿತ್ರ – ೫೧


ಹಜಾರ ರಾಮಸ್ವಾಮಿ ದೇವಾಲಯವನ್ನು (ಛಾಯಾಚಿತ್ರ – ೫೧) ಕೃಷ್ಣದೇವರಾಯನು ಕಟ್ಟಿಸಿದನೆಂಬ ಪ್ರತೀತಿ ಇದ್ದರೂ ಇದು ಅವನ ಕಾಲಕ್ಕಿಂತ ಹಿಂದಿನದಾಗಿದ್ದು ಇದರ ಭಾಗಗಳ ಶೈಲಿಯಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಇಲ್ಲಿ ದೊರೆತ ಸಂಸ್ಕೃತ ಶಾಸನ ಪದ್ಯವೊಂದರಲ್ಲಿ ಅರಸನಾದ ದೇವರಾಯನ ಪ್ರಸ್ತಾಪವಿದೆ. ಆತನು ಮೊದಲನೆಯ ದೇವರಾಯನೇ, ಇಮ್ಮಡಿ ದೇವರಾಯನೇ ಎಂಬುದನ್ನು ಖಚಿತವಾಗಿ ಹೇಳಲಾಗದು. ರಾಣಿ ಅನ್ನಲಾದೇವಿಯು ಸುಮಾರು ಕ್ರಿ. ಶ. ೧೪೧೬ರಲ್ಲಿ ಮಾಡಿದ ದಾನದ ಉಲ್ಲೇಖ ಇನ್ನೊಂದು ಶಾಸನದಲ್ಲಿದೆ. ಈಕೆ ಇಮ್ಮಡಿ ದೇವರಾಯನ ಅರಸಿ ಹೊ(ಪೊ)ನ್ನಲಾದೇವಿ ಆಗಿರಬಹುದೇ? ದೇವಾಲಯದ ದ್ವಾರದ ಪಕ್ಕದಲ್ಲಿರುವ ಕೈಸಾಲೆಗಳ ವಾಸ್ತುಶೈಲಿ, ಅನ್ಯತ್ರವಿರುವ ಹಿಂದಿನ ಕಾಲದ ಕಂಬಗಳು, ಗೋಪುರಗಳಾಗಲೀ, ಸಂಕೀರ್ಣಕಂಬಗಳಾಗಲೀ ಇಲ್ಲದಿರುವಿಕೆ, ಇವುಗಳೆಲ್ಲವೂ ಈ ದೇವಾಲಯ ಕೃಷ್ಣದೇವರಾಯನ ಕಾಲಕ್ಕೂ ಹಿಂದಿನ ವಿಜಯನಗರ ಸಾಮ್ರಾಜ್ಯದ ಆರಂಭದ ಕಾಲಕ್ಕೆ ಸೇರಿದುದೆನ್ನಲು ಆಧಾರವಾದ ಅಂಶಗಳು. ಹೊಸ ಗುಡಿಗಳನ್ನು, ಮಂಟಪಗಳನ್ನು ಕೃಷ್ಣದೇವರಾಯನು ಸೇರಿಸಿದನೆಂಬುದು ಸ್ಪಷ್ಟ. ಈ ದೇವಾಲಯಕ್ಕೆ ಹಜಾರ ರಾಮಸ್ವಾಮಿ ಎಂಬ ಹೆಸರು ಬಂದುದಕ್ಕೆ, ಅಲ್ಲಿರುವ, ರಾಮಾಯಣಕ್ಕೆ ಸಂಬಂಧಿಸಿದ, ರಾಮನ ಅನೇಕ ಚಿತ್ರಗಳು ಕಾರಣವೆಂಬುದೊಂದು ಹೇಳಿಕೆ. ಆದರೆ ಈ ದೇವಾಲಯ ಅರಮನೆಗೆ ಹೊಂದಿಕೊಂಡಂತಿದ್ದು ಅಲ್ಲಿನ ರಾಜಮನೆತನದವರು ಇಲ್ಲಿ ಪೂಜೆ ಸಲ್ಲಿಸುತ್ತಿದ್ದರೆಂಬುದು ಸತ್ಯಕ್ಕೆ ಸಮೀಪವಾದ ಮಾತು. ಹಜಾರ (ತೆಲುಗು) ಅಸಾರ (ತಮಿಳು) ಎಂದರೆ ಸಭಾಮಂಟಪ, ಅರಮನೆಯ ದ್ವಾರಮಂಟಪ ಎಂಬರ್ಥವಿದೆ. ಈ ಅರ್ಥ ಹೆಚ್ಚು ಸಮಂಜಸವೆನಿಸುತ್ತದೆ.

ಕೃಷ್ಣದೇವರಾಯನು ಈ ದೇವಸ್ಥಾನಕ್ಕೆ ಕೆಲವು ಹೊಸ ಕಟ್ಟಡಗಳನ್ನು ಸೇರಿಸಿದನು. ಅರಮನೆಗೆ ಹೊಂದಿಕೊಂಡಿರುವ ಈ ಆಲಯದಲ್ಲೂ ಗರ್ಭಗೃಹ, ಅಕ್ಷದಲ್ಲಿ ಮಂಟಪಗಳು, ಕಲ್ಯಾಣ ಮಂಟಪ, ಪರಿವಾರ ಗುಡಿಗಳು ಇವೆ. ಪೂರ್ವದ ತುದಿಯಲ್ಲಿರುವ ತೆರೆದ ಮಂಟಪದಲ್ಲೂ ನಿಡಿದಾದ ಘನಾಕಾರದ ಅಲಂಕೃತ ಕಂಬಗಳಿವೆ. ಇದಕ್ಕೆ ಹೊಂದಿದ ಅರ್ಧಮಂಟಪದ ಎರಡು


ಪಕ್ಕಗಳಲ್ಲಿ ಕೈಸಾಲೆ ಮತ್ತು ಪೂರ್ವ ದಿಕ್ಕಿನಲ್ಲಿ ಒಂದು ಸ್ತಂಭವೇದಿಕೆ ಇವೆ. ಕೈಸಾಲೆಗಳಲ್ಲಿ ಘನಾಕಾರದ ಕಂಬಗಳಿಗೆ ವಿಜಯನಗರದ ಆರಂಭಕಾಲದ್ದೆನ್ನಬಹುದಾದ ಪುಷ್ಪ ಬೋದಿಗೆಯುಳ್ಳ ಅಷ್ಟಬೋದಿಗೆಗಳಿವೆ. ಅರ್ಧಮಂಟಪದ ಮಧ್ಯೆ ನಾಲ್ಕು ನುಣುಪಾದ ನಾಜೂಕಾಗಿ ಕೆತ್ತಲ್ಪಟ್ಟ ಘನಾಕೃತಿಯ ಕಪ್ಪುಶಿಲೆಯ ಕಂಬಗಳಿವೆ. ಇವುಗಳ ಮೇಲೆ ಗಣೇಶ, ಮಹಿಷಮರ್ದಿನಿ, ಹನುಮಂತ, ವಿಷ್ಣುವಿನ ಅವತಾರಗಳು ಇವುಗಳ ಉಬ್ಬು ಚಿತ್ರಗಳಿವೆ. ಕಲ್ಕಿಯ ಅವತಾರವನ್ನು ನಿರೂಪಿಸಿರುವುದೊಂದು ವೈಶಿಷ್ಟ್ಯ. ಚತುರ್ಭುಜ ವಿಷ್ಣು ಶಂಖ, ಚಕ್ರ, ಕತ್ತಿ, ಗುರಾಣಿಗಳನ್ನು ಹಿಡಿದು ಕುದುರೆಯ ಮೇಲೆ ಕುಳಿತಂತೆ ಕಲ್ಕಿಯನ್ನು ಚಿತ್ರಿಸಲಾಗಿದೆ. ಗರ್ಭಗುಡಿಯ ಹೊರಗೋಡೆಗಳನ್ನು ಮೂರು ಬಾರಿ ಮುಂಚಾಚಿ, ಎರಡು ಸಲ ಹಿಂಜರಿದಿರುವುದರಿಂದ ಗೂಡಿನಂತೆ ತೋರುವ ಹಾಗೆ ನಿರ್ಮಿಸಲಾಗಿದೆ. ಅಂತರಾಳ ಮತ್ತು ಮಂಟಪಗಳ ಹೊರಗೋಡೆಗಳೂ ಹೀಗೆಯೇ ಇದ್ದು ಎರಡೂ ಕಡೆ ದ್ವಾರಪಾಲಕರಿರುವ ದೇವಕೋಷ್ಠಗಳು, ಕುಂಭಪಂಜರಗಳು ಎದ್ದು ಕಾಣುತ್ತವೆ.

ಗರ್ಭಗೃಹದ ಉತ್ತರಕ್ಕಿರುವ ಸಣ್ಣ ಗಾತ್ರದ ಅಮ್ಮನಗುಡಿ ಅಲಂಕಾರದಲ್ಲಿ ಹೆಚ್ಚು ಭವ್ಯ. ಇದರ ಪೂರ್ವ ಗೋಡೆಯಲ್ಲಿ ನರಸಿಂಹನ ಉಬ್ಬು ಚಿತ್ರಗಳು. ದ್ವಾರಬಂಧದಲ್ಲಿ ವೈಷ್ಣವ ಮುನಿಗೆ ದಾನ ನೀಡುತ್ತಿರುವ ಹಾಗೂ ಮುನಿಯೊಬ್ಬನಿಂದ ಏನನ್ನೋ ಪಡೆಯುತ್ತಿರುವ ಅರಸನೊಬ್ಬನ ಉಬ್ಬು ವಿಗ್ರಹ ಇವೆ. ಈ ಮುನಿ ವ್ಯಾಸರಾಯನೆಂದೂ ಅರಸನು ಕೃಷ್ಣದೇವರಾಯನೆಂದೂ ಗುರುತಿಸಲಾಗಿದೆ. ದೇವಾಲಯದ ಆವರಣವನ್ನು ಹಾಗೂ ಈಶಾನ್ಯದಲ್ಲಿರುವ ಕಲ್ಯಾಣಮಂಟಪವನ್ನು ೧೫೨೧ರಲ್ಲಿ ಕಟ್ಟಿಸಲಾಯಿತು. ಇದು ಪ್ರಾಕಾರ ಗೋಡೆಗೆ ಹೊಂದಿಕೊಂಡಂತೆ ಕಟ್ಟಲ್ಪಟ್ಟಿರುವುದರಿಂದ ಆ ಗೋಡೆಯಲ್ಲಿ ಮೊದಲು ಚಿತ್ರಿಸಲಾಗಿದ್ದ ಅರೆಯುಬ್ಬು ಚಿತ್ರಗಳು ಈಗ ಮುಚ್ಚಿಹೋಗಿವೆ.

ವಿಜಯನಗರದ ಆರಂಭ ಕಾಲದಲ್ಲಿ ಅಥವಾ ಅದಕ್ಕೂ ಮೊದಲು ಕಟ್ಟಲಾದ ಕೆಲವು ದೇವಾಲಯಗಳು ಹಂಪೆಯಲ್ಲಿವೆ (ಛಾಯಾಚಿತ್ರ ೫೨, ೫೩). ಕಂಪಿಲಿಗೆ ಹೋಗುವ ದಾರಿಯಲ್ಲಿ ಕಮಲಾಪುರದ ಪ್ರವಾಸಿ ಬಂಗಲೆಯ ಸಮೀಪದಲ್ಲಿರುವ ಗಾಣಗಿತ್ತಿಗುಡಿ ಎಂದು ಕರೆಯಲಾದ ಜೈನಬಸದಿಯನ್ನು ಇಮ್ಮಡಿ ಹರಿಹರನ ಮಂತ್ರಿ ಇರುಗಪ್ಪ ದಂಡನಾಥನು ೧೩೮೫ರಲ್ಲಿ ಕಟ್ಟಿಸಿ ಕುಂಥು ತೀರ್ಥಂಕರರ ವಿಗ್ರಹವನ್ನು ಪ್ರತಿಷ್ಠಾಪಿಸಿದನು. ಗರ್ಭಗೃಹ, ಅಂತರಾಳ, ಅರ್ಧಮಂಟಪ ಮತ್ತು ಮಹಾಮಂಟಪಗಳನ್ನೊಳಗೊಂಡ, ಸರಳವಾದ ಘನಕಾರದ ಕಂಬಗಳ, ಉತ್ತರಾಭಿಮುಖದ ಈ ಬಸದಿಯು ಗರ್ಭಗೃಹದ ಮೇಲೆ ಮೆಟ್ಟಿಲು ಮೆಟ್ಟಿಲುಗಳಾಗಿ ವಿಸ್ತಾರ ಕಡಿಮೆಯಾಗುತ್ತಾ ಹೋಗುವ ಆರು ತಲಗಳ ಗೋಪುರವಿದೆ. ಚೌಕಾಕಾರದ ಗ್ರೀವ ಹಾಗೂ ಶಿಖರ. ಶಿಖರದ ಮಧ್ಯೆ ಅಂಡಾಕಾರದ ಗುಮ್ಮಟ ಮಹಾಮಂಟಪದ ಮುಂದೆ ಎತ್ತರವಾದ ಮಾನಸ್ತಂಭವಿದೆ.




ಚಿತ್ರ – ೫೨



ಚಿತ್ರ – ೫೩


ಹೇಮಕೂಟದ ಗುಡ್ಡದ ಮೇಲೂ ಇದೇ ವಿಧದ ಹಲವು ಗುಡಿಗಳಿವೆ. ಸಮಾನಾಂತರ ಮೆಟ್ಟಿಲುಗಳ ಶಾಲೀನ ಕದಂಬ ನಾಗರ ಶೈಲಿಯ ಗೋಪುರದ ಈ ಗುಡಿಗಳು ಬಹುಮಟ್ಟಿಗೆ ತ್ರಿಕೂಟಾಚಲಗಳು. ಪೂರ್ವ, ಪಶ್ಚಿಮ, ಉತ್ತರಾಭಿಮುಖವಾಗಿರುವ ಗರ್ಭಗೃಹಗಳನ್ನು ಸೇರಿಸಿದಂತೆ ಒಂದು ಅರ್ಧಮಂಟಪ. ನಯಗೊಳಿಸಿದ

ಆಯಾಕಾರದ ಕಲ್ಲುಗಳನ್ನು ಸೇರಿಸಿ ಕಟ್ಟಿದ ಭಿತ್ತಿಗಳು, ಸರಳವಾದ ಘನಾಕೃತಿಯ ಕಂಬಗಳು. ಚೌಕಾಕಾರದ ಶಿಖರದ ಮೇಲೆ ಅಂಡಾಕಾರದ ಗುಮ್ಮಟ. ಈಗ ಯಾವ ಗರ್ಭಗುಡಿಯಲ್ಲೂ ವಿಗ್ರಹಗಳಿಲ್ಲ. ೧೪ನೆಯ ಶತಮಾನದ ಮೊದಲ ಭಾಗದಲ್ಲಿ ಕಂಪಿಲಿಯ ಮುಮ್ಮಡಿ ಸಿಂಗೆಯನಾಯಕ ಇವುಗಳಲ್ಲಿ ಒಂದನ್ನು ಕಟ್ಟಿಸಿದನು. ಇನ್ನೊಂದು ತ್ರಿಕೂಟಾಚಲದ ಗೋಡೆಗಳಲ್ಲಿ ಚೌಕಾಕಾರದ ಗೋಡೆಗಂಬಗಳಿವೆ. ಮೂರು ಗರ್ಭಗುಡಿಗಳ ಮೇಲೂ ಮೂರು ಅಂತಸ್ತಿನ ವಿಮಾನ. ದ್ರಾವಿಡ ಶೈಲಿಯ ಪಂಜರಗಳು. ತಲೆಕೆಳಗು ಮಾಡಿದ ಹಡಗಿನ ಚಪ್ಪಟೆಯ ತಳದ ಆಕಾರದ ಚಾವಣಿಯ ದಿಂಡಿನ ಮೇಲೆ ಸ್ತೂಪಿಗಳನ್ನೊಳಗೊಂಡ ಆಯಾಕಾರದ ಸಣ್ಣಗುಡಿಗಳ ಮಾದರಿಗಳು ಈ ವಿಮಾನದ ಮೊದಲ ತಲದಲ್ಲಿ ಕಂಡುಬರುತ್ತವೆ. ಇನ್ನೂ ಸ್ವಲ್ಪ ದೂರದಲ್ಲಿ ಉತ್ತರಾಭಿಮುಖವಾಗಿರುವ ಮತ್ತೊಂದು ಗುಡಿಯಲ್ಲಿ, ಸಮಾನಾಂತರದಲ್ಲಿ ಕಿರಿದಾಗುತ್ತಾ ಹೋಗುವ ಮೆಟ್ಟಿಲುಗಳಂತಿರುವ ಎಂಟು ತಲಗಳ ವಿಮಾನಗಳನ್ನು ಕಾಣುತ್ತೇವೆ. ಇವುಗಳು ಸುಮಾರು ೧೪ನೆಯ ಶತಮಾನದ ಆರಂಭದಲ್ಲಿ ಕಟ್ಟಲಾದ ಶೈವಗುಡಿಗಳು. (ಛಾಯಾಚಿತ್ರ –೫೪)



ಚಿತ್ರ – ೫೪

ಕೃಷ್ಣದೇವರಾಯನು ಕ್ರಿ. ಶ. ೧೫೧೩ರಲ್ಲಿ ಕಟ್ಟಿಸಿದ ಇನ್ನೊಂದು ಕಲಾತ್ಮಕವಾದ ಗುಡಿ ಕೃಷ್ಣಸ್ವಾಮಿ ಆಲಯ. ಉದಯಗಿರಿಯನ್ನು ವಶಪಡಿಸಿಕೊಂಡಾಗ ಅಲ್ಲಿದ್ದ ಕೃಷ್ಣ ವಿಗ್ರಹವೊಂದನ್ನು ಈ ದೇವಾಲಯದ ಮಂಟಪದಲ್ಲಿ ಪ್ರತಿಷ್ಠಾಪಿಸಿದನೆಂದು ಶಾಸನ ತಿಳಿಸುತ್ತದೆ. ಈ ವಿಗ್ರಹ ಈಗ ಮದರಾಸಿನ ವಸ್ತುಸಂಗ್ರಹಾಲಯದಲ್ಲಿದೆ. ಎತ್ತರವಾದ ಪ್ರಾಕಾರದ ನಡುವಣ ಅಂಗಳದಲ್ಲಿ ಪೂರ್ವಾಭಿಮುಖವಾಗಿರುವ ಈ ಆಲಯ ದ್ರಾವಿಡ ಶೈಲಿಯದು. ದೀರ್ಘ ಚತುರಸ್ರಾಕಾರದ ತಳಹದಿಯ ಮೇಲಿರುವ ಈ ಆಲಯದಲ್ಲೂ ಎಂದಿನಂತೆ ಗರ್ಭಗೃಹ, ಅಂತರಾಳ, ನಡುವೆಯ ಮುಚ್ಚಿದ ಪ್ರಾಕಾರ, ಅರ್ಧಮಂಟಪ, ತೆರೆದ ಮಹಾಮಂಟಪಗಳುಳ್ಳ ಈ ಸಂಕೀರ್ಣ ಆಲಯದ ಆವರಣದಲ್ಲಿ ಪರಿವಾರ ದೇವತೆಗಳ ಗುಡಿಗಳಿವೆ. ತ್ರಿತಲ ವಿಮಾನದ ಮೇಲೆ ದುಂಡಾಗಿರುವ ಶಿಖರ. ವಾಯವ್ಯ ಮೂಲೆಯಲ್ಲಿ ದೇವಿಯ ಗುಡಿ. ಏಕಶಿಲೆಯ ಅವಳಿ ಕಂಬಗಳ ಮೇಲೆ ಯಾಳಿಯ, ಸಸ್ಯಗಳ ವಿನ್ಯಾಸಗಳು, ಕೃಷ್ಣನ ಬಾಲಲೀಲೆಗಳಿಗೆ ಸಂಬಂಧಿಸಿದ ಚಿತ್ರಗಳೂ ಇವೆ. ದ್ವಾರಬಂಧದ ಇಕ್ಕೆಲದ ಕಂಬಗಳಲ್ಲಿ ಗಂಗಾದೇವಿ ನರ್ತಿಸುತ್ತಿದ್ದು ಅವಳ ಎತ್ತಿದ ಕೈಗಳಿಂದ ಕಲ್ಪಲತೆಗಳು ಇಳಿ ಬಿದ್ದಿವೆ. ಈ ತೋಳುಗಂಬಗಳು/ ಬಹು ಕಲಾತ್ಮಕವಾಗಿದ್ದು ಮಾದರಿಯಾದ ಜೋಡಿಗಳಾಗಿವೆ.



ಚಿತ್ರ – ೫೫

ಆಲಯದೊಳಗಣ ಗುಡಿಗಳಲ್ಲಿ ಒಂದು ಸುಬ್ರಹ್ಮಣ್ಯನಿಗಾಗಿ ಮೀಸಲಾದುದೊಂದು ವಿಶೇಷ. ಸುಬ್ರಹ್ಮಣ್ಯನ ಹಲವಾರು ಗಾರೆಯ ಶಿಲ್ಪಗಳು ಇಲ್ಲಿವೆ. ಮೂರು ಗೋಪುರಗಳ ಈ ಆಲಯದಲ್ಲಿ ಪೂರ್ವ ದಿಕ್ಕಿನಲ್ಲಿ ಪಶ್ಚಿಮಾಭಿಮುಖವಾಗಿರುವ ಗೋಪುರ ಹಿರಿದು, ಗಾರೆಯಲ್ಲಿ ಮಾಡಿರುವ ಗುರಾಣಿಗಳನ್ನು ಹಿಡಿದ ಸೈನಿಕರ, ಉನ್ಮತ್ತಕುದುರೆಗಳ, ಆನೆಗಳ ಶಿಲ್ಪಗಳನ್ನು ಈ ಗೋಪುರದಲ್ಲಿ ಕಾಣುತ್ತೇವೆ. ಇವು ಕೃಷ್ಣದೇವರಾಯನ ಒರಿಸ್ಸಾ ದಂಡಯಾತ್ರೆಯ ಕದನ ಚಿತ್ರಗಳನ್ನು ನಿರೂಪಿಸುವಂತೆ ತೋರುತ್ತದೆ.

ವಿಜಯನಗರದ ವಾಸ್ತುಶೈಲಿಯ ಭವ್ಯತೆಯ ಪರಾಕಾಷ್ಠೆಯನ್ನು ನದೀತೀರದಲ್ಲಿನ 'ಪುರಂದರದಾಸರ' ಮಂಟಪ ಹಾಗೂ ತುಲಾಭಾರಸ್ತಂಭವನ್ನು ದಾಟಿದರೆ ಸಿಗುವ ವಿಠ್ಠಲರಾಯನ ಗುಡಿಯಲ್ಲಿ ಕಾಣುತ್ತೇವೆ. ೧೬೪ X ೯೪.೫ ಮೀ. ವಿಸ್ತಾರದ

ದೀರ್ಘ ಚತುರಸ್ರಾಕಾರದ ಆವರಣದಲ್ಲಿರುವ ಈ ದೇವಾಲಯದ ಪೂರ್ವ, ಉತ್ತರ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಉತ್ತುಂಗವಾದ ಗೋಪುರಗಳಿವೆ. ದಕ್ಷಿಣ ದಿಕ್ಕಿನ ಗೋಪುರ ಹೆಚ್ಚು ಅಲಂಕೃತ. ಮಧ್ಯದಲ್ಲಿ ಗರ್ಭಗೃಹ ಮತ್ತು ಅದರ ಅಕ್ಷದಲ್ಲಿ ಮಂಟಪಗಳು– ಕಲ್ಯಾಣಮಂಟಪ, ಉತ್ಸವ ಮಂಟಪ, ನೂರು ಕಂಬಗಳ ಮಂಟಪ. ಮುಂಭಾಗದಲ್ಲಿ ಕಲ್ಲಿನ ರಥ, ಇಲ್ಲಿ ಒಂದು ೧೨.೨ ಮೀ. ಎತ್ತರದ ದೀಪಸ್ತಂಭ ಸಹ ಇದ್ದಿತಾದರೂ ಅದು ಈಗ ಮುರಿದು ತುಂಡಾಗಿದೆ. ಈ ಆಲಯದಲ್ಲಿ ಯಾವ ವಿಗ್ರಹವೂ ಇರಲಿಲ್ಲವೆಂದೂ ಪೂಜಾದಿಗಳು ನಡೆಯುತ್ತಿರಲಿಲ್ಲವೆಂದೂ ಪ್ರತೀತಿ ಇದೆ. ಆದರೆ ಇದು ಸತ್ಯಕ್ಕೆ ದೂರವಾದ ಊಹೆ. ಕ್ರಿ. ಶ. ೧೫೬೫ ರ ವರೆಗೂ ಇಲ್ಲಿ ಪೂಜೆಗಳೂ ಉತ್ಸವಗಳೂ ನಡೆಯುತ್ತಿದ್ದುವೆನ್ನಲು ಖಚಿತವಾದ ಶಾಸನಾಧಾರಗಳಿವೆ. ಪೂರ್ವಾಭಿಮುಖವಾದ ಗರ್ಭಗೃಹ ಮತ್ತು ಇದಕ್ಕೆ ಹೊಂದಿದ ಮಂಟಪಗಳೆಲ್ಲ ಸೇರಿ ಹೆಚ್ಚು ಎತ್ತರವಿಲ್ಲದ ಉದ್ದನೆಯ (೬.೭ ಮೀ. ಎತ್ತರ, ೭೦ ಮೀ. ಉದ್ದ) ಒಂದು ಕಟ್ಟಡದ ಗುಂಪು ಎನಿಸಿಕೊಳ್ಳುತ್ತದೆ. ಮುಚ್ಚಿದ ಪ್ರದಕ್ಷಿಣಾಪಥ, ಅಂತರಾಳ, ಮುಚ್ಚಿದ ಅರ್ಧ ಮಂಟಪ ಮತ್ತು ತೆರೆದ ಮಹಾಮಂಟಪಗಳು ಗರ್ಭಗೃಹಕ್ಕೆ ಹೊಂದಿಕೊಂಡಿವೆ. ಮಹಾಮಂಟಪದ ಪಕ್ಕದ ಗೋಡೆಗಳು ಸಮಪ್ರಮಾಣದ ಹಿಂಜರಿತಗಳಿಂದ ಕೂಡಿದ್ದು ಇದರ ಅತಿಯಾದ ಉದ್ದ ಅಗಲದ ಭಾಗ ૩೦.೫ ಮೀಟರ್ ಅಳತೆಯುಳ್ಳದ್ದಾಗಿದೆ.

ಈ ದೇವಾಲಯದ ವಾಸ್ತು ವೈಭವವನ್ನು ಹೀಗೆ ವರ್ಣಿಸಬಹುದಾಗಿದೆ. ಬಹುಕೋನಗಳ ಮೇಲು ಪಾಯದ ಮೇಲೆ ಕಟ್ಟಲಾದ ಈ ಆಲಯದ ಸಂಯುಕ್ತ ಸ್ತಂಭಗಳನ್ನು ಬಹುಸೂಕ್ಷ್ಮವಾಗಿ ಏಕಶಿಲೆಯಿಂದ ಕೊರೆದು ಸಾಲು ಸಾಲಾಗಿ ನಿಲ್ಲಿಸಿದ್ದಾರೆ. ಅವುಗಳ ಮೇಲೆ ಅನೇಕ ಪ್ರಾಣಿಗಳ, ಪಕ್ಷಿಗಳ, ಬಳ್ಳಿಗಳ ಚಿತ್ರಗಳನ್ನು ಬಿಡಿಸಿದ್ದಾರೆ. ಅಡಿಪಾಯದ ಅಡ್ಡಪಟ್ಟಿಗಳ ಮೇಲೂ ಅಂತಹುದೇ ಕೆತ್ತನೆ ಕೆಲಸ ಮಾಡಿ ಮಧ್ಯೆ ಮಧ್ಯೆ ಇರುವ ಗೂಡುಗಳಲ್ಲಿ 'ಭದ್ರ ಮಂಟಪ'ಗಳ ರೀತಿಯಲ್ಲಿ ದೇವಾನುದೇವತೆಗಳ ಸಣ್ಣ ಉಬ್ಬು ಚಿತ್ರಗಳನ್ನು ಕೊರೆದಿದ್ದಾರೆ. ಕಾರ್ನೀಸಿನಿಂದ ಜೋಲುತ್ತ ಉದ್ದಕ್ಕ ಹರಿದಿರುವ ಮತ್ತು ಕಲ್ಲಿನ ಶಲಾಕೆಗಳಿಂದ ಒಟ್ಟಿಗೆ ಹಿಡಿದಿಡಲ್ಪಟ್ಟಿರುವ ಕಮಲದ ಎಲೆಗಳು, ಕಮಲಗಳನ್ನು, ಕಮಲನಾಳಗಳನ್ನು ಕಚ್ಚಿ ಹಾರುತ್ತಿರುವಂಥ ಹಂಸಗಳನ್ನು ಕೆತ್ತಿರುವ ಕಾರ್ನೀಸು, ಅನೇಕ ಜಟಿಲ ವಿನ್ಯಾಸಗಳಲ್ಲಿ ಕಾಣಿಸಿಕೊಳ್ಳುವ ಕಲ್ಪಲತೆಗಳು, ಬಹು ಸುಂದರವಾಗಿ ಕೊರೆದಿರುವ ಯೋಗಾಸನಗಳ ಅಕ್ಕಪಕ್ಕಗಳಲ್ಲಿ ಅಲ್ಲಿ ಇಲ್ಲಿ ಕೆತ್ತಿರುವ ಕೊಕ್ಕರೆ ಮುಂತಾದ ನೀರು ಹಕ್ಕಿಗಳು, ಬಹುಶಃ ಚಾತಕಗಳು, ತುದಿಯಲ್ಲಿ ಎದ್ದು ಕಾಣುವಂತೆ ಗೋಚರವಾಗುವ ಸಣ್ಣ ಗೋಪುರಗಳು ಇವೆಲ್ಲವೂ ವಿಜಯನಗರದ ಶೈಲಿ ಎಂಬ ಪ್ರತ್ಯೇಕ ಶೈಲಿಯೊಂದನ್ನು ಇತರ ಶೈಲಿಗಳಿಂದ ಪ್ರತ್ಯೇಕಿಸಿ ತೋರಿಸುತ್ತವೆ. ಕಲ್ಯಾಣ ಮಂಟಪಕ್ಕೆ ಒಯ್ಯುವ ಮೆಟ್ಟಿಲುಗಳ ಅಕ್ಕಪಕ್ಕದಲ್ಲಿ ಸುಂದರವಾಗಿ ಆದರೆ ಹೊಯ್ಸಳ ಶೈಲಿಯ ತುಂಬು ಆಕಾರ ಇಲ್ಲದೆ ಕೆತ್ತಿರುವ ಆನೆಗಳು, ಮಕರಗಳು ಇವು ಒಂದಾದ ಮೇಲೊಂದರಂತೆ ಕಾಣಿಸಿಕೊಳ್ಳುತ್ತವೆ. ಎರಡನೆಯದಾಗಿ ಕಲ್ಯಾಣಮಂಟಪ ಮತ್ತು ಫಲಪೂಜಾ ಮಂಟಪಗಳು ವಿಜಯನಗರಶೈಲಿಯ ವೈಶಿಷ್ಟ್ಯ. ಇಲ್ಲಿ ಮೇಲೆ ಹೇಳಿದಂತಹ ಸಾಲುಗಂಬಗಳಿಗೆ ಹೊಸ ವಿನ್ಯಾಸಗಳನ್ನು ಸೇರಿಸಿರುತ್ತಾರೆ. ಉದಾಹರಣೆಗೆ : ಹಿಂಗಾಲಿನಿಂದ ಕುಪ್ಪಳಿಸಿ ಮೇಲೆದ್ದಿರುವ ಯಾಳಿಗಳ ಮೇಲೆ ಕುಳಿತಿರುವ ವಿಜಯನಗರದ ರಾವುತರು ಮತ್ತು ಒಮ್ಮೊಮ್ಮೆ ದೇವತೆಗಳು. ಮೂರನೆಯದಾಗಿ ಸಮಕಾಲೀನ ಪ್ರವಾಸಿಯೊಬ್ಬ ವರ್ಣಿಸಿರುವ ನೃತ್ಯಕಂಬ ಅಲ್ಲಿದೆ. ಈ ಮಂಟಪಗಳ ಚತುಷ್ಕೋನದ ಕಂಬಗಳ ಮೇಲೆ ಪ್ರತಿಮುಖದಲ್ಲೂ ಮೂರು ಹಂತಗಳಲ್ಲಿ ಸಣ್ಣ ಉಬ್ಬು ಚಿತ್ರಗಳಾಗಿ ಮೋಹಕ ಭಂಗಿಗಳಲ್ಲಿರುವ ದಶಾವತಾರಗಳು, ನರ್ತನ ಭಂಗಿಗಳು, ಬಹುಸುಂದರ ಹರ್ಷ ಭಂಗಿಗಳೂ ಮುಮ್ಮುಖದ ಅಥವಾ ಐದು ಮುಖದ ವಿಚಿತ್ರ ವೇಣುಗೋಪಾಲಕರು ಇವರನ್ನು ಕೆತ್ತಲಾಗಿದೆ.

ಈ ದೇವಾಲಯದ ಕಂಬಗಳು ಶ್ರೀಮಂತ ಸೌಂದರ್ಯಕ್ಕೆ ಕಾರಣವಾಗಿವೆ. ಮಹಾಮಂಟಪದಲ್ಲಿ ೫೬ ಕಂಬಗಳಿವೆ. ಅವುಗಳಲ್ಲಿ ೪೦ ಕಂಬಗಳು ಸಮಾನಾಂತರದಲ್ಲಿದ್ದು ಮಂಟಪವನ್ನು ಹಜಾರಗಳಾಗಿ ವಿಂಗಡಿಸಲಾಗಿದೆ. ಒಂದೊಂದು ಕಂಬವೂ ಬೃಹದಾಕಾರದ್ದಾಗಿದ್ದು ಶಿಲ್ಪಕಲೆಯ ಉತ್ತಮ ಮಾದರಿಯಾಗಿದೆ. ಏಕಶಿಲೆಯ ಈ ಕಂಬಗಳಲ್ಲಿ ಶಿಲೆಯ ಕಾಂಡ ಮಧ್ಯದಲ್ಲಿ ಆಸರೆಯಾಗಿದ್ದು, ಸುತ್ತಲೂ ವಿಗ್ರಹವನ್ನು ಒಂದಕ್ಕೊಂದು ಸೇರಿಸಿ ಕೆತ್ತಲಾಗಿದೆ. ಇನ್ನೊಂದು ಸ್ತಂಭ ವಿನ್ಯಾಸದಲ್ಲಿ ಮಧ್ಯದ ಕಾಂಡದ ಸುತ್ತಲೂ ತೆಳುವಾದ ಮೂಲೆಗಂಬಗಳಂತಿರುವ ಕಂಬಗಳು ಸುತ್ತುವರಿದಿರುತ್ತವೆ. ಈ ಸಣ್ಣ ಕಂಬಗಳ ಮೇಲೆ ಲಘುವಾಗಿ ಹೊಡೆದಾಗ ಸಪ್ತಸ್ವರಗಳ ನಾದಮಾಧುರ್ಯ ಹೊಮ್ಮುತ್ತದೆ.

ದೇವಾಲಯದ ಮುಂದಿನ ಕಲ್ಲಿನ ರಥ ಮತ್ತೊಂದು ಸುಂದರವಾದ ಕೃತಿ. ಸಾಧಾರಣವಾಗಿ ವೈಷ್ಣವ ದೇವಾಲಯಗಳ ಮುಂದೆ ಗರುಡನಿಗೆಂದು ಒಂದು ಸಣ್ಣ ಗುಡಿಯನ್ನು ಕಟ್ಟಿರುತ್ತಾರೆ. ಆದರೆ ಇಲ್ಲಿ ಈ ರಥ ಆ ಗರುಡನ ಗುಡಿಯಾಗಿ ಪರಿಣಮಿಸಿದೆ. ರಥದ ಒಳಗಡೆಯ ಗರ್ಭಗೃಹದಲ್ಲಿ ಗರುಡನ ವಿಗ್ರಹವಿದೆ. ದೇವಾಲಯಗಳಲ್ಲಿ ಉತ್ಸವ ಸಂದರ್ಭಗಳಲ್ಲಿ ಹೊರಡಿಸುವ ಮರದ ರಥಗಳನ್ನೇ ಇದು ಹೋಲುತ್ತದೆ. ಬಹಳಮಟ್ಟಿಗೆ ಇದಕ್ಕೆ ಸ್ಫೂರ್ತಿ ಕೋನಾರ್ಕದ ಸೂರ್ಯರಥವಾಗಿರಬೇಕು. ಕಲಿಂಗ ದಿಗ್ವಿಜಯದ

ಸಂದರ್ಭದಲ್ಲಿ ಅಲ್ಲಿ ಕಂಡ ಆ ಆಲಯವನ್ನು ಕಿರಿಯ ಪ್ರಮಾಣದಲ್ಲಿ ಇಲ್ಲಿ ಅಳವಡಿಸಿರಬೇಕು. ಈ ರಥಕ್ಕೆ ಕಲ್ಲಿನ ಚಕ್ರಗಳಿದ್ದು ಅವುಗಳನ್ನು ತಿರುಗಿಸಲು ಸಹ ಸಾಧ್ಯವಿತ್ತು. ಈಗ ಹಾಗೆ ಅದನ್ನು ತಿರುಗಿಸಲು ಸಾಧ್ಯವಾಗದಂತೆ ಮಾಡಿದ್ದಾರಷ್ಟೆ. ರಥದ ಮೇಲೆ ಅಂದು ಇಟ್ಟಿಗೆಯಲ್ಲಿ ವಿಮಾನವೊಂದನ್ನು ಕಟ್ಟಲಾಗಿತ್ತು. ಈಗ ಅದು ಇಲ್ಲ. ಸೂಕ್ಷ್ಮ ಕೆತ್ತನೆಯ ಕೆಲಸಗಳನ್ನು ಇಲ್ಲಿ ಕಾಣಬಹುದು.

ಗರ್ಭಗೃಹದ ಮೇಲೆ ತ್ರಿತಲ ವಿಮಾನವಿದೆ. ಹೊರಗೋಡೆಗಳಲ್ಲಿ ಅಲಂಕಾರಿಕ ದೇವಕೋಷ್ಠಗಳನ್ನೂ ಕುಂಭಪಂಜರಗಳನ್ನೂ ಕೆತ್ತಲಾಗಿದೆ. ದೇವಕೋಷ್ಠಗಳು ದೇವಾಲಯದಲ್ಲಿನ ಮುಖ್ಯ ದೇವರಿಗೆ ಸೂಕ್ತವಾದ ಪರಿವಾರ ದೇವತೆಗಳನ್ನು ಸ್ಥಾಪಿಸಲು ಗೋಡೆಗಳಲ್ಲಿಯೇ ಕೆತ್ತಲಾದ ಸಣ್ಣ ಗೂಡುಗಳು. ಕುಂಭಪಂಜರ ಉಬ್ಬು ಚಿತ್ರವಾಗಿದ್ದು ಅದರ ಬಾಯಿಂದ ಸಣ್ಣದೊಂದು ಕಂಬ ಹೊರಬಂದಂತಿದ್ದು ಅದರ ಮೇಲ್ಭಾಗದಲ್ಲಿ ಪಂಜರದಂತಹ ಲತಾವಿನ್ಯಾಸವಿರುತ್ತದೆ. ದೇವಕೋಷ್ಠಗಳ ಮೇಲಿನ ಅಲಂಕಾರಿಕ ಪಟ್ಟಿಗಳಲ್ಲಿ ಭೂತಗಣಗಳ ಚಿತ್ರಗಳಿವೆ.

ಹೊಸಪೇಟೆಯಿಂದ ಹಂಪೆಗೆ ಬರುವಾಗ ದಾರಿಯಲ್ಲಿ ಸಿಗುವ ಅನಂತಶಯನ ಗುಡಿ ಎಂಬ ಹೆಸರಿನ ಗ್ರಾಮದಲ್ಲಿರುವ ಗುಡಿಯನ್ನು ಅನಂತಶಯನನಿಗಾಗಿ ಕೃಷ್ಣದೇವರಾಯನು ಕಟ್ಟಿಸಿದನು. ತನ್ನ ಮಗ ತಿರುಮಲನ ನೆನಪಿಗಾಗಿ ಸಾಲೆ ತಿರುಮಲ ಮಹಾರಾಯಪುರ ಎಂಬ ಗ್ರಾಮವನ್ನು ನೆಲೆಗೊಳಿಸಿ ಅಲ್ಲಿ ಅನಂತಪದ್ಮನಾಭನ ಗುಡಿಯೊಂದನ್ನು ಕಟ್ಟಿಸಿ ಅಲ್ಲಿ ಪೂಜೆ ಪುನಸ್ಕಾರಗಳಿಗೆಂದು ಗ್ರಾಮಗಳನ್ನು ದತ್ತಿಯಾಗಿ ನೀಡಿದನೆಂದು ೧೫೨೪ರ ಶಾಸನ ತಿಳಿಸುತ್ತದೆ. ೧೫೪೯ರಲ್ಲಿ, ೨೫ ವರ್ಷಗಳ ಬಳಿಕ, ಸದಾಶಿವರಾಯನು ದೇವರದರ್ಶನ ಪಡೆದು ಮತ್ತಷ್ಟು ಭೂದಾನ ಮಾಡಿದನೆಂದು ಇನ್ನೊಂದು ಶಾಸನದಿಂದ ತಿಳಿದಿದೆ. ಆದರೆ ಈಗ ಈ ಗುಡಿಯಲ್ಲಿ ವಿಗ್ರಹವಿಲ್ಲ. ಹಡಗಲಿ ತಾಲೂಕಿನ ಹೊಳಲು ಎಂಬ ಗ್ರಾಮಕ್ಕೆ ಆ ವಿಗ್ರಹವನ್ನು ಒಯ್ದು ಅಲ್ಲಿ ಅದಕ್ಕಾಗಿ ಇನ್ನೊಂದು ಆಲಯವನ್ನು ಕಟ್ಟಿಸಿ ಸ್ಥಾಪಿಸಲಾಗಿದೆ. ಅನಂತಶಯನ ಗುಡಿ ವಿಶಿಷ್ಟ ರೀತಿಯದು. ಈಗ ದೇವಾಲಯದ ಬಹುಭಾಗಗಳು ಭಗ್ನವಾಗಿವೆ. ದೀರ್ಘ ಚತುರಸ್ರಾಕಾರದ ಗರ್ಭಗೃಹ, ಅದೇ ವಿನ್ಯಾಸದ ಅರ್ಧಮಂಟಪ ಮತ್ತು ಮಹಾಮಂಟಪಗಳನ್ನೊಳಗೊಂಡ ಆಲಯದ ವಿಮಾನ ೨೪ ಮೀಟರುಗಳಷ್ಟು ಎತ್ತರವಾಗಿದೆ. ಸರಳಾಲಂಕರಣದ ಅಚ್ಚುಪಟ್ಟಿಯುಳ್ಳ ಅಧಿಷ್ಠಾನದ ಮೇಲೆ ಗರ್ಭಗೃಹದ ಬೋಳು ಗೋಡೆಗಳೆದ್ದಿವೆ. ಇದರ ಮೇಲೆ ಇಟ್ಟಿಗೆಯಿಂದ ಕಟ್ಟಲಾದ ಮೇಲ್ಕಟ್ಟಡದಲ್ಲಿ ದೀರ್ಘ ವರ್ತುಲಾಕಾರದ ಗ್ರೀವ ಮತ್ತು ಶಿಖರಗಳು, ಪಕ್ಕಗಳಲ್ಲಿ ಶಾಲಗಳು, ಪಂಜರಗಳು ಮುಂಚಾಚಿಕೊಂಡಿವೆ. ಮೇಲಿನ ಸ್ತೂಪಿಗಳು ಈಗ ಉಳಿದಿಲ್ಲ. ಉಳಿದ ಗುಮ್ಮಟವೇ ೧೦ ಮೀಟರುಗಳಷ್ಟು ಎತ್ತರವಾಗಿದೆ. ಅಂದಿನ ವಾಸ್ತುಶಿಲ್ಪದ ಕೌಶಲ್ಯಕ್ಕೆ ಇದೊಂದು ಉತ್ತಮ ನಿದರ್ಶನ. ಇದರ ಗರ್ಭಗೃಹಕ್ಕೆ ಮೂರು ಬಾಗಿಲುಗಳು. ಶಯನಾಸನದಲ್ಲಿರುವ ಸ್ವಾಮಿಯ ಭವ್ಯ ವಿಗ್ರಹವನ್ನು ಕೇವಲ ಒಂದು ಬಾಗಿಲಿನಿಂದ ಸಮಗ್ರವಾಗಿ ನೋಡಲಾಗದೆಂಬ ಕಾರಣದಿಂದ ಇಂತಹ ಏರ್ಪಾಡು. ಗರ್ಭಗುಡಿಯ ಹಿಂದಿನ ಗೋಡೆಯನ್ನೆಲ್ಲಾ ಹೊಂದಿಕೊಂಡ ಪೀಠ ಮಾತ್ರ ಈಗ ಇಲ್ಲಿದೆ. ಮಹಾಮಂಟಪದ ಅಲಂಕೃತ ತಳಪಾಯ ಮಾತ್ರ ಉಳಿದಿದೆ.

ಹಂಪೆಯಲ್ಲಿ ರಾಜಬೀದಿಯಿಂದ ಮುಂದಕ್ಕೆ ಎಡ ಭಾಗದ ಕಾಲುದಾರಿಯಲ್ಲಿ ಹೋದರೆ ನದೀತೀರದ ಮೇಲೆ ಕೋದಂಡರಾಮನ ದೇವಾಲಯವಿದೆ. ಇದರ ಗರ್ಭಗೃಹ ಆಯಾಕಾರದ್ದು. ಒಳಗೆ ದೊಡ್ಡ ಬಂಡೆಯೊಂದರ ಮೇಲೆ ರಾಮ, ಸೀತೆ ಮತ್ತು ಲಕ್ಷ್ಮಣರ ಉಬ್ಬು ಚಿತ್ರಗಳನ್ನು ಕೊರೆಯಲಾಗಿದೆ. ಮುಂದಿನ ಕಲ್ಯಾಣಮಂಟಪ ಅಲಂಕೃತ. ಈ ಗುಡಿಯ ಅಕ್ಕಪಕ್ಕದಲ್ಲಿ ರಂಗನಾಥ, ವರಾಹ, ಅನಂತಶಯನರ ಗುಡಿಗಳಿವೆ. ಅನಂತಶಯನ ಗುಡಿಯ ದಕ್ಷಿಣಕ್ಕೆ ಅಚ್ಚುತರಾಯನ ದೇವಾಲಯ. ಆ ಆಲಯದ ಮುಂದಿನ ಎರಡೂ ಬದಿಗಳಲ್ಲಿ ಮಂಟಪಗಳು. ಮಧ್ಯೆ ಬೀದಿ. ಇದನ್ನು ಸೂಳೆ ಬಜಾರ್ ಎಂದು ಕರೆಯುತ್ತಾರೆ. ಇದು ಈಗ ಹಾಳಾಗಿದ್ದು ಇಲ್ಲೆಲ್ಲ ಗದ್ದೆಗಳಾಗಿವೆ. ೧೫೩೯ರಲ್ಲಿ ಅಚ್ಚುತದೇವರಾಯನು ಕಟ್ಟಿಸಿದ ಕಾರಣ ಈ ದೇವಾಲಯಕ್ಕೆ ಆ ಹೆಸರು. ಶಾಸನದಲ್ಲಿ ದೇವರನ್ನು ತಿರುವೆಂಗಳನಾಥನೆಂದು ಹೆಸರಿಸಿದೆ. ಉತ್ತರಾಭಿಮುಖವಾದ ಈ ಆಲಯದ ಹೊರಗಿನ ಪ್ರಾಕಾರದ ಉತ್ತರ ಭಾಗದಲ್ಲಿ, ಒಳಪ್ರಾಕಾರದ ಪೂರ್ವ, ಪಶ್ಚಿಮ, ಉತ್ತರ ದಿಕ್ಕುಗಳಲ್ಲಿ ಗೋಪುರಗಳಿವೆ. ಹೊರಗಿನ ಒಳಗಣ ಅಂಗಳಗಳ ಎರಡು ಬದಿಗಳಲ್ಲೂ ಪ್ರಾಕಾರದ ಗೋಡೆಗಳಿವೆ. ಅವುಗಳಿಗೆ ಹೊಂದಿಕೊಂಡಂತೆ ಕಂಬಗಳ ಮಂಟಪಗಳಿವೆ. ಒಳಅಂಗಳದಲ್ಲಿ ಗರ್ಭಗೃಹ, ಮುಚ್ಚಿದ ಪ್ರದಕ್ಷಿಣಾಪಥ, ಅಂತರಾಳ, ಅರ್ಧಮಂಟಪ ಮತ್ತು ಅಲಂಕೃತ ಮಹಾಮಂಟಪಗಳು ಒಂದಕ್ಕೊಂದು ಹೊಂದಿಕೊಂಡಿವೆ. ಗರ್ಭಗೃಹದ ನೈಋತ್ಯಕ್ಕೆ ದೇವಿಯ ಗುಡಿ ಇದೆ. ಪೂರ್ವಾಭಿಮುಖವಾಗಿರುವ ಈ ಉಪಗುಡಿಯಲ್ಲೂ ಅಂತರಾಳ ಮತ್ತು ಕಂಬಗಳ ಅರ್ಧಮಂಟಪ ಗರ್ಭಗೃಹಕ್ಕೆ ಹೊಂದಿಕೊಂಡಿವೆ. ಒಂದು ವಿಧದಲ್ಲಿ ಈ ಆಲಯ ವಿಠ್ಠಲನ ಗುಡಿಯನ್ನು ಹೋಲುತ್ತದೆಯಾದರೂ ಆ ಆಲಯದ ಸೊಗಸು ಸೌಂದರ್ಯಗಳು ಇದರಲ್ಲಿಲ್ಲ. ಇಲ್ಲಿನ ಮಂಟಪಗಳ ಛಾವಣಿಗಳು ವಿಶಿಷ್ಟ ರೀತಿಯವಾಗಿವೆ. ಚಿತ್ರಪಟ್ಟಿಕೆಗಳಲ್ಲಿ ಕೆತ್ತಲಾಗಿರುವ ಆನೆಗಳು, ಕುದುರೆಗಳು, ಅರಬ್ ವರ್ತಕರು, ಇತರ ಪರದೇಶದವರು

ಇವರ ಚಿತ್ರಗಳು ಹೆಚ್ಚು ವಾಸ್ತವಿಕವಾಗಿವೆ. ದೇವಾಲಯದ ಬಾಗಿಲುವಾಡದ ಪೀಠದ ಮೇಲೆ ಮತ್ತು ಅಕ್ಕ ಪಕ್ಕಗಳಲ್ಲಿ ಕೆತ್ತಲಾಗಿರುವ ದಶಾವತಾರದ ಚಿತ್ರಗಳು ಭಾವಪೂರ್ಣವಾಗಿವೆ. ಮಕರವಾಹನಾಸೀನಳಾದ ಗಂಗಾದೇವಿಯ ಸುಂದರವಾದ ಮೂರ್ತಿ ಸಹ ದ್ವಾರಬಂಧದಲ್ಲಿದೆ. ಮಂಟಪಗಳ, ಪಡಸಾಲೆಗಳ, ಕಂಬಗಳ ಮೇಲೆ, ಗೋಡೆಗಳ ಮೇಲೆ ಕೃಷ್ಣನ ಲೀಲೆಗಳನ್ನು ನಿರೂಪಿಸುವ ಕೆತ್ತನೆಯ ಚಿತ್ರಗಳಿವೆ. ಅಚ್ಚುತರಾಯನ ದೇವಾಲಯ ಕೃಷ್ಣಸ್ವಾಮಿ ಆಲಯದ ಪಡಿಯಚ್ಚೆನ್ನಬಹುದು.

ಹಂಪೆಯಲ್ಲಿನ ಹಲವಾರು ವಿಗ್ರಹಗಳು ಏಕಶಿಲೆಯಲ್ಲಿ ಕಡೆಯಲಾದ ಅಸಾಮಾನ್ಯ ಮೂರ್ತಿಗಳು. ಸುಮಾರು ೬.೫ ಮೀಟರ್ ಎತ್ತರದ ನರಸಿಂಹನ ವಿಗ್ರಹ ಇವುಗಳಲ್ಲೊಂದು. ವಿಗ್ರಹದ ಸುತ್ತಲೂ ಪ್ರಾಕಾರದ ಗೋಡೆಗಳನ್ನೆಬ್ಬಿಸಿದ್ದು, ಇದು ಒಂದು ಗುಡಿ ಎನಿಸಿಕೊಂಡಿದೆ. ನಾಲ್ಕು ಕೈಗಳ ಈ ವಿಗ್ರಹದ ತಲೆಯ ಮೇಲೆ ಏಳುಹೆಡೆಗಳ ನಾಗ ಇದೆ. ಮೂರ್ತಿಯ ತೊಡೆಯ ಮೇಲೆ ಲಕ್ಷ್ಮೀ ಕುಳಿತಿದ್ದಂತೆ ವಿಗ್ರಹದಲ್ಲಿ ತೋರಿಸಲಾಗಿತ್ತು. ಆದರೆ ದುಷ್ಟರು ಈ ವಿಗ್ರಹವನ್ನು ತುಂಡರಿಸಿದ್ದಾರೆ. ನರಸಿಂಹನ ಬೆನ್ನ ಹಿಂದೆ ತಬ್ಬಿಹಿಡಿದಂತೆ ತೋರುವ ಆಕೆಯ ಹಸ್ತವನ್ನು ಮಾತ್ರ ಕಾಣಬಹುದು. ವಿಗ್ರಹದ ಎರಡೂ ಕಡೆಯ ಕಂಬಗಳಿಂದ ಮಕರತೋರಣ ಎದ್ದಿದೆ. ಕೃಷ್ಣದೇವರಾಯನ ಅಪ್ಪಣೆಯಂತೆ ಆರ್ಯ ಕೃಷ್ಣಭಟ್ಟ ಇದನ್ನು ೧೫೫೮ರಲ್ಲಿ ಪ್ರತಿಷ್ಠಾಪಿಸಿದನೆಂದು ಇಲ್ಲಿನ ಶಾಸನ ತಿಳಿಸುತ್ತದೆ. ಈ ವಿಗ್ರಹವನ್ನು ಲಕ್ಷ್ಮೀನರಸಿಂಹ ವಿಗ್ರಹ ಎಂದು ಕರೆಯುವುದು ಹೆಚ್ಚು ಸಮಂಜಸ. ಇದರ ಪಕ್ಕದಲ್ಲಿ ಸುಮಾರು ೩ ಮೀಟರ್ ಎತ್ತರದ ಬೃಹದಾಕಾರದ ಶಿವಲಿಂಗ. ಇದರ ಸುತ್ತಲೂ ಪ್ರಾಕಾರ ಕಟ್ಟಿದೆ. ಈ ಶಿವಲಿಂಗದ ಬುಡವು ಪಕ್ಕದಲ್ಲಿ ಹರಿಯುವ ಕಾಲುವೆಯ ನೀರಿನಿಂದ ಸದಾ ಆವೃತ್ತವಾಗಿರುತ್ತದೆ. ಇದನ್ನು ಬಡವಿ ಎಂದು ಏಕೆ ಕರೆಯುತ್ತಾರೋ ತಿಳಿಯದು.

ಇನ್ನೊಂದು ಉದ್ದಾನ ವೀರಭದ್ರ ಎನಿಸಿಕೊಂಡ ಸುಮಾರು ೩.೫೦ ಅಡಿ ಎತ್ತರದ ವೀರಭದ್ರನ ಗುಡಿ. ನಾಲ್ಕು ಕೈಗಳಲ್ಲಿ ಒಂದೊಂದರಲ್ಲೂ ಕ್ರಮವಾಗಿ ಬಿಲ್ಲು, ಖಡ್ಗ, ಬಾಣ ಮತ್ತು ಗುರಾಣಿಗಳಿವೆ. ವಿಗ್ರಹದ ಬಲಭಾಗದಲ್ಲಿ ಕಿರಿಯ ಗಾತ್ರದ ದಕ್ಷನ ಒಂದು ವಿಗ್ರಹ. ೧೫೪೫ರಲ್ಲಿ ಸ್ಥಾಪಿಸಲಾದ ಈ ವಿಗ್ರಹವನ್ನು ಶಾಸನದಲ್ಲಿ ಮುದುವೀರಣ್ಣ ಎಂದು ಕರೆದಿದೆ. ಮುದು ಎಂದರೆ ಬೆಳೆದ ಎಂಬ ಅರ್ಥವನ್ನು ಕೊಡಲಾಗಿದೆ. ಕ್ರಮವಾಗಿ ೪ ಮತ್ತು ೧೬ ಅಡಿಗಳ ಎತ್ತರದ ಸಾಸಿವೆಕಾಳು ಮತ್ತು ಕಡಲೇಕಾಳು ಗಣೇಶರೆಂದು ಕರೆಯಲ್ಪಡುವ ಎರಡು ಬೃಹದ್ವಿಗ್ರಹಗಳನ್ನು ಇಲ್ಲಿ ಉಲ್ಲೇಖಿಸಬೇಕು. ಸಾಸಿವೆಕಾಳು ಗಣೇಶನ ಗುಡಿಯ ಮುಂದೆ ಸ್ತಂಭಗಳ ತೆರೆದ ಮಂಟಪವಿದೆ. ಇವು ನಾಜೂಕಾಗಿ ಕೆತ್ತಲ್ಪಟ್ಟು ಮೇಲೆ ಹೂವಿನ ಬೋದಿಗೆಗಳಿವೆ. ಕಡಲೆಕಾಳು ಗಣೇಶನನ್ನು ಒಂದು ತೆರೆದ ಮಂಟಪದಲ್ಲಿಯೇ ಪ್ರತಿಷ್ಠಾಪಿಸಲಾಗಿದೆ. ಇದರ ಕಂಬಗಳು ಒರಟಾಗಿ ಚೌಕಾಕಾರದಲ್ಲಿವೆ. ಈ ಬೃಹದಾಕಾರದ ವಿಗ್ರಹಗಳು ಒಂದು ವಿಧದಲ್ಲಿ ಅಂದಿನ ಅರಸರ ರಾಜಕೀಯದ ಮನೋಧರ್ಮವನ್ನು ಪ್ರತಿಬಿಂಬಿಸುತ್ತವೆ. ಇವು ಎಂತಹ ಕ್ಲೇಶ ಬಂದರೂ ವಿರೋಧಿಸುವ ಅದಮ್ಯಶಕ್ತಿಯ ಅಜೇಯತ್ವದ ಪ್ರತೀಕಗಳಾಗಿವೆ. ದುಷ್ಟಶಕ್ತಿಯ ವಿಜಯಸಂಕೇತಗಳಾಗಿ ಕಲ್ಲಿನಲ್ಲಿ ಮೂಡಿಬಂದಿವೆ.

ಭಕ್ತಿಪಂಥದ ಪ್ರಭಾವದಿಂದಾಗಿ ದೇವಸ್ಥಾನಗಳಲ್ಲಿ ಅನೇಕ ಉತ್ಸವಗಳು, ಆಳ್ವಾರುಗಳು ಮುಂತಾದ ಪುಣ್ಯಪುರುಷರ ಜನ್ಮದಿನಗಳ ಸಮಾರಂಭಗಳು ಮುಂತಾದ ಹಲವಾರು ಹೊಸ ಹೊಸ ಹಬ್ಬ ಹರಿದಿನಗಳನ್ನು ಆಚರಿಸುವ ಪದ್ಧತಿ ಆರಂಭವಾಯಿತು. ಅದರ ಪರಿಣಾಮವಾಗಿ ಪರಿವಾರ ದೇವತೆಗಳ, ಆಳ್ವಾರರುಗಳು ಮುಂತಾದವರ ಗುಡಿಗಳು, ಕಲ್ಯಾಣಮಂಟಪ, ವಾಹನ ಮಂಟಪ ಮೊದಲಾದ ಮಂಟಪಗಳು ದೇವಾಲಯದ ಆವರಣದಲ್ಲಿ ಕಟ್ಟಲ್ಪಟ್ಟವು.

ಕೃಷ್ಣದೇವರಾಯ, ಅಚ್ಯುತರಾಯರಂತಹ ಅರಸರು ಪವಿತ್ರ ಕ್ಷೇತ್ರಗಳೆನಿಸಿದ ತಿರುಪತಿ, ಕಾಂಚೀಪುರಂ, ಶ್ರೀರಂಗಂ ಇತ್ಯಾದಿ ಸ್ಥಳಗಳಿಗೆ ಸ್ವತಃ ಹೋಗಿ ಅಲ್ಲಿನ ದೇವರುಗಳಿಗೆ ಪೂಜೆಗಳನ್ನು ಸಲ್ಲಿಸಿದ್ದರಲ್ಲದೆ ಆ ದೇವಾಲಯಗಳ ಆವರಣಗಳಲ್ಲಿ ಹೊಸಮಂಟಪಗಳನ್ನು ಕಟ್ಟಿಸುವ, ಭಗ್ನಮಂಟಪಗಳನ್ನು ಜೀರ್ಣೋದ್ಧಾರಗೊಳಿಸುವ, ಗೋಪುರಗಳನ್ನೆಬ್ಬಿಸುವ ಕಾರ್ಯಗಳನ್ನು ಕೈಗೊಂಡರು. ಆದ್ದರಿಂದ ವಿಜಯನಗರ ವಾಸ್ತುಶೈಲಿ ದಕ್ಷಿಣಭಾರತದ ಎಲ್ಲ ಕಡೆಗಳಲ್ಲೂ ತನ್ನ ಪ್ರಭಾವ ಬೀರಿದೆ.

ತಮಿಳುನಾಡಿನ ಚೆಂಗಲ್ಪೇಟೆ ಜಿಲ್ಲೆಯ ಕಾಂಚೀಪುರ ಒಂದು ಪ್ರಾಚೀನವಾದ ಯಾತ್ರಾಸ್ಥಳ. ವಿಶಾಲವಾದ, ನಾಲ್ಕು ಪ್ರಾಕಾರಗಳನ್ನೊಳಗೊಂಡ ಇಲ್ಲಿನ ವರದರಾಜಸ್ವಾಮಿ ದೇವಾಲಯದಲ್ಲಿ ಹಲವಾರು ಮಂಟಪಗಳು, ಗುಡಿಗಳು, ವಿಜಯನಗರದ ಕಾಲದಲ್ಲಿ ಕಟ್ಟಲ್ಪಟ್ಟುವು. ಪೂರ್ವದಿಕ್ಕಿನ ಗೋಪುರ ಕಟ್ಟಲ್ಪಟ್ಟಿತು. ೫೦ ಮೀಟರುಗಳಷ್ಟು ಎತ್ತರದ ಈ ಗೋಪುರಕ್ಕೆ ಒಂಬತ್ತು ಅಂತಸ್ತುಗಳಿವೆ. ಮೇಲೆ ಹನ್ನೊಂದು ಕಲಶಗಳಿವೆ. ಇಡೀ ದೇವಾಲಯದಲ್ಲಿ ಅತಿ ಎತ್ತರವಾದ ಭಾಗ ಇದು. ಇಲ್ಲಿನ ಏಕಾಮ್ರೇಶ್ವರ ದೇವಾಲಯವನ್ನು ಕೃಷ್ಣದೇವರಾಯನು ೧೬ನೆಯ ಶತಮಾನದ ಆರಂಭದಲ್ಲಿ ಕಟ್ಟಿಸಿದನು. ಶೈಲಿಯ ಆಧಾರದ ಮೇಲೆ ಪ್ರಸ್ತುತ

ಗೋಪುರವನ್ನು ಆತನೇ ಕಟ್ಟಿಸಿದನೆನ್ನಬಹುದು. ವಿಜಯನಗರ ಸಾಮ್ರಾಜ್ಯದ ಲಾಂಛನವಾದ ವರಾಹ ಮತ್ತು ಖಡ್ಗಗಳನ್ನು ಗೋಪುರದ ಛಾವಣಿಯಲ್ಲಿ ಕೆತ್ತಲಾಗಿದೆ. ಗೋಪುರದ ದ್ವಾರಬಂಧಗಳೆರಡು ಕಡೆಯೂ ಶಾಲಭಂಜಿಕೆಯ ವಿಗ್ರಹಗಳಿವೆ. ದ್ವಾರಬಂಧ ಕೂಡ ಉತ್ತಮವಾದ ಕೆತ್ತನೆಯನ್ನೊಳಗೊಂಡಿದೆ. ಮೇಲ್ಕಟ್ಟಡವನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದ್ದು ಮಧ್ಯದಲ್ಲಿ ಶಾಲ, ಮೂಲೆಗಳಲ್ಲಿ ಕೂಟ ಮತ್ತು ಪಕ್ಕಗಳಲ್ಲಿ ಪಂಜರಗಳಿವೆ. ಶಾಲಗಳು ಸಣ್ಣಗುಡಿಗಳ ಶೈಲಿಯಲ್ಲಿವೆ. ದೇವಾಲಯದ ಪುಣ್ಯಕೋಟಿ ವಿಮಾನಕ್ಕೆ ೧೫೧೪ರಲ್ಲಿ ಕೃಷ್ಣದೇವರಾಯನು ಚಿನ್ನದ ತಗಡುಗಳನ್ನು ಹೊದಿಸಿದನು.

ಮೂರನೆಯ ಪ್ರಾಕಾರದಲ್ಲಿರುವ ಅಮ್ಮನವರ ಗುಡಿ ಮೂಲತಃ ೧೩ನೆಯ ಶತಮಾನದ್ದು. ಆದರೆ ಈಗಿರುವ ಕಟ್ಟಡವನ್ನು ೧೪೮೦ರ ಸುಮಾರಿಗೆ ಕಟ್ಟಲಾಯಿತು. ತಳಪಾಯದಿಂದ ಗೋಡೆಯ ಮೇಲೆ ಮುಂದಕ್ಕೆ ಚಾಚಿಕೊಂಡಿರುವ ಕಪೋತದವರೆಗೂ ಗೋಡೆಗಳಲ್ಲಿ ವೈವಿಧ್ಯಪೂರ್ಣವಾದ ಸುಂದರವಾದ ಅಲಂಕರಣ ವಿನ್ಯಾಸಗಳಿವೆ. ಗುಡಿಯ ಮುಂದಿನ ಮಹಾಮಂಟಪ, ಉಯ್ಯಾಲೆ ಮಂಟಪಗಳು, ನಾಲ್ಕನೆಯ ಪ್ರಾಕಾರದಲ್ಲಿರುವ ಮನವಾಳ ಮಹಾಮುನಿ, ತಿರುಮಲಿಶೈ ಆಳ್ವಾರ್ ಗುಡಿಗಳು, ವಾಹನ ಮಂಟಪ, ತುಲಾಭಾರ ಮಂಟಪ ಮತ್ತು ಲಾಯದ ಮಂಟಪಗಳು, ಚಕ್ರತ್ತಾಳ್ವಾರರ (ಸುದರ್ಶನ) ಗುಡಿಯ ಎರಡೂ ಪಕ್ಕಗಳಲ್ಲಿರುವ ಮಂಟಪಗಳು, ಕಲ್ಯಾಣ ಮಂಟಪ ಇವೆಲ್ಲವೂ ವಿಜಯನಗರದ ಕಾಲದ ಅರಸರು ಅಥವಾ ಸಮಕಾಲೀನರು ಕಟ್ಟಿಸಿದವುಗಳು. ಉಯ್ಯಾಲೆ ಮಂಟಪವನ್ನು ಎತ್ತರವಾದ ಪೀಠದ ಮೇಲೆ ಕಟ್ಟಲಾಗಿದೆ. ಇಲ್ಲೂ ಸಂಕೀರ್ಣಸ್ತಂಭಗಳು, ಅವುಗಳ ಸುತ್ತಲೂ ಸಣ್ಣಸಣ್ಣ ಮೂಲೆಸ್ತಂಭಗಳು. ಇವುಗಳನ್ನು ಸೂಕ್ಷ್ಮವಾದ ಬಳ್ಳಿಯ ಅಲಂಕಾರಗಳು ಆವರಿಸಿಕೊಂಡಿವೆ. ಕಂಬದ ಬೋದಿಗೆಗಳು ಬಹುಗಾತ್ರದ್ದಾಗಿ ಹಲವಾರು ಮುಖಗಳಾಗಿ ಬೆಳೆದಿವೆ. ಮಂಟಪದ ಒಳ ಛಾವಣಿಯಲ್ಲಿ ಉತ್ತಮವಾದ ಶಿಲ್ಪಗಳ ಕೆತ್ತನೆಗಳಿವೆ. ಹಂಪೆಯ ಹಜಾರ ರಾಮಸ್ವಾಮಿ ದೇವಾಲಯದ ದೇವಿಯ ಗುಡಿಯನ್ನೇ ಇದು ಬಹಳಮಟ್ಟಿಗೆ ಹೋಲುತ್ತದೆ.

ಇಲ್ಲಿನ ಕಲ್ಯಾಣಮಂಟಪ ವಿಜಯನಗರ ಶೈಲಿಯ ಅತ್ಯುತ್ತಮ ಮಾದರಿಗಳಲ್ಲಿ ಒಂದಾಗಿದೆ. ಎತ್ತರವಾದ ಪೀಠದ ಮೇಲೆ ಕಟ್ಟಿದ ಇದರ ವಿಸ್ತೀರ್ಣ ೫೦೫ ಚದರ ಮೀಟರ್‌ಗಳು. ಏಕಶಿಲೆಯ ಸಿಡಿದಾದ, ಉತ್ತಮವಾದ ಶಿಲ್ಪಗಳಿಂದ ಕೂಡಿದ ವೈವಿಧ್ಯಮಯವಾದ ೯೬ ಕಂಬಗಳು ಈ ಮಂಟಪವನ್ನು ಹೊತ್ತಿವೆ. ಎರಡು ಮೀಟರ್ ಎತ್ತರದ ಪೀಠದಲ್ಲಿ ಸಮತಲವಾದ ಪಟ್ಟಿಗಳಿವೆ. ಇವುಗಳಲ್ಲಿ ಆನೆ, ಕುದುರೆ, ಹಂಸ ಮುಂತಾದ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ನರ್ತನ ಮಾಲೆಗಳನ್ನು, ರಾಮಾಯಣಕ್ಕೆ ಸಂಬಂಧಿಸಿದ ದೃಶ್ಯಗಳನ್ನೂ ಚಿತ್ರಿಸಲಾಗಿದೆ. ಅಶ್ವಾರೂಢರ ಯಾಳಿಗಳ ಬೃಹದಾಕಾರದ ವಿಗ್ರಹಗಳನ್ನೂ ಈ ಕಂಬಗಳಲ್ಲಿ ಕೆತ್ತಿದೆ. ಇಂತಹ ಸ್ತಂಭ ವಿನ್ಯಾಸಗಳನ್ನು ವಾಹನ ಮಂಟಪ, ಮಹಾಮಂಟಪಗಳಲ್ಲೂ ಕಾಣಬಹುದಾಗಿದೆ. ಮಂಟಪಗಳ ಮೂಲೆಗಳಲ್ಲಿ ಕಪೋತಗಳಿಂದ ಕಲ್ಲಿನ ಸರಪಳಿಗಳು ತೂಗಿ ಬಿದ್ದಂತೆ ಕಡೆಯಲಾಗಿದೆ.

ಶ್ರೀರಂಗದ ರಂಗನಾಥ ದೇವಾಲಯದಲ್ಲಿ ಮೂರನೆಯ ಪ್ರಾಕಾರದಲ್ಲಿರುವ 'ಐನ್ರುಕುಟಿ ಮೂನ್ರು ವಾಶಲ್' ಮತ್ತು 'ತಟ್ಟರೈವಾಶಲ್', ನಾಲ್ಕನೆಯ ಪ್ರಾಕಾರದಲ್ಲಿರುವ ಪಾವಿಳ್ಳೈ ಗೋಪುರ, ಚಕ್ರತ್ತಾಳ್ವಾರ್ (ಸುದರ್ಶನ) ಗುಡಿ, ಶೇಷಗಿರಿರಾಯರ ಮಂಟಪಗಳು ವಿಜಯನಗರದ ಅರಸರ ಕಾಲದಲ್ಲಿ ಕಟ್ಟಲಾದ ಹಲವು ಕಟ್ಟಡಗಳು. ಅಕಳಂಕನ್ ಗೋಪುರ ಅಥವಾ ವೆಳ್ಳೈ (ಬಿಳಿಯ) ಗೋಪುರವನ್ನು ೧೫ನೆಯ ಶತಮಾನದಲ್ಲಿ ಕಂದಾಡೈ ರಾಮಾನುಜ ಅಯ್ಯಂಗಾರ್ಯರು ಕಟ್ಟಿಸಿದರು. ಮೊದಲು ಇಲ್ಲಿದ್ದ ಗೋಪುರ ಸಿಡಿಲಿನ ಆಘಾತಕ್ಕೆ ಸಿಕ್ಕು ಭಗ್ನವಾದ ಕಾರಣ ಆತನು ತಳಪಾಯದಿಂದ ಹಿಡಿದು ಮೇಲಿನವರೆಗೂ ಇದನ್ನು ನವೀನವಾಗಿಯೇ ಕಟ್ಟಿಸಿದನೆಂದು 'ಕೋಯಿಲ್ ಒಳಗು' ಗ್ರಂಥ ಹೇಳುತ್ತದೆ. ಅಲ್ಲಿ ಅದೇ ಕಾಲದ ಶಾಸನವೂ ಇದೆ. ಸುಮಾರು ೫೫ ಮೀಟರ್ ಎತ್ತರದ ಈ ಗೋಪುರ ಆ ದೇವಾಲಯದಲ್ಲಿಯೇ ಎತ್ತರವಾದ ಕಟ್ಟಡ. ಒಂಭತ್ತು ತಲಗಳ ಗೋಪುರದಲ್ಲಿ ಪ್ರತಿಯೊಂದರಲ್ಲೂ ದ್ವಾರಪಾಲಕರ ವಿಗ್ರಹಗಳಿವೆ. ಆದರೆ ಅವುಗಳನ್ನು ಹೊರತುಪಡಿಸಿದರೆ ಬೇರಾವ ವಿಗ್ರಹಗಳೂ ಈ ಗೋಪುರದಲ್ಲಿಲ್ಲ. ಶೇಷಗಿರಿರಾಯರ ಮಂಟಪದಲ್ಲಿ ೯೬ ಕಂಬಗಳಿವೆ. ಒಂದೊಂದು ಸಾಲಿನಲ್ಲಿ ೧೨ ಕಂಬಗಳಂತೆ ೮ ಸಾಲುಗಳ ಕಂಬಗಳು. ೧೩ ಕಂಬಗಳಲ್ಲಿ ಅಶ್ವಾರೋಹಿಗಳ ಭವ್ಯವಾದ ಶಿಲ್ಪಗಳಿವೆ. ಒಂದೊಂದು ಸುಮಾರು ೬ ಮೀಟರುಗಳಷ್ಟು ಎತ್ತರದ ನಿಡಿದಾದ ಉನ್ನತ ಕಲಾಕೃತಿಯ ಕಂಬಗಳಿವು. ದೈತ್ಯಾಕಾರದ ಪ್ರಾಣಿಗಳೊಡನೆ ಭೀಕರವಾಗಿ ಹೋರಾಡುತ್ತಿರುವ ಮೂರು ಮೀಟರುಗಳ ಎತ್ತರಕ್ಕೆ ಕುಪ್ಪಳಿಸಿ ನಿಂತ ಬೃಹತ್ತಾದ ಅಶ್ವಗಳ ಮೇಲೆ ರಾವುತರು ತೀರ ಉಪೇಕ್ಷೆಯಿಂದ ಕುಳಿತಂತೆ ಚಿತ್ರಿಸಲಾಗಿದೆ. ಕಂಬಗಳ ಮೇಲಿನ ಕುದುರೆಯ ಆಕಾರ ಒಳಗೊಂಡ ಆ ಅಲಂಕರಣ ವಿಜಯನಗರ ಶೈಲಿಯ ವೈಶಿಷ್ಟ್ಯವಾಗಿದ್ದು ಇಲ್ಲಿ ವೈಭವದ ಶಿಖರವನ್ನೇರಿದೆ. ಇಡೀ ಕೆತ್ತನೆ ಕಲ್ಲಿನಂತೆ ಭಾಸವಾಗದೆ ಕಾಯಿಸಿ ಬಡಿದ ಉಕ್ಕಿನ ಕಂಬಗಳಂತೆ ತೋರುತ್ತವೆ. ಈ ಶಿಲ್ಪ ವೈಶಿಷ್ಟ್ಯ ವಿಜಯನಗರದ ಶಿಲ್ಪಿಗಳಿಗೆ ಒಂದು ಗೀಳಾಗಿತ್ತು ಎಂಬ ಒಂದು ಅಪಸ್ವರ ಟೀಕೆಯ ರೂಪದಲ್ಲಿ ಹೊರಬಿದ್ದಿದೆ.

ಆಂಧ್ರಪ್ರದೇಶದಲ್ಲಿಯೂ ಹಲವಾರು ಕಡೆ ಈ ಶೈಲಿಯಲ್ಲಿ ಈ ಅರಸರು ಅವರ ಅಧೀನ ಅಧಿಕಾರಿಗಳು ಕಟ್ಟಿಸಿದ ಕಟ್ಟಡಗಳಿವೆ. ತಾಡಪತ್ರಿಯಲ್ಲಿ ಈಗ ಭಗ್ನವಾಗಿರುವ ಚಿಂತಲರಾಯ ಗುಡಿಯ ಗೋಪುರಗಳು ಹಂಪೆಯ ವಿಠ್ಠಲಗುಡಿಯ ಗೋಪುರಗಳಿಗಿಂತ ಹೆಚ್ಚು ಭವ್ಯವಾಗಿವೆ. ಈ ಕಾಲದ ಶಿಲ್ಪಶೈಲಿಗೆ ಈ ದೇವಾಲಯದಲ್ಲಿ ಒಂದು ಅಮೂಲ್ಯ ಭಂಡಾರವನ್ನು ಕಾಣುತ್ತೇವೆ. ಸ್ವಲ್ಪ ಹಸಿರು ಛಾಯೆಯ ಶಿಲೆಗಳಲ್ಲಿ ಕೆತ್ತಲಾದ ಇಲ್ಲಿನ ಶಿಲ್ಪಗಳು ಕಲ್ಯಾಣ ಚಾಲುಕ್ಯರ ಶಿಲ್ಪಶೈಲಿಯನ್ನು ಹೋಲುತ್ತದೆಯಾದರೂ ಇಲ್ಲಿ ಅದು ಹೆಚ್ಚು ವಿಕಾಸಗೊಂಡಿದೆ. ದಕ್ಷಿಣ ಭಾರತದಲ್ಲೆಲ್ಲಾ ಹಬ್ಬಿದ ಈ ಸಾಮ್ರಾಜ್ಯ ಸಹಜವಾಗಿಯೇ ಇಲ್ಲಿ ಆವರೆಗೂ ಇದ್ದ ಭಿನ್ನವಾದ ಚಾಲುಕ್ಯ, ಚೋಳ ಸಂಪ್ರದಾಯಗಳನ್ನು ಅಳವಡಿಸಿಕೊಂಡ ವಿಶಿಷ್ಟ ವಿನೂತನ ಶೈಲಿಯೊಂದನ್ನು ಕಂಡುಕೊಂಡಿತು. ತಾಡಪತ್ರಿ ದೇವಾಲಯದ ಗೋಪುರಗಳಲ್ಲಿ ಶಿಲ್ಪಗಳು ವಿಶೇಷವಾಗಿದ್ದು ಅವು ಕರಾರುವಾಕ್ಕಾಗಿ, ಸೂಕ್ಷ್ಮವಾಗಿ, ಸ್ಫುಟವಾಗಿ ಕಡೆಯಲ್ಪಟ್ಟಿವೆ. ಪರಿಣಾಮವಾಗಿ ಇತರ ಶೈಲಿಗಳಿಗಿಂತ ಹೆಚ್ಚು ಶ್ರಮ, ಉತ್ತಮ ಅಭಿರುಚಿ ಇದರಲ್ಲಿ ಕಂಡುಬರುತ್ತದೆ.

ಅಚ್ಯುತದೇವರಾಯನ ಅಧಿಕಾರಿ ವಿರೂಪಣ್ಣನು ಲೇಪಾಕ್ಷಿಯಲ್ಲಿ ಕಟ್ಟಿಸಿದ ವೀರಭದ್ರ ರಾಮ ದೇವಾಲಯಗಳು ಈ ಶೈಲಿಯ ಇನ್ನೆರಡು ನಿದರ್ಶನಗಳು. ರಾಮ ದೇವಾಲಯದಲ್ಲಿ ನಾಟ್ಯಮಂಟಪವಿದೆ. ಅದರಲ್ಲಿ ಶಿವನ, ನಟರಾಜನ ಗಾಯಕವೃಂದದ ಅಪ್ಸರೆಯರ ಶಿಲ್ಪ ಫಲಕಗಳಿವೆ. ಇಲ್ಲಿನ ನಂದಿಯ ವಿಗ್ರಹ ಅಖಂಡ ಶಿಲೆಯಲ್ಲಿ ಕೆತ್ತಿದ ಬೃಹದಾಕ್ರಾರದ ಭವ್ಯಮೂರ್ತಿ. ಇದಕ್ಕೆ ಸಾಟಿಯಾದ ಇಂತಹ ಇನ್ನೊಂದು ವಿಗ್ರಹ ಬೇರೆಲ್ಲೂ ಇಲ್ಲವೆನ್ನಬಹುದು. ತಿರುಪತಿ, ಕಾಳಹಸ್ತಿಗಳಲ್ಲೂ ಸಿಂಹಾಚಲ ಮುಂತಾದ ಇತರ ಪವಿತ್ರ ಕ್ಷೇತ್ರಗಳಲ್ಲಿಯೂ ಈ ಅರಸರ ಕೊಡುಗೆಗಳಾದ ಶಿಲ್ಪಗಳನ್ನು ಮಂಟಪಗಳನ್ನು ಕಾಣಬಹುದು.

೧೫೬೫ರಲ್ಲಿ ತಾಳಿಕೋಟೆ ಕದನದ ಬಳಿಕ ವಿಜಯನಗರ ಸಾಮ್ರಾಜ್ಯ ಅಸ್ತಂಗತವಾಯಿತು. ಛಿದ್ರವಾದ ವಿಜಯನಗರ ರಾಜ್ಯದಲ್ಲಿ ಪಾಳೆಯಗಾರರು, ನಾಯಕರು ತಲೆ ಎತ್ತಿದರು. ಸಣ್ಣ ಸಣ್ಣ ಪಾಳೆಯಪಟ್ಟುಗಳು ಅಸ್ತಿತ್ವಕ್ಕೆ ಬಂದುವು. ಒಂದು ವಿಧದಲ್ಲಿ ಇವರೆಲ್ಲರೂ ವಿಜಯನಗರದ ಧ್ಯೇಯ ಸಂಪ್ರದಾಯಗಳನ್ನು ಎತ್ತಿ ಹಿಡಿಯಲು ಯತ್ನಿಸಿದರಾದರೂ ಪರಸ್ಪರ ಕಾದಾಟಗಳ ಪರಿಣಾಮವಾಗಿ ನೆರೆಯ ಇಸ್ಲಾಂಷಾಹಿ ರಾಜ್ಯಗಳ ಸುಲ್ತಾನರು ಇವರ ಮೇಲೆ ರಾಜಕೀಯವಾಗಿ ನಮ್ಮ ಹಿಡಿತವನ್ನು ಬಿಗಿಗೊಳಿಸಿದರು. ಇದು ಇವರ ಜೀವನ ವಿಧಾನದ ಮೇಲೂ ಸಂಪ್ರದಾಯಗಳ ಮೇಲೂ ಪರಿಣಾಮ ಬೀರಿದುವು. ವಾಸ್ತುಶೈಲಿ ಇದಕ್ಕೆ ಹೊರತಾಗಲಿಲ್ಲ.

ಕೆಳದಿಯ ಶೈಲಿ

ಕರ್ನಾಟಕಕ್ಕೆ ಸಂಬಂಧಿಸಿದಂತೆ ಎರಡು ಸಣ್ಣ ಆದರೆ ಪ್ರಮುಖ ರಾಜ್ಯಗಳು ಕೆಳದಿ ಮತ್ತು ಮೈಸೂರಿನ ಒಡೆಯರು. ವಿಜಯನಗರದ ಸದಾಶಿವರಾಯನ ಸಾಮಂತನಾಗಿದ್ದ ಚೌಡಗೌಡ ಕೆಳದಿ ಮನೆತನದ ಮೊದಲ ನಾಯಕ. ಈತನ ಮಗ ಸದಾಶಿವನಾಯಕ ಸುಮಾರು ೩೫ ವರ್ಷಗಳ ಕಾಲ (೧೫೩೦-೬೭) ಆಳಿದ. ಈತನ ಕಾಲದಲ್ಲಿ ವಾಸ್ತುಶಿಲ್ಪಕ್ಕೆ ಪ್ರೋತ್ಸಾಹ ದೊರೆಯಿತು. ೧೬೩೮ರ ವೇಳೆಗೆ ಅವರ ರಾಜಧಾನಿ ಬಿದನೂರಿಗೆ ವರ್ಗವಾಯಿತು. ಆಗಿನ ನಾಯಕ ಶಿವಪ್ಪನು ಅಲ್ಲಿನ ಹಲವಾರು ಕಟ್ಟಡಗಳನ್ನು ಕಟ್ಟಿಸಿದನು. ಆದರೆ ಈ ಮೊದಲೇ, ೧೫೬೦ರ ವೇಳೆಗೆ ಸಾಗರ ತಾಲೂಕಿನ ಇಕ್ಕೇರಿಗೆ ರಾಜಧಾನಿ ಬದಲಾಗಿತ್ತು. ಅಂದರೆ ಸುಮಾರು ೭೦ ವರ್ಷಗಳವರೆಗೆ ಇಕ್ಕೇರಿ ರಾಜಧಾನಿಯಾಗಿತ್ತು. ಕೆಳದಿಯ ನಾಯಕರು ಕಟ್ಟಿಸಿದ ಲೌಕಿಕ ಹಾಗೂ ಧಾರ್ಮಿಕ ಕಟ್ಟಡಗಳನ್ನು ಕಾಣಬಹುದು.

ಕೆಳದಿಯಲ್ಲಿ ಪ್ರಮುಖವಾದ ಆಲಯಗಳು ಒಂದು ಗುಂಪಿನಲ್ಲಿರುವ ರಾಮೇಶ್ವರ ದೇವಾಲಯ ಹಾಗೂ ಅದರ ಬಲ-ಎಡಗಳಲ್ಲಿರುವ ವೀರಭದ್ರ ಹಾಗೂ ಪಾರ್ವತಿಯ ಆಲಯಗಳು. ರಾಮೇಶ್ವರಾಲಯದ ಆರಂಭ ಮಾಡಿದುದು ಚೌಡಗೌಡ. ಸದಾಶಿವನಾಯಕ ಮತ್ತು ಹಿರಿಯ ವೆಂಕಟಪ್ಪನಾಯಕರು ಇದನ್ನು ಪೂರ್ಣಗೊಳಿಸಿದರು. ಅಚ್ಚುಕಟ್ಟಾದ ಈ ದೇವಾಲಯದ ನಂದಿ ಮಂಟಪದ ನಾಲ್ಕು ಬದಿಗಳ ಗೋಡೆಯ ಮೇಲೆ ಕಮಾನಿನ ಅಲಂಕರಣಗಳು ಸಾಲು ಸಾಲಾಗಿವೆ. ಮಿಶ್ರಶೈಲಿಯ ಈ ಗುಡಿಯ ಜಗತಿಯ ಹೊರಮೈಯ ಒಂದು ದಿಂಡಿನ ಮೇಲೆ ವಾದ್ಯಗಾರರ ಮತ್ತು ನರ್ತಕರ ಶಿಲ್ಪಗಳಿವೆ. ಮೇಲಿನ ಗೋಪುರ ಚತುರಸ್ರಾಕಾರದಲ್ಲಿದೆ. ವಿನ್ಯಾಸದಲ್ಲಿ ಗರ್ಭಗೃಹ ಹಾಗೂ ಪ್ರದಕ್ಷಿಣಾಪಥವಿರುವ ಸುಕನಾಸಿ. ಚಿಕ್ಕ ನವರಂಗ ಮತ್ತು ಮುಖಮಂಟಪ ಮುಂದಿನ ಮಂಟಪದಲ್ಲಿ ಸುತ್ತಲೂ ಕಕ್ಷಾಸನಗಳಿರುವುದೊಂದು ವೈಶಿಷ್ಟ್ಯ. ಆದರೆ ರಚನೆಗೆ ಒರಟು ಕಲ್ಲುಗಳನ್ನು ಉಪಯೋಗಿಸಿರುವುದರಿಂದ ಇವುಗಳಲ್ಲಿ ನಾಜೂಕು, ನಯ, ಸೂಕ್ಷ್ಮ ಅಲಂಕರಣಗಳು ಮೂಡಿ ಬಂದಿಲ್ಲ. ಚೌಕಾಕಾರದ ಗರ್ಭಗೃಹ, ಸುತ್ತಲೂ ಪ್ರದಕ್ಷಿಣಾಪಥ, ಎರಡು ಕಂಬಗಳ ರಂಗಮಂಟಪ, ದೊಡ್ಡದಾದ ಮುಖಮಂಟಪಗಳಿರುವ ಈ ದೇವಾಲಯ ಎತ್ತರವಾದ ಜಗತಿಯ ಮೇಲಿದ್ದು ಸರಳವಾದ ಗೋಡೆಗಳ ಮೇಲೆ ಅಲ್ಲಲ್ಲಿ ತೆಳುವಾದ ಉಬ್ಬುಶಿಲ್ಪಗಳಿವೆ. ಕಣ್ಣಪ್ಪ, ಗರುಡ ಮತ್ತು ಹನುಮಂತರು ಹಣ್ಣೊಂದಕ್ಕಾಗಿ

ಜಗಳವಾಡುತ್ತಿರುವುದು, ಮುಂತಾದ ಈ ಶಿಲ್ಪಗಳಲ್ಲಿ ಆಕರ್ಷಣೆ ಇಲ್ಲ. ಮುಖಮಂಟಪದ ಸುತ್ತಲಿನ ದ್ರಾವಿಡ ರೀತಿಯ ಅರೆಮಂಟಪವನ್ನು ಹೊತ್ತ ಅರೆಗಂಬಗಳಿದ್ದು ಒಳಭಾಗದಲ್ಲಿ ಜಗುಲಿಯಿದೆ. ತೆರೆದ ಮಂಟಪದ ಒಳಛಾವಣಿ ಸರಳ. ನಡುವಣ ಅಂಕಣದಲ್ಲಿ ಪದ್ಮಗಳಿವೆ. ವೀರಭದ್ರ ದೇವಾಲಯ ರಾಮೇಶ್ವರಾಲಯವನ್ನೇ ಹೋಲುತ್ತದಾದರೂ ಇದರಲ್ಲಿ ಶಿಲ್ಪಗಳು ಹೆಚ್ಚು ಸಂಖ್ಯೆಯಲ್ಲಿವೆ. ಇವುಗಳಲ್ಲಿ ಹೊರಗೋಡೆಯಲ್ಲಿರುವ ವಾಸ್ತುಪುರುಷ ಪ್ರಮುಖವಾದುದು. ದಪ್ಪ ಆನೆಯ ಕಾಲುಗಳು, ಸೊಂಡಿಲಿನಂತಹ ಕೈಗಳು, ಪಕ್ಷಿಯ ಬೆನ್ನಿನಂತಹ ದೇಹ, ಸಿಂಹಮುಖ, ನೀಳಗಡ್ಡಗಳನ್ನು ಈ ಶಿಲ್ಪ ಹೊಂದಿದ್ದು, ದೇವಾಲಯದ ಮುಖಮಂಟಪಕ್ಕೆ ಅಪರೂಪವೆನ್ನುವಂತೆ ಒಂದು ಮುಖಭದ್ರವಿದೆ. ಈ ಮಂಟಪದ ಪಶ್ಚಿಮ ಗೋಡೆಯಲ್ಲಿ ದಕ್ಷ, ಬ್ರಹ್ಮ ಮತ್ತು ನರಸಿಂಹನ ಮೂರ್ತಿಗಳು, ಮೂಲ ವೀರಭದ್ರನ ಮೂರ್ತಿಯ ಎರಡು ಬದಿಗಳಲ್ಲೂ ಕೈ ಮುಗಿದು ನಿಂತಂತಿವೆ. ಇವು ಭವ್ಯವಾಗಿವೆ. ಮಂಟಪ, ಹನ್ನೆರಡು ಅಂಕಣಗಳ ಒಳಛಾವಣಿಗಳಲ್ಲಿನ ಶಿಲ್ಪ ಅಪೂರ್ವ. ಒಂದರಲ್ಲಿ ವಿಶಾಲ ಪದ್ಮಗಳ ನಡುವೆ ಇರುವ ಸೂರ್ಯ; ಅದರ ಮುಂದಿನ ಅಂಕಣದಲ್ಲಿ ಗಂಡಭೇರುಂಡ.

ನಂತರದ ಹೆಜ್ಜೆಯನ್ನು ಇಕ್ಕೇರಿಯ ಅಘೋರೇಶ್ವರ ದೇವಾಲಯದಲ್ಲಿ ಕಾಣಬಹುದು. ಇದನ್ನು ಕಟ್ಟಿಸಿದುದು ಸುಮಾರು ೧೫೬೦ರಲ್ಲಿ. ಜಗತಿಯ ಮೇಲಿನ ಈ ಆಲಯದ ತಳವಿನ್ಯಾಸ ಚತುರಸ್ರಾಕಾರದ್ದು. ಪರಿಘದ ಓಟವನ್ನು ಅಲ್ಲಿ ಇಲ್ಲಿ, ಸ್ವಲ್ಪ ಮಟ್ಟಿಗೆ ಹಿಂದಕ್ಕೆ ಮುಂದಕ್ಕೆ ಎಳೆದಿರುವುದರಿಂದ ಅಂಚುಗಳು ದಂತಪಂಕ್ತಿಯಂತೆ ಕಾಣುತ್ತವೆ. ಗರ್ಭಗೃಹ, ತೆರೆದ ಸುಕನಾಸಿ, ಮುಂದೆ ಮಂಟಪ. ಗರ್ಭಗೃಹದ ಹೊರಗೋಡೆಯ ಮೇಲೆ ದೇವಕೋಷ್ಠಗಳು, ಸಿಂಹಗಳ ಪಟ್ಟಿ ಹಾಗೂ ಗೋಪುರಗಳ ಅಲಂಕರಣ. ಎರಡು ತಲಗಳ ಗೋಪುರದಲ್ಲಿ ಸಣ್ಣ ಪ್ರಮಾಣದ ಗೋಪುರಗಳ ಸಿಂಹಗಳ ಶಿಲ್ಪಗಳು. ಮಂಟಪದ ಹೊರಗೋಡೆಯಲ್ಲಿ ಕೆಲವು ಉಬ್ಬುಶಿಲ್ಪಗಳು, ಜಾಲಂದರಗಳು ಮತ್ತು ಕಮಾನಿನಾಕೃತಿಯ ಕೋಷ್ಠಗಳು. ಗರ್ಭಗೃಹ ಸಾಂಧಾರ. ಆಳವಾಗಿ ಕೆತ್ತಿದ ದಿಂಡುಗಳ ಸರಗಳ ಜಗತಿ, ಸುಕನಾಸಿಯ ಮೇಲೆ ಚಾಚಿದ ಕಲ್ಲಿನ ಶಿಖರ, ದುಂಡಾದ ಷೋಡಶ ಮುಖದ ಕಂಬಗಳು. ಇದೇ ವಿನ್ಯಾಸದ ಪಾರ್ವತಿಗುಡಿಯ ನವರಂಗದ ಬಾಗಿಲುವಾಡ ಮತ್ತು ಕಿಟಕಿಗಳಲ್ಲಿ ಚೂಪಾದ ಕಮಾನುಗಳನ್ನು ಬಳಸಿರುವುದು ಭಾರತೀಯ ಮುಸ್ಲಿಮ್ ಶೈಲಿಯ ಅನುಕರಣೆ. ಇಲ್ಲಿನ ಶಿಲ್ಪಗಳು ಹೊಯ್ಸಳ ಶಿಲ್ಪಗಳ ಅಸಮರ್ಪಕ ಅನುಕರಣೆಗಳು. ನಯನಾಜೂಕುಗಳು ಶೂನ್ಯ.

ಒಡೆಯರ ಶೈಲಿ

ರಾಜ ಒಡೆಯರಿಂದ (೧೫೭೮-೧೬೧೭) ಆರಂಭವಾಗಿ ಹಲವಾರು ಒಡೆಯರು ಮೈಸೂರು ಸಂಸ್ಥಾನದ ಬೇರೆ ಬೇರೆ ಕಡೆಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದ್ದಾರಾದರೂ ಎಲ್ಲವೂ ವಿಜಯನಗರ ಶೈಲಿಯ ಕೀಳುಮಟ್ಟದ ಅನುಕರಣೆಗಳು. ಮೇಲುಕೋಟೆಯ ಚಲುವರಾಯಸ್ವಾಮಿ ಆಲಯದ ಮುಂದಿನ ಮುಖಮಂಟಪದ ಕಂಬವೊಂದರ ಮೇಲೆ ಕೆತ್ತಲಾಗಿರುವ ಮೂರ್ತಿ ರಾಜಒಡೆಯರದೆಂದು ಗುರುತಿಸಲಾಗಿದ್ದು ಆ ಮಂಟಪವನ್ನು ಅವರೇ ಕಟ್ಟಿಸಿರಬಹುದೆಂದು ಊಹಿಸಲಾಗಿದೆ. ಶ್ರೀರಂಗಪಟ್ಟಣದ ನರಸಿಂಹ ದೇವಾಲಯವನ್ನು ಕಂಠೀರವ ನರಸರಾಜ ಒಡೆಯರ್ (೧೬೩೮-೫೯) ಕಟ್ಟಿಸಿದರೆಂದು ಹೇಳಲಾಗಿದೆ. ಹಿರಿದಾದ ಗರ್ಭಗೃಹ, ವಿಶಾಲವಾದ ಸುಕನಾಸಿ ಮತ್ತು ಅನೇಕ ಕಂಬಗಳುಳ್ಳ ನವರಂಗ. ಲಕ್ಷ್ಮೀ ನರಸಿಂಹ ವಿಗ್ರಹ ಹೊಯ್ಸಳರ ಕಾಲದ್ದು. ಆಲಯದೊಳಗಿರುವ ಅಂಬೆಗಾಲು ಕೃಷ್ಣನ ಮೂರ್ತಿ ಕಣ್ಸೆಳೆಯುತ್ತದೆ. ಶ್ರೀ ರಂಗನಾಥಸ್ವಾಮಿಯ ದೇವಾಲಯದ ಹೆಚ್ಚು ಭಾಗ ಹೊಯ್ಸಳರ ಕಾಲದ್ದು. ಗಂಟೆಯ ಮಾದರಿಯ ಕಂಬಗಳು ನವರಂಗದಲ್ಲಿವೆ. ಮಹಾದ್ವಾರ ಮತ್ತು ಗರ್ಭಗೃಹ ವಿಜಯನಗರದ ಕಾಲದ್ದು. ಐದನೆಯ ಚಾಮರಾಜ ಒಡೆಯರು (೧೬೧೭-೩೭) ಮೇಲುಕೋಟೆಯ ಕಲ್ಯಾಣಿಯನ್ನು ತೋಡಿಸಿದರು. ಅದರ ಒಂದು ಮೂಲೆಯಲ್ಲಿರುವ ಅಷ್ಟಮುಖದ ಮಂಟಪ ವಿಶಿಷ್ಟವಾಗಿದೆ. ಚಿಕ್ಕದೇವರಾಜ ಒಡೆಯರು (೧೬೭೩-೧೭೦೪) ಕಟ್ಟಿಸಿದ ಬೆಂಗಳೂರಿನ ಕೋಟೆ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಸಂಕೀರ್ಣದ ಸ್ತಂಭಗಳು, ಗೋಡೆಗಳ ಮೇಲೆ ಉಬ್ಬುಶಿಲ್ಪಗಳು ಎದ್ದುಕಾಣುತ್ತವೆ. ಈ ಅರಸರು ಸೆರೆಮನೆಯಲ್ಲಿದ್ದು ವಿಧಿವಶರಾದಾಗ, ವಿಜಯಪುರ ಎಂದು ಕರೆಯಲಾಗಿದ್ದ ಗುಂಡ್ಲುಪೇಟೆಯ ಗುಂಡ್ಲುಹೊಳೆಯ ಬಳಿ ಅಂತ್ಯಕ್ರಿಯೆ ನಡೆಸಿದರು. ಆ ಬಳಿಕ ಆ ಸ್ಥಳದ ಬಳಿ ವಿಜಯಪುರದ ಅಗ್ರಹಾರವನ್ನು ನೆಲೆಗೊಳಿಸಿ ಸಮಾಧಿಯ ಮೇಲೆ ಪರವಾಸುದೇವ ದೇವಾಲಯವನ್ನು ಕಟ್ಟಿಸಿದರು. ಆದರೆ ಕಾಲಾನಂತರ ಇದು ಪಾಳುಬಿದ್ದಿತು. ಗರ್ಭಗೃಹ, ಪ್ರದಕ್ಷಿಣಾಪಥ, ಸುಕನಾಸಿ, ವಿಶಾಲವಾದ ಚೌಕಟ್ಟಾದ ೧೩ ಕಂಬಗಳ ನವರಂಗ. ಈ ಆಲಯವನ್ನು ಈಗ ವಿಜಯನಾರಾಯಣಾಲಯಕ್ಕೆ ಸ್ಥಳಾಂತರಿಸಲಾಗಿದೆ. ಕೋಟೆಯ ಒಳಗಡೆ ಇರುವ ಈ ಆಲಯವನ್ನು ವಿಷ್ಣುವರ್ಧನನು ಕಟ್ಟಿಸಿದನೆಂಬ ಐತಿಹ್ಯವಿದೆ. ಆದರೆ ಇವು ವಿವಿಧ ಹಂತಗಳ ರಚನೆ, ಮುಮ್ಮಡಿ ಕೃಷ್ಣರಾಜ ಒಡೆಯರು ಹಲವಾರು ದೇವಾಲಯಗಳನ್ನು

ಕಟ್ಟಿಸಿದರು. ಆದರೆ ಇವರೊಂದಿಗೆ ಕರ್ನಾಟಕದಲ್ಲಿ ಭಾರತೀಯ ವಾಸ್ತುಶಿಲ್ಪ ಶೈಲಿಯು ಕೊನೆಗೊಂಡಿತು. ನಂತರ ನಮಗೆ ಕಾಣಸಿಗುವುದು ಇಂಡೋ–ಮುಸ್ಲಿಮ್ ಕಟ್ಟಡಗಳು ಹಾಗೂ ಪಾಶ್ಚಾತ್ಯ ಶೈಲಿ ಕಟ್ಟಡಗಳು. ಇದು ಪ್ರಸ್ತುತ ನಮ್ಮ ದೃಷ್ಟಿಯಲ್ಲಿ ಬರುವುದಿಲ್ಲವಾದ ಕಾರಣ ನಮ್ಮ ಈ ಕಥನ ಇದರೊಂದಿಗೆ ಮುಗಿಯುತ್ತದೆ. ಸುಮಾರು ೨೦೦೦ ವರ್ಷಗಳ ಹಾದಿಯನ್ನು ನಾವು ಈಗ ಸವೆಸಿದ್ದೇವೆ. ಇಲ್ಲಿರುವುದು ಒಂದು ಸರ್ವೇಕ್ಷಣೆ. ಕರ್ನಾಟಕದ ವಾಸ್ತುಶೈಲಿಯ ಹಲವಾರು ಘಟ್ಟಗಳು, ಬೆಳವಣಿಗೆಗಳು ಹಾಗೂ ಅವನತಿಯ ಕಥನ ಇಲ್ಲಿದೆ. ಇದರಿಂದ ವಿದ್ಯಾರ್ಥಿಗಳಿಗೆ, ಜನಸಾಮಾನ್ಯರಿಗೆ ಕರ್ನಾಟಕ ವಾಸ್ತುಶೈಲಿಯ ಸಾಮಾನ್ಯ ರೂಪರೇಷೆಗಳ ಪರಿಚಯವಾದರೂ ಈ ಕೃತಿಯ ಉದ್ದೇಶ ಸಫಲವಾಗುತ್ತದೆ.


ಈ ಸರ್ವೇಕ್ಷಣಕ್ಕಾಗಿ ಹಲವಾರು ಗ್ರಂಥಗಳು, ಲೇಖನಗಳ ನೆರವು ಪಡೆದಿದ್ದೇನೆ. ಅದನ್ನು ಈ ಕೆಳಗೆ ಕೊಡಲಾಗಿದೆ. ಗ್ರಂಥದ ಉದ್ದೇಶ ಸಫಲವಾದರೆ ನಾನು ಧನ್ಯ.

❐

ಪ್ರಿಯ ಕನ್ನಡ ಬಂಧುಗಳೆ, ೧೯೧೫ರಲ್ಲಿ ಸ್ಥಾಪನೆಗೊಂಡ ಕನ್ನಡ ಸಾಹಿತ್ಯ ಪರಿಷತ್ತು ೯೫ನೇ ವರ್ಷದ ಹೊಸ್ತಿಲಲ್ಲಿದೆ. ಸ್ಥಾಪನೆಗೊಂಡಂದಿನಿಂದ ಇಂದಿನವರೆಗೂ ಕನ್ನಡ-ಕನ್ನಡಿಗ-ಕರ್ನಾಟಕದ ಒಳಿತಿಗೆ ಶ್ರಮಿಸುತ್ತಾ, ಕನ್ನಡಿಗರಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಎಚ್ಚರ ಮೂಡಿಸುವಲ್ಲಿ ಪರಿಷತ್ತಿನ ಪ್ರಕಟಣೆಗಳು ಮಹತ್ವದ ಪಾತ್ರ ವಹಿಸುತ್ತಾ ಬಂದಿವೆ. ನಮ್ಮ ಪ್ರಕಟಣೆಗಳು ಓದುಗರ ಜೇಬಿಗೆ ಭಾರವೆನಿಸುವಂಥವಲ್ಲ, ಆದಷ್ಟೂ ಕಡಿಮೆ ಬೆಲೆಯಲ್ಲಿ ಮೌಲಿಕ ಕೃತಿಗಳನ್ನು ಸಹೃದಯರಿಗೆ ಕೊಡಬೇಕೆನ್ನುವ ನೀತಿಗೆ ಪರಿಷತ್ತು ಈಗಲೂ ಬದ್ಧವಾಗಿದೆ. ಕನ್ನಡಿಗರನ್ನು ಪ್ರಜ್ಞಾವಂತರಾಗಿ, ಅಭಿಮಾನಧನರಾಗಿ, ವಿಶ್ವಮಾನವರಾಗಿ ರೂಪಿಸಲು ಪರಿಷತ್ತು ಪ್ರಕಟಿಸುವ ಸಾಹಿತ್ಯವು ಪೂರಕವಾಗಿರಬೇಕೆನ್ನುವ ಆಶಯ ನನ್ನದು.

ಪರಿಷತ್ತು ಈಗಾಗಲೇ ಪ್ರಕಟಿಸಿ ಅತ್ಯಂತ ಜನಪ್ರಿಯವಾಗಿರುವ ಹಾಗೂ ಹೊಸ ಪುಸ್ತಕಗಳನ್ನು ಗದಗದಲ್ಲಿ ನಡೆಯುತ್ತಲಿರುವ ಅಖಿಲ ಭಾರತ ೭೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಮುದ್ರಣಗೊಳಿಸಿ ಕನ್ನಡಿಗರ ಕೈಗೊಪ್ಪಿಸುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. ಸಹೃದಯರು ಈ ಪುಸ್ತಕಗಳನ್ನು ಎಂದಿನ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳುವರೆಂಬ ಭರವಸೆ ನನಗಿದೆ.

ಡಾ. ನಲ್ಲೂರು ಪ್ರಸಾದ್. ಆರ್.ಕೆ.
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦೦೧೮